ಕರ್ನಾಟಕ ಸರ್ಕಾರ

ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ

ಬೆಂಗಳೂರು

ವಾತುಲಶುದ್ಧಾಗಮ ಟೀಕಾ



ಸಂಪಾದಕರು

ಡಿ. ಸಿದ್ಧಗಂಗಯ್ಯ

ಅಪ್ರಕಟಿತ ಪ್ರಾಚೀನ ಸಾಹಿತ್ಯ ಮಾಲೆ : ೨

ಗುಬ್ಬಿ ಮಲ್ಲಣ ವಿರಚಿತ

ವಾತುಲಶುದ್ಧಾಗಮ ಟೀಕಾ

ಸಂಪಾದಕರು

ಡಿ. ಸಿದ್ಧಗಂಗಯ್ಯ

ಕರ್ನಾಟಕ ಸರ್ಕಾರ

ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ

ಬೆಂಗಳೂರು

ಅಪ್ರಕಟಿತ ಪ್ರಾಚೀನ ಸಾಹಿತ್ಯ ಮಾಲೆ : ೭

ವಾತುಲಶುದ್ಧಾಗಮ ಟೀಕಾ

ಸಂಪಾದಕರು :

ಡಿ. ಸಿದ್ಧಗಂಗಯ್ಯ

ಪ್ರಕಾಶಕರು :

ಕರ್ನಾಟಕ ಸರ್ಕಾರ

ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ಬೆಂಗಳೂರು

ಮೊದಲ ಮುದ್ರಣ : ೨೦೦೭

ಪುಟಗಳು : XLIV + ೨೭೮

ಬೆಲೆ : ರೂ. ೧೬೦/-

ಅಕ್ಷರ ಸಂಯೋಜನೆ

ಇಳಾ ಮುದ್ರಣ

ರಾಘವನಗರ, ಬೆಂಗಳೂರು-೨೬

✆ : ೨೬೭೫೭೧೫೯

ಮುದ್ರಕರು : ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ,
ಸರ್ಕಾರಿ ವಿಭಾಗೀಯ ಮುದ್ರಣಾಲಯ, ಧಾರವಾಡ.

*

ಸಲಹಾ ಮಂಡಳಿ

ಅಧ್ಯಕ್ಷರು – ಪ್ರಧಾನ ಸಂಪಾದಕರು
ಡಾ. ಎಂ. ಎಂ. ಕಲಬುರ್ಗಿ

ಸದಸ್ಯರು
ಶ್ರೀ ಎನ್. ಬಸವಾರಾಧ್ಯ
ಡಾ. ಹಂಪ. ನಾಗರಾಜಯ್ಯ (ವಿಶೇಷ ಆಮಂತ್ರಿತರು)
ಡಾ॥ ಎಚ್.ಪಿ. ದೇವಕಿ
ಡಾ॥ ವೀರಣ್ಣ ರಾಜೂರ
ಶ್ರೀ ಎಸ್. ಶಿವಣ್ಣ
ಡಾ॥ ಎಫ್.ಟಿ. ಹಳ್ಳಿಕೇರಿ
ಡಾ॥ ವೈ.ಸಿ. ಭಾನುಮತಿ
ಶ್ರೀಮತಿ ಉಷಾ ಸುರೇಶ, ನಿರ್ದೇಶಕರು ಸದಸ್ಯ ಕಾರ್ಯದರ್ಶಿ
ಶ್ರೀ ಟಿ.ಇ. ಮಲ್ಲಿಕಾರ್ಜುನಪ್ಪ, ಆಡಳಿತಾಧಿಕಾರಿಗಳು

ಸಂಪಾದಕರು – ಸಂಪಾದಿತ ಕೃತಿಗಳು

೧.	ಡಾ॥ ಟಿ.ವ್ಹಿ. ವೆಂಕಟಾಚಲಶಾಸ್ತ್ರಿ ವಿದ್ವಾನ್ ಎಚ್.ವಿ. ನಾಗರಾಜರಾವ್	– ಕಲ್ಪನಾರತ್ನಮ್
೨.	ಶ್ರೀ ಎನ್. ಬಸವಾರಾಧ್ಯ	– ಅಂಜನಾ ಚರಿತೆ
೩.	ಡಾ॥ ಬಿ. ರಾಜಶೇಖರಪ್ಪ	– ಚಿತ್ರದುರ್ಗ ಪಾಳೆಯಗಾರರ ದಾಖಲೆಗಳು
೪.	ಶ್ರೀ ಬಿ.ಎಸ್. ಸಣ್ಣಯ್ಯ	– ರಾಮನಾಥ ವಿಲಾಸ
೫.	ಶ್ರೀ ಇಮ್ಮಡಿ ಶಿವಬಸವಸ್ವಾಮಿಗಳು	– ಏಕೋತ್ತರ ಶತಸ್ಥಲೀ
೬.	ಡಾ॥ ಬಿ.ವ್ಹಿ. ಶಿರೂರ	– ಸ್ವರ ಏಕೋತ್ತರಶತಸ್ಥಲ ಟೀಕೆ
೭.	ಶ್ರೀ ಡಿ. ಸಿದ್ಧಗಂಗಯ್ಯ	– ವಾತುಲಶುದ್ಧಾಗಮ ಟೀಕಾ
೮.	ಡಾ॥ ಜಿ. ಜ್ಞಾನಾನಂದ	– ಕಂಚಿಪುರಾಣ
೯.	ಡಾ॥ ವೀರಣ್ಣ ರಾಜೂರ	– ಬೇತಾಳ ಪಂಚವಿಂಶತಿ
೧೦.	ಡಾ॥ ವೈ.ಸಿ. ಭಾನುಮತಿ	– ಭೈರವೇಶ್ವರ ಪುರಾಣ
೧೧.	ಡಾ॥ ಶಾಂತಿನಾಥ ದಿಬ್ಬದ	– ಮುನಿವಂಶಾಭ್ಯುದಯ
೧೨.	ಶ್ರೀ ಜಿ.ಜಿ. ಮಂಜುನಾಥನ್	– ಮೈಸೂರು ಒಡೆಯರ ಆಕರ ಸಾಹಿತ್ಯ
೧೩.	ಡಾ॥ ಎಫ್. ಟಿ. ಹಳ್ಳಿಕೇರಿ	– ಶರಣ ಮೋನಪ್ಪಯ್ಯನ ಚರಿತ್ರೆ
೧೪.	ಡಾ॥ ವೀರೇಶ ಬಡಿಗೇರ	– ಶಿಲ್ಪಶಾಸ್ತ್ರ
೧೫.	ಡಾ॥ ಕೆ. ರವೀಂದ್ರನಾಥ	– ನುಂಕೆಮಲೆ ಸಿದ್ಧೇಶ್ವರ ಪುರಾಣ
೧೬.	ಡಾ॥ ಎಸ್.ಆರ್. ಚನ್ನವೀರಪ್ಪ	– ದಾಸರಾಯರ ಪದಗಳು
೧೭.	ಶ್ರೀಮತಿ ಸುಗುಣಾ ಶೆಟ್ಟಿ	– ಮೂಡಬಿದಿರೆ ಬಸದಿಗಳಲ್ಲಿರುವ ಬಿಂಬಗಳ ಲೆಕ್ಕ ಪುಸ್ತಕ
೧೮.	ಡಾ॥ ಶಾಂತಕುಮಾರ ಶೆಟ್ಟಿ	– ಚಂದಯ್ಯೋಪಾಧ್ಯಾಯನ ಸಮಗ್ರ ಸಾಹಿತ್ಯ ಸಂಪುಟ–೧
೧೯.	ಡಾ॥ ಬಿ.ಬಿ. ಬಿರಾದಾರ	– ಗ್ರಂಥಸ್ಥ ಲಾವಣಿಗಳು
೨೦.	ಡಾ॥ ಶ್ರೀನಿವಾಸ ಕುಲಕರ್ಣಿ	– ರಸಮಂಜರಿ
೨೧.	ಡಾ॥ ಪಿ.ಕೆ. ರಾಠೋಡ	– ಸ್ವರವಚನ ತರಂಗಿಣಿ
೨೨.	ಡಾ॥ ಸರಸ್ವತಿದೇವಿ ಭಗವತಿ	– ದೇವರ ದಾಸಿಮಯ್ಯನವರ ಪುರಾಣ
೨೩.	ಡಾ॥ ಹನುಮಂತ ಮೇಲಿನಮನಿ	– ಬೊಮ್ಮಲಿಂಗದೇವರ ಕಾವ್ಯ
೨೪.	ಡಾ॥ ಎಂ.ಎಂ. ಕಲಬುರ್ಗಿ ಶ್ರೀ ಸಂಗಪ್ಪಯ್ಯ ಸ್ವಾಮಿ	– ಗುಂಡಬಸವೇಶ್ವರ ಚರಿತ್ರೆ
೨೫.	ಡಾ॥ ಡಿ.ಎನ್. ಯೋಗೀಶ್ವರಪ್ಪ	– ಚರಿತ್ರೆಯ ಆಕರ ಸಂಪುಟ

*

ಬಂಗಾರದ ಹೊಸ್ತಿಲು

ಹೆಚ್.ಎಸ್. ಮಹಾದೇವ ಪ್ರಸಾದ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು

ಏಕೀಕೃತ ಕರ್ನಾಟಕ, ಈಗ ಐವತ್ತನೆಯ ವರ್ಷದ 'ಬಂಗಾರದ ಹೊಸ್ತಿಲು' ದಾಟುತ್ತಲಿದೆ. ಈ ಸಂದರ್ಭದಲ್ಲಿ ರಾಜ್ಯ ಪತ್ರಾಗಾರ ಇಲಾಖೆ ಸಂಭ್ರಮದಿಂದ ಕೈಗೆತ್ತಿಕೊಂಡಿರುವ "ಅಪ್ರಕಟಿತ ಪ್ರಾಚೀನ ಸಾಹಿತ್ಯ ಪ್ರಕಟಣ ಯೋಜನೆ" ತುಂಬ ಅರ್ಥಪೂರ್ಣ ಪ್ರಯತ್ನವೆನಿಸಿದೆ.

ನಮ್ಮ ಸಂಸ್ಕೃತಿಯ ನಿಧಿಯೂ ಪ್ರತಿನಿಧಿಯೂ ಆಗಿರುವ ಪ್ರಾಚೀನ ಸಾಹಿತ್ಯವನ್ನು ಆಧುನಿಕ ಪ್ರಜೆಗಳಿಗೆ ಮುಟ್ಟಿಸುವುದು ಪ್ರಜಾಸರಕಾರದ ಕರ್ತವ್ಯವೇ ಆಗಿದೆ. ಈ ಕರ್ತವ್ಯ ಅಪ್ರಕಟಿತ ಕೃತಿಗಳನ್ನು ಪ್ರಕಟಿಸುವುದರ ಮೂಲಕ ನೆರವೇರುತ್ತಲಿರುವುದು, ಅಪೂರ್ವ ವಿಚಾರವೇ ಸರಿ.

ಸುಮಾರು ೧೫೦೦ ವರ್ಷಗಳ ಇತಿಹಾಸವಿರುವ ನಮ್ಮ ಸಾಹಿತ್ಯದಲ್ಲಿ ಆರಂಭದ ೫೦೦ ವರ್ಷಗಳ ಸಾಹಿತ್ಯ ಅಂದರೆ ಶ್ಯಾಮಕುಂದಾಚಾರ್ಯ ಮೊದಲು ಮಾಡಿ ಪಂಪನ ವರೆಗಿನ ಸುಮಾರು ೨೫–೩೦ ಕವಿಗಳ ಸಾಹಿತ್ಯ ನಮ್ಮ ಕೈತಪ್ಪಿ ಹೋಗಿದೆ. ಪಂಪಯುಗದ ಬಳಿಕವೂ ಪೊನ್ನ, ರನ್ನ, ಕೇಶಿರಾಜರ ಅನೇಕ ಕೃತಿಗಳು ಕಳೆದುಹೋಗಿವೆ. ಹೀಗೆ ಕಳೆದು ಹೋದರೂ ಉಳಿದು ನಿಂತಿರುವವುಗಳನ್ನಾದರೂ ರಕ್ಷಿಸುವುದು, ಪ್ರಕಟಿಸುವುದು ನಮ್ಮ ಕರ್ತವ್ಯವೇ ಆಗಿದೆ. ಈ ಹಿನ್ನೆಲೆಯಲ್ಲಿ ನೋಡಿದಾಗ ಪ್ರಸ್ತುತ ಯೋಜನೆ ಇನ್ನೂ ಮಹತ್ವದ್ದೆನಿಸುತ್ತದೆ.

ಯಾವುದೇ ಕೃತಿ, ಪರಿಸರದ ಸಣ್ಣ–ದೊಡ್ಡ ಅಪೇಕ್ಷೆ ಕಾರಣವಾಗಿ ಹುಟ್ಟಿರುತ್ತದೆ. ಅಷ್ಟರ ಮಟ್ಟಿಗೆ ಅದು ಸಾರ್ಥಕ ಸೃಷ್ಟಿಯೇ ಸರಿ. ಇದನ್ನು ಗುರುತಿಸಿಯೇ "ಪ್ರತಿಯೊಬ್ಬ ಓದುಗರಿಗೆ ಅವನದೇ ಆದ ಗ್ರಂಥವಿರುತ್ತದೆ. ಪ್ರತಿಯೊಂದು ಗ್ರಂಥಕ್ಕೂ ಅದರದೇ

ಆದ ಓದುಗನಿರುತ್ತಾನೆ" ಎಂದು ಹೇಳುವುದು. ಹೀಗೆ ಯಾವುದೇ ಗ್ರಂಥ ಎಷ್ಟೋ ಸಾಮಾನ್ಯವಾಗಿದ್ದರೂ ಒಂದು ಮಿತಿಯಲ್ಲಿ ಅದು ಪ್ರಯೋಜಕವೇ ಆಗಿರುತ್ತದೆ. ಈಗ ಬಿಡುಗಡೆಯಾಗಲಿರುವ ಕೃತಿಗಳನ್ನು ಈ ದೃಷ್ಟಿಯಿಂದಲೂ ನೋಡಬೇಕಾಗುತ್ತದೆ.

ಇಲ್ಲಿ ಸಾಹಿತ್ಯವಿದೆ, ಚರಿತ್ರೆಯಿದೆ, ಧರ್ಮತತ್ವವಿದೆ. ಮಾರ್ಗೀಯ ಕೃತಿಗಳ ಜೊತೆ ದೇಶೀಯ ಕೃತಿಗಳೂ ಇಲ್ಲಿವೆ. ಇವು ಒಂದಿಷ್ಟು ಹೆಚ್ಚಿನ ಪ್ರಮಾಣದಲ್ಲಿಯೇ ಇವೆ. ಇದು ಸಾಮಾನ್ಯರ ಯುಗ. ಇಂಥವರ ಮಧ್ಯದಲ್ಲಿ ಮಾನವರಾಗಿ ಹುಟ್ಟಿ ದೇವರಾಗಿ ಬೆಳೆದವರು ಪುರಾಣ ಪುರುಷರಿಗೇನೂ ಸಣ್ಣವರಲ್ಲ. ಇಂಥ ತಿಂಥಿಣಿ ಮೋನಪ್ಪಯ್ಯ, ಬೊಮ್ಮಲಿಂಗ, ಗುಂಡಬಸವ ಮೊದಲಾದವರನ್ನು ಕುರಿತ ಇಲ್ಲಿಯ ದೇಶೀಕಾವ್ಯಗಳು ಗಮನಾರ್ಹವೆನಿಸಿವೆ. ಜಕ್ಕಣಾರ್ಯನ ಏಕೋತ್ತರ ಶತಸ್ಥಲೀಯಂಥ ಕೃತಿಗಳು ಖಂಡಿತವಾಗಿಯೂ ನಮ್ಮ ಧಾರ್ಮಿಕ ಇತಿಹಾಸದ ತಿಳಿವಳಿಕೆಯನ್ನು ಪಲ್ಲಟಗೊಳಿಸುತ್ತವೆ. ಶಿಲ್ಪಶಾಸ್ತ್ರ, ಕಲ್ಪನಾರತ್ನಮ್ ನಾವು ಉಪೇಕ್ಷಿಸುತ್ತ ಬಂದ ಲೌಕಿಕಶಾಸ್ತ್ರ ಪ್ರಕಟಣೆಯ ಮಹತ್ವದ ಕಡೆಗೆ ಬೆರಳು ನೀಡುತ್ತವೆ. ಹೀಗೆ ಒಂದಿಲ್ಲೊಂದು ದೃಷ್ಟಿಯಿಂದ ಇವು ಮಹತ್ವದ ಕೃತಿಗಳೆನಿಸಿವೆ.

"ಯಂತ್ರಪ್ರತಿ"ಯ ಇಂದಿನ ಕಾಲದಲ್ಲಿ "ಹಸ್ತಪ್ರತಿ"ಗಳನ್ನು ಓದುವುದು, ಸಂಸ್ಕರಿಸುವುದು ಪರಿಶ್ರಮ ಮತ್ತು ಪಾಂಡಿತ್ಯ ಎರಡನ್ನೂ ಬಯಸುತ್ತದೆ. ಇಂಥ ವಿದ್ವಾಂಸರ ಸಂಖ್ಯೆ ಕ್ಷೀಣಿಸುತ್ತಲಿರುವ ಇಂದಿನ ಕಾಲದಲ್ಲಿ ಇಷ್ಟು ಸಂಖ್ಯೆಯ ಕೃತಿಗಳನ್ನು ಏಕಕಾಲಕ್ಕೆ ಹೊರತಂದುದು ಸಣ್ಣ ಕೆಲಸವೇನಲ್ಲ.

ಡಾ॥ ಎಂ.ಎಂ. ಕಲಬುರ್ಗಿಯವರು ಸಂಸ್ಕೃತಿ ವ್ಯಾಸಂಗಿಗಳು, ಸಂಶೋಧಕರು. ಅವರ ಯೋಜಕಶಕ್ತಿ ಕಾರಣವಾಗಿ ಈ ಕೆಲಸ ಕೈಗೂಡಿದೆಯೆಂದು ಬೇರೆ ಹೇಳಬೇಕಿಲ್ಲ. ನಮ್ಮ ಸರಕಾರದ ಪತ್ರಾಗಾರ ಇಲಾಖೆಯ ನಿರ್ದೇಶಕರಾದ ಶ್ರೀಮತಿ ಉಷಾ ಸುರೇಶ ಅವರ, ಅವರ ಸಿಬ್ಬಂದಿ ವರ್ಗದ ಪಾತ್ರವೂ, ಸಂಪಾದಕ ಮಂಡಲಿಯ ಸದಸ್ಯರ ಮಾರ್ಗದರ್ಶನ, ಸಂಪಾದಕರ ಶ್ರಮ-ಶ್ರದ್ಧೆಗಳೂ ಇಲ್ಲಿ ಮುಖ್ಯವೆನಿಸಿವೆ. ಇವರೆಲ್ಲರಿಗೂ ಅಭಿನಂದನೆ ಸಲ್ಲಿಸುತ್ತ, ಇದು ಒಂದು ಶಾಶ್ವತ ಯೋಜನೆಯಾಗಿ ಮುಂದುವರಿಯಲೆಂದು ಹಾರೈಸುತ್ತೇನೆ.

■■

*

ಹಳೆಯ ಹೊನ್ನು

ಐ.ಎಂ. ವಿಠ್ಠಲಮೂರ್ತಿ

ಪ್ರಧಾನ ಕಾರ್ಯದರ್ಶಿಗಳು

ಸುವರ್ಣ ಕರ್ನಾಟಕದ ಸಂದರ್ಭದಲ್ಲಿ ಕರ್ನಾಟಕ ಸರ್ಕಾರದ ಎಲ್ಲ ಇಲಾಖೆಗಳು ಅರ್ಥಪೂರ್ಣ ಯೋಜನೆಗಳನ್ನು ಕೈಗೆತ್ತಿಕೊಂಡಿದ್ದು, ಇವುಗಳಲ್ಲಿ ಪತ್ರಾಗಾರ ಇಲಾಖೆಯ ಪ್ರಾಚೀನ ಅಪ್ರಕಟಿತ ಕೃತಿಗಳ ಪ್ರಕಟಣ ಯೋಜನೆ "ಹಳೆಯ ಹೊನ್ನು" ಹುಡುಕಿ ತೆಗೆದ ರೀತಿಯದ್ದಾಗಿದೆ.

ಕನ್ನಡ ಸಾಹಿತ್ಯಕ್ಕೆ ಒಂದೂವರೆ ಸಾವಿರ ವರ್ಷಗಳ ಇತಿಹಾಸವಿದೆ. ಈ ಸುದೀರ್ಘ ಅವಧಿಯಲ್ಲಿ ಹುಟ್ಟಿದ ಕೃತಿಗಳಲ್ಲಿ ಕೆಲವು ಕಳೆದು ಹೋಗಿವೆ. ಉಳಿದು ನಿಂತಿದ್ದರೂ ಕೆಲವು ಪ್ರಕಟಣ ಭಾಗ್ಯ ಪಡೆದಿಲ್ಲ. ಯಾವು ಯಾವುದೋ ಕಾರಣಕ್ಕಾಗಿ ಪ್ರಕಟಣ ವಿದೂರವಾಗಿರುವ ಸಾಹಿತ್ಯ ರಾಶಿಯಲ್ಲಿ ಮುಖ್ಯವೆನಿಸಿದವುಗಳು ಪ್ರಥಮ ಬಾರಿಗೆ ಇಲ್ಲಿ ಹೊರಬರುತ್ತಲಿವೆ. ಒಂದರ್ಥದಲ್ಲಿ ಮಣ್ಣಿನಿಂದ ಮಾಣಿಕ್ಯವನ್ನು ಬೆಳಕಿಗೆ ತರುವ ಪ್ರಯತ್ನವಿದಾಗಿದೆ.

ಪ್ರತಿಯೊಂದು ಯುಗಕ್ಕೆ ವಿಶಿಷ್ಟ ಅಭಿರುಚಿಯಿರುತ್ತದೆ. ನವೋದಯ ಸಾಹಿತ್ಯದಲ್ಲಿ ರಸನಿಷ್ಠ ಸಾಹಿತ್ಯದ ಅಭಿರುಚಿ ಕಾರಣವಾಗಿ ಅಂಥ ಪ್ರಾಚೀನ ಕೃತಿಗಳನ್ನೇ ಆಯ್ದು, ಪ್ರಕಟಿಸುತ್ತ ಬಂದರು. ಇದರಿಂದಾಗಿ ಅನೇಕ ಕೃತಿಗಳಿಗಾದ ಅಪ್ರಕಟಣ ಅನ್ಯಾಯವನ್ನು ತುಂಬಿಕೊಡುವುದು ಈ ಯೋಜನೆಯ ಉದ್ದೇಶವಾಗಿದೆ.

ಜೀವನ, ತುಂಬ ಸಂಕೀರ್ಣವಾದುದು. ಅದಕ್ಕೆ ಹೊರಮೈ ನೂರು, ಒಳಮೈ ನೂರಾರು. ಇವೆಲ್ಲವುಗಳನ್ನು ಸಂಕಥಿಸುವ ವಿವಿಧ ಬಗೆಯ ಸಾಹಿತ್ಯ ನಮ್ಮಲ್ಲಿ ಸೃಷ್ಟಿಯಾಗಿದೆ. ತಾತ್ವಿಕವಾಗಿ ಹೇಳುವುದಾದರೆ ಇದರಲ್ಲಿ ಯಾವುದೂ ಮುಖ್ಯವಲ್ಲ, ಯಾವುದೂ ಅಮುಖ್ಯವಲ್ಲ. ಪ್ರತಿಯೊಂದಕ್ಕೂ ತನ್ನದೇ ಆದ ಮಹತ್ವವಿದೆ, ತನ್ನದೇ ಆದ ಓದುಗರಿರುತ್ತಾರೆ. ಈ ದೃಷ್ಟಿಯಿಂದ ಪ್ರಾಚೀನ ಎಲ್ಲ ರಚನೆಗಳನ್ನು ಪ್ರಕಟಿಸುವುದು

ನಮ್ಮ ಸಾಂಸ್ಕೃತಿಕ ಜವಾಬ್ದಾರಿಯಾಗಿದ್ದರೂ, ಆದ್ಯತೆಯ ಮೇರೆಗೆ ಬೆಳಕಿಗೆ ತರಬೇಕಾಗುತ್ತದೆ. ಪ್ರಸ್ತುತ ಯೋಜನೆ ಈ ಗುರಿಯಲ್ಲಿ ಮುನ್ನಡೆದಿದೆ.

ಇಲ್ಲಿ ಏಕಕಾಲಕ್ಕೆ ೨೫ ಪುಸ್ತಕ ಪ್ರಕಟಿಸಲು ಸಂಕಲ್ಪಿಸಿದ್ದು, ಇದು ಮೊದಲ ಕಂತು. ಇದರಲ್ಲಿ ಕಾವ್ಯ, ಶಾಸ್ತ್ರ, ಚರಿತ್ರೆ, ದಾಖಲೆಗಳಿವೆ. ಜನಪದವೂ ಇದೆ. ಕಾವ್ಯಗಳಲ್ಲಿ ಕಲ್ಪಿತ ಪುರಾಣಗಳಿವೆ, ಘಟಿತ ಪುರಾಣಗಳೂ ಇವೆ. ಶಾಸ್ತ್ರಗಳಲ್ಲಿ ಕಲ್ಪನಾರತ್ನಮ್, ಶಿಲ್ಪಶಾಸ್ತ್ರ, ರಸಮಂಜರಿಗಳಂಥ ಲೌಕಿಕ ಶಾಸ್ತ್ರಗಳಿವೆ. ದೇವರದಾಸಿಮಯ್ಯ, ಭೈರವೇಶ್ವರರಂಥ ಪ್ರಸಿದ್ಧ ಮಾರ್ಗೀಯ ಮಹಾಪುರುಷರ ಚರಿತ್ರೆಗಳಲ್ಲದೆ, ಬೊಮ್ಮಲಿಂಗದೇವರು, ಗುಂಡಬಸವೇಶ್ವರರಂಥ ದೇಶೀ ಮಹಾಪುರುಷರ ಚರಿತ್ರೆಗಳು ಇಲ್ಲವೆ. ಚರಿತ್ರೆಗೆ ಆಕರವಾಗಬಲ್ಲ ಚಿತ್ರದುರ್ಗದ ಪಾಳೆಯಗಾರರ ದಾಖಲೆಗಳು, ಚರಿತ್ರೆಯ ಆಕರ ಸಂಪುಟಗಳೂ ಇವೆ. ಪೂರಕವೆಂಬಂತೆ ಸ್ವರ ಏಕೋತ್ತರಶತಸ್ಥಲ ಟೀಕೆ, ಏಕೋತ್ತರಶತಸ್ಥಲೀ, ವಾತುಲಾಗಮ ಟೀಕೆಗಳಿವೆ. ಹೀಗೆ ವೈವಿಧ್ಯಮಯ ಸಾಹಿತ್ಯ ಇಲ್ಲಿ ಏಕಕಾಲಕ್ಕೆ ಹೊರಬರುತ್ತಲಿದ್ದು, ಈ ಸಾಹಸಕ್ಕಾಗಿ ಪತ್ರಾಗಾರ ಇಲಾಖೆಗೆ, ಇದರ ನಿರ್ದೇಶಕರಾದ ಶ್ರೀಮತಿ ಉಷಾ ಸುರೇಶ ಇವರಿಗೆ ಧನ್ಯವಾದಗಳು.

ಡಾ॥ ಎಂ. ಎಂ. ಕಲಬುರ್ಗಿಯವರು ಶ್ರಮ, ಶ್ರದ್ಧೆಗೆ ಇನ್ನೊಂದು ಹೆಸರು. ಮೂರು ತಿಂಗಳ ಅವಧಿಯಲ್ಲಿ ಈ ಯೋಜನೆ ಪೂರ್ಣಗೊಳಿಸಿದ ಇವರ ಯೋಜಕ ಶಕ್ತಿಗೆ, ಮಾರ್ಗದರ್ಶನ ನೀಡಿದ ಸಂಪಾದನ ಸಮಿತಿ ಸದಸ್ಯರಿಗೆ, ಸೂಕ್ತ ಕೃತಿ ಆಯ್ದು, ಸಂಬಂಧಪಟ್ಟ ಹಸ್ತಪ್ರತಿ ಪರಿಷ್ಕರಿಸಿ, ಗ್ರಂಥಸಂಪಾದನ ಕಾರ್ಯ ಪೂರೈಸಿದ ಸಂಪಾದಕ ಮಿತ್ರರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

■■

*

ಚಿನ್ನದ ಗರಿ

ಉಷಾ ಸುರೇಶ

ನಿರ್ದೇಶಕರು, ರಾಜ್ಯ ಪತ್ರಾಗಾರ ಇಲಾಖೆ

ಸುವರ್ಣ ಕರ್ನಾಟಕದ ಸಡಗರ ಸಂದರ್ಭದಲ್ಲಿ ರಾಜ್ಯಪತ್ರಾಗಾರ ಇಲಾಖೆ ಕೈಗೆತ್ತಿಕೊಂಡಿರುವ "ಪ್ರಾಚೀನ ಅಪ್ರಕಟಿತ ಕೃತಿಗಳ ಪ್ರಕಟಣ ಯೋಜನೆ" ಈ ಇಲಾಖೆಯ ಮುಡಿಗೆ ಒಂದು "ಚಿನ್ನದ ಗರಿ"ಯೆನಿಸಿದೆ.

ಕರ್ನಾಟಕ ಸರಕಾರ ೧೯೭೪ರಲ್ಲಿ ಅಸ್ತಿತ್ವಕ್ಕೆ ತಂದ ಪತ್ರಾಗಾರ ಇಲಾಖೆಯು ದಾಖಲು ಸಾಹಿತ್ಯದ ದೊಡ್ಡ ಗಣಿಯಾಗಿದೆ. ರಾಜ್ಯದ ಮೂಲೆ ಮೂಲೆಯಲ್ಲಿರುವ ಪ್ರಸಿದ್ಧ ವ್ಯಕ್ತಿ, ಮನೆತನ, ಸಂಸ್ಥೆಗಳಲ್ಲಿರುವ ಕಾಗದ-ಪತ್ರ ರೂಪದ ದಾಖಲು ಸಾಹಿತ್ಯ ನಾಶವಾಗಲು ಬಿಡಬಾರದೆಂಬ ಕಳಕಳಿಯ ನೆಲೆಯಲ್ಲಿ ಹುಟ್ಟಿಕೊಂಡ ಈ ಇಲಾಖೆ, ಈವರೆಗೆ ಇವುಗಳ ಸಂಗ್ರಹಣ, ವರ್ಗೀಕರಣ, ಸಂರಕ್ಷಣೆ, ಪ್ರಕಟಣೆ ಇತ್ಯಾದಿ ಬಹುಮುಖಿ ಕೆಲಸಮಾಡುತ್ತ ಬಂದಿದೆ.

ದಾಖಲು ಸಾಹಿತ್ಯದ ಇನ್ನೊಂದು ಮಗ್ಗಲು ಕಾವ್ಯಸಾಹಿತ್ಯ. ಇವುಗಳಲ್ಲಿ ಒಂದು ನಿರ್ದಿಷ್ಟೀಕೃತ ಸಾಹಿತ್ಯವಾದರೆ, ಇನ್ನೊಂದು ಸಾಮಾನ್ಯೀಕೃತ ಸಾಹಿತ್ಯವಾಗಿದೆ. ಒಂದು ಏಕಪ್ರತಿ ರೂಪದಲ್ಲಿ ಸಿಗುತ್ತಿದ್ದರೆ, ಇನ್ನೊಂದು ಬಹುಪ್ರತಿರೂಪದಲ್ಲಿ ಸಿಗುತ್ತದೆ. ಈವರೆಗೆ ದಾಖಲು ಸಾಹಿತ್ಯ ಕ್ಷೇತ್ರದಲ್ಲಿ ಕೆಲಸ ಮಾಡುತ್ತ ಬಂದ ನಮ್ಮ ಇಲಾಖೆ, ಈಗ ಕಾವ್ಯಸಾಹಿತ್ಯ ಕ್ಷೇತ್ರಕ್ಕೆ ಕೈಚಾಚಿರುವುದರ ಫಲವೆನಿಸಿದೆ, ಈ ಯೋಜನೆ.

ಪ್ರಸ್ತುತ ಯೋಜನೆ ನಮ್ಮ ವ್ಯಾಪ್ತಿಗೆ ಬಂದುದು ಒಂದು ಅನಿರೀಕ್ಷಿತ ಘಟನೆ. ಉಪಮುಖ್ಯಮಂತ್ರಿಗಳೂ ಹಣಕಾಸು ಸಚಿವರೂ ಆಗಿರುವ ಮಾನ್ಯ ಶ್ರೀ ಬಿ.ಎಸ್. ಎಡೆಯೂರಪ್ಪ ಅವರು ೨೦೦೬ರ ಆಯವ್ಯಯ ಭಾಷಣದಲ್ಲಿ ಪ್ರಾಚೀನ ಅಪ್ರಕಟಿತ ಕೃತಿಗಳ ಪ್ರಕಟಣಾ ಯೋಜನೆಯನ್ನು ರಾಜ್ಯ ಪತ್ರಾಗಾರ ಇಲಾಖೆಯ ಮೂಲಕ ಅನುಷ್ಠಾನಗೊಳಿಸುವುದಾಗಿ ಘೋಷಿಸಿದರು. ಹೀಗೆ ಆರ್ಥಿಕ ವರ್ಷದ ಆರಂಭದಲ್ಲಿ

ಈ ಯೋಜನೆ ಮಂಜೂರಾದರೂ, ಆಡಳಿತದ ತೊಡಕುಗಳನ್ನು ಬಿಡಿಸಿಕೊಂಡು ಅದು ಆರಂಭವಾದುದು ವರ್ಷದ ಕೊನೆಯಲ್ಲಿ (೧೭ ಫೆಬ್ರುವರಿ ೨೦೦೭). ಈ ರೀತಿ ಆರಂಭ ವಿಳಂಬವಾದುದರಿಂದ ರಾಜ್ಯದ ಬೇರೆ ಬೇರೆ ಪ್ರದೇಶಗಳಲ್ಲಿರುವ ವಿದ್ವಾಂಸರನ್ನು ಗುರುತಿಸುವುದು, ಕೆಲಸಕ್ಕೆ ಒಪ್ಪಿಸುವುದು, ಪ್ರಕಟಣಾಯೋಗ್ಯ ಕೃತಿಗಳನ್ನು ಆಯ್ದುಕೊಳ್ಳುವುದು, ಹಸ್ತಪ್ರತಿಗಳನ್ನು ದೊರಕಿಸುವುದು–ಇತ್ಯಾದಿ ಮೊದಲ ಹಂತದ ಕೆಲಸ ಮುಗಿಸಿ, ಹಸ್ತಪ್ರತಿಯ ನಕಲು, ಪರಿಷ್ಕರಣ, ಬೆರಳಚ್ಚು, ಮುದ್ರಣ ಮೊದಲಾದವುಗಳನ್ನೆಲ್ಲ ಸಮರೋಪಾದಿಯಲ್ಲಿ ಜರುಗಿಸಿ, ಪುಸ್ತಕ ಬೆಳಕು ಕಾಣುವಂತೆ ಮಾಡುವುದು ಕಷ್ಟದ ಕೆಲಸವೆನಿಸಿತು. ಇದಕ್ಕೆ ಏಕರಥವಲ್ಲ, ದಶರಥ ಯೋಜಕರೇ ಬೇಕು. ಇಂಥ ಹಲವು ಯೋಜನೆಗಳನ್ನು ಯಶಸ್ವಿಯಾಗಿ ಪೂರೈಸಿದ ಡಾ. ಎಂ.ಎಂ. ಕಲಬುರ್ಗಿಯವರ ಪ್ರಧಾನ ಸಂಪಾದಕತ್ವದಲ್ಲಿ ನಾಡಿನ ಹಿರಿಯ ವಿದ್ವಾಂಸರ 'ಸಂಪಾದಕ ಸಮಿತಿ'ಯನ್ನು ರೂಪಿಸಲಾಯಿತು. ಈ ಸಮಿತಿ ಒಟ್ಟು ಯೋಜನೆಯ ರೂಪುರೇಷೆಯನ್ನು ನಿರ್ದಿಷ್ಟಪಡಿಸಿದ ಫಲ, ಈ ಗ್ರಂಥಗಳು. ಇವುಗಳಲ್ಲಿ ಸಾಹಿತ್ಯಕ್ಕೆ ಸಂಬಂಧಿಸಿದ ಭೈರವೇಶ್ವರ ಪುರಾಣ, ಅಂಜನಾ ಚರಿತೆ, ದೇವರ ದಾಸಿಮಯ್ಯನವರ ಪುರಾಣ ಮೊದಲಾದ ಗ್ರಂಥಗಳ ಸಂಖ್ಯೆ ವಿಶೇಷ. ಹೀಗಿದ್ದೂ ಮೂಡಬಿದರೆ ಬಸದಿಗಳಲ್ಲಿರುವ ಬಿಂಬಗಳ ಲೆಕ್ಕ ಪುಸ್ತಕ, ಚರಿತ್ರೆಯ ಆಕರ ಸಂಪುಟಗಳಂಥ ದಾಖಲೆಗಳಿಗೂ ಇಲ್ಲಿ ಅವಕಾಶ ಮಾಡಿಕೊಡಲಾಗಿದೆ.

ಈ ಗ್ರಂಥಗಳಿಗೆ ಮೂಲಸಾಮಗ್ರಿ ಪ್ರಾಚೀನ ಹಸ್ತಪ್ರತಿಗಳು. ನಮ್ಮ ಲಿಪಿಕಾರರು ಶ್ರದ್ಧೆಯಿಂದ ಮಾಡಿದ ಲಿಪಿಕರಣದಿಂದಾಗಿ ಸಾವಿರ ಸಾವಿರ ಹಸ್ತಪ್ರತಿಗಳು ಹುಟ್ಟಿಕೊಂಡಿವೆ. ಜೊತೆಗೆ ಸಾವಿರಾರು ಹಸ್ತಪ್ರತಿಗಳು ನಾಶವಾಗಿವೆ. ಜನರ ಉದಾಸೀನತೆ, ಅಜ್ಞಾನ, ನೈಸರ್ಗಿಕ ದಾಳಿ ಇತ್ಯಾದಿಗಳು ಈ ನಾಶಕ್ಕೆ ಕಾರಣ. ಯುದ್ಧ–ಧರ್ಮಯುದ್ಧ ಗಳಿಂದಾಗಿಯೂ ಕೆಲವು ಧ್ವಂಸವಾಗಿವೆ. ಹೀಗಿದ್ದೂ ಉಳಿದು ಬಂದವುಗಳಲ್ಲಿ ಯಾವುದು ಪ್ರಕಟಿತ? ಯಾವುದು ಅಪ್ರಕಟಿತ? ಎಂದು ಗುರುತಿಸುವುದೇ ಒಂದು ದೊಡ್ಡ ಕೆಲಸ. ಯಾಕೆಂದರೆ ನಮ್ಮಲ್ಲಿ ಹಸ್ತಪ್ರತಿಗಳ ಪರಿವೀಕ್ಷಣೆ ವ್ಯವಸ್ಥಿತವಾಗಿ ಜರುಗಲಿಲ್ಲ. ಆಗಾಗ ಪರಿವೀಕ್ಷಣೆ ಜರುಗಿಸಿ, ಸಂಸ್ಥೆಗಳಲ್ಲಿ ಸಂಗ್ರಹಿಸಲ್ಪಟ್ಟ ಹಸ್ತಪ್ರತಿಗಳ ಸಮಗ್ರ ಸೂಚಿ ಸಿದ್ಧವಾಗಲಿಲ್ಲ. ಪ್ರಕಟಿತ ಪ್ರಾಚೀನ ಕೃತಿಗಳ ಸೂಚಿಯೂ ರಚನೆಗೊಳ್ಳಲಿಲ್ಲ. ಹೀಗಾಗಿ ಇಂಥ ಯೋಜನೆ ಎಚ್ಚರದಿಂದ ಜರುಗಬೇಕಾಗುತ್ತದೆ. ಈ ಬಗೆಯ ಎಚ್ಚರಿಕೆಯ ನೆಲೆಯಲ್ಲಿ ಅಂಕುರಿಸಿ ಆಕಾರ ಪಡೆದ ಪ್ರಸ್ತುತ ಯೋಜನೆ, ಸಕಾಲದಲ್ಲಿ ಕೈಗೂಡಿದುದು ಸಂತೋಷದ ಸಂಗತಿ. ನಮ್ಮ ಇಲಾಖೆಯ ಇತಿಹಾಸ ದಲ್ಲಿಯೇ ಇದೊಂದು ಇತಿಹಾಸ.

ಈ ಸಂದರ್ಭದಲ್ಲಿ ಅನೇಕರ ಮಾರ್ಗದರ್ಶನ, ಸಹಾಯ, ಶ್ರಮ ಇತ್ಯಾದಿಗಳೆಲ್ಲ ನಮಗೆ ಒದಗಿಬಂದಿವೆ. ಮುಖ್ಯಮಂತ್ರಿಗಳಾದ ಮಾನ್ಯ ಶ್ರೀ ಹೆಚ್.ಡಿ. ಕುಮಾರಸ್ವಾಮಿ ಅವರ ಔದಾರ್ಯ, ಸಂಸ್ಕೃತಿ ಇಲಾಖೆಯ ಸಚಿವರಾಗಿರುವ ಮಾನ್ಯ ಶ್ರೀ ಹೆಚ್.ಎಸ್. ಮಹಾದೇವ್ ಪ್ರಸಾದ ಅವರ ಪ್ರೇರಣೆ, ಪ್ರಧಾನ ಕಾರ್ಯದರ್ಶಿಗಳಾದ ಮಾನ್ಯ ಶ್ರೀ ಐ.ಎಂ. ವಿಠ್ಠಲಮೂರ್ತಿ ಅವರ ಪ್ರೋತ್ಸಾಹ, ನಮ್ಮ ಇಲಾಖೆಯ ಸಿಬ್ಬಂದಿವರ್ಗದ ನಿರಂತರ ನೆರವು, ಇವೆಲ್ಲವನ್ನೂ ಪಡೆದ ಭಾಗ್ಯ ನನ್ನದಾಗಿದೆ. ಇವರಿಗೆಲ್ಲ ಕೃತಜ್ಞಳಾಗಿದ್ದೇನೆ.

ಡಾ. ಎಂ.ಎಂ. ಕಲಬುರ್ಗಿಯವರು ಪ್ರಧಾನ ಸಂಪಾದಕರಾಗಿ ಈ ಯೋಜನೆಯ ಕರ್ಣಧಾರತ್ವ ವಹಿಸಿ, ಪೂರೈಸಿದ ಕಾರ್ಯನಿರ್ವಹಣಾ ರೀತಿ ಅನನ್ಯವಾದುದು. ಅವರ ಶ್ರಮಕ್ಕೆ, ಶ್ರದ್ಧೆಗೆ ಧನ್ಯವಾದಗಳು. ಸಂಪಾದಕ ಸಮಿತಿಯ ಸದಸ್ಯರ ಸಕಾಲಿಕ ಮಾರ್ಗದರ್ಶನ, ಸಂಪಾದಕರ ಶ್ರಮಸಂಸ್ಕೃತಿ ಮತ್ತು ಸಮಯ ಪ್ರಜ್ಞೆಗಳಿಗೆ ಅಭಿನಂದನೆಗಳು. ನಮ್ಮ ನಾಡಿನ ಪತ್ರಾಗಾರ ಇಲಾಖೆಯು ಸುವರ್ಣ ಕರ್ನಾಟಕದ ಸಂದರ್ಭಕ್ಕೆ ನೀಡಿದ ಕಾಣಿಕೆಯೆಂಬಂತೆ ಬೆಳಕು ಕಾಣುತ್ತಲಿರುವ ಈ ಕೃತಿಗಳನ್ನು ಕನ್ನಡಿಗರು ಪ್ರೀತಿಯಿಂದ ಬರಮಾಡಿಕೊಳ್ಳುವರೆಂದು ಆಸಿಸುತ್ತೇನೆ.

■■

*

ಸುವರ್ಣ ಯೋಜನೆ

ಎಂ.ಎಂ. ಕಲಬುರ್ಗಿ

ಪ್ರಧಾನ ಸಂಪಾದಕರು

ಪ್ರಾಚೀನ ಹಸ್ತಪ್ರತಿಗಳು ರಾಷ್ಟ್ರದ ಸಾಂಸ್ಕೃತಿಕ ಸಂಪತ್ತು. ಇವುಗಳ ಶೋಧ-ಸಂರಕ್ಷಣೆ-ಪ್ರಕಟಣೆ-ಪ್ರಸಾರ ಸರಕಾರದ ಮತ್ತು ಸಾರ್ವಜನಿಕರ ಕರ್ತವ್ಯದ ಭಾಗವಾಗಿದೆ. ಹೀಗಿದ್ದೂ ನಮ್ಮ ಕೆಲವು ಪ್ರಾಚೀನ ಗ್ರಂಥಗಳು ಒಮ್ಮೆ-ಇನ್ನೊಮ್ಮೆ-ಮತ್ತೊಮ್ಮೆ ಬೆಳಕು ಕಂಡರೆ, ಇನ್ನು ಕೆಲವು ಒಮ್ಮೆಯೂ ಬೆಳಕು ಕಾಣದೆ ಕತ್ತಲಲ್ಲಿ ಉಳಿದುಬಿಟ್ಟಿವೆ. ಈ ಉಳಿಯುವಿಕೆಗೆ ನಮ್ಮ ಕಾಲದ ಬದಲಾದ ಒಲವುಗಳೇ ಕಾರಣವೆನಿಸಿದೆ.

ನಮ್ಮಲ್ಲಿ ಹಳೆಯ ಕಾವ್ಯಗಳ ಮುದ್ರಣ ಆರಂಭವಾದುದು ನವೋದಯ ಕಾಲದಲ್ಲಿ. ಆಗ ರಸನಿಷ್ಠ ರಮ್ಯಸಾಹಿತ್ಯದ ಪ್ರಕಟಣೆಗೆ ತೋರಿದಷ್ಟು ಉತ್ಸಾಹ, ಉಳಿದ ಸಾಹಿತ್ಯದ ವಿಷಯದಲ್ಲಿ ನಮ್ಮ ವಿದ್ವಾಂಸರು ತೋರಲಿಲ್ಲ. ಇದರಿಂದಾಗಿ ಬೇರೆ ದೃಷ್ಟಿಯಿಂದ ಮೌಲಿಕವೆನಿಸುವ ಅನೇಕ ಕೃತಿಗಳು ಅವಗಣನೆಗೆ ಗುರಿಯಾದವು. ಹೀಗೆ ಅವಗಣನೆಗೆ ಗುರಿಯಾದವುಗಳಲ್ಲಿ ಸಿರುಮನ ಚರಿತೆಯಂಥ ಚಾರಿತ್ರಿಕ ಕಾವ್ಯಗಳು, ಬಸವಣ್ಣನವರ ಟೀಕಿನ ವಚನಗಳಂಥ ಟೀಕಾಗ್ರಂಥಗಳು, ಲೋಕೋಪಕಾರದಂಥ ಲೌಕಿಕಶಾಸ್ತ್ರ ಕೃತಿಗಳು, ಶ್ರಾವಕಾಚಾರದಂಥ ಧಾರ್ಮಿಕ ಗ್ರಂಥಗಳು ಮುಖ್ಯವಾದವು. ತತ್ತ್ವಪದ, ಗ್ರಂಥಸ್ಥ ಲಾವಣಿ, ಸ್ಥಳ ಮಹಾತ್ಮೆ, ದಾಖಲು ಸಾಹಿತ್ಯ ಇತ್ಯಾದಿ ಪ್ರಕಾರಗಳನ್ನೂ ಇಲ್ಲಿ ಹೆಸರಿಸಬಹುದು.

ಮುಂದುವರಿದು ಹೇಳುವುದಾದರೆ, ಒಂದು ಕಾಲದಲ್ಲಿ ಮಹತ್ವದ್ದೆನಿಸಿದ್ದ ಗ್ರಂಥ ಬದಲಾದ ಕಾಲದಲ್ಲಿ ಮಹತ್ವವನ್ನು ಕಳೆದುಕೊಳ್ಳಬಹುದಾಗಿದೆ. ೧೯-೨೦ನೆಯ ಶತಮಾನಗಳಲ್ಲಿ ರಾಜಶೇಖರ ವಿಳಾಸಕ್ಕೆ ಇದ್ದ ಆಕರ್ಷಣೆ ಇಂದು ಅಷ್ಟಾಗಿ ಕಂಡು ಬರುವುದಿಲ್ಲ. ಪ್ರಾಚೀನ ಕಾಲದಲ್ಲಿ ಮಂತ್ರಗೋಪ್ಯ, ಕರಣಹಸಿಗೆ ಪ್ರತಿಗಳೇ ಹೆಚ್ಚು ಸಿಗುವುದರಿಂದ, ಅಂದು ವಚನಕ್ಕಿಂತ ಈ ಸಾಹಿತ್ಯವೇ ಹೆಚ್ಚು ಮಹತ್ವ ಪಡೆದುದು ಸ್ಪಷ್ಟವಾಗುತ್ತದೆ.

ಹೀಗೆ–ಸಮಕಾಲೀನ ಸಾಹಿತ್ಯದ ಅಭಿರುಚಿಯಲ್ಲದೆ, ವಿವಿಧ ಸಮಾಜಗಳ ಸಂಖ್ಯಾಪ್ರಮಾಣ, ಸಾಕ್ಷರತೆ ಇತ್ಯಾದಿಗಳೂ ಇಲ್ಲಿ ಕಾರಣವೆನಿಸುತ್ತವೆ. ಸಂಸ್ಕೃತದ ಒಲವಿನ ಕಾರಣವಾಗಿ ವೈದಿಕ ಸಮಾಜ ತಮ್ಮ ಕನ್ನಡ ಗ್ರಂಥಗಳ ಪ್ರಕಟಣೆಗೆ ಅಷ್ಟಾಗಿ ಆಸಕ್ತಿ ತೋರಲಿಲ್ಲ. ವಿಪುಲ ಸಾಹಿತ್ಯವಿದ್ದರೂ ಅಲ್ಪಸಂಖ್ಯೆ ಕಾರಣವಾಗಿ ಜೈನಕೃತಿಗಳು ಹೆಚ್ಚು ಪ್ರಕಟವಾಗಲಿಲ್ಲ. ಲಿಂಗಾಯತ ಕೃತಿಗಳು ಮಾತ್ರ ಸಾಮಾಜಿಕ ಬಹುಸಂಖ್ಯೆ ಇತ್ಯಾದಿ ಕಾರಣಗಳಿಂದಾಗಿ ತಕ್ಕ ಪ್ರಮಾಣದಲ್ಲಿ ಬೆಳಕು ಕಂಡವು.

ಈ ವರೆಗಿನ ವಿವರಣೆಯಿಂದ "ತಾತ್ವಿಕವಾಗಿ ಯಾವುದೇ ಕೃತಿ ಮುಖ್ಯವಲ್ಲ – ಅಮುಖ್ಯವಲ್ಲ ; ಅದಕ್ಕೆ ಅದರದ್ದೇ ಆದ ಓದುಗರು ಇರುತ್ತಾರೆ"– ಎಂಬ ಗ್ರಂಥಾಲಯ ಶಾಸ್ತ್ರಜ್ಞರು ಹೇಳುವುದು ಸಾಮಾನ್ಯವಾಗಿ ನಿಜವೆನಿಸುತ್ತದೆ. ಇದನ್ನು ಗಮನಿಸಿಯೇ "ಕಳೆದು ಹೋಗುವ ಮುನ್ನ ಪ್ರಾಚೀನ ಎಲ್ಲ ಗ್ರಂಥಗಳನ್ನು ಒಮ್ಮೆಯಾದರೂ ಮುದ್ರಿಸಬೇಕು" ಎಂಬ ವಿದ್ವಾಂಸರ ಹೇಳಿಕೆ ಇಲ್ಲಿ ಮುಖ್ಯವೆನಿಸುತ್ತದೆ. ಕಾಗದ ರಹಿತ ಸಂಸ್ಕೃತಿಯ ಇಂದಿನ ಕಾಲದಲ್ಲಿ ಕೊನೆಯ ಪಕ್ಷ ಇವುಗಳ ಕಂಪ್ಯೂಟರೀಕರಣ ಕಾರ್ಯವಾದರೂ ನಮ್ಮಲ್ಲಿ ಜರುಗಬೇಕಿದೆ. ಇಂಥ ಧೋರಣೆಗಳ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ ಕೈಗೆತ್ತಿಕೊಂಡಿರುವ "ಅಪ್ರಕಟಿತ ಪ್ರಾಚೀನ ಸಾಹಿತ್ಯ ಪ್ರಕಟಣ ಯೋಜನೆ", ಏಕೀಕೃತ ಕರ್ನಾಟಕದ ಸುವರ್ಣ ಸಂದರ್ಭಕ್ಕೆ ಸಲ್ಲಿಸುವ, ಒಂದು 'ಸುವರ್ಣ ಯೋಜನೆ'ಯೆಂದೇ ಹೇಳಬೇಕು.

ಕನ್ನಡದಲ್ಲಿ ಪ್ರಾಚೀನ ಗ್ರಂಥಮುದ್ರಣ ಕಾರ್ಯಕ್ಕೆ ಸುಮಾರು ೧೫೦ ವರ್ಷಗಳ ಇತಿಹಾಸವಿದೆ. ಅಂದಿನಿಂದ ಇದು ನಮ್ಮಲ್ಲಿ ನಿಲ್ಲದೆ ನಡೆದು ಬಂದಿದೆ. ಆರಂಭದಲ್ಲಿ ಕಲ್ಲಚ್ಚು ಮುದ್ರಣದ ಮೂಲಕ ಈ ಮಣಿಹವನ್ನು ಆರಂಭಗೊಳಿಸಿದವರು ಕ್ರೈಸ್ತಪಾದ್ರಿಗಳು ಮತ್ತು ಸ್ಥಳೀಯ ವ್ಯಾಪಾರಿವರ್ಗದ ಶೆಟ್ಟರು. ಕ್ರಮೇಣ ಇದು "ಗ್ರಂಥಸಂಪಾದನೆ" ಹೆಸರಿನಿಂದ ವಿದ್ವಾಂಸರ ಕೈಯಲ್ಲಿ ಶಾಸ್ತ್ರವಾಗಿ ಬೆಳೆಯಿತು. ಇವರು ಹಲವು ಹಸ್ತಪ್ರತಿಗಳ ಭಿನ್ನಪಾಠಗಳನ್ನು ಸಂಗ್ರಹಿಸಿ, ಮೂಲವೆನ್ನಬಹುದಾದ ಪಾಠವನ್ನು ನಿರ್ಣಯಿಸುವ ವಿದ್ವತ್ ಪದ್ಧತಿಯನ್ನು ಅಸ್ತಿತ್ವಕ್ಕೆ ತಂದರು. ಆರಂಭದಲ್ಲಿ ಉತ್ತಮವೆನಿಸುವ ಒಂದು ಹಸ್ತಪ್ರತಿಯನ್ನು ಮುಖ್ಯವಾಗಿ ಇಟ್ಟುಕೊಂಡು, ಮಿಕ್ಕವುಗಳನ್ನು ಸಹಾಯಕ ಪ್ರತಿಯೆಂದು ಪರಿಗಣಿಸುತ್ತಿದ್ದರು. ಕ್ರಮೇಣ ಎಲ್ಲ ಭಿನ್ನಪಾಠಗಳನ್ನು ದಾಖಲಿಸುವ ಹವ್ಯಾಸಕ್ಕೆ ಇಳಿಯುವಲ್ಲಿ ಎಲ್ಲವೂ ಮುಖ್ಯಪ್ರತಿಯ ಸ್ಥಾನಗೌರವ ಪಡೆದವು. ಇದರಿಂದಾಗಿ ಈ ಪದ್ಧತಿ ಹತ್ತು ಹಸ್ತಪ್ರತಿ ಬಳಸಿ ಹನ್ನೊಂದನೆಯ ಮಿಶ್ರಪ್ರತಿ ಸಿದ್ಧಪಡಿಸುವ ದೋಷಪೂರ್ಣ ವಿಧಾನದ ನೆಲೆಯನ್ನು ಮುಟ್ಟಿತು. ಹೀಗಾಗಿ ಒಂದು ಉತ್ತಮ ಪ್ರತಿಯನ್ನು ಇಟ್ಟುಕೊಂಡು, ಅನಿವಾರ್ಯವೆನಿಸಿದಲ್ಲಿ ಮಾತ್ರ ಬೇರೆ ಪ್ರತಿ ಅಥವಾ ಪ್ರತಿಗಳ ಪಾಠ ಬಳಸುವ

ಹೊಸ ವಿಧಾನ ಇಂದು ಮಾನ್ಯತೆ ಪಡೆಯುತ್ತಲಿದೆ. ಇದರಿಂದ ಮಿಶ್ರಪ್ರತಿರೂಪದ ಪರಿಷ್ಕರಣಕ್ಕೆ ಬದಲು ಕೊನೆಯ ಪಕ್ಷ ಒಂದು ಉತ್ತಮ ಹಸ್ತಪ್ರತಿಯನ್ನಾದರೂ ಶುದ್ಧೀಕರಿಸಿ – ಉಳಿಸಿ ಕೊಟ್ಟಂತಾಗುತ್ತದೆ. ಪ್ರಸ್ತುತ ಯೋಜನೆಯಲ್ಲಿ ಸಾಮಾನ್ಯವಾಗಿ ಈ ವಿಧಾನವನ್ನು ಅನುಸರಿಸಲಾಗಿದೆ.

ಪ್ರಾಚೀನಕೃತಿಗಳ ಪ್ರಕಟಣಕಾರ್ಯ ನಮ್ಮ ನಾಡಿನಲ್ಲಿ ಸರಕಾರ ಮತ್ತು ಸಾರ್ವಜನಿಕ ಸಂಸ್ಥೆಗಳ ಮೂಲಕ ಕೈಗೂಡುತ್ತ ಬಂದಿದೆ. ೧೮೫೮ರಷ್ಟು ಹಿಂದೆಯೇ ಮದ್ರಾಸ ಸರಕಾರ ಪ್ರಾಚ್ಯಸಂಶೋಧನಾಲಯವನ್ನು ಅಸ್ತಿತ್ವಕ್ಕೆ ತಂದಿತು. ಇಂಥ ಇನ್ನೊಂದು ಸಂಸ್ಥೆ ೧೮೯೪ರಷ್ಟು ಹಿಂದೆ ಮೈಸೂರಿನಲ್ಲಿ ತಲೆಯೆತ್ತಿತು. ಧಾರವಾಡದಲ್ಲಿ ಕನ್ನಡ ಸಂಶೋಧನ ಸಂಸ್ಥೆ ೧೯೩೯ರಲ್ಲಿ ಸ್ಥಾಪನೆಗೊಂಡಿತು. ಬಳಿಕ ಮೈಸೂರು, ಕರ್ನಾಟಕ ಮೊದಲಾದ ವಿಶ್ವವಿದ್ಯಾಲಯಗಳು ಹಸ್ತಪ್ರತಿ ವಿಭಾಗ ಆರಂಭಿಸಿದವು. ಕನ್ನಡ ಸಾಹಿತ್ಯ ಪರಿಷತ್ತು ಈ ದಿಸೆಯಲ್ಲಿ ಒಂದಿಷ್ಟು ಕೆಲಸ ಮಾಡಿತು. ಜೈನ, ಲಿಂಗಾಯತ ಮಠಗಳು ಮತ್ತು ಸಾಮಾಜಿಕ ಸಂಸ್ಥೆಗಳು ಈ ಕಾರ್ಯಕ್ಕೆ ಕೈಜೋಡಿಸಿದವು. ಈ ಎಲ್ಲ ಸಂಸ್ಥೆಗಳು ಸಂಸ್ಕೃತಿಯ ರಕ್ಷಣೆ ತಮ್ಮ ಕರ್ತವ್ಯವೆಂಬ ಭಾವನೆಯಿಂದ ಅನೇಕಾನೇಕ ಪ್ರಾಚೀನ ಕೃತಿಗಳನ್ನು ಪ್ರಕಟಿಸಿದವು. ಹೀಗಿದ್ದೂ ಈ ಕ್ಷೇತ್ರದಲ್ಲಿ ಪೂರೈಸಬೇಕಾದ ಕೆಲಸ ಇನ್ನೂ ಬಹಳ ಉಳಿದುಕೊಂಡಿದೆ. ಇದನ್ನು ಮನಗಂಡು ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ಈ ಯೋಜನೆಯನ್ನು ಅಸ್ತಿತ್ವಕ್ಕೆ ತಂದಿದೆ.

ಈ ಯೋಜನೆ ಪ್ರಸ್ತುತ ಆರ್ಥಿಕ ವರ್ಷದ (೨೦೦೬–೦೭) ಆರಂಭದಲ್ಲಿ ಮಂಜೂರಾದರೂ ಆಡಳಿತಾತ್ಮಕ ಎಲ್ಲ ತೊಡಕುಗಳನ್ನು ನೀಗಿಸಿಕೊಂಡು ಅಸ್ತಿತ್ವಕ್ಕೆ ಬಂದುದು, ಆರ್ಥಿಕ ವರ್ಷದ ಅಂತ್ಯದಲ್ಲಿ. ೧೭ ಫೆಬ್ರುವರಿ ೨೦೦೭ರಂದು ಸೇರಿದ ಸಂಪಾದಕ ಮಂಡಳಿಯ ಪ್ರಥಮ ಸಭೆಯಲ್ಲಿ ಸ್ವೀಕೃತವಾದ ನಿರ್ಣಯಗಳ ಬೆಳಕಿನಲ್ಲಿ, ಈ ಗ್ರಂಥಗಳು ಬೆಳಕು ಕಾಣುತ್ತಲಿವೆ.

ಈವರೆಗೆ ಪ್ರಸಿದ್ಧ ಕವಿಗಳ ಪ್ರಸಿದ್ಧ ಕೃತಿಗಳ ಪ್ರಕಟಣೆಯ ಬಗ್ಗೆ ಆಸಕ್ತಿ ವಹಿಸುವ ಮೂಲಕ ಸ್ಥಳೀಯ ಚಾರಿತ್ರಿಕ ಕೃತಿಗಳು ಉಪೇಕ್ಷಿಸಲ್ಪಟ್ಟಿವೆ. ಇಲ್ಲಿಯ ನುಂಕೆಮಲೆ ಸಿದ್ಧೇಶ್ವರ ಪುರಾಣ, ಬೊಮ್ಮಲಿಂಗ ಕಾವ್ಯ, ಗುಂಡಬಸವ ಚರಿತ್ರೆ, ಮೋನಪ್ಪಯ್ಯನ ಚಾರಿತ್ರ, ಕಂಚಿಪುರಾಣ, ರಾಮನಾಥ ವಿಲಾಸ ಸ್ಥಳೀಯ ಮಹಾತ್ಮರ ಚರಿತ್ರೆಗಳಾಗಿದ್ದು, ಇವು ಕಳೆದ ಹೋದ ಸ್ಥಾನಿಕ ಇತಿಹಾಸದ ಕೊಂಡಿಗಳೆನಿಸಿವೆ. ಈವರೆಗೆ ಕಡೆಗಣಿಸಲ್ಪಟ್ಟ ಟೀಕಾಸಾಹಿತ್ಯದ ಏಕೋತ್ತರಶತಸ್ಥಲೀ, ವಾತುಲಶುದ್ಧಾಗಮ ಟೀಕೆ, ಸ್ವರ ಏಕೋತ್ತರ ಶತಸ್ಥಲ ಟೀಕೆಗಳು ಇಲ್ಲಿ ಬೆಳಕು ಕಾಣುತ್ತಲಿವೆ. ಚರಿತ್ರೆಯ ಆಕರ ಸಂಪುಟ, ಮೂಡಬಿದರೆ ಬಸದಿಗಳಲ್ಲಿರುವ ಬಿಂಬಗಳ ಲೆಕ್ಕಪುಸ್ತಕಗಳು ದಾಖಲು ಸಾಹಿತ್ಯವರ್ಗಕ್ಕೆ ಸೇರುತ್ತವೆ.

ಅಂಜನಾಚರಿತೆ, ಮುನಿವಂಶಾಭ್ಯುದಯ ಜೈನಸಾಹಿತ್ಯವಾಗಿದ್ದು, ಚಂದಯ್ಯೋಪಾಧ್ಯಾಯನ ಸಮಗ್ರ ಸಾಹಿತ್ಯ ಸಂಪುಟವೂ ಇದರ ಭಾಗವಾಗಿದೆ. ಭೈರವೇಶ್ವರ ಪುರಾಣ, ದೇವರ ದಾಸಿಮಯ್ಯನ ಚರಿತ್ರೆ ಪ್ರಸಿದ್ಧ ಶಿವಶರಣರ ಇತಿಹಾಸ ತಿಳಿಸುತ್ತವೆ. ಗ್ರಂಥಸ್ಥ ಲಾವಣಿ ಸಂಪುಟವು ಹಳೆಯ ಜಾನಪದ ಬಂಧಗಳನ್ನೊಳಗೊಂಡಿದೆ. ಸ್ವರವಚನ ತರಂಗಿಣಿ, ಈವರೆಗೆ ಉಪೇಕ್ಷಿಸಲ್ಪಟ್ಟ ಗೀತಸಾಹಿತ್ಯಕ್ಕೆ ಸಂಬಂಧಿಸಿದೆ. ಶಿಲ್ಪಶಾಸ್ತ್ರ ಮತ್ತು ರಸಮಂಜರಿ ಶಾಸ್ತ್ರಕೃತಿಗಳಾಗಿವೆ. ಕಲ್ಪಸಾರತ್ನಮ್ ಸಂಸ್ಕೃತ ಭಾಷೆಯದಾಗಿದ್ದರೂ ಪ್ರಸಿದ್ಧ ಗಂಗ ಅರಸು ಶಿವಮಾರನದೆಂಬ ಕಾರಣದಿಂದ, ಇದನ್ನು ಕನ್ನಡ ವಿವರಣೆಯೊಂದಿಗೆ ಪ್ರಕಟಿಸುತ್ತಿದ್ದೇವೆ. ಹೀಗೆ ಈ ಕೃತಿಗಳ ಪ್ರಕಟಣೆಯ ಹಿಂದೆ ಒಂದು ನಿರ್ದಿಷ್ಟ ಉದ್ದೇಶವಿರುವುದನ್ನು ಗಮನಿಸಬಹುದಾಗಿದೆ. ಒಟ್ಟಾರೆ ಈ ಯೋಜನೆ ಸಾಹಿತ್ಯ ಕೃತಿಗಳನ್ನಲ್ಲದೆ ದಾಖಲು ಸಾಹಿತ್ಯ ಕೃತಿಗಳನ್ನೂ ಅಳವಡಿಸಿಕೊಳ್ಳುವ ಮೂಲಕ 'ಪತ್ರಾಗಾರ ಇಲಾಖೆ' ಹೆಸರಿಗೆ ನ್ಯಾಯ ಒದಗಿಸಿದೆ.

ನಮ್ಮ ಹಸ್ತಪ್ರತಿ ಸಂಪತ್ತು ತುಂಬ ದೊಡ್ಡದು. ಇದರಲ್ಲಿ ಅಪ್ರಕಟಿತ ಕೃತಿಗಳ ಸಂಖ್ಯೆಯೂ ಗಣನೀಯವೆನಿಸಿದೆ. ಆದುದರಿಂದ ಈ ಯೋಜನೆ ಈ ವರ್ಷಕ್ಕೇ ನಿಲ್ಲಬಾರದು, ಮುಂದುವರಿಯಬೇಕು. ಹೀಗೆ ಬಿಡಿ ಬಿಡಿ ಕೃತಿಗಳನ್ನಲ್ಲದೆ ಅಪ್ರಕಟಿತ ಸ್ಥಳಪುರಾಣಗಳು, ತತ್ತ್ವಪದಗಳು, ಟೀಕಾಕೃತಿಗಳು, ಲೌಕಿಕ ಶಾಸ್ತ್ರಗ್ರಂಥಗಳು – ಇತ್ಯಾದಿ ಒಳಯೋಜನೆ ರೂಪಿಸಿಕೊಳ್ಳಲೂ ಇಲ್ಲಿ ಅವಕಾಶವಿದೆ. ಹೆಚ್ಚಿನದಾಗಿ ಪತ್ರಾಗಾರ ಇಲಾಖೆಗೆ ಸಂಬಂಧಪಟ್ಟಂತೆ ಪ್ರತಿಯೊಂದು ಸಂಸ್ಥಾನದ, ಪ್ರತಿಯೊಬ್ಬ ಗಣ್ಯವ್ಯಕ್ತಿಯ ಕಾಗದ–ಪತ್ರ ಸಂಪುಟಗಳನ್ನೂ ಪ್ರಕಟಿಸಬಹುದಾಗಿದೆ. ಎಲ್ಲ ಹಸ್ತಪ್ರತಿಗಳ ಸೂಚಿಗಳನ್ನು, ಸೂಚಿಗಳ ಸೂಚಿಗಳನ್ನೂ ಯೋಜನಾಬದ್ಧವಾಗಿ ಬೆಳಕಿಗೆ ತರಬಹುದಾಗಿದೆ. ಆದುದರಿಂದ ಸರಕಾರ ಈ ಯೋಜನೆಗಾಗಿ ಪ್ರತಿವರ್ಷ ಹಣ ತೆಗೆದಿಡುವುದು ಅವಶ್ಯವಿದೆ.

ಈ ಬೃಹತ್ ಯೋಜನೆ ಒಬ್ಬರಿಂದ ಮುಗಿಯುವಂಥದ್ದಲ್ಲ. ಅನೇಕ ಜನ ಪರಿಣಿತರ, ಅದರಲ್ಲಿಯೂ ಹಸ್ತಪ್ರತಿ ಅಧ್ಯಯನ ಶೀಲರ ನೆರವನ್ನು ಬಯಸುತ್ತದೆ. ಶ್ರಮವಂತೂ ಅವಶ್ಯಬೇಕು. ಹಣ–ಕೀರ್ತಿಗಳಿಗೆ ಎರವಾಗಿರುವ ಈ ಕ್ಷೇತ್ರ ಸಹಜವಾಗಿಯೇ ಅನಾಕರ್ಷಕವಾದುದು. ಹೀಗಿದ್ದೂ, ಸಂಸ್ಕೃತಿಯ ಮೇಲಿನ ಪ್ರೀತಿ ಕಾರಣವಾಗಿ ವಿದ್ವಾಂಸರು ಈ ಕೆಲಸಕ್ಕೆ ಮುಂದುಬರಬೇಕಾಗುತ್ತದೆ. ಪ್ರಸ್ತುತ ಯೋಜನೆ ಈ ದೃಷ್ಟಿಯಿಂದ ಸುದೈವಿಯೆಂದೇ ಹೇಳಬೇಕು. ಏಕೆಂದರೆ, ಆರಂಭವಾಗುತ್ತಲೇ ಎಲ್ಲ ವಿದ್ವಾಂಸರು ಇದರಲ್ಲಿ ತೊಡಗಿಸಿಕೊಳ್ಳಲು ಉತ್ಸಾಹದಿಂದ ಮುಂದೆ ಬಂದರು. ಇವರೆಲ್ಲರಿಗೆ ಕೃತಜ್ಞ.

ಸಂಪಾದಕ ಮಂಡಳಿಯ ಸದಸ್ಯರು ತೀವ್ರ ಆಸಕ್ತಿವಹಿಸಿ, ಸಲಹೆ ಸೂಚನೆ ನೀಡಿ, ಈ ಯೋಜನೆಯ ಬುನಾದಿ-ಕಟ್ಟಡಗಳ ವಿನ್ಯಾಸದಲ್ಲಿ ನೆರವಾಗಿದ್ದಾರೆ. ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆಯ ನಿರ್ದೇಶಕರಾದ ಶ್ರೀಮತಿ ಉಷಾ ಸುರೇಶ ಅವರು ಈ ಬಗ್ಗೆ ತೋರಿದ ಆಸಕ್ತಿ ಅನನ್ಯ. ಈ ಇಲಾಖೆಯ ಶ್ರೀ ಟಿ.ಇ. ಮಲ್ಲಿಕಾರ್ಜುನಪ್ಪ ಮೊದಲಾದ ಸಿಬ್ಬಂದಿ ವರ್ಗದವರ ನೆರವು ಸ್ಮರಣೀಯ. ಇವರೆಲ್ಲರಿಗೂ ನಮ್ಮ ವಂದನೆಗಳು ಸಲ್ಲುತ್ತವೆ.

■■

*

ಪ್ರಸ್ತಾವನೆ

ಡಿ. ಸಿದ್ಧಗಂಗಯ್ಯ

ಕವಿ-ಕಾಲ-ಕೃತಿ :

ವಾತುಲ ಶುದ್ಧಾಗಮದ ಪ್ರಥಮ ಪಟಲದ ಎಂಟನೆಯ ಶ್ಲೋಕ ಹೀಗಿದೆ :

ಶ್ರೀಮಚ್ಛುದ್ಧಾಖ್ಯತಂತ್ರೇಽಸ್ಮಿನ್ ಮಲ್ಲಿಕಾರ್ಜುನ ಧೀಮತಾ ।
ಕರ್ಣಾಟಭಾಷಯಾ ಟೀಕಾ ಕ್ರಿಯತೇಽದ್ಯ ಮಯಾ ಸ್ಫುಟಮ್ ॥

ಇದಕ್ಕೆ ಬರೆದ ವ್ಯಾಖ್ಯಾನದಲ್ಲಿ "ಈ ಶುದ್ಧವೆಂಬ ಹೆಸರನುಳ್ಳ ವಾತುಲಾಗಮದಲ್ಲಿಯ ಟೀಕಾ ವ್ಯಾಖ್ಯಾನವು ಶ್ರೀಮದಮರಗುಂಡ ಮಲ್ಲಿಕಾರ್ಜುನನ ಚಿದಂಶವನುಳ್ಳಂಥ ಮಲ್ಲಿಕಾರ್ಜುನನೆಂಬ ಬುದ್ಧಿಮಾನ್ ಆದ ನನ್ನಿಂದ ಕನ್ನಡ ಭಾಷೆಯಿಂದ ವ್ಯಕ್ತವಹ ಹಾಂಗೆ ಮಾಡಲ್ಪಡುತ ಇದ್ದುದು." ಎಂಬ ವಿವರಣೆಯಿದೆ. ಇದರಿಂದ ಈ ಮಲ್ಲಿಕಾರ್ಜುನ ಅಥವಾ ಮಲ್ಲಣಗಳ ಮೂಲಪುರುಷ 'ಅಮರಗುಂಡದ ಮಲ್ಲಿಕಾರ್ಜುನ' ಎಂದು ತಿಳಿದು ಬರುತ್ತದೆ. 'ಅಮರಗುಂಡ' ಎಂಬ ಊರುಗಳು ಹಲವಾರು ಇದ್ದು, ಯಾವ ಅಮರಗುಂಡ ಎಂಬುದು ಸಂದೇಹಕ್ಕೆ ಅವಕಾಶವನ್ನು ನೀಡುತ್ತದೆ.[೧] ಪ್ರಸ್ತುತ ಅಮರಗುಂಡದ ಮಲ್ಲಿಕಾರ್ಜುನರು ತೆಲುಗುನಾಡಿನ ಅಮರಗುಂಡವೆಂದು ಪ್ರಸಿದ್ಧವಾಗಿರುವ ಶ್ರೀಶೈಲದ ಮೂಲದವರಾಗಿದ್ದು, ತಮ್ಮ ಶಿಷ್ಯರಿಂದೊಡಗೂಡಿ ದೇಶಸಂಚಾರ ಕೈಗೊಂಡು, ಅಂತ್ಯದಲ್ಲಿ ಅವರು ತುಮಕೂರು ಜಿಲ್ಲೆಯ 'ಗುಬ್ಬಿ'ಗೆ ಬಂದುದಾಗಿ ಶ್ರೀ ಗುಬ್ಬಿ ಚನ್ನಬಸವೇಶ್ವರರ ದೇವಸ್ಥಾನದ ಹೆಬ್ಬಾಗಿಲಿನ ಬಲಭಾಗದಲ್ಲಿ

---

೧. ಬಸವ ಕಲ್ಯಾಣದಿಂದ ಪಶ್ಚಿಮಕ್ಕೆ ೧೨ ಮೈಲು ಅಂತರದಲ್ಲಿ ಅಮರಗುಂಡವೆಂಬ ಕ್ಷೇತ್ರವಿದೆ. ಅಲ್ಲಿ ಮಲ್ಲಿಕಾರ್ಜುನನ ಗುಡಿ ಇದೆ. ಅಲ್ಲಿಯ ಅವಶೇಷಗಳಿಂದ ಪೂರ್ವದಲ್ಲಿ ಇದು ಪ್ರಸಿದ್ಧವಾದ ಯಾತ್ರಾಸ್ಥಳವಾಗಿರಬೇಕೆಂದು ತೋರುತ್ತದೆ. ೨. ರಾಯಚೂರು ಜಿಲ್ಲೆಯ ಲಿಂಗಸೂರು ತಾಲ್ಲೂಕಿನಲ್ಲಿ 'ಅಮರಗುಂಡ', 'ಅಮರೇಶ್ವರ' ಎಂಬ ಕ್ಷೇತ್ರವಿದೆ. ಈಗಲೂ ಅಲ್ಲಿ ಪ್ರಸಿದ್ಧವಾದ ರಥೋತ್ಸವವಾಗುತ್ತದೆ. ೩. ತೆಲುಗುನಾಡಿನಲ್ಲಿ 'ಅಮರಗುಂಡ', 'ಸುಧಾಕುಂಡ' ಎಂಬ ಕ್ಷೇತ್ರವಿದೆ. ಮಲ್ಲಿಕಾರ್ಜುನಸ್ವಾಮಿಯ ಗುಡಿಯಿದೆ. ೪. ಹಿಮಾಲಯದ ತಪ್ಪಲದ ಕೇದಾರಕ್ಷೇತ್ರದಲ್ಲಿ ಅಮರಗುಂಡ ಎಂಬ ಕ್ಷೇತ್ರವಿದೆ.

ಶ್ರೀ ಅಡವಿಸ್ವಾಮಿಗಳು ಕಟ್ಟಿಸಿದ ಕಲ್ಯಾಣಿಯ ಬಾಗಿಲ್ವಾಡದ ಮೇಲ್ಗಡೆ ಇರುವ ಶಾಸನದಿಂದ ತಿಳಿದು ಬರುತ್ತದೆ.[೨] ಅಮರಗುಂಡದ ಮಲ್ಲಿಕಾರ್ಜುನರಿಗೆ ಮಲ್ಲೇಶ್ವರಾಚಾರ್ಯ, ಮಲ್ಲಯ್ಯ ಎಂಬ ಪರ್ಯಾಯನಾಮಗಳೂ ಇವೆ. ಇವರು ಸಂಚರಿಸುತ್ತ ಬರುವಾಗ ಎಲ್ಲೆಲ್ಲಿ ಕೆಲವು ದಿನಗಳು ತಂಗಿದ್ದರೋ ಅಲ್ಲಿ ಅವರ ಮಹಿಮೆಯ ದ್ಯೋತಕವಾಗಿ ಆ ಊರುಗಳಿಗೆ 'ಅಮರಗುಂಡ' ಎಂಬ ಹೆಸರನ್ನು ಅಂಕಿತಮಾಡಿ, ಅವರ ಹೆಸರಿನ ದೇವಾಲಯಗಳನ್ನು ನಿರ್ಮಿಸಿರಬಹುದೆಂದು ತಿಳಿದುಬರುತ್ತದೆ. ಅಂತ್ಯದಲ್ಲಿ ಅವರು ನೆಲೆನಿಂತದ್ದು ಈ ಗುಬ್ಬಿಯಲ್ಲಿಯೇ ಎಂಬುದು ನಿರ್ವಿವಾದ ಸಂಗತಿಯಾಗಿದೆ.

ಅಮರಗುಂಡದ ಮಲ್ಲಿಕಾರ್ಜುನರು ಇಲ್ಲಿ ನೆಲೆನಿಂತ ಸ್ಥಳದಲ್ಲಿಯೇ ಅವರ ಮಠವಿದ್ದು, ಈಗ ಅದು ಅಮರಗೊಂಡ ಮಲ್ಲಿಕಾರ್ಜುನ ದೇವಾಲಯವಾಗಿದೆ. (ವೀರಶೈವ ಸನ್ಯಾಸಿಗಳ ಗದ್ದುಗೆಗಳನ್ನು ದೇವಾಲಯಗಳೆಂದು ಕರೆಯುವುದು ರೂಢಿಯಲ್ಲಿದೆ). ಈ ದೇವಾಲಯಕ್ಕೆ ಮಲ್ಲೇಶಾಚಾರ್ಯರ ದೇವಸ್ಥಾನ, ಗದ್ದೆ ಮಲ್ಲಯ್ಯನ ದೇವಸ್ಥಾನವೆಂದೂ ಕರೆಯುತ್ತಾರೆ. ಈ ದೇವಸ್ಥಾನದ ಆವರಣದಲ್ಲಿಯೇ ಇವರ ಪಟ್ಟಶಿಷ್ಯ 'ಗುರುಭಕ್ತ'ನು ಶೂಲವನ್ನೇರಿದ್ದು ಎಂದು ಸ್ಥಳದವರ ಅಭಿಪ್ರಾಯವಾಗಿದೆ. ಪ್ರಾಚೀನದಿಂದಲೂ ಈ ಗ್ರಾಮಕ್ಕೆ ಗುಬ್ಬಿಯೆಂಬ ಹೆಸರಿದ್ದಿತ್ತೆಂದು ಸು. ಕ್ರಿ.ಶ. ೧೨೩೫ರ ಒಂದು ಶಾಸನದಿಂದ ತಿಳಿದುಬರುತ್ತದೆ.[೩] ಇಮ್ಮಡಿ ಪ್ರೌಢದೇವರಾಯನ (ಕ್ರಿ.ಶ. ೧೪೧೯-೧೪೪೬) ದಂಡನಾಯಕ ಲಕ್ಕಣ್ಣ ದಂಡೇಶನ ಶಿವತತ್ತ್ವ ಚಿಂತಾಮಣಿಯ:

ಅಲ್ಲಿಪ್ಪ ಚೊಕ್ಕದೇವಪ್ಪ ಗುಬ್ಬಿಯಾ
ಮಲ್ಲಣ್ಣನಮ್ಮಣನ ನಾಗಪ್ಪನುಂ ಹೊನ್ನ
ಮಲ್ಲಣ್ಣನವರೊಳಗೆ ಮಳವಳಿಯ ಬಸವಣ್ಣಮಾನುಗಲ್ಲಾ ನಾಗಪ ।[೪]

ಎಂಬ ಪದ್ಯದ ಮಲ್ಲಣ್ಣನ ಹೆಸರಿನೊಂದಿಗೆ 'ಗುಬ್ಬಿ'ಯನ್ನೂ ಸೂಚಿಸಲಾಗಿದೆ. ಅಲ್ಲದೆ ಈ ಮಲ್ಲಣ್ಣಗಳೇ ತಮ್ಮ ಗಣಭಾಷಿತರತ್ನಮಾಲೆಯ ಅವತರಣಿಕಾ ಭಾಗದಲ್ಲಿ "ಹರಶರಣರಣುಗಂ ಗುಬ್ಬಿಯ ಮಲ್ಲಣ್ಣಗಳು ಮಾಡಿದ ಭಾಷ್ಯರತ್ನಮಾಲೆಯು" ಎಂದಿರುವುದರಿಂದಲೂ ಈ ಊರಿಗೆ 'ಗುಬ್ಬಿ' ಎಂಬ ಹೆಸರು ಮೊದಲಿನಿಂದಲೂ ಇದ್ದಿತೆಂಬುದರಲ್ಲಿ ಎರಡಿಲ್ಲ. 'ಅಮರಗುಂಡ' ಎಂಬ ಪದ ಮಲ್ಲಿಕಾರ್ಜುನರು ನೆಲೆನಿಂತ ಗುಬ್ಬಿಯ ಬಡಾವಣೆ ಸ್ಥಳಕ್ಕೆ ಸಂಬಂಧಿಸಿದೆಯೇ ಹೊರತು 'ಗುಬ್ಬಿ'ಗೆ ಅಲ್ಲ.

---

೨. ನೋಡಿ : ಅನುಬಂಧ : ೧, ಪುಟ :

೩. ನೋಡಿ : ಅನುಬಂಧ : ೪, ಪುಟ :

೪. ನೋಡಿ : ಶಿವತತ್ತ್ವ ಚಿಂತಾಮಣಿ : ಪುಟ : ೩೯೮, ಪದ್ಯ : ೬೧

ಲಕ್ಕಣ್ಣ ದಂಡೇಶನ ಶಿವತತ್ತ್ವ ಚಿಂತಾಮಣಿಯಲ್ಲಿನ :

ಆ ಪುರದ ಸೀಮೆಯೆಲ್ಲಂ ಪತ್ರಿ ಪುಷ್ಪಂಗ
ಳಾ ಪುರದ ಬಾಗಿಲ್ಗೆ ಲಿಂಗಮುದ್ರೆಗಳೆಸೆವ
ವಾ ಪುರಕೆ ಭವಿಯ ಸಂಚಾರವಿಲ್ಲದೆಯೆಸೆವ ಭಕ್ತರುಚಿ ನೆಲಸಿಪ್ಪರು ।
ಆ ಪುರದೊಳಗೆ ಲಿಂಗದಾಳಾಪವನುಭಾವ
ವಾ ಪುರದಿ ಶಿವಸಮಯ ಪಟ್ಟವರ್ಧನರಿಪ್ಪ
ರಾ ಪುರಂ ಗುಮ್ಮಹಾಳೆಂಬ ಪುರವಜಿವವರ ಚರಣಾಂಬುಜಕ್ಕೆ ಶರಣು ॥ ೬೦ ॥

ಎಂಬ ಪದ್ಯವು ಬೆಂಗಳೂರು ಜಿಲ್ಲೆಗೆ ಸೇರಿದ ಗುಮ್ಮಳಾಪುರ ಗ್ರಾಮವನ್ನು ಸೂಚಿಸುತ್ತಿದ್ದು, ತಕ್ಷಣವೇ ಹೇಳಲಾದ

ಅಲ್ಲಿಪ್ಪ ಚೊಕ್ಕ ದೇವಪ್ಪಯ್ಯ ಗುಬ್ಬಿಯಾ
ಮಲ್ಲಣ್ಣನಮ್ಮಣನ ನಾಗಪ್ಪನುಂ ಹೊನ್ನ
ಮಲ್ಲಣ್ಣನವರೊಳಗೆ ಮಳವಳಿಯ ಬಸವಣ್ಣಮಾನುಗಲ್ಲಾ ನಾಗಪ ।
ಅಲ್ಲಿಯವರೊಳಗಾದ ದಾಸೋಹದಾ ಮಠಗ
ಳಲ್ಲಿ ತಿಂತಿಣಿವಡೆದು ನೆಱೆಭಕ್ತಿಮಯವಾಗಿ
ಸಲ್ಲಲಿತ ಶತಗಣಂಗಳ ಪಾದವಜಿವವರ ಚರಣಾಂಬುಜಕ್ಕೆ ಶರಣು ॥ ೬೧ ॥

ಎಂಬ ಪದ್ಯದ ಪ್ರಕಾರ ಈ ಗ್ರಾಮದಲ್ಲಿ ಚೊಕ್ಕ ದೇವಪ್ಪಯ್ಯ, ಗುಬ್ಬಿ ಮಲ್ಲಣ್ಣ, ಅಮ್ಮಣನ ನಾಗಪ್ಪ, ಹೊನ್ನಮಲ್ಲಣ್ಣ, ಮಳವಳಿಯ ಬಸವಣ್ಣ, ಆನುಗಲ್ಲ ನಾಗಪ್ಪ ಇವರನ್ನೊಳಗೊಂಡ ಅನೇಕ ದಾಸೋಹದ ಮಠಗಳಿಂದ ಕೂಡಿ ಭಕ್ತಿಮಯಾಗಿ ಶ್ರೇಷ್ಠರಾದ 'ಶತಗಣಂ'ಗಳ ಸಮೂಹವಿದ್ದಿತೆಂದು ವ್ಯಕ್ತವಾಗುವುದರಿಂದ, ಈ ಗುಬ್ಬಿ ಮಲ್ಲಣಗಳು ಕೆಲವು ಕಾಲ ಗುಮ್ಮಳಾಪುರದಲ್ಲಿದ್ದರೆಂದು ಹೇಳಬಹುದಾಗಿದೆ. ಈ ಮಲ್ಲಣ್ಣನ ಮೊಮ್ಮಗನಾದ ೨ನೆಯ ಮಲ್ಲಣ್ಣನು ಶಿವಗಂಗೆಯ ಮೇಲಣ ಗವಿ ಮಠದಲ್ಲಿ ವೀರಶೈವಾಮೃತ ಮಹಾಪುರಾಣ ಬರೆದುದು ಸರ್ವಶ್ರುತ.

ಒಟ್ಟಿನಲ್ಲಿ, ಈ ವಂಶಸ್ಥರ ಕಾರ್ಯಕ್ಷೇತ್ರ ಅಮರಗುಂಡ, ಗುಮ್ಮಳಾಪುರ, ಗುಬ್ಬಿ ಹಾಗೂ ಶಿವಗಂಗೆಯಾಗಿರಬಹುದೆಂದು ತಿಳಿಯಲವಕಾಶವಿದೆ.

ಈ ಅಮರಗುಂಡ ಮಲ್ಲಿಕಾರ್ಜುನ ದೈವತದ ಚಿದಂಶವನುಳ್ಳ ಮಲ್ಲಿಕಾರ್ಜುನನೇ ಗಣಭಾಷಿತ ರತ್ನಮಾಲೆ, ವಾತುಲಶುದ್ಧಾಗಮ (ಟೀಕಾ) ಇವೇ ಮೊದಲಾದ ಗ್ರಂಥಗಳನ್ನು ರಚಿಸಿದ 'ಗುಬ್ಬಿ ಮಲ್ಲಣ, ಮಲ್ಲಣಾಚಾರ್ಯ' ಎಂಬುವರಾಗಿದ್ದಾರೆ.

ಪ್ರಸ್ತುತ ವಾತುಲಶುದ್ಧಾಗಮದ ಪ್ರತಿ ಪಟಲಾಂತ್ಯ ಗದ್ಯ "ಇತಿ ಶ್ರೀ ವಾತುಲತನ್ತ್ರೇ ಶುದ್ಧಾಖ್ಯೇ ಸಹಸ್ರಗ್ರಂಥ ಸಂಹಿತಾಯಾಂ ಶ್ರೀ ಮಲ್ಲಿಕಾರ್ಜುನೇನ ಕರ್ಣಾಟ ಭಾಷಯಾ ವಿವೃತಃ... - ಭೇದೋ ನಾಮ... ಪಟಲಃ" ಎಂದು ಮುಕ್ತಾಯವಾಗುತ್ತದೆ. ದಶಮ ಪಟಲ ಸಮಾಪ್ತವಾದ ನಂತರದಲ್ಲಿ

'ದಶಭಿಃ ಪಟಲಾನಾಂ ಸಂಯುತಂ ಶುದ್ಧಾಖ್ಯತಂತ್ರಕಮ್ ।
ಕರ್ಣಾಟಭಾಷಾ ವಿವೃತಂ ಸಂಪೂರ್ಣಂ ಶೈವವಲ್ಲಭಮ್ ॥

ನಮಸ್ತೇ ಬಸವಾಖ್ಯಾಯಾಮರಗುಂಡಾದಿದೇಶಿಕೇ ।
ತಂತ್ರಂ ವೇತ್ರೇ ನೇತ್ರೇ ಸತಾಂ ಷಟ್ಸ್ಥಲಬ್ರಹ್ಮರೂಪಿಣೇ ॥

ಎರಡನೆಯ ಶ್ಲೋಕದಲ್ಲಿ ಮಲ್ಲಣಗಳು ತನಗಿಂತ ಪೂರ್ವದಲ್ಲಿದ್ದ 'ಬಸವ'ನೆಂಬ ಹೆಸರುಳ್ಳ ದೇಶಿಕನನ್ನು ಸ್ಮರಿಸಿರುವನು. ಈತನು ಷಟ್ಸ್ಥಲಬ್ರಹ್ಮಸ್ವರೂಪನೂ ಸಿದ್ಧಾಂತವೇತೃವೂ ಸತ್ಪುರುಷರ ಮಾರ್ಗದರ್ಶಿಯೂ ಆಗಿದ್ದವನು. ಈ ಬಸವದೇಶಿಕನು ಮಲ್ಲಣನಿಗಿಂತ ಹಿಂದೆ ಆತನ ವಂಶದಲ್ಲಿ ಆಗಿಹೋದ ಒಬ್ಬ ಮಹಾಮಹಿನಾಗಿರಬಹುದು. ಅಥವಾ ಆತನ ಗುರುವೂ ಆಗಿರಬಹುದು.

ಮಲ್ಲಣಗಳ ವಂಶ ವಿಚಾರ : ಮಲ್ಲಣ ಅಥವಾ ಮಲ್ಲಣಾಚಾರ್ಯರ ಪೌತ್ರ ಎರಡನೆಯ ಗುಬ್ಬಿ ಮಲ್ಲಣಾರ್ಯ (೧೫೩೦) ತನ್ನ ವೀರಶೈವಾಮೃತ ಮಹಾಪುರಾಣದ

ಈ ವೀರಶೈವಾಮೃತಾಖ್ಯ ಸಂಗ್ರಹವನೀ
ಭೂವಳಯದಲ್ಲಿ ಕೃತಿಯಂ ಮಾಳ್ಪ ಶಿವಕವಿಯ
ದಾವನೆಂದಜಿದು ಹಲಗೆಯದೇಶಿಕಂ ಮಲ್ಲಣಾರ್ಯನಂ ಕರೆದು ನುಡಿದಂ ।
ನಾವು ಪೇಳ್ವೀ ಬೋಧೆಯಂ ಪದನ ಮಾಡುವೊಡೆ
ಪಾವನ ಚರಿತ್ರ ಕೇಳ್ ನೀನೆ ಯೋಗ್ಯಂ ಕಣಾ
ಠಾವಕಾನ್ವಯದಮರಗುಂಡ ಮಲ್ಲೇಶ್ವರಾಚಾರ್ಯನೇಂ ಸಾಮಾನ್ಯನೇ ॥

ಅವನ ಶಿಷ್ಯಂ ಶೂಲವೇರಿದ ಮಹತ್ವವು
ಳ್ಳವಿಚಲಿತ ಗುರುಭಕ್ತನಾತನ ಕುಮಾರನಾ
ಪ್ರವರದೇಶಿಕ ಪಟ್ಟವರ್ಧನಂ ಸೌಂದರ್ಯ ಮಲ್ಲಿಕಾರ್ಜುನ ಪಂಡಿತಂ
ತವೆ ತತ್ತನೂಭವಂ ನಾಗನಾಥಾರ್ಯನಾ
ಶಿವನ ನುಡಿಸಿದನಾತನಣುಗನಹಿಯಂ ಲಿಂಗ
ಕವಧಾನದಿಂ ಛತ್ರಮಂ ಮಾಡಿದಮರಗುಂಡಾರ್ಯನಾತನ ಪುತ್ರನು ॥

ಖ್ಯಾತನಾ ಪುಲ್ಕಸಾಂಗನಲಸದ್ಬ್ರಾಹ್ಮಣ
ವ್ರಾತಕಗ್ಗಳನ ಮಾಡುತ ವೇದವೋದಿಸಿದ
ಪೂತಮಾನಿಸನಿಂತು ಮೆರೆವನ್ವಯದೊಳು ಗುಬ್ಬಿಯ ಮಲ್ಲಣಚಾರ್ಯನು ।
ಜಾತನಾಗುತ್ತಲನುಭವಯೋಗ ಷಟ್ಸ್ಥಲ
ಖ್ಯಾತಮಂ ಗಣಭಾಷ್ಯರತ್ನಮಾಲೆಯಂ ಮಾಡಿ
ವಾತೂಲಕಂ ಟಿಪ್ಪಣವನೆಸಗಿದವನ ಪೌತ್ರಂ ನೀನದೇಂ ಬಡವನೇ ॥

ಎಂಬ ಪದ್ಯಗಳಿಂದಲೂ, ಇವನ ಇನ್ನೊಂದು ಕೃತಿಯಾದ ಭಾವಚಿಂತಾರತ್ನದಲ್ಲಿನ

---

೫. ವೀರಶೈವಾಮೃತ ಮಹಾಪುರಾಣ
ಸಂ. ನಂ. ಶಿವಪ್ಪಶಾಸ್ತ್ರೀ, ಸಂಧಿ : ೧ : ಪದ್ಯ : ೪೮, ೪೯, ೫೦

ಎಲೆ ಮಲ್ಲಣಾರ್ಯಕೇಳ್ ನಿನ್ನಯ ಪಿತಾಮಹಂ
ಲಲಿತ ವಾತೂಲತಂತ್ರಕ್ಕೆ ಟೀಕಂ ಮಾಡಿ
ನಲಿದಾಗಮಗ್ರಂಥವಚನದಿಂ ಗಣಭಾಷ್ಯರತ್ನಮಾಲೆಯ ರಚಿಸಿದಾ
ಸುಲಭನನ್ವಯಭವನೆ ಮದ್ಭಕ್ತ ವಾತ್ಸಲ್ಯ
ದಲಘುಮಾರ್ಗೋದ್ಧರಣ ಸತ್ಯೇಂದ್ರಚೋಳ ಭೂ
ಲಲನಾಧಿಪನ ಕೃತಿಯನೊರೆಯೆಂದ ದೇಶಿಕಾಣತಿಯಿಂದಲಾಂ ತೊಡಗಿದೆಂ ॥

ಕರುಣಾಳುವಮರಗುಂಡದ ಮಲ್ಲಿಕಾರ್ಜುನಾ
ರ್ಯರ ನಿರೂಪದಿ ನಿಶಿತ ಶೂಲವೇಜಿದ ಮಹ
ದ್ಗುರು ಭಕ್ತನನ್ವಯಾಂಬರುಹ ದಿನನಾಥ ಗುಬ್ಬಿಯ ಮಲ್ಲಣಾರ್ಯರ ।
ತರುಣ ಗುರುಭಕ್ತಾಖ್ಯ ಗರ್ಭಾಬ್ಧಿಚಂದ್ರಮಂ
ವರ ಬಸವಪೌರಾಣದುರು ಮಲ್ಲಣಾರ್ಯನಘ
ಹರ ಸಿದ್ಧಮಲ್ಲೇಶ ಗುರುಚರಣಸುರಕುಜಂ ಹೃದ್ಭೂಮಿಯೊಳ್ಮೆಱೆಯಲುಂ ॥

ಎಂಬ ಪದ್ಯಗಳಿಂದಲೂ,

ಈ ಎರಡನೆಯ ಮಲ್ಲಣಾರ್ಯನ ಪುತ್ರನಾದ ಶಾಂತೇಶನ ಎಡೆಯೂರು ಸಿದ್ಧಲಿಂಗೇಶ್ವರರ ಕುರಿತ ಸಿದ್ಧೇಶ್ವರ ಪುರಾಣದ

ಅಮರಗುಂಡದ ಮಲ್ಲಿಕಾರ್ಜುನ
ನಮಲ ಘನದಿವ್ಯಾಜ್ಞೆಯಿಂ ವಿ
ಕ್ರಮದೆ ಶೂಲವನಡರಿದುರು ಗುರುಭಕ್ತನನ್ವಯದೆ ।
ಅಮರ್ದು ರಾಜಿಸಿ ಸಕಲ ಶಾಸ್ತ್ರಾ
ಗಮಗಳಿಂ ನೆರೆ ತಿಳಿದು ಮತ್ತಂ
ವಿಮಲ ವಾತೂಲಕ್ಕೆ ಟೀಕಂ ಮಾಡೆ ಧರೆಯಲ್ಲಿ ॥

ಲಾಲಿಸಲ್ಗಣಭಾಷ್ಯರತ್ನಸು
ಮಾಲೆಯಂ ಮಾಡುತ್ತೆ ಮತ್ತೆ ವಿ
ಶಾಲ ಚರಸೇವೆಯೊಳು ವರ್ತಿಸಿ ಷಟ್ಸ್ಥಲದೊಳಿರ್ಪಾ ।
ಲೋಲ ಗುಬ್ಬಿಯ ಮಲ್ಲಣಾರ್ಯನ
ಶಾಲಿಪುತ್ರಂ ಶಿವನ ಮಹಿಮೆಯ
ಲೀಲೆಯಿಂ ಪ್ರಕಟಿಸುವನವನ ವಿಶೇಷವೆಂತೆನಲು ॥[೬]

ಎಂಬ ಪದ್ಯಗಳಿಂದಲೂ.

ವಿರಕ್ತ ತೋಂಟದಾರ್ಯರ 'ನೂತನ ಪುರಾತನ'ರಗಳೆಯಲ್ಲಿನ :

ಉರು ವೇದ ನಾಲ್ಕನಂತ್ಯಜನಿಂದಲೋದಿಸಿದ ।
ಹಿರಿಯ ಗುಬ್ಬಿಯ ಮಲ್ಲಣಾರ್ಯರಾಳಾನಯ್ಯ ॥ ೧೭ ॥[೭]

ಪದ್ಯಗಳಿಂದಲೂ ಗುಬ್ಬಿಯ ಮಲ್ಲಣಗಳಿಗೆ ಸಂಬಂಧಿಸಿದ ವಿಷಯಗಳು ಹೀಗೆ ತಿಳಿದು ಬರುತ್ತವೆ :

---

೬. ಶಾಂತೇಶನ ಸಿದ್ಧೇಶ್ವರ ಪುರಾಣ : ಪುಟ : ೪, ಪದ್ಯ : ೧೫-೧೬

೭. ವಿರಕ್ತ ತೋಂಟದಾರ್ಯನ 'ನೂತನ ಪುರಾತನ' ರಗಳೆ : ಪದ್ಯ : ೧೭

ಅಮರಗುಂಡದ ಮಲ್ಲಿಕಾರ್ಜುನರ ಶಿಷ್ಯ ಶೂಲವೇರಿದ ಅಚಲಿತ ಭಕ್ತ 'ಗುರುಭಕ್ತ'ನು. ಆತನ ಕುಮಾರ ಪ್ರವರ ದೇಶಿಕ ಪಟ್ಟವರ್ಧನ ಸೌಂದರ್ಯ ಮಲ್ಲಿಕಾರ್ಜುನ. ಈತನ ತನೂಭವ ನಾಗನಾಥಾರ್ಯ. ಈತನ ಅಣುಗ ಲಿಂಗಕ್ಕೆ ಅವಧಾನದಿಂದ ಅಹಿಛತ್ರವನ್ನು ಮಾಡಿದ ಅಮರಗುಂಡಾರ್ಯ. ಆತನ ಪುತ್ರ ಪುಲ್ಕಸನೆಂಬ ನೀಚಜಾತಿಯವನಿಂದ ವೇದವನೋದಿಸಿ ಬ್ರಾಹ್ಮಣರಿಗೂ ಶ್ರೇಷ್ಠನನ್ನಾಗಿ ಮಾಡಿದ, ಗಣಭಾಷಿತ ರತ್ನಮಾಲೆಯನ್ನು ಸಂಕಲಿಸಿ ವಾತುಲಾಗಮಕ್ಕೆ ಕನ್ನಡದಲ್ಲಿ ವ್ಯಾಖ್ಯಾನವನ್ನು ಮಾಡಿದ ಗುಬ್ಬಿ ಮಲ್ಲಣ. ಇವನ ಮಗ ಗುರುಭಕ್ತ, ಇವನ ಮಗ ೨ನೆಯ ಮಲ್ಲಣಾರ್ಯ, ಇವನ ಮಗ ಶಾಂತೇಶ.

ಗುರುಭಕ್ತನು ಶೂಲವನ್ನೇರಿದ ಸಂಗತಿಯು ನೀಲಕಂಠಾಚಾರ್ಯ ವಿರಚಿತ 'ಆರಾಧ್ಯ ಚಾರಿತ್ರ[೮]; ಚಿಕ್ಕನಂಜೇಶನ ರಾಘವಾಂಕ ಚಾರಿತ್ರ[೯], ಶಾಂತಲಿಂಗದೇಶಿಕನ ಭೈರವೇಶ್ವರ ಕಾವ್ಯ ಕಥಾಮಣಿಸೂತ್ರರತ್ನಾಕರ[೧೦] - ಇವುಗಳಲ್ಲಿ ವಿವರವಾಗಿ ವರ್ಣಿತವಾಗಿದೆ. ಆರಾಧ್ಯ ಚಾರಿತ್ರದಲ್ಲಿ ಈತನನ್ನು 'ಪುರಾತನ'ರಲ್ಲಿ ಒಬ್ಬನೆಂದು ಗೌರವಿಸಲಾಗಿದೆ. ಮೇಲಿನ ವಿವರಣೆಯಿಂದ ಇವರ ವಂಶವನ್ನು ಹೀಗೆ ಗುರುತಿಸಬಹುದು.

ಅಮರಗುಂಡದ ಮಲ್ಲಿಕಾರ್ಜುನ
|
ಇವರ ಪಟ್ಟ ಶಿಷ್ಯ - ಗುರುಭಕ್ತ
|
ದೇಶಿಕಪಟ್ಟವರ್ಧನ ಸೌಂದರ್ಯ ಮಲ್ಲಿಕಾರ್ಜುನ ಪಂಡಿತ
|
ನಾಗನಾಥಾರ್ಯ
|
ಅಮರ ಗುಂಡಾರ್ಯ
|
ಗುಬ್ಬಿಯ ಮಲ್ಲಣ (ಪ್ರಸ್ತುತ)
|
ಗುರುಭಕ್ತ-ಸಪ್ಪೆಯಮ್ಮ
|
ಎರಡನೆ ಮಲ್ಲಣಾರ್ಯ
|
ಶಾಂತೇಶ

---

೮. ಆರಾಧ್ಯಚಾರಿತ್ರ : ಸಂಧಿ : ೪ : ಪು. ೧೧-೧೪

೯. ರಾಘವಾಂಕ ಚಾರಿತ್ರ : ಸಂಧಿ : ೫ : ಪದ್ಯ : ೩೧-೩೩.

೧೦. ನೋಡಿ : ಗುಬ್ಬಿ ಮಲ್ಲಣ್ಣ ಮತ್ತು ತೋಂಟದ ಸಿದ್ಧೇಶ್ವರರ ಕಾಲ ವಿಚಾರ : ಪ್ರಬುದ್ಧ ಕರ್ನಾಟಕ ೩೦-೧-ಪಿ-೧೩-೩೧.

ಇವರ ಕಾಲ : ಈ ಮಲ್ಲಣಾರ್ಯನ ಕಾಲವನ್ನು ಶ್ರೀ ಆರ್. ನರಸಿಂಹಾಚಾರ್ಯರು ತಮ್ಮ ಕರ್ನಾಟಕ ಕವಿಚರಿತೆಯಲ್ಲಿ ಕ್ರಿ.ಶ. ಸು. ೧೪೭೫ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಶ್ರೀ ಎಂ.ಆರ್. ಶ್ರೀನಿವಾಸಮೂರ್ತಿಗಳು ಲಕ್ಕಣ್ಣ ದಂಡೇಶನ ಶಿವತತ್ತ್ವ ಚಿಂತಾಮಣಿಯಲ್ಲಿ ಈತನನ್ನು ಉಲ್ಲೇಖಿಸಿರುವುದರಿಂದ ಕವಿಚರಿತೆಕಾರರು ಕೊಟ್ಟಿರುವ ಕಾಲ ಕ್ರಿ.ಶ. ೧೪೭೫ಕ್ಕೆ ಬದಲಾಗಿ ಕ್ರಿ.ಶ. ೧೪೨೮-೩೦ರ ಅವಧಿ ಎಂದು ಅಭಿಪ್ರಾಯಪಟ್ಟಿದ್ದಾರೆ. ಇದೇ ಅವಧಿಯನ್ನು ಸಮ್ಮತಿಸಬಹುದಾಗಿದೆ.

ಕೃತಿಗಳು : ಇದುವರೆಗೆ ದೊರಕಿರುವ ಇವರ ಕೃತಿಗಳೆಲ್ಲವೂ ಬಹುಪಾಲು ಟೀಕಾಕೃತಿಗಳು ಹಾಗೂ ಸಂಕಲನ ಗ್ರಂಥಗಳೇ ಆಗಿವೆ. ಇವರ ಸ್ವತಂತ್ರ ಕೃತಿಗಳು ಯಾವುದೂ ಕಂಡುಬರುವುದಿಲ್ಲ. ಕವಿಚರಿತೆಕಾರರು ತಿಳಿಸಿರುವಂತೆ

೧. ಗಣಭಾಷ್ಯರತ್ನಮಾಲೆ

೨. ವಾತುಲಶುದ್ಧಾಗಮ ಟೀಕಾ

೩. ಕಾಲಜ್ಞಾನತಂತ್ರ ಟೀಕು

ಇವರ ಕೃತಿಗಳಾಗಿವೆ. ವೀರಶೈವಾಮೃತ ಮಹಾಪುರಾಣದ :

ಆ ಪುಲ್ಕಸನ ವೇದವೋದಿಸುತ ಭಕ್ತನೆನಿ
ಪಾ ಪರಂಪರೆಯ ಗುಬ್ಬಿಯ ಮಲ್ಲಣಾರ್ಯನೊಲಿ
ದೋಪ ವಾತೂಲತಂತ್ರಕೆ ಟೀಕು ಯೋಗಷಟ್ಸ್ಥಲ ವೀರಮಾಹೇಶ್ವರಾ ।
ಸ್ಥಾಪನ ನಿರೂಪಣಂ ಗಣಭಾಷ್ಯರತ್ನ ಮಾ
ಲಾಪರಿಮಿತದ ವೀರಶೈವ ಮಹಿಮಾತಿಶಯ
ನಾ ಪೌತ್ರಂ ನೀಂ ಮಲ್ಲಣಾರ್ಯ ಕೃತಿಯಂ ಮುಗಿದಲಾ ಭಾಪು ಲೇಸೆಂದರು ॥೫೪॥

ಈ ಪದ್ಯದಿಂದ :

೧. ವಾತುಲತಂತ್ರ ಟೀಕು

೨. ಯೋಗ ಷಟ್ಸ್ಥಲ

೩. ವೀರಶೈವ ಮಾಹೇಶ್ವರಾಚಾರ ನಿರೂಪಣ

೪. ಗಣಭಾಷ್ಯರತ್ನಮಾಲಾ - ಎಂಬೀ ಗ್ರಂಥಗಳು ಮಲ್ಲಣಗಳಿಂದ ರಚಿತವಾಗಿವೆ ಯೆಂದು ತಿಳಿದುಬರುತ್ತದೆ.

೫. ಇವಲ್ಲದೆ ವಾತುಲಶುದ್ಧಾಗಮದ ವರ್ಗಭೇದಪಟಲಃ ಶ್ಲೋಕ : ೨೭

ಸೂಕ್ಷ್ಮತ್ವಾದ್ಘೋಷರೂಪತ್ವಾನ್ನಾದಮಿತ್ಯಭಿದೀಯತೇ ।
ಚರಾಚರಾದಿ ಭೂತೇಷು ಜೀವರೂಪಂ ಹೃದಿಸ್ಥಿತಮ್ ।
ತಸ್ಮಾದ್ಗುಹ್ಯಮಿದಂ ಪ್ರೋಕ್ತಂ ಪರಂ ಭಾವಾತ್ಪರಂ ಸ್ಥಿತಮ್ ॥

ಟೀಕೆಯಲ್ಲಿ : "ಸೂಕ್ಷ್ಮತ್ವಾತ್ ಅಸ್ಮಿನ್ ವಾತುಲೇ - ಈ ವಾತುಲಾಗಮದಲ್ಲಿಯ

'ಕಾಲಜ್ಞಾನ'ದಲ್ಲಿ ಶುದ್ಧ ಪ್ರಾಸಾದ ಬೀಜವಾದಂಥ ಕುಂಡಲಿನೀ ಶಕ್ತಿ ತ್ರಿಭೇದವಾಗಿಪ್ಪುದಂ ನಿರೂಪಿಸಿಹೆನು" ಎಂದು ಹೇಳಿದ್ದಾರೆ. ಇದರಿಂದ ವಾತುಲಾಗಮದ ಮತ್ತೊಂದು ಭೇದವಾದ 'ಕಾಲಜ್ಞಾನತಂತ್ರ'ಕ್ಕೂ ಗುಬ್ಬಿ ಮಲ್ಲಣಗಳೇ ವ್ಯಾಖ್ಯಾನವನ್ನು ಬರೆದಂತೆ ತಿಳಿದುಬರುತ್ತದೆ. ಆದರೆ ಇದುವರೆಗೆ ಉಪಲಬ್ಧವಿಲ್ಲ.

೬. ಶ್ರೀ ಎಸ್. ಶಿವಣ್ಣನವರು ವರರುಚಿಕೃತ 'ಏಕಾಕ್ಷರ ನಿಘಂಟು' ಕೃತಿಗೆ ಗುಬ್ಬಿಮಲ್ಲಣಗಳು ಬರೆದ ಕನ್ನಡ ಟೀಕೆಯನ್ನು ಕನ್ನಡ ಅಧ್ಯಯನ ಕೇಂದ್ರದ ೮ನೇ ನಂಬರಿನ ಓಲೆ ಪ್ರತಿಯನ್ನು ಆಧರಿಸಿ ಸಂಪಾದಿಸಿ ಪ್ರಕಟಿಸಿದ್ದಾರೆ. ಈ ಕೃತಿಯ ಅಂತ್ಯದಲ್ಲಿ :

ಏಕಾಕ್ಷರ ನಿಘಂಟಾಖ್ಯೋ ವಿದುಷಾಂ ಹಿತಕಾಮಯಾ ।
ವ್ಯಾಖ್ಯಾತೋಽಯಂ ಮಯಾ ಸಮ್ಯಕ್ ಮಲ್ಲಿಕಾರ್ಜುನಧೀಮತಾ ॥

[ಏಕಾಕ್ಷರ ನಿಘಂಟು ಎಂಬ ಹೆಸರಿನ ಈ ಕೃತಿಯು ವಿದ್ವಾಂಸರ ಹಿತ ಕಾಮನೆಗಾಗಿ ಮಲ್ಲಿಕಾರ್ಜುನನೆಂಬ ವಿದ್ವಾಂಸನಾದ ನನ್ನಿಂದ ಸ್ಫುಟವಾಗಿ (ಕರ್ಣಾಟಭಾಷೆಯಲ್ಲಿ) ವ್ಯಾಖ್ಯಾನಿಸಲ್ಪಟ್ಟಿತು] ಎಂಬುದರಿಂದ 'ಏಕಾಕ್ಷರ ನಿಘಂಟವಿನ ಕರ್ತೃವೂ ಗುಬ್ಬಿಯ ಮಲ್ಲಣಾಚಾರ್ಯರೆಂದು ತಿಳಿದು ಬರುತ್ತದೆ.[೧೧]

೭. ಇದೇ ಶ್ರೀ ಎಸ್. ಶಿವಣ್ಣನವರು ಕನ್ನಡ ಅಧ್ಯಯನ ಕೇಂದ್ರದ ಹಸ್ತಪ್ರತಿ ಭಂಡಾರದಲ್ಲಿ 'ದಿವ್ಯಾಗಮಸಾರ ಪಂಚಮಪಟಲ'ದ ಎರಡು ಓಲೆಗಳಿದ್ದು, ಇದರ ವಸ್ತು ವೀರಮಾಹೇಶ್ವರಾಚಾರ ನಿರೂಪಣೆಯೆಂದೂ, ಇದರಲ್ಲಿ ಒಟ್ಟು ೧೬೭ ಶ್ಲೋಕಗಳಿವೆಯೆಂದೂ, ಇದಕ್ಕೆ ಗುಬ್ಬಿಮಲ್ಲಣಗಳು ವ್ಯಾಖ್ಯಾನ ಮಾಡಿದ್ದಾರೆ ಎಂದೂ ಅಭಿಪ್ರಾಯ ಪಟ್ಟಿದ್ದಾರೆ.

೮. ರೆವರೆಂಡ್ ಎಫ್. ಕಿಟೆಲ್ ಅವರು ೧೮೭೫ರಲ್ಲಿ ನಾಗವರ್ಮನ ಕನ್ನಡ ಛಂದಸ್ಸಿಗೆ ಬರೆದ ಮುನ್ನುಡಿಯಲ್ಲಿ 'ರಾಮರಾಜಸ್ತವ' - ಎಂಬ ತೆಲುಗು ಕೃತಿಯು ಮಲ್ಲಣನ ಹೆಸರಿನಲ್ಲಿದೆಯೆಂದು ತಿಳಿಸಿದ್ದಾರೆ. (Preface : pp.LVII)

ಇದುವರೆಗೆ ಗಣಭಾಷಿತ ರತ್ನಮಾಲೆ, ಏಕಾಕ್ಷರ ನಿಘಂಟು ಟೀಕೆ ಮಾತ್ರ

---

೧೧. ಬೆನ್ನುಡಿ : ಪುಟ : ೭೦-೭೫

೧೨. ಬಿಡು ಮುತ್ತು : ಪು. ೩೦೬-೩೦೭

ಪ್ರಕಟಗೊಂಡಿದ್ದು, ಈಗ ವಾತುಲಶುದ್ಧಾಗಮ ಟೀಕೆ ಪ್ರಕಟವಾಗುತ್ತಲಿದೆ. ಮಿಕ್ಕ ಈತನ ಕೃತಿಗಳು ಉಪಲಬ್ಧವಿದ್ದೂ ಪ್ರಕಟಗೊಂಡಿಲ್ಲದಿರುವುದು ನಷ್ಟವೇ ಸರಿ.

ಬೀರಿದ ಪ್ರಭಾವ : ಸಂಸ್ಕೃತದಲ್ಲಿ ಸಂಕಲಿತವಾಗಿರುವ 'ಸಿದ್ಧಾಂತ ಶಿಖಾಮಣಿ'ಯನ್ನು ವೇದಾಗಮ ಪುರಾಣ ಇತಿಹಾಸಗಳ ಶಿವಾದ್ವೈತ ಪರವಾದ ಶ್ಲೋಕಗಳನ್ನು ಆಯ್ದು, ತನ್ನದೇ ಆದ ರೀತಿಯಲ್ಲಿ ೧೦೧ ಸ್ಥಲಕಟ್ಟುಗಳಿಗನುಗುಣವಾಗಿ ಶ್ರೀ ಶಿವಯೋಗಿಗಳು ಸಂಯೋಜಿಸಿದ್ದಾರೆ. ಕೃತಿಯ ಕಾಲ ಕ್ರಿ.ಶ.ಸು. ೧೪೩೦-೧೪೬೦ ಮಧ್ಯದ ಅವಧಿಯಾಗಿದೆ. ಆದರೆ ಇವರಿಗಿಂತಲೂ ಸ್ವಲ್ಪ ಮುಂಚಿತವಾಗಿ ಅಥವಾ ಸಮಕಾಲೀನವಾಗಿ ಗುಬ್ಬಿಮಲ್ಲಣಗಳು ಸಂಕಲಿಸಿದ 'ಗಣಭಾಷ್ಯ ರತ್ನಮಾಲೆ'ಯೂ ೧೦೧ ಸ್ಥಲಕಟ್ಟುಗಳನ್ನೊಳಗೊಂಡಿದ್ದು, ಸಿದ್ಧಾಂತ ಶಿಖಾಮಣಿಯಂತೆಯೇ ವೇದಾಗಮ ಪುರಾಣಗಳಿಂದ ಶ್ಲೋಕಗಳನ್ನು ಆಯ್ದು, ಆಯಾಸ್ಥಲಗಳ ಆದಿಯಲ್ಲಿ ಅವುಗಳನ್ನುದ್ಧರಿಸಿ, ನಂತರ ಬಸವಾದಿ ಪ್ರಮಥರ ವಚನಗಳನ್ನು ಶ್ಲೋಕಾರ್ಥಕ್ಕನುಗುಣವಾಗಿ ಜೋಡಿಸಿ ಆಯಾ ಸ್ಥಲಗಳನ್ನು ಪುಷ್ಟೀಕರಿಸಿದ್ದಾರೆ. ಹೀಗೆ ದೇಶೀಸಾಹಿತ್ಯವನ್ನು ಶಾಸ್ತ್ರಸ್ಥಾನಕ್ಕೆ ಕೊಂಡೊಯ್ದಿರುವುದು ಶರಣ ಧರ್ಮಕ್ಕೆ ಇವರು ನೀಡಿದ ವಿಶಿಷ್ಟ ಕೊಡುಗೆಯಾಗಿದೆ. ಸಿದ್ಧಾಂತ ಶಿಖಾಮಣಿಯ ಸ್ಥಲನಾಮ ನಿರ್ದೇಶನಕ್ಕೂ ಗಣಭಾಷಿತರತ್ನಮಾಲೆಯ ಸ್ಥಲನಾಮ ನಿರ್ದೇಶನಕ್ಕೂ ಬಹುಪಾಲು ಹೊಂದಿಕೆಯಾಗದೆ ಹೋದರೂ ತತ್ತ್ವ ಸಿದ್ಧಾಂತದಲ್ಲಿ ಸಾಮ್ಯವಿರುವುದು ಕಂಡುಬರುತ್ತದೆ. ಇಂಥ ಹೊಸದೊಂದು 'ಗ್ರಂಥಮಾರ್ಗ' (ಶಾಸ್ತ್ರಮಾರ್ಗ) ಸೃಷ್ಟಿಯಾದದ್ದು ಗುಬ್ಬಿ ಮಲ್ಲಣಗಳಿಂದ ಎಂದು ನಿಸ್ಸಂಶಯವಾಗಿ ಹೇಳಬಹುದು.

ಗಣಭಾಷಿತ ರತ್ನಮಾಲೆಯಲ್ಲಿ ವೀರಶೈವ ಧರ್ಮಶಾಸ್ತ್ರಕ್ಕೆ ಪ್ರಾಧಾನ್ಯವಿದ್ದಂತೆ ಶರಣರ ಅನುಭಾವ ಸಾಹಿತ್ಯಕ್ಕೂ ಪ್ರಾಧಾನ್ಯತೆ ಇದೆ.

ಶಿವಗಣ ಪ್ರಸಾದಿಗಳ 'ಶೂನ್ಯ ಸಂಪಾದನೆ' ಮತ್ತು ಗಣಭಾಷಿತ ರತ್ನಮಾಲೆಗಳ ಮುಕ್ತಾಯದ ಗದ್ಯಗಳಲ್ಲಿ ತುಂಬ ಹೋಲಿಕೆಯಿರುವುದರಿಂದ, ಪ್ರಸಾದಿದೇವ ಇತ್ತೀಚಿನವನಾಗಿದ್ದ ಪಕ್ಷದಲ್ಲಿ ಇವನು ಗಣಭಾಷಿತರತ್ನಮಾಲೆಯಿಂದ ಪ್ರಭಾವಿತನಾಗಿರುವನೆಂದು ಹೇಳಬಹುದಾಗಿದೆ.

ಪ್ರಭುದೇವರ ಲಿಂಗಲೀಲಾವಿಲಾಸ ಚಾರಿತ್ರದ ಮೇಲೆ ಬೀರಿದ ಪ್ರಭಾವ :

ಶ್ರೀ ಎಂ.ಎಂ. ಕಲಬುರ್ಗಿಯವರು ತಮ್ಮ 'ಮಾರ್ಗ-ನಾಲ್ಕ'ರಲ್ಲಿ ಕಲ್ಲುಮಠದ ಪ್ರಭುದೇವನು ತಾನು ಆಧಾರವಾಗಿ ಬಳಸಿದ ಸಂಸ್ಕೃತ ಶ್ಲೋಕಗಳಿಗೆ ಬರೆದ ಕನ್ನಡ ಟೀಕೆಯು ವಾತುಲಾಗಮ ಟೀಕೆಯನ್ನು ಬಹಳಷ್ಟು ಹೋಲುವುದೆಂದೂ, ಗುಬ್ಬಿಯ

ಮಲ್ಲಣ್ಣ ಕಲ್ಲುಮಠದ ಪ್ರಭುದೇವರಿಗಿಂತಲೂ ಹಿರಿಯನಿದ್ದು ಅವನ ವಾತುಲಶುದ್ಧಾಗಮ ಟೀಕೆಯನ್ನು ಕಣ್ಣ ಮುಂದಿಟ್ಟುಕೊಂಡು ಪ್ರಭುದೇವರು ತಮ್ಮ ಕೃತಿಯನ್ನು ರಚಿಸಿರಬಹುದೆಂದೂ ಹೇಳಿದುದು ಸರಿಯೆನಿಸುತ್ತದೆ.

ಮಲ್ಲಣಗಳ ಟೀಕೆಯನ್ನು ನೇರವಾಗಿ ವ್ಯತ್ಯಾಸವಿಲ್ಲದಂತೆ ಲಿಂಗಲೀಲಾವಿಲಾಸ ಚಾರಿತ್ರವು ಸ್ವೀಕರಿಸಿದೆ. ಉದಾ: ಎರಡು ಪಠ್ಯಭಾಗಗಳನ್ನು ಗಮನಿಸಬಹುದು. :

ವಾತುಲಾಗಮ ಟೀಕೆ : ತತ್ತ್ವಭೇದ ಪಟಲ :

೧. ಶ್ಲೋಕ॥ ತ್ರಿಗುಣಂ ಕರ್ತೃ ಪ್ರತಾಪಂ ಚ ದುರ್ಭೇದ್ಯಾ ನಿಗ್ರಹಂ ತಥಾ ।
ವಿಧಿರ್ಮಾಯಾ ವಿವರ್ಣಂ ಚ ವರ್ಣಂ ಸಂಹಾರಮೇವ ಚ ।
ಏತೇ ದಶಗುಣಾಃಪ್ರೋಕ್ತಾಸ್ತೇಷಾಂ ಲಕ್ಷಣಮುಚ್ಯತೇ ॥

ಟೀಕು॥ ಆ ಶಿವತತ್ತ್ವಸಂಭೂತವಾಗಿ ಆ ಶಿವತತ್ತ್ವವನೆಂಬಿಹಂಥಾ ಸದ್ಗುಣಂಗಳ ಲಕ್ಷಣಂಗಳಂ ಪೇಳುತ್ತಿದ್ದಾನು.

ತ್ರಿಗುಣಂ=ತ್ರಿಗುಣವೆಂದು, ಕರ್ತೃ=ಕರ್ತೃವೆಂದು, ಪ್ರತಾಪಂ=ಪ್ರತಾಪವೆಂದು, ದುರ್ಭೇದ್ಯಂ=ದುರ್ಭೇದ್ಯವೆಂದು, ತಥಾ=ಹಾಂಗೆ, ಅನುಗ್ರಹಂ=ಅನುಗ್ರಹವೆಂದು, ವಿಧಿಃ=ವಿಧಿಯೆಂದು, ಮಾಯಾ=ಮಾಯೆಯೆಂದು, ವಿವರ್ಣಂ ಚ=ವಿವರ್ಣವೆಂದು, ಸಂಹಾರಮೇವ ಚ=ಸಂಹಾರವೆಂದು, ಏತೇ ದಶ=ಈ ಹತ್ತು ಪ್ರತಿ ಭಿನ್ನ ನಾಮಂಗಳನುಳ್ಳವು, ಗುಣಾಃ=ಗುಣಂಗಳೆದು, ಪ್ರೋಕ್ತಾಃ=ಹೇಳಲುಪಟ್ಟವು, ತೇಷಾಂ=ಆ ಈ ದಶಗುಣಂಗಳ, ಲಕ್ಷಣಮುಚ್ಯತೇ=ಲಕ್ಷಣವು ಹೇಳಲುಪಡುತ್ತಿದ್ದುದು.

॥೧೦೩॥

೨. ಶ್ಲೋಕ॥ ತ್ರಿಗುಣಂ ಶೂಲಮಿತ್ಯುಕ್ತಂ ಕರ್ತಾ ಪರಶುರುಚ್ಯತೇ ।
ಖಡ್ಗಮೀಶ ಪ್ರತಾಪಂಸ್ಯಾದ್ದುರ್ಭೇದ್ಯಂ ವಜ್ರಮಿಷ್ಯತೇ ।
ಈಶಸ್ಯಾನುಗ್ರಹಂ ಚೈವ ತ್ವಭಯಂ ತು ಪ್ರಶಸ್ಯತೇ ॥

ವಿಧಿಸ್ಯಾನ್ನಾಗರೂಪಂ ತು ಪಾಶಂ ಮಾಯಾ ಸ್ವರೂಪಕಮ್ ।
ವಿವರ್ಣಮಂಕುಶಂ ಚೈವ ವರ್ಣಂ ನಾದಾತ್ಮಕಂ ವಿದುಃ ॥

ಸಂಹಾರಮಗ್ನಿರೂಪಂ ಸ್ಯಾತ್ತೇಷಾಂ ನಾಮಾನಿ ಕೀರ್ತಿತಾಃ ।
ಏತಾನಿ ಗುಣರೂಪಾಣಿ ಸಾಂಗಾನಿ ಚ ಯಥಾ ಕ್ರಮಾತ್ ॥

ಟೀಕು॥ ತ್ರಿಗುಣಂ=ಪರಮೇಶ್ವರನದೆಸೆಯಿಂದ ಸಂಭೂತವಾದ ಸತ್ವರಜ ತಮೋ ಗುಣಂಗಳು, ಶೂಲಮಿತ್ಯುಕ್ತಂ=ತ್ರಿಶೂಲವೆಂದು ನುಡಿಯಲುಪಟ್ಟುದು, ಕರ್ತಾ=ತನ್ನಲ್ಲಿ ಪ್ರಸನ್ನ ಮಾನಸರಾದಭಕ್ತರುಗಳ ಭವಾರಣ್ಯಾದಿಗಳ ಕತ್ತರಿಸುವ ಗುಣವೆ,

ಪರಶುರುಚ್ಯತೇ=ಕೊಡಲಿ ಎಂದು ಹೇಳಲುಪಡುತ್ತಿಹುದು, ಈಶ ಪ್ರತಾಪಂ=ದುಷ್ಟರುಗಳ ನೋಯಿಸುವಂಥಾ ಪರಮೇಶ್ವರನ ಪ್ರತಾಪಿಗುಣವೆ, ಖಡ್ಗಂ ಸ್ಯಾತ್=ಆ ಖಡ್ಗವೆಂಬ ಆಯುಧವಹುದು, ದುರ್ಭೇದ್ಯಂ=ಪರಮೇಶ್ವರನ ಗುಣಲಕ್ಷಣವು ಆವುದಜೆಂದವು ಭೇದಿಸಬಾರದಾದ ಕಾರಣ ದುರ್ಭೇದ್ಯವೆನಿಸಿಕೊಂಬುದು. ಅಂತಹ ದುರ್ಭೇದ್ಯ ಲಕ್ಷಣವೆ, ವಜ್ರಮಿಷ್ಯತೇ=ವಜ್ರವೆಂದು ನುಡಿಯಲುಪಡುತ್ತಿಹುದು, ಈಶಸ್ಯ=ಪರಮೇಶ್ವರನ ನಿಗ್ರಹಾನುಗ್ರಹನಾಮಕ್ಕೆ ದುಷ್ಟರಾದ ಕಾಲ ಕಾಮದಕ್ಷಮಖ ಜಲಂಧರ ನರಸಿಂಹಾದಿಗಳನು ನಿಗ್ರಹಿಸುವ ಪ್ರತಾಪ ಗುಣವೆ ಖಡ್ಗವೆನಿಸಿತ್ತಾಗಿ, ಅನುಗ್ರಂಚೈವ=ಶಿಷ್ಟರಾದ ತನ್ನ ಸದ್ಭಕ್ತಿಯುತರುಗಳನು ಅನುಗ್ರಹಿಸುವ ಗುಣವೆ, ಅಭಯಂ ತು=ಅಭಯವೆಂದು, ಪ್ರಶಂಸ್ಯತೇ=ಪ್ರಶಂಸಿಸಲುಪಡುತ್ತಿಹುದು. ವಿಧಿಃ=ಆಯಾ ಭೋಗ್ಯಭೋಕ್ತೃಗಳಿಗೆ ತಕ್ಕುದಮಾಡುವಂಥಾ ನಿಯತಿಗುಣವೇ, ನಾಗರೂಪಂ=ಫಣಿಯಸ್ವರೂಪವು, ಸ್ಯಾತ್=ಅಹುದು, ಅವುದಾನೊಂದು ಮಾಯಾಶಕ್ತಿಯಹುದು ಆ ಮಾಯಾಶಕ್ತಿ ಸ್ವರೂಪ ಗುಣವೆ, ಪಾಶಂ=ಪಾಶವೆನಿಸಿಕೊಂಬುದು, ವಿವರ್ಣಂ=ವರ್ಣಂಗಳೆಂದು ನಾದಸ್ವರೂಪವು ಎರಡು ಪ್ರಕಾರವಾಗಿಹುದು, ಮೇಘಾದಿಗಳ ಭೂಮ್ಯಾದಿಗಳ ಸಂಘಟ್ಟನದಿಂದವು ವಿಷಗಾದಿಗಳ ಜಿಹ್ವೆಗಳಿಂದ ಹುಟ್ಟಿದ ಬರಹಕ್ಕೆಬಾರದ ಆವು ದಾನೊಂದು ಧ್ವನಿಯಿಂದ ಅದು ವಿವರ್ಣವೆನಿಸಿಕೊಂಬುದು, ಬರಹಕ್ಕೆಬರುವ ಅಕ್ಷರ ಧ್ವನಿಯೆಲ್ಲವೂ ವರ್ಣವೆನಿಸಿಕೊಂಬುದು, ಅಂತು ವಿವರ್ಣಂಗಳೆಂಬಯೆರಡು ಶಿವತತ್ತ್ವ ದಲ್ಲಿಯೆ ಹುಟ್ಟಿ ತೋಱುತ್ತಿಹವಾದ ಕಾರಣ ವಿವರ್ಣಗುಣವೆ, ಅಂಕುಶಂ ಚೈವ=ಅಂಕುಶ ವೆನಿಸಿಕೊಂಬುದು. ವರ್ಣಧ್ವನಿರೂಪವಾಗಿ ಬರಹಕ್ಕೆ ಬಂದ ಅಕ್ಷರ ಸಮೂಹಗುಣವೆ, ನಾದಾತ್ಮಕಂ=ಪರಮೇಶ್ವರನ ಹಸ್ತದ ನಾದಸ್ವರೂಪವೆಂದು, ವಿದುಃ=ಅಱಿವುದು, ಸಂಹಾರಂ=ಶಿವನು ಲೀಲಾಮಾತ್ರದಿಂದ ಇಚ್ಛಾಶಕ್ತಿಯಿಂದ ಸೃಜಿಸುವನು ಲೀಲಾಂತ ಗೈದುವ ವೇಳೆ ಸಮಸ್ತಜಗತ್ತನು ಲಯವನ್ನೈದಿಸುವನು. ಈ ಸೃಷ್ಟಿಸಂಹಾರಂಗಳ ಮಾಡುವ ಗುಣಂಗಳೂ ಶಿವಗುಣಂಗಳು, ಅದು ಕಾರಣ ಸಂಹಾರ ಗುಣಂಗಳೆ, ಅಗ್ನಿರೂಪಂ ಸ್ಯಾತ್=ಶಿವನಹಸ್ತದಲ್ಲಿಯ ಅಗ್ನಿಯಸ್ವರೂಪವಹುದು, ತೇಷಾಂ=ಆ ಈ ದಶಗುಣಂಗಳ, ಏತಾನಿಗುಣಸ್ವರೂಪಾಣಿ ನಾಮಾನಿ=ಈ ಗುಣ ಸ್ವರೂಪವಾದ ಗುಣಗಳು, ಯಥಾಕ್ರಮಾತ್=ಯಥಾಕ್ರಮದಿಂದ, ಸಾಂಗಾನಿ=ಶ್ಲೋಕಂಗಳೂ, ಕೀರ್ತಿತಾಃ=ಹೇಳಲುಪಟ್ಟವು. ॥೧೦೭॥

ಲಿಂಗಲೀಲಾ ವಿಲಾಸ ಚಾರಿತ್ರ : ಲಿಂಗಮೂರ್ತಿಸ್ಥಲ :

೧. ಶ್ಲೋಕ॥ ತ್ರಿಗುಣಂ ಕರ್ತೃಪ್ರತಾಪೌ ಚ ದುರ್ಭೇದ್ಯೋಽನುಗ್ರಹಸ್ತಥಾ
ವಿಧಿರ್ಮಾಯಾ ವಿವರ್ಣಂ ಚ ವರ್ಣಂ ಸಂಹಾರ ಏವ ಚ

ಏತೇ ದಶಗುಣಾಃ ಪ್ರೋಕ್ತಾಸ್ತೇಷಾಂ ಲಕ್ಷಣಮುಚ್ಯತೇ

ಟೀಕು॥ ಆ ಶಿವತತ್ತ್ವ ಸಂಭೂತನಾಗಿಯು ಶಿವತತ್ತ್ವ ನೆಮ್ಮಿರ್ದಂಥ ಸದ್ಗುಣಗಳ ಲಕ್ಷಣಮಂ ಪೇಳುತ್ತಿದ್ದನು. ತ್ರಿಗುಣಂ–ತ್ರಿಗುಣವೆಂದು, ಕರ್ತೃ–ಕರ್ತೃವೆಂದು, ಪ್ರತಾಪಂ–ಪ್ರತಾಪವೆಂದು, ದುರ್ಭೇದ್ಯಃ–ದುರ್ಭೇದ್ಯವೆಂದು, ತಥಾ–ಹಾಗೆಯೇ, ಅನುಗ್ರಹಃ–ಅನುಗ್ರಹವೆಂದು, ವರ್ಣಂ–ವರ್ಣಮೆಂದುಂ, ಸಂಹಾರ ಏವ ಚ–ಸಂಹಾರವೆಂದು, ಏತೇ ದಶ–ಈ ಹತ್ತು ಪ್ರತಿ ಭಿನ್ನನಾಮಂಗಳನ್ನುಳ್ಳ, ಗುಣಾಃ ಪ್ರೋಕ್ತಾಃ–ಗುಣಂಗಳೆಂದು ಹೇಳಲ್ಪಟ್ಟುವು. ತೇಷಾಂ–ಈ ದಶಗುಣಂಗಳ ಲಕ್ಷಣಮುಚ್ಯತೇ–ಲಕ್ಷಣಂಗಳು ಹೇಳಲ್ಪಟ್ಟುವು. ೧೧

೨. ಶ್ಲೋಕ॥ ತ್ರಿಗುಣಂ ಶೂಲಮಿತ್ಯುಕ್ತಂ ಕರ್ತಾ ಪರಶುರುಚ್ಯತೇ
ಖಡ್ಗಮೀಶಪ್ರತಾಪಸ್ಸ್ಯಾದ್ದುರ್ಭೇದ್ಯೋ ವಜ್ರಮಿಷ್ಯತೇ
ಈಶಸ್ಯಾನುಗ್ರಹಶ್ಚೈವ ತ್ವಭಯಂ ತು ಪ್ರಶಸ್ಯತೇ
ವಿಧಿಸ್ಸ್ಯಾನ್ನಾಗರೂಪಂ ತು ಪಾಶೋ ಮಾಯಾಸ್ವರೂಪಕಂ
ವಿವರ್ಣಮಂಕುಶಶ್ಚೈವ ವರ್ಣಂ ನಾದಾತ್ಮಕಂ ವಿದುಃ
ಸಂಹಾರಸ್ತ್ವಗ್ನಿರೂಪಂ ಸ್ಯಾತ್ತೇಷಾಮಾಖ್ಯಾಃ ಪ್ರಕೀರ್ತಿತಾಃ
ಏತಾನಿ ಗುಣರೂಪಾಣಿ ಸಾಂಗಾನಿ ಚ ಯಥಾಕ್ರಮಮ್

ಟೀಕು॥ ತ್ರಿಗುಣಂ-ಪರಮೇಶ್ವರನ ದೆಸೆಯಿಂದ ಸಂಭೂತವಾದ ಸತ್ತ್ವ ರಜ ತಮೋ ಗುಣಂಗಳು, ಶೂಲಮಿತ್ಯುಕ್ತಂ-ತ್ರಿಶೂಲವೆಂದು ನುಡಿಯಲ್ಪಟ್ಟುದು. ಕರ್ತಾ-ತನ್ನಲ್ಲಿ ಪ್ರಸನ್ನಮಾನಸ ಭಕ್ತರುಗಳ ಭವಾರಣ್ಯಾದಿಗಳ ಕತ್ತರಿಸುವ ಗುಣವೇ, ಪರಶುರುಚ್ಯತೇ-ಕೊಡಲಿಯೆಂದು ಹೇಳಲ್ಪಡುತ್ತಿಹುದು. ಈಶಪ್ರತಾಪಃ-ದುಷ್ಟರುಗಳ ನೋಯಿಸುವಂಥಾ ಪರಮೇಶ್ವರನ ಪ್ರತಾಪಗುಣವೆ. ಖಡ್ಗಂ ಸ್ಯಾತ್-ಅಡಾಯುಧವಹುದು. ದುರ್ಭೇದ್ಯಃ-ಪರಮೇಶ್ವರನ ಗುಣಲಕ್ಷಣವಾವುದಜೆಂದವು ಭೇದಿಸಬಾರದದು ಕಾರಣ ದುರ್ಭೇದ್ಯ ವೆನಿಸಿಕೊಂಬುದು. ಅಂಥಾ ದುರ್ಭೇದ್ಯ ಲಕ್ಷಣವೆ ವಜ್ರಮಿಷ್ಯತೇ-ವಜ್ರವೆಂದು ನುಡಿಯಲ್ಪಡುತ್ತಿಹುದು. ಈಶಸ್ಯ-ಪರಮೇಶ್ವರನ ನಿಗ್ರಹಾನುಗ್ರಹಕಾರ ನಾಮಕ್ಕೆ ದುಷ್ಟರಾದ ಕಾಲ ಕಾಮ ದಕ್ಷ ಜಲಂಧರ ನರಸಿಂಹಾದಿಗಳನು ನಿಗ್ರಹಿಸುವ ಪ್ರತಾಪಗುಣವೆ ಖಡ್ಗವೆನಿಸಿತ್ತಾಗಿ, ಅನುಗ್ರಹಶ್ಚೈವ-ಶಿಷ್ಟರಾದ ತನ್ನ ಸದ್ಭಕ್ತಿಯುಕ್ತರುಗಳನು ಅನುಗ್ರಹಿಸುವ ಗುಣವೆ, ಅಭಯಂ ತು ಪ್ರಶಸ್ಯತೇ-ಅಭಯವೆಂದು ಪ್ರಶಸಂಸೆಯ ಪಡುತ್ತಿಹುದು. ವಿಧಿಃ-ಆಯಾಯ ಭೋಗ್ಯ ಭೋಕ್ತೃತ್ವಂಗಳಿಗೆ ತಕ್ಕುದ ಮಾಡುವಂಥಾ ನಿಯತಗುಣವೆ, ನಾಗರೂಪಂ ಸ್ಯಾತ್-ಫಣಿಸ್ವರೂಪವಹುದು. ಮಾಯಾಸ್ವರೂಪಕಂ-ದೇಹಿಗಳ ಭೋಗ್ಯ ಭೋಕ್ತೃತ್ವದ ಸಂಪದಕ್ಕೋಸ್ಕರ ಶರೀರೇಂದ್ರಿಯಾದಿಗಳಂ ಸೃಜಿಸುತ್ತಿರುವಂಥಾ ಆವುದಾನೊಂದು ಮಾಯಾಶಕ್ತಿಯುಂಟು, ಆ ಮಾಯಾಶಕ್ತಿ ಸ್ವರೂಪ ಗುಣವೆ, ಪಾಶಂ-ಪಾಶವೆನಿಸಿಕೊಂಬುದು. ವಿವರ್ಣಂ-ವರ್ಣಗಳೆಂದು ನಾದಸ್ವರೂಪವೆ ಎರಡು ಪ್ರಕಾರವಾಗಿಹುದು : ಮೇಘಾದಿಗಳ ಭೂಮ್ಯಾದಿಗಳ ಸಂಘಟನದಿಂದವು ವಿಹಂಗಾದಿಗಳ

ಜಿಹ್ವೆಗಳಿಂದ ಹುಟ್ಟಿ ಬರೆಹಕ್ಕೆ ಬಾರದ ಅವುದಾನೊಂದು ಧ್ವನಿಯುಂಟು ಅದು ವಿವರ್ಣವೆನಿಸಿಕೊಂಬುದು. ಬರೆಹಕ್ಕೆ ಬಹ ಅಕ್ಷರಧ್ವನಿಯೆಲ್ಲವು ವರ್ಣವೆನಿಸಿಕೊಂಬುದು. ಇಂತು ವಿವರ್ಣ ವರ್ಣಂಗಳೆನಿಸಿಕೊಂಬವೆರಡು ಶಿವತತ್ತ್ವದಲ್ಲಿಯೆ ಹುಟ್ಟಿ ತೋಱುತ್ತಿಹ ಕಾರಣ ವಿವರ್ಣಗುಣವೆ, ಅಂಕುಶಶ್ಚೈವ-ಅಂಕುಶವೆನಿಸಿಕೊಂಬುದು. ವರ್ಣಂ-ಧ್ವನಿ ಸ್ವರೂಪವಾಗಿ ಬರೆಹಕ್ಕೆ ಬಂದ ಅಕ್ಷರಸಮೂಹಗುಣವೆ, ನಾದಾತ್ಮಕಂ-ಪರಮೇಶ್ವರನ ಹಸ್ತದ ನಾದಸ್ವರೂಪವೆಂದು, ವಿದುಃ-ಅಱಿವುದು. ಸಂಹಾರಃ-ಶಿವನು ಲೀಲಾಮಾತ್ರದಿಂದ ಇಚ್ಛಾಶಕ್ತಿಯಿಂದ ಸಮಸ್ತ ಜಗತ್ತನ್ನು ಸೃಷ್ಟಿಸುವನು; ಲೀಲಾಂತ್ಯವನೆಯ್ದುವ ವೇಳೆ ಸಮಸ್ತ ಜಗತ್ತನ್ನು ಲಯವನೆಯ್ದಿಸುವನು. ಈ ಸೃಷ್ಟಿ ಸಂಹಾರಂಗಳ ಮಾಡುವ ಗುಣಂಗಳು ಶಿವನ ಗುಣಂಗಳು. ಅದು ಕಾರಣ ಸಂಹಾರಗುಣವೆ ಅಗ್ನಿರೂಪಂ ಸ್ಯಾತ್-ಶಿವನ ಹಸ್ತದಲ್ಲಿಯ ಅಗ್ನಿಸ್ವರೂಪವಹುದು. ತೇಷಾಂ-ಆ ಈ ದಶಗುಣಂಗಳ, ಏತಾನಿ ಗುಣಸ್ವರೂಪಾಣಿ ನಾಮಾನಿ-ಈ ಗುಣಸ್ವರೂಪವಾದ ಹೆಸರುಗಳು, ಯಥಾಕ್ರಮಂ-ಯಥಾಕ್ರಮದಿಂದ, ಸಾಂಗಾನಿ-ಸಾಂಗಂಗಳೆಂದು, ಕೀರ್ತಿತಾಃ-ಶ್ಲೋಕಂ ಗಳು ಹೇಳಲ್ಪಟ್ಟುವು. ೧೨-೧೪

ಗ್ರಂಥವ್ಯಾಪ್ತಿ :

ಭಾರತೀಯ ಸಾಹಿತ್ಯದಲ್ಲಿ ವೈದಿಕ ಸಾಹಿತ್ಯವನ್ನು ಅನಾದಿಯೆಂದೂ ಅಪೌರುಷೇಯ ವೆಂದೂ ಹೇಗೆ ಗೌರವಿಸಿರುವರೋ ಹಾಗೆಯೇ ಶಿವಾದ್ವೈತಿಗಳು ಆಗಮಗಳನ್ನು ಅನಾದಿಯೆಂದೂ, ಅಪೌರುಷೇಯವೆಂದೂ ಗೌರವಿಸಿದ್ದಾರೆ. ಸಮಸ್ತ ಆಗಮ ಶಾಸ್ತ್ರವೂ ಸಾಕ್ಷಾತ್ ಪರಮೇಶ್ವರನ ಮುಖೋದ್ಗತವಾದುದೆಂದು ಹೇಳುತ್ತಾರೆ.

> ಸದಾಶಿವೋऽಪಿ ಭಗವಾನ್ ನಾದರೂಪತಯಾಗತಃ ।
> ಷಡ್ವಿದಾರ್ಥಮಯಂ ಜ್ಞಾನಮನೇಕಚ್ಛಂದಮೇವ ತತ್ ॥

ಷಡ್ಗುಣ್ಯೈಶ್ವರ್ಯ ಸಂಪನ್ನನಾದ ಸದಾಶಿವನ ಸ್ವರೂಪದಿಂದ್ಯೆದಿದಂಥ, ಪ್ರತ್ಯಯಾದಿ ಷಡ್ವಿಧಾರ್ಥ ಸ್ವರೂಪವಾದಂಥ ಆ ಜ್ಞಾನತತ್ತ್ವವೇ ನಾನಾ ಛಂದವಾಗಿ ಪ್ರಸನ್ನವಾಗಿರು ತ್ತಿಹುದು, ಈ ಆಗಮಶಾಸ್ತ್ರ. ಅದರಲ್ಲಿ ವಾತುಲವನ್ನು ಕುರಿತು :

> ಶಿವಸ್ಯ ವಾತುಲಂ ಪ್ರೋಕ್ತಂ ಗ್ರಂಥಂ ಶತಸಹಸ್ರಕಮ್ ।
> ಮಹಾಕಾಳ ತತಃ ಪ್ರಾಪ್ತೋ ಭೇದಂ ಚ ದ್ವಾದಶೋದಿತಮ್ ॥

ವಾತುಲಾಗಮವು ಆ ಶಿವರುದ್ರಂಗೆ ಒಂದು ಲಕ್ಷ ಗ್ರಂಥ ಸಂಖ್ಯೆಯನ್ನುಳ್ಳದಾಗಿ ಉಪದೇಶಿಸಲ್ಪಟ್ಟುದು. ಆ ಶಿವರುದ್ರನ ದೆಸೆಯಿಂದ ಮಹಾಕಾಳನೆಂಬ ರುದ್ರನ್ಯೆದಿದನು. ಹನ್ನೆರಡು ಭೇದಕವಾಗಿ ನಿರೂಪಿಸಲ್ಪಟ್ಟುದು[೧೩]. ಅವುಗಳೆಂದರೆ : ವಾತುಲ, ಉತ್ತರ

---

೧೩. ನೋಡಿ : ಅನುಬಂಧ : ೧, ಶ್ಲೋಕ : ೭೩

ವಾತುಲ, ಕಾಲಜ್ಞಾನತಂತ್ರ, ಪ್ರರೋಚಿತತಂತ್ರ, ಸರ್ವಾಗಮ, ಸರ್ವೇಷ್ಟಾಗಾಮ, ಶ್ರೇಷ್ಠಾಗಮ, ನಿತ್ಯಾಗಮ, ಶುದ್ಧಾಗಮ, ಮಹಾನಾಗಮ, ವಿಶ್ವಾಸಾಗಮ, ವಿಶ್ವಾತ್ಮ ಕಾಗಮ.[೧೪]

ಮೇಲಿನ ವಾತುಲಾಗಮದ ಭೇದವಾದ ಶುದ್ಧಾಗಮಕ್ಕೆ ಬರೆದ ಟೀಕೆಯೇ ಪ್ರಸ್ತುತ ವಾತುಲಶುದ್ಧಾಗಮದ ಟೀಕೆಯಾಗಿದೆ.

ಪ್ರಸ್ತುತ ಶುದ್ಧ ವಾತುಲವು ಹತ್ತು ಪಟಲಗಳನ್ನೊಳಗೊಂಡು ಸ್ಕಂದ-ಶಿವ ಸಂವಾದಾತ್ಮಕವಾಗಿದ್ದು, ದೇವತಾರಹಸ್ಯವನ್ನು ಪ್ರಕಾಶಪಡಿಸುವ ವಿವರಗಳನ್ನೊಳ ಗೊಂಡಿದ್ದು, ಆಗಮವೆಂಬುದು ಚತುಷ್ಪಾದಗಳಿಂದ ಕೂಡಿದ್ದರೂ ಮುಖ್ಯವಾಗಿ ಕ್ರಿಯಾಪಾದದ ಸಾರವನ್ನು ಅಭಿವ್ಯಕ್ತಗೊಳಿಸುವುದಾಗಿದೆ.

ಹತ್ತು ಪಟಲಗಳ ವಿವರ ಹೀಗಿದೆ :

೧. ಪ್ರಥಮಃ ತತ್ತ್ವಭೇದಪಟಲಃ
೨. ದ್ವಿತೀಯಃ ವರ್ಣಭೇದಪಟಲಃ
೩. ತೃತೀಯಃ ಚಕ್ರಭೇದಪಟಲಃ
೪. ಚತುರ್ಥಃ ವರ್ಗಭೇದಪಟಲಃ
೫. ಪಂಚಮಃ ಮಂತ್ರಭೇದಪಟಲಃ
೬. ಷಷ್ಠಃ ಪ್ರಣವಭೇದಪಟಲಃ
೭. ಸಪ್ತಮಃ ಬ್ರಹ್ಮಭೇದಪಟಲಃ
೮. ಅಷ್ಟಮಃ ಲಿಂಗಭೇದಪಟಲಃ
೯. ನವಮಃ ಮಂತ್ರಜಾತಪಟಲಃ
೧೦. ದಶಮಃ ಮಂತ್ರಕೀಲಪಟಲಃ

ಗ್ರಂಥಾರಂಭದಲ್ಲಿ ಷಣ್ಮುಖನು ಪರಮೇಶ್ವರನನ್ನು ಕುರಿತು :

ಸರ್ವಲೋಕ ಹಿತಾರ್ಥಾಯ ಯೋಗಿನಾಂ ಚ ರಕ್ಷಣಾಯಚ ।
ಮಂತ್ರಂ ತಂತ್ರಂ ಪುರಾ ದೇವ ! ತ್ವಯಾ ಪ್ರೋಕ್ತಂ ತು ವಿಸ್ತರಾತ್

"ಪುಂಸಾಮನುಗ್ರಹಾರ್ಥಾಯ ಜ್ಞಾನಿನಾಂ ಮುಕ್ತಿಕಾರಣಮ್।
ಶಿವಜ್ಞಾನಂ ಪರಂ ಗುಹ್ಯಂ ಸಂಕ್ಷೇಪಾತ್ ವದ ಮೇ ಪ್ರಭೋ ॥"

---

೧೪. ನೋಡಿ : ಅನುಬಂಧ ೧ : ಶ್ಲೋಕ ೭೪
ವಾತುಲಂ ಚೋತ್ತರಂ ಚೈವ ಕಾಲಜ್ಞಾನಂ ಪ್ರರೋಚಿತಮ್ ।
ಸರ್ವಂ ಸರ್ವಾಷ್ಟಕಂ ಶ್ರೇಷ್ಠಂ ನಿತ್ಯಂ ಶುದ್ಧಂ ಮಹಾನನಮ್ ॥
ವಿಶ್ವಂ ವಿಶ್ವಾತ್ಮಕಂ ಚೈವ ವಾತುಲಂ ದ್ವಾದಶ ಸ್ಮೃತಮ್ ।

'ಸರ್ವಲೋಕ ಹಿತಾರ್ಥಕ್ಕಾಗಿಯೂ ಯೋಗಿಗಗಳ ರಕ್ಷಣೆಗಾಗಿಯೂ, ನೀನು ಹಿಂದೆ ಮಂತ್ರ ಮತ್ತು ತಂತ್ರಗಳನ್ನು ವಿಸ್ತಾರವಾಗಿ ಉಪದೇಶಿಸಿದ್ದೆ. ಹೇ ಪ್ರಭುವೆ ! ಮಾನವ ಅನುಗ್ರಹಕ್ಕಾಗಿಯೂ ಜ್ಞಾನಿಗಳ ಮುಕತಿಗಾಗಿಯೂ ಶ್ರೇಷ್ಠವೂ ಗೂಢವೂ ಆದ ಶಿವಜ್ಞಾನವನ್ನು ಸಂಕ್ಷೇಪವಾಗಿ ಹೇಳು' ಎಂದು ಪ್ರಾರ್ಥಿಸಿದಾಗ "ಪರಮೇಶ್ವರನು ಷಣ್ಮುಖನಿಗೆ ಸಂಕ್ಷೇಪವಾಗಿ ಶಿವಜ್ಞಾನತತ್ತ್ವವನ್ನು ಶಿವಸಾಧಕರ ಹಿತಕ್ಕಾಗಿ ಮೊಸರಿನಿಂದ ತುಪ್ಪವನ್ನು ತೆಗೆಯುವಂತೆ ವಾತುಲ ಮಹಾತಂತ್ರದಿಂದ ಸಂಗ್ರಹಿಸಿದ ಭೋಗ ಮೋಕ್ಷ ಪ್ರದಾಯಕವಾದ ಅತ್ಯಂತ ಸಾರವೂ ಸಾವಿರ ಶ್ಲೋಕಗಳನ್ನುಳ್ಳದ್ದೂ ಸರ್ವಜ್ಞಾನ ಭಂಡಾರವೂ ಶ್ರೇಷ್ಠವೂ ಆದ ಈ ಶುದ್ಧಾಖ್ಯ ತಂತ್ರವನ್ನು ಹೇಳಿದನು."

೧. ಪ್ರಥಮ ತತ್ತ್ವಭೇದಪಟಲ :

ತತ್ತ್ವಭೇದ ಪಟಲದಲ್ಲಿ ತತ್ತ್ವವು ಶಿವತತ್ತ್ವ, ಸದಾಶಿವತತ್ತ್ವ ಮತ್ತು ಮಹೇಶ್ವರ ತತ್ತ್ವವೆಂದು ಮೂರು ವಿಧವೆಂದು ಹೇಳಲಾಗಿದೆ. ಶಿವತತ್ತ್ವವು ನಿಷ್ಕಲವೆಂದು ಸದಾಶಿವತತ್ತ್ವವು ಸಕಲ ನಿಷ್ಕಲವೆಂದು ಮಹೇಶ್ವರ ತತ್ತ್ವವು ಸಕಲವೆಂದು ಪರಿಭಾವಿಸಲಾಗಿದೆ. ಶಿವತತ್ತ್ವ ಏಕವು, ಅದ್ವಯವು. ಸಾದಾಖ್ಯ ತತ್ತ್ವವಾದರೆ ಪಂಚವಿಂಶತಿ ಭೇದನವನುಳ್ಳದ್ದು. ಶಿವ ಮಾಹೇಶ್ವರ ಸದಾಶಿವ ತತ್ತ್ವ ಭೇದತತ್ತ್ವಗಳು ಒಟ್ಟು ಮೂವತ್ತೊಂದು. ಮುಂದೆ ಇವುಗಳ್ನು ವಿವರಿಸಿ ಆದಿತತ್ತ್ವವಾದ ಶಿವನ ನೆನಹಿನ ಸಹಸ್ರಾಂಶದ ಸಹಸ್ರದೊಳಗಣ ಒಂದು ಅಂಶದಿಂದ ಪರಾಶಕ್ತಿಯ ಆವಿರ್ಭಾವ, ಆ ಪರಾಶಕ್ತಿಯ ಸಹಸ್ರಾಂಶದಿಂದ ಆದಿಶಕ್ತಿಯ ಉದ್ಭವ, ಆದಿಶಕ್ತಿಯ ಸಹಸ್ರಾಂಶದ ದೆಸೆಯಿಂದ ಇಚ್ಛಾಶಕ್ತಿಯ ಸಮುದ್ಭವ, ಆ ಇಚ್ಛಾಶಕ್ತಿಯ ಸಹಸ್ರಾಂಶದಿಂದ ಜ್ಞಾನಶಕ್ತಿಯ ಉದ್ಭವ, ಜ್ಞಾನಶಕ್ತಿಯ ಸಹಸ್ರಾಂಶದಿಂದ ಕ್ರಿಯಾಶಕ್ತಿಯ ಉದ್ಭವ. ಹೀಗೆ ಶಿವನ ನೆನಹಿನ ಸಹಸ್ರಾಂಶದಿಂದ ಪಂಚಶಕ್ತಿಯರ ಉತ್ಪತ್ತಿ. ಇದೇ ನಿಷ್ಕಲೆ. ಈ ನಿಷ್ಕಲಾ ಬ್ರಹ್ಮವು ಸಕಲ ನಿಷ್ಕಲವೆಂದು ಎರಡು ರೂಪವಾಗುವುದು. ಸಕಲ ನಿಷ್ಕಲಸ್ವರೂಪವಾದ ಸದಾಶಿವನ ರೂಪವೆ ಸಾದಾಖ್ಯತತ್ತ್ವವೆಂದು ಹೇಳಲ್ಪಡುವುದು. ಈ ಸಾದಾಖ್ಯ ತತ್ತ್ವವು ಪಂಚಪ್ರಕಾರವಾಗುವುದು. ಇವೆಲ್ಲವುಗಳ ಉತ್ಪತ್ತಿ-ರೂಪ-ವರ್ಣಗಳನ್ನು ವಿಸ್ತಾರವಾಗಿ ವಿವರಿಸಲಾಗಿದೆ. ಶಿವಲಿಂಗದಲ್ಲಿ ಈಶಾನರೂಪ, ಕರ್ಮೇಶ ತತ್ತ್ವ, ಧ್ಯಾನವಿಧಿ, ಲಿಂಗಭೇದ, ಅವುಗಳ ಭೇದ ವಿವರಣೆ. ಸದಾಶಿವನ ಧ್ಯಾನಾರ್ಹ ಸ್ವರೂಪ, ಪಂಚಮುಖ ಸದಾಶಿವ ಮುಖಗಳ ದಿಗ್ವ್ಯವಸ್ಥೆ, ಧ್ಯಾನವಿಧಿ ಇವುಗಳ ವಿವರಣೆ ಕರ್ಮ ಸ್ವರೂಪ ಮಹೇಶತತ್ತ್ವ ಸ್ವರೂಪವನ್ನು ವಿವರಿಸಿದ ನಂತರ ಮಹೇಶತತ್ತ್ವದ (ಪಂಚವಿಂಶತಿ) ಲೀಲಾಮೂರ್ತಿಗಳ ಭೇದವರ್ಣನೆಯು ನಿರೂಪಿತವಾಗಿದೆ.

ಮಹೇಶ್ವರನಿಂದಲೇ ತ್ರಿಮೂರ್ತಿಗಳ ಹಾಗೂ ಸಮಸ್ತ ಸಕಲ ತತ್ತ್ವಗಳ (ಸಮಸ್ತ

ದೇವತೆಗಳ, ಋಷಿಗಳ-ಸೃಷ್ಟಿ) ನಂತರ ಪರಾಶಕ್ತಿಯ ದಶಾಂಶದೊಳಗೊಂದು ಭಾಗೆಯಿಂದ ಉಮಾಶಕ್ತಿಯ ಪ್ರಾದುರ್ಭಾವ. ಉಮೆ ಅಂಬಿಕೆ ಗಣೇಶೀ ಈಶ್ವರೀ ಮನೋನ್ಮನೀ - ಈ ಪಂಚಶಕ್ತಿಯರ ಉದಯ. ಈ ಐವರು ಶಕ್ತಿಗಳೂ ಪಂಚಸಾದಾಖ್ಯ ಮೂರ್ತಿಗಳಿಗೆ ಶಕ್ತಿಯರೆನಿಸಿಕೊಂಬರು. ಕರ್ಮಸಾದಾಖ್ಯಮೂರ್ತಿಗೆ ಶಕ್ತಿಯಾದ ಮನೋನ್ಮನೀ ಶಕ್ತಿಯ ಸಹಸ್ರಾಂಶದಿಂದ ಮಹೇಶ್ವರನ ಸಕಲ ಲೀಲಾವತಾರಗಳಿಗೆ ತತ್ಕಾಲ ಸದೃಶ ಕನ್ನಿಕಾ ಭಾವವನ್ನೈದುವ ಗೌರೀ ಎಂಬ ಶಕ್ತಿಯು ಜನಿಸಿದಳು. ಗೌರೀ ಶಕ್ತಿಯ ಉದಯದೊಂದಿಗೆ ಪ್ರಥಮ ಪಟಲವಾದ ತತ್ತ್ವಪಟಲದ ಮುಕ್ತಾಯ ವಾಗುವುದು.

೨. ದ್ವಿತೀಯ ವರ್ಣಭೇದಪಟಲ :

ಶಬ್ದಬ್ರಹ್ಮಮಯನಾದ ಪರಶಿವನಿಗೆ ನಮಸ್ಕಾರ. ಶಿವನು ಷಣ್ಮುಖನಿಗೆ ಶಿವಾದಿ ತತ್ತ್ವ-ಭೇದಗಳ್ನು ನಿರೂಪಿಸಿದ ನಂತರ ತನ್ನ ವ್ಯೋಮಾತೀತವಾದ ಪರಶಿವತತ್ತ್ವದಲ್ಲಿ ಸ್ವಶಕ್ತಿಸಂಭೂತವಾಗಿ ತತ್ತ್ವರೂಪ, ದೇವತಾರೂಪ ಪ್ರಪಂಚರೂಪ ಮಂತ್ರರೂಪ ಅಗ್ನಿಸ್ವರೂಪಂಗಳಾದ ವರ್ಣಭೇದಗಳನ್ನು ನಿರೂಪಿಸಿದೆ.

ಶಿವತತ್ತ್ವದಿಂದುಂಟಾದ ಶ್ರೇಷ್ಠವಾದ ವರ್ಣಗಳ ಭೇದವಿಧಿ ಸಮಸ್ತ ಮಂತ್ರಗಳ ಜನನತ್ವ, ಅಕ್ಷರಗಳ ಉತ್ಪತ್ತಿ, ವರ್ಣಗಳ ಸಂಖ್ಯೆ ಸ್ವರೂಪ ಮತ್ತು ರೂಪಗಳ ವರ್ಣನೆ, ವರ್ಣ ಪರ್ಯಾಯಗಳು, ವ್ಯೋಮಾತೀತವಾದ ಶಿವತತ್ತ್ವದಲ್ಲಿ ಬಿಂದು-ನಾದ-ಶಕ್ತಿ-ಶಬ್ದ-ವಾಗ್ಭವ-ಕಲೆ; ಕಲಾರೂಪವಾದ ಪ್ರಕೃತಿ-ವಿಕೃತಿಗಳ ಉತ್ಪತ್ತಿ ವಿಚಾರ, ವಿಕಲಾರೂಪ ವ್ಯಂಜನಗಳು ಮತ್ತು ಅವುಗಳ ಪರ್ಯಾಯಗಳು, ಅವುಗಳ ರೂಪತ್ರಯ, ಲಿಂಗಭೇದ ಗಳು, ಪಂಚಭೂತ ಬೀಜತತ್ತ್ವ, ತತ್ತ್ವಬೀಜಗಳು, ಅವುಗಳ ಸ್ವರೂಪ ಮಾತ್ರೆ ಅಧಿದೇವತೆಗಳು, ಹಾಗೂ ಗುಣಗಳು; ವರ್ಣಗಳು ಅಕಾರಾದಿ ವಿಸರ್ಗಾಂತವಾದ ಕಲಾಕ್ಷರಗಳು, ವಿಕಲಾಕ್ಷರಗಳಾದ ಕಕಾರಾದಿ ಕ್ಷಕಾರಾಂತಾಕ್ಷರಗಳ - ಜೀವಕಾಯ ಸಂಬಂಧ, ಸ್ಥೂಲ ಸೂಕ್ಷ್ಮಾಕಾರ, ಸಂಯೋಜ್ಯಾಸಂಯೋಜ್ಯಾ ವ್ಯವಸ್ಥೆ, ದೇಹವೆನಿಸುವ ವಿಕಲಾಕ್ಷರಗಳೊಡನೆ ಸರ್ವಮಂತ್ರ ಸ್ವರೂಪಗಳಾದ ಪ್ರಾಣಾಕ್ಷರಗಳಾದ ಕಲಾಕ್ಷರಗಳನ್ನು ಕೂಡಲು ಅವುಗಳಿಗೆ ಬೇರೆಬೇರೆ ಅಕ್ಷರ ಸ್ವರೂಪವುಂಟಾಗುವುವಲ್ಲದೆ ಅವುಗಳನ್ನು ಬೇರೆಬೇರೆ ದೇವತಾ ಸ್ವರೂಪವೆಂದು ನಿರೂಪಿಸುವುದರೊಂದಿಗೆ, ಪಟಲಾರ್ಥದ ಉಪಯೋಗದೊಂದಿಗೆ ವರ್ಣಭೇದಪಟಲಾರ್ಥದ ಸಮಾಪ್ತಿಯಾಗುವುದು.

೩. ತೃತೀಯ ಚಕ್ರಭೇದಪಟಲ :

ಪಟಲಾಂಭರದಲ್ಲಿ ಶಿವಲಿಂಗಧ್ಯಾನ ಸ್ವರೂಪ ಮಂಗಲಾಚರಣೆಯನ್ನು ಮಾಡಿದ ನಂತರ ಸರ್ವದೇವತಾಮಯವಾದ ಸರ್ವವರ್ಣಾತ್ಮಕವಾದ ಶಿವಜ್ಞಾನ ಸ್ವರೂಪವಾದ

ಚಕ್ರದ ಉದ್ದೇಶ ವಿವರಣೆ ನಿರೂಪಣಾ ಪ್ರತಿಜ್ಞೆ, ಚಕ್ರೋದ್ಧರಣಕ್ಕೆ ಯೋಗ್ಯವಾದ ಮಹೇಂದ್ರ ಮಲಯ ಸಹ್ಯ ಕೇದಾರ-ಇವೇ ಮೊದಲಾದ ಸ್ಥಳಗಳು, ಈ ಸ್ಥಳಗಳಲ್ಲಿ ನಡೆಯಬೇಕಾದ ಶೋಧನ ಕ್ರಮ, ಮಂಟಪದ ನಿರ್ಮಾಣ ವಿಧಿ, ಮಂಟಪದ ಮಧ್ಯದಲ್ಲಿ ನಡೆಯಬೇಕಾದ ಚಕ್ರನ್ಯಾಸವಿಧಿ, ಚಕ್ರನ್ಯಾಸ ಮಾಡುವ ಆಗಮಜ್ಞ ಆಚಾರ್ಯನ ಕರ್ತವ್ಯ ಕರ್ಮಗಳು, ಸ್ಥಂಡಿಲ ಸ್ಥಾನ ಮಧ್ಯದಲ್ಲಿ ಬಣ್ಣಗಳಿಂದ ಕೂಡಿದ ಚಕ್ರವನ್ನು ಬರೆಯುವ ಕ್ರಮ, ಚಕ್ರವಿನ್ಯಾಸದ ವಿಸ್ತಾರದ ಪ್ರಮಾಣ ವೃತ್ತಸಂಖ್ಯೆಗಳು, ಪತ್ರಗಳು, ಅವುಗಳ ಸಂಖ್ಯೆ, ದಳಗಳು, ಉಪದಳಗಳು, ಕರ್ಣಿಕೆಗಳು, ಇವುಗಳ ಪ್ರಮಾಣ, ಉಪಯೋಗಿಸುವ ಬಣ್ಣಗಳು, ಪೂಜಾಸಾಮಗ್ರಿಗಳು - ದೇವತಾನ್ಯಾಸ ಶಕ್ತಿನ್ಯಾಸ, ಇವುಗಳ ಕ್ರಮ, ಆವರಣಗಳು, ಆಯಾವರಣಗಳಲ್ಲಿ ಪ್ರತಿಷ್ಠಿಸಬೇಕಾಗಿರುವ ವಾಮಾದಿ ಅಷ್ಟಶಕ್ತಿಯರು, ಅಷ್ಟಗಣೇಶ್ವರರು, ಅಷ್ಟಮೂರ್ತಿಗಳು, ವಾಸ್ತು ದೇವತೆಗಳು, - ಆಧಾರಶಕ್ತಿ ಮೊದಲಾಗಿ ವಾಸ್ತು ದೇವತೆ ಕಡೆಯಾಗಿವುಳ್ಳ ದೇವತಾ ಸ್ವರೂಪಗಳು, ಅವರವರ ಹೆಸರಿನಿಂದ ನಡೆಯಬೇಕಾದ ಪೂಜೆ, ಬೀಜಾಕ್ಷರ ಹಾಗೂ ಅವುಗಳ ಅಧಿದೇವತೆ ನ್ಯಾಸವಿಧಿಗಳು ಇವುಗಳ ವಿವರಣೆಯನ್ನೊಳಗೊಂಡಿದೆ.

ಅಂತ್ಯದಲ್ಲಿ ಚಕ್ರಮಹಿಮೆ ಚಕ್ರಪೂಜಾದಿಗಳ ಕ್ರಮ, ಧರಿಸುವ ಕ್ರಮ. ಇವುಗಳ ವಿವರಗಳೊಂದಿಗೆ ತೃತೀಯಪಟಲ ಮುಕ್ತಾಯವಾಗುವುದು.

೪. ಚತುರ್ಥ ವರ್ಗಭೇದಪಟಲ :

ಪಟಲಾರಂಭದಲ್ಲಿ ಪ್ರಾಸಾದ ಮಂತ್ರ ನಮಸ್ಕಾರ ರೂಪ ಮಂಗಲವನ್ನಾಚರಿಸಿದ ತರುವಾಯ ವರ್ಗಭೇದ ನಿರೂಪಣ ಪ್ರತಿಜ್ಞೆ, ಸೃಷ್ಟಿ - ಸ್ಥಿತಿ - ಸಂಹಾರವರ್ಗ, ಈ ತ್ರಿವರ್ಗಗಳು, ಸ್ಥಿತಿ ವರ್ಗ, ಅದರ ಮೂರು ಭೇದಗಳು, ಸೃಷ್ಟಿ ವರ್ಗ, ಅದರ ಅಷ್ಟಭೇದಗಳು; ಸಂಹಾರ ವರ್ಗ - ಅದರ ಪಂಚಭೇದಗಳು - ಈ ವರ್ಗಕ್ರಮದಲ್ಲಿ ಮಂತ್ರೋದ್ಧಾರ ವಿವರಣೆ; ವರ್ಣಗಳು - ಇವುಗಳ ಪರ್ಯಾಯಗಳು; ಶಿವಬೀಜಾಕ್ಷರ ವಾದ ಹಕಾರ-ಪರ್ಯಾಯಗಳು; ನಾದ-ಗುಹ್ಯ-ಪರ-ಜೀವ-ದೇಹಿ-ಭೂತ ಪಂಚಮ-ಸಾಂತ-ಶಿವಾರ್ಣ ಮತ್ತು ಅವ್ಯಯ ಈ ಪದಾರ್ಥಗಳ ಸ್ವರೂಪ; ಬಿಂದುರೂಪ ಸಕಾರ, ಆತ್ಮಬೀಜರೂಪ ಅಕಾರ, ನಾದರೂಪ ಐಕಾರ ಹಾಗೂ ವಿದ್ಯಾಬೀಜಾಕ್ಷರಗಳ ಪರ್ಯಾಯ, ಬೀಜರೂಪವಾದ ಕ್ಷಕಾರ, - ಇವುಗಳ ರಹಸ್ಯ ನಿರೂಪಣೆ; ನಂತರ ಪ್ರಥಮಾವರಣದ ಅಷ್ಟದಳಗಳಲ್ಲಿರುವ ಸ, ಷ, ಶ, ವ, ಲ, ಯ ಮತ್ತು ಮಕಾರಗಳ ನಿರೂಪಣೆ, ಮಧ್ಯಮಾರಣದಲ್ಲಿನ ಷೋಡಶದಳಗಳಲ್ಲಿರುವ ಸ್ವರಗಳ ನಿರೂಪಣೆ; ತೃತೀಯಾವರಣದಲ್ಲಿ ಕಕಾರಾದಿ ವಿಕಲಾಕ್ಷರಗಳ ನಿರೂಪಣಕ್ರಮ, ಇವುಗಳ ನಿರೂಪಣ ದೊಂದಿಗೆ ವರ್ಗಭೇದಪಟಲದ ಮುಕ್ತಾಯವಾಗುವುದು.

೫. ಪಂಚಮ ಮಂತ್ರಭೇದಪಟಲ :

ಪಟಲಾರಂಭದಲ್ಲಿ ಶುದ್ಧಪ್ರಾಸಾದ ಮಂತ್ರ ಸ್ವರೂಪ ಧ್ಯಾನವನ್ನು ಆಚರಿಸಿದ ನಂತರ ಪರಮೇಶ್ವರನು ಶಿವಮಂತ್ರಾದಿಗಳನುದ್ಧರಿಸುವ ಪ್ರಕಾರವನ್ನು ಆರೋದ್ಧಕವಾದ ಮಂತ್ರಗಳ ಫಲಪ್ರದವನ್ನೂ ಯೋಗಗಳನ್ನೂ ನಿರೂಪಿಸುವನು. ಸಮಸ್ತ ಪ್ರಪಂಚವು ಮಂತ್ರಸ್ವರೂಪವಾಗಿರುವುದು. ಮಂತ್ರಗಳು ಪರಾರ್ಧಕೋಟಿ ಸಂಖ್ಯೆಯುಳ್ಳವುಗಳಾಗಿರುವುವು. ಇವೆಲ್ಲವೂ ಪರಮೇಶ್ವರನ ಮುಖದಿಂದ ಉದ್ಧೃತವಾಗಿರುವುವು. ಈ ಮಂತ್ರ ಶಬ್ದದ ನಿರ್ವಚನ ಮಹಿಮೆಗಳನ್ನು ತಿಳಿಸಿ ಮಂತ್ರಗಳ ಉದ್ಧಾರಕ್ಕೆ - ಚಕ್ರೋದ್ಧರಣಕ್ಕೆ ನಿರೂಪಿಸಿದಂಥ ಪ್ರದೇಶದಲ್ಲಿ ಮಂಟಪ ರಚನೆ, ಚಕ್ರ ರಚನೆ, ಬೀಜಾಕ್ಷರ ವಿನ್ಯಾಸಗಳನ್ನೂ ಚಕ್ರದಲ್ಲಿನ ಕರ್ಣಿಕೆಗಳು, ಕೇಸರ, ದಲಗಳು, ಉಪದಲಗಳನ್ನು ಕ್ರಮವಾಗಿ ಲಿಖಿಸಿ ಆಧಾರಾದಿ ಶಕ್ತಿ ಮೊದಲಾದ ದೇವತೆಗಳ ಪೂಜೆಯನ್ನು – ಮಾಡಿದ ನಂತರ ಸ್ಥಿತಿ ಮಾರ್ಗದಿಂದ ಪ್ರಾಸಾದಮಂತ್ರದ ಉದ್ಧರಣೆಯನ್ನು ಮಾಡಿದ ನಂತರ ಪ್ರಾಸಾದ ಮಂತ್ರದ ವ್ಯಾಖ್ಯಾನ - ಪ್ರಾಸಾದ ಶಬ್ದಾರ್ಥ ಅದರ ಶುದ್ಧ-ಮೂಲ-ತತ್ತ್ವ-ಆದಿ-ಆತ್ಮ-ಅದರ ಪಂಚಭೇದಗಳನ್ನು ನಿರೂಪಿಸಲಾಗಿದೆ. ನಂತರ ಸದಾಶಿವಮಂತ್ರದ ಮಹೇಶತತ್ತ್ವದ ಪಂಚಭೇದಗಳು - ಅವುಗಳ ಅಕ್ಷರಸಂಖ್ಯಾ ನಿರ್ಣಯ-ಸೃಷ್ಟಿ-ಸ್ಥಿತಿ-ಲಯಾತ್ಮಕವಾದ ತ್ರಿವಿಧ ಭೇದಗಳು, ಅವುಗಳ ಸ್ವರೂಪ ವಿವರಣೆ; ಶಕ್ತಿಮಂತ್ರ ಪಂಚಕೋದ್ಧಾರಕ್ರಮ ನಿರೂಪಣ; ಪಂಚಶಕ್ತ್ಯಾಧಿ ದೇವತೆಗಳು, ಉಮೆ–ಅಂಬಿಕೆ–ಗಣಾನಿ-ಈಶ್ವರೀ-ಮನೋನ್ಮನಿ, ಇವರಲ್ಲಿ ಉಮಾಶಕ್ತಿ ಮೊದಲ ಶಕ್ತಿಯೆನಿಸಿಕೊಂಬುದು. ಗೌರೀ ಬೀಜೋದ್ಧಾರಕ್ರಮ, ಬೀಜಾಂತರೋದ್ಧಾರ ಕ್ರಮ, ಲಿಂಗಮಂತ್ರ ಮೂರ್ತಿಗಳ ನ್ಯಾಸಕ್ರಮ, ಸದಾಶಿವ ತತ್ತ್ವನ್ಯಾಸ ಅದರ ಪಂಚಭೇದಗಳಾದ ಕರ್ತೃಸಾದಾಖ್ಯ ಕರ್ಮಸಾದಾಖ್ಯ ಮೂರ್ತಿಸಾದಾಖ್ಯ ಅಮೂರ್ತಿಸಾದಾಖ್ಯ ಶಿವಸಾದಾಖ್ಯ - ಇವುಗಳ ನ್ಯಾಸಕ್ರಮ ನಿರೂಪಣೆ, ದೇವತಾಧ್ಯಾನ, ಆವಾಹನ, ಸಂನಿಧೀಕರಣ, ಸಂನಿರೋಧ ಮತ್ತು ಪೂಜೆಗಳು ಆಯಾ ಮೂರ್ತಿಗಳಿಗನುಗುಣವಾದ ನ್ಯಾಸಭೇದ - ಕ್ರಿಯಾಮಂತ್ರಗಳ ಸಂಬಂಧವನ್ನು ನಿರೂಪಿಸುವುದರೊಂದಿಗೆ ಮಂತ್ರಭೇದಪಟಲವು ಮುಕ್ತಾಯವಾಗುವುದು.

೬. ಷಷ್ಠ ಪ್ರಣವಭೇದಪಟಲ :

ವಾಮಾದಿ ಶಕ್ತಿಗಳಿಂದ ಕೂಡಿದ ಸಮಸ್ತಕ್ಕೆ ಕಾರಣವಾದ ದೇವಾದಿ ಸಮಸ್ತರ ಸೃಷ್ಟಿ ಸ್ಥಿತಿ ಲಯಗಳಿಗೆ ಕಾರಣವಾದ ಪ್ರಣವವನ್ನು ಶಿವಯೋಗಿಗಳು ಶಿವಸಾಯುಜ್ಯಕ್ಕಾಗಿ ಉಚ್ಚರಿಸುವಂತೆ ನಾನು ಜೀವವಿರುವವರೆಗೂ ಅದನ್ನು ಮನಸ್ಸಿನಲ್ಲಿ ಉಚ್ಚರಿಸುತ್ತೇನೆ-ಎಂಬ ಪ್ರಣವ ಪ್ರಾರ್ಥನೆಯೊಂದಿಗೆ ಪ್ರಾರಂಭವಾಗುವ ಈ ಪಟಲದಲ್ಲಿ ಪ್ರಣವದ ಮಹತ್ವ, ಪ್ರಣವದ ಸಾಕಲ್ಯ, ಶಾಂಭವ, ಸೌಖ್ಯ, ಸಾವಶ್ಯ, ಸಾಯುಜ್ಯ ಪಂಚಪ್ರಭೇದಗಳು;

ಪ್ರಣವದ ಮೂಲ ಮತ್ತು ಅ ಉ ಮ ಎಂಬ ವರ್ಣ ತ್ರಯಾತ್ಮಕವಾದುದೂ, ಆ ವರ್ಣಗಳಲ್ಲಿ ಅಂತರ್ಗತವೂ ಮುಕ್ತಿಗೆ ಕಾರಣವೂ ಆದ ಹಕಾರವು ನಾಲ್ಕನೆಯ ವರ್ಣವೆಂದು ನಿರೂಪಿಸಿ ಅ ಉ ಮ ವರ್ಣಗಳ ಸಂಯೋಗವೇ ಓಂಕಾರ ಇದು ಸ್ವರವರ್ಣ; ಈ ಓಂಕಾರವು ಪರಬ್ರಹ್ಮ ಸ್ವರೂಪವಾದುದು ಎಂದು ನಿರೂಪಿಸಿ ಆನಂತರ ಸಾಕಲ್ಯ, ಶಾಂಭವ, ಸೌಖ್ಯ, ಸಾವಶ್ಯ ಮತ್ತು ಸಾಯುಜ್ಯಗಳೆಂಬ ಪಂಚಪ್ರಣವದ ಭೇದಗಳನ್ನು ನಿರೂಪಿಸಿ ಅವುಗಳ ವರ್ಣ, ಛಂದಸ್ಸು, ಋಷಿ, ಭೂತ ತತ್ತ್ವ, ಅಧಿದೇವತೆ ಮಾತ್ರೆ – ಇವುಗಳನ್ನು ನಿರೂಪಿಸಲಾಗಿದೆ. ಶಿವಶಕ್ತಿ ಪ್ರಕಾರದಿಂದ ಪ್ರಣವವು ಪ್ರಾದುರ್ಭೂತವಾಗಿದೆ. ಶಿವಬೀಜವಾದ ಹಕಾರದ ಪ್ರಣವತ್ವ, ಎಲ್ಲ ಮುಮುಕ್ಷುಗಳೂ ಬ್ರಹ್ಮಾವಯವನುಳ್ಳ ಪ್ರಣವೋಚ್ಚಾರವನ್ನು ಮಾಡುವುದೆಂದು ನಿರೂಪಿಸುವುದರೊಂದಿಗೆ ಷಷ್ಠಪಟಲವು ಮುಕ್ತಾಯವಾಗಿದೆ.

೭. ಸಪ್ತಮ ಬ್ರಹ್ಮಭೇದಪಟಲ :

ಬ್ರಹ್ಮಭೇದ ಪಟಲ ಪ್ರಾರಂಭದಲ್ಲಿ ಪಟಲಾರ್ಥ ಮಿಶ್ರಿತ ಮಂಗಲಾಚರಣೆಯನ್ನು ಆಚರಿಸಿದ ನಂತರದಲ್ಲಿ ಬ್ರಹ್ಮ ಪದದರ್ಥವನ್ನು ವಿವರಿಸಿ ಬ್ರಹ್ಮವು ಮೂರ್ತಿ ಬ್ರಹ್ಮ, ತತ್ತ್ವಬ್ರಹ್ಮ, ಭೂತಬ್ರಹ್ಮ, ಪಿಂಡಬ್ರಹ್ಮ ಹಾಗೂ ಕಲಾ ಬ್ರಹ್ಮವೆಂದು ಪಂಚವಿಧ. ಒಂದೊಂದೂ ಪಂಚಪ್ರಕಾರವಾಗಿ ಒಟ್ಟು ಇಪ್ಪತ್ತೈದು ಭೇದಗಳು. ಅವುಗಳು ಈ ಪಂಚವಿಧ ಬ್ರಹ್ಮಗಳ ಭೇದಗಳಾದ ನಾಲ್ಕು ಮತ್ತು ಐದನೆಯದಾದ ಪಿಂಡಬ್ರಹ್ಮ ಹಾಗೂ ಕಲಾಬ್ರಹ್ಮಗಳ ಭೇದವನ್ನು ವಿಸ್ತಾರವಾಗಿ ವಿವರಿಸಲಾಗಿದೆ. ಸದ್ಯೋಜಾತ, ವಾಮದೇವ, ಅಘೋರ, ತತ್ಪುರಷ ಮತ್ತು ಈಶಾನವೆಂಬ ಪಂಚವಿಧ ಬ್ರಹ್ಮಗಳು. ಈ ಪಂಚವಿಧ ಬ್ರಹ್ಮಗಳಿಗೆ ಮೊದಲಲ್ಲಿ ಪ್ರಣವವನ್ನುಚ್ಚರಿಸಿ ಸದ್ಯೋಜಾತಾದಿ ಮೊದಲಾದ ತಮ್ಮತಮ್ಮ ಸ್ವನಾಮ ಶಬ್ದಗಳನ್ನು ಚತುರ್ಥ್ಯಂತ ಮಧ್ಯದಲ್ಲಿ ಉದ್ಧರಿಸಿ ನಮಃ ಎಂಬ ನಮಸ್ಕಾರಾಂತ ಪದವನು ಕೂಡಿಸಿ ಸದ್ಯೋಜಾತಾದಿ ಮಂತ್ರಗಳನ್ನು ಕ್ರಮವಾಗಿ ಪ್ರಯೋಗಿಸುವದು, ಈ ಪಂಚೋದ್ಧರಣ ಮಂತ್ರಗಳ ಪ್ರಯೋಗದಿಂದ ಪಂಚಬ್ರಹ್ಮ ಮಂತ್ರಗಳು ಹುಟ್ಟುವವು, ಕಲಾಬ್ರಹ್ಮಗಳ ನಿರೂಪಣೆಯಲ್ಲಿ ಮರಳಿಯು, ಈಶಾನ, ಪುರುಷ, ಅಘೋರ, ವಾಮದೇವ, ಸದ್ಯೋಜಾತ - ಇವುಗಳೇ ಕಲಾಬ್ರಹ್ಮವೆನಿಸಿ ಕೊಂಬವು. ಈಶಾನ ತತ್ತ್ವಕ್ಕೆ ಪಂಚಕಲೆಗಳು, ತತ್ಪುರುಷಕ್ಕೆ ನಾಲ್ಕು ಕಲೆಗಳು, ಅಘೋರ ತತ್ತ್ವಕ್ಕೆ ಅಷ್ಟಕಲೆಗಳು, ವಾಮದೇವ ತತ್ತ್ವಕ್ಕೆ ಹದಿಮೂರು ಕಲೆಗಳು, ಸದ್ಯೋಜಾತದಲ್ಲಿ ಎಂಟು ಕಲೆಗಳು ಹೀಗೆ ಮೂವತ್ತೆಂಟು ಕಲೆಗಳು ಪಂಚಬ್ರಹ್ಮ ಕಲಾತತ್ತ್ವಕ್ಕೆ ಇರುವುವೆಂದು ನಿರೂಪಿಸಿ, ಕಲಾಮಂತ್ರಗಳ ವಿಭಜನೆ, ಮೂರ್ತಿಬ್ರಹ್ಮಗಳ ವರ್ಣನೆ, ಅವುಗಳ ಪ್ರಣವ ಸ್ವರೂಪತ್ವ, ಈ ಮೂರ್ತಿಗಳಲ್ಲಿ ಆತ್ಮ ಪ್ರಾಸಾದಾದಿ ಮತ್ತು ಭಾವನಾ ವಿಧಿಗಳನ್ನು, ಪಂಚಭೂತ ಸ್ವರೂಪ ಭಾವನಾ ವಿಧಿಗಳನ್ನು, ಇವುಗಳ ಸಾಮಾನ್ಯ ಸೌಮ್ಯರೂಪಗಳನ್ನು

ಅವುಗಳ ವರ್ಣ ಇವುಗಳನ್ನು ವರ್ಣಿಸಿ ಅಂತ್ಯದಲ್ಲಿ ಎಲ್ಲ ಮೂರ್ತಿಗಳ ಸಾಮಾನ್ಯ ರೂಪಗಳನ್ನು ಶಕ್ತಿಗಳನ್ನೂ ನಿರೂಪಿಸಿ ಧ್ಯಾತೃಗಳಿಗೆ ಆಯಾ ಮೂರ್ತಿಗಳಿಂದೊದಗ ಬಹುದಾದ ಫಲಗಳನ್ನು ಹೇಳುವುದರ ಮೂಲಕ ಈ ಪಟಲವು ಮುಕ್ತಾಯವಾಗುತ್ತದೆ.

೮. ಅಷ್ಟಮ ಅಂಗಭೇದಪಟಲ :

ಯಾವ ಚರಾಚರಾತ್ಮಕವಾದ ಸಮಸ್ತ ಜಗತ್ಸಮೂಹವೂ ಪರಶಿವನ ಅಂಗ ವಾಗಿದೆಯೋ ಅಂತಹ ಅಂಗೇಶ್ವರನಾದ ಪರಮೇಶ್ವರನನ್ನು ನಮಸ್ಕರಿಸುತ್ತೇನೆ ಎಂಬ ನಮಸ್ಕಾರ ರೂಪ ಮಂಗಲಾಚರಣೆಯ ನಂತರ ಪರಮೇಶ್ವರನು ಕುಮಾರನಿಗೆ ಬ್ರಹ್ಮಭೇದವನ್ನು ನಿರೂಪಿಸಿ ಆ ಬ್ರಹ್ಮಾವಯಗಳಾದ ಷಡಂಗಭೇದವನ್ನು ನಿರೂಪಿಸುವನು. ಶಿವಾಂಗ, ಕೂಟಾಂಗ, ಭೂತಾಂಗ, ವಿದ್ಯಾಂಗ, ಶಕ್ತ್ಯಂಗ, ಸಾಮಾನ್ಯಾಂಗ - ಎಂಬ ಆರು ವಿಧವಾದ ಅಂಗಗಳು, ಅವುಗಳ ಭೇದಗಳು. ಒಟ್ಟು ಮೂವತ್ತಾರು ಭೇದಗಳು. ಮೊದಲನೆಯದು ಶಿವಾಂಗ ನಿರೂಪಣೆ, ಅವುಗಳ ವಿಭಾಗ-ಸಿದ್ಧಿಕ್ರಮ-ಹೃದಯ-ಶಿರಸ್ಸು-ಶಿಖಾ, ಕವಚ, ನೇತ್ರ ಹಾಗೂ ಅಸ್ತ್ರಮಂತ್ರಗಳ ಪಲ್ಲವಗಳು; ಎರಡನೆಯ ಭೂತಾಂಗ ಅದರ ಬೀಜಗಳು, ಸ್ಥಾನ, ಕೂಟಾಂಗ ನಿರೂಪಣ - ಅದರ ಷಡ್ಬೀಜಗಳು. ಭೂತಾಂಗ – ಇವುಗಳ ಬೀಜಗಳ ನಿರೂಪಣೆ, ಶಿವಾಸ್ತ್ರ, ಪಾಶುಪತಾಸ್ತ್ರ, ಬ್ರಹ್ಮಾಸ್ತ್ರ, ಕ್ಷುರಿಕಾಸ್ತ್ರ, ವ್ಯೋಮಾಸ್ತ್ರ ಮತ್ತು ಅಘೋರಾಸ್ತ್ರಗಳ ನಿರೂಪಣೆ, ಅವುಗಳ ವಿವರಣೆ ಶಕ್ತ್ಯಂಗ, ಅದರ ಷಡ್ಬೀಜಗಳು, ಸಾಮಾನ್ಯಾಂಗ, ಅದರ ಬೀಜವರ್ಣಗಳು, ದೇವತೆಗಳು, ಇವರ ನಿರೂಪಣೆ, ನಂತರ ಈ ಆರು ಅಂಗಗಳ ವರ್ಣ ಧ್ಯಾನಾರ್ಹ ಸ್ವರೂಪ ಅದರ ವಿಭಾಗಗಳು, ಈ ಆರು ಅಂಗಗಳ ವಿನಿಯೋಗ, ಈ ಆರು ಅಂಗಗಳಲ್ಲಿ ವಿಶೇಷವಾದ ಹೃದಯಾಂಗ, ಅದರ ಪಂಚಪ್ರಕಾರ, ಅವುಗಳ ವಿವರಣೆ, ನಂತರ ಅಸ್ತ್ರಭೇದಗಳು, ಪಂಚಾಸ್ತ್ರಗಳ ವರ್ಣಸಂಖ್ಯೆಗಳು ಈ ಪಂಚಾಸ್ತ್ರ ಮಂತ್ರಗಳು ಎಲ್ಲಾ ಸತ್ಕರ್ಮಕ್ಕು ಯೋಗ್ಯವಾದವುಗಳೆಂದು ನಿರೂಪಿಸುವುದರೊಂದಿಗೆ ಪಟಲವು ಸಮಾಪ್ತ ವಾಗುವುದು.

೯. ನವಮ ಮಂತ್ರಜಾತಪಟಲ :

ವಿಷ್ಣು ಬ್ರಹ್ಮ ದೇವೇಂದ್ರ, ಚಂದ್ರ ಸೂರ್ಯ ವಿಭೂತಿಶಾಲಿಗಳು, ದೇವಾದಿಗಳು ಮಂತ್ರಜ್ಞರು ಶ್ರೇಷ್ಠವಾದ ಭಕ್ತಿಯನ್ನುಳ್ಳ ಮಾನವರು, ಸತ್ಪುರುಷರು ಸತ್ಪಥಗಾಮಿಗಳು ಮನುಮುನಿಗಣಗಳು, ಇವೆಲ್ಲರಿಂದಲೂ ಉಪಾಸಿತವಾದ ಶಿವತತ್ತ್ವಕ್ಕೆ ನಿಲಯವಾದ ಮನೋಹರವಾದ ಶ್ರೀ ಶಿವಲಿಂಗವನ್ನು ನಾನು ಸದಾಕಾಲದಲ್ಲಿಯೂ ಭಜಿಸುತ್ತೇನೆ ಎಂಬ ನಮಸ್ಕಾರರೂಪ ಮಂಗಲಾಚರಣೆಯಿಂದ ಪ್ರಾರಂಭವಾಗುತ್ತದೆ, ಸಮಸ್ತ ಮಂತ್ರಸ್ವರೂಪವನುಳ್ಳದಾದ ಜಗಜನ್ಮಾದಿ ಸ್ಥಲವಾದ ಶಿವಲಿಂಗದ ಉದ್ದರಣಕ್ರಮ,

ಸಮಸ್ತ ಪ್ರಾಣಿಗಳ ಹಿತಕ್ಕಾಗಿಯೂ ಭುಕ್ತಿಮುಕ್ತಿಗಾಗಿಯೂ ಶಿವಲಿಂಗದ ಉದ್ಧರಣದ ಉದ್ದೇಶ, ಶಿವಲಿಂಗದ ಉದ್ಧರಣ, ಪೀಠ ಸ್ವರೂಪ, ಪೀಠದ ಷಂಡಂಗಗಳು : ಅಧಃ ಪಟ್ಟಿಕೆಯಲ್ಲಿ ಹೃದಯಮಂತ್ರನ್ಯಾಸ, ಅಧಃಕಂಜದಲ್ಲಿ ಶಿರೋಮಂತ್ರ, ಕಂಠಸ್ಥಾನದಲ್ಲಿ ಶಿಖಾಮಂತ್ರ ಊರ್ಧ್ವಕಂಜದಲ್ಲಿ ಕವಚಮಂತ್ರ ಆಜ್ಯಪ್ರದಾರಿಕೆಯಲ್ಲಿ ನೇತ್ರ ಮಂತ್ರ ನ್ಯಾಸಕ್ರಮ ನಿರೂಪಣೆ; ನಂತರ ಆಧಾರಾದಿ ಷಟ್ಚಕ್ರಗಳ ನ್ಯಾಸಕ್ರಮ, ಸ್ವರಾಕ್ಷರಗಳ ಮೂರ್ತಿಗಳ ವಿವರ, ವಿಕಲಾಕ್ಷರಗಳ ದೇವತೆಗಳ ವಿವರ; ಸ್ವರಾಕ್ಷರಗಳಿಗೆ ಸಂಬಂಧಿಸಿದ ಶಕ್ತಿದೇವತೆಯರ, ವಿಕಲಾಕ್ಷರಗಳಿಗೆ ಸಂಬಂಧಿಸಿದ ಮುವತ್ತೈದು ಶಕ್ತಿದೇವತೆಗಳ ವಿವರಗಳು (ಶಾರದಾ ತಿಲಕದಿಂದ ಉದ್ಧೃತ), ನಂತರ ಮೂರ್ತಮಂತ್ರನ್ಯಾಸ-ಕ್ರಮ ನಿರೂಪಣೆ, ಷಡಧ್ವನ್ಯಾಸ ನಿರೂಪಣೆ, ಲಿಂಗವು ಮಂತ್ರಮಯವೆಂದು ನಿರೂಪಿಸಿದನಂತರ ೧೯ ವಿಧವಾದ ಮಂತ್ರನಾಮಗಳನ್ನು ಅವುಗಳ ಲಕ್ಷಣವನ್ನು ನಿರೂಪಿಸಿದೆ. ಅನಂತರದಲ್ಲಿ ಮಂತ್ರವಾಸ, ಮಂತ್ರವಾಹನಗಳನ್ನು ನಿರೂಪಿಸುವುದರೊಂದಿಗೆ ಪಟಲವು ಸಮಾಪ್ತ ವಾಗುವುದು.

೧೦. ದಶಮ ಮಂತ್ರಕೀಲಪಟಲ :

ಪಾರ್ವತಿ ಪರಮೇಶ್ವರರನ್ನು ಕುರಿತ ಹಾಗೂ ಶ್ರೇಷ್ಠ ದಿವ್ಯಲಿಂಗವನ್ನು ಕುರಿತ ನಮಸ್ಕಾರ ರೂಪ ಪ್ರಾರ್ಥನೆಯೊಂದಿಗೆ ಪಟಲವು ಪ್ರಾರಂಭವಾಗುವುದು. ಮಂತ್ರ ಜಾತದ ನಂತರ ಮಂತ್ರಕೀಲವು ಹೇಳಲ್ಪಡುವುದು. ಕೇಳು : ಮಂತ್ರವು ಎರಡು ವಿಧ; ಅಕೀಲ ಮತ್ತು ಕೀಲ. ಕೀಲವನ್ನು ತ್ಯಜಿಸುವುದು. ಮಂತ್ರಸ್ವರೂಪವನ್ನು ಅರಿದು ಆಚರಿಸಬೇಕು. ಇದು ನೇತ್ರಮಂತ್ರ, ಇದು ಲಲಾಟಮಂತ್ರ, ಇದು ವಕ್ಷೋಮಂತ್ರ, ಇದು ಶ್ರೋತ್ರಮಂತ್ರ, ಇದು ಆಸ್ಯಮಂತ್ರ, ಇದು ನಾಸಿಕಾಮಂತ್ರ, ಇದು ಪಾದಮಂತ್ರ, ಇದು ಹಸ್ತಮಂತ್ರ, ಇದು ದೇಹಮಂತ್ರ ಎಂದು ತಿಳಿದ ಆಗಮಜ್ಞರು ಮಂತ್ರವನ್ನು ಉಚ್ಚರಿಸುತ್ತಾರೆ. ಮಂತ್ರನಾದವು ಸಾಕ್ಷಾನ್ನಾದ ಸ್ವರೂಪವಾಗಿರುತ್ತದೆ - ಇವುಗಳ ಉಚ್ಚಾರಣ ವಿಧಿ, ಮಂತ್ರಗಳ ಅನುಕೂಲ ಮತ್ತು ಪ್ರತಿಕೂಲಗಳ ವಿವರಣೆಯೊಂದಿಗೆ - ಮಂತ್ರಕೀಲಪಟಲ ವಿಷಯಕ್ಕೆ ಸಂಬಂಧಿಸಿದ ವಿಷಯವು ಮುಕ್ತಾಯವಾಗುವುದು (ಆರುವರೆ ಶ್ಲೋಕಗಳು ಮಾತ್ರ ಮಂತ್ರಕೀಲಕ್ಕೆ ಸಂಬಂಧಿಸಿವೆ).

ಮುಂದಿನ ಶ್ಲೋಕಗಳು ವಿಷಯಾಂತರಗೊಂಡಿವೆ. ಇಲ್ಲಿಂದ ಮುಂದೆ ಶೈವಭೇದ ಕ್ರಮವು ನಿರೂಪಿತವಾಗಿದೆ. ಶೈವವು ಸಾಮಾನ್ಯಶೈವ ಮಿಶ್ರಶೈವ ಶುದ್ಧಶೈವ ಮತ್ತು ವೀರಶೈವವೆಂದು ನಾಲ್ಕು ಪ್ರಕಾರವೆಂದೂ - ಸಾಮಾನ್ಯ ಶೈವ ನಿರೂಪಣೆಯ ನಂತರ ಮಿಶ್ರಶೈವ ನಿರೂಪಣೆ - ಪೀಠ ಮಧ್ಯಸ್ಥ ಶಿವಲಿಂಗ ಪೂಜನ, ಪೂಜನವು ಆವರಣಸ್ಥವಹ ವಿಷ್ಣುಮೂರ್ತಿ ಪೂಜೆ, ದೇವೀ ಪೂಜೆ, ಷಣ್ಮುಖ ಪೂಜೆ, ವಿಘ್ನೇಶ್ವರ ಪೂಜೆ,

ಸೂರ್ಯಪೂಜೆ - ಈ ಪಂಚಮೂರ್ತಿ ಪೂಜೆಯನ್ನು ಶಿವನು ಸಕಲ ದೇವತಾಂತಸ್ಥನೆಂಬ ಭಾವನೆಯಿಂದ ಪೂಜಿಸುವುದರಿಂದ ಶಿವಲಿಂಗದೊಡನೆ ಕೂಡಿ ಭಾವಿಸುವುದರಿಂದ ಶಿವಾಧಿಕ್ಯ ಕಾಣಿಸಿಕೊಳ್ಳುವುದು - ಇದು ಮಿಶ್ರಶೈವ. ಶುದ್ಧಶೈವ, ಶಿವನಿಂದ ಹುಟ್ಟಿದುದ ರಿಂದ ಶೈವ; ಕೌಶಿಕ, ಕಾಶ್ಯಪ, ಭರದ್ವಾಜ, ಅತ್ರಿ, ಗೌತಮ - ಇವರು ಈಶ್ವರನ ಪಂಚವಕ್ತ್ರದಿಂದ ಜನಿತರಾದವರು. ಇವರ ವಂಶಗಳಲ್ಲಿ ಹುಟ್ಟಿದವರು ಶಿವದ್ವಿಜರು (ವೀರಾಗಮದಿಂದ). ಇವರಿಗೆ ಪುನರ್ದೀಕ್ಷೆಯಿಲ್ಲ - ನಂತರ ಪ್ರಾಸಾದಾದಿ ಮಂತ್ರಗಳ ನಿರೂಪಣೆ (ಕ್ರಿಯಾಸಾರದಿಂದ ಉದ್ಧರಿಸಲಾಗಿದೆ). ಅಸ್ತ್ರಮುದ್ರೆ ಇತ್ಯಾದಿಯಾಗಿ ಇಪ್ಪತ್ತೆರಡು ಮುದ್ರೆಗಳು (ಸುಪ್ರಭೇದಾಗಮದಿಂದ ಉದ್ಧೃತವಾಗಿವೆ). ಮಂತ್ರ-ಮುದ್ರೆಗಳಿಂದ ಶಿವಪೂಜೆಯನ್ನು ಆಚರಿಸುವುದು; ಈ ರೀತಿಯಾದ ಪೂಜೆ ಆತ್ಮಾರ್ಥ ಪೂಜೆ ಮತ್ತು ಪರಾರ್ಥ ಪೂಜೆಯೆಂದು ಎರಡು ವಿಧ. ಲಿಂಗಪೂಜಾವಿಧಿಯನ್ನು ಶಿವಾವರಣವನ್ನು ಬಿಟ್ಟು ಬೇರೆ ಯಾವ ದೇವತಾ ಪೂಜೆಯನ್ನೂ ಮಾಡಬಾರದು. ನಂತರ ವೀರಶೈವದ ನಿರೂಪಣೆ ಈ ವೀರಶೈವವು ಬಹುಸುಲಭವಾದುದ್ದು. ಅಲ್ಪ ಕ್ರಿಯೆಗಳಿಂದ ಬಹುಫಲ ಪ್ರಾಪ್ತವಾಗುವುದು. ವೀರಶೈವ ಪದದ ನಿರ್ವಚನ, ವೀರಶೈವವು: ಸಾಮಾನ್ಯ ವೀರಶೈವ, ವಿಶೇಷ ವೀರಶೈವ ಮತ್ತು ನಿರಾಭಾರಿ ವೀರಶೈವವೆಂದು ತ್ರಿವಿಧ - ಇವುಗಳ ಲಕ್ಷಣವನ್ನು ನಿರೂಪಿಸಿ, ವೀರಶೈವಕ್ಕೆ ಧಕ್ಕೆ ಬರುವುದಾದರೆ ಪ್ರಾಣವನ್ನು ಕೊಟ್ಟಾದರೂ ರಕ್ಷಿಸಬೇಕು. ದೇಹಕ್ಕೂ ಪ್ರಾಣಕ್ಕೂ ಅದ್ವಯತ್ವವು ಇರುವುದರಿಂದ ಭಿನ್ನಭಾವವನ್ನು ಮಾಡಬಾರದು. ಲಿಂಗಪತಿತವಾದರೆ ಪ್ರಾಯಶ್ಚಿತ್ತ ವಿಧಾನದಿಂದ ಶುದ್ಧಿಯನ್ನು ಮಾಡಿಕೊಳ್ಳಬಹುದು. ಈ ಶುದ್ಧಾಖ್ಯ ತಂತ್ರಪಟಲದ ತತ್ತ್ವಪಟಲ ಮೊದಲಾಗಿ ಕೀಲಕತತ್ತ್ವ ಪಟಲ ಕಡೆಯಾಗಿ ಪರಮೇಶ್ವರನಿಂದ ಷಣ್ಮುಖನಿಗೆ ನಿರೂಪಿಸಲ್ಪಟ್ಟಿತು. ಇದು ಮಾನವರಿಗೆ ಭೋಗದಾಯಕವೂ ಮೋಕ್ಷ ದಾಯಕವೂ ಸರ್ವ ಇಷ್ಟಾರ್ಥಗಳಿಗೆ ಸಾಧನವಾದ ವಾತುಲ ಶುದ್ಧವೆಂಬ ಈ ತಂತ್ರವು ನಿರೂಪಿಸಲ್ಪಟ್ಟುದು.

ಪರಿಷ್ಕರಣ : ಪ್ರಸ್ತುತ ವಾತುಲ ಶುದ್ಧಾಗಮ ಟೀಕೆಯನ್ನು ಮೂರು ಕಾಗದ ಹಸ್ತಪ್ರತಿಗಳ ಸಹಾಯದಿಂದ ಪರಿಶೋಧಿಸಲಾಗಿದೆ. ಮೊದಲನೆಯದಾಗಿ ಕರ್ನಾಟಕ ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿ ಭಂಡಾರದ ಸಂಖ್ಯೆ : ೭೫೮ ಹಾಗೂ ಸಂಖ್ಯೆ : ೭೩೭ ಈ ಎರಡು ಕಾಗದ ಹಸ್ತಪ್ರತಿಗಳನ್ನು ಬಳಸಿ ಕೊಂಡಿದ್ದರೂ ಪ್ರಧಾನವಾಗಿ ೭೫೮ನ್ನು ಮೂಲ ಮಾತೃಕೆಯನ್ನಾಗಿ ಸ್ವೀಕರಿಸಲಾಗಿದೆ. ಸಂಖ್ಯೆ : ೭೩೭ನೆಯ ಪ್ರತಿಯು ಸಂಖ್ಯೆ : ೭೫೮ ರಿಂದ ನೇರವಾಗಿ ಪ್ರತಿ ಮಾಡಲಾಗಿದೆ. ಇದನ್ನು ನಕಲು ಮಾಡಿದವರು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕರಾಗಿದ್ದ

ಪ್ರೊ. ಕಾಶಿ ಪುಟ್ಟಸೋಮರಾಧ್ಯರೆಂದು ತಿಳಿದು ಬರುತ್ತದೆ. ಮೂಲ ಮಾತೃಕೆಯನ್ನಾಗಿ ಸ್ವೀಕರಿಸಿದ ೭೫೮ನೆಯ ಪ್ರತಿಯಲ್ಲಿ ಏಳು ಮತ್ತು ಎಂಟನೆಯ ಪಟಲಗಳು ಬಿಟ್ಟು ಹೋಗಿವೆ. ಬಿಟ್ಟಿರುವ ಈ ಎರಡೂ ಪಟಲಗಳನ್ನು ೭೩೭ ಹಾಗೂ ಕನಕಪುರದ ದೇಗುಲ ಮಠದ ಹಸ್ತಪ್ರತಿಯಿಂದ ಪೂರ್ಣಗೊಳಿಸಲಾಗಿದೆ. ೭೩೭ನೆಯ ಪ್ರತಿಯಲ್ಲಿ ಎಲ್ಲ ಪಟಲಗಳಲ್ಲಿಯೂ ಮೂಲ ಸಂಸ್ಕೃತ ಶ್ಲೋಕಗಳನ್ನು ಪೂರ್ಣಗೊಳಿಸದೆ ಪ್ರಥಮ ಪಾದದ ಒಂದು ಪದವನ್ನು ಬರೆದು ಮುಂದಿನ ಸಾಲಿನಲ್ಲಿ ತಾತ್ಪರ್ಯಾರ್ಥವನ್ನು ಬರೆಯಲಾಗಿದೆ. ಸಂಖ್ಯೆ : ೭೫೮ರಲ್ಲಿ ಅನಿಯಮತವಾಗಿ ಶಕಟರೇಫೆಯ ಬಳಕೆಯಾಗಿದೆ.

ಈ ಎರಡೂ ಪ್ರತಿಗಳ ಅಂತ್ಯವೂ ಒಂದೇ ಆಗಿದ್ದು ಗ್ರಂಥ ಸಮಾಪ್ತಿ ವಾಕ್ಯವು : 'ಹೇವಿಳಂಬಿ ಸಂವತ್ಸರ ಚೈತ್ರ ಶುದ್ಧ ಬುಧವಾರದಲ್ಲೂ ಬೋಳೆನಾಯಕನ ಮಗ ಲಿಂಗಯ್ಯ ಬರೆದ ವಾತುಲ ತಂತ್ರ ಸಮಾಪ್ತಂ ಮಂಗಳ ಮಹಾ' ಎಂದು ಮುಕ್ತಾಯವಾಗಿದೆ.

ಮೇಲಿನ ಈ ಎರಡೂ ಪ್ರತಿಗಳನ್ನು ಒದಗಿಸಿಕೊಟ್ಟವರು ಶ್ರೀ ಎಂ.ಎಂ. ಕಲಬುರ್ಗಿ ಯವರು.

ಮೂರನೆಯ ಹಸ್ತಪ್ರತಿ : ಈ ಹಸ್ತಪ್ರತಿಯ ಆದಿಯಲ್ಲಿ 'ವಾತುಲಾಗಮ - ಕನಕಪುರ ಶ್ರೀ ದೇಗುಲ ಮಠಾಧೀಶರಾದ ಶ್ರೀಮನ್ನಿರಂಜನ ಪ್ರಣವ ಸ್ವರೂಪಿ ಶ್ರೀ ನಿರ್ವಾಣಸ್ವಾಮಿಗಳವರ ಹಸ್ತಪ್ರತಿಯಿಂದ ಪ್ರತಿ ಮಾಡಲಾಗಿದೆ. ಶ್ರೀಕೋಧಿ ಸಂವತ್ಸರದ ಶ್ರಾವಣ ಬಹುಳ ಬಿದಿಗೆ ಮಂಗಳವಾರ ದಿನಾಂಕ : ೨೫-೮-೧೯೬೪' ಎಂದಿದೆ.

ಹಸ್ತಪ್ರತಿಯ ಅಂತ್ಯವು "ಶ್ರೀ ಶಾಲಿವಾಹನ ಶಕ ೧೮೨೦ಕ್ಕೆ ಸರಿಯಾದ ವಿಳಂಬಿ ನಾಮ ಸಂವತ್ಸರದ ನಿಜಾಶ್ವಯುಜ ಬಹುಳ ೫ ಗುರುವಾರ ಈ ಗ್ರಂಥದ ಲೇಖನ ಮುಗಿದುದು. ಕನಕಪುರ ಶ್ರೀ ದೇಗುಲ ಮಠದ ಶ್ರೀ ಮನ್ನಿರಂಜನ ಪ್ರಣವ ಸ್ವರೂಪಿಗಳಾದ ಶ್ರೀ ನಿರ್ವಾಣಸ್ವಾಮಿಗಳವರ ಕೃಪೆಯಿಂದ ದೊರೆತ ಮೇಲಿನ ಹಸ್ತ ಲಿಖಿತ ಪ್ರತಿಯಿಂದ ಶ್ರೀ ಶಾಲಿವಾಹನ ಶಕ ೧೮೮೬ಕ್ಕೆ ಸರಿಯಾದ ಶ್ರೀ ಕ್ರೋಧಿ ಸಂವತ್ಸರ ಶ್ರಾವಣ ಬಹುಳ ಬಿದಿಗೆ ಮಂಗಳವಾರದಲ್ಲಿ ಈ ಪ್ರತಿಯನ್ನು ಬರೆದು ಮುಗಿಸಿದೆ" ಎಂದು ಮುಕ್ತಾಯವಾಗುತ್ತದೆ. ಈ ನಕಲು ಮಾಡಿದವರು ಲಿಂ॥ ಕನಕಪುರದ ನಂಜುಂಡಪ್ಪನವರು.

ಕೃತಜ್ಞತೆಗಳು :

ಸುವರ್ಣ ಕರ್ನಾಟಕದ ಸಂದರ್ಭದಲ್ಲಿ ರಾಜ್ಯ ಪತ್ರಾಗಾರ ಇಲಾಖೆಯು ಕೈಗೆತ್ತಿಕೊಂಡಿರುವ 'ಪ್ರಾಚೀನ ಕೃತಿಗಳ ಪ್ರಕಟನ ಯೋಜನೆ'ಯಡಿಯಲ್ಲಿ ಗುಬ್ಬಿ

ಮಲ್ಲಣಗಳ 'ವಾತುಲಶುದ್ಧಾಗಮ ಟೀಕಾ' ಗ್ರಂಥವನ್ನು ಸಿದ್ಧಪಡಿಸಿಕೊಡಲು ನನಗೆ ಒಂದು ಸುವರ್ಣ ಅವಕಾಶವನ್ನು ಮಾಡಿಕೊಟ್ಟವರು, ಈ ಯೋಜನೆಯ ಪ್ರಧಾನ ಸಂಪಾದಕರಾದ ಡಾ. ಎಂಎಂ. ಕಲಬುರ್ಗಿಯವರು. ಇವರಿಗೆ ನನ್ನ ತುಂಬು ಹೃದಯದ ನಮನಗಳು. ಈ ಯೋಜನೆಯ ಸಲಹಾಸಮಿತಿ ಸದಸ್ಯರಿಗೂ, ಪತ್ರಾಗಾರ ಇಲಾಖೆಯ ಅಧಿಕಾರಿಗಳಿಗೂ ನನ್ನ ವಂದನೆಗಳು.

ತುಮಕೂರಿನ ತಾರಾನಾಥ ಆಯುರ್ವೇದ ಔಷಧಾಲಯದ ವೈದ್ಯರಾದ ಡಾ॥ ಬಿ. ನಂಜುಂಡಸ್ವಾಮಿ, ಇವರು ತಮ್ಮ ಸಂಗ್ರಹದಲ್ಲಿನ ಅನೇಕ ಗ್ರಂಥಗಳನ್ನು ಎರವಲಾಗಿ ಕೊಟ್ಟಿದ್ದಾರಲ್ಲದೆ, ತಮ್ಮಲ್ಲಿನ 'ಕನಕಪುರ ದೇಗುಲಮಠದ ಹಸ್ತಪ್ರತಿಯನ್ನು ಕೊಟ್ಟು ಉಪಕರಿಸಿದ್ದಾರೆ. ಅವರಿಗೆ ನನ್ನ ಅನಂತ ವಂದನೆಗಳು.

ಈ ಗ್ರಂಥವನ್ನು ಅಚ್ಚುಕಟ್ಟಾಗಿ ಛಾಯಾಕ್ಷರ ಜೋಡಿಸಿಕೊಟ್ಟ ಇಳಾ ಮುದ್ರಣಾಲಯದ ಮಾಲೀಕರಾದ ಶ್ರೀ ಬಿ. ಗುರುಮೂರ್ತಿಯವರಿಗೂ, ಅವರ ಸಿಬ್ಬಂದಿ ವರ್ಗದವರಿಗೂ ನನ್ನ ಅನಂತ ಕೃತಜ್ಞತೆಗಳು.

ಈ ಗ್ರಂಥವನ್ನು ಸಿದ್ಧಪಡಿಸುವಲ್ಲಿ ಎಷ್ಟೇ ಎಚ್ಚರವಹಿಸಿದರೂ ಕಾಲದ ಅಭಾವ, ಅನವಧಾನದಿಂದ ಉಳಿದಿರಬಹುದಾದ ತಪ್ಪುಗಳನ್ನು ಸಹೃದಯ ವಾಚಕರು ಮನ್ನಿಸಬೇಕೆಂದು ವಿನಮ್ರ ಪ್ರಾರ್ಥನೆ.

ಶಿವಶಾಸ್ತ್ರಮಧೀಯಾನಾಸ್ತೇ ತರಂತಿ ಭವಾರ್ಣವಮ್ ।
ಅಸಚ್ಛಾಸ್ತ್ರಮಧೀಯಾನಾ ಮೃತ್ಯುಪಾಶವಶಂ ಗತಾಃ ॥

■■

ವಿಷಯಾನುಕ್ರಮಣಿಕೆ

ಅನುಬಂಧಗಳು

ವಾತುಲಶುದ್ಧಾಗಮ ಟೀಕಾ

ಪ್ರಥಮಃ ತತ್ತ್ವಭೇದಪಟಲಃ

ಓಂ

ಶ್ರೀಗುರುಬಸವಲಿಂಗಾಯ ನಮಃ

ಶಾ॥ವಿ॥ವೃ॥ ವಂದೇ ಶಂಕರಮಾಪ್ತಮಾದ್ಯಮಮಲಂ ತೇಜೋನಿಧಿಂ ಶಾಶ್ವತಮ್
ಬಿಂದುಕ್ಷೋಭಕರಂ ಪರಾತ್ಪರಂ ನಾದಾತ್ಮಕಂ ಬೀಜಿನಮ್
ಸರ್ವಾಂತಸ್ಥಮನೇಕಲೋಕಜನಕಂ ಸೋಮಂ ಜಗತ್ಪ್ರೇರಕಮ್ ।
ಲಿಂಗಸ್ಥಂ ಬಹುಮಂತ್ರಮಂತ್ರಿತಮಹಾಲಿಂಗಂ ಲಯಾಖ್ಯಂ ಧ್ರುವಮ್ ॥೧॥

ಯದ್ಬ್ರಹ್ಮ ಪ್ರವದಂತಿ ದಿವ್ಯಮತಯಃ ಸರ್ವಾಂತರಸ್ಥಂ ಶಿವಮ್
ಯಸ್ಮಾಜ್ಜಾತಮನೇಕತತ್ತ್ವನಿಚಯಂ ಯಸ್ಮಿನ್ ಪುನರ್ಲೀಯತೇ ।
ಯೇನೇದಂ ಪ್ರವಿಚಿತ್ರಿತಂ ಬಹುವಿಧಂ ವಿಶ್ವಂ ಜಗತ್ ಸ್ಥೀಯತೇ
ತತ್ ತತ್ತ್ವಂ ಸತತಂ ಭಜೇऽಮೃತಮಯಂ ತೇಜೋಮಯಂ ಚಿನ್ಮಯಮ್ ॥೨॥

ಶ್ಲೋಕ ॥ ಕೈಲಾಸಶಿಖರೇ ರಮ್ಯೇ ನಾನಾರತ್ನೋಪಶೋಭಿತೇ ।
ನಾನಾದ್ರುಮಲತಾಕೀರ್ಣೇ ನಾನಾ ಪುಷ್ಪೋಪಶೋಭಿತೇ ॥೩॥

ತತ್ರ ಸಿಂಹಾಸನಾಸೀನಂ ಶ್ರೀಕಂಠಂ ತ್ರಿದಶೇಶ್ವರಮ್ ।
ಪ್ರಣಮ್ಯ ಚರಣೌ ತಸ್ಯ ಸ್ಕಂದೋ ವಚನಮಬ್ರವೀತ್ ॥ ॥೪॥

ದೇವದೇವ! ಜಗನ್ನಾಥ! ಸರ್ವಜ್ಞ। ತ್ರಿಪುರಾಂತಕ!
ಸ್ಥಿತ್ಯುತ್ಪತ್ತಿಲಯೇಶಾನ! ಪ್ರಣತಾರ್ತಿಹರ! ಪ್ರಭೋ! ॥ ॥೫॥

ಸರ್ವಲೋಕಹಿತಾರ್ಥಾಯ ಯೋಗಿನಾಂ ರಕ್ಷಣಾಯ ಚ ।
ಮಂತ್ರಂ ತಂತ್ರಂ ಪುರಾ ದೇವ! ತ್ವಯಾ ಪ್ರೋಕ್ತಂ ತು ವಿಸ್ತರಾತ್ ॥ ॥೬॥

ಪುಂಸಾಮನುಗ್ರಹಾರ್ಥಾಯ ಜ್ಞಾನಿನಾಂ ಮುಕ್ತಿಕಾರಣಮ್
ಶಿವಜ್ಞಾನಂ ಪರಂ ಗುಹ್ಯಂ ಸಂಕ್ಷೇಪಾತ್ ವದ ಮೇ ಪ್ರಭೋ! ॥ ॥೭॥

ಶ್ರೀಮಚ್ಛುದ್ಧಾಖ್ಯತಂತ್ರೇऽಸ್ಮಿನ್ ಮಲ್ಲಿಕಾರ್ಜುನಧೀಮತಾ ।
ಕರ್ಣಾಟಭಾಷಯಾ ಟೀಕಾ ಕ್ರಿಯತೇऽದ್ಯ ಮಯಾ ಸ್ಫುಟಮ್ ॥ ॥೮॥

ಟೀಕು॥ ಈ ಶುದ್ಧವೆಂಬ ಹೆಸರನುಳ್ಳ ವಾತುಲಾಗಮದಲ್ಲಿಯ ಟೀಕಾ ವ್ಯಾಖ್ಯಾನವು ಶ್ರೀಮದಮರಗುಂಡ ಮಲ್ಲಿಕಾರ್ಜುನನ ಧೀಮತಾ ಚಿದಂಶವನುಳ್ಳಂಥ, ಮಲ್ಲಿಕಾರ್ಜುನ ನೆಂಬ ಬುದ್ಧಿಮಾನ್ ಆದ ನನ್ನಿಂದ ಕನ್ನಡ ಭಾಷೆಯಿಂದ ವ್ಯಕ್ತವಹ ಹಾಂಗೆ ಮಾಡಲು ಪಡುತ ಇದ್ದುದು.

ಶ್ಲೋಕ॥ **ಅಥಾತಸ್ಸಂಪ್ರವಕ್ಷ್ಯಾಮಿ ಯತ್ತ್ವಯಾಪರಿಚೋದಿತಮ್ ।**
ತತ್ಸರ್ವಂ ಸಮಾಸೇನ ಶ್ರೂಯತಾಮಪಿ ಷಣ್ಮುಖ! ॥

ಟೀಕು॥ ಭೋಷಣ್ಮುಖ!=ಎಲೆ ಷಡಾನನನೆ! ಅಥ=ಅನಂತರವು, ಅತಃ=ನೀನು ಹಿಂದೆ ಕೇಳಿದ ಪ್ರಶ್ನೆಯಿಂದ ಮೇಲೆ, ತ್ವಯಾ=ನಿನ್ನಿಂದ, ಯತ್=ಆವುದಾನೊಂದು ಜ್ಞಾನ ತತ್ತ್ವವು, ಪರಿಚೋದಿತಂ=ಬೆಸಗೊಳ್ಳಲುಪಟ್ಟುದು, ತತ್=ಆ, ಸರ್ವಂ ಹಿ=ಸಮಸ್ತವು, ಸಮಾಸೇನ=ಪರ್ಯಾಯದಿಂದ, ಅಪಿಶ್ರೂಯತಾಂ=ಕೇಳಲುಪಡಲಿ. ॥೯॥

ಶ್ಲೋಕ॥ **ಸಾಧಕಾನಾಂ ಹಿತಾರ್ಥಾಯ ಭುಕ್ತಿಮುಕ್ತಿ ಪ್ರದಾಯಕಮ್ ।**
ವಾತುಲಾಖ್ಯೇ ಮಹಾತಂತ್ರೇ ನವನೀತಮಿಹೋದ್ಧೃತಮ್ ॥ ॥೧೦॥

ಸಾರಾತ್ಸಾರಂ ಸಮುದ್ಧೃತ್ಯ ಶುದ್ಧಾಖ್ಯಂ ತಂತ್ರಸಂಜ್ಞಕಮ್ ।
ಸಹಸ್ರಗ್ರಂಥ ಸಂಯುಕ್ತಂ ಸರ್ವಜ್ಞಾನ ಸಮುಚ್ಚಯಮ್ ॥ ॥೧೧॥

ಟೀಕು॥ ಸಾಧಕಾನಾಂ=ಶಿವಸಾಧಕರುಗಳಿಗೆ, ಹಿತಾರ್ಥಾಯ=ಹಿತವಹ ಪ್ರಯೋಜನ ಕ್ಕೋಸುಕರ, ವಾತುಲಾಖ್ಯೇ ಮಹಾತಂತ್ರೇ=ವಾತುಲವೆಂಬ ಮಹಾಗಮದಲ್ಲಿಯ, ಸಾರಾತ್=ಸಾರಗ್ರಂಥಕ್ಕಿಂದವು, ಸಾರಂ=ಸಾರವಾದ ಗ್ರಂಥವನ್ನು, ಸಮುದ್ಧೃತ್ಯ= ಲೇಸಾಗಿಯೆತ್ತಿ, ಸಹಸ್ರಗ್ರಂಥ ಸಂಯುಕ್ತಂ=ಸಾವಿರ ಗ್ರಂಥದೊಡನೆ ಕೂಡಿಹಂಥ, ಭುಕ್ತಿಮುಕ್ತಿ ಪ್ರದಾಯಕಂ=ಭುಕ್ತಿಮುಕ್ತಿಗಳನ್ನು ಕೊಡುವಂಥ, ಸರ್ವಜ್ಞಾನ ಸಮುಚ್ಚಯಂ=ಸಮಸ್ತ ಶಿವಜ್ಞಾನ ಸಮೂಹವನುಳ್ಳಂಥ, ಶುದ್ಧಾಖ್ಯಂ ತಂತ್ರಸಂಜ್ಞಕಂ=ಶುದ್ಧಾಖ್ಯತಂತ್ರವು, ನವನೀತಮಿವ=ದಧಿಯಲ್ಲಿಯ ಬೆಣ್ಣೆಯಹಾಂಗೆ, ಉದ್ಧೃತಂ=ಉದಾಹರಿಸಲ್ಪಟ್ಟುದು. ॥೧೧॥

ಶ್ಲೋಕ॥ **ಗುಹ್ಯಾದ್ಗುಹ್ಯಮಿದಂತಂತ್ರಂ ಸರ್ವಶಾಸ್ತ್ರಸಮುಚ್ಚಯಮ್ ।**
ಸೂಕ್ಷ್ಮಾತ್ಸೂಕ್ಷ್ಮತರಂ ಸೂಕ್ಷ್ಮಂ ಸಾರಾತ್ಸಾರಂಮಹೋದಯಮ್ ॥ ॥೧೨॥

ಟೀಕು॥ ಇದಂ ತಂತ್ರಂ=ಈ ಶುದ್ಧಾಖ್ಯತಂತ್ರವು, ಗುಹ್ಯಾದ್ಗುಹ್ಯಂ=ಗೋಪ್ಯವಹ ಗ್ರಂಥಕ್ಕಿಂತಲೂ ಗೋಪ್ಯವಹಂಥಾದ್ದು, ಸೂಕ್ಷ್ಮಾತ್ಸೂಕ್ಷ್ಮತರಂ=ಸೂಕ್ಷ್ಮ ಎಂಬ ಜ್ಞಾನತತ್ತ್ವಕ್ಕಿಂತಲೂ, ಅತಿಸೂಕ್ಷ್ಮಂ=ಅತ್ಯಂತ ಸೂಕ್ಷ್ಮವಹಂಥ, ಸಾರಾತ್ಸಾರಂ= ಸಾರಗ್ರಂಥಕ್ಕಿಂತಲೂ ಸಾರವಂಥಾದ್ದು, ಸೂಕ್ಷ್ಮಂ=ಸ್ವಲ್ಪ ಗ್ರಂಥವನುಳ್ಳದಾಗಿಯೂ,

ಸರ್ವಶಾಸ್ತ್ರಸಮುಚ್ಚಯಂ=ಎಲ್ಲಾ ಆಗಮಂಗಳ ಅರ್ಥಸಮೂಹವನುಳ್ಳಂಥ, ಮಹೋದಯಂ=ಹಿರಿದಹತೋಜಿಕೆಯನುಳ್ಳುದು. ॥೧೨॥

ಶ್ಲೋಕ॥ ಅಪ್ರಕಾಶ್ಯಮಿದಂ ತನ್ತ್ರಂ ರಹಸ್ಯಮತಿದುರ್ಲಭಮ್ ।
ಶಿವಜ್ಞಾನಮಹಾತನ್ತ್ರಂ ಸಂಕ್ಷೇಪಾದ್ವಕ್ಷ್ಯತೇಽಧುನಾ ॥

ಟೀಕು॥ ಇದಂ ತನ್ತ್ರಂ=ಈ ಶುದ್ಧಾಖ್ಯತನ್ತ್ರವು, ಅತಿದುರ್ಲಭಂ=ಶಿವಭಕ್ತಿಪರಾಙ್ಮುಖರಿಗೆ ಮಿಗಿಲೆನಿಸಿದಂಥಾದ್ದು, ಅಪ್ರಕಾಶ್ಯಂ=ಶಿವಸಂಬಂಧಿಗಳಲ್ಲದವರಿಗೆ ತೋಱಬಾರದಂಥಾದ್ದು, ರಹಸ್ಯಂ=ಶಿವಭಕ್ತರುಗಳಿಂದ ಗೋಪ್ಯವ ಮಾಡುತಕ್ಕಂಥಾದ್ದು, ಶಿವಜ್ಞಾನಮಹಾತನ್ತ್ರಂ=ಈ ಶಿವಜ್ಞಾನಾಧಿಕವಾದ ಮಹಾಗಮವು, ಅಧುನಾ=ಈಗಲೆ, ಸಂಕ್ಷೇಪಾತ್=ಸಂಕ್ಷೇಪ ಮಾತ್ರದಿಂದ, ವಕ್ಷ್ಯತೇ=ನಮ್ಮಿಂದ ನಿರೂಪಿಸಲ್ಪಟ್ಟುದು. ॥೧೩॥

ಶ್ಲೋಕ॥ ಪ್ರಥಮಂ ತತ್ತ್ವಭೇದಂ ತು ದ್ವಿತೀಯಂ ವರ್ಣಭೇದಕಮ್ ।
ತೃತೀಯಂ ಚಕ್ರಭೇದಂ ತು ಚತುರ್ಥಂ ವರ್ಗಭೇದಕಮ್ ॥

ಪಂಚಮಂ ಮನ್ತ್ರಭೇದಂ ತು ಷಷ್ಠಂ ಪ್ರಣವಮುಚ್ಯತೇ ।
ಸಪ್ತಮಂ ಬ್ರಹ್ಮಭೇದಂ ತು ಅಂಗಭೇದಂ ತು ಚಾಷ್ಟಮಮ್ ॥

ನವಮಂ ಮನ್ತ್ರಜಾತಂ ತು ದಶಮಂ ಕೀಲಕಂ ತಥಾ ।
ಏತೇ ವೈ ದಶಭೇದಾಸ್ತು ಕೀರ್ತಿತಾಶ್ಚ ಕ್ರಮೇಣ ತು ॥

ಟೀಕು॥ ತತ್ತ್ವಭೇದಂ=ಮೂವತ್ತೊಂದು ತತ್ತ್ವಂಗಳ ಭೇದವು, ಪ್ರಥಮಂ=ಪ್ರಥಮದದು, ವರ್ಣಭೇದಕಂ=ಅಕಾರಾದಿ ಕ್ಷಕಾರಾಂತಂಗಳಾದ ವರ್ಣಭೇದವು, ದ್ವಿತೀಯಂ=ಎರಡನೇ ಪಟಲದರ್ಥವು, ಚಕ್ರಭೇದಂ ತು=ಚಕ್ರಭೇದವಾಯಿತ್ತಾದುದು. ತೃತೀಯಂ=ಮೂಱನೆಯದು, ವರ್ಗಭೇದಕಂ=ತ್ರಿವರ್ಗಭೇದವು, ಚತುರ್ಥಂ=ನಾಲ್ಕನೆಯದು, ಮಂತ್ರಭೇದಂ ತು=ಶಿವಸದಾಶಿವರುದ್ರ ಮಂತ್ರಂಗಳಭೇದವು, ಪಂಚಮಂ=ಅಯಿದನೆಯದು, ಪ್ರಣವಂ=ಪ್ರಣವ ಭೇದವು, ಷಷ್ಠಂ=ಆರನೆಯದು, ಉಚ್ಯತೇ=ನುಡಿಯಲ್ಪಡುತ್ತಿಹುದು, ಬ್ರಹ್ಮಭೇದಂ ತು=ಬ್ರಹ್ಮಭೇದವಾಯಿತ್ತಾದಡೆ, ಸಪ್ತಮಂ=ಏಳನೆಯಭೇದವು ನುಡಿಯಲ್ಪಡುವುದು, ಅಂಗಭೇಧಂ ತು=ಅಂಗಭೇದವು, ಅಷ್ಟಮಂ=ಎಂಟನೆಯ ಪಟಲದರ್ಥವು, ಮಂತ್ರಜಾತಂ ತು=ಮಂತ್ರಭೇದವಾಯಿತ್ತಾದಡೆ, ನವಮಂ=ಒಂಬತ್ತನೆಯದು, ಕೀಲಕಂ=ಕೀಲಕಭೇದವು, ದಶಮಂ=ಹತ್ತನೆಯದೆಂದು ಹೇಳಲುಪಡುತ್ತಿಹುದು, ಏತೇ ವೈ=ಈ, ದಶಭೇದಾಸ್ತು=ತತ್ತ್ವಾದಿಕೀಲಕಾಂತವಾದ ಹತ್ತುಭೇದಂಗಳು, ಕ್ರಮೇಣ ತು=ಅನುಕ್ರಮದಿಂದ, ಕೀರ್ತಿತಾಶ್ಚ=ಹೇಳಲ್ಪಟ್ಟವು. ॥೧೬॥

ಶ್ಲೋಕ॥ ಏತೇಷಾಮೇವ ಪೂರ್ವಂ ತು ತತ್ತ್ವಭೇದಂ ವದಾಮ್ಯಹಮ್ ।
ತತ್ತ್ವಂ ತು ತ್ರಿವಿಧಂ ಜ್ಞೇಯಂ ತಸ್ಯ ಭೇದಂ ಶೃಣುಷ್ವ ಚ ॥
ಶಿವಂ ಸದಾಶಿವಂಚೈವ ಮಹೇಶಂ ತ್ರಿವಿಧಂ ಸ್ಮೃತಮ್ ।

ಟೀಕು॥ ಏತೇಷಾಂ=ಈದಶಪಟಲ ಭೇದದೊಳಗೆ, ಪೂರ್ವಮೇವ=ಆದಿಯಾಗಿಯೆ ತತ್ತ್ವಭೇದಂತು=ತತ್ತ್ವಭೇದಂಗಳ ಭೇದವನು, ಅಹಂ=ನಾನು, ವದಾಮಿ=ಉಪದೇಶಿಸುತ್ತಿದ್ದೇನು, ತತ್ತ್ವಂ ತು=ತತ್ತ್ವವಾಯಿತ್ತಾದಡೆ, ತ್ರಿವಿಧಂ=ಮೂಱು ವಿಧವಾದುದೆಂದು, ಜ್ಞೇಯಂ=ಅಱಿಯಲುತಕ್ಕುದು, ಅಥ=ಕಾರಣಾರ್ಥವಾಗಿ, ತಸ್ಯ=ಆ ಪರತತ್ತ್ವದ, ಭೇದಂ=ಭೇದವನು, ಶೃಣುಷ್ವ=ಕೇಳು. ಶಿವಂ=ಶಿವತತ್ತ್ವವೆಂದು, ಸದಾಶಿವಂಚೈವ=ಸದಾಶಿವತತ್ತ್ವವೆಂದು, ಮಹೇಶ್ವರಂ ಚ=ಮಹೇಶ್ವರತತ್ತ್ವವೆಂದು, ತ್ರಿವಿಧಂ=ಮೂಱು ಪ್ರಕಾರವಾಗಿ, ಸ್ಮೃತಂ=ನೆನೆಯಲುಪಟ್ಟುದು. ॥೧೮॥

ಶ್ಲೋಕ॥ ಶಿವತತ್ತ್ವಂ ಮಹಾಸೇನ ನಿಷ್ಕಲಂ ಚೇತಿ ಕೀರ್ತಿತಮ್ ॥
ಸಕಲಂ ನಿಷ್ಕಲಶ್ಚೈವ ಸದಾಶಿವಮಿಹೋಚ್ಯತೇ ।
ಮಹೇಶಂ ಸಕಲಂ ವಿನ್ದ್ಯಾತ್ತ್ರಿವಿಧಾಸ್ತೇ ಭವಂತಿ ವೈ ॥

ಟೀಕು॥ ಭೋ ಮಹಾಸೇನ!=ಎಲೆ ಷಣ್ಮುಖನೆ!, ಶಿವತತ್ತ್ವಂ=ಶಿವತತ್ತ್ವವು, ನಿಷ್ಕಲಂಚೇತಿ= ನಿಷ್ಕಲತತ್ತ್ವವೆಂದು, ವಿನ್ದ್ಯಾತ್=ಅಱಿವುದು, ತೇ=ಆ ಶಿವಸದಾಶಿವಮಹೇಶ್ವರ ತತ್ತ್ವವೆಂಬ ತ್ರಿತತ್ತ್ವಭೇದಂಗಳು, ತ್ರಿವಿಧಾಃ=ನಿಷ್ಕಲವು, ಸಕಲ ನಿಷ್ಕಲವು, ಸಕಲವು ಎಂಬ ಮೂಱು ವಿಧಂಗಳು, ಭವಂತಿ ವೈ=ಆಗುತ್ತಿಹವು. ॥೨೦॥

ಶ್ಲೋಕ॥ ಶಿವಮೇಕಂ ವಿಜಾನೀಯಾತ್ಸಾದಾಖ್ಯಂ ಪಞ್ಚಧಾಭವೇತ್ ।
ಮಹೇಶಂ ತು ಮಹಾಸೇನ ಪಞ್ಚವಿಂಶತಿ ಭೇದಕಮ್ ॥
ಏತೇಷಾಂ ತತ್ತ್ವಸಂಯುಕ್ತಮೇಕತ್ರಿಂಶದಿತಿ ಸ್ಮೃತಮ್ ।

ಟೀಕು॥ ಭೋ ಮಹಾಸೇನ!=ಎಲೆ ಷಣ್ಮುಖನೆ!, ಶಿವಂ=ಶಿವತತ್ತ್ವವು, ಏಕಂ= ಅದ್ವಯತತ್ತ್ವವೆಂದು, ವಿಜಾನೀಯಾತ್=ಲೇಸಾಗಿ ಅಱಿವುದು, ಸಾದಾಖ್ಯಂ= ಸಾದಾಖ್ಯತತ್ತ್ವವಾಯಿತ್ತಾದಡೆ, ಪಞ್ಚವಿಂಶತಿಭೇದಕಂ=ಇಪ್ಪತ್ತೈದು ಭೇದಂಗಳುಳ್ಳದಹುದು, ಏತೇಷಾಂ=ಈ ಶಿವತತ್ತ್ವ ಸದಾಶಿವತತ್ತ್ವ ಮಾಹೇಶ್ವರ ತತ್ತ್ವಗಳೆಂಬ ಈ ತ್ರಿತತ್ತ್ವಂಗಳ, ತತ್ತ್ವಸಂಯುಕ್ತಂ=ಭೇದತತ್ತ್ವಂಗಳೊಡನೆ ಕೂಡಿದ ಲೆಕ್ಕವು, ಏಕತ್ರಿಂಶದಿತಿ=ಮುವತ್ತೊಂದೆಂದು, ಸ್ಮೃತಂ=ನೆನೆಯಲುಪಟ್ಟುದು. ॥೨೨॥

ಶ್ಲೋಕ॥ ಶಿವಸ್ಯ ಲಕ್ಷಣಂ ವಕ್ಷ್ಯೇ ಸಮಾಸಾತ್ ಶೃಣು ಷಣ್ಮುಖ! ।

ಟೀಕು॥ ಭೋ ಷಣ್ಮುಖ!=ಎಲೆ ಷಡಾನನನೆ!, ಸಮಾಸಾತ್=ಪರ್ಯಾಯದಿಂದ, ಶಿವಸ್ಯ=ಅದ್ವಯತತ್ತ್ವವಾದ ಶಿವತತ್ತ್ವದ, ಲಕ್ಷಣಂ=ಕುರುಹನು, ವಕ್ಷ್ಯೇ=ಹೇಳಿಹೆನು, ಶೃಣು=ಕೇಳು. ॥೨೩॥

ಶ್ಲೋಕ॥ ಶಿವಂ ಪರಾತ್ಪರಂ ಸೂಕ್ಷ್ಮಂ ನಿತ್ಯಂ ಸರ್ವಗಮವ್ಯಯಮ್ ।
ಅನಿನ್ದಿತಮನೌಪಮ್ಯಮಪ್ರಮಾಣಮನಾಮಯಮ್ ॥

ಟೀಕು॥ ಶಿವಂ=ಶಿವತತ್ತ್ವವು, ಪರಾತ್=ಪರಕ್ಕಿಂತಲೂ, ಪರಂ=ಪರವಾಗಿಹುದು, ಸೂಕ್ಷ್ಮಂ=ಸೂಕ್ಷ್ಮತತ್ತ್ವವಾಗಿಯು, ನಿತ್ಯಂ=ನಿತ್ಯವಾದುದಾಗಿಯೂ, ಸರ್ವಗತ=ಸರ್ವಗತ ವಾದುದಾಗಿಯೂ, ಅವ್ಯಯಂ=ಅವ್ಯಯಮಾದುದಾಗಿಯೂ, ಅನಿಂದಿತಂ=ಅನಿಂದಿತ ಮಾದುದಾಗಿಯೂ ಅನೌಪಮ್ಯಂ=ಅನೌಪಮ್ಯವಾದುದಾಗಿಯೂ, ಅಪ್ರಮಾಣಂ= ಅಪ್ರಮಾಣವಾದುದಾಗಿಯೂ, ಅನಾಮಯಂ= ಅನಾಮಯವಾದುದಾಗಿಯೂ ಇಂತು ದಶನಾಮಂ ಬೆತ್ತಿಪ್ಪುದು. ॥೨೪॥

ಶ್ಲೋಕ॥ ಶುದ್ಧತ್ವಾಚ್ಛಿವಮುದ್ದಿಷ್ಟಂ ಪರಾದೂರ್ಧ್ವಂ ಪರಾತ್ಪರಮ್ ।
ವ್ಯೋಮಾತೀತಂ ಚ ಸೂಕ್ಷ್ಮಂ ಹಿ ನಿತ್ಯಂ ಕಾರಣಕಾರಣಮ್ ॥

ಟೀಕು॥ ಶುದ್ಧತ್ವಾತ್=ಶುದ್ಧಪ್ರಸಾದಮಪ್ಪಕಾರಣದಿಂದ, ಶಿವಂ=ಶಿವಾಭಿದಾನವು ಉದ್ದಿಷ್ಟಂ=ಉದ್ದೇಶಿಸಲ್ಪಟ್ಟುದು, ಪರಾತ್=ಆವಾವತತ್ತ್ವತಿಶಯವಾಗಿಪ್ಪುದು, ಆ ಆ ಉತ್ಕೃಷ್ಟತತ್ತ್ವಕ್ಕಿಂತಲೂ, ಊರ್ಧ್ವಂ=ಮೇಲಣತತ್ತ್ವವಾದುದಾಗಿ, ಪರಾತ್ಪರಂ- ಪರಾತ್ಪರವೆನಿಸಿಕೊಂಬುದು, ವ್ಯೋಮಾತೀತಂ ಚ=ವ್ಯೋಮ=ಶೂನ್ಯವಾದ ಆಕಾಶತತ್ತ್ವ ವನು, ಅತೀತಂ=ಮೀಱಿ ಆದಿಮಧ್ಯಾಂತ ಶೂನ್ಯವಾಗಿ ದೃಗ್ಗಶಕ್ಯವುಳ್ಳುದಾಗಿ, ಸೂಕ್ಷ್ಮಂ=ಸೂಕ್ಷ್ಮವೆಂಬ ಹೆಸರು, ಹಿ=ಅಹುದು, ಕಾರಣಕಾರಣಂ=ಕಾರಣಕಾರ್ಯ ಸ್ವರೂಪವಾಗಿ ಜಗತ್ತು ಇಪ್ಪುದು, ಆದೌ=ಸಮಸ್ತಕಾರಣಂಗಳಿಗೆಯೂ, ಕಾರಣಂ=ಪರಮ ಕಾರಣವಾದುದಾಗಿ, ನಿತ್ಯಂ=ನಿತ್ಯವೆನಿಸಿಕೊಂಬುದು. ॥೨೫॥

ಶ್ಲೋಕ॥ ವ್ಯಾಪ್ತಂ ಸರ್ವಗತಂ ಪ್ರೋಕ್ತಮಕ್ಷೀಣಂ ಚಾವ್ಯಯಂ ಭವೇತ್ ।
ಅಮಲಂ ತ್ವನಿಂದಿತಂ ಜ್ಞೇಯಮಸಾದೃಶ್ಯಾದನೌಪಮಮ್ ॥

ಟೀಕು॥ ವ್ಯಾಪ್ತಂ=ಬ್ರಹ್ಮಾದಿತ್ವನಂತವಾದಪಿಂಡಂಗಳನು ಶಿವಲೋಕಾದಿ ಕಾಲಾದ್ಯಂತ ವಾದ ಅಂಡಂಗಳನುವಾಪಿಕರಿಸಿಕೊಂಡಿದ್ದುದಾಗಿ, ಸರ್ವಗತಂ=ಸರ್ವಗತವೆಂಬ ಅಭಿದಾನವು, ಪ್ರೋಕ್ತಂ=ಹೇಳಲುಪಟ್ಟುದು, ಅಕ್ಷೀಣಂ=ಅನಂತ ಪ್ರಳಯಂಗಳು ತಿರಿಗಿ

ತಿರಿಗಿ ಬಪ್ಪರಿಯುಂ ಆ ಸಮಸ್ತದ ಅಳಿದುಳಿವಿನೊಳಗಲ್ಲದೆ, ನಿಜವಾಗಿಪ್ಪುದಾಗಿ, ನಿತ್ಯಂ=ನಿತ್ಯಮೆಂಬ ನಾಮಧೇಯವು, ಅವ್ಯಯಂ=ಅವ್ಯಯವೆಂಬ ನಾಮಧೇಯವು, ಭವೇತ್=ಅಹುದು, ಅಮಲಂ=ಮೋಹ ಮದ ರಾಗ ವಿಷಾದ ತಾಪ ಶೋಷ ವೈಚಿತ್ಯವೆಂಬ ಸಮಸ್ತಮಲಂಗಳಿಲ್ಲದುದಾಗಿ, ಅನಿಂದಿತಂ=ನಿಂದಿಸಲ್ಪಡದ ವಸ್ತುವೆಂದು, ಜ್ಞೇಯಂ=ಅಜಿಯಬೇಕಾದುದು, ಅಸಾದೃಶ್ಯಂ=ಎಲ್ಲಾ ತತ್ತ್ವಂಗಳು ಒಂದೊಂದಱವೊಡನೆ ಹೋಲಿಸತಕ್ಕುವು, ಶಿವತತ್ತ್ವವು ಆವಾವತತ್ತ್ವಂಗಳೊಡನೆಯು ಹೋಲಿಸತಕ್ಕದಲ್ಲವಾಗಿ, ಅನೌಪಮಂ= ಅನೌಪಮವೆನಿಸಿಕೊಂಬುದು. ॥೨೬॥

ಶ್ಲೋಕ॥ **ಪ್ರಮಾಣಾದ್ವ್ಯತಿರಿಕ್ತತ್ವಾದಪ್ರಮೇಯಮಿತಿ ಸ್ಮೃತಮ್ ।**

ನಿರ್ಗುಣತ್ವಾದ್ವಿಶೇಷೇಣ ಅನಾಮಯಮಿತಿಸ್ಮೃತಮ್ ।

ಇತ್ಯೇತೈರ್ಲಕ್ಷಣೈರ್ಯುಕ್ತಂ ಶಿವರೂಪಮಿಹೋಚ್ಯತೇ ॥

ಟೀಕು॥ ಪ್ರಮಾಣಾತ್=ಕಿಂಚಿಜ್ಞರಪ್ಪ ಬ್ರಹ್ಮಾದಿಗಳು ಪ್ರತ್ಯಕ್ಷಾನುಮಾನಂಗಳಿಂದನುದಿವ ಶಬ್ದಪ್ರಮಾಣಕ್ಕಿಂತಲು, ವ್ಯತಿರಿಕ್ತತ್ವಾತ್=ವ್ಯತಿರಿಕ್ತವಹತನದಿಂದ, ಅಪ್ರಮಾಣಮಿತಿ=ಆರೂ ಪ್ರಮಾಣಿಸುವ ಪ್ರಮಾಣವಿಲ್ಲದುದು; ಅನಾಮಯಮಿತಿ=ಸಕಲವಿಕಾರವಿಲ್ಲದುದೆಂದು, ಸ್ಮೃತಂ=ನೆನೆಯಲ್ಪಟ್ಟುದು, ಇತಿ=ಈ ಪ್ರಕಾರವು, ಏತೈಃ=ಪೂರ್ವಶ್ಲೋಕಂಗಳಿಂದ ಹೇಳಿದ, ಶಿವನಾಮ, ಪರಾತ್ಪರನಾಮ, ಸೂಕ್ಷ್ಮನಾಮ, ನಿತ್ಯನಾಮ, ಸರ್ವಗತನಾಮ, ಅವ್ಯಯ ನಾಮ, ಅನಿಂದಿತನಾಮ, ಅನೌಪಮ್ಯನಾಮ, ಅನಾಮಯನಾಮವೆಂಬ ಈ ಲಕ್ಷಣೈಃ=ಕುರುಹುಗಳಿಂದ, ಯುಕ್ತಂ=ಕೂಡಿದಂಥಾ ಈ ಶುದ್ಧಾಖ್ಯತಂತ್ರದಲ್ಲಿ, ಶಿವರೂಪಂ=ಶಿವತತ್ತ್ವದ ಸ್ವರೂಪವೆಂಬುದು, ಉಚ್ಯತೇ=ನುಡಿಯಲುಪಡುತ್ತಿಹುದು. ॥೨೮॥

ಶ್ಲೋಕ॥ **ಸೃಷ್ಟ್ಯರ್ಥಂ ಸರ್ವತತ್ತ್ವಾನಾಂ ಲೋಕಸ್ಯೋತ್ಪತ್ತಿಕಾರಣಮ್ ।**

ಯೋಗಿನಾಮುಪಕಾರಾಯ ಸ್ವೇಚ್ಛಯಾ ಚಿಂತಿತಶ್ಶಿವಃ ॥

ಟೀಕು॥ ಲೋಕಸ್ಯ=ಸಮಸ್ತಲೋಕದ, ಉತ್ಪತ್ತಿಕಾರಣಂ=ಉದಯಕ್ಕೆ ಕಾರಣವಹಂಥ, ಶಿವಃ=ಶಿವನು, ಶಿವಮಿತಿ ತತ್ತ್ವಾಭಿಧಾನಸ್ಯ ಶಿವ ಇತಿ ಪುನ್ನಾಮ ತಸ್ಮಾತ್ಕಾರಣಾದೌ ಸಿಧ್ಯತಿ ಶಿವ ಇತಿ=ಶಿವನು ಎಂಬ, ತತ್ತ್ವಾಭಿಧಾನಸ್ಯ=ತತ್ತ್ವಾಭಿಧಾನಕ್ಕೆ, ಶಿವ ಇತಿ=ಶಿವನು ಎಂಬ, ಪುನ್ನಾಮ=ಪುಲ್ಲಿಂಗನಾಮವು, ತಸ್ಮಾತ್ ಕಾರಣಾತ್=ಆದಕಾರಣದಿಂ, ಆಸೀದಿತಿ=ಆ ಇತ್ತೆಯಾ ಎಂದಡೆ, ತಯೋರೇಕಸ್ಯೋದಾಹರಣಂ=ತಯೋಃ=ಆ ಪುನ್ನಪುಂಸಕ ಶಬ್ದಂಗಳ ಏಕತ್ವಸ್ಯ=ಅದ್ವಯತ್ವಕ್ಕೆ, ಉದಾಹರಣಂ=ದೃಷ್ಟಾಂತವು, ಅಥರ್ವಣ ವೇದೇ=ಅಥರ್ವಣ ವೇದದಲ್ಲಿ "ತತ್ಪರಂ ಬ್ರಹ್ಮೇತಿ ಸ ಏಕೋರುದ್ರಸ್ಸ

ಈಶಾನಸ್ಸಭಗವಾನ್ಸಮಹೇಶ್ವರಸ್ಸಮಹಾದೇವ ಇತಿ" ತತ್=ಆ, ಪರ=ಪರತತ್ತ್ವಾಭಿಧಾನವನುಳ್ಳ, ಬ್ರಹ್ಮೇತಿ=ಬ್ರಹ್ಮವೆಂದು ನುಡಿಸಿಕೊಂಬ, ಸಃ=ಆ ಶಿವನು, ಏಕೋರುದ್ರಃ=ಒಬ್ಬನೇ ರುದ್ರನು, ಸಃ=ಸೂಕ್ಷ್ಮಾಭಿದಾನವನುಳ್ಳ ಶಿವನುತಾನೆ, ಈಶಾನಃ=ಈಶಾನನೆನಿಸಿಕೊಂಬನು, ಸಃ=ಆ ನಿತ್ಯನೆಂಬ ಹೆಸರನುಳ್ಳ ಶಿವನು ತಾನೆ, ಭಗವಾನ್=ಭಗವಾನ್‌ವೆನಿಸಿಕೊಂಬನು, ಸಃ=ಆ ಸರ್ವಗತನೆಂಬ ಹೆಸರನುಳ್ಳ ಶಿವನು ತಾನೆ, ಮಹೇಶ್ವರಃ=ಮಹೇಶ್ವರನೆಸಿಕೊಂಬನು, ಸಃ=ಆ ಅವ್ಯಯಾದಿನಾಮವನುಳ್ಳಶಿವನುತಾನೆ, ಮಹಾದೇವ ಇತಿ=ಮಹಾದೇವನೆನಿಸಿಕೊಂಬನು, ಇತ್ಯಾದಿ ಬಹುಪ್ರಸಿದ್ಧಂ=ಇವು ಮೊದಲಾದ ಶ್ರುತಿಗಳು ಹಲವು ಪ್ರಸಿದ್ಧವಾಗಿರುವುದು, ಶಿವಃ=ಸಮಸ್ತಲೋಕೋತ್ಪತ್ತಿಗೆ ಕಾರಣವಾದಂಥ ಆ ಶಿವನು, ಸರ್ವತತ್ತ್ವಾನಾಂ=ಮಹದಾದಿತತ್ತ್ವಂಗಳ, ಸೃಷ್ಟ್ಯರ್ಥಂ=ಸೃಷ್ಟಿಗೋಸುಕರ, ಯೋಗಿನಾಂ=ಶುದ್ಧಾಧ್ವವರ್ತಿಗಪ್ಪರುಗಳಿಗೆ, ಉಪಕಾರಾಯ=ಉಪಕರಿಸಲೋಸುಕರ, ಸ್ವ=ತನ್ನ, ಇಚ್ಛಯಾ=ಇಚ್ಛೆಯಾದೊಡನೆಕೂಡಿದಾತನಾಗಿ, ಚಿಂತಿತಃ=ನೆನಪುತ್ತಿದ್ದನು. ॥೨೯॥

ಶ್ಲೋಕ॥ ತಸ್ಯ ಚಿನ್ತಾಪರಾಶಕ್ತಿಸ್ಸಹಸ್ರಾಂಶೇನ ಜಾಯತೇ ।
ತಚ್ಛಕ್ತೇಸ್ತು ಸಹಸ್ರಾಂಶಾದಾದಿಶಕ್ತಿಸಮುದ್ಭವಃ ॥

ಟೀಕು॥ ತಸ್ಯ=ಆ ಪರಮೇಶ್ವರನ, ಚಿಂತಾ=ನೆನಹಾದ, ಸಹಸ್ರಾಂಶೇನ, ಸಹಸ್ರ=ಸಾವಿರದೊಳಗಣ, ಅಂಶೇನ=ಒಂದುಭಾಗದಿಂದ, ಪರಾಶಕ್ತಿಃ=ಪರಾಶಕ್ತಿಯು, ಜಾಯತೇ=ಪುಟ್ಟುತ್ತಿಹುದು, ತಚ್ಛಕ್ತೇಃ=ಆ ಪರಾಶಕ್ತಿಯ, ಸಹಸ್ರಾಂಶಾತ್= ಸಹಸ್ರಾಂಶದದೆಸೆಯಿಂದ, ಆದಿಶಕ್ತಿಸಮುದ್ಭವಃ=ಆದಿಶಕ್ತಿಯ ಉತ್ಪತ್ತಿಯು. ॥೩೦॥

ಶ್ಲೋಕ॥ ತಚ್ಛಕ್ತೇಸ್ಸಹಸ್ರಾಂಶಾದಿಚ್ಛಾಶಕ್ತಿ ಸಮುದ್ಭವಃ ।
ತಚ್ಛಕ್ತೇಸ್ಸಹಸ್ರಾಂಶಾತ್‌ಜ್ಞಾನ ಶಕ್ತಿಸಮುದ್ಭವಃ ॥

ಟೀಕು॥ ತಚ್ಛಕ್ತೇಃ=ಆದಿಶಕ್ತಿಯ, ಸಹಸ್ರಾಂಶಾತ್=ಸಹಸ್ರಾಂಶದದೆಸೆಯಿಂದ ಇಚ್ಛಾಶಕ್ತಿಸಮುದ್ಭವಃ=ಇಚ್ಛಾಶಕ್ತಿಯ ಉದಯವು, ತಚ್ಛಕ್ತೇಃ=ಆ ಇಚ್ಛಾಶಕ್ತಿಯ, ಸಹಸ್ರಾಂಶಾತ್=ಸಹಸ್ರಾಂಶದದೆಸೆಯಿಂದ, ಜ್ಞಾನಶಕ್ತಿ ಸಮುದ್ಭವಃ=ಜ್ಞಾನಶಕ್ತಿಯ ಉದಯವು.॥೩೧॥

ಶ್ಲೋಕ॥ ತಚ್ಛಕ್ತೇಸ್ಸಹಸ್ರಾಂಶಾತ್ಕ್ರಿಯಾಶಕ್ತಿಸಮುದ್ಭವಃ ।
ಏಷಾವೈಪಂಚಧಾಶಕ್ತಿರ್ನಿಷ್ಕಲಾಶ್ಚೇತಿ ಕೀರ್ತಿತಾಃ ॥

ಟೀಕು॥ ತಚ್ಛಕ್ತೇಃ=ಆ ಜ್ಞಾನಶಕ್ತಿಯ, ಸಹಸ್ರಾಂಶಾತ್=ಸಹಸ್ರಾಂಶದದೆಸೆಯಿಂದ ಕ್ರಿಯಾಶಕ್ತಿಸಮುದ್ಭವಃ=ಕ್ರಿಯಾಶಕ್ತಿಯ ಉತ್ಪತ್ತಿಯು, ಪಂಚಧಾ=ಈ ಪೂರ್ವಶ್ಲೋಕದಲ್ಲಿ ಹೇಳಿದ ಪರಾಶಕ್ತಿ, ಆದಿಶಕ್ತಿ, ಇಚ್ಛಾಶಕ್ತಿ, ಜ್ಞಾನಶಕ್ತಿ, ಕ್ರಿಯಾಶಕ್ತಿಯೆಂದು ಅಯಿದು

ಪ್ರಕಾರವಾದಂಥ, ಏಷಾಶಕ್ತಿರ್ವೈ=ಪರಮೇಶ್ವರನ ಆ ಈ ಚಿಂತಾಶಕ್ತಿಯ, ನಿಷ್ಕಲಾಶ್ಚೇತಿ= ನಿಷ್ಕಲೆ ಎಂದು, ಕೀರ್ತಿತಾಃ=ಕೊಂಡಾಡಲುಪಟ್ಟುದು, ಈ ಪಂಚಪ್ರಕಾರದ ನಿಷ್ಕಲಾಶಕ್ತಿಯನುಳ್ಳ ಕಾರಣ ಶಿವತತ್ತ್ವವು ನಿಷ್ಕಲವೆನಿಸಿಕೊಂಬುದು. ॥೩೨॥

ಶ್ಲೋಕ॥ ಶಿವಸೃಷ್ಟಿರಿಯಂ ಪ್ರೋಕ್ತಾ ಶಕ್ತೀನಾಂ ಸೃಷ್ಟಿರುಚ್ಯತೇ ।

ಟೀಕು॥ ಶಿವ=ಶಿವತತ್ತ್ವದ, ಇಯಂ ಸೃಷ್ಟಿಃ=ಈ ಸೃಷ್ಟಿಯು, ಪ್ರೋಕ್ತಾ=ಹೇಳಲ್ಪಟ್ಟುದು, ಶಕ್ತೀನಾಂ=ಪಂಚಪ್ರಕಾರವಾದ ನಿಷ್ಕಲಾ ಶಕ್ತಿಗಳ, ಸೃಷ್ಟಿಃ=ಸೃಜನೆಯು, ಉಚ್ಯತೇ= ನುಡಿಯಲುಪಡುತ್ತಿಹುದು. ॥೩೩॥

ಶ್ಲೋಕ॥ ಯೋಗಿನಾಂ ಚ ಯತೀನಾಂ ಚ ಜ್ಞಾನಿನಾಂ ಮಂತ್ರಿಣಾಂ ತಥಾ ॥
ಧ್ಯಾನಪೂಜಾನಿಮಿತ್ತಾಯ ಸಕಲಂ ನಿಷ್ಕಲಂ ಭವೇತ್ ।

ಟೀಕು॥ ಯೋಗಿನಾಂ ಚ=ಮಂತ್ರಾದಿಯೋಗಂಗಳನುಳ್ಳವರುಗಳ, ಯತೀನಾಂ= ಸಕಲವ್ಯಾಪಾರಂಗಳನಳಿದವರುಗಳ, ಜ್ಞಾನಿನಾಂ=ಮೋಕ್ಷಬುದ್ಧಿಯನುಳ್ಳವರುಗಳ, ತಥಾ=ಹಾಂಗೆ, ಮಂತ್ರಿಣಾಂ=ಶಿವಮಾಂತ್ರಿಕರುಗಳ, ಧ್ಯಾನ=ಧ್ಯಾನಂಗಳಿಗೆಯೂ, ಪೂಜಾ=ಪೂಜೆಗೆಯೂ, ನಿಮಿತ್ತಾಯ=ಕಾರಣವಹುದುಕ್ಕೋಸುಕರ, ನಿಷ್ಕಲಂ= ನಿಷ್ಕಲಬ್ರಹ್ಮವು, ಸಕಲಂ ನಿಷ್ಕಲಂ=ಸಕಲ ನಿಷ್ಕಲವೆಂಬ ದ್ವಿರೂಪವಾದುದು, ಭವೇತ್=ಅಹುದು. ॥೩೪॥

ಶ್ಲೋಕ॥ ತದ್ರೂಪಂ ಹಿ ಸಮಾಸೇನ ಸಾದಾಖ್ಯಮಿತಿಕೀರ್ತಿತಮ್ ॥
ಸಾದಾಖ್ಯಂಪಂಚಧಾಪ್ರೋಕ್ತಂ ತೇಷಾಂಲಕ್ಷಣಮುಚ್ಯತೇ ।

ಟೀಕು॥ ತತ್=ಆ ಸಕಲ ನಿಷ್ಕಲ ಸ್ವರೂಪವಾದ ಸದಾಶಿವನ, ರೂಪಂ ಹಿ=ರೂಪವೆ, ಸಾದಾಖ್ಯಮಿತಿ=ಸಾದಾಖ್ಯತತ್ತ್ವವೆಂದು, ಕೀರ್ತಿತಂ=ಕೀರ್ತಿಸಲುಪಟ್ಟುದು; ಸಾದಾಖ್ಯಂ= ಆ ಸಾದಾಖ್ಯತತ್ತ್ವವು, ಪಂಚಧಾ=ಐದುಪ್ರಕಾರವಾದುದಾಗಿ, ಪ್ರೋಕ್ತಂ=ಹೇಳಲುಪಟ್ಟುದು, ತೇಷಾಂ=ಆ ಪಂಚಸಾದಾಖ್ಯಂಗಳ, ಲಕ್ಷಣಂ=ಲಕ್ಷಣವು, ಸಮಾಸೇನ= ಪರ್ಯಾಯದಿಂದ, ಉಚ್ಯತೇ=ನುಡಿಯಲುಪಡುತ್ತಿಹುದು. ॥೩೫॥

ಶ್ಲೋಕ॥ ಪರಾಶಕ್ತ್ಯಾದಿಶಕ್ತ್ಯೋಶ್ಚ ಸಾದಾಖ್ಯಸ್ಯ ಸಮುದ್ಭವಃ ॥
ಪ್ರಥಮಂ ಶಿವಸಾದಾಖ್ಯಮಮೂರ್ತಂ ತು ದ್ವಿತೀಯಕಮ್ ।
ತೃತೀಯಂ ಮೂರ್ತಸಾದಾಖ್ಯಂ ಚತುರ್ಥಂ ಕರ್ತೃನಾಮಕಮ್ ॥
ಪಞ್ಚಮಂ ಕರ್ಮಸಾದಾಖ್ಯಂ ಪಞ್ಚಸಾದಖ್ಯಮುಚ್ಯತೇ ।

ಟೀಕು॥ ಪರಾಶಕ್ತ್ಯಾದಿಶಕ್ತ್ಯೋಶ್ಚ=ಬಿಂದುನಾದ ಸ್ವರೂಪಂಗಳಾದ ಪರಾಶಕ್ತ್ಯಾದಿ

ಶಕ್ತಿಗಳದೆಸೆಯಿಂದ, ಸಾದಾಖ್ಯಸ್ಯ=ಸಾದಾಖ್ಯತತ್ತ್ವದ, ಸಮುದ್ಭವಃ=ಉದಯವು, ಪ್ರಥಮಂ=ಆದಿಯಾದುದು, ಶಿವಸಾದಾಖ್ಯಂ=ಶಿವಸಾದಾಖ್ಯವು, ಅಮೂರ್ತಂ= ಅಮೂರ್ತಸಾದಾಖ್ಯವಾಯಿತ್ತಾದಡೆ, ದ್ವಿತೀಯಕಂ=ಎರಡನೆಯದು, ತೃತೀಯಂ= ಮೂಱನೆಯದು, ಮೂರ್ತಸಾದಾಖ್ಯಂ=ಮೂರ್ತಸಾದಾಖ್ಯವು, ಕರ್ತೃನಾಮಕಂ=ಕರ್ತೃ ವೆಂಬ ಹೆಸರನುಳ್ಳ ಸಾದಾಖ್ಯವು, ಚತುರ್ಥಂ=ನಾಲ್ಕನೆಯದು, ಪಞ್ಚಮಂ= ಅಯಿದನೆ ಯದು, ಕರ್ಮಸಾದಾಖ್ಯಂ=ಕರ್ಮಸಾದಾಖ್ಯವು, ಪಂಚಸಾದಾಖ್ಯಂ=ಹೀಂಗೆ ಶಿವ ಸಾದಾಖ್ಯ, ಅಮೂರ್ತಸಾದಾಖ್ಯ, ಮೂರ್ತಸಾದಾಖ್ಯ, ಕರ್ತೃಸಾದಾಖ್ಯ, ಕರ್ಮಸಾದಾಖ್ಯ ವೆಂಬ ಪಞ್ಚಸಾದಾಖ್ಯವು, ಉಚ್ಯತೇ=ನುಡಿಯಲುಪಡುತ್ತಿದ್ದುದು. ॥೩೮॥

ಶ್ಲೋಕ॥ ಸದಾಶಿವಸ್ತಥೇಶಶ್ಚ ಬ್ರಹ್ಮೇಶೋ ಈಶ್ವರಃ ಸ್ಮೃತಃ ।
ಈಶಾನಶ್ಚೇತಿ ಪಂಚೈವ ತತ್ತ್ವಭೇದಾಃ ಪ್ರಕೀರ್ತಿತಾಃ ॥

ಟೀಕು॥ ಸದಾಶಿವಃ=ಸದಾಶಿವನು, ಈಶಃ=ಈಶನೆಂದು, ಬ್ರಹ್ಮೇಶಃ=ಬ್ರಹ್ಮೇಶನೆಂದು, ಈಶ್ವರಃ=ಈಶ್ವರನೆಂದು, ಈಶಾನಶ್ಚೇತಿ=ಈಶಾನನೆಂದು ಹೀಂಗೆ ಪ್ರತಿಬಿಂಬ ನಾಮವುಳ್ಳಾತನಾಗಿ, ಸ್ಮೃತಃ=ನೆನೆಯಲುಪಟ್ಟನು. ಪಂಚತತ್ತ್ವಭೇದಾಶ್ಚೈವ=ಈ ಪಂಚತತ್ತ್ವ ಭೇದಂಗಳೆ, ಪ್ರಕೀರ್ತಿತಾಃ=ವಿಶೇಷಿಸಿಕೊಳ್ಳಲುಪಟ್ಟುದು. ॥೩೯॥

ಶ್ಲೋಕ॥ ಶಿವಂ ಸದಾಶಿವೋಜ್ಞೇಯಾಮೂರ್ತಂ ಚೇಶ ಉಚ್ಯತೇ ॥

ಮೂರ್ತಂ ಬ್ರಹ್ಮೇತಿವಿಜ್ಞೇಯಃ ಕರ್ತೃಚೈವೇಶ್ವರಃ ಸ್ಮೃತಃ ।
ಕರ್ಮೇಶಾನ ಇತಿಪ್ರೋಕ್ತೋ ಇತ್ಯೇವಂ ಹಿ ದ್ವಿಧಾಸ್ಮೃತಃ ॥

ಟೀಕು॥ ಶಿವಂ=ನಿಷ್ಕಲವಾದ ಶಿವತತ್ತ್ವವು ತಾನೆ ಶಿವಸಾದಾಖ್ಯವೆನಿಸಿಕೊಂಬುದು, ಶಿವಂ=ಆಶಿವಸಾದಾಖ್ಯವು, ಸದಾಶಿವಃ=ಸದಾಶಿವನೆಂದು, ಜ್ಞೇಯಂ=ಅಱಿಯ ಬೇಕಾದುದು, ಈಶಃ=ಈಶನು, ಅಮೂರ್ತಂ ಚ=ಅಮೂರ್ತ ಸಾದಾಖ್ಯವೆಂದು, ಉಚ್ಯತೇ=ನುಡಿಯಲುಪಡುತ್ತಿಹನು, ಮೂರ್ತಂ=ಮೂರ್ತಸಾದಾಖ್ಯತತ್ತ್ವವು, ಬ್ರಹ್ಮೇತಿ=ಬ್ರಹ್ಮೇಶನೆಂದು, ಜ್ಞೇಯಃ=ಅಱಿಯಬೇಕಾದುದು, ಈಶ್ವರಃ=ಈಶ್ವರನು, ಕರ್ತೃಶ್ಚೈವ=ಕರ್ತೃ ಸಾದಾಖ್ಯವೇ ಆಗಿ, ಸ್ಮೃತಃ=ನೆನೆಯಲುಪಟ್ಟನು. ॥೪೧॥

ಶ್ಲೋಕ॥ ಪರಾತ್ಪರತರಂ ಚೈವ ಸೂಕ್ಷ್ಮತ ಸೂಕ್ಷ್ಮಮೇವ ಚ ।
ಸ್ಥೂಲಂ ಚೈವ ಕ್ರಮೇಣೈವ ಶಿವಾದಿಪರಿಲಕ್ಷ್ಯತೇ ॥

ಟೀಕು॥ ಪರಾತ್=ಪರವಹಂಥಾವಸ್ತುಗಳಿಂದವು, ಪರತರಂ=ಪರತರವಾದಂಥಾ, ಸೂಕ್ಷ್ಮತಃ=ಸೂಕ್ಷ್ಮವಾದಂಥಾ ವಸ್ತುವಿನಿಂದವು, ಸೂಕ್ಷ್ಮಮೇವ ಚ=ಸೂಕ್ಷ್ಮತತ್ತ್ವವೆಂದು, ಸ್ಥೂಲಂ=ಸ್ಥೂಲವಸ್ತುಗಳಿಂದವು, ಸ್ಥೂಲತರವಹ ತತ್ತ್ವವೆಂದೆ, ಕ್ರಮೇಣೈವ=ತಱು

ವಾಯಿಂದವು, ಶಿವಾದಿ=ಶಿವತತ್ತ್ವ, ಸದಾಶಿವತತ್ತ್ವ ಮಹೇಶ್ವರತತ್ತ್ವಂಗಳೆಂಬ ತ್ರಿತತ್ತ್ವವು, ಪರಿಲಕ್ಷ್ಯತೇ=ಕುಱುಹುಗೊಳಲುಪಡುತ್ತಿಹುದು, ಅಸ್ಮಿನ್ ಅರ್ಥೇ=ಈ ಅರ್ಥದಲ್ಲಿ, ಬ್ರಹ್ಮೋವಾಚ=ಬ್ರಹ್ಮನುಡಿದನು. ॥೪೨॥

ಶ್ಲೋಕ॥ ತದೀಯಂ ತ್ರಿವಿಧಂ ರೂಪಂ ಸ್ಥೂಲಂ ಸೂಕ್ಷ್ಮಂ ತತಃ ಪರಮ್ ।
ಅಸ್ಮದಾದ್ಯಮರ್ಯೈರ್ದೃಶ್ಯಂ ಸ್ಥೂಲಂ ಸೂಕ್ಷ್ಮಂ ಚ ಯೋಗಿಭಿಃ ॥

ಟೀಕು॥ ತದೀಯಂ=ಆ ಶಿವಸಂಬಂಧವಾದ ಸ್ವರೂಪವು, ತ್ರಿವಿಧಂ=ಮೂಱುಪ್ರಕಾರವಾಗಿಹುದು, ಸ್ಥೂಲಂ=ಸ್ಥೂಲತತ್ತ್ವವೆಂದು, ಸೂಕ್ಷ್ಮಂ=ಸೂಕ್ಷ್ಮತತ್ತ್ವವೆಂದು, ಪರಂ=ಪರಾತ್ಪರತತ್ತ್ವವೆಂದು, ಅಸ್ಮದಾದ್ಯಮರ್ಯೈಃ=ಬ್ರಹ್ಮಮೊದಲಾದ ದೇವತೆಗಳಿಂದ, ಸ್ಥೂಲಂ=ಸ್ಥೂಲತತ್ತ್ವರೂಪವು, ದೃಶ್ಯಂ=ಕಾಣಲುತಕ್ಕುದು. ಯೋಗಿಭಿಃ=ಯೋಗೀಶ್ವರರುಗಳಿಂದ, ಸೂಕ್ಷ್ಮಂ ಚ=ಸೂಕ್ಷ್ಮತತ್ತ್ವವು ಕಾಣಲುತಕ್ಕುದು. ॥೪೩॥

ಶ್ಲೋಕ॥ ತತಃ ಪರಂ ತು ಯನ್ನಿತ್ಯಂ ಜ್ಞಾನಮಾನಂದಮವ್ಯಯಮ್ ।
ತನ್ನಿಷ್ಠೈಸ್ತತ್ಪರೈರ್ಭಕ್ತೈಃ ದೃಶ್ಯಂ ತದ್ರೂಪಮಾಸ್ತಿಕೈಃ ॥

ಟೀಕು॥ ಯತ್=ಆವುದಾನೊಂದು, ಪರಂ ತು=ಪರತತ್ತ್ವವಾಯಿತ್ತಾದಡೆ, ನಿತ್ಯಂ=ನಿತ್ಯವಾದಂಥಾ, ಜ್ಞಾನಂ=ಜ್ಞಾನಸ್ವರೂಪವಾದುದು, ಆನಂದಂ=ಸುಖಮಯವಾಗಿದ್ದುದು, ಅವ್ಯಯಂ=ಅವ್ಯಯವಾದ ತತ್ತ್ವವು, ತತ್=ಆ ಪರತತ್ತ್ವದಲ್ಲಿ, ನಿಷ್ಠೈಃ=ನಿಷ್ಠೆಯುಳ್ಳವರುಗಳಾಗಿ, ತತ್=ಆ ಪರಶಿವತತ್ತ್ವದಲ್ಲಿಯೇ, ಪರೈಃ=ಎರಕವುಳ್ಳವರುಗಳಾಗಿ, ವ್ರತಮಾಸ್ತಿಕೈಃ=ಆಸ್ತಿಕ್ಯ ಬುದ್ಧಿಯುಳ್ಳವರಾದ, ಭಕ್ತೈಃ=ಷಟ್‌ಸ್ಥಲಬ್ರಹ್ಮಿಗಳಿಂದ, ತತ್=ಆ ಪರತತ್ತ್ವವು, ದೃಶ್ಯಂ=ಕಾಣಲುತಕ್ಕುದು. ॥೪೪॥

ಶ್ಲೋಕ॥ ಏತೇಷು ಪಂಚತತ್ತ್ವೇಷು ವಿಶೇಷಸ್ತ್ವಧುನೋಚ್ಯತೇ ।
ತತ್ತ್ವಮೂರ್ತಿ ಪ್ರಭಾವೇತಿ ತ್ರಿಭೇದಂ ವಿಂದ್ಯತೇ ಕ್ರಮಾತ್ ॥

ಟೀಕು॥ ಏತೇಷು ಪಂಚತತ್ತ್ವೇಷು=ಈ ಪಂಚತತ್ತ್ವಂಗಳಲ್ಲಿ, ಅಧುನಾ–ಈಗಲೂ ವಿಶೇಷಂ=ವಿಶೇಷವು, ಉಚ್ಯತೇ=ನುಡಿಯಲುಪಡುತ್ತಿಹುದು, ತತ್ತ್ವಮೂರ್ತಿ ಪ್ರಭಾವೇತಿ=ತತ್ತ್ವಮೂರ್ತಿ ಪ್ರಭಾವವೆಂದು, ಕ್ರಮೇಣ=ತಱುವಾಯದಿಂದ, ತ್ರಿಭೇದಂ= ಮೂಱುಭೇದವು, ವಿಂದ್ಯತೇ=ಅಱಿಯಲುಪಡುತ್ತಿಹುದು. ॥೪೫॥

ಶ್ಲೋಕ॥ ಶಿವಶ್ಚ ತತ್ತ್ವಮಿತ್ಯುಕ್ತಂ ಮೂರ್ತಿಶ್ಚೈವ ಸದಾಶಿವಃ ।
ತಯೋರ್ಯೋಗೇನ ಭಾವೇನ ತದ್ರೂಪಂ ಭಾವಮುಚ್ಯತೇ ॥

ಭಾವಂ ಸಾದಾಖ್ಯಮಿತ್ಯುಕ್ತಮಿತ್ಯೇವಂ ಪರಿಕಲ್ಪಿತಮ್ ।

ಟೀಕು॥ ಶಿವಶ್ಚ=ನಿಷ್ಕಲತತ್ತ್ವವಾದ ಶಿವತತ್ತ್ವವು, ತತ್ತ್ವಮಿತ್ಯುಕ್ತಂ=ತತ್ತ್ವವೆಂದು ನುಡಿಯಲುಪಟ್ಟುದು, ಸದಾಶಿವಃ=ಸದಾಶಿವನು, ಮೂರ್ತಿಃ=ಮೂರ್ತಿ ಎಂದು, ಉಕ್ತಃ ನುಡಿಯಲುಪಟ್ಟನು, ತಯೋಃ=ಆ ಶಿವತತ್ತ್ವ ಸದಾಶಿವತತ್ತ್ವಂಗಳ ಯೋಗೇನ= ಕೂಟವಹ, ಭಾವೇನ=ಭಾವದಿಂದ, ತತ್=ಆ ಶಿವ ಸದಾಶಿವತತ್ತ್ವಂಗಳ, ರೂಪಂ= ಸ್ವರೂಪವು, ಭಾವಂ=ಭಾವವೆಂದು, ಉಚ್ಯತೇ=ನುಡಿಯಲುಪಡುತ್ತಿಹುದು, ಭಾವಂ=ಆ ಭಾವತತ್ತ್ವವೇ, ಸಾದಾಖ್ಯಮಿತ್ಯುಕ್ತಂ=ಸಾದಾಖ್ಯತತ್ತ್ವವೆಂದು ನುಡಿಯಲುಪಟ್ಟುದು, ಇತ್ಯೇವಂ=ಈ ಪ್ರಕಾರದಿಂದ, ಪರಿಕಲ್ಪಿತಂ=ಮೂಱಾಗಿ ಕಲ್ಪಿಸಲ್ಪಟ್ಟುದು. ॥೪೭॥

ಶ್ಲೋಕ॥ ನಿಷ್ಕಲಂ ತತ್ತ್ವಮಿತ್ಯುಕ್ತಂ ಸಕಲಂ ಮೂರ್ತಿರುಚ್ಯತೇ ।
ಸಕಲಂ ನಿಷ್ಕಲಂ ಚೈವ ಪ್ರಭಾವಮಿತಿ ಕೀರ್ತಿತಮ್ ॥ ॥೪೮॥

ಟೀಕು॥ ನಿಷ್ಕಲಂ=ನಿಷ್ಕಲತತ್ತ್ವವಾದ ಆ ಸದಾಶಿವನ ನಿಷ್ಕಲತತ್ತ್ವವು, ತತ್ತ್ವಮಿತ್ಯುಕ್ತಂ= ತತ್ತ್ವವೆಂದು, ಉಚ್ಯತೇ=ನುಡಿಯಲುಪಟ್ಟುದು, ಸಕಲಂ=ಸಕಲ ಸ್ವರೂಪವು, ಮೂರ್ತಿಃ=ಮೂರ್ತಿ ಎಂದು, ಉಚ್ಯತೇ=ನುಡಿಯಲುಪಡುತ್ತಿಹುದು, ಸಕಲಂ=ಸಕಲವು, ನಿಷ್ಕಲಂ ಚೈವ=ನಿಷ್ಕಲವೆಂಬ ಎರಡೂ, ಪ್ರಭಾವಮಿತಿ=ಪ್ರಭಾವವೆಂದುಂ, ಕೀರ್ತಿತಂ= ಕೀರ್ತಿಸಲುಪಟ್ಟುದು.

ಶ್ಲೋಕ॥ ದೇಹೀ ನಿಷ್ಕಲಮಿತ್ಯುಕ್ತಂ ದೇಹಂ ಸಕಲಮುಚ್ಯತೇ ।
ದೇಹೀ ದೇಹಸ್ಯ ಸಂಬಂಧಮೇವ ರೂಪಮಿತಿ ಸ್ಮೃತಮ್ ॥

ಟೀಕು॥ ದೇಹೀ=ನಾದ ಸ್ವರೂಪವಾದ ಶಿವತತ್ತ್ವವು, ನಿಷ್ಕಲಮಿತ್ಯುಕ್ತಂ=ನಿಷ್ಕಲತತ್ತ್ವವೆಂದು ನುಡಿಯಲುಪಟ್ಟುದು, ದೇಹಂ=ದೇಹ ಸ್ವರೂಪವಾದ ಸಮಸ್ತ ವರ್ಣವು, ಸಕಲಂ=ಸಕಲ ತತ್ತ್ವವೆಂದು, ಉಚ್ಯತೇ=ನುಡಿಯಲುಪಡುತ್ತಿಹುದು. ದೇಹೀ=ನಾದಸ್ವರೂಪವಾದ ಶಿವತತ್ತ್ವಕ್ಕೆ, ದೇಹಸ್ಯ=ಸಕಲಸ್ವರೂಪವಾದ, ಸಂಬಂಧಮೇವ=ಸಂಬಂಧವೆ, ರೂಪಮಿತಿ= ಸ್ವರೂಪವೆಂದು, ಸ್ಮೃತಂ=ನೆನೆಯಲುಪಟ್ಟುದು. ಈ ಪ್ರಕಾರ ಸದಾಶಿವತತ್ತ್ವ ಸಕಲನಿಷ್ಕಲ ಸ್ವರೂಪವು ವಿವರಿಸಲ್ಪಟ್ಟುದು. ॥೪೯॥

ಶ್ಲೋಕ॥ ಸರ್ವೇಷಾಂ ಧ್ಯಾನಪೂಜಾರ್ಥಂ ಸಕಲಂ ನಿಷ್ಕಲಂ ಭವೇತ್ ।
ಏವಂ ತತ್ತ್ವವಿಶೇಷೇಣ ಸರ್ವಂ ಕರ್ಮ ಸಮಾಚರೇತ್ ॥

ಟೀಕು॥ ಸರ್ವೇಷಾಂ=ಸಮಸ್ತವಾದವರುಗಳ, ಧ್ಯಾನಪೂಜಾರ್ಥಂ= ಧ್ಯಾನಪೂಜೆಗಳಿ ಗೋಸ್ಕರ, ಸಕಲನಿಷ್ಕಲಂ=ಆ ಪರಶಿವತತ್ತ್ವವು ಸಕಲ ನಿಷ್ಕಲರೂಪವು ಭವೇತ್=ಅಹುದು, ಏವಂ=ಈ ಪ್ರಕಾರವು, ತತ್ತ್ವ=ತತ್ತ್ವಂಗಳ, ವಿಶೇಷೇಣ= ವಿಶೇಷದಿಂದ, ಸರ್ವಕರ್ಮ= ಸಮಸ್ತಕ್ರಿಯೆಯನ್ನು, ಸಮಾಚರೇತ್=ಆಚರಿಸುವುದು. ॥೫೦॥

ಶ್ಲೋಕ॥ ಪಂಚಸಾದಾಖ್ಯ ತತ್ತ್ವಾನಾಮುದ್ಭವಂ ಹಿ ಪೃಥಕ್ಪೃಥಕ್ ।
ತೇಷಾಂ ರೂಪಂ ಚ ವರ್ಣಂ ಚ ಸಮಾಸಾಚ್ಛೃಣು ಷಣ್ಮುಖ ॥

ಟೀಕು॥ ಪಂಞ್ಚಸಾದಾಖ್ಯ ತತ್ತ್ವಾನಾಂ=ಶಿವಮೊದಲಾದ ಪಂಚಸಾದಾಖ್ಯ ತತ್ತ್ವಂಗಳ ಉದ್ಭವಂ ಹಿ=ಉತ್ಪತ್ತಿಯನು, ತೇಷಾಂ=ಆ ಸಾದಾಖ್ಯತತ್ತ್ವಂಗಳ, ರೂಪಂ ಚ=ಸ್ವರೂಪವನು, ವರ್ಣಂ ಚ=ವರ್ಣವನು, ಪೃಥಕ್ಪೃಥಕ್=ಬೇಱೆ ಬೇಱೆ, ಸಮಾಸಾತ್=ಪರ್ಯಾಯದಿಂದ, ಭೋ ಷಣ್ಮುಖ=ಎಲೆ ಷಡಾನನನೆ!, ಶೃಣು=ಕೇಳು. ॥೫೧॥

ಶ್ಲೋಕ॥ ಶಾನ್ತ್ಯತೀತಾಪರಾಶಕ್ತಿಸ್ತಸ್ಯಾಃ ಪರ್ಯಾಯವಾಚಕಃ ।
ಪರಾಶಕ್ತೇಃ ದಶಾಂಶೇನ ಶಿವಸಾದಾಖ್ಯಮುದ್ಭವಮ್ ॥

ಟೀಕು॥ ಪರಾಶಕ್ತಿಃ=ಪರಾಶಕ್ತಿ ಎಂಬ ನಿಷ್ಕಲ ಶಕ್ತಿಯೆ, ಶಾಂತ್ಯತೀತಾ=ಶಾಂತ್ಯತೀತವೆಂಬ ಕಲೆಯೆನಿಸಿಕೊಂಬುದು, ತಸ್ಯಾಃ ಪರ್ಯಾಯವಾಚಕಃ=ಆ ಶಾಂತ್ಯತೀತಾ ಎಂಬ ಕಲಾನಾಮವು ಆ ಪರಾಶಕ್ತಿಯ ಪರ್ಯಾಯವಾಚಕವು; ಪರಾಶಕ್ತೇಃ ದಶಾಂಶೇನ=ಆ ಪರಾಶಕ್ತಿಯ ಹತ್ತರೊಂದಂಶದಿಂದ, ಶಿವಸಾದಾಖ್ಯಂ=ಶಿವಸಾದಾಖ್ಯವು, ಉದ್ಭವಂ=ಪ್ರಾದುರ್ಭೂತವಾಯಿತ್ತು. ॥೫೨॥

ಶ್ಲೋಕ॥ ಪರಾಶಕ್ತ್ಯುದ್ಭವತ್ವಾಚ್ಚ ಶುದ್ಧತ್ವಾಚ್ಛಿವಮುಚ್ಯತೇ ।
ಪ್ರಸಾದಂ ಸೂಕ್ಷ್ಮರೂಪಂ ಚ ಜ್ಯೋತಿರೂಪಮಿತಿ ಸ್ಮೃತಮ್ ॥

ವಿದ್ಯುದ್ರೂಪಮಿವಾಕಾಶೇ ಪ್ರತ್ಯಕ್ಷಂ ಸರ್ವತೋಮುಖಮ್ ।
ಶಿವತತ್ತ್ವಮಿದಂ ಪ್ರೋಕ್ತಂ ತತ್ತ್ವಾನಾಮಖಿಲಾಲಯಮ್ ॥

ಟೀಕು॥ ಪರಾಶಕ್ತ್ಯುದ್ಭವತ್ವಾಚ್ಚ=ನಿಷ್ಕಲೆಯೆನಿಸಿಪ್ಪ ಪರಾಶಕ್ತಿಯತೋಱಿಕೆಯಪ್ಪಕಲಾಭಾವದದೆಸೆಯಿಂದ, ಶುದ್ಧತತ್ತ್ವಾತ್=ಶುದ್ಧತತ್ತ್ವವಹದೆಸೆಯಿಂದಲೂ, ಶಿವಂ=ಶಿವಸಾದಾಖ್ಯತತ್ತ್ವವೆಂದು, ಉಚ್ಯತೇ=ನುಡಿಯಲುಪಡುತ್ತಿಹುದು. ಪ್ರಸಾದಂ=ಶುದ್ಧಪ್ರಸಾದ ಮಂತ್ರಮಯವಪ್ಪ, ಶಿವತತ್ತ್ವವು, ಸೂಕ್ಷ್ಮರೂಪಂಚ=ಆಕಾಶವ ಮೀಱಿತೋಱುವ ಸ್ವರೂಪವಪ್ಪುದಾಗಿಯೂ, ಜ್ಯೋತಿರೂಪಮಿತಿಸ್ಮೃತಂ= ತೇಜೋರೂಪವಾದುದಾಗಿ ನೆನೆಯಲುಪಟ್ಟುದು, ಕಥಮಿವ=ಅದು ಹೇಂಗಯಾಯೆಂದಡೆ, ಆಕಾಶೇ=ಆಕಾಶದಲ್ಲಿಯ ಮೇಘಸಮೂಹದಲ್ಲಿ, ವಿದ್ಯುದ್ರೂಪಮಿವ=ಮಿಂಚಿನ ಸ್ವರೂಪವು ಹೇಂಗೆ ತೋಱುತ್ತಿಹುದು, ಹಾಂಗೆ ಸರ್ವತೋಮುಖಂ=ಎಲ್ಲಾ ಸಮೂಹಂಗಳ ವಾಙ್ಮನೋ ಭಾವಂಗಳಲ್ಲಿ, ತೋಱಿಯಡಗುತ್ತ ಅಡಗಿ ತೋಱುತ್ತವು ಎಲ್ಲಾ ಕಡೆಯಲ್ಲೂ ತಾನೆಯಾಗಿ, ಪ್ರತ್ಯಕ್ಷಂ=ಪ್ರತ್ಯಕ್ಷವಾದುದು ಆವುದಾನೊಂದೊಂದು, ತದಿದಂ=ಆ ಈ ಪ್ರಸಾದ ಮಾತ್ರವು,

ತತ್ತ್ವಾನಾಂ=ಮಹದಾದಿತತ್ತ್ವಂಗಳ, ಅಖಿಲ=ಸಮಸ್ತಕ್ಕೆಯೂ, ಆಲಯಂ=ಆಸ್ಪದವಾದ, ಶಿವತತ್ತ್ವಂ=ಶಿವತತ್ತ್ವವೆಂದು, ಪ್ರೋಕ್ತಂ=ಹೇಳಲುಪಟ್ಟುದು. ॥೫೪॥

ಶ್ಲೋಕ॥ **ಶಿವಸಾದಾಖ್ಯಮಿತ್ಯುಕ್ತ ಮಮೂರ್ತಂ ತು ತತಃಶೃಣು ।**

ಟೀಕು॥ ಇತಿ=ಈ ಪ್ರಕಾರದಿಂದ, ಶಿವಸಾದಾಖ್ಯಂ=ಶಿವಸಾದಾಖ್ಯವು, ಉಕ್ತಂ=ನುಡಿಯಲುಪಟ್ಟುದು, ಅಮೂರ್ತಂ=ಅಮೂರ್ತಸಾದಾಖ್ಯವನಾದಡೆ, ತತಃ= ಆ ಈ ಶಿವಸಾದಾಖ್ಯ ತತ್ತ್ವದಿಂದ ಮೇಲೆ, ಶೃಣು=ಕೇಳು. ॥೫೫॥

ಶ್ಲೋಕ॥ **ಶಾಂತಿಶ್ಚೈವಾದಿಶಕ್ತಿಶ್ಚ ತಸ್ಯಾಃ ಪರ್ಯಾಯವಾಚಕಃ ।**
ಆದಿಶಕ್ತೇರ್ದಶಾಂಶೇನ ಅಮೂರ್ತಂ ಚ ಸಮುದ್ಭವಮ್ ॥

ಟೀಕು॥ ಆದಿಶಕ್ತಿಶ್ಚ=ನಿಃಕಲಾಶಕ್ತಿಯಪ್ಪ ಆದಿಶಕ್ತಿಯೆ, ಶಾಂತಿಶ್ಚೈವ=ಶಾಂತಿಕಲೆಯೆನಿಸಿಕೊಂಡಿತ್ತು, ಆ ಶಾಂತಿಕಲಾನಾಮವು, ತಸ್ಯಾಃ-ಪರ್ಯಾಯವಾಚಕಃ=ಆ ಆದಿಶಕ್ತಿಯ ಪರ್ಯಾಯನಾಮವ ಹೇಳುವುದು, ಆದಿಶಕ್ತೇರ್ದಶಾಂಶೇನ=ಆ ಆದಿಶಕ್ತಿಯ ಹತ್ತರಲ್ಲೊಂದಂಶದಿಂದ, ಅಮೂರ್ತಸ್ಯ=ಅಮೂರ್ತ ಸಾದಾಖ್ಯದ, ಸಮುದ್ಭವಂಹಿ=ಪ್ರಾದುರ್ಭಾವವಾಯಿತ್ತು. ॥೫೬॥

ಶ್ಲೋಕ॥ **ಆದಿಶಕ್ತೇರಮೂರ್ತತ್ವಾದಮೂರ್ತಂ ಚೇತಿ ಕೀರ್ತಿತಮ್।**

ಟೀಕು॥ ಆದಿಶಕ್ತೇಃ=ಆ ಶಿವತತ್ತ್ವದ ಆದಿಶಕ್ತಿಯ, ಅಮೂರ್ತತ್ವಾತ್=ಮೂರ್ತವಲ್ಲದತನದಿಂದ, ಅಮೂರ್ತಂ ಚೇತಿ=ಅಮೂರ್ತವೆಂದೆ, ಕೀರ್ತಿತಂ=ಕೀರ್ತಿಸಲುಪಟ್ಟುದು.

ಶ್ಲೋಕ॥ **ಅಮೂರ್ತತ್ವಾತ್ಕಲಾಹೀನಂ ತದ್ರೂಪಂ ಲಿಂಗಮುದ್ಭವಮ್ ।**
ಸೂರ್ಯಕೋಟಿ ಪ್ರತೀಕಾಶಂ ಜ್ಯೋತಿಸ್ತಂಭಾಕೃತಿಸ್ಥಿತಮ್ ॥

ಟೀಕು॥ ಅಮೂರ್ತತ್ವಾತ್=ಮೂರ್ತಿಯನಿಲ್ಲದತನದಿಂದ ಮೂರ್ತಿಸಾದಾಖ್ಯವು, ಕಲಾಹೀನಂ=ಆ ಶಾಂತಿಕಲೆ ಸಮೇತವಾಗಿಯೂ ಕಲೆಯಿಲ್ಲದುದಾಗಿಹುದು. ಆ ಈ ಅಮೂರ್ತಸಾದಾಖ್ಯದ, ರೂಪಂ=ಸ್ವರೂಪವು, ಲಿಂಗಂ=ಲಿಂಗವಾಗಿ, ಉದ್ಭವಂ=ಪ್ರಾದುರ್ಭಾವವಾಯಿತ್ತು, ಸೂರ್ಯಕೋಟಿಪ್ರತೀಕಾಶಂ=ಆ ಲಿಂಗವೇ ಕೋಟಿಸೂರ್ಯರ ಹೋಲುವಂಥ, ಜ್ಯೋತಿ ಸ್ತಂಭಾಕೃತಿಂ=ಜ್ಯೋತಿಸ್ಸಿನ ಸ್ತಂಭದ ಆಕಾರವಾಗಿ, ಸ್ಥಿತಂ=ಇದ್ದಿತ್ತು. ॥೫೮॥

ಶ್ಲೋಕ॥ **ತಸ್ಯಾಭ್ಯಂತರ್ಗತಾಮೂರ್ತಿರಮೂರ್ತತ್ವಾದಗೋಚರಮ್ ।**
ಏತದ್ವೈದಿವ್ಯಲಿಂಙ್ಗಂ ತು ಮೂಲಸ್ತಂಭಮಿಹೋಚ್ಯತೇ ॥

ಟೀಕು॥ ತಸ್ಯ=ಆ ಶಿವಲಿಂಗದ, ಅಭ್ಯಂತರ್ಗತಾ=ಒಳಗಿಹಂಥಾ, ಮೂರ್ತಿಃ=ಘೃತಕಾಠಿಣ್ಯದಂತಪ್ಪ ಶಿವಮೂರ್ತಿಯು, ಅಮೂರ್ತತ್ವಾತ್=ವ್ಯೋಮಾದಿ ಸಂಭೂತವಾದ ಮೂರ್ತಿಯಲ್ಲಿಹತನದಿಂದ, ಅಗೋಚರ=ಅಗೋಚರವೆನಿಸಿಕೊಂಬುದು, ಏತದ್ವೈ=ಅಗೋಚರವಾದ, ದಿವ್ಯಲಿಂಗಂ=ತೇಜೋಲಿಂಗವಾಯಿತ್ತಾದಡೆ, ಇಹ=ಈ ಪಂಚಸಾದಾಖ್ಯನಿರೂಪಣದಲ್ಲಿ, ಮೂಲಸ್ತಂಭಂ=ಸರ್ವಕ್ರಿಯಾ ಆದಿಸ್ತಂಭವೆಂದು, ಉಚ್ಯತೇ=ನುಡಿಯಲುಪಡುತ್ತಿಹುದು. ॥೫೯॥

ಶ್ಲೋಕ॥ ಲಿಂಗಾತ್ಸರ್ವಂ ಸಮುತ್ಪನ್ನಂ ಲಯಂ ತಸ್ಮಿನ್ ಪ್ರಕೀರ್ತಿತಮ್ ।
ಅಮೂರ್ತಮೇವಮಾಖ್ಯಾತಂ ಸಮೂರ್ತಂ ತು ತತಃ ಶೃಣು ॥

ಟೀಕು॥ ಲಿಂಗಾತ್=ಜ್ಯೋತಿರ್ಲಿಂಗದದೆಸೆಯಿಂದ, ಸರ್ವಂ=ಸಮಸ್ತಪ್ರಪಂಚು, ಸಮುತ್ಪನ್ನಂ=ಹುಟ್ಟಿಹುದುದೆಂದು, ತಸ್ಮಿನ್=ಮೂಲಸ್ತಂಭಲಿಂಗದಲ್ಲಿಯೇ, ಲಯಂ=ಅಡಗುವುದೆಂದು, ಪ್ರಕೀರ್ತಿತಂ=ಲೇಸಾಗಿ ಕೀರ್ತಿಸಲುಪಟ್ಟುದು, ಏವಂ=ಈ ಪ್ರಕಾರವು, ಅಮೂರ್ತಂ=ಅಮೂರ್ತಸಾದಾಖ್ಯವು, ಆಖ್ಯಾತಂ=ಹೇಳಲುಪಟ್ಟುದು, ತತಃ=ಆ ಈ ಅಮೂರ್ತಸಾದಾಖ್ಯನಿರೂಪದ ತಱುವಾಯವು, ಸಮೂರ್ತಂ ತು=ಸಮೂರ್ತಸಾದಾಖ್ಯವನಾಯಿತ್ತಾದಡೆ, ಶೃಣು=ಕೇಳು. ॥೬೦॥

ಶ್ಲೋಕ॥ ಇಚ್ಛಾಶಕ್ತಿಶ್ಚ ವಿದ್ಯಾ ಚ ತಸ್ಯಾಃ ಪರ್ಯಾಯವಾಚಕಃ ।
ತಚ್ಛಕ್ತೇಸ್ತು ದಶಾಂಶೇನ ಮೂರ್ತಸಾದಾಖ್ಯಮುದ್ಭವಮ್ ॥

ಟೀಕು॥ ಇಚ್ಛಾಶಕ್ತಿಶ್ಚ=ಶಿವನ ನಿಷ್ಕಲೆಯೆನಿಸಿಪ್ಪ ಇಚ್ಛಾಶಕ್ತಿಯು, ವಿದ್ಯಾ ಚ=ವಿದ್ಯಾಕಲೆ ಎಂಬ ನಾಮವ ಪಡೆದಿಪ್ಪುದು, ತಸ್ಯಾಃ ಪರ್ಯಾಯ ವಾಚಕಃ=ಆ ವಿದ್ಯಾಕಲಾಹ್ವಯವು ಆ ಇಚ್ಛಾಶಕ್ತಿಯ ಪರ್ಯಾಯವಾಚಕವು, ತಚ್ಛಕ್ತೇಸ್ತು=ಆ ಇಚ್ಛಾಶಕ್ತಿಯ, ದಶಾಂಶೇನ=ದಶಾಂಶದಿಂದ, ಮೂರ್ತಸಾದಾಖ್ಯಮುದ್ಭವಂ=ಮೂರ್ತಸಾದಾಖ್ಯವು ಆವಿರ್ಭೂತವಾಯಿತ್ತು. ॥೬೧॥

ಶ್ಲೋಕ॥ ಇಚ್ಛಾಶಕ್ತೇಃ ಗುಣತ್ವಾಚ್ಚ ತಸ್ಮಾನ್ಮೂರ್ತಮುದಾಹೃತಮ್ ।
ಮೂರ್ತತ್ವಾಚ್ಚ ಕಲಾಯುಕ್ತಂ ರೂಪಂ ಚೇತಿ ಪ್ರಕೀರ್ತಿತಮ್ ॥

ಜ್ವಾಲಾಗ್ನಿಸದೃಶಪ್ರಖ್ಯಾ ದಿವ್ಯಲಿಂಗಾಕೃತಿರ್ಭವೇತ್ ।

ಟೀಕು॥ ಇಚ್ಛಾಶಕ್ತೇಃ=ಇಚ್ಛಾಶಕ್ತಿಯ, ಗುಣತ್ವಾಚ್ಚ=ಗುಣವಾದ, ತಸ್ಮಾತ್=ಅದು ಕಾರಣದ ದೆಸೆಯಿಂದ, ಮೂರ್ತಂ=ಮೂರ್ತಿಯನುಳ್ಳದೆಂದು, ಉದಾಹೃತಂ=ಉದಾಹರಿಸಲುಪಟ್ಟುದು, ಮೂರ್ತತ್ವಾಚ್ಚ=ಮೂರ್ತಿಯನುಳ್ಳತನದಿಂದ, ಕಲಾಯುಕ್ತಂ=ವಿದ್ಯಾಕಲೆ

ಯೊಡನೆ ಕೂಡಿ, ರೂಪಂಚೇತಿ=ರೂಪವೆಂದು, ಪ್ರಕೀರ್ತಿತಂ=ಲೇಸಾಗಿ ಕೀರ್ತಿಸಲು ಪಟ್ಟುದು, ತದ್ರೂಪಂ=ಆ ವಿದ್ಯಾಕಲಾಸಮೇತವಾದ ಸ್ವರೂಪವು, ಜ್ವಾಲಾಗ್ನಿಸದೃಶ ಪ್ರಖ್ಯಾ=ಉರಿವಗ್ನಿಯೊಡನೆ ಸಮವಾದ ಹೋಲಿಕೆಯನುಳ್ಳ, ದಿವ್ಯಲಿಂಗಾಕೃತಿಃ=ದೀಪ್ತಿ ಮಯವಾದ ಶಿವಲಿಂಗಾಕಾರವು, ಭವೇತ್=ಅಹುದು. ॥೬೩॥

ಶ್ಲೋಕ॥ ತಸ್ಯಾರ್ಧಾರ್ಧೈಕಭಾಗೇ ತು ಏಕವಕ್ತ್ರಸಮನ್ವಿತಮ್ ।
ತ್ರಿಣೇತ್ರಂ ಚಾರುವದನಂ ಸರ್ವಾವಯವಸಂಯುತಮ್ ॥
ಏಕಮೇವಾನನೋಪೇತಂ ದಿವ್ಯಲಿಂಗಾಕೃತಿರ್ಭವೇತ್ ।

ಟೀಕು॥ ತಸ್ಯ=ಆ ಶಿವಲಿಂಗದ, ಅರ್ಧಾರ್ಧೈಕಭಾಗೇ ತು=ಚತುರಾಂಶದಲ್ಲಿ, ಏಕವಕ್ತ್ರ ಸಮನ್ವಿತಂ=ಒಂದು ವಕ್ತ್ರದೊಡನೆ ಕೂಡಿಹಂಥಾ, ತ್ರಿಣಯನಂ=ಮೂಱು ಕಣ್ಣನುಳ್ಳಂಥಾ, ಸರ್ವಾವಯವಸಂಯುತಂ=ಎಲ್ಲಾ ಅವಯವಂಗಳೊಡನೆ ಕೂಡಿಹಂಥಾದು ಮೂರ್ತಿ ಸಾದಾಖ್ಯವು. ಏಕಮೇವಾನನೋಪೇತಂ=ಒಂದುಮುಖದೊಡನೆ ಕೂಡಿಹಂಥಾ ಮೂರ್ತಿಸಾದಾಖ್ಯವೇ, ದಿವ್ಯಲಿಂಗಾಕೃತಿರ್ಭವೇತ್=ದೀಪ್ತವಹಂಥಾ ಲಿಂಗಾಕಾರ ವಹುದು. ॥೬೪॥

ಶ್ಲೋಕ॥ ಜ್ಞಾನಂ ಚೈವ ಪ್ರತಿಷ್ಠಾ ಚ ತಸ್ಯಾಃ ಪರ್ಯಾಯವಾಚಕಃ ।
ಜ್ಞಾನಶಕ್ತಿರ್ದಶಾಂಶೇನ ಕರ್ತೃಸಾದಾಖ್ಯಮುದ್ಭವಮ್ ॥

ಟೀಕು॥ ಜ್ಞಾನಂಚೈವ=ನಿಃಕಲೆಯೆನಿಸಿಪ್ಪ ಆ ಜ್ಞಾನಶಕ್ತಿಯೆ, ಪ್ರತಿಷ್ಠಾ ಚ=ಪ್ರತಿಷ್ಠೆಯೆಂಬ ಕಲಾನಾಮವನುಳ್ಳದಾಯಿತ್ತು. ತಸ್ಯಾಃ ಪರ್ಯಾಯವಾಚಕಃ=ಆ ಪ್ರತಿಷ್ಠೆಯೆಂಬ ಕಲಾನಾಮವು ಆ ಜ್ಞಾನಶಕ್ತಿಯ ತಱುವಾಯ ಶಬ್ದವು, ಜ್ಞಾನಶಕ್ತಿದಶಾಂಶೇನ= ಜ್ಞಾನಶಕ್ತಿಯದಶಾಂಶದಿಂದ, ಕರ್ತೃಸಾದಾಖ್ಯಮುದ್ಭವಂ=ಕರ್ತೃಸಾದಾಖ್ಯವು ಪ್ರಾದುರ್ಭೂತವಾಯಿತ್ತು. ॥೬೫॥

ಶ್ಲೋಕ॥ ಜ್ಞಾನಂ ಕರ್ತೃಸ್ವಭಾವತ್ವಾತ್ ಕರ್ತೃನಾಮೇತಿ ಕೀರ್ತಿತಮ್ ।
ಜ್ಞಾನಂ ಹಿ ಶುದ್ಧಭಾವತ್ವಾತ್ ಸ್ಫಟಿಕಾಭಾಸಮುಚ್ಯತೇ ॥

ಟೀಕು॥ ಜ್ಞಾನಂ=ಶಿವನಚಿಚ್ಛಕ್ತಿಗೆ, ಕರ್ತೃಸ್ವಭಾವತ್ವಾತ್=ಜಗತ್ತುಮಾಡುವಂಥಾ ಸ್ವಭಾವಹತನದಿಂದ, ಕರ್ತೃನಾಮೇತಿ=ಕರ್ತೃಸಾದಾಖ್ಯವೆಂದು, ಕೀರ್ತಿತಂ=ಹೇಳಲು ಪಟ್ಟುದು, ಜ್ಞಾನಂ=ಜ್ಞಾನತತ್ತ್ವವೆ, ಶುದ್ಧಭಾವತ್ವಾತ್= ಶುದ್ಧಸ್ವಭಾವವಪ್ಪಕಾರಣದಿಂದ, ಸ್ಫಟಿಕಾಭಾಸಂ=ಸ್ಫಟಿಕಪ್ರಭೆಯನುಳ್ಳದೆಂದು, ಉಚ್ಯತೇ=ನುಡಿಯಲುಪಡುತ್ತಿಹುದು. ॥೬೬॥

ಶ್ಲೋಕ॥ ದಿವ್ಯಲಿಂಗಂ ಮಹಾದೀರ್ಘಂ ಮಹಾಸ್ಥೂಲಂ ತಯಾಽನ್ವಿತಮ್ ।
ತಸ್ಯಮಧ್ಯಸ್ಥಿತಾಮೂರ್ತಿರೀಶ್ವರಸ್ಸರ್ವಕಾರಣಮ್ ॥

ಟೀಕು॥ ದಿವ್ಯಲಿಂಗಂ=ಆ ಸ್ಫಟಿಕಪ್ರಭೆಯನುಳ್ಳಶಿವಲಿಂಗವು, ಮಹಾದೀರ್ಘಂ=ಹಿರಿದಹ ಉದ್ದವಹನುಳ್ಳಂಥಾ, ಮಹಾಸ್ಥೂಲತಯಾಽನ್ವಿತಂ=ಮಹಾಸ್ಥೂಲವನುಳ್ಳಂಥಾ; ತಸ್ಯ=ಆ ಶುದ್ಧಸ್ಫಟಿಕ ಪ್ರಭೆಯನುಳ್ಳ ಶಿವಲಿಂಗದ, ಮಧ್ಯಸ್ಥಿತಾ=ಮಧ್ಯಸ್ಥವಾದ, ಮೂರ್ತಿಃ=ತೇಜೋ ಮೂರ್ತಿಯು, ಸರ್ವಕಾರಣಂ=ಸಮಸ್ತಕಾರಣಂಗಳಿಗೆಯು ಕಾರಣವಾದ, ಈಶ್ವರಃ= ಈಶ್ವರಮೂರ್ತಿಯಹುದು. ॥೬೭॥

ಶ್ಲೋಕ॥ ಚತುರ್ಮೂರ್ಧ್ನಾ ಚತುರ್ವಕ್ತ್ರಂ ನೇತ್ರದ್ವಾದಶಸಂಯುತಮ್ ।
ಚತುರಾಸ್ಯ ಚತುರ್ವರ್ಣಂ ವಸುಶ್ರೋತ್ರಸಮನ್ವಿತಮ್ ॥

ಟೀಕು॥ಚತುರ್ಮೂರ್ಧ್ನಾ=ಆ ಈಶ್ವರಮೂರ್ತಿಯು ನಾಲ್ಕು ಶಿರಸ್ಸು, ಚತುರ್ವಕ್ತ್ರಂ=ನಾಲ್ಕು ಮುಖವು, ದ್ವಾದಶ ನೇತ್ರ ಸಂಯುತಂ=ದ್ವಾದಶ ನೇತ್ರಗಳಿಂದ ಕೂಡಿಹಂಥಾದು, ಚತುರಾನನ=ನಾಲ್ಕುಮುಖಂಗಳಿಗೆಯೂ, ಚತುರ್ವರ್ಣಂ= ನಾಲ್ಕುವರ್ಣವನುಳ್ಳದು, ವಸುಶ್ರೋತ್ರಸಮನ್ವಿತಂ=ಎಂಟುಕರ್ಣಂಗಳೊಡನೆ ಕೂಡಿಹಂಥಾದು. ॥೬೮॥

ಶ್ಲೋಕ॥ ಅಷ್ಟಹಸ್ತಂ ದ್ವಿಪಾದಂ ಚ ಸರ್ವಲಕ್ಷಣ ಸಂಯುತಮ್ ।
ಶೂಲಂ ಪರಶುಖಡ್ಗಂ ಚಾಪ್ಯಭಯಂ ದಕ್ಷಿಣೇ ಕರೇ ।
ಪಾಶಂ ನಾಗಂ ಚ ಘಂಟಾಂ ಚ ವರದಂ ವಾಮಹಸ್ತಕೇ ॥

ಟೀಕು॥ ಅಷ್ಟಹಸ್ತಂ=ಎಂಟು ಹಸ್ತವನುಳ್ಳದು, ದ್ವಿಪಾದಂ ಚ=ಎರಡುಪಾದವನುಳ್ಳದು, ಸರ್ವಲಕ್ಷಣ ಸಂಯುತಂ=ಎಲ್ಲಾ ಸುಲಕ್ಷಣದೊಡನೆ ಕೂಡಿಹಂಥಾದು, ಶೂಲಂ= ಶೂಲವು, ಪರಶು=ಕೊಡಲಿಯು, ಖಡ್ಗಂ=ಖಡ್ಗವು, ಅಭಯಂ=ಅಭಯವು, ದಕ್ಷಿಣೇಕರೇ=ಬಲದ ನಾಲ್ಕು ಹಸ್ತಂಗಳಲ್ಲಿಹವು, ಪಾಶಂ=ಪಾಶವು, ನಾಗಂ ಚ=ಸರ್ಪಾಯುಧವು, ಘಂಟಾ ಚ=ಘಂಟೆಯು, ವರದಂ=ವರದಪ್ರದವು, ವಾಮಹಸ್ತಕೇ= ಎಡದ ನಾಲ್ಕು ಹಸ್ತಂಗಳಲ್ಲಿಹವು. ॥೬೯॥

ಶ್ಲೋಕ॥ ಸರ್ವಾವಯವಸಂಯುಕ್ತಂ ಸರ್ವಾಭರಣ ಭೂಷಿತಮ್ ।
ಏವಂ ತದೀಶ್ವರಂ ಪ್ರೋಕ್ತಂ ಕರ್ತೃಲಿಂಗಮಿಹೋಚ್ಯತೇ ॥

ಕರ್ತೃಸಾದಾಖ್ಯಮಿತ್ಯುಕ್ತಂ ಕರ್ಮಸಾದಾಖ್ಯಮುಚ್ಯತೇ ।

ಟೀಕು॥ ಸರ್ವಾವಯಸಂಯುಕ್ತಂ=ಸರ್ವಾವಯವಂಗಳೊಡನೆ ಕೂಡಿಹಂಥಾದು, ಸರ್ವಾಭರಣಭೂಷಿತಂ=ಸರ್ವಾಭರಣಂಗಳಿಂದ ಅಲಂಕರಿಸಲುಪಟ್ಟಿಹಂಥಾದು,

ಏವಂ=ಈ ಪ್ರಕಾರದಿಂದ ಪೂರ್ವಶ್ಲೋಕೋಕ್ತವಾದ, ತತ್=ಆ ಈಶ್ವರ ರೂಪವು, ಈಶ್ವರಂ=ಈಶ್ವರರೂಪವೆಂದು, ಪ್ರೋಕ್ತಂ=ಹೇಳಲುಪಟ್ಟುದು, ಆ ಈ ಈಶ್ವರ ತತ್ತ್ವವು, ಇಹ=ಈ ಶುದ್ಧಾಖ್ಯತಂತ್ರದಲ್ಲಿ, ಕರ್ತೃಲಿಂಗಂ=ಜಗತ್ತನು ನಿರ್ಮಿಸುವ ಚಿತ್ಸ್ವರೂಪ ಲಿಂಗವೆಂದು, ಉಚ್ಯತೇ=ನುಡಿಯಲುಪಡುತ್ತಿಹುದು. ಇತಿ=ಈ ಪರಿಯಿಂ, ಕರ್ತೃಸಾದಾಖ್ಯಂ=ಕರ್ತೃಸಾದಾಖ್ಯವು, ಉಕ್ತಂ=ವಚಿಸಲುಪಟ್ಟುದು. ಕರ್ಮಸಾದಾಖ್ಯಂ=ಕರ್ಮಸಾದಾಖ್ಯವು, ಉಚ್ಯತೇ=ಮುಂದೆ ಹೇಳಲುಪಡುತ್ತಿಹುದು.

॥೭೧॥

ಶ್ಲೋಕ॥ ನಿವೃತ್ತಿಃ ಸ್ಯಾತ್ಕ್ರಿಯಾಶಕ್ತಿಸ್ತಸ್ಯಾಃ ಪರ್ಯಾಯವಾಚಕಃ ।
ಕ್ರಿಯಾಶಕ್ತೇಃ ದಶಾಂಶೇನ ಕರ್ಮಸಾದಾಖ್ಯಮುದ್ಭವಮ್ ॥

ಟೀಕು॥ ಕ್ರಿಯಾಶಕ್ತಿಃ=ನಿಃಕಲೆಯೆನಿಸಿಪ್ಪಂಥಾ ಕ್ರಿಯಾಶಕ್ತಿತಾನೆ, ನಿವೃತ್ತಿಃ=ನಿವೃತ್ತಿಯೆಂಬ ಕಲೆಯಾಯಿತ್ತು, ತಸ್ಯಾಃ ಪರ್ಯಾಯವಾಚಕಃ=ಆ ನಿವೃತ್ತಿಕಲೆಯೆಂಬ ನಾಮವು, ಆ ಕ್ರಿಯಾಶಕ್ತಿಯ ಪರ್ಯಾಯವಾಚಕವು; ಕ್ರಿಯಾಶಕ್ತೇಃ ದಶಾಂಶೇನ=ಕ್ರಿಯಾಶಕ್ತಿಯ ದಶಾಂಶದಿಂದ, ಕರ್ಮಸಾದಾಖ್ಯಮುದ್ಭವಂ=ಕರ್ಮಸಾದಾಖ್ಯವು ಉದ್ಭವವಾಯಿತ್ತು.

ಶ್ಲೋಕ॥ ಕ್ರಿಯಾಕರ್ಮೇತಿ ವಿಜ್ಞೇಯಾ ತಸ್ಮಾತ್ಕರ್ಮೇತಿ ನಾಮತಃ ।
ಲಿಂಗಪೀಠಪ್ರಕಾರೇಣ ಕರ್ಮಸಾದಾಖ್ಯಲಕ್ಷಣಮ್ ॥

ಟೀಕು॥ ಕ್ರಿಯಾ=ಕ್ರಿಯಾಶಕ್ತಿಯೆ, ಕರ್ಮೇತಿ=ಕರ್ಮಸಾದಾಖ್ಯವೆಂದು, ವಿಜ್ಞೇಯಾ=ಅಟಿಯಬೇಕಾದುದು, ತಸ್ಮಾತ್=ಅದುಕಾರಣದಿಂದ, ಕರ್ಮೇತಿ=ಕರ್ಮವೆಂಬ, ನಾಮತಃ=ಹೆಸರಿನಿಂದ, ಲಿಂಗಪೀಠಪ್ರಕಾರೇಣ=ಲಿಂಗಮಂತ್ರಜಾತಪಟಲದಲ್ಲಿ ಉದ್ಧರಿಸಿಲುಪಡುವ ಪಂಚಸಾದಾಖ್ಯ ಮುಖವಾದ ಲಿಂಗದ, ಪೀಠ=ಸಮಸ್ತತತ್ತ್ವ ಜನ್ಮಸ್ಥಲವಾದ ಪೀಠದ, ಪ್ರಕಾರೇಣ=ಪ್ರಕಾರದಿಂದ, ಕರ್ಮಸಾದಾಖ್ಯಲಕ್ಷಣಂ=ಕರ್ಮಸಾದಾಖ್ಯ ಲಕ್ಷಣವು ಪ್ರಕಟವಾಗಿಹುದು. ॥೭೩॥

ಶ್ಲೋಕ॥ ನಾದಂ ಲಿಂಗಮಿತಿಜ್ಞೇಯಂ ಬಿಂದು ಪೀಠಮುದಾಹೃತಮ್।
ಬಿಂದುನಾದಯುತಂ ರೂಪಂ ಲಿಂಗಾಕಾರಮಿಹೋಚ್ಯತೇ ॥

ಟೀಕು॥ ನಾದಂ=ಲಯಭೋಗ ಅಧಿಕಾರಂಗಳೆಂಬ ತ್ರಿತತ್ತ್ವಲಕ್ಷಿತವಾದ ಪತಿಯೆಂಬ ಹೆಸರನುಳ್ಳ ನಾದಬ್ರಹ್ಮವು, ಲಿಂಗಮಿತಿ=ಪಂಚಸಾದಾಖ್ಯ ಮುಖಂಗಳನುಳ್ಳ ಲಿಂಗವೆಂದು, ಜ್ಞೇಯಂ=ಅಜಿಯಬೇಕಾದುದು; ॥೭೪॥

ಶ್ಲೋಕ॥ **ಲಯಾದಿಭೇದ ಪ್ರಾಗುಕ್ತೋ ಯ ಉಪಾಧೌ ಶಿವಸ್ಯ ತು ।**
ಸ ಬಿಂದುರಿತಿ ಮಂತವ್ಯಃ, ಸೈವ ಕುಂಡಲಿನೀ ಮತಾ ॥

ಟೀಕು॥ ಶಿವಸ್ಯ=ಶಿವತತ್ತ್ವದ, ಉಪಾಧೌ=ಉಪಾಧಿಯಲ್ಲಿ, ಯಃ=ಆವುದಾನೊಂದು, ಪ್ರಾಗುಕ್ತೋಲಯಾದಿಭೇದತಃ=ಪ್ರತಿಪದಾರ್ಥವ ಹೇಳುವುದು ನುಡಿಯಲ್ಪಟ್ಟ ಲಯ, ಭೋಗ, ಅಧಿಕಾರವೆಂಬ ತ್ರಿತತ್ತ್ವಭೇದವೆಂದು, ಸಃ=ತ್ರಿತತ್ತ್ವಭೇದತಾನೆ, ಬಿಂದುರಿತಿ= ಬಿಂದುವೆಂದು, ಮಂತವ್ಯಃ=ನೆನೆಯಲುತಕ್ಕುದು, ಸೈವ= ಆ ಬಿಂದು ರೂಪವಾದ ಪರಾಶಕ್ತಿತಾನೆ, ಕುಂಡಲಿನೀ=ಸಮಸ್ತದೇವತಾಜನಮಂತ್ರಸ್ಥಲವಾದ ಪೀಠವೆಂದು, ಉದಾಹೃತಂ=ಉದಾಹರಿಸಲುಪಟ್ಟುದು, ಬಿಂದುನಾದಯುತಂ=ಆ ಶಿವಶಕ್ತಿಗಳೊಡನೆ ಕೂಡಿಹಂಥಾ, ರೂಪಂ=ರೂಪವು, ಇಹ=ಈ ತಂತ್ರದಲ್ಲಿ, ಲಿಂಗಾಕಾರಂ=ಶಿವಲಿಂಗದ ಆಕಾರವೆಂದು, ಉಚ್ಯತೇ=ನುಡಿಯಲುಪಡುತ್ತಿಹುದು.

ಶ್ಲೋಕ॥ ಚತ್ವಾರಿ ಕರ್ತೃ ರೂಪಾಣಿ ಕೇವಲಂ ನಾದಮುಚ್ಯತೇ ।
ಲಿಂಗಂ ಶಿವಮಿತಿಜ್ಞೇಯಂ ಪೀಠಂ ಶಕ್ತಿರುದಾಹೃತಮ್ ॥

ಟೀಕು॥ ಕರ್ತೃರೂಪಾಣಿ=ಕರ್ತೃಸಾದಾಖ್ಯ, ಮೂರ್ತಸಾದಾಖ್ಯ, ಅಮೂರ್ತಸಾದಾಖ್ಯ, ಶಿವಸಾದಾಖ್ಯವೆಂಬ, ಚತ್ವಾರಿ=ನಾಲ್ಕು ಸಾದಾಖ್ಯ ತತ್ತ್ವಂಗಳು, ಕೇವಲಂ=ಬಱಿಯ, ನಾದಂ=ನಾದಬ್ರಹ್ಮವೆಂದು, ಉಚ್ಯತೇ=ನುಡಿಯಲುಪಡುತ್ತಿಹುದು, ಶಿವಂ=ನಾದಬ್ರಹ್ಮ ವೆನಿಸಿಪ್ಪಶಿವತತ್ತ್ವವು, ಲಿಂಗಮಿತಿ=ಲಿಂಗವೆಂದು, ಜ್ಞೇಯಂ=ಅಱಿಯಲುಬೇಕಾದುದು, ಶಕ್ತಿಃ=ಜ್ಞಾನಶಕ್ತ್ಯಾದಿ ಚತುರ್ವಿಧ ಶಕ್ತಿಯೂ, ಪೀಠಂ=ಆ ನಾದಬ್ರಹ್ಮಕ್ಕೆ ಪೀಠವೆಂದು, ಉದಾಹೃತಂ=ಉದಾಹರಿಸಲುಪಟ್ಟುದು.

ಶ್ಲೋಕ॥ ಯೋನಿಲಿಂಗ ಪ್ರಕಾರೇಣ ಜಗತ್ಸೃಷ್ಟ್ಯರ್ಥಕಾರಣಮ್ ।
ತಥಾ ಸಂಯೋಗ ಭಾಗಸ್ಯ ತತ್ತ್ವಂ ಕರ್ಮಮುದಾಹೃತಮ್ ॥

ಟೀಕು॥ಯೋನಿಲಿಂಗ ಪ್ರಕಾರೇಣ=ಮಂತ್ರಜಾತದಲ್ಲಿ ಉಕ್ತವಾದ ಪೀಠಲಿಂಗಾಂಗಗಳ ಪ್ರಕಾರದಿಂದ, ಜಗತ್ಸೃಷ್ಟ್ಯರ್ಥಕಾರಣಂ=ಲೀಲೋತ್ಪತ್ತಿಪ್ರಯೋಜನಕ್ಕೆ ಕಾರಣ ತತ್ತ್ವ ವಾಯಿತ್ತು, ತಥಾ=ಹಾಂಗೆ, ಸಂಯೋಗಭಾಗಸ್ಯ=ಶಿವಶಕ್ತಿಗಳ ಕೂಟ ಉಂಟಹತನದ, ತತ್ತ್ವಂ=ಆವುದಾನೊಂದು ತತ್ತ್ವವೊಂದು ಆ ಇದು, ಕರ್ಮಮುದಾಹೃತಂ= ಕರ್ಮ ಸಾದಾಖ್ಯವೆಂದು ಹೇಳಲುಪಟ್ಟದು. ॥೭೭॥

ಶ್ಲೋಕ॥ ಬಿಂದು ಮಧ್ಯಗತೋ ನಾದಂ ನಾದಮಧ್ಯೇ ತು ಮೂರ್ತಯಃ ।
ಮೂರ್ತಿಮಧ್ಯಗತಂ ತತ್ತ್ವಂ ತತ್ತ್ವಮಧ್ಯಗತಶ್ಶಿವಃ ॥

ಟೀಕು॥ ಬಿಂದುಮಧ್ಯೇ=ಪರಾಶಕ್ತಿಯ ಮಧ್ಯದಲ್ಲಿ ನಾದಂಗತಂ=ನಾದಬ್ರಹ್ಮವಪ್ಪ ಶಿವತತ್ತ್ವವೆಯ್ದಿಹುದು, ನಾದಮಧ್ಯೇ ತು=ಆ ಶಿವತತ್ತ್ವದಲ್ಲಿಯಾಯಿತ್ತಾದೊಡೆ, ಮೂರ್ತಯಃ=ಶಿವಮೂರ್ತಿಭೇದಂಗಳಿರುತ್ತಿಹವು; ಮೂರ್ತಿಮಧ್ಯೇ=ಆ

ಶಿವಮೂರ್ತಿಗಳಲ್ಲಿ, ತತ್ತ್ವಂ=ಆ ಶಿವಶಕ್ತಿಗಳ ಕೂಟವಹ ತತ್ತ್ವವು,ಗತಂ=ಇರುತ್ತಿಹುದು, ತತ್ತ್ವಮಧ್ಯೇ= ಆ ಲಿಂಗ ತತ್ತ್ವಮಧ್ಯದಲ್ಲಿ, ಗತಶ್ಶಿವಃ=ಮಂತ್ರರೂಪವನ್ನೈದಿ ಶಿವ ನಿರುತ್ತಿಹನು. ॥೭೮॥

ಶ್ಲೋಕ॥ **ಏತತ್ತತ್ತ್ವಮಯಂ ಲಿಂಗಂ ಸರ್ವತತ್ತ್ವಾಲಯಂ ವಿದುಃ ।**
ಲಿಂಗೇನ ಜಾಯತೇ ತತ್ತ್ವಂ ಜಗತ್ಸ್ಥಾವರ ಜಂಗಮಮ್ ॥

ಟೀಕು॥ ಏತಲ್ಲಿಂಗಂ=ಪರಶಿವಶಕ್ತಿಗಳ ಕೂಟವಾದ ಈ ಶಿವಲಿಂಗವು, ತತ್ತ್ವಮಯಂ= ಶಿವಶಕ್ತಿ ಸಂಭೂತವಾದ ಸಮಸ್ತ ತತ್ತ್ವಸ್ವರೂಪವು, ಸರ್ವತತ್ತ್ವಾಲಯಂ=ಆ ಈ ಶಿವಲಿಂಗವು ಮಹದಾದಿತತ್ತ್ವಂಗಳಿಗೆ ಆಸ್ಪದವಾದುದಾಗಿ, ವಿದುಃ=ಲಿಂಗತತ್ತ್ವಜ್ಞರುಗಳು ಅಱಿವರು, ಲಿಂಗೇನ=ಶಿವಲಿಂಗದಿಂದ, ಸ್ಥಾವರ ಜಂಗಮಂ=ಸ್ಥಾವರ ಜಂಗಮಾತ್ಮಕ ವಾದ, ಜಗತ್ತತ್ತ್ವಂ=ಜಗತ್ತತ್ತವು, ಜಾಯತೇ=ಹುಟ್ಟುತ್ತಿಹುದು. ॥೭೯॥

ಶ್ಲೋಕ॥ **ತಸ್ಮಾಲ್ಲಿಂಗಂ ವಿಶೇಷೇಣ ಕರ್ಮರೂಪಮುದಾಹೃತಮ್ ।**
ಕರ್ಮೋದಯೇ ಚ ಸೃಷ್ಟಿಶ್ಚ ಕರ್ಮಾಂತೇ ಸಂಹೃತಿರ್ಭವೇತ್ ॥

ಟೀಕು॥ ತಸ್ಮಾತ್=ಅದು ಕಾರಣದಿಂದ, ಲಿಂಗಂ=ಶಿವಲಿಂಗವು, ವಿಶೇಷೇಣ=ವಿಶೇಷ ದಿಂದ, ಕರ್ಮರೂಪಂ=ಕರ್ಮರೂಪವಾದುದೆಂದು ಉದಾಹೃತಂ=ನುಡಿಯಲುಪಟ್ಟುದು; ಕರ್ಮೋದಯೇ ಚ=ಕರ್ಮೋದಯದಲ್ಲಿ, ಸೃಷ್ಟಿಶ್ಚ=ಜಗತ್ಸೃಷ್ಟಿಯಹುದು, ಕರ್ಮಾಂತೇ=ಕರ್ಮಾಂತದಲ್ಲಿ, ಸಂಹೃತಿರ್ಭವೇತ್=ಜಗತ್ಸಂಹಾರವಾದುದು. ॥೮೦॥

ಶ್ಲೋಕ॥ **ಏತತ್ಕರ್ಮ ಸ್ವರೂಪಂ ತು ಸೃಷ್ಟಿಸ್ಥಿತಿಲಯಾವಹಮ್ ।**
ಪಂಚಸಾದಾಖ್ಯಮೇವೋಕ್ತಂ ಕರ್ಮಸಾದಾಖ್ಯಮುಚ್ಯತೇ ॥

ಟೀಕು॥ ಏತತ್ ಕರ್ಮಸ್ವರೂಪಂ ತು=ಆ ಈ ಕರ್ಮಸಾದಾಖ್ಯರೂಪವೇ, ಸೃಷ್ಟಿಸ್ಥಿತಿಲಯಾ ವಹಂ=ಸಮಸ್ತಲೋಕಂಗಳ ಸ್ಥಿತಿಲಯಂಗಳ ಮಾಡುವಂಥಾದು, ಏವಂ=ಈ ಪ್ರಕಾರದಿಂದ, ಪಂಚಸಾದಾಖ್ಯಂ=ಶಿವಾದಿಕರ್ಮಾಂತವಾದ ಪಂಚಸಾದಾಖ್ಯ ಕಡೆಯ ದಾದ ಕರ್ಮಸಾದಾಖ್ಯವು, ಉಚ್ಯತೇ=ಮರಳಿಯು ವ್ಯಕ್ತವಾಗಿಯೂ ಹೇಳಲು ಪಡುತ್ತಿಹುದು. ॥೮೧॥

ಶ್ಲೋಕ॥ **ಶಿವಸಾದಂ ವಿಶೇಷೇಣ ಶಿವರೂಪಂ ಸಮಾಶ್ರಿತಮ್ ।**
ಅಮೂರ್ತಂ ತು ಮಹಾಸೇನ ಶಿವಸಾದಾಖ್ಯಮಾಶ್ರಿತಮ್ ॥

ಟೀಕು॥ ಭೋ ಮಹಾಸೇನ!=ಎಲೆ ಮಹಾಸೇನಾಧಿಪತಿಯೆ!, ತತ್ತ್ವಕ್ರಮಾಶ್ರಯಂಗಳ ಕೇಳು, ಶಿವಸಾದಂ=ಶಿವಸಾದಾಖ್ಯವು, ವಿಶೇಷೇಣ=ವಿಶೇಷಿಸಿ, ಶಿವರೂಪಂ=

ಶಿವತತ್ತ್ವಸ್ವರೂಪವನು, ಸಮಾಶ್ರಿತಂ=ಆಶ್ರಯಿಸಿಹುದು; ಅಮೂರ್ತಂ ತು= ಅಮೂರ್ತ ಸಾದಾಖ್ಯವಾಯಿತ್ತಾದಡೆ, ಶಿವಸಾದಾಖ್ಯಂ=ಶಿವಸಾದಾಖ್ಯವನು, ಆಶ್ರಿತಂ= ಆಶ್ರಯಿಸಿಹುದು. ॥೮೨॥

ಶ್ಲೋಕ॥ ಮೂರ್ತರೂಪಂ ವಿಶೇಷೇಣ ತ್ವಮೂರ್ತಾ ದಿ ಸಮಾಶ್ರಿತಮ್ ।
ಕರ್ತೃಸಾದಾಖ್ಯಮೇವಂ ಹಿ ಸಮೂರ್ತಾದಿ ಸಮಾಶ್ರಿತಮ್ ॥

ಟೀಕು॥ ಮೂರ್ತರೂಪಂ ತು=ಮೂರ್ತಸಾದಾಖ್ಯರೂಪವು, ವಿಶೇಷೇಣ=ವಿಶೇಷಿಸಿ, ಅಮೂರ್ತಾದಿ=ಅಮೂರ್ತಸಾದಾಖ್ಯಾದಿಗಳನೂ, ಸಮಾಶ್ರಿತಂ=ಆಶ್ರಯಿಸಿಹುದು, ಏವಂ ಹಿ=ಹಿಂದೆ ಆಶ್ರಯಿಸಿದ ಪ್ರಕಾರದಿಂದಲೇ, ಕರ್ತೃಸಾದಾಖ್ಯಂ=ಕರ್ತೃಸಾದಾಖ್ಯವು, ಸಮೂರ್ತಾದಿ=ಸಮೂರ್ತಸಾದಾಖ್ಯ ಮೊದಲಾದ ತತ್ತ್ವಂಗಳನು, ಸಮಾಶ್ರಿತಂ= ಆಶ್ರಯಿಸಿಹುದು. ॥೮೩॥

ಶ್ಲೋಕ॥ ಕರ್ಮರೂಪಂ ಕ್ರಮೇಣೈವ ಕರ್ತ್ರಾದಿತು ತಥಾವಿದುಃ ।
ಅನೇನೈವ ಪ್ರಕಾರೇಣ ಏಕೈಕಂ ತು ಸಮಾಶ್ರಿತಮ್ ॥

ಟೀಕು॥ಕರ್ಮರೂಪಂ=ಕರ್ಮಸಾದಾಖ್ಯರೂಪವು, ತಥಾ=ತತ್ತ್ವಂಗಳನಾಶ್ರಯಿಸಿಹಹಾಂಗೆ, ಕ್ರಮೇಣೈವ=ಕ್ರಮದಿಂದಲೆ, ಕರ್ತ್ರಾದಿ=ಕರ್ತೃಸಾದಾಖ್ಯರೂಪವು ಮೊದಲಾದವನು ಆಶ್ರಯಿಸಿಹುದೆಂದು, ವಿದುಃ=ಲಿಂಗಜ್ಞಾನಿಗಳಜಿವರು, ಅನೇನಪ್ರಕಾರೇಣೈವ=ಈ ಪ್ರಕಾರದಿಂದವೆ, ಏಕೈಕಂತು=ಒಂದೊಂದು ಒಂದೆರಡು ಒಂದು ಮೂಱು ಒಂದು ನಾಲ್ಕು ಒಂದೈದಾಗಿ ಒಂದೊಂದು ತತ್ತ್ವವು, ಸಮಾಶ್ರಿತಂ=ಆಶ್ರಯಿಸಿ ಇರುತ್ತಿಹುದು.

ಶ್ಲೋಕ॥ ತಸ್ಮಾತ್ಕರ್ಮಸ್ವರೂಪಂ ತು ಪಂಚತತ್ತ್ವಾಶ್ರಿತಂ ವಿದುಃ ।
ಸರ್ವತತ್ತ್ವಾತ್ಮಕಂ ಜ್ಞೇಯಂ ತತ್ತ್ವಾಧಾರಂ ಸಮಾಶ್ರಿತಮ್ ॥

ಟೀಕು॥ ತಸ್ಮಾತ್=ಅದುಕಾರಣ, ಕರ್ಮಸ್ವರೂಪಂತು=ಕರ್ಮಸಾದಾಖ್ಯವಾಯಿತ್ತಾದಡೆ, ಪಂಚತತ್ತ್ವಾಶ್ರಿತಂ=ಕರ್ತೃಸಾದಾಖ್ಯಾದಿ ಶಿವತತ್ತ್ವಾಂತವಾದ ಪಂಚತತ್ತ್ವಾಶ್ರಯವೆಂದು, ವಿದುಃ=ಅಱಿವುದು, ಸರ್ವತತ್ತ್ವಾತ್ಮಕಂ ಜ್ಞೇಯಂ= ಆ ಈ ಕರ್ಮಸಾದಾಖ್ಯವೇ ಸಮಸ್ತತತ್ತ್ವಂಗಳ ಸ್ವರೂಪಹಂತಾದಂದಱಿಯಬೇಕಾದುದು, ತತ್ತ್ವಾಧಾರಂ= ಶಿವಾದ್ಯವನಿಪರ್ಯಂತವಾದ ತತ್ತ್ವಂಗಳಿಗಾಧಾರಾಶ್ರಯವಾದಂಥಾದುದು, ಸಮಾಶ್ರಿತಂ= ಆಶ್ರಯಿಸಿ ಇರುತ್ತಿಹುದು.

ಶ್ಲೋಕ॥ ಏತತ್ಕರ್ಮಸಾದಾಖ್ಯಂ ಪಿಂಡೂಪಮಿಹೋಚ್ಯತೇ ।

ಟೀಕು॥ ಏತತ್ಕರ್ಮಸಾದಾಖ್ಯಂ=ಈ ಕರ್ಮಸಾದಾಖ್ಯವೆ, ಪಿಂಡರೂಪಂ=ಶಿವದೇಹ

ಸ್ವರೂಪವಾದುದೆಂದು, ಇಹ=ಈ ಶುದ್ಧಾಖ್ಯತಂತ್ರದಲ್ಲಿ, ಉಚ್ಯತೇ=ನುಡಿಯಲು ಪಡುತ್ತಿಹುದು. ॥೮೬॥

ಶ್ಲೋಕ॥ ಪಿಂಡಸ್ಥಂ ಪಿಂಡಮಧ್ಯಸ್ಥಂ ಪಿಂಡೇನ ತು ಘಟೀಕೃತಮ್ ॥
ಪಿಂಡೇನ ಪಿಂಡಿತಂ ಪಿಂಡಂ ಪಿಂಡರೂಪಮುದಾಹೃತಮ್ ।

ಟೀಕು॥ ಪಿಂಡನಾಮವು ನಾನಾರ್ಥವನುಳ್ಳದಾಗಿಹುದು, ಪರಮಾತ್ಮಾಮರುತ್ಪಿಂಡ ಇತಿ=ನಿಷ್ಕಲ ವಸ್ತುವೆ ಪಿಂಡವೆಂದು ವಾಯುವೆ ಪಿಂಡವೆಂದು ಯೋಗಗ್ರಂಥೋಕ್ತವು. ಅತೀತ ಕಾಲೇಮೃತ್ಪಿಂಡ ರೂಪಂಕುಂಭೇವ್ಯವಸ್ಥಿತಿಮಿತಿ=ಕಳಿದುಹೋದಕಾಲದಲ್ಲಿ ಮಣ್ಣಮುದ್ದೆಯ ಸ್ವರೂಪವು ಕುಂಭದಲ್ಲಿರುತ್ತಿಹುದೆಂದು ಕಾಲವಾದದಲ್ಲಿ ನುಡಿವುದು.

ಟೀಕು॥ ಪಿಂಡಸ್ಥಂ=ಶಿವಲಿಂಗವಾಗಿಯೇ ಇರುತ್ತದೆ, ಪಿಂಡಮಧ್ಯಸ್ಥಂ=ಶಿವಲಿಂಗ ಮಧ್ಯದಲ್ಲಿದ್ದುದಾಗಿಯೂ, ಪೀಡೇನ ತು=ಶಿವನಪರಾಶಕ್ತಿ ಅಂಶಂಗಳಾದ ಶಾಂತ್ಯತೀತಾದಿ ಕಲೆಗಳೊಡನೆ ಕೂಡಿದ ಸಾದಾಖ್ಯದಿಂದವೆ, ಘಟೀಕೃತಂ=ಘಟೀಕರಿಸಲುಪಟ್ಟು ದಾಗಿಯೂ, ಪಿಂಡೇನ=ಶಿವಲಿಂಗದಿಂದವೆ, ಪಿಂಡಿತಂ=ಪಿಂಡವಾಗಲುಪಟ್ಟುದು, ಪಿಂಡಂ=ಸಾದಾಖ್ಯಭೇದವನುಳ್ಳಶಿವನ ದಿವ್ಯಶರೀರವು, ಪಿಂಡರೂಪಮಿತಿ=ಕರ್ಮ ಸಾದಾಖ್ಯರೂಪವೆಂದು, ಉದಾಹೃತಂ=ಉದಾಹರಿಸಲುಪಟ್ಟುದು. ॥೮೭॥

ಶ್ಲೋಕ॥ ಪಂಚಾತ್ಮಕಮಭೂತ್ಪಿಂಡಂ ಧಾತುಬದ್ಧ ಗುಣಾತ್ಮಕಮ್ ॥

ಟೀಕು॥ ಸಪ್ತಧಾತುಗಳಿಂದ ಕಟ್ಟಲುಪಟ್ಟ, ಗುಣಸ್ವರೂಪವನುಳ್ಳಂಥಾ ಪಂಚಭೂತ ಸ್ವರೂಪವಾದ ಪಿಂಡವಾಯಿತ್ತೆಂದು ಹೇಳುವ ಸೃಷ್ಟಿವಾಚಕದಲ್ಲಿ ಶರೀರಕ್ಕೆ ತಕ್ಕ ಪಿಂಡನಾಮ ವರ್ತಿಸುವದು. ॥೮೮॥

ಶ್ಲೋಕ॥ ತಸ್ಮಾದ್ವೈ ಕರ್ಮಸಾದಾಖ್ಯಂ ಪಿಂಡರೂಪಮುದಾಹೃತಮ್

ಎಂಬ ಕರ್ಮಸಾದಾಖ್ಯವೇ ಪಿಂಡನಾಮಕ್ಕೆ ತಕ್ಕುದು. ಅದುಕಾರಣ.

ಶ್ಲೋಕ॥ ಪಂಚಮೂರ್ತಿಮಯಂ ದೇಹಂ ಪಂಚತತ್ತ್ವಾತ್ಮಕಂ ಭವೇತ್ ।
ಮೂರ್ತೀನಾಂ ದೇಹಭೇದೈಸ್ತು ಗುಣ್ಯೈಃ ಪಂಚಾನನೈರ್ಯುತಮ್ ॥

ಟೀಕು॥ ಪಂಚಮೂರ್ತಿಮಯಂದೇಹಂ=ಪಂಚಮೂರ್ತಿ ಸ್ವರೂಪವಾದ ಕರ್ಮ ಸಾದಾಖ್ಯವು, ಪಂಚತತ್ತ್ವಾತ್ಮಕಂ ಭವೇತ್=ಐದು ತತ್ತ್ವಂಗಳ ಸ್ವರೂಪವಾದುದು, ಮೂರ್ತೀನಾಂ=ಮೂರ್ತಿಯನುಳ್ಳ ಸದಾಶಿವಾದಿ ತತ್ತ್ವಂಗಳ ದೇಹಭೇದೈಸ್ತು= ದೇಹಭೇದಂಗಳೊಡನೆಯೂ, ಗುಣ್ಯೈಸ್ತು=ಗುಣಭೇದಂಗಳೊಡನೆಯೂ, ಪಂಚಾನನೈರ್ಯುತಂ=ಅಯ್ದುಮುಖಂಗಳೊಡನೆ ಕೂಡಿದ್ದಾಗಿಹುದು. ॥೯೦॥

ಶ್ಲೋಕ॥ ತತ್ತದ್ಧೇತು ಮಹೇಶಾದಿ ಸರ್ವತತ್ತ್ವಸಮುದ್ಭವಃ ।
ತಸ್ಯ ವಕ್ತ್ರೇಷು ಸಂಭೂತಾಸ್ಸಿದ್ಧಾಂತಾಶ್ಶೈವ ತಂತ್ರಕಾಃ ॥

ಟೀಕು॥ ತತ್ತದ್ದೇತು=ಆಯಾ ಶಿವನಮೂರ್ತಿಗಳಿಗೆ ಕಾರಣವಹದೆಸೆಯಿಂದ, ಮಹೇಶಾದಿ ಸರ್ವತತ್ತ್ವಸಮುದ್ಭವಃ=ಮಹೇಶ್ವರಃ ಚಂದ್ರಧರಃ, ಉಮಾಸಹಾಯಃ ವೃಷಭಾರೂಡ ಮೊದಲಾದ ಪಂಚವಿಂಶತಿ ತತ್ತ್ವಂಗಳ ಪ್ರಾದುರ್ಭಾವವಹುದು, ತಸ್ಯ ವಕ್ತ್ರೇಷು=ಈ ತತ್ತ್ವದ ಮುಖಗಳಿಂದ, ಶೈವ ತಂತ್ರಕಾಃ=ಶೈವತಂತ್ರಗಳೆಂಬ, ಸಿದ್ಧಾಂತಾಃ= ಸಿದ್ದಾಂತಂಗಳು, ಸಂಭೂತಾಃ=ಪ್ರಾದುರ್ಭಾವವಾದವು. ॥೯೧॥

ಶ್ಲೋಕ॥ ತತ್ತ್ವಾರ್ಥೇ ತು ಮಹೇಶಾದಿ ಸರ್ವತತ್ತ್ವ ಸಮುದ್ಭವಃ ।

ಟೀಕು॥ ತತ್ತ್ವಾರ್ಥೇ ತು=ಆ ಈ ತತ್ತ್ವಗಳು, ಮಹೇಶಾದಿ ಸರ್ವತತ್ತ್ವ=ಮಹೇಶಾದಿ ಸರ್ವತತ್ತ್ವಗಳು, ಸಮುದ್ಭವಃ=ಪ್ರಾದುರ್ಭವಿಸಿದವು. ॥೯೨॥

ಶ್ಲೋಕ॥ ಸರ್ವಜ್ಞಾನಮಯಂ ದೇವಂ ಸರ್ವಕಾರಣಕಾರಣಮ್ ।
ಏವಂ ಲಿಂಗೇ ತು ಕರ್ಮೇಶಂ ಧ್ಯಾಯೇತ್ಸಕಲನಿಷ್ಕಲಮ್ ॥

ಟೀಕು॥ ಏವಂ=ಈ ಪ್ರಕಾರವಾದ ಕಾರಣ. ಲಿಂಗೇತು=ಶಿವಲಿಂಗದಲ್ಲಿಯೇ, ಸರ್ವಜ್ಞಾನಮಯಂ=ಸಮಸ್ತಜ್ಞಾನ ಸ್ವರೂಪವಾದಂಥಾ, ಸರ್ವಕಾರಣ ಕಾರಣಂ=ಸರ್ವ ಕಾರಣಂಗಳಿಗೆ ಕಾರಣವಾದಂಥಾ, ಸಕಲನಿಷ್ಕಲಂ=ಸಕಲನಿಷ್ಕಲಾತ್ಮಕನಾದಂಥಾ, ಕರ್ಮೇಶಂ ದೇವಂ=ಕರ್ಮೇಶನೆಂಬ ಮಹಾದೇವನನು, ಧ್ಯಾಯೇತ್=ಧ್ಯಾನಿಸುವುದು. ॥೯೩॥

ಶ್ಲೋಕ॥ ದೇಹಸ್ಥಂ ಸಕಲಂ ಜ್ಞೇಯಂ ನಿಷ್ಕಲಂ ದೇಹವರ್ಜಿತಮ್ ।
ದೇಹಸ್ಯ ತತ್ಕಲಾಭೇದಂ ಧಾತುಪಿಂಡಮಿತಿ ಸ್ಮೃತಮ್ ॥

ಟೀಕು॥ ದೇಹಸ್ಥಂ=ಇಪ್ಪತ್ತೈದು ಲೀಲಾಮೂರ್ತಿಗಳ ಮಧ್ಯದಲ್ಲಿಪ್ಪ ಶಿವತತ್ತ್ವವು, ಸಕಲಂ=ಸಕಲತತ್ತ್ವವೆಂದು, ಜ್ಞೇಯಂ=ಅಱಿಯಲು ಯೋಗ್ಯವು, ದೇಹವರ್ಜಿತಂ=ಸಮಸ್ತ ಲೀಲಾಮೂರ್ತಿಗಳಿಂದ ಬಿಡಲುಪಟ್ಟಪರಾತ್ಪರತತ್ತ್ವವು, ನಿಷ್ಕಲಂ=ನಿಷ್ಕಲ ತತ್ತ್ವವೆಂದು ಅಱಿಯಲುಬೇಕಾದುದು, ದೇಹಸ್ಥಂ=ಪರಮೇಶ್ವರನ ಲೀಲಾಮೂರ್ತಿ, ತತ್ಕಾಲಭೇದಂ=ಆ ಪರಮೇಶ್ವರನ ಪರಾಶಕ್ತಿಯ ಲೇಶಸಂಭೂತವಾದ ಶಾಂತ್ಯತೀತಾದಿ ಕಲಾಭೇದವನುಳ್ಳ, ಧಾತು=ವರ್ಣವೆ, ಪಿಂಡಮಿತಿ ಸ್ಮೃತಂ=ಪಿಂಡವೆಂದು ನೆನೆಯಲುಪಟ್ಟುದು. ॥೯೪॥

ಶ್ಲೋಕ॥ ಷಟ್ಕಲಾಶ್ಚೈವ ಶಾಸ್ತ್ರಜ್ಞಃ ಷಡಂಗೇಷು ಪ್ರಕಲ್ಪಯೇತ್ ।
ಸರ್ವಾಂಗಾನಿ ಚ ಸಂಪೂರ್ಣಂ ಸರ್ವಾವಯವಸಂಯುತಮ್ ॥

ಟೀಕು॥ ಶಾಸ್ತ್ರಜ್ಞಃ=ಶಿವತಂತ್ರಾಭಿಜ್ಞನಾದ ಮನುಷ್ಯನು, ಷಟ್ಕಲಾಶ್ಚೈವ=ಷಟ್ಕಲೆಗಳನೂ, ಷಡಂಗೇಷು=ಹೃದಯಾದ್ಯಸ್ತ್ರಾಂತವಾದ ಆಱು ಶಿವಾಗಮಂಗಳಲ್ಲಿ, ಕಲ್ಪಯೇತ್=ಕಲ್ಪಿಸುವುದು, ಸರ್ವಾಂಗಾನಿ ಚ=ಸಮಸ್ತ ಶಿವಾಗಮಂಗಳನೂ, ಸಂಪೂರ್ಣಂ=ಪೂರ್ಣಿಸಿ ಕೊಂಡಿದ್ದುದಾಗಿ, ಸರ್ವಾವಯವ ಸಂಯುತಂ=ಸರ್ವಾವಯವಂಗಳೊಡನೆ ಕೂಡಿದ್ದುದಾಗಿಹುದು. ॥೯೫॥

ಶ್ಲೋಕ॥ ಏವಂ ತತ್ ಸ್ಮೃತಿಮಾತ್ರೇಣ ಮೂರ್ತಂ ಸಕಲರೂಪಧೃತ್ ।
ನಿಷ್ಕಲಂ ತದಭಾವೇ ತು ತಸ್ಮಾತ್ಸಕಲನಿಷ್ಕಲಮ್ ॥

ಟೀಕು॥ ಏವಂ=ಈ ಪ್ರಕಾರದಿಂದ, ತತ್=ಆ ಶಿವತತ್ತ್ವದ, ಸ್ಮೃತಿಮಾತ್ರೇಣ=ನೆನಹು ಮಾತ್ರದಿಂದ, ಸಕಲರೂಪಧೃತ್=ಕಲೆಗಳೊಡನೆ ಕೂಡಿದಂಥಾ ಮೂರ್ತಂ=ಮೂರ್ತಿಯನುಳ್ಳದೆಂದಱಿದು, ತದಭಾವೇ ತು=ಆ ಧ್ಯಾನ ಯೋಗಿಗಳ ನೆನಹಿಲ್ಲದ, ಪಕ್ಷೇ ನಿಷ್ಕಲಂ=ತನ್ನ ನಿಷ್ಕಲ ಶಕ್ತಿಯನೆ ಕೂಡಿಕೊಂಡಿಹುದು, ತಸ್ಮಾತ್=ಅದು ಕಾರಣವು, ಸಕಲನಿಷ್ಕಲ=ಸಕಲನಿಷ್ಕಲವೆಂಬ ದ್ವಿಲಕ್ಷ್ಯವಾಗಿಹುದು. ॥೯೬॥

ಶ್ಲೋಕ॥ ಸವೀರ್ಯಂ ಚೈವ ನಿರ್ದೇಹಂ ಮಾಂಸಾಸ್ಥಿರುಧಿರಂ ನ ಚ।
ಇಂದ್ರಚಾಪಮಿವಾಕಾಶೇ ದರ್ಪಣೇ ಪ್ರತಿಬಿಂಬವತ್ ॥

ಟೀಕು॥ ಸವೀರ್ಯಂ ಚೈವ ನಿರ್ದೇಹಂ=ರೇತಸ್ಸಿನೊಡನೆ ಕೂಡಿದ್ದು ದೇಹವಿಲ್ಲದಂಥಾದು, ಮಾಂಸಾಸ್ಥಿರುಧಿರಂ ನಚ=ಮಾಂಸಾಸ್ಥಿರುಧಿರಗಂಳುಯಿಲ್ಲದಹಂಥಾದು, ಕರ್ಮೇಶ ತತ್ತ್ವದ ಸಕಲತ್ವವು, ಆಕಾಶದಲ್ಲಿಹ ಮೇಘ ಜಾಲದ ಮೇಲೆ, ಇಂದ್ರಚಾಪಮಿವ=ಇಂದ್ರಚಾಪವು ಹೇಂಗೆ ತೋಱುವುದು, ದರ್ಪಣೇ=ದರ್ಪಣದಲ್ಲಿ, ಪ್ರತಿಬಿಂಬವತ್=ಪ್ರತಿಬಿಂಬವು ಹೇಂಗೆ ತೋಱುವುದು ಹಾಂಗೆ ಯೋಗಿಗಳ ಹೃದಯಾಕಾಶದಲ್ಲಿಯೂ, ಧ್ಯಾನದರ್ಪಣದಲ್ಲಿಯೂ ತೋಱುತ್ತಿಹುದು. ॥೯೭॥

ಶ್ಲೋಕ॥ ಇತ್ಯೇತನ್ಮನಸಾಽಽಕಲ್ಪ್ಯ ಸಕಲಂ ನಿಷ್ಕಲಂ ಭವೇತ್ ।

ಟೀಕು॥ ಇತಿ=ಈ ಪ್ರಕಾರದಿಂದ, ಏತತ್=ಈಶ್ವರ ರೂಪವನು, ಮನಸಾಽಽಕಲ್ಪ್ಯ=ಮನಸ್ಸಿನೊಡನೆ ಸಂಬಂಧಿಸಿದೊಡೆ, ಸಕಲಂ ನಿಷ್ಕಲಂ ಭವೇತ್=ಸಕಲವು ನಿಷ್ಕಲವು ಅಹುದು. ॥೯೮॥

ಕರ್ಮೇಶ ತತ್ತ್ವದ ಸಕಲ ನಿಷ್ಕಲವನು ನಿರೂಪಿಸಿ ಅಂಗಭೇದವನು ನಿರೂಪಿಸಿಹೆನು.

ಶ್ಲೋಕ॥ ಧ್ಯಾನಲಕ್ಷಣಮಿತ್ಯುಕ್ತಮಂಗಭಾವಮಿಹೋಚ್ಯತೇ ।
ಅಂಗಭೇದಂ ಮಹಾಸೇನ ಚತುರ್ಭಿರ್ಭೇದಮುಚ್ಯತೇ ॥

ಟೀಕು॥ ಭೋ ಮಹಾಸೇನ!=ಎಲೆ ಷಣ್ಮುಖನೆ!, ಇತಿ=ಈ ಪಱಿಯಿಂದ, ಧ್ಯಾನಲಕ್ಷಣ ಮುಕ್ತಂ=ಧ್ಯಾನಲಕ್ಷಣವು ಹೇಳಲುಪಟ್ಟುದು, ಅಥ=ಅನಂತರವು, ಅಂಗಭಾವಂ= ಅಂಗಭಾವವು, ಉಚ್ಯತೇ=ನುಡಿಯಲುಪಡುತ್ತಿದ್ದುದು, ಅಂಗಭೇದಂ=ಅಂಗಭೇದವು, ಚತುರ್ಭಿಃ=ಅಂಗಪ್ರತ್ಯಂಗ ಸಾಂಗೋಪಾಂಗಗಳಿಂದ, ಭೇದಂ=ಬೇರ್ಪಡಿಸಿಹುದೆಂದು, ಉಚ್ಯತೇ=ನುಡಿಯಲುಪಡುತ್ತಿಹುದು. ॥೯೯॥

ಶ್ಲೋಕ॥ **ಅಂಙ್ಗಪ್ರತ್ಯಂಗ ಸಾಂಙ್ಗಂ ಚೋಪಾಂಙ್ಗಂ ಚ ಚತ್ವಾರಿ ಕ್ರಮಾತ್ ।**
ಶಿರೋವಕ್ತ್ರಂ ಚ ಹೃದಯಮಂಗಂ ಚೇತಿ ಪ್ರಕೀರ್ತಿತಮ್ ॥

ಟೀಕು॥ ಅಂಗಪ್ರತ್ಯಂಗ ಸಾಂಗಂ ಚ ಉಪಾಂಗಂ=ಅಂಗ, ಪ್ರತ್ಯಂಗ, ಸಾಂಗ, ಉಪಾಂಗ ಗಳೆಂದು, ಚತ್ವಾರಿ ಚ ಕ್ರಮಾತ್=ಕ್ರಮವಾಗಿ ನಾಲ್ಕು ಭೇದವನುಳ್ಳದಹುದು, ಶಿರಃ=ಶಿರಸ್ಸು, ವಕ್ತ್ರಂಚ=ಮುಖವು, ಹೃದಯಂ=ಹೃದಯವು, ಅಂಗಂ ಚೇತಿ=ಅಂಗವೆಂದು, ಪ್ರಕೀರ್ತಿತಂ=ಹೇಳಲುಪಟ್ಟುದು. ॥೧೦೦॥

ಶ್ಲೋಕ॥ **ಮಧ್ಯಃ ಕಂಠಸ್ತಥಾಬಾಹೂರ್ನಾಭಿಗುಹ್ಯೋದರಂ ತಥಾ ।**
ನೇತ್ರೇ ನಾಸಾ ಚ ಕರ್ಣೌ ಚ ಪಾಣೀ ಪಾದೌ ತಥಾಂಗುಲಿಃ ।
ಊರೂ ಚ ಜಾನುಜಂಘಾಶ್ಚಪ್ರತ್ಯಂಗಾಶ್ಚೇತಿ ಕೀರ್ತಿತಾಃ ।

ಟೀಕು॥ ಮಧ್ಯಃ=ನಡುವು, ಕಂಠಃ=ಕೊರಳು, ತಥಾ=ಹಾಂಗೆ, ಬಾಹೂ=ತೋಳುಗಳು, ತಥಾ=ಆ ಪಱಿಯಲ್ಲಿಯೆ, ನಾಭಿಗುಹ್ಯೋದರಾಃ=ಹೊಕ್ಕುಳು ಗುಹ್ಯಸ್ಥಾನವು, ಒಡಲೂ, ನೇತ್ರೇ ನಾಸಾ ಕರ್ಣೌಚ=ಕಂಗಳು ನಾಸಿಕವು ಶ್ರೋತ್ರಾಂಗಗಳೂ, ತಥಾ=ಹಾಂಗೆ, ಪಾಣೀ ಪಾದೌ=ಹಸ್ತಪಾದಂಗಳು, ಅಂಗುಲಃ=ಬೆರಳುಗಳು, ಊರೂ ಚ=ತೊಡೆಗಳೂ, ಜಾನುಜಂಘಾಶ್ಚ=ಮೊಣಕಾಲುಗಳೂ ಕಿಱುದೊಡೆಗಳೂ, ಪ್ರತ್ಯಂಗಾಶ್ಚೇತಿ=ಪ್ರತ್ಯಂಗಂಗ ಳೆಂದು, ಕೀರ್ತಿತಾಃ=ನುಡಿಯಲುಪಟ್ಟವು. ॥೧೦೧॥

ಶ್ಲೋಕ॥ **ಮೂರ್ತಂ ಚ ಗುಣರೂಪಂ ಚ ಸಾಂಗಂ ಚೇತಿ ಪ್ರಕೀರ್ತಿತಮ್ ।**
ಗುಣಭಿನ್ನಮಿತಿಜ್ಞೇಯಂ ತದ್ಗುಣಂ ತು ತಥಾಭವೇತ್ ॥

ಟೀಕು॥ ಮೂರ್ತಂಚ=ಮೂರ್ತಿಯನುಳ್ಳಂಥಾ, ಗುಣರೂಪಂಚ= ಗುಣಂಗಳಸ್ವರೂಪ ವನು, ಸಾಂಗಂ ಚೇತಿ=ಸಾಂಗವೆಂದು, ಪ್ರಕೀರ್ತಿತಂ=ಹೇಳಲು ಪಟ್ಟುದು, ಗುಣಭಿನ್ನಂ= ಗುಣಂಗಳ ಭೇದವು, ಇತಿಜ್ಞೇಯಂ=ಹಿಂಗೆ, ಮುಂದಣ ಶ್ಲೋಕಂಗಳಲ್ಲಿ ಅಱಿಯಲು ತಕ್ಕುದು, ತದ್ಗುಣಂ=ಆ ಗುಣ ಭೇದವು ಪ್ರತಿಹಸ್ತಂಗಳಲ್ಲಿ ಸ್ವರೂಪವನುಳ್ಳುದು, ತಥಾಭವೇತ್=ಹಾಂಗೆ ಭೇದವಾಗಿಹುದು. ॥೧೦೨॥

ಶ್ಲೋಕ॥ **ತ್ರಿಗುಣಂ ಕರ್ತೃ ಪ್ರತಾಪಂ ಚ ದುರ್ಭೇದ್ಯಾ ನಿಗ್ರಹಂ ತಥಾ ।**
ವಿಧಿರ್ಮಾಯಾ ವಿವರ್ಣಂ ಚ ವರ್ಣಂ ಸಂಹಾರಮೇವ ಚ ।
ಏತೇ ದಶ ಗುಣಪ್ರೋಕ್ತಾಸ್ತೇಷಾಂ ಲಕ್ಷಣಮುಚ್ಯತೇ ॥

ಟೀಕು॥ ಆ ಶಿವತತ್ತ್ವಸಂಭೂತವಾಗಿ ಆ ಶಿವತತ್ತ್ವವನೆಂಬಿಹಂಥಾ ಸದ್ಗುಣಂಗಳ ಲಕ್ಷಣಂಗಳಂ ಪೇಳುತ್ತಿದ್ದಾನು.

ತ್ರಿಗುಣಂ=ತ್ರಿಗುಣವೆಂದು, ಕರ್ತೃ=ಕರ್ತೃವೆಂದು, ಪ್ರತಾಪಂ=ಪ್ರತಾಪವೆಂದು, ದುರ್ಭೇದ್ಯಂ=ದುರ್ಭೇದ್ಯವೆಂದು, ತಥಾ=ಹಾಂಗೆ, ಅನುಗ್ರಹಂ=ಅನುಗ್ರಹವೆಂದು, ವಿಧಿಃ=ವಿಧಿಯೆಂದು, ಮಾಯಾ=ಮಾಯೆಯೆಂದು ವಿವರ್ಣಂ ಚ=ವಿವರ್ಣವೆಂದು, ಸಂಹಾರಮೇವ ಚ=ಸಂಹಾರವೆಂದು, ಏತೇ ದಶ=ಈ ಹತ್ತು ಪ್ರತಿ ಭಿನ್ನನಾಮಂಗಳ ನುಳ್ಳವು, ಗುಣಾಃ=ಗುಣಂಗಳೆದು, ಪ್ರೋಕ್ತಾಃ= ಹೇಳಲುಪಟ್ಟವು, ತೇಷಾಂ=ಆ ಈ ದಶಗುಣಂಗಳ, ಲಕ್ಷಣಮುಚ್ಯತೇ=ಲಕ್ಷಣವು ಹೇಳಲುಪಡುತ್ತಿದ್ದುದು.

॥೧೦೩॥

ಶ್ಲೋಕ॥ **ತ್ರಿಗುಣಂ ಶೂಲಮಿತ್ಯುಕ್ತಂ ಕರ್ತಾ ಪರಶುರುಚ್ಯತೇ ।**
ಖಡ್ಗಮೀಶ ಪ್ರತಾಪಂಸ್ಯಾದ್ದುರ್ಭೇದ್ಯಂ ವಜ್ರಮಿಷ್ಯತೇ ।
ಈಶಸ್ಯಾನುಗ್ರಹಂ ಚೈವ ತ್ವಭಯಂ ತು ಪ್ರಶಸ್ಯತೇ ॥

ವಿಧಿಸ್ಯಾನ್ನಾಗರೂಪಂ ತು ಪಾಶಂ ಮಾಯಾ ಸ್ವರೂಪಕಮ್ ।
ವಿವರ್ಣಮಂಕುಶಂ ಚೈವ ವರ್ಣಂ ನಾದಾತ್ಮಕಂ ವಿದುಃ ॥

ಸಂಹಾರಮಗ್ನಿರೂಪಂ ಸ್ಯಾತ್ತೇಷಾಂ ನಾಮಾನಿ ಕೀರ್ತಿತಾಃ ।
ಏತಾನಿ ಗುಣರೂಪಾಣಿ ಸಾಂಗಾನಿ ಚ ಯಥಾ ಕ್ರಮಾತ್ ॥

ಟೀಕು॥ ತ್ರಿಗುಣಂ=ಪರಮೇಶ್ವರನದೆಸೆಯಿಂದ ಸಂಭೂತವಾದ ಸತ್ವರಜ ತಮೋಗುಣಂಗಳು, ಶೂಲಮಿತ್ಯುಕ್ತಂ=ತ್ರಿಶೂಲವೆಂದು ನುಡಿಯಲುಪಟ್ಟುದು, ಕರ್ತಾ=ತನ್ನಲ್ಲಿ ಪ್ರಸನ್ನ ಮಾನಸರಾದಭಕ್ತರುಗಳ ಭವಾರಣ್ಯಾದಿಗಳ ಕತ್ತರಿಸುವ ಗುಣವೆ, ಪರಶುರುಚ್ಯತೇ=ಕೊಡಲಿ ಎಂದು ಹೇಳಲುಪಡುತ್ತಿಹುದು, ಈಶ ಪ್ರತಾಪಂ=ದುಷ್ಟರುಗಳ ನೋಯಿಸುವಂಥಾ ಪರಮೇಶ್ವರನ ಪ್ರತಾಪಿಗುಣವೆ, ಖಡ್ಗಂ ಸ್ಯಾತ್=ಆ ಖಡ್ಗವೆಂಬ ಆಯುಧವಹುದು, ದುರ್ಭೇದ್ಯಂ=ಪರಮೇಶ್ವರನ ಗುಣಲಕ್ಷಣವು ಆವುದಜೆಂದವು ಭೇದಿಸಬಾರದಾದ ಕಾರಣ ದುರ್ಭೇದ್ಯವೆನಿಸಿಕೊಂಬುದು. ಅಂತಹ ದುರ್ಭೇದ್ಯ ಲಕ್ಷಣವೆ, ವಜ್ರಮಿಷ್ಯತೇ= ವಜ್ರವೆಂದು ನುಡಿಯಲುಪಡುತ್ತಿಹುದು, ಈಶಸ್ಯ=ಪರಮೇಶ್ವರನ ನಿಗ್ರಹಾನುಗ್ರಹನಾಮಕ್ಕೆ

ದುಷ್ಟರಾದ ಕಾಲ ಕಾಮದಕ್ಷಮಖ ಜಲಂಧರ ನರಸಿಂಹಾದಿಗಳನು ನಿಗ್ರಹಿಸುವ ಪ್ರತಾಪ ಗುಣವೆ ಖಡ್ಗವೆನಿಸಿತ್ತಾಗಿ, ಅನುಗ್ರಂಚೈವ=ಶಿಷ್ಟರಾದ ತನ್ನ ಸದ್ಭಕ್ತಿಯುತರುಗಳನು ಅನುಗ್ರಹಿಸುವ ಗುಣವೆ, ಅಭಯಂತು=ಅಭಯವೆಂದು, ಪ್ರಶಂಸ್ಯತೇ=ಪ್ರಶಂಸಿಸಲು ಪಡುತ್ತಿಹುದು. ವಿಧಿಃ=ಆಯಾ ಭೋಗ್ಯಭೋಕ್ತೃಗಳಿಗೆ ತಕ್ಕುದಮಾಡುವಂಥಾ ನಿಯತಿಗುಣವೇ, ನಾಗರೂಪಂ=ಫಣಿಯಸ್ವರೂಪವು, ಸ್ಯಾತ್=ಅಹುದು, ಅವುದಾನೊಂದು ಮಾಯಾಶಕ್ತಿಯಹುದು ಆ ಮಾಯಾಶಕ್ತಿ ಸ್ವರೂಪ ಗುಣವೆ, ಪಾಶಂ=ಪಾಶವೆನಿಸಿಕೊಂಬುದು, ವಿವರ್ಣಂ=ವರ್ಣಂಗಳೆಂದು ನಾದಸ್ವರೂಪವು ಎರಡು ಪ್ರಕಾರವಾಗಿಹುದು, ಮೇಘಾದಿಗಳ ಭೂಮ್ಯಾದಿಗಳ ಸಂಘಟ್ಟನದಿಂದವು ವಿಷಗಾದಿಗಳ ಜಿಹ್ವೆಗಳಿಂದ ಹುಟ್ಟಿದ ಬರಹಕ್ಕೆಬಾರದ ಆವುದಾನೊಂದು ಧ್ವನಿಯಿಂದ ಅದು ವಿವರ್ಣವೆನಿಸಿಕೊಂಬುದು, ಬರಹಕ್ಕೆಬರುವ ಅಕ್ಷರ ಧ್ವನಿಯೆಲ್ಲವೂ ವರ್ಣವೆನಿಸಿಕೊಂಬುದು, ಅಂತು ವಿವರ್ಣಂಗಳೆಂಬಯೆರಡು ಶಿವತತ್ತ್ವದಲ್ಲಿಯೆ ಹುಟ್ಟಿ ತೋಱುತ್ತಿಹವಾದ ಕಾರಣ ವಿವರ್ಣಗುಣವೆ, ಅಂಕುಶಂಚೈವ=ಅಂಕುಶವೆನಿಸಿಕೊಂಬುದು. ವರ್ಣಧ್ವನಿರೂಪವಾಗಿ ಬರಹಕ್ಕೆ ಬಂದ ಅಕ್ಷರ ಸಮೂಹಗುಣವೆ, ನಾದಾತ್ಮಕಂ=ಪರಮೇಶ್ವರನ ಹಸ್ತದ ನಾದಸ್ವರೂಪವೆಂದು, ವಿದುಃ=ಅಱಿವುದು, ಸಂಹಾರಂ=ಶಿವನು ಲೀಲಾಮಾತ್ರದಿಂದ ಇಚ್ಛಾಶಕ್ತಿಯಿಂದ ಸೃಜಿಸುವನು ಲೀಲಾಂತಗೈದುವ ವೇಳೆ ಸಮಸ್ತಜಗತ್ತನು ಲಯವನ್ನೈದಿಸುವನು. ಈ ಸೃಷ್ಟಿಸಂಹಾರಂಗಳ ಮಾಡುವ ಗುಣಂಗಳೂ ಶಿವಗುಣಂಗಳು, ಅದು ಕಾರಣ ಸಂಹಾರ ಗುಣಂಗಳೆ, ಅಗ್ನಿರೂಪಂಸ್ಯಾತ್=ಶಿವನಹಸ್ತದಲ್ಲಿಯ ಅಗ್ನಿಯಸ್ವರೂಪವಹುದು, ತೇಷಾಂ=ಆ ಈ ದಶಗುಣಂಗಳ, ಏತಾನಿಗುಣಸ್ವರೂಪಾಣಿ ನಾಮಾನಿ=ಈ ಗುಣ ಸ್ವರೂಪವಾದ ಗುಣಗಳು, ಯಥಾಕ್ರಮಾತ್=ಯಥಾಕ್ರಮದಿಂದ, ಸಾಂಗಾನಿ=ಶ್ಲೋಕಂಗಳೂ, ಕೀರ್ತಿತಾಃ=ಹೇಳಲುಪಟ್ಟವು. ॥೧೦೭॥

ಶ್ಲೋಕ॥ ವಸ್ತ್ರೋಪವೀತಂ ಮಾಲ್ಯಂ ಚ ಗಂಧಮಾಭರಣಂ ಯಥಾ ।
ತಥೈವಾವರಣಂ ಚೈವ ಉಪಾಂಗಂ ಚೇತಿ ಪ್ರೋಚ್ಯತೇ ।

ಅಂಗಭೇದಮಿದಂ ಪ್ರೋಕ್ತಂ ತತ್ತ್ವ ರೂಪಮಿಹೋಚ್ಯತೆ ॥

ಟೀಕು॥ ವಸ್ತ್ರ=ವಸ್ತ್ರವು, ಉಪವೀತಂ=ಉಪವೀತವು, ಮಾಲ್ಯಂಚ=ಮಾಲ್ಯವು, ಗಂಧಂ=ಗಂಧವು, ಆಭರಣಂ=ಆಭರಣವು, ಎಂಬ ಅಂಗ ಸಮೀಪಸ್ಥವಾದ ಗುಣಂಗಳು, ಯಥಾತಂತ್ರಾಣ್ಯಸ್ಯೋಪಾಂಗಾನಿ ಭವಂತಿ=ಹೇಂಗೆ ಆಗಮಂಗಳು ಈ ಪರಮೇಶ್ವರಂಗೆ ಉಪಾಂಗಂಗಳಾಗುತ್ತಿಹವು, ತಥೈವ=ಹಾಂಗೆ, ಆವರಣಂ ಚೈವ=ಸಪ್ತಾವರಣವು,

ಉಪಾಂಗಂ ಚೇತಿ=ಉಪಾಂಗವೆಂದು, ಪ್ರೋಚ್ಯತೇ=ನುಡಿಯಲುಪಡುತ್ತಿಹುದು, ಇದಂ=ಈ ಅಂಗಭೇದವು ಅಂಗಪ್ರತ್ಯಂಗ ಸಾಂಗ ಉಪಾಂಗಗಳ ಭೇದವು, ಪ್ರೋಕ್ತಂ=ಹೇಳಲುಪಟ್ಟುದು, ತಸ್ಯ=ಆ ಸದಾಶಿನ, ರೂಪಂ=ಧ್ಯಾನಾರ್ಹವಾದ ಸ್ವರೂಪವು, ಇಹ=ಈ ತಂತ್ರದಲ್ಲಿ, ಉಚ್ಯತೇ=ನುಡಿಯಲುಪಡುತ್ತಿಹುದು. ॥೧೦೮॥

ಶ್ಲೋಕ॥ ಕುಂದೇಂದು ಸ್ಫಟಿಕಾಭಾಸಂ ಜಟಾಮಕುಟಮಂಡಿತಮ್ ।
ಪಂಚಮೂರ್ಧಸಮಾಯುಕ್ತಂ ಪಂಚವಕ್ತ್ರಸಮಾಯುತಮ್ ॥

ಟೀಕು॥ ಕುಂದೇಂದು ಸ್ಫಟಿಕಾಭಾಸಂ=ಮೊಲ್ಲೆಯ ಮುಗುಳು ಚಂದ್ರ ಸ್ಫಟಿಕಂಗಳ ಹೋಲುವ ಬೆಳಗಳನುಳ್ಳದಾಗಿ, ಜಟಾಮಕುಟಮಂಡಿತಂ=ಜಟಾಮಕುಟದಿಂದ ಪಟ್ಟುದಾಗಿ, ಪಂಚಮೂರ್ಧ=ಐದು ಶಿರಸ್ಸಿನೊಡನೆ, ಸಮಾಯುಕ್ತಂ=ಕೂಡಿದ್ದು ಆಗಿ, ಪಂಚವಕ್ತ್ರಸಮಾಯುತಂ=ಐದು ಮುಖಂಗಳೊಡನೆ ಕೂಡಿದ್ದೂ ಆಗಿಹುದು.

ಶ್ಲೋಕ॥ ಪ್ರತಿವಕ್ತ್ರಂ ವಿಶೇಷೇಣ ತ್ರಿಲೋಚನ ಸಮಾಯುತಮ್ ।
ದಿಗ್ಭುಜಂ ತು ಮಹಾಸೇನ ದ್ವಿಪಾದಂ ಪದ್ಮಸಂಸ್ಥಿತಮ್ ॥

ಶೂಲಂ ಪರಶುಖಡ್ಗಂ ಚ ವಜ್ರಾಭಯಂ ತು ದಕ್ಷಿಣೇ ।

ಟೀಕು॥ ವಕ್ತ್ರಂ ಪ್ರತಿ=ಪ್ರತಿವಕ್ತ್ರವು, ವಿಶೇಷೇಣ=ವಿಶೇಷಿಸಿ, ತ್ರಿಲೋಚನ ಸಮಾಯುತಂ=ಮೂಱು ಮೂಱನೇ ನೇತ್ರದೊಡನೆ ಕೂಡಿದ್ದುದೂ ಆಗಿ, ಭೋ ಮಹಾಸೇನ=ಎಲೈಷಣ್ಮುಖನೆ! ಭುಜಂತು=ಭುಜಮಂಡಲವಾಯಿತ್ತಾದಡೆ, ದಿಕ್=ದಶದಿಕ್ಕುಗಳ ಸಂಖ್ಯೆಯನುಳ್ಳದು, ದ್ವಿಪಾದ=ಎರಡುಪಾದವನುಳ್ಳದು, ಪದ್ಮಸಂಸ್ಥಿತಮ್=ಪದ್ಮಾಸನಸ್ಥವಾಗಿರುತ್ತಿಹುದು, ದಕ್ಷಿಣೇ=ಬಲದ ಐದು ಹಸ್ತದಲ್ಲಿಯೂ, ಶೂಲಂ ಪರಶುಖಡ್ಗಂ ಚ ವಜ್ರಾಭಯಂ ತು=ಶೂಲವು, ಪರಶುವು, ಖಡ್ಗವು, ವಜ್ರವು, ಅಭಯಪ್ರದವು ಎಂಬ ಐಯಿದಿರುತ್ತಿಹವು. ॥೧೧೧॥

ಶ್ಲೋಕ॥ ನಾಗಂ ಪಾಶಾಂಕುಶಂ ಚೈವ ಘಂಟಾಂ ವಹ್ನಿಂ ಚ ವಾಮಕೇ ।
ಸರ್ವಲಕ್ಷಣ ಸಂಯುಕ್ತಂ ಸರ್ವಾಭರಣಭೂಷಿತಮ್ ॥

ಟೀಕು॥ ವಾಮಕೇ=ಎಡದ ಹಸ್ತದಲ್ಲಿ, ನಾಗಂ ಪಾಶಾಂಕುಶಂಚೈವ ಘಂಟಾಂವಹ್ನಿಶ್ಚ=ಸರ್ಪವೂ, ಪಾಶವೂ, ಅಂಕುಶವೂ, ಘಂಟೆಯೂ, ಅಗ್ನಿಯೂ, ಎಂಬ ಈ ಅಯಿದೂಯಿರುತ್ತಿಹವು, ಸರ್ವಲಕ್ಷಣ ಸಂಯುಕ್ತಂ=ಸಮಸ್ತಲಕ್ಷಣಂಗಳೊಡನೆ ಕೂಡಿದುದು ಆಗಿ, ಸರ್ವಾಭರಣಭೂಷಿತಂ=ಸರ್ವಾಭರಣಂಗಳಿಂದ ಅಲಂಕರಿಸಲ್ಪಟ್ಟುದು. ॥೧೧೨॥

ಶ್ಲೋಕ॥ ದಿವ್ಯಾಂಬರಧರಂ ದೇವಂ ದಿವ್ಯರೂಪಮುದಾಹೃತಮ್ ।
ದಿವ್ಯಗಂಧಾನುಲಿಪ್ತಾಂಗಂ ದಿವ್ಯಮಾಲಾವಿಭೂಷಿತಮ್ ।
ಏತದ್ರೂಪಂ ಸ್ಮರೇನ್ನಿತ್ಯಂ ಧರ್ಮಕಾಮಾರ್ಥ ಮೋಕ್ಷದಮ್ ।

ಟೀಕು॥ ದಿವ್ಯಾಂಬರಧರಂ=ದಿವ್ಯವಸ್ತ್ರಂಗಳ ಧರಿಸಿದ್ದುದು ಆಗಿ, ದೇವಂ=ಕಾಂತಿಯನುಳ್ಳದಾದುದು, ದಿವ್ಯರೂಪಂ=ಸದಾಶಿವಸ್ವರೂಪವೆಂದು ಉದಾಹೃತಂ=ನುಡಿಯಲುಪಟ್ಟುದು, ದಿವ್ಯಗಂಧಾನುಲಿಪ್ತಾಂಗಂ=ದಿವ್ಯವಾದ ಗಂಧಂಗಳಿಂದ ಲಿಪ್ತವಾದ ಅವಯವಗಳನುಳ್ಳ, ದಿವ್ಯಮಾಲಾ ವಿಭೂಷಿತಂ=ದಿವ್ಯ ಮಾಲೆಗಳಿಂದಲಂಕೃತವಾದಂಥ, ಧರ್ಮಕಾಮಾರ್ಥ ಮೋಕ್ಷದಂ=ಧರ್ಮಕಾಮಾರ್ಥ ಮೋಕ್ಷಂಗಳ ಕೊಡುವದಾದ, ಏತತ್=ಈ ದೈವ ಸ್ವರೂಪವನು, ಸ್ಮರೇತ್=ಧರ್ಮಾದಿಕಾಮವನುಳ್ಳವನೆನುವುದು. ॥೧೧೪॥

ಶ್ಲೋಕ॥ ಧ್ಯಾನರೂಪಮಿದಂ ಪ್ರೋಕ್ತಂ ವಿಶೇಷಮಧುನೋಚ್ಯತೇ ।

ಟೀಕು॥ ಇದಂ ಧ್ಯಾನರೂಪಂ=ಈ ಧ್ಯಾನಾರ್ಹವಾದ ರೂಪವು, ಪ್ರೋಕ್ತಂ=ಹೇಳಲು ಪಟ್ಟುದು, ವಿಶೇಷಂ=ವಿಶೇಷವು, ಅಧುನಾ=ಈಗವು, ಪ್ರೋಚ್ಯತೇ=ನುಡಿಯಲು ಪಡುತ್ತಿಹುದು.

ಶ್ಲೋಕ॥ ಕರ್ಮೇಶಂ ಪೂರ್ವವಕ್ತ್ರಂ ಸ್ಯಾತ್ಕರ್ತೃಸ್ಯಾದ್ದಕ್ಷಿಣಾನನಮ್ ॥
ಅಪರಂ ಮೂರ್ತವಕ್ತ್ರಂ ತು ಅಮೂರ್ತಂ ಚೋತ್ತರಾನನಮ್ ।
ಊರ್ಧ್ವಂ ತು ಶಿವಸಾದಾಖ್ಯಮೇವಂ ಪಂಚಾನನಂ ವಿದುಃ ॥

ಟೀಕು॥ ಕರ್ಮೇಶಂ=ಕರ್ಮಸಾದಾಖ್ಯವು, ಪೂರ್ವವಕ್ತ್ರಂಸ್ಯಾತ್=ಪೂರ್ವ ಮುಖವಹುದು, ಕರ್ತೃ=ಕರ್ತೃಸಾದಾಖ್ಯವು, ದಕ್ಷಿಣಾನನಂ ಸ್ಯಾತ್=ಬಲದ ಮುಖವಹುದು, ಮೂರ್ತವಕ್ತ್ರಂ ತು=ಮೂರ್ತಸಾದಾಖ್ಯವಾಯಿತ್ತಾದಡೆ, ಅಪರಂ=ಪಶ್ಚಿಮಾನನವಾಗಿಹುದು, ಅಮೂರ್ತಂ ಚ=ಅಮೂರ್ತಸಾದಾಖ್ಯವು, ಉತ್ತರಾನನಂ=ಬಡಗಮುಖವಾಗಿಹುದು, ಊರ್ಧ್ವಂ ತು=ಊರ್ಧ್ವಮುಖವಾಯಿತ್ತಾದಡೆ, ಶಿವಸಾದಾಖ್ಯಂ=ಶಿವಸಾದಾಖ್ಯ ತತ್ತ್ವವು, ಏವಂ= ಈ ಪ್ರಕಾರದಿಂದ, ಪಂಚಾನನಂ=ಸದಾಶಿವನ ಪಂಚಾನನವನೂ, ವಿದುಃ=ಧ್ಯಾನಾರ್ಹಸ್ವರೂಪವೆಂದು ಅಱಿವರು. ॥೧೧೬॥

ಶ್ಲೋಕ॥ ಕರ್ಮೇಶಾನಾದಿ ಮೂರ್ತಾಂತಂ ತಥಾ ಕರ್ಮಾಖ್ಯಮುಚ್ಯತೇ

ಟೀಕು॥ ಕರ್ಮೇಶಾನಾದಿ ಮೂರ್ತಾಂತಂ=ಕರ್ಮೇಶತತ್ತ್ವ ಮೊದಲಾದ ಮೂರ್ತಿತತ್ತ್ವವು ಕಡೆಯಾದ ತ್ರಿತತ್ತ್ವವನು, ತಥಾ=ಹಾಂಗೆ, ಕರ್ಮಾಖ್ಯಂ=ಕರ್ಮವೆಂಬ ಹೆಸರನುಳ್ಳದೆಂದು, ಉಚ್ಯತೇ=ನುಡಿಯಲುಪಡುತ್ತಿದ್ದುದು. ॥೧೧೭॥

ಶ್ಲೋಕ॥ ಪ್ರಾಗ್ವಕ್ತ್ರಂ ಪೂರ್ವಮುದ್ದಿಷ್ಟಂ ಪಶ್ಚಿಮಂ ಪಶ್ಚಿಮಾನನಮ್ ।
ದಕ್ಷಿಣಾಭಿಮುಖಂ ಯಾಮ್ಯಮುತ್ತರಂ ಚೋತ್ತರಾನನಮ್ ॥

ಟೀಕು॥ ಪ್ರಾಗ್ವಕ್ತ್ರಂ=ಪೂರ್ವವಕ್ತ್ರವು, ಪೂರ್ವಮುದ್ದಿಷ್ಟಂ=ಪೂರ್ವದಿಗ್ಭಾಗೋದ್ದಿಷ್ಟವಾಗಿಹುದು, ಪಶ್ಚಿಮಂ=ಪಶ್ಚಿಮದಿಕ್ಕನುಳ್ಳದು, ಪಶ್ಚಿಮಾನನಂ=ಪಶ್ಚಿಮವದನವು, ಯಾಮ್ಯಂ=ಯಮನ ಮುಖವನುಳ್ಳದು, ದಕ್ಷಿಣಾಭಿಮುಖಂ=ದಕ್ಷಿಣಾಭಿಮುಖವಾಗಿಹುದು. ಉತ್ತರಂ ಚ=ಉತ್ತರ ದಿಕ್ಕನುಳ್ಳದು, ಉತ್ತರಾನನಂ=ಉತ್ತರಮುಖವು. ॥೧೧೮॥

ಶ್ಲೋಕ॥ ಭೇದೇ ಚಾಸ್ಮಿನ್ ವಿಶೇಷೋಽಸ್ತಿ ಚೋರ್ಧ್ವವಕ್ತ್ರಸ್ಯ ಷಣ್ಮುಖ ।
ಮೂಲಂ ಸಂಚಿತತದ್ವಕ್ತ್ರಂ ಪರಂ ಮುಖಮಿತಿ ಸ್ಮೃತಮ್ ॥

ಟೀಕು॥ ಭೋಷಣ್ಮುಖ!=ಎಲೆ ಷಣ್ಮುಖನೆ!, ಅಸ್ಮಿನ್‌ಭೇದೇ=ಈ ಮುಖಭೇದದಲ್ಲಿ ಊರ್ಧ್ವವಕ್ತ್ರಸ್ಯ=ಊರ್ಧ್ವಮುಖಕ್ಕೆ, ವಿಶೇಷೋಽಸ್ತಿ=ಭೇದವಿಶೇಷವುಂಟು, ಮೂಲಂ ಸಂಚಿತ್ಯ=ಮೂಲಮಂತ್ರದೊಡನೆ ಕೊಡಲುಪಟ್ಟಂಥಾ, ತದ್ವಕ್ತ್ರಂ= ಆ ಊರ್ಧ್ವವಕ್ತ್ರವು, ಪರಂ ಮುಖಮಿತಿ ಸ್ಮೃತಂ=ಉತ್ಕೃಷ್ಟವಾದ ಮುಖವೆಂದು ನೆನೆಯಲುಪಟ್ಟುದು.

ಶ್ಲೋಕ॥ ಪೂಜಾ ಕರ್ಮಿಣೀ ತು ತದ್ಧ್ಯಾತ್ವಾ ಚಾರ್ಚಯೇತ್ಕರ್ತೃವಕ್ತ್ರವತ್ ।
ಏವಂ ಸಂಕಲ್ಪ್ಯ ವಿಧಿವತ್ ಪೂಜಾಂತೇ ಪೂರ್ವವದ್ಭವೇತ್ ॥

ಟೀಕು॥ ಪೂಜಾಕರ್ಮಿಣೀ ತು=ಪೂಜಾ ಕ್ರಿಯೆಯನುಳ್ಳವನಾಯಿತ್ತಾದಡೆ, ತತ್=ಆ ಉತ್ಕೃಷ್ಟವದನವು, ಕರ್ತೃವಕ್ತ್ರವತ್=ಕರ್ತೃಸಾದಾಖ್ಯಮುಖವನು ಹ್ಯಾಂಗೆ ಪೂಜಿಸುವನು ಹಾಂಗೆ, ಅರ್ಚಯೇತ್=ಪೂಜಿಸುವುದು, ಏವಂ=ಈ ಪ್ರಕಾರದಿಂದ ವಿಧಿವತ್=ವಿಧಿವತ್ತಾಗಿ, ಸಂಕಲ್ಪ್ಯ=ನೆನೆದು, ಪೂಜಾಂತೇ=ಪೂಜೆಯ ಕಡೆಯಲ್ಲಿ, ಪೂರ್ವವದ್ಭವೇತ್= ಪೂರ್ವವು ಹೇಂಗೆ ಹಾಂಗಹುದು. ॥೧೨೦॥

ಶ್ಲೋಕ॥ ತಸ್ಮಾನ್ನಾದಾತ್ಮತತ್ತ್ವಂಚ ಸರ್ವಕಾರಣಕಾರಣಮ್ ।
ಸದಾಶಿವಮಿತಿ ಪ್ರೋಕ್ತಮಿತಿಶಾಸ್ತ್ರೇಷು ನಿಶ್ಚಿತಮ್ ॥

ಟೀಕು॥ ತಸ್ಮಾತ್=ಅದು ಕಾರಣ, ನಾದಾತ್ಮತತ್ತ್ವಂಚ=ಪ್ರಸಾದ ಮಂತ್ರದ ಸ್ವರೂಪವು, ಸರ್ವಕಾರಣಕಾರಣಂ=ಸಮಸ್ತ ಕಾರಣಂಗಳಿಗೆ ಕಾರಣವಾದ, ಸದಾಶಿವಮಿತಿ=ಸದಾಶಿವ ತತ್ತ್ವವೆಂದು, ಪ್ರೋಕ್ತಂ=ನಿರೂಪಿಸಲುಪಟ್ಟುದು, ಇತಿ=ಈ ಪರಿಯಿಂದ ನಿಷ್ಕಲಬ್ರಹ್ಮವೆನಿಸಿಹ ಶಿವತತ್ತ್ವವು ಸಕಲ ನಿಷ್ಕಲಾತ್ಮಕವಾದ ಶಿವರೂಪವಾಯಿತ್ತೆಂದು, ಶಾಸ್ತ್ರೇಷು= ಸಮಸ್ತಾಗಮಂಗಳಲ್ಲಿಯೂ, ನಿಶ್ಚಿತಂ=ನಿರ್ಣಯಿಸಲುಪಟ್ಟಿಹುದು. ॥೧೨೧॥

ಶ್ಲೋಕ॥ ಏತದ್ವೈ ಕರ್ಮರೂಪಶ್ಚ ಕರ್ಮ ವರ್ಮೇತಿ ಕಾರಯೇತ್ ।

ಟೀಕು॥ ಏತತ್=ಈ, ಕರ್ಮರೂಪಶ್ಚ ವೈ=ಕರ್ಮರೂಪತ್ತ್ವವು ಸಾದಾಖ್ಯ ತತ್ತ್ವವೆಂಬುದು ಪ್ರಸಿದ್ಧವು, ಅದು ಕಾರಣ, ಕರ್ಮ=ಕರ್ಮರೂಪವು, ವರ್ಮೇತಿ=ಸದ್ಭಕ್ತರುಗಳಿಗೆ, ವಜ್ರಪಂಜರವಾದುದೆಂಬ ನಿಮಿತ್ತ, ಕಾರಯೇತ್=ಸತ್ಕರ್ಮವನೆ ಮಾಡುವುದು.

ಶ್ಲೋಕ॥ ಕರ್ಷಣಾದಿಕ್ರಿಯಾದೀನಿ ಕರ್ಮಂ ಚೇತಿ ನಿಗದ್ಯತೇ ।
ತಸ್ಮಾದ್ವೈಸ್ಥಾಪನಾದೀನಿ ಕರ್ಮರೂಪಂ ತು ಕಾರಯೇತ್ ॥

ಟೀಕು॥ ಕರ್ಷಣಾದಿ ಕ್ರಿಯಾದೀನಿ=ಆಹ್ವಾನಾದಿ ಕ್ರಿಯಾ ವಿಧಾನಂಗಳು, ಕರ್ಮಂಚೇತಿ=ಕರ್ಮವೆಂದು, ನಿಗದ್ಯತೇ=ನುಡಿಯಲುಪಡುತ್ತಿಹುದು, ತಸ್ಮಾದ್ವೈ=ಅದು ಕಾರಣದಿಂದವೆ, ಸ್ಥಾಪನಾದೀನಿ=ಸ್ಥಾಪನೆಗಳನು, ಕರ್ಮರೂಪಂ ತು=ಕರ್ಮವೆಂದೆ, ಕಾರಯೇತ್=ಮಾಡುವುದು. ॥೧೨೩॥

ಶ್ಲೋಕ॥ ಲಿಂಗೇ ವಾ ಸ್ಥಂಡಿಲೇ ವಾಽಪಿ ಮಂಡಲೇ ಹೃದಯೇಽಪಿವಾ ।
ಧ್ಯಾತ್ವಾ ಸದಾಶಿವಂ ಪೂಜ್ಯ ವಿಧಿವತ್ ಸ್ಥಾಪಯೇತ್ತತಃ ।

ಟೀಕು॥ ಲಿಂಗೇ ವಾ=ಲಿಂಗದಲ್ಲಿಯಾಯಿತ್ತಾದಡೆಯೂ, ಸ್ಥಂಡಿಲೇ ವಾ=ಶುದ್ಧ ಸ್ಥಲದಲ್ಲಿ ಉದ್ಧರಿಸುವ ಲಿಂಗೋದ್ಧರಣ ಚಕ್ರೋದ್ಧರಣಂಗಳಲ್ಲಿಯಾದಡೆಯೂ, ಮಂಡಲೇ=ಆವರಣ ಮಧ್ಯದಲ್ಲಿಯಾದಡೆಯೂ, ಹೃದಯೇಽಪಿವಾ=ತನ್ನ ಹೃದಯದಲ್ಲಿಯಾದಡೆಯೂ, ಸದಾಶಿವಂ=ಸದಾಶಿವನನು ಧ್ಯಾತ್ವಾ=ಧ್ಯಾನಿಸಿ, ಪೂಜ್ಯ=ಕ್ರಿಯಾಪೂಜೆ ಭಾವಪೂಜೆಗಳನು ಮಾಡಿ, ತತಃ=ಅದಱಿಂದ ಮೇಲೆ, ವಿಧಿವತ್ ಸ್ಥಾಪಯೇತ್=ವಿಧಿವತ್ತಾಗಿ ಸ್ಥಾಪನವ ಮಾಡುವುದು. ॥೧೨೪॥

ಇಂವೃ। ಆವಾಹನಂ ಸ್ವಾತ್ಮನಿ ಚಿತ್ಪ್ರಕಾಶಂ
ತತ್ರಸ್ಥಿತಿಃ ಸ್ಥಾಪನಮೀಶ್ವರಸ್ಯ ।
ಸಾನ್ನಿಧ್ಯಮಾತ್ಮೇಶ್ವರ ಸನ್ನಿಧಾನಂ
ಸಂರೋಧನಂ ಸ್ವಸ್ಯ ಶಿವೇ ನಿರೋಧಮ್

ಟೀಕು॥ ಆವಾಹನ ಸ್ಥಾಪನ ಸನ್ನಿಧಾನ ಸಂರೋಧನಗಳೆಂಬ ನಾಲ್ಕಱ ಲಕ್ಷಣವನೂ ನಿರೂಪಿಸಿಹೆನು. ಸ್ವಾತ್ಮನಿ=ಶಿವಧ್ಯಾನ ಪರನಪ್ಪಶಿವಭಕ್ತನು ತನ್ನ ಚಿತ್ತದಲ್ಲಿ, ಚಿತ್ಪ್ರಕಾಶಂ=ಜ್ಞಾನ ಸ್ವರೂಪವಾದ ತತ್ತ್ವವನು, ಆಕರ್ಷಿಸುವುದೆ ಆವಾಹನಂ=ಆವಾಹನೆಯೆನಿಸಿಕೊಂಬುದು, ತತ್ರ=ತನ್ನ ಹೃದಯ ಕಮಲದಲ್ಲಿ, ಈಶ್ವರ ಸ್ಥಿತಿಃ=ಈಶ್ವರಮೂರ್ತಿಯ ಸ್ಥಿರವ ಮಾಡಿಕೊಂಬುದು, ಸ್ಥಾಪನಂ=ಸ್ಥಾಪನವೆನಿಸಿಕೊಂಬುದು, ಆತ್ಮ=ತನಗೆ,

ಈಶ್ವರ=ಪರಮೇಶ್ವರನ, ಸಾನ್ನಿಧ್ಯಂ=ಸನ್ನಿಧಿ ಭಾವವಹುದು. ಸನ್ನಿಧಾನಂ=ಸನ್ನಿಧಾನವೆನಿಸಿಕೊಂಬುದು, ಸ್ವಸ್ಯ ಶಿವೇ ನಿರೋಧಂ=ತನ್ನ ಚಿತ್ತವನ್ನು ಶಿವನಲ್ಲಿ ಬಂಧಿಸಿಕೊಂಡಿಹುದು. ಸಂರೋಧನಂ=ಸಂರೋಧನವೆನಿಸಿಕೊಂಬುದು. ॥೧೨೫॥

ಶ್ಲೋಕ॥ ಕರ್ತ್ರ್ಯರಾದಿ ಚತುರ್ಣಾಂತು ಸ್ಥಾಪನಂ ಚ ನಕಾರಯೇತ್ ।
ಯೋಗಿನಾಂ ಮಂತ್ರಿಣಾಂಚೈವ ಸ್ತುತಿಮಾತ್ರಭವೇದ್ಗುಹ ।

ಇತ್ಯೇ ತ್ಯೈರ್ಲಕ್ಷಣೈರ್ಯುಕ್ತಂ ಕರ್ಮಸಾದಾಖ್ಯಮುಚ್ಯತೇ ॥

ಟೀಕು॥ ಕರ್ತ್ರ್ಯರಾದಿ=ಕರ್ತ್ರ್ಯಸಾದಾಖ್ಯ ಮೊದಲಾದ, ಚತುರ್ಣಾಂ ತು=ನಾಲ್ಕು ಸಾದಾಖ್ಯಂಗಳನು, ಸ್ಥಾಪನಂ ಚ=ಸ್ಥಾಪನವನು, ನ ಕಾರಯೇತ್=ಮಾಡಲಾಗದು, ಭೋ ಗುಹ!=ಎಲೆ ಷಣ್ಮುಖನೆ! ಯೋಗಿನಾಂ ಯೋಗಿಗಳಿಗೆಯೂ, ಮಂತ್ರಿಣಾಂಚೈವ=ಮಾಂತ್ರಿಕರುಗಳಿಗೆಯೂ, ಸ್ತುತಿಮಾತ್ರಂ=ಸ್ತೋತ್ರವೆ ಪ್ರಸನ್ನಕ್ಕೆ ಕಾರಣವಹುದು, ಇತಿ=ಈ ಪ್ರಕಾರದಿಂದ, ಏತ್ಯೈರ್ಲಕ್ಷಣೈಃ=ಪೂರ್ವಶ್ಲೋಕಂಗಳಾದ ಈ ಲಕ್ಷಣಂಗಳೊಡನೆ, ಯುಕ್ತಂ=ಕೂಡಿದಂಥಾದ್ದು, ಕರ್ಮಸಾದಾಖ್ಯಂ ಉಚ್ಯತೇ=ಕರ್ಮಸಾದಾಖ್ಯವೆಂದು ನಾನಾ ಭೇದಂಗಳಿಂದ ಕೊಳಲುಪಡುತ್ತಿದ್ದುದು.

ಶ್ಲೋಕ॥ ಶಿವಾದಿ ಕರ್ಮಪರ್ಯಂತಂ ಕ್ರಮೇಣೈವ ಪ್ರಕೀರ್ತಿಕಮ್ ।
ಸಾದಾಖ್ಯ ಲಕ್ಷಣಂ ಪ್ರೋಕ್ತಂ ಮಹೇಶಂ ಶೃಣು ಷಣ್ಮುಖ ॥

ಟೀಕು॥ ಶಿವಾದಿ=ಶಿವಸಾದಾಖ್ಯ ಮೊದಲಾಗಿ, ಕರ್ಮಪರ್ಯಂತಂ=ಕರ್ಮ ಸಾದಾಖ್ಯವೆ ಕಡೆಯಾದ ಪಂಚಸಾದಾಖ್ಯ ತತ್ತ್ವವು, ಕ್ರಮೇಣೈವ=ಕ್ರಮದಿಂದವೆ, ಪ್ರಕೀರ್ತಿತಂ=ಲೇಸಾಗಿ ಹೇಳಲುಪಟ್ಟುದು, ಭೋ ಷಣ್ಮುಖ!=ಎಲೆ ಕುಮಾರನೆ!, ಸಾದಾಖ್ಯ ಲಕ್ಷಣಂ ಪ್ರೋಕ್ತಂ=ಸಾದಖ್ಯ ಲಕ್ಷಣವೆಲ್ಲವೂ ಹೇಳಲುಪಟ್ಟುದು. ಮಹೇಶಂ=ಮಹೇಶ್ವರ ತತ್ತ್ವವನು, ಶೃಣು=ಕೇಳು.

ಶಿವತತ್ತ್ವಭೇದಂಗಳು ಮೂವತ್ತೊಂದು, ಮೂವತ್ತೊಂದರೊಳಗೆ ಶಿವತತ್ತ್ವ ಸದಾಶಿವತತ್ತ್ವಂಗಳ ಷಡ್ಭೇದವ ನಿರೂಪಿಸಿ, ಮಹೇಶ್ವರ ತತ್ತ್ವದಿಪ್ಪತ್ತೈದು ಭೇದವನು ವ್ಯಕ್ತವಾಗಿ ನಿರೂಪಿಸಿತ್ತಿದ್ದಾನು. ॥೧೨೭॥

ಶ್ಲೋಕ॥ ಕರ್ಮೇಶಸ್ಯ ಸಹಸ್ರಾಂಶಾನ್ಮಹೇಶಸ್ಯ ಸಮುದ್ಭವಃ ।
ಮಹೇಶಂ ಸಕಲಂ ವಿದ್ಯಾತ್ಸೃಷ್ಟಿಸ್ಥಿತಿಲಯಾವಹಮ್ ।

ಟೀಕು॥ ಕರ್ಮೇಶಸ್ಯ=ಕರ್ಮಸಾದಾಖ್ಯವೆಂಬ ಹೆಸರನುಳ್ಳ ದಿವ್ಯ ಲಿಂಗದ ಸಹಸ್ರಾಂಶಾತ್=ಸಹಸ್ರಾಂಶದದೆಸೆಯಿಂದ, ಮಹೇಶಸ್ಯ=ಮಹೇಶ್ವರತತ್ತ್ವದ,

ಸಮುದ್ಭವಃ=ಆವಿರ್ಭವಿಸುವಿಕೆಯು, ಸೃಷ್ಟಿಸ್ಥಿತಿಲಯಾವಹಂ=ಸಮಸ್ತಲೋಕಂಗಳ ಸೃಷ್ಟಿ ಸ್ಥಿತಿಲಯಗಳ ಮಾಡುವ ತತ್ತ್ವವಾದ, ಮಹೇಶಂ=ಮಹೇಶ ತತ್ತ್ವವು, ಸಕಲಂ=ಸಕಲ ತತ್ತ್ವವೆಂದು, ವಿದ್ಯಾತ್=ಅಱಿವುದು. ॥೧೨೮॥

ಶ್ಲೋಕ॥ **ಪಂಚವಿಂಶತಿಭೇದೈಸ್ತು ತನ್ಮೂರ್ತೀ ಪಂಚವಿಂಶತಿಃ ।**

ಟೀಕು॥ ಪಂಚವಿಂಶತಿ ಭೇದೈಸ್ತು=ಮಹೇಶ್ವರ ತತ್ತ್ವದಯಿಪ್ಪತ್ತೈದು ಲೀಲಾ ಭೇದಂಗಳಿಂದವು, ತನ್ಮೂರ್ತೀ=ಆ ಮಹೇಶ್ವರಮೂರ್ತಿಯಲ್ಲಿ, ಪಂಚವಿಂಶತಿಃ= ಚಂದ್ರಧರಮೂರ್ತಿ ಮೊದಲಾದ ಪಂಚವಿಂಶತಿ=ಇಪ್ಪತ್ತೈದು ಮೂರ್ತಿಗಳು ದಯವಾದವು. ॥೧೨೯॥

ಶ್ಲೋಕ॥ ನಾನಾರೂಪಧರಂ ದೇವಂ ನಾನಾರೂಪಸಮನ್ವಿತಮ್ ।
ನಾನಾಚಿಹ್ನಸಮೋಪೇತಂ ನಾನಾಲೀಲಾಧರಂ ಹರಮ್ ॥

ಟೀಕು॥ ದೇವಂ=ಮಹೇಶನೆನಿಸಿಕೊಂಬ ಮಹಾದೇವ ತತ್ತ್ವವು, ನಾನಾರೂಪಧರಂ= ಹಲವಾರು ರೂಪಧರಿಸಿಕೊಂಡಿಹ, ನಾನಾ ರೂಪಸಮನ್ವಿತಂ=ಹಲವುರೂಪಂ ಗಳೊಡನೆಯುಕ್ತವಾಗಿಹುದು, ನಾನಾ ಚಿಹ್ನ ಸಮೋಪೇತಂ=ಹಲವಹ ಕುರುಹುಗಳೊಡನೆ ಕೂಡಿಹುದು, ಹರಂ=ಸಮಸ್ತ ಸಂಹಾರಕರೂ ಆದ, ನಾನಾ ಲೀಲಾಧರಂ=ಹಲವಹ ಲೀಲೆಗಳಡರಿಸಿಕೊಂಡಿಹುದು.

ಶ್ಲೋಕ॥ ಸ್ಥಾನಯಾನ ಸಮಾಸೀನಂ ನೃತ್ಯಕೋಪಮಸಾಮ್ಯಕಮ್ ।
ಅನೇಕಾಕಾರ ಸಂಯುಕ್ತಂ ದೇವದೇವ ಮಹೇಶ್ವರಮ್ ॥

ಟೀಕು॥ ಸ್ಥಾನಯಾನ=ಹಲವಹ ಸ್ಥಾನಂಗಳಲ್ಲಿಯೂ ಮೂಲವಹ ವಾಹನಂಗಳಲ್ಲಿಯೂ, ಸಮಾಸೀನಂ=ಮೂರ್ತಗೊಂಡಿಹಂಥಾದು, ನೃತ್ಯಕೋಪಮಸಾಮ್ಯಕಂ= ನಾಟ್ಯೋಪಮೆಯ ಚೆಲುವಿಕೆಯುಳ್ಳದು, ಅನೇಕಾಕಾರ ಸಂಯುಕ್ತಂ=ಲೆಕ್ಕವಿಲ್ಲಾದಂಥಾ ಆಕಾರಂಗಳೊಡನೆ ಕೂಡಿಹಂಥಾದು, ದೇವದೇವ ಮಹೇಶ್ವರಂ=ಸಮಸ್ತ ದೇವತೆಗಳೊಳಗೆ ದೇವತ್ವವನುಳ್ಳದು ಮಹೇಶ್ವರತತ್ತ್ವವು. ॥೧೩೧॥

ಶ್ಲೋಕ॥ ಜಟಾಮಕುಟಸಂಯುಕ್ತಮೇಕವಕ್ತ್ರಂ ತ್ರಿನೇತ್ರಕಮ್ ।
ಸರ್ವಾಭರಣ ಸಂಯುಕ್ತಮೇಕಪದ್ಮಾಸನಸ್ಥಿತಮ್ ॥

ಟೀಕು॥ ಜಟಾಮಕುಟಸಂಯುಕ್ತಂ=ಜಟಾಮಕುಟದೊಡನೆ ಕೂಡಿಹಂಥಾದ್ದು, ಏಕವಕ್ತ್ರಂ=ಒಂದು ಮುಖವನುಳ್ಳದು, ತ್ರಿನೇತ್ರಕಂ=ಮೂಱುನೇತ್ರಂಗಳವುಳ್ಳದು,

ಸರ್ವಾಭರಣ ಸಂಯುಕ್ತಂ=ಸಮಸ್ತಾಭರಣಂಗಳೊಡನೆ ಕೂಡಿಹಂಥಾದು, ಏಕಪದ್ಮಾಸನಸ್ಥಿತಂ=ಮುಖ್ಯವಹ ಪದ್ಮಾಸನಾಸೀನವಾಗಿಹಂಥಾದು.

ಶ್ಲೋಕ॥ ಮಹೇಶರೂಪಮೇವೋಕ್ತಂ ರೂಪಭೇದಮಥೋಚ್ಯತೇ ।

ಟೀಕು॥ ಏವಂ=ಈ ಪ್ರಕಾರದಿಂದ, ಮಹೇಶರೂಪಮುಕ್ತಂ=ಮಹೇಶತತ್ತ್ವದ ಸ್ವರೂಪವು ನುಡಿಯಲುಪಟ್ಟುದು, ಅಥ=ಅನಂತರವು, ರೂಪಭೇದಂ=ಪಂಚವಿಂಶತಿ ತತ್ತ್ವಂಗಳ ರೂಪಭೇದವು, ಉಚ್ಯತೇ=ನುಡಿಯಲುಪಡುತ್ತಿದ್ದುದು. ॥೧೩॥

ಶ್ಲೋಕ॥ ಪ್ರಥಮಂ ಸೋಮಧಾರೀಸ್ಯಾ ದ್ವಿತೀಯಮುಮಯಾ ಸಹ ।
ತೃತೀಯಂ ತು ವೃಷಾರೂಢಂ ಚತುರ್ಥಂ ನೃತ್ಯರೂಪಕಮ್ ॥

ಟೀಕು॥ ವಚನ : ಮಹೇಶತತ್ತ್ವಮಂ ನಿರೂಪಿಸಿ ತದನಂತರವೂ, ಮಹೇಶ್ವರಂ ತನ್ನ ಲೀಲಾ ಮಾತ್ರದಿಂ ಮಹದಾದಿ ತತ್ತ್ವಂಗಳಂ ಬ್ರಹ್ಮಾದಿ ತೃಣಾಂತವಾದ ದೇಹಿವೃಂದಮಂ ಸೃಜಿಸುತ್ತಂ ನಡೆಸುತ್ತಂ ಕಿಡಿಸುತ್ತಂ, ಮರಳಿ ಸೃಷ್ಟ್ಯಾದಿಗಳ ಮಾಡುತ್ತಂ ಹಿಂಗೆ ಸೃಷ್ಟಿಸ್ಥಿತಿ ಲಯವೆಂಬ ತ್ರಿಚಕ್ರಮಂ ತಿರುಹುತ್ತಿಹ ಕಾರಣಂ ನಾನಾಲೀಲೆಗಳಾ ವಾತುಲಾಗಮದಲ್ಲಿ ಅನುಕ್ರಮದಿಂದಿಪ್ಪತ್ತೈದು ಲೀಲೆಗಳಂ ನಿರೂಪಿಸಿಹನು. ಪ್ರಥಮಂ ಸೋಮಧಾರೀಸ್ಯಾತ್= ಮಹೇಶ್ವರನ ಮಸ್ತಕಸ್ಥವಪ್ಪ ಪರಮಾಮೃತದಿಂ ಚಂದ್ರೋತ್ಪತ್ತಿ, ಆ ಚಂದ್ರಶಕ್ತಿಗಳೆ ನಕ್ಷತ್ರ ಮಾತೃಕೆಯರು ಆ ಚಂದ್ರಂಗೆ ವ್ಯೋಮಕೇಶನ ಶಿರಸ್ಥಾನವೆ ಜನ್ಮಸ್ಥಿತಿ ವಿಲಯಸ್ಥಳವು, ಆ ಚಂದ್ರಾಮೃತದಿಂದವೆ, ಬ್ರಹ್ಮಾದಿಗಳ ಜೀವನಸ್ಥಿತಿ, ಅದುಕಾರಣ ಮಹೇಶ್ವರಂಗೆ ಚಂದ್ರಧಾರಣತ್ವವು ಸ್ವಭಾವವು, ಅನೇಕ ಕಲ್ಪಂಗಳೊಳೊಂದು ಕಲ್ಪಾಂತರದಲ್ಲಿ ಶಿವಾಜ್ಞೆಯಿಂ ಚಂದ್ರನ ಶಕ್ತಿಯರು, ದಕ್ಷಪ್ರಜಾಪತಿಯಲ್ಲಿ ಉದಯಿಸಿದರಾಗಿ ದಾಕ್ಷಾಯಣಿ ಯರಾದರು. ರೋಹಿಣೀ ನಿಮಿತ್ತವಾದ ದಕ್ಷಪ್ರಜಾಪತಿಯ ಶಾಪಮಂ ಪರಿಹರಿಸಿ ಚಂದ್ರಕಲಾಲೇಶಮಂ ಧರಿಸಿದ್ದನಾಗಿ ಸೋಮಧಾರಿಯೆನಿಸಿಹನು. ಅದುಕಾರಣ ಚಂದ್ರಧಾರಣಾವತಾರಂ ಪ್ರಥಮವು. ಉಮಾಯಾಸಹಿತಂ ದ್ವಿತೀಯಂ = ಆ ಮಹೇಶ್ವರ ಜಗದುತ್ಪತ್ತಿ ನಿಮಿತ್ತಂ ಸೋಮನಾದ. ಉಮಯಾ ಸಹಿತೋ ದೇವಃ ಸೋಮ ಇತಿ ಲೋಕೋತ್ಪತ್ತಿಕಾರಣಮ್'. 'ಉಮಾಸಹಿತವಾದುದೆರಡನೆಯವತಾರವು. ಈ ನಿತ್ಯನಪ್ಪ ಮಹೇಶ್ವರನ ಸೋಮಾವತಾರಂ=ಸರ್ವಜನಕಾವತಾರವು. ಸೃಷ್ಟಿಮೂರ್ತಿಃ=ಈ ಸೃಷ್ಟಿಕ್ರಮವು ಹೆಂಗೆಂದೊಡೆ, ಯಜರ್ವೇದೇ "ಸೋಮಃಪವತೇ ಜನಿತಾಮತೀನಾಂ ಜನಿತಾದಿವೋ ಜನಿತಾಪೃಥಿವ್ಯಾ ಜನಿತಾಗ್ನೇರ್ಜನಿತಾಸೂರ್ಯಸ್ಯ ಜನಿತೇಂದ್ರಸ್ಯ ಜನಿತಾಥವಿಷ್ಣೋ" ಉಮಾಸಹಿತನಾದದೇವಂಗೆಯೂ ವಾಯುಬುದ್ಧಿಗಳಿಗೆಯೂ ಆಕಾಶ ಶಕ್ತಿಯಂ ಅಗ್ನಿಗೆಯುಂ ಸೂರ್ಯೇಂದ್ರ ವಿಷ್ಣುಗಳಿಗೆಯುಂ ತಂದೆಯೆಂದು

ಯಜರ್ವೇದಲ್ಲಿ ಸಿದ್ಧಮಾಗಿಪ್ಪುದು, ತಥಾ ಆದಿತ್ಯ ಪುರಾಣೇ "ಮತೀನಾಂಚ ದೇವಃ ಪೃಥಿವ್ಯೋರಗ್ನೇ ಸೂರ್ಯಸ್ಯ ವಜ್ರಿಣಃ। ಸಾಕ್ಷಾದಪಿ ಚ ವಿಷ್ಣೋರ್ವೈ ಸೋಮಾಜನಿ ಇತೀಶ್ವರಃ"। ಆ ಯುಜುರ್ವೇದದ ಹಾಂಗೆ ಆದಿತ್ಯಪುರಾಣದಲ್ಲಿಯೂ ಈ ಸೃಷ್ಟಿಮೂರ್ತಿತ್ಯರ್ಥವೆ. ಶಿವಸಂಕಲ್ಪೋಪನಿಷದಿ" ಅಂಡಂ ಹಿರಣ್ಮಯಂ ಮಧ್ಯೇ ಸಮುದ್ರಂ ರುದ್ರಸ್ಯ ವೀರ್ಯಾತ್ಪ್ರಥಮಂ ಬಭೂವ। ಅಂಡಾದಿಷು ಬ್ರಹ್ಮಾಜಾತವೇದಾಶ್ಚ ತನ್ಮೇಮನಃ ಶಿವಸಂಕಲ್ಪಮಸ್ತು. "ಮಹೇಶೋಪನಿಷದ್ಯುಕ್ತವಾದ ಜಲಮಧ್ಯರೇತಸ್ಸಿನಿಂದಾದ ಅಂಡದದೆಸೆಯಿಂದ ಬ್ರಹ್ಮವಿಷ್ಣ್ವಾದಿ ದೇವತೆಗಳು ಒಂದು ಕಲ್ಪದಲ್ಲಿ ಹುಟ್ಟಿದರೆಂದು ಶಿವಸಂಕಲ್ಪೋಪನಿಷದುಕ್ತವು. ಸ್ಕಾಂದೇ: ಮದಂಗ ಸ್ವೇದ ಸಂಭೂತಾ ಬ್ರಹ್ಮನಾರಾಯಣಾ ವಿಧೋಃ।" ಉಮಾಪತಿಯಂಗದ ಬೆಮರಿನಿಂದ ಈ ಜಗತ್ಸೃಷ್ಟಿಸ್ಥಿತಿ ಕರ್ತೃಗಳಾದ ಬ್ರಹ್ಮ ನಾರಾಯಣರು ಒಂದು ಕಲ್ಪದಲ್ಲಿ ಹುಟ್ಟಿದರೆಂದು ಸ್ಕಾಂದದಲ್ಲಿ ನಿರೂಪಿತವಾಗಿಪ್ಪುದು. ಆದಿತ್ಯ ಪುರಾಣೇ "ಬ್ರಹ್ಮಾ ವಿಷ್ಣ್ವರ್ಕಶಕ್ರಾಗ್ನಿರ್ಜಲಧರ್ಮಪುರೋಗಮಾಃ। ಸುರಾಸುರಾಸ್ಸಂಪ್ರಸೂತಾಃ ತತಃ ಸರ್ವೇ ದಿವೌಕಸಃ। ಆ ಉಮಾಸಹಿತವಾದ ಮಹೇಶ್ವರನಿಂದ ಬ್ರಹ್ಮವಿಷ್ಣುಸೂರ್ಯ ಅಗ್ನಿ, ಇಂದ್ರ ಇವರೇ ಮೊದಲಾದ ದೇವತೆಗಳು, ಅಸುರರುಗಳು ಸಮಸ್ತಸ್ವರ್ಗಸ್ಥರೂ ಹುಟ್ಟಿದರೆಂದು ಸೂರ್ಯಪುರಾಣವು ಹೇಳುತ್ತಿಹುದು. ಇತ್ಯಾದಿ; ಕಾಳಿಕಾಖಾಂಡೇ: "ವಿಷ್ಣು ಸಂಜ್ಞಾಹ್ಯಸಂಖ್ಯಾತಾಹ್ಯ ಸಂಖ್ಯಾತ ಪಿತಾಮಹಾಃ। ಅಸಂಖ್ಯಾತಾಸುರೇಂದ್ರಾದ್ಯಾ ನಿತ್ಯ ಏಕೋ ಮಹೇಶ್ವರಃ" ಇತ್ಯಾದಿಗಳಾದುದಯಂಗಳು ಹಲವು ಕಲ್ಪಗಳಲ್ಲಿಯುಂ ಆ ನಿತ್ಯಮಾದವನದೆಸೆಯಿಂದ ಕಲ್ಪಾಂತರಂಗಳಲ್ಲಿ ಹುಟ್ಟಿದ ವಿಷ್ಣುವೆಂಬವರು ಲೆಕ್ಕವಿಲ್ಲದವರೆಂದು, ಬ್ರಹ್ಮನೆಂಬುವರು ಲೆಕ್ಕವಿಲ್ಲದವರೆಂದು, ಇಂದ್ರಾದಿ ದೇವತೆಗಳು ಲೆಕ್ಕವಿಲ್ಲದವರೆಂದು ನಾನಾ ಲೀಲಾಧರನಪ್ಪ ಮಹೇಶ್ವರನೊಬ್ಬನೇ ಎಂದು ಸ್ಕಾಂದದಲ್ಲಿ ಹೇಳಿಹುದು. ಅದು ಕಾರಣ ಸೋಮಾವತಾರವೆರಡನೆಯದು. ತೃತೀಯಂತು ವೃಷಾರೂಢಂ=ಮೂಱನೆಯದಾಯಿತ್ತಾದಡೆ ವೃಷಭಾರೂಢಾವತಾರವು. ಆ ವೃಷಭಾರೂಢತ್ವವು ಹೆಂಗೆಂದಡೆ, ಸ್ಕಾಂದೇ: "ಕಲ್ಪಾಂತ ಸಂಹೃತಿಂ ಕೃತ್ವಾ ಸ್ವಯಮೇಕೋ ಮಹೇಶ್ವರಃ। ನಾನಾರ್ಥ ಪರಮಂ ಭಾವಂ ಸ್ವಾತಂತ್ರ್ಯಂ ಚಾತ್ಮನಃ ಸ್ಮರೇತ್। ಏಕೋ ಮಾ ಸಾಕ್ಷಿಣೀ ವಿದ್ಯಾ ಚತುಷ್ಷಷ್ಟಿಕಲೇಶ್ವರೇ। ತಸ್ಯಾಂ ವೇದಾಂಶ್ಚ ಮಂತ್ರಾಶ್ಚ ಸಂಸ್ಥಿತಾ ನಿತ್ಯತಾಂಗತಾಃ"। ಆ ಮಹೇಶ್ವರಂ ಸೃಷ್ಟಿಲೀಲೆಯಿಂ ಬಿಟ್ಟು ಸಂಹಾರಲೀಲಾ ವ್ರತನಾದಾಗ ಕಲ್ಪಕಲ್ಪಂಗಳ ಕಡೆಯಲ್ಲಿ ಸಮಸ್ತವನು ಸಂಹರಿಸಿ ತನ್ನ ಸ್ವತಂತ್ರವನು ನೆನೆವುತ್ತಾನೊಬ್ಬನೆ ನೃತ್ಯವನಾಡುವನು. ಅಱುವತ್ತುನಾಲ್ಕು ವಿದ್ಯಾಕಲೆಗಳೊಡತಿಯಾಗಿ ವಿಶ್ವಶಕ್ತಿಯೂ ಸಾಕ್ಷಿಸ್ವರೂಪಿಯಾಗಿ ಆದಿವಿದ್ಯೆಯಾದ ಉಮಾಮಹೇಶ್ವರಿ ಎಂಬೊಬ್ಬಳೆ ನಿತ್ಯಳಾಗಿಹಳು. ಆ ನಿತ್ಯಳಪ್ಪ ಮಹೇಶ್ವರನ ಉಮಾಶಕ್ತಿಯಲ್ಲಿ ವೇದಂಗಳೂ ಮಂತ್ರಂಗಳೂ

ನಿತ್ಯತ್ವವನ್ನೈದುತ್ತಿಹವು. "ತಥಾನಹೋ ನ ರಾತ್ರಿಶ್ಚ ನ ವಿಷ್ಣುರ್ನಪ್ರಜಾಪತಿಃ । ನಾಕಾಶಾದೀನಿ ಭೂತಾನಿಃ ಪುನರ್ಭೌತಿಕಂ ಜಗತ್"। ಕಾಳಿಯೆಂಬ ಸಂಹಾರ ಶಕ್ತಿ ಸಮೇತನಾದ ಆ ಮಹೇಶ್ವರಂ ಸರ್ವಮಂ ಸಂಹರಿಸಿ ತಾನೊಬ್ಬನೆ ನೃತ್ಯಪ್ರಿಯನಾಗಿದ್ದ. ಆ ವೇಳೆಯಲ್ಲಿ ಚಂದ್ರಸೂರ್ಯರೂ ಲಯವಾಗಿ, ಇರುಳು ಹಗಲುಗಳಿಲ್ಲ ಬ್ರಹ್ಮವಿಷ್ಣುಗಳು ಲಯವನ್ನೈದಿ ಸೃಷ್ಟಿಸ್ಥಿತಿಗಳಿಗೆ ಸಾಧನಂಗಳಪ್ಪ ಪಂಚಭೌತಿಕಂಗಳೂ ಇಲ್ಲ. ಆ ಪಂಚಭೂತ ಸಂಬಂಧವಾದ ಜಗತ್ತೂ ಇಲ್ಲ. "ಧರ್ಮೋ ಪರಾತನುಃಶಂಭೋದೃಷ್ಟ್ವಾನಷ್ಟ ಚರಾಚರಮ್। ನಷ್ಟೋಮೇವೇತಿಭಿಯುರ್ಕ್ತೋ ವೃಷೋಭೂತೇಸಮಾಶ್ರಿತಃ ।" ಶಂಭೋಃ=ಆಮಹೇಶ್ವರನ, ಪರಾತನುರ್ಧರ್ಮ=ಅಕ್ಷಯವಾದ ಉತ್ಕೃಷ್ಟಮೂರ್ತಿಯಪ್ಪ ಧರ್ಮವು, ನಷ್ಟಂ ಚರಾಚರಂದೃಷ್ಟ್ವಾ=ನಾಶವಾಗಲು ಪಟಸ್ಥಾವರಜಂಗಮಾತ್ಮಕವಾದ ಸಮಸ್ತವನು ಕಂಡು, ನಷ್ಟಭಿಯುರ್ಕ್ತಂ=ನನಗೆ ಯಾವ ನಷ್ಟವಹುದಕ್ಕೆಯೆಂದು, ಭೀತಿಯಾದೊಡನೆ ಕೂಡಲುಪಟ್ಟುದಾಗಿ, ವೃಷೋಭೂತೇಶಮಾಶ್ರಿತಃ=ವೃಷಭಾಕಾರವಾಗಿ ಮಹೇಶ್ವರನನಾಶ್ರಯಿಸಿತ್ತು. "ಮಾಭೂನ್ನಾಶೋವೃಷಸ್ಯೇತಿ ತಂ ಚಕ್ರೇ ವಾಹನಂ ಶಿವಃ। ವೃಷರೂಪಮುವಾಚೇದಂ ಧರ್ಮಂ ತತಃ ಪರಶ್ಶಿವಃ । ಸರ್ವದಾಶ್ವವಿನಾಶಾಯ ವಾಹನ ತ್ವಂ ಭಜಸ್ವಮೇ । ಮಾಂ ಧಾರಯಸಿ ಧರ್ಮತ್ವಂ ವೃಷರೂಪೇಣ ಸರ್ವದಾ। ತ್ವಾಮಹಂಧಾರಯಾಮ್ಯೇವ ಮಚ್ಛಕ್ತ್ಯೋ ಪರಿಬೃಂಹಿತಮ್ । ಇತ್ಯೇವಂ ಧರ್ಮಮಾಜ್ಞಾಪ್ಯ", ನಾಶವಾಗದಿರಲೆಂದು ಜ್ಞಾಪಿಸಿ ಆ ವೃಷಭನಂ ಶಿವಂ ವಾಹನವನಾಗಿ ಮಾಡಿಕೊಂಡನು, ಆ ಧರ್ಮಸ್ಥನಾದ ಪರಶಿವಂ, ಎಲೆ ವೃಷಭಾ! ಎಲ್ಲಾಗಳೂ ವಿನಾಶವಿಲ್ಲದುದಕ್ಕೋಸ್ಕರ ನನಗೆ ವಾಹನತ್ವಮಂ ಭಜಿಸು, ಎಲೆ ಧರ್ಮವೆ! ನೀನು ವೃಷಭರೂಪಿನಿಂದ ಎಲ್ಲಾಗಳೂ ನನ್ನಂ ಧರಿಸುತ್ತಿರು. ಮಚ್ಛಕ್ತಿಪರಿಬೃಂಹಿತವಾದ ನಿನ್ನಂ ನಾನು ಧರಿಸುತ್ತಿದ್ದೆನು ಎಂದು ಹೀಂಗೆ ಮಹೇಶ್ವರಂ ಧರ್ಮಜ್ಞಾಪನಂ ಮಾಡಿದ ಕಾರಣಂ ವೃಷಭಾರೂಢತ್ವಂ ಸ್ವಭಾವಸಿದ್ಧವಾಗಿಪ್ಪುದು. ಆ ಧರ್ಮಸದ್ಭಕ್ತಿ ಸ್ವರೂಪಂಬೆತ್ತಿಪ್ಪುದು. ಸದ್ಭಕ್ತಿಯಿಲ್ಲದೆ ಬ್ರಹ್ಮಾದಿಗಳ ಉಪಮಾನ ಶಕ್ತಿಗಳು ಶಿವನಂ ಧರಿಸಲಜೆಯವು. ಈಯರ್ಥಕ್ಕುದಾಹರಣಂ: ಚತುಃಪಾದ್ವೃಷರೂಪಿತ್ವಾದ್ಬ್ರಹ್ಮಣಃ ಪುತ್ರತಾಂಗತಃ । ಧರ್ಮಸ್ಸರ್ವಾರ್ಚಿತಃ ಶಶ್ವದ್ವಾಹನೋಮೇ ಭವಾನಿಶಂ । ಧ್ವಜೇ ಚ ಮಮ ಗೋವಿಂದ ತೇನ ಮಾಂ ವೃಷಭಧ್ವಜಮ್ । ಅಹೋರ್ಮಾ ವೃಷಭವಾಹಂಚಾ ಶೂರ ಯಾ ವೇದತತ್ವರಾಃ।" ಒಂದು ಕಲ್ಪದಲ್ಲಿ ಭಕ್ತಿಪ್ರಧಾನದಿಂದ ಮೇಲೆ, ಅಹಂಕಾರದಿಂ ತಚ್ಛಕ್ರಮಂ ನೀಗಿಯೂ ಅಹಂಕಾರಮುಡುಗಿ ಸದ್ಭಕ್ತಿಯಿಂ ಪ್ರತಿದಿನಂ ಸಹಸ್ರಕಮಲಂ ಗಳಿಂದೀಶಾರ್ಚನೆಯಂ ಮಾಡಿ ಚಕ್ರಮಂ ಪಡೆದು, ಅಹಂಕಾರಂ ಮರಳಿ ಹುಟ್ಟದಂತೆ ದಾಸ್ಯಮಂ ಮರಳಿ ಪ್ರಾರ್ಥಿಸಲಾಗಿ, ಮಹೇಶ್ವರಂ ವಿಷ್ಣುವಿಂಗೆ ಧ್ಯಾನಮಂ

ನಿರೂಪಿಸಿದನು, ಎಲೆ ವಿಷ್ಣುವೆ! ನಾಲ್ಕು ವೇದಂಗಳನುಳ್ಳ ವೃಷಭರೂಪದಿಂ ಬ್ರಹ್ಮನ ಪುತ್ರತ್ವವನೈದಿ, ಸಮಸ್ತ ಪೂಜಿತನಪ್ಪ ಧರ್ಮವಾಗಿ ಎಲ್ಲಾಗಳು ನನಗೆ ವಾಹನವಾಗು ನನ್ನ ಧ್ವಜದಲ್ಲಿಯೂ ಇರು, ಹೀಂಗೆ ನಿನ್ನ ಭಕ್ತಿಯ ಕಾರಣದಿಂದವೆ ತತ್ಪರರಪ್ಪ ಯೋಗಿಗಳು ವೃಷಭವಾಹನನೆಂದು, ವೃಷಭಧ್ವಜನೆಂದು ನನ್ನ ಸ್ತುತಿಸುತ್ತಿಹರು. ಈಯರ್ಥದಿಮೊಂದು ವೃಷಭಾ ರೂಢತ್ವಂ ಪ್ರಸಿದ್ಧಂ. ಉಪಮಾನ ಶಕ್ತಿರ್ವ್ಯರ್ಥೋ ದಾಹರಣಂ ವಿಷ್ಣುವೃಷೇಂದ್ರ ರೂಪೇ ಚ ಉದಾಹರಣ ಶಿರಸಾರಥಂ= ತ್ರಿಪುರ ದಹನದ ಲೀಲಾರ್ಥಂ ಬ್ರಹ್ಮಾದಿಕಲ್ಪಿತ ರಥಮಂ ಮಹೇಶ್ವರನಂಗುಷ್ಟದಿಂದೊಡೆ ಮೆಟ್ಟಿದಾಗ ಭಕ್ತಿ ಸುಲಭನೆಂದಱಿದು, ವಿಷ್ಣು ವೃಷಭ ರೂಪವನು ಶಿರಸ್ಸಿನಿಂದಾರಥ ಮಂಧರಿಸಿದನು. ಇತ್ಯಾದಿ; ತೃತೀಯಂ ತು ವೃಷಾರೂಢಂ=ಇವು ಮೊದಲಾದ ಕಲ್ಪಭೇದಂಗಳಲ್ಲಿ ವೃಷಭಾರೂಢತ್ವಂ ಪ್ರಸಿದ್ಧಾವತಾರಂ ಮೂಱನೆಯವತಾರವು. ಚತುರ್ಥಂ ನೃತ್ಯಕೋಪಮಂ=ಹೀಂಗೆ ಕಲ್ಪ ಕಲ್ಪಂಗಳಲ್ಲಿ ಸಕಲಮಂ ಸಂಹರಿಸಿ ತಾನೊಬ್ಬನೆ ನೃತ್ಯ ಲೀಲಾಯುಕ್ತನಾಗಿಹನು. ಹಾಂಗಿಹ ನೃತ್ಯಮಂ ಬ್ರಹ್ಮಾದಿಗಳ ಏವಂ ತಾಂಡವನೃತ್ಯ ಲೀಲಾವತಾರಂ ಚತುರ್ಥಂ ನೃತ್ಯಕೋಪಮಂ ನಾಲ್ಕನೆಯವತಾರವು. ॥೧೩೪॥

ಶ್ಲೋಕ॥ ವೈವಾಹಂ ಪಂಚಮಂ ವಿಂದ್ಯಾತ್ ಷಷ್ಠಂ ಭಿಕ್ಷಾಟನಂ ಭವೇತ್ ।
ಕಾಮಾರೀ ಸಪ್ತಮಂ ವಿಂದ್ಯಾತ್ಕಾಲಾತೀತಾ ಅಷ್ಟಮಂ ಭವೇತ್ ॥

ಟೀಕು॥ ವೈವಾಹಂ ಪಂಚಮಂ ವಿಂದ್ಯಾತ್=ಅವಿನಾಶಿನಿಯಾಗಿ ತನ್ನ ಸಹಚಾರಿಣಿ ಯಾಗಿಪ್ಪ ಉಮಾಶಕ್ತಿಯ ಲೀಲಾವತಾರಂಗಳಲ್ಲಿ ವಿವಾಹೋತ್ಸಾಹಮಂ ನಟಿಸುವ ಲೀಲೆ ಐದನೆಯವತಾರವೆಂದಱಿವುದು. ಷಷ್ಠಂ ಭಿಕ್ಷಾಟನಂ ಭವೇತ್=ತನ್ನ ದಿವ್ಯ ಶಕ್ತಿ ಸಮೇತನಾಗಿಪ್ಪ ಮಹೇಶ್ವರನಂ ಪರಬ್ರಹ್ಮವೆಂದಱಿವುದೆ, ಸಮಸ್ತ ದೇವಾದಿಗಳಂತೆ ಮಾಯಾ ಸಮೇತನೆಂದು ವಿಪರೀತ ಜ್ಞಾನಿಯಾದ ಬ್ರಹ್ಮನಂ ಶಿರಸ್ಸಂ ನಖದಿಂ ಚಿವುಟಿದ. ತದಹಂಕಾರ ಮಧ್ಯ ಕಂದರಮನಿಸಿರ್ದ ನಿರ್ಗತ ರುಧಿರ ಪ್ರಳಯಾಂಬುಧಿಯಂ ಲಲಾಟ ನೇತ್ರಾಗ್ನಿಲೇಶಕಿತ್ತು ಆ ನೇತ್ರಾಗ್ನಿ ಲೇಶಮಂ ತತ್ಕಪಾಲದಲ್ಲಿ ಧರಿಸಿಕೊಂಡು ತದ್ದಾಹಶಮನಾರ್ಥಂ ಸಮಸ್ತಲೋಕಂಗಳೈದವೆಂಬ ದೃಷ್ಟಮಂ ತೋಱುವ ತತ್ಕಪಾಲಪಾಣಿಯಾಗಿ ಭಿಕ್ಷಾಟನಮಂ ಕೈಕೊಂಡ ಲೀಲೆಯಾಱನೆಯವತಾರ ವಹುದು. ಕೌಮಾರೀ ಸಪ್ತಮಂ ವಿಂದ್ಯಾತ್=ಶಕ್ತಿ ಸಮೇತನಾಗಿದ್ದಂ ಬ್ರಹ್ಮಾದಿಗಳಂತೆ ಕಾಮಿಯಲ್ಲೆಂಬ ಪ್ರತ್ಯಕ್ಷ ಪ್ರಮಾಣಂ ತೋಱಲು, ನೇತ್ರಾಗ್ನಿಯಿಂ ಮನ್ಮಥಾಂಗಮಂ ನುರಿಹಿದುದು ಏಳನೆಯವತಾರವೆಂದಱಿವುದು. ಕಾಲಾರಿ ಚಾಷ್ಟಮಂ ಭವೇತ್=ಉತ್ಪತ್ತಿ

ಸ್ಥಿತಿಲಯವೆಂಬ ಕೃತ್ಯಮಂ ತೋಱುವ ತ್ರಿವಿಧಮಂ ನಡೆಸುತ್ತಿಪ್ಪ ತ್ರೈಕಾಲೇ ತನ್ನಿಂದ ನಡೆಯುತ್ತಲ್ಲದೆ ತಾನಾ ಕಾಲದಿಂ ನಡೆಯನೆಂಬ ದೃಷ್ಟಮಂ ತೋಱಲು ತನ್ನನ್ನಾಶ್ರಯಿಸಿದ ಮಾರ್ಕಂಡೇಯಾದಿಗಳ ನಿಮಿತ್ತಂ ಕಾಲನಂ ಸಂಹರಿಸಿದ ಲೇಲೆಮೆಂಟನೆಯದಹುದು.

ಶ್ಲೋಕ॥ ನವಮಂ ತ್ರಿಪುರಾರಿಸ್ಸ್ಯಾಜ್ಜಲಂಧರವಧಂ ದಶಮ್ ।
ಏಕಾದಶಮಜಾರಿಸ್ಸ್ಯಾದ್ದ್ವಾದಶಂ ವೀರಭದ್ರಕಮ್ ॥

ಟೀಕು॥ ನವಮಂ ತ್ರಿಪುರಾರಿಸ್ಸ್ಯಾಜ್ಜಲಂಧರ ವಧಂ=ಬ್ರಹ್ಮಾದಿ ಪಶುಗಳಿಗೆ ತಾನೇ ಪತಿ ಎಂಬುದಂ, ಆ ಬ್ರಹ್ಮಾದಿ ಪಶುಗಳು ಮಹೇಶ್ವರ ಮಾಯಾ ನಿರ್ಮಿತವು ತತ್ತ್ರಯಮಂ ದಹನಂ ಮಾಡಿದ ಲೀಲೆಯೊಂಭತ್ತನೆಯದು ಅವತಾರವಹುದು, ಜಲಂಧರವಧಂ ದಶಂ=ಸಮುದ್ರ ಮಧ್ಯದಲ್ಲಿ ಚಕ್ರಮಂ ಲಿಖಿಸಿ ನಿತ್ಯ ಮರಣೀಯಪ್ಪದುಷ್ಟ ಜಲಂಧರಾಸುರನನ್ನು ವಧಿಸಿದವತಾರಂ ಹತ್ತನೆಯದು. ಏಕಾದಶಮಜಾರಿಸ್ಯಾತ್= ಅನಿಯತ ಮಾರ್ಗಿಯಾಗಿ ಮೃಗರೂಪಿಂ ಮಗಳ ರಮಿಸುತ್ತಿರ್ದಲ್ಲಿ ಬ್ರಹ್ಮನ ಶಿರಸ್ಸಂ ಹಜೆಯಲೆಚ್ಚ ಅವತಾರಂ ಮೊದಲಾಗಿ ಕಲ್ಪಕಲ್ಪಂಗಳಲ್ಲಿ ದರ್ಪಿಸಿ ಅಜನಸಂಹರಿಸಿದುದು ಹನ್ನೊಂದನೆಯ ಲೀಲೆಯಹುದು. ದ್ವಾದಶಂ ವೀರಭದ್ರಕಂ=ಶಿವೋದ್ದಿಷ್ಟವಲ್ಲದ ಸತ್ಕರ್ಮಂ ದುಷ್ಕರ್ಮವಹುದೆಂಬುದಂ ತೋಱಲೋಸುಗರ ದಕ್ಷಮಖಮಂ ಕೆಡಿಸಿದ ವೀರಭದ್ರಾವತಾರಂ ಹನ್ನೆರಡನೆಯವತಾರವು. ॥೧೩೬॥

ಶ್ಲೋಕ॥ ತ್ರಯೋದಶಂ ಹರಿಧ್ವಂಸೀ ತ್ವರ್ಧನಾರೀ ಚತುರ್ದಶಮ್ ।
ಪಂಚದಶಂ ಕಿರಾತಃ ಸ್ಯಾತ್ಕಂಕಾಲೀ ಷೋಡಶಂ ಭವೇತ್ ॥

ಟೀಕು॥ ತ್ರಯೋದಶಂ ಹರಿಧ್ವಂಸೀ=ಕಲ್ಪ ಕಲ್ಪಂಗಳಲ್ಲಿ ವಿಷ್ಣುವಿನ ನಾನಾವತಾರಂಗಳನು ಸಂಹರಿಸಿದುದುಂ, ಹರಿಧ್ವಂಸವೆನಿಸಿಕೊಂಬುದು ವಿಶೇಷವಹ ನರಸಿಂಹ ವಿದಾರಣಂ ಹರಿಧ್ವಂಸವೆನಿಸಿಕೊಂಬುದು. ಆ ಕಲ್ಪಭೇದಾವತಾರ ದೃಷ್ಟವಾವುದೆಂದಡೆ, ಅಥರ್ವವೇದೇ "ತ್ರ್ಯಂಬಕೋ ಬಕೋ ನಾಮ ರುದ್ರೋನಾರಾಯಣ ಶಿವಶ್ಶಂಭುನಾ ಚ ಕೀರ್ತಿಃ"। ಮಹೇಶ್ವರನೊಂದು ಕಲ್ಪದಲ್ಲಿ, ಬಕರುದ್ರನಾಗಿ ಮತ್ಸ್ಯಾವತಾರದ ನಾರಾಯಣನ ಶಿರಸ್ಸಂ ಅಂಬುವಿನಿಂದ ಕತ್ತರಿಸಿದನೆಂದು ಅಥರ್ವಣ ವೇದದಲ್ಲಿ ಹೇಳಿಹುದು. ಕಾಳಿಕಾ ಖಾಂಡೇ : ಪ್ರಾಣ್ಯುಪಕಾರಾಯ ಕೂರ್ಮ ಸಂಹೃತ್ಯ ಗರ್ವಿತಮ್ । ತದಂಗ ಭೂಷಣತ್ವೇನ ಧಾರಯಾಮಾಸ ಶಂಕರಃ ॥ ಮತ್ತೊಂದು ಕಲ್ಪದಲ್ಲಿ ಪ್ರಾಣಿಹಿತಕ್ಕೋಸುಗ ಗರ್ವಿಸಲುಪಟ್ಟ ಕೂರ್ಮಾವತಾರಮಂ ಸಂಹರಿಸಿ ಆ ಕೂರ್ಮಶಿರಸ್ಸಂ ಮಹೇಶ್ವರನಾಭರಣವ ಮಾಡಿ ಧರಿಸಿದನೆಂದು ಕಾಳಿಕಾ ಖಂಡದಲ್ಲಿ ಹೇಳಿಹುದು. ಮಹಾನಾದಕ್ಕೆ "ಕಲ್ಪಾಂತೇ ಶಮಿತ ತ್ರಿವಿಕ್ರಮ ಮಹಾಕಂಕಾಳ ಬದ್ಧಸ್ಫುರಃ । ಭೈಷಸ್ಯತ್ರ ನೃಸಿಂಹ ಪ್ರಾಣ ನಖರ ಪ್ರೋಕ್ತಾದಿ

ತೋಲಾಮಿಷವ್ । ವಿಶ್ವೇಕಾರ್ಣವಸಂ ವಿಹಾರ ಮುದಿತಾ ಯೌಮತ್ಸ್ಯ ಕೂರ್ಮಾವುಭೌ। ಕರ್ಷನ್ ಧೀವರತಾಂ ಗತೋಸ್ಯತು ಮಹಾಮೋಹಂ ಮಹಾಭೈರವಃ ಕಲ್ಪಾಂತೇ=ಒಂದು ಕಲ್ಪದ ಕಡೆಯ ಜಲ ಪ್ರಳಯದಲ್ಲಿ, ಶಮಿತ ತ್ರಿವಿಕ್ರಮ ಮಹಾಕಂಕಾಳ ಬದ್ಧಸ್ಫುರ ಭೈಷಸೂತ್ರಂ=ಬೇರೊಂದು ಕಲ್ಪದಲ್ಲಿ ನರಹತ್ಯವಾದ ತ್ರಿವಿಕ್ರಮಾವತಾರದ ದೊಡ್ಡಿತಪ್ಪ ಬೆನ್ನೆಲುವಂ ಗಾಣಗದ್ದಿಗೆಯಂ ಮಾಡಿ ಆ ಗಾಣಗದ್ದಿಗೆಯಲ್ಲಿ ಬಂಧಿಸಿ ಒಪ್ಪುತ್ತಿದ್ದ ಅನಂತಾವತಾರಮಂ ಗಾಣದನೇಣಂಮಾಡಿ ಅಥೋನ್ನೃಸಿಂಹ ನಖರಃ ಪ್ರೋಕ್ತಾದಿ ತೋಲಾಮಿಷಂ=ಮತ್ತೊಂದು ಕಲ್ಪದಲ್ಲಿ ಹತ್ತಿಕೊಂಡ ನೃಸಿಂಹನ ಭೂತಮಪ್ಪ ನಖರಮನಾ ತುದಿಯ ಕೊಂಕಿಯಂ ಮಾಡಿಯೂ ಕೊಂಕಿಯಲ್ಲಿ ತದನ್ಯ ಕಲ್ಪದಲ್ಲಿ ಹತವಾದ ಆದಿವರಾಹನ ಮಾಂಸಮಂ ಆ ಕೊಂಕಿಯಲ್ಲಿ ಹೊರೆಯಮಾಡಿ ಪೋಣಿಸಿ, ವಿಶ್ವೇಕಾರ್ಣವಸಂ ವಿಹಾರಮುದಿತಾ ಯೌಮತ್ಸ್ಯಕೂರ್ಮಾವುಭೌ=ಸಮಸ್ತ ಸಮುದ್ರಂಗಳೇಕವಾದ ಪ್ರಳಯಾಂಬುಧಿಯಲ್ಲಿ ವಿಹರಿಸುವಲ್ಲಿ ಸಂತೋಷಿಸಲುಪಟ್ಟ ಮತ್ಸ್ಯ ಕೂರ್ಮಾವತಾರಂಗಳನು, ಕರ್ಷನ್ ದೇವತಾಂಗತೋಮಹಾಭೈರವಃ=ಈ ಸಾಧನಯುಕ್ತವಾದ ಗಾಣಗಟ್ಟಿಗೆಯಂ ತೆಗೆವುತ್ತ ದೇವರತ್ವವನ್ನೈದಿದ, ಸತಾಂ ಮೋಹಮಸ್ತುತು=ಸತ್ಪುರುಷರುಗಳ ಜ್ಞಾನಮಂ ಕೆಡೆಸಲಿ ಎಂದು ಮಹಾನಾಟಕದಲ್ಲಿಯೂ ಸ್ಫುರ ಶ್ಲೋಕಮುಂಟು(?) ಈ ಪ್ರಕಾರದಿಂದ ಹರಿಧ್ವಂಸ ಹಲವಾಗಿಪ್ಪುದು. ॥೧೩೭॥

ಶ್ಲೋಕ॥ ದೃಷ್ಟ್ವಾಜಗ್ರಾಹದಂಷ್ಟ್ರಾತಂ ವಿಷ್ಣೋಶ್ಚೈವ ಮಹಾತ್ಮನಃ ।
ಬಭಾರ ಚ ಮಹಾದೇವಃ ಕೂರ್ಮಪ್ರಾಂತೇಽಪಿಚೋರಸಿ ॥

ದೃಷ್ಟ್ವಾ=ಭೂಮ್ಯುದ್ಧರಣದಿಂ ಮದಿಸಿದ ವರಾಹಾವತಾರಮಂ ಕಂಡು ವಿಷ್ಣುಶ್ಚೈವ ಮಹಾತ್ಮನಸ್ತಂದಂಷ್ಟ್ರಾತಂ ಜಗ್ರಾಹ=ವಿಷ್ಣುವಿನದೊಡ್ಡಿತ್ತಾದ ವರಾಹಾವತಾರದದೊಂದು ದಾಡೆಯಿಂ ಕಿತ್ತು ತೆಗೆದುಕೊಂಡನು. ಮಹಾದೇವಶ್ಚೋರಸಿ ಕೂರ್ಮಪ್ರಾಂತೇ ಬಭಾರ=ವಿಷ್ಣುವಿನ ದಾಡೆಯಂಕಿತ್ತು ಆ ದಾಡೆಯಂ ಉರದಲ್ಲಿ ಧರಿಸಿದನು. ಒಂದು ಕಲ್ಪದ ವರಾಹ ಸಂಹಾರಮಂ ಲೈಂಗ್ಯದಲ್ಲಿ ಹೇಳಿಹುದು. ಏಕಃಶೃಂಗೋ ವರಾಹೋಽ ಭೂತ್ತದಾಪ್ರಭೃತಿ ಮಾಧವ । ಅಂದು ಮೊದಲಾಗಿ ಪರಮೇಶ್ವರನಂ ಸ್ತುತಿಸಿ ಒಂದು ಕೊಂಬನುಳುಹಿಕೊಂಡು ಏಕಶೃಂಗವನುಳ್ಳ ವರಾಹಾವತಾರವಾದನು.

"ಪುತ್ರೋಪೌತ್ರಾವೃತಸ್ಸರ್ವಾ ವರಾಹಸ್ತಪತದ್ಭುವಿ। ಸ್ಕಂದಶಕ್ತ್ಯಾಹತೋ ಯತ್ರ ವರಾಹಾಖ್ಯೇ ಮೃತೋಹರಿಃ । "ಷಣ್ಮುಖ ಶಕ್ತಿಯಿಂದ ಪುತ್ರ ಪೌತ್ರಾವೃತವಾಗಿ ವಿಷ್ಣುವಿನ ವರಾಹವೆಂದು ಹೆಸರುಳ್ಳ ಅವತಾರಂ, ಭೂಮಿಯಲ್ಲಿ ಬಿದ್ದತ್ತೆಂದೊಂದು ಕಲ್ಪದ ಕಥನವು; ಕಾಳಿಕಾ ಖಾಂಡೇ: ತತಸ್ಸುರಂ ತ್ಯಕ್ತ್ವಾ ವಿಷ್ಣುರ್ಜೀವಿತಂ ಸ್ವಾಪರಾಧತಃ=ರಾಕ್ಷಸರು ಮದಿರಾ

ಪಾನಪ್ರಮತ್ತನಾದ ನರಸಿಂಹಾವತಾರದ ವಿಷ್ಣು ತಾನುಮಾಡಿದ ಅಪರಾಧದಿಂದ ನಂತರ ಪ್ರಾಣಮಂ ಬಿಟ್ಟನೆಂದು ಕಾಳಿಕಾಖಂಡದಲ್ಲಿ ಒಂದು ಕಲ್ಪಿ ಭೇದಮಂ ಹೇಳಿಹುದು. ತ್ರಯೋದಶಂ ಹರಿಧ್ವಂಸಂ=ಈ ಪ್ರಕಾರದಿಂದ ನಾರಸಿಂಹಾವತಾರಂಗಳೆಂಬ ಕಲ್ಪಿಕಲ್ಪಂಗಳಲ್ಲಿಯ ಹಲವವತಾರಂಗಳಂ ಸಂಹರಿಸುತ್ತಿಹ ಬಕರುದ್ರಾದಿ ಶರಭ ರುದ್ರಾಂತವಾದ ನಾನಾ ಲೀಲಾಧರನಪ್ಪ ತನ್ಮಹೇಶಾವತಾರಂ ಹದಿಮೂರನೆಯವತಾರವು. ಅರ್ಧನಾರೀ ಚತುರ್ದಶಂ=ಉಮಾಭೃಂಗಿ ಸಂವಾದದಲ್ಲಿ ಉಮೆಯನರ್ಧಭಾಗದಲ್ಲಿ ತಾಳ್ವುದೊಂದು ಕಥನಮದಲ್ಲದೆ ಮತ್ತಂ ಸ್ಕಾಂದೇ ಈಶಾನ ಸಂಹಿತಾಯಾಂ: ಲಿಂಗ ಮಧ್ಯೇ ಸಮಭೂವಂ ತ್ವರ್ಧನಾರೀಶ್ವರೋಹ್ಯಹಮ್ । ಒಂದು ಕಲ್ಪ ಸಂಹಾರವಾದ ಜಲಪ್ರಳಯದಿಂದಂ ಮೇಲೆ ವಿಷ್ಣುವರಾಹಾವತಾರದಿಂ ಭೂಮಿಯನುದ್ಧರಿಸಿ ಜಲಶಯನನಾಗಿರಲು, ಬ್ರಹ್ಮಂ ಸಕಲಜಗತ್ತಂ ಸೃಜಿಸುತ್ತಂ ನಿಸ್ಪಷ್ಟಮಾದ ಸಮಸ್ತಮಂ ನೋಡಲರ್ಥಿಸಿ, ಸರ್ವಪರಿವೃತನಾಗಿ ತಾನಿಲ್ಲದಿಲ್ಲೆಂಬ ಅಹಂಕಾರದಿಂ ಸಮುದ್ರಮನೈದಿ ವಿಷ್ಣುವಂ ಕಂಡಾಗ ತಾನೊಬ್ಬರೊಬ್ಬರನ ಅಱಿಯದೆ ನೀನಾರು ತಾನಾರು ಎಂಬ ಸಂವಾದನದಲ್ಲಿ ಯುದ್ಧಂ ಹುಟ್ಟಿಯೊಬ್ಬರೊಬ್ಬರ ಕುಱಿತು ಪಾಶುಪತಪ್ರಜ್ವಾಲೆಯಿಂ ತಾವೆ ಬೆಂದಹಂಕಾರಂ ವುಡುಗೆ ಶಿವಂಗೆ ಮೊಱೆಯಿಡಲಾಕಲ್ಪದಲ್ಲಿ ಉದಯವಾದ ಉರಿಲಿಂಗ ಮಧ್ಯದಲ್ಲಿ ಅರ್ಧನಾರೀಶ್ವರನಾಗಿ ನಾನು ಪ್ರಾದುರ್ಭೂತನಾದನೆಂದು ಶಿವಂ ಆ ಬ್ರಹ್ಮ ವಿಷ್ಣುಗಳಿಗೆ ನಿರೂಪಿಸಿದನೆಂದು ಈಶಾನ ಸಂಹಿತೆಯಲ್ಲಿಯದೊಂದರ್ಧನಾರೀಶ್ವರಾವತಾರಂ ಹದಿನಾಲ್ಕನೆಯವತಾರವು. ಪಂಚದಶಂ ಕಿರಾತಸ್ಯ=ದುಷ್ಟಶಿಷ್ಟನಿಗ್ರಹಾನುಗ್ರಹಾರ್ಥಮಾದ ಕಿರಾತ ರುದ್ರಲೀಲೆ ಹದಿನೈದನೆಯವತಾರವಹುದು. ಕಂಕಾಲೀ ಷೋಡಶಂ ಭವೇತ್=ಮತ್ತೊಂದು ಕಲ್ಪದಲ್ಲಿ ಬೆನ್ನಲುವಂ ಮುಱಿದು ಕಂಕಾಳ ದಂಡವೆಂದಿಡಿದಿಹಾವತಾರಂ ಹದಿನಾಱನೆಯವತಾರವಹುದು. ॥೧೩೮॥

ಶ್ಲೋಕ॥ ಚಂಡೇಶಾನುಗ್ರಹಂ ಚೈವ ತಥಾ ಸಪ್ತದಶಂ ಭವೇತ್ ।
ವಿಷಾಪಹರಣಂ ಚೈವ ಅಷ್ಟಾದಶಮಿತಿ ಸ್ಮೃತಮ್ ॥

ಟೀಕು॥ ತಥಾ ಚಂಡೇಶಾನುಗ್ರಹಂ ಚೈವ ಸಪ್ತದಶಂಭವೇತ್=ಹಾಂಗೆ ಚಂಡರುದ್ರಾನುಗ್ರಹವು ಹದಿನೇಳನೆಯವತಾರವಹುದು. ವಿಷಾಪಹರಣಂ ಚೈವ ಅಷ್ಟಾದಶಮಿದಂಸ್ಮೃತಂ=ಅಮೃತ ಮಥನೋದ್ಭೂತ ಹಾಳಾಹಳಕ್ಕಂಜಿ ಮರೆಹೊಕ್ಕ ಬ್ರಹ್ಮಾದಿಗಳಂ ರಕ್ಷಿಸಲು ತದ್ವಿಷಮಂ ಧರಿಸಿ ನೀಲಕಂಠನಾದವತಾರಂ, ಅಷ್ಟಾದಶಂ ಇತಿ=ಹದಿನೆಂಟನೆಯವತಾರವೆಂದು ಸ್ಮೃತಂ=ನೆನೆಯಲುಪಟ್ಟುದು.

ಶ್ಲೋಕ॥ ಚಕ್ರದಾನಸ್ವರೂಪಂ ತು ಏಕೋನವಿಂಶತಿಃ ಸ್ಮೃತಮ್ ।
ವಿಘ್ನಪ್ರಸಾದೋ ವಿಂಶಃ ಸ್ಯಾತ್ ಸೋಮಾ ಸ್ಕಂದೈಕ ವಿಂಶತಿಃ ॥

ಟೀಕು॥ ಚಕ್ರದಾನ ಸ್ವರೂಪಂ ತು ಏಕೋನ ವಿಂಶತಿ ಸ್ಮೃತಂ=ಬೇರೊಂದು ಪ್ರಳಯದಲ್ಲಿ ಸಮುದ್ರಂಗಳೇಕವಾಗಿಸಮಸ್ತಮಂಜಲವೊಳಕೊಂಡು ತಮೋಭೂತಮಾಗಿದ್ದವು. ಪರಮಾತ್ಮನಪ್ಪ ಪರಶಿವಂ ತನ್ನ ಪ್ರಕೃತಿ ಶಕ್ತಿಯನ್ನೈದಿ ಆ ಪ್ರಕೃತಿ ಶಕ್ತಿಯಲ್ಲಿ ಬ್ರಹ್ಮವಿಷ್ಣುಗಳಂ ಸೃಜಿಸಿ, ಆ ಬ್ರಹ್ಮವಿಷ್ಣುಗಳು ಅಂಧಕಾರ ಪೂರ್ಣವಾದ ಗುಹೆಯಲ್ಲಿದ್ದ ಶಿಶುಗಳು ಹೇಂಗೋ ಹಾಂಗೆ ಜಲಮಧ್ಯದಲ್ಲಿ ಮುಳುಗುತ್ತೇಳುತ್ತಾಭಿಕಾತುರರಾಗುತ್ತಿರಲು ಕೃಪಾ ಸಮುದ್ರಂ ತತ್ತಮಮಂ ಕೆಡಿಸಿ ಕಿಂಚಿತ್ ಜ್ಞಾನಮಂ ಪ್ರಸಾದಿಸಲಾ ಕಿಂಚಿತ್ ಜ್ಞಾನತ್ವದಿಂದೊಬ್ಬರೊಬ್ಬರಂ ತೊಡರ್ಚಿ ನಿರಾಯುಧ ಯುದ್ಧಂಗೈದು ಮಿಗೆ ಶಾಂತರಾಗಿ ವಿಶೀರ್ಣರಾಗಿಬಿಟ್ಟು ಶಿವಕೃಪೆಯಿಂ ಜೀವಿಸಿದಾಗ ದಿವ್ಯಲಿಂಗೋದಯವಾಗಿ ಆ ದಿವ್ಯ ಲಿಂಗದ ಮಧ್ಯದಲ್ಲಿ ಶಿವಮೂರ್ತಿಪ್ರಾದುರ್ಭೂತವಾಗಿ ಆ ಬ್ರಹ್ಮವಿಷ್ಣುಗಳಿಗನುಗ್ರಹಿಸಿ ಶಂಭು ಕ್ರಮಂಕೊಟ್ಟ ಅವತಾರವಾಯಿತ್ತಾದಡೆ ಹತ್ತೊಂಭತ್ತನೆಯವತಾರವೆಂದು ನೆನೆಯಲುಪಟ್ಟುದು. ವಿಘ್ನಪ್ರಸಾದೋವಿಂಶತ್ಯಾತ್=ವಿಘ್ನೇಶ್ವರಂಗೆ ಪ್ರಸಾದಾಭಿಮುಖ ವಾಗಿ ಆವಿರ್ಭೂತವಾದ ಮೂರ್ತಿ ಇಪ್ಪತ್ತನೆಯವತಾರವಹುದು. ಉಮಾಸ್ಕಂದೈಕ ವಿಂಶತಿಃ=ಒಂದು ಕಲ್ಪದಲ್ಲಿ ತಾರಕಾಸಂಹೃತವಾದುದಿಂದಂ ಮೇಲೆ ಆ ತಾರಕಾಪುತ್ರರಪ್ಪ ತಾರಕಾಕ್ಷ್ಯ ಕಮಲಲೋಚನ ವಿದ್ಯುನ್ಮಾಲಿಗಳೆಂಬ ರಾಕ್ಷಸರು ಬ್ರಹ್ಮವರದರ್ಪಿತರಾಗಿ ಮಾಯಾ ನಿರ್ಮಿತಪುರತ್ರಯದೊಳಿರ್ದು ತ್ರಿಭುವನಮಂ ಬಾಧಿಸುತ್ತಿರಲಾಬಾಧೆಯಿಂ ನೊಂದು ಬ್ರಹ್ಮಾದಿಗಳು ಮಂದರಪರ್ವತವನ್ನೈದಿ ಭಕ್ತಿ ಸ್ತುತಿ ಪೂರ್ವಕವಾಗಿ ಪ್ರಾರ್ಥಿಸಲಾ ಸಮಯದಲ್ಲಿ ಪ್ರಮಥ ಪರಿವೃತನಾಗಿ ಉಮಾಕುಮಾರಸಹಿತವಾಗಿ ಪ್ರಸನ್ನವಾದವತಾರ ಇಪ್ಪತ್ತೊಂದನೆಯ ಲೀಲೆ. ॥೧೪೦॥

ಶ್ಲೋಕ॥ ದ್ವಾವಿಂಶತ್ಯೇಕಪಾದಂ ಸ್ಯಾತ್ರಯೋವಿಂಶತ್ಸುಖಾವಹಮ್ ।
ದಕ್ಷಿಣಾಮೂರ್ತಿರೂಪಂ ತು ಚತುರ್ವಿಂಶದಿತಿಸ್ಮೃತಮ್ ॥

ಲಿಂಗೋದ್ಭವ ಸ್ವರೂಪಂ ತು ಪಂಚವಿಂಶತ್ಪ್ರಕೀರ್ತಿತಮ್ ।

ಟೀಕು॥ ದ್ವಾವಿಂಶತ್ಯೇಕಪಾದಂ ಸ್ಯಾತ್=ಏಕಪಾದಾವತಾರ ಇಪ್ಪತ್ತೆರಡನೆಯದಹುದು, ಸುಖಾವಹಂ ತ್ರಯೋವಿಂಶತ್=ಸುಖಾವಹಮೂರ್ತಿ ಇಪ್ಪತ್ತಮೂಜನೆಯವತಾರವು. ದಕ್ಷಿಣಾ ಮೂರ್ತಿರೂಪಂತು ಚತುರ್ವಿಂಶದಿತಿ ಸ್ಮೃತಂ=ದಕ್ಷಿಣಾಮೂರ್ತಿಸ್ವರೂಪವಾಯಿ ತ್ತಾದಡೆ ಇಪ್ಪತ್ತನಾಲ್ಕನೆಯವತಾರವೆಂದು ನೆನೆಯಲುಪಟ್ಟುದು. ಈ ದಿವ್ಯ ಲಿಂಗವೆ

ಕರ್ಮಸಾದಾಖ್ಯವೆಂದರಿವುದು. ಈ ದಿವ್ಯ ಲಿಂಗದಲ್ಲಿಯೆ ಪರಮೇಶ್ವರನ ನಾನಾಲೀಲಾ ಪ್ರಾದುರ್ಭಾವವು. ಆ ಲೀಲಾವತಾರಂಗಳ ಸೃಷ್ಟಿಮೂರ್ತಿ ಸ್ಥಿತಿಮೂರ್ತಿ ಸಂಹಾರ ಮೂರ್ತಿಗಳಿಂದವೆ ಸಮಸ್ತ ಸೃಷ್ಟಿ ಸ್ಥಿತಿ ಲಯಂಗಳಹವು. ಈ ಶಿವಲಿಂಗದಲ್ಲಿಯೇ ಸಮಸ್ತಶಿವಮೂರ್ತಿಗಳಂತರ್ಗತವಹವು. ಈ ಶಿವಲಿಂಗದಲ್ಲಿ ವಿಶ್ವಪ್ರಪಂಚವು ಲಯವನ್ನೈದುವುದು. ಮರಳಿಯಾ ಶಿವಲಿಂಗದಲ್ಲಿಯೆ ಮಹೇಶ್ವರ ನಾನಾ ಲೀಲೆಗಳ ಪ್ರಕಟಿಸಿ, ಪುನಃ ಸೃಷ್ಟ್ಯಾದಿಗಳಹವು. ಈ ಪ್ರಕಾರದಿಂ ಪರಶಿವನ ಲೀಲೆಯಿಂ ಜಗಚ್ಚಕ್ರಂ ಜೂಟಳದ ಗುಂಡಿಗೆಯಂತೆ ತಿರುಗುತಿಪ್ಪ ಕಾರಣ ನಾನಾ ಕಲ್ಪಂಗಳಾದವು. ಕಲ್ಪ ಕಲ್ಪಂಗಳಲ್ಲಿ ಉರಿಲಿಂಗೋದ್ಭವವಾದಲ್ಲದೆ ಜಗತ್ಸೃಷ್ಟಿಯಲ್ಲಿ ಅದಾಗಿ ಲಿಂಗೋದ್ಭವ ಸ್ವರೂಪಂ ಪರಶಿವಲೀಲೆಗೆ ಆದಿಯು. ಅಂತವು ತಾನೆಯಾದ ಕಾರಣ ಪಂಚವಿಂಶತಿ ಲೀಲೆಯೆಂದು ಹೇಳಲುಪಟ್ಟುದು. ॥೧೪೨॥

ಶ್ಲೋಕ॥ ಏತೇ ಮಹೇಶರೂಪಾಶ್ಚ ಮೂರ್ತಿಭೇದಾಃ ಪ್ರಕೀರ್ತಿತಾಃ ।

ಟೀಕು॥ ಈ ಪ್ರಕಾರದಿಂದ ಪಂಚವಿಂಶನ್ಮೂರ್ತಿಗಳು ನಿರೂಪಿಸಲುಪಟ್ಟವು.॥೧೪೩॥

ಶ್ಲೋಕ॥ ಇಂದುಧರಾದಿ ಸ್ಥಾಣ್ವಂತಂ ಕರ್ಮಣಂ ಸಮುದ್ಭವಮ್ ।

ಟೀಕು॥ ಮಹೇಶ್ವರತತ್ತ್ವಕ್ಕೆ ಮಹಾಲಿಂಗ. ॥೧೪೪॥

ಶ್ಲೋಕ॥ ಏತೇ ಮಹೇಶ್ವರರೂಪಾಶ್ಚ ಕರ್ಮಾಖ್ಯಾಚ್ಚ ಸಮುದ್ಭವಾಃ ।

ಟೀಕು॥ ಇಂದುಧರಾದಿ ಸ್ಥಾಣ್ವಂತಂ=ಚಂದ್ರಧರಾವತಾರ ಮೊದಲಾಗಿ ಮಹಾಲಿಂಗ ಸ್ವರೂಪವು ಅಂತವಾದ ಕಾರಣ ಕರ್ಮಾಖ್ಯ ಸಮುದ್ಭವಂ=ಮಹೇಶ್ವರ ತತ್ತ್ವಕ್ಕೆ ಮಹಾಲಿಂಗವೇ ಆದಿ. ಮಹಾಲಿಂಗವೇ ಅಂತವಾದ ಕಾರಣ ಕರ್ಮಸಾದಾಖ್ಯವೆಂಬ ಹೆಸರನುಳ್ಳ ಆ ಮಹಾಲಿಂಗದಿಂದವುದಯವಾಯಿತ್ತು. ತೇ ಕರ್ಮಾಖ್ಯಾದಿ ಸಮುದ್ಭವಾಃ= ಕರ್ಮಸಾದಾಖ್ಯವೆಂಬ ಶಿವಲಿಂಗವು ಮೊದಲಾಗಿ ಆ ಮಹಾಶಿವಲಿಂಗವೇ ಕಡೆಯಾಗಿ ಪಾದುರ್ಭೂತವಾದ ಆ ಇಪ್ಪತ್ತೈದು ಮೂರ್ತಿಭೇದಂಗಳು, ಮಹೇಶ್ವರ ರೂಪಾಶ್ಚ= ಮಹೇಶ್ವರನ ತತ್ತ್ವಸಾರೂಪವನುಳ್ಳವೆಂದಜೆವುದು. ಅದು ಹೇಂಗೆ ಮಹಾಲಿಂಗವೆಯಾದಿ ಮಹಾಲಿಂಗವೆ ಅಂತವಾಯಿತ್ತಯಾಯೆಂದಡೆ ಶಿವತತ್ತ್ವವೆಂದೊಡಂ ಸದಾಶಿವತತ್ತ್ವವೆಂದೊಡಂ ಮಹೇಶ್ವರ ತತ್ತ್ವವೆಂದೊಡಂ, ಆ ಶಿವ ತತ್ತ್ವದ ಪರ್ಯಾಯನಾಮ ಭೇದಂಗಳು. ಸರ್ವವಿಲಯಸ್ಥಾನವಾದ ಆ ಶಿವತತ್ತ್ವ ತಾನೆ ತನ್ನ ಭೋಗಾಖ್ಯವೆಂಬ ಪರ್ಯಾಯನಾಮವನುಳ್ಳ ಸದಾಶಿವತತ್ತ್ವವಪ್ಪಲ್ಲಿ ಶಿವಸಾದಾಖ್ಯ ವೆಂಬ ಪೆಸರಂ ಪಡೆಯಿತ್ತು. ರೂಪಂಪ್ರತಿ ಪೃಥಕ್ಪೃಥಕ್ ಪಂಚವಿಂಶತ್ಪ್ರಕಾರೇಣ=ಬೇಱೆ

ಸ್ವರೂಪಾದ ತತ್ತ್ವಭೇದಂ ಇಪ್ಪತ್ತೈದು ಪ್ರಕಾರದಿಂದಾ ಶಿವತತ್ತ್ವವು ಹೀಂಗೆ ಸದೋದಿತವಾಗಿಹುದು. ॥೧೪೫॥

ಶ್ಲೋಕ॥ ತನ್ಮಹೇಶ್ವರಕೋಟ್ಯಂಶಾದ್ಬ್ರಹ್ಮ ವಿಷ್ಣುಸಮುದ್ಭವೌ ।

ಟೀಕು॥ ತನ್ಮಹೇಶ್ವರ ಕೋಟ್ಯಂಶಾತ್=ಆ ಮಹೇಶ್ವರ ತತ್ತ್ವದ ಕೋಟ್ಯಂಶದತ್ತಣಿಂದ, ಬ್ರಹ್ಮವಿಷ್ಣು ಸಮುದ್ಭವೌ=ಬ್ರಹ್ಮ ವಿಷ್ಣುಗಳು ಹುಟ್ಟಿದರು. ॥೧೪೬॥

ಶ್ಲೋಕ॥ ತ್ರಿಕೋಣಮುಮಯಾಸಾರ್ಧಂ ಸೋಮಸೂರ್ಯಾಗ್ನಿ ಲೋಚನಮ್ ।

ಟೀಕು॥ ಸೃಷ್ಟಿಸ್ಥಿತಿಲಯಾಧಿಕಾರಮೂರ್ತಿಯಾದ ಮಹೇಶ್ವರತತ್ತ್ವಂ ಉಮಾಶಕ್ತಿ ಸಮೇತವಾಗಿ ಚಂದ್ರಸೂರ್ಯಾಗ್ನಿಗಳೆ ತನಗೆ ಸೃಷ್ಟಿಗಳೆ ದೃಷ್ಟಿಗಳಾಗಿ ತ್ರಿಕೋಣಸ್ಥ ವಾಗಿಹುದು. ॥೧೪೭॥

ಶ್ಲೋಕ॥ ಘ್ರಾಣೇ ವಾಯುಸ್ಸಮುತ್ಪನ್ನೋ ಗಣೇಶಸ್ತುಗಲೋದ್ಭವಃ ।
ಷಣ್ಮುಖೋ ಹೃದಯೇ ಜಾತಃ ನಾಭೇಃ ದೇವಾದಿ ಚ ಸಂಭವಃ ॥

ಟೀಕು॥ ಘ್ರಾಣೇವಾಯುಸ್ಸಮುತ್ಪನ್ನಃ=ಸೃಷ್ಟಿಸ್ಥಿತಿಲಯಾಧೀಶನಪ್ಪ ಮಹೇಶ್ವರನ ಘ್ರಾಣದಲ್ಲಿ ವಾಯುವಿನುತ್ಪತ್ತಿಯು, ಗಣೇಶಸ್ತು ಗಲೋದ್ಭವಃ=ವಿಘ್ನೇಶ್ವರನಾಯಿತ್ತಾದಡೆ ಗಲ್ಲದಲ್ಲಿಯುದ್ಭವಿಸಿದನು. ಷಣ್ಮುಖೋ ಹೃದಯೇ ಜಾತಃ=ಕುಮಾರಂ ಹೃದಯದಲ್ಲಿ ಹುಟ್ಟಿದನು. ನಾಭೇಃ ದೇವಾದಿ ಸಂಭವಃ=ನಾಭಿಯಲ್ಲಿ ಸ್ವರ್ಗಾಧೀಶ್ವರರು ಸಂಭವಃ= ಹುಟ್ಟಿದರು.

ಶ್ಲೋಕ॥ ಪಂಚಾಶಕ್ಕೋಟಿ ದೇವಾಶ್ಚ ಮಹೇಶ್ವರಸ್ವೇದಸಂಭವಾಃ ।
ಋಷಯಶ್ಚ ತಥಾಕೋಟಿರ್ನಿಮೇಷೇಣ ಸಮುದ್ಭವಾಃ ॥

ಟೀಕು॥ ಪಂಚಾಶತ್ಕೋಟಿದೇವಾಶ್ಚ=ಐವತ್ತು ಕೋಟಿ ಸುರರುಗಳು, ಮಹೇಶ್ವರಸ್ವೇದ ಸಂಭವಾಃ=ಮಹೇಶ್ವರನ ಬೆಮರಿನಲ್ಲಿ ಹುಟ್ಟಿದರು. ತಥಾ ಋಷಯಶ್ಚ ಕೋಟಿ ರ್ನಿಮೇಷೇಣ ಸಮುದ್ಭವಾಃ=ಹಾಂಗೆ ಕೋಟಿ ಋಷಿಯರ್ಗಳು ನಿಮೇಷಣದಿಂದ ಜನಿಸಿದರು. ॥೧೪೯॥

ಶ್ಲೋಕ॥ ತತ್ತ್ವಾನಾಮುದ್ಭವಂ ಪ್ರೋಕ್ತಂ ಶಕ್ತೀನಾಮುದ್ಭವಂ ಶೃಣು ।

ಟೀಕು॥ ಎಲೆ ಷಣ್ಮುಖನೆ! ಶಿವತತ್ತ್ವಭೇದಂಗಳ ಉತ್ಪತ್ತಿಯು ಹೇಳಲುಪಟ್ಟುದು. ಶಕ್ತಿಭೇದಂಗಳ ಜನನಮಂ ಕೇಳು.

ಶ್ಲೋಕ॥ ಬಿಂದುರೂಪದಶಾಂಶೇನ ಚೋಮಾಶಕ್ತಿಸಮುದ್ಭವಃ ।

ಟೀಕು॥ ಪರಾಶಕ್ತಿಯ ಹತ್ತರೊಳಗೊಂದು ಭಾಗದಿಂದ ಉಮಾಶಕ್ತಿಯ ಪ್ರಾದುರ್ಭಾವವಾದುದು. ॥೧೫೧॥

ಶ್ಲೋಕ॥ ಉಮಾಂಬಿಕಾಗಣೇಶೀ ಚ ಈಶ್ವರೀ ಚ ಮನೋನ್ಮನೀ ।

ಟೀಕು॥ ಉಮೆಯೆಂಬ ಅಂಬಿಕೆಯೆಂಬ ಗಣೇಶೀಯೆಂಬ ಈಶ್ವರೀಯೆಂಬ ಮನೋನ್ಮನೀಯೆಂಬ ಪಂಚಶಕ್ತಿಯರು. ॥೧೫೨॥

ಶ್ಲೋಕ॥ ಏಕೈಕೇನ ದಶಾಂಶೇನ ಜಾಯತೇ ಕ್ರಮಶಸ್ತಥಾ ।

ಟೀಕು॥ ತಥಾ ಉಮೆಯೆಂಬ ಶಕ್ತಿ ಹೀಂಗೆ ಪತಿಯಾ ದಶಾಂಶದಿಂದ ಉದಯವಾದಳು ಹಾಂಗೆ, ಏಕೈಕೇನ ದಶಾಂಶೇನ=ಒಂದೊಂದು ಶಕ್ತಿಯ ದಶಾಂಶದಿಂದ ಕ್ರಮಶಃ ಜಾಯತೇ=ತಱುವಾಯದಿಂದ ಅವಿರ್ಭೂತವಾಗುತ್ತಿಹುದು. ॥೧೫೩॥

ಶ್ಲೋಕ॥ ಏತಾ ವೈ ಪಂಚಶಕ್ತಯಶ್ಚ ಶಿವಾದೀನಾಂ ತು ಶಕ್ತಯಃ ।

ಟೀಕು॥ ಈ ಐವರು ಶಿವಸಾದಾಖ್ಯ ಮೊದಲಾದ ಪಂಚಸಾದಾಖ್ಯ ಮೂರ್ತಿಗಳಿಗೆ ಶಕ್ತಿಯರೆನಿಸಿಕೊಂಬರು. ॥೧೫೪॥

ಶ್ಲೋಕ॥ ಮನೋನ್ಮನೀ ಸಹಸ್ರಾಂಶಾದ್ಗೌರೀಜಾತಾ ಇತಿ ಸ್ಮೃತಾಃ ।

ಟೀಕು॥ ಕರ್ಮಸಾದಾಖ್ಯಮೂರ್ತಿಗೆ ಶಕ್ತಿಯಪ್ಪ ಮನೋನ್ಮನಿ ಶಕ್ತಿಯ ಸಹಸ್ರಾಂಶದ ದೆಸೆಯಿಂದ ಮಹೇಶ್ವರನ ನಾನಾಲೀಲಾವತಾರಂಗಳಿಗೆ ತತ್ಕಾಲ ಸದೃಶಮಪ್ಪ ಕನ್ನಿಕಾಭಾವಮನ್ನೈದುವ ಗೌರಿಯೆಂಬ ಶಕ್ತಿಯುದಯವಾದಳೆಂದು ನೆನೆಯಲುಪಟ್ಟಳು. ॥೧೫೫॥

ಶ್ಲೋಕ॥ ತಸ್ಯಾಸ್ಸರಸ್ವತೀ ದುರ್ಗಾ ಉಮಾಯಾಶ್ಚಪ್ರಭಾವತಃ ।
ಶಚೀಜ್ಯೇಷ್ಠಾ ಚ ಲಕ್ಷ್ಮೀಶ್ಚ ತಥಾಶ್ಚಾನ್ಯಾಶ್ಚ ಶಕ್ತಿಯಃ ।

ಟೀಕು॥ ಉಮಾಯಾಶ್ಚ ಪ್ರಭಾವತಃ=ಶಿವಸಾದಾಖ್ಯಶಕ್ತಿಯಪ್ಪ ಉಮಾಶಕ್ತಿಯ ಪ್ರಭಾವದದೆಸೆಯಿಂದ ಸರಸ್ವತೀ ದುರ್ಗಾಶಚೀಜ್ಯೇಷ್ಠಾಶ್ಚ ಲಕ್ಷ್ಮೀಶ್ಚ=ಸರಸ್ವತಿಯೂ ದುರ್ಗಿಯೂ, ಶಚಿಯೂ, ಜ್ಯೇಷ್ಠೆಯೂ, ಲಕ್ಷ್ಮಿಯರೆಂಬ ಶಕ್ತಿಯರುಂ, ತಥಾಚಾನ್ಯ ಶಕ್ತಿಯಃ=ಹಾಂಗೆ ಉಳಿದ ರತಿ, ಚಾಮುಂಡಿ ಕಾಳ್ಯಾದಿ ಸಮಸ್ತ ಶಕ್ತಿಯರೂ ಎಂಬ ಶಕ್ತಿ ದೇವತೆಗಳ ಉದ್ಭವವಾಗುವುದು. ॥೧೫೬॥

ಶ್ಲೋಕ॥ ಕೋಟಿಶಕ್ತಯಶ್ಚೈತಾವೈ ಗೌರೀದೇಹ ಸಮುದ್ಭವಾಃ ।

ಟೀಕು॥ ಏತಾವೈ ಕೋಟಿಶಕ್ತಯಃ=ಈ ಕೋಟಿ ಸಂಖ್ಯೆಯನುಳ್ಳ ಶಕ್ತಿದೇವತೆಯರು, ಗೌರೀದೇಹಸಮುದ್ಭವಾಃ=ಗೌರಿಯದೇಹದಲ್ಲಿ ಉದಯವಾದರು. ॥೧೫೭॥

ಶ್ಲೋಕ॥ ಶಕ್ತಿಭೇದಂ ವಿಶೇಷೇಣ ಸಮಾಸಾತ್ಪರಿಕೀರ್ತಿತಮ್ ।

ಟೀಕು॥ ಶಕ್ತಿಭೇದಂ ವಿಶೇಷಿಸಿ ಪರ್ಯಾಯದಿಂ ನಿರೂಪಿಸಲುಪಟ್ಟುದು. ॥೧೫೮॥

ಶ್ಲೋಕ॥ ಯೋ ವೇತ್ತಿ ತತ್ತ್ವಭೇದಂ ಹಿ ಸಪೂಜಾಸ್ಥಾಪನಾರ್ಹತಃ ।

ಟೀಕು॥ ಯೋ ತತ್ತ್ವಭೇದಂ ವೇತ್ತಿ=ಅವನಾನೊಬ್ಬನಿಂದ ತತ್ತ್ವಭೇದ ಪಟಲಮಂ ಅಱಿಯುತ್ತಿಹನು, ಸಪೂಜಾಸ್ಥಾಪನಾರ್ಹತಃ=ತತ್ತ್ವಭೇದಜ್ಞನಪ್ಪ ಆ ಮಹಾತ್ಮನೆ ಪೂಜಾಸ್ಥಾಪನಂಗಳಿಗರ್ಹನಾದಾತನು. ॥೧೫೯॥

ಶ್ಲೋಕ॥ ತತ್ತ್ವಭೇದಮಿದಂ ಪ್ರೋಕ್ತಂ ವರ್ಣಭೇದಮಥ ಶೃಣು ।

ಟೀಕು॥ ಎಲೆ ಕುಮಾರ! ಈ ತತ್ತ್ವಭೇದ ನಿರೂಪಿಸಲುಪಟ್ಟುದು, ಅನಂತರಂ ವರ್ಣಭೇದಮಂ ಕೇಳು. ॥೧೬೦॥

ಇತಿ ವಾತುಲತಂತ್ರೇ ಶುದ್ಧಾಖ್ಯೇ ಸಹಸ್ರಗ್ರಂಥಸಂಹಿತಾಯಾಂ
ಮಲ್ಲಿಕಾರ್ಜುನೇನ ಕರ್ಣಾಟಭಾಷಾ ವಿವೃತಃ
ತತ್ತ್ವಭೇದೋ ನಾಮ ಪ್ರಥಮಃ ಪಟಲಃ

❖ ❖ ❖

ದ್ವಿತೀಯಃ ವರ್ಣಭೇದಪಟಲಃ

ವಂ॥ವೃ॥ **ಸಮಸ್ತಬೀಜಪ್ರಭವಸ್ಯ ಕಾರಣಂ**
ನಮಾಮಿ ದೇವಂ ಪ್ರಣಾವಾಂತರಸ್ಥಿತಮ್ ।
ತ್ರಿವರ್ಣಸಂಭೂತವಿವರ್ಣವರ್ಣಗಂ
ಸ್ವಶಕ್ತಿಸಂಕ್ಷೋಭಕರಂ ಪರಂ ಹರಮ್ ॥

ಟೀಕು॥ ಸಮಸ್ತಬೀಜ ಪ್ರಭವಸ್ಯ=ಅಕಾರದಿಂದ ಕ್ಷಕಾರದವರೆಗಿನ ಸಮಸ್ತ ಬೀಜಾಕ್ಷರಂಗಳ ಉತ್ಪತ್ತಿಗೆ, ಕಾರಣಂ=ಕಾರಣೀಭೂತನಾದಂಥ, ದೇವಂ=ಪ್ರಕಾಶರೂಪವಾದಂಥ, ಪ್ರಣವಾಂಕುರಸ್ಥಿತಂ=ಓಂಕಾರ ಪ್ರಣವದ ಮಧ್ಯದಲ್ಲಿರುವ, ತ್ರಿವರ್ಣಸಂಭೂತ=ಮೂರ್ತಿ ಪ್ರಭಾವಳಿಗಳಿಂದ ಮೂಱು ಬಗೆಯಾದ, ವಿವರ್ಣ ವರ್ಣಗಂ=ಶುಕ್ಲಾದಿ ವಿಭಿನ್ನ ಬಣ್ಣಗಳಿಂದ ಕೂಡಿದ, ವರ್ಣಗಂ=ಅಕಾರಾದಿ ಕ್ಷಕಾರಾಂತ ವರ್ಣಗತ್ಯದ, ಸ್ವಶಕ್ತಿ ಸಂಕ್ಷೋಭಕರಂ=ತನ್ನ ಪರಾಶಕ್ತಿ ರೂಪವಾದ ಬಿಂದುವನ್ನು ಕ್ಷೋಭೆಗೊಳಿಸುವವನಾದ, ಪರಂ=ಶ್ರೇಷ್ಠನಾದ, ಹರಂ=ಸಂಸಾರ ಬಂಧವನ್ನು ಪರಿಹರಿಸುವವನಾದ ಹರನನ್ನು, ನಮಾಮಿ=ವಂದಿಸುತ್ತೇನೆ.

ಆ ತನ್ನ ವ್ಯೋಮಾತೀತವಾದ ಪರಶಿವತತ್ತ್ವದಲ್ಲಿ ಸ್ವಶಕ್ತಿಸಂಭೂತವಾಗಿ ತತ್ತ್ವರೂಪ ದೇವತಾರೂಪ ಪ್ರಪಂಚರೂಪ ಮಂತ್ರರೂಪ ಅಗ್ನಿಸ್ವರೂಪಳಾದ ವರ್ಣಂಗಳ ಭೇದಂ ಗಳನುಂ ನಿರೂಪಿಸುತ್ತಿಹನು. ॥೧॥

ಶ್ಲೋಕ॥ **ಅಥಾತಸ್ಸಂಪ್ರವಕ್ಷ್ಯಾಮಿ ವರ್ಣಭೇದವಿಧಿಂ ಪರಮ್ ।**
ಮಂತ್ರಾಣಾಮುದ್ಭವತ್ವಂ ಚ ವರ್ಣಾನಾಂ ಚ ಸಮುದ್ಭವಮ್ ।

ಟೀಕು॥ ಅಥ=ಅನಂತರದಲ್ಲಿ, ಅತಃ=ಇದಱಿಂದಂ ಮೇಲೆ, ಪರಂ=ಉತ್ಕೃಷ್ಟವಾದ, ವರ್ಣಭೇದವಿಧಿಂ= ವರ್ಣಂಗಳ ಭೇದ ವಿಧಾನವನು, ಮಂತ್ರಾಣಾಂ=ಸಮಸ್ತ ಮಂತ್ರಂ ಗಳ, ಉದ್ಭವತ್ವಂ ಚ=ಜನನತ್ವವನು, ವರ್ಣಾನಾಂ ಚ= ಅಕ್ಷರಂಗಳ, ಸಮುದ್ಭವಂ= ಉತ್ಪತ್ತಿಯನು, ಭೋ ಷಣ್ಮುಖ!=ಎಲೆ ಷಣ್ಮುಖನೆ! ಸಂಪ್ರವಕ್ಷ್ಯಾಮಿ=ಲೇಸಾಗಿ ಹೇಳಿಹೆನು. ಕೇಳು. ॥೨॥

ಶ್ಲೋಕ॥ **ಅಕಾರಾದಿಕ್ಷಕಾರಾಂತಾಮೇಕಪಂಚಾಶದಕ್ಷರಮ್ ।**
ಏತೇ ವರ್ಣಾಃ ಪ್ರಶಸ್ಯಂತೇ ಕಾಮಿತಾರ್ಥಪ್ರದಾಯಕಾಃ ।

ಟೀಕು॥ ಅಕಾರಾದಿಕ್ಷಕಾರಾಂತಮೇಕಪಂಚಾಶದಕ್ಷರಂ=ಅಕಾರಾದಿ ಕ್ಷಕಾರಾಂತವಾದ ಅಯಿವತ್ತೊಂದು ಅಕ್ಷರವನುಳ್ಳ, ಏತೇವರ್ಣಾಃ=ಈ ವರ್ಣಂಗಳು, ಕಾಮಿತಾರ್ಥ ಪ್ರದಾಯಕಾಃ=ಬಯಸಲುಪಟ್ಟ ಪ್ರಯೋಜನಂಗಳ ಕೊಡುವವೆಂದು, ಪ್ರಶಸ್ಯಂತೇ= ಕೊಂಡಾಡಲುಪಡುತ್ತಿಹವು. ॥೩॥

ಶ್ಲೋಕ॥ **ಸ್ತ್ರೀರೂಪಾಶ್ಚೈವ ಪುಂರೂಪಾಸ್ತಥಾ ಚೋಭಯರೂಪಕಾಃ ।**
ಸರ್ವೇ ವೈ ದೇವತಾರೂಪಾಃ ಪ್ರತ್ಯೇಕಂ ವರ್ಣರೂಪಧೃತ್ ॥

ಟೀಕು॥ಸ್ತ್ರೀರೂಪಾ ಶ್ಚೈವ=ಸ್ತ್ರೀರೂಪವನುಳ್ಳವಾಗಿಯೂ, ಪುಂರೂಪಾಃ=ಪುರುಷರೂಪ ವುಳ್ಳವಾಗಿಯೂ, ತಥಾಚ=ಹಾಂಗೆ, ಉಭಯರೂಪಕಾಃ=ನಪುಂಸಕ ರೂಪವುಳ್ಳ ವಾಗಿಯೂ, ಸರ್ವೇ ವೈ=ಸಮಸ್ತ ಅಕ್ಷರಂಗಳೂ ದೇವತಾರೂಪಾಃ=ದೇವತಾ ಸ್ವರೂಪಂ ಗಳುಳ್ಳವಾಗಿಯೂ, ಪ್ರತ್ಯೇಕಂ ವರ್ಣರೂಪಧೃತ್=ಬೇಱೆ ಬೇಱೆ ವರ್ಣಂಗಳೂ ಬೇಱೆ ಬೇಱೆ ಸ್ವರೂಪವ ಧರಿಸಿ ಕೊಂಡಿಹವು. ಈ ವರ್ಣಂಗಳಿಗೆ ನಾಮಪರ್ಯಾಯವ ಹೇಳಿಹೆನು. ॥೪॥

ಶ್ಲೋಕ॥ **ವರ್ಣಂ ಬೀಜಂ ತಥಾಽರ್ಣಂ ಚ ಲಿಂಗಮಕ್ಷರಮಾತೃಕಮ್ ।**
ಏತಾನಿ ವೈ ಷಷ್ಠನಾಮಾನಿ ವರ್ಣಪರ್ಯಾಯವಾಚಕಾಃ ॥

ಟೀಕು॥ ವರ್ಣಂ=ವರ್ಣವೆಂದು, ಬೀಜಂ=ಬೀಜವೆಂದು, ತಥಾ=ಹಾಂಗೆ, ಅರ್ಣಂಚ= ಅರ್ಣವೆಂದು, ಲಿಂಗಂ=ಲಿಂಗವೆಂದು, ಅಕ್ಷರಂ=ಅಕ್ಷರವೆಂದು, ಮಾತೃಕಂ=ಮಾತೃಕ ವೆಂದು, ಷಷ್ಠನಾಮಾನಿ=ಈ ಆಱು ಹೆಸರುಗಳು, ಏತಾನಿ ವರ್ಣಪರ್ಯಾಯ ವಾಚಕಾಃ=ಈ ವಾಚಕಂಗಳು ವರ್ಣಂಗಳ ಪರ್ಯಾಯ ವಾಚಕಂಗಳು. ॥೫॥

ಶ್ಲೋಕ॥ **ತೇಭ್ಯಃ ಸಮುದ್ಭವೋನಾಮ ರೂಪಭೇದಸ್ಥಥಾಂಶಕಮ್ ।**
ತತ್ತ್ವಮಂತ್ರಾದಿ ಭೇದಂಚಾಧಿದೈವಫಲಂ ತಥಾ ॥

ಟೀಕು॥ ತೇಭ್ಯಃ=ಆ ಅಯಿವತ್ತೊಂದು ಅಕ್ಷರಂಗಳದೆಸೆಯಿಂದ, ನಾಮರೂಪ ಭೇದಂ=ಹೆಸರುಗಳ ಸ್ವರೂಪಭೇದಂಗಳು, ತಥಾ=ಹಾಂಗೆ, ಅಂಶಕಂ=ಈ ವರ್ಣ ವಿಭಾಗವು, ತತ್ತ್ವಮಂತ್ರಾದಿಭೇದಂ ಚ=ತತ್ತ್ವಂಗಳು, ಮಂತ್ರಂಗಳು ಮೊದಲಾದ ಭೇದವು, ತಥಾ=ಹಾಂಗೆ ಅಧಿದೈವಫಲಂ=ಅಧಿದೈವ ಭೇದವು, ಫಲಭೇದವು, ಸಮುದ್ಭವಂ=ಹುಟ್ಟಿದವು. ॥೬॥

ಶ್ಲೋಕ॥ **ಸ್ಥೂಲಸೂಕ್ಷ್ಮಾಕೃತಿಂ ಚೈವ ಜೀವೋಪಾಧಿವಿಭೇದಕಮ್ ।**
ಏತದ್ಭೇದಂ ಸಮಾಸೇನ ಸಂಕ್ಷೇಪಾತ್ಶೃಣು ಷಣ್ಮುಖ ॥

ಟೀಕು॥ ಭೋ ಷಣ್ಮುಖ!=ಎಲೆ ಷಣ್ಮುಖನೆ! ಸ್ಥೂಲಸೂಕ್ಷ್ಮಾಕೃತಿಂ ಚೈವ=ವರ್ಣಂಗಳ ಸ್ಥೂಲಾಕಾರವು ಸೂಕ್ಷ್ಮಾಕಾರವು, ಜೀವೋಪಾಧಿವಿಭೇದಕಂ=ಜೀವಭೇದವು ಉಪಾಧಿಕ ಭೇದವು ಎಂಬ, ಏತದ್ಭೇದಂ=ಈ ಭೇದವನು, ಸಮಾಸೇನ=ಪರ್ಯಾಯದಿಂದ, ಸಂಕ್ಷೇಪಾತ್=ಸಂಕ್ಷೇಪ ಮಾತ್ರವಾಗಿ ಹೇಳಿಹೆನು, ಶೃಣು=ಕೇಳು. ॥೭॥

ಶ್ಲೋಕ॥ ಶಿವೇತತ್ತ್ವೇ ಪರೇಸೂಕ್ಷ್ಮೇ ಬಿಂದುರೂಪಂ ತು ಜಾಯತೇ ।
ಬಿಂದೋರ್ನಾದಂ ಸಮುತ್ಪನ್ನಂ ನಾದಾಂತೇ ಶಕ್ತಿರಜಾಯತ ।

ಶಕ್ತೇಸ್ತು ಜಾಯತೇ ಶಬ್ದಃ ಶಬ್ದಾದ್ಜಾಯೆತೇ ವಾಗ್ಭವಮ್ ।
ವಾಗ್ಭವಾಚ್ಚ ಕಲಾಃ ಜಾತಾಃ ಕಲಾಭ್ಯೋ ಸಕಲಾಸ್ತಥಾ ।

ಟೀಕು॥ ಪರೇ=ಉತ್ಕೃಷ್ಟವಾಗಿಹಂಥಾ, ಸೂಕ್ಷ್ಮೇ=ವ್ಯೋಮಾತೀತವಾಗಿಹಂಥಾ, ಶಿವೇತತ್ತ್ವೇ=ಶಿವತತ್ತ್ವದಲ್ಲಿ, ಬಿಂದುರೂಪಂ ತು=ಬಿಂದು ಸ್ವರೂಪವು, ಜಾಯತೇ=ಹುಟ್ಟುತ್ತಿಹುದು. ಬಿಂದೋಃ=ಆಜಗಜ್ಜನನಿಯಂಥಾ, ಕುಂಡಲಿನಿಯದೆಸೆಯಿಂದ, ನಾದ=ನಾದವು, ಸಮುತ್ಪನ್ನಂ=ಹುಟ್ಟಿತ್ತು. ನಾದಾಂತೇ=ನಾದದ ಕಡೆಯಲ್ಲಿ, ಶಕ್ತಿರಜಾಯತ=ಶಕ್ತಿಹುಟ್ಟಿತ್ತು, ಶಕ್ತೇಸ್ತು=ಶಕ್ತಿಯದೆಸೆಯಿಂದ, ಶಬ್ದಃ=ಶಬ್ದವು, ಜಾಯತೇ=ಹುಟ್ಟುತ್ತಿಹುದು, ಶಬ್ದಾತ್=ಶಬ್ದದದೆಸೆಯಿಂದ, ವಾಗ್ಭವಂ=ವಾಗ್ಭವವೂ, ಜಾಯತೇ=ಹುಟ್ಟುತ್ತಿಹುದು. ವಾಗ್ಭವಾಚ್ಚ=ವಾಗ್ಭವದದೆಸೆಯಿಂದ, ಕಲಾಃ=ಕಲಾಕ್ಷರಂಗಳೂ, ಜಾತಾಃ=ಹುಟ್ಟಿದವು, ಕಲಾಭ್ಯಃ=ಕಲಾಕ್ಷರಂಗಳದೆಸೆಯಿಂದ, ತಥಾ=ಹಾಂಗೆ, ವಿಕಲಾಃ=ವಿಕಲಾಕ್ಷರಂಗಳು ಹುಟ್ಟಿದವು. ॥೯॥

ಶ್ಲೋಕ॥ ತಸ್ಮಾದ್ವೈ ವಾಚಕೋ ಮಂತ್ರೋ ಮಂತ್ರಸ್ತೈರೇವ ಭಿದ್ಯತೇ।
ಏತತ್ಸೃಷ್ಟಿಕ್ರಮಂ ಪ್ರೋಕ್ತಂ ತೇಷಾಂ ಲಕ್ಷಣಮುಚ್ಯತೇ ॥

ಟೀಕು॥ ತಸ್ಮಾದ್ವೈ=ಅದು ಕಾರಣದಿಂದವು, ಮಂತ್ರಃ=ಮಂತ್ರವು, ವಾಚಕಃ=ವಾಚಕವೆನಿಸಿಕೊಂಬುದು, ಮಂತ್ರಃ=ಆ ಮಂತ್ರವು, ತೈರೇವ=ಆ ಬಿಂದ್ವಾದಿಗಳಿಂದವೆ, ಭಿದ್ಯತೇ=ಭೇಧಿಸಲುಪಡುತ್ತಿಹುದು. ಏತತ್ಸೃಷ್ಟಿಕ್ರಮಂ ಪ್ರೋಕ್ತಂ=ಈ ಸೃಷ್ಟಿಕ್ರಮವು ಹೇಳಲುಪಟ್ಟುದು. ತೇಷಾಂ=ಆ ಬಿಂದ್ವಾದಿಗಳ, ಲಕ್ಷಣಂ=ಲಕ್ಷಣವು, ಉಚ್ಯತೇ=ನುಡಿಯಲುಪಡುತ್ತಿಹುದು. ॥೧೦॥

ಶ್ಲೋಕ॥ ಬಿಂದುರೂಪಾ ಪರಾಶಕ್ತಿರ್ನಾದಶ್ಚೈವಾದಿರುಚ್ಯತೇ।
ಶಕ್ತಿರಿಚ್ಛೇತಿ ವಿಜ್ಞೇಯಾ ಶಬ್ದಂ ಜ್ಞಾನಮಿಹೋಚ್ಯತೇ ॥

ವಾಗ್ಭವಾಶ್ಚ ಕ್ರಿಯಾಶಕ್ತಿಃ ಕಲಾ ವೈ ಷೋಡಶಸ್ವರಾಃ ।

ಟೀಕು॥ ಪರಮೇಶ್ವರನನಿಷ್ಕಲಾಶಕ್ತಿಗಳೆನಿಸಿಹ, ಪರಾಶಕ್ತಿಃ=ಪರಾಶಕ್ತಿಯೆ, ಬಿಂದು ರೂಪಂ=ಬಿಂದುರೂಪವಾಯಿತು, ಆದಿಶ್ಚೈವ=ಆದಿಶಕ್ತಿಯೆ, ನಾದಉಚ್ಯತೇ=ನಾದವೆಂದು ನುಡಿಯಲುಪಡುತ್ತಿಹುದು. ಶಕ್ತಿಃ=ಶಕ್ತಿಯೆ, ಇಚ್ಛೇತಿ=ಇಚ್ಛಾಶಕ್ತಿಯೆಂದು, ವಿಜ್ಞೇಯಾ= ಅಱಿಯಲುಬೇಕಾದುದು. ಶಬ್ದಂ=ಶಬ್ದತತ್ತ್ವವು, ಇಹ=ಈ ಪಂಚಶಕ್ತಿಗಳ ಪರ್ಯಾಯ ವಾಚಕಂಗಳ ಹೇಳುವಲ್ಲಿ, ಜ್ಞಾನಂ=ಜ್ಞಾನಶಕ್ತಿಯೆಂದು, ಉಚ್ಯತೇ=ನುಡಿಯಲು ಪಡುತ್ತಿಹುದು. ಕ್ರಿಯಾಶಕ್ತಿಃ=ಕ್ರಿಯಾಶಕ್ತಿಯೆ, ವಾಗ್ಭವಂ=ವಾಗ್ಭವವೆಂಬ ತತ್ತ್ವವಹುದು. ಷೋಡಶಸ್ವರಾಃ=ಹದಿನಾಱು ಸ್ವರಾಕ್ಷರಂಗಳೇ, ಕಲಾ ವೈ=ಕಲೆಗಳೆನಿಸಿಕೊಂಬವು. ಈ ಎರಡು ನಾಮಂಗಳು ಏಕಾರ್ಥವಾಚಕಂಗಳು. ॥೧೨॥

ಶ್ಲೋಕ॥ **ತೇಷಾಂ ರೂಪಂ ಯಥಾಪ್ರೋಕ್ತಂ ಪ್ರಕೃತಿರ್ವಿಕೃತಿಸ್ಥಥಾ ।**
ಪ್ರಕೃತಿಸ್ಸಪ್ತವರ್ಣಾನಿ ವಿಕೃತಿಸ್ತು ನವಾರ್ಣಕಾಃ ॥

ಟೀಕು॥ ತೇಷಾಂ=ಆ ಬಿಂದ್ವಾದಿಗಳ, ರೂಪಂ=ಸ್ವರೂಪವು, ಯಥಾಪ್ರೋಕ್ತಂ=ಹೇಂಗೆ ನುಡಿಯಲುಪಟ್ಟುದು, ತಥಾ=ಹಾಂಗೆ ಷೋಡಶ ಸ್ವರಂಗಳೊಳಗೆ, ಪ್ರಕೃತಿಃ=ಪ್ರಕೃತಿ ಯೆಂದು, ವಿಕೃತಿಃ=ವಿಕೃತಿಯೆಂದು, ಪರ್ಯಾಯ ವಾಚಕಂಗಳು, ಪ್ರಕೃತಿಃ=ಪ್ರಕೃತಿ ಯೆಂದಡೆ, ಸಪ್ತವರ್ಣಾನಿ=ಏಳಕ್ಷರಂಗಳು, ವಿಕೃತಿಃ=ವಿಕೃತಿಯೆಂದಡೆ, ನವಾರ್ಣಕಾಃ= ಒಂಬತ್ತು ಅಕ್ಷರಂಗಳು. ॥೧೩॥

ಶ್ಲೋಕ॥ **ಅಕಾರಂಚ ಇಕಾರಂಚ ಉಕಾರಂಚ ಋಕಾರಕಮ್ ।**
ಇಕಾರಂಚೈವ ಏಕಾರಂ ತಥೈಕಾರಮೇವಚ ॥

ಏತೇ ಸಪ್ತಸ್ವರಾಃ ಪ್ರೋಕ್ತಾಃ ಪ್ರಕೃತಿಸ್ತು ಸಮೀರಿತಾಃ ।

ಟೀಕು॥ ಅಕಾರಂ ಚ=ಅಕಾರವು, ಇಕಾರಂ ಚ=ಇಕಾರವು, ಉಕಾರಂ ಚ=ಉಕಾರವು, ಋಕಾರಂ ಚ=ಋಕಾರವು, ಇಕಾರಂ ಚ=ಇಕಾರವು, ಏಕಾರಂ ಚ=ಏಕಾರವು, ತಥೈವ=ಹಾಂಗೆ, ಓಕಾರಮೇವ ಚ=ಓಕಾರವು, ಎಂಬ ಸ್ವರಾಃ ಪ್ರೋಕ್ತಾಃ=ಸ್ವರಗಳೆಂದು ನುಡಿಯಲುಪಟ್ಟ, ಏತೇ ಸಪ್ತ=ಅ ಇ ಉ ಋ ಌ ಏ ಓ ಎಂಬ ಏಳು ವರ್ಣಂಗಳೂ, ಪ್ರಕೃತಿಸ್ತು=ಪ್ರಕೃತಿಗಳೆಂದು ಸಮೀರಿತಾಃ=ಕರೆಯಲುಪಡುವುವು. ॥೧೪॥

ಶ್ಲೋಕ॥ **ಶೇಷಾಸ್ತು ವಿಕೃತಿಃ ಪ್ರೋಕ್ತಾಸ್ತೇಷಾಮುದ್ಭವ ಉಚ್ಯತೇ ।**

ಟೀಕು॥ ಶೇಷಾಸ್ತು=ಉಳಿದವಾಯಿತ್ತಾದಡೆ, ವಿಕೃತಿಃ=ವಿಕೃತಿಯೆಂದು, ಪ್ರೋಕ್ತಾಃ= ಹೇಳಲುಪಟ್ಟವು, ತೇಷಾಂ=ಆ ವಿಕೃತಿಯೆನಿಸುವ ನವಬೀಜಂಗಳ, ಉದ್ಭವಂ= ಉತ್ಪತ್ತಿಯು, ಉಚ್ಯತೇ=ನುಡಿಯಲುಪಡುತ್ತಿಹುದು. ॥೧೫॥

ಶ್ಲೋಕ॥ ಅಕಾರೇಚೋದ್ಭವಾಕಾರಃ ಇಕಾರೇತ್ವೀಸಮುದ್ಭವಃ ।
ಉಕಾರೇ ಚೈವ ಊಕಾರಃ ಋಕಾರೇ ೠ ಸಮುದ್ಭವಃ ॥

ಇಕಾರೇ ಚೈವ ಈಕಾರಮೇಕಾರೇತ್ವೈವ ಸಂಭವಃ ।
ಓಕಾರೇಚೌ ತಥಾಜ್ಞೇಯಃ ಕ್ರಮೇಣೈವ ಸಮುದ್ಭವಾಃ ॥

ಕಕಾರಾದೀತಿ ಪಂಚಾರ್ಣಂ ಅಕಾರಾತ್ತು ಸಮುದ್ಭವಮ್ ।
ಚಕಾರಾದೀತಿ ಪಂಚಾರ್ಣಂ ಇಕಾರಾತ್ತು ಸಮುದ್ಭವಮ್ ॥

ಟಕಾರಾದೀತಿ ಪಞ್ಚಾರ್ಣಂ ಋಕಾರಾತ್ತು ಸಮುದ್ಭವಮ್ ।
ತಕಾರಾದೀತಿ ಪಞ್ಚಾರ್ಣಂ ಇಕಾರಾತ್ತು ಸಮುದ್ಭವಮ್ ॥

ಪಕಾರಾದೀತಿ ಪಞ್ಚಾರ್ಣಂ ಉಕಾರಾತ್ತು ಸಮುದ್ಭವಮ್ ।
ಏಕಾರಾತ್ತು ಸಮುದ್ಭೂತಾ ಯಕಾರಾದಿ ದಿಶಸ್ಮೃತಾಃ ॥

ಕಕಾರಾಚ್ಚ ಸಮುದ್ಭೂತಾಃ ಯಕಾರಾದಿ ದಶಾಕ್ಷರಾಃ ।
ಏತೇ ವೈ ವಿಕಲಾಃ ಪ್ರೋಕ್ತಾಃ ತೇಪಂಚದಶಾಕ್ಷರಾಃ ॥

ಟೀಕು॥ ಅಕಾರೇ ಚ=ಅಕಾರದಲ್ಲಿ, ಆಕಾರಃ=ಆಯೆಂಬ ಅಕ್ಷರವು, ಸಮುದ್ಭವಃ=ಹುಟ್ಟಿತ್ತು. ಇಕಾರೇ ತು=ಇಕಾರದಲ್ಲಿಯಾಯಿತ್ತಾದಡೆ, ಈ ಸಮುದ್ಭವಃ=ಈ ಎಂಬ ವರ್ಣವು ಹುಟ್ಟಿತ್ತು. ಉಕಾರೇ ಚೈವ=ಉಕಾರದಲ್ಲಿಯೆ, ಊಕಾರಃ=ಊಕಾರವು ಹುಟ್ಟಿತ್ತು. ಋಕಾರೇ=ಋಕಾರದಲ್ಲಿ, ೠಸಮುದ್ಭವಃ=ೠ ಎಂಬ ವರ್ಣವು ಉತ್ಪತ್ತಿಯಾಯಿತ್ತು. ಌಕಾರೇ=ಌಕಾರದಲ್ಲಿ, ೡಕಾರಂ=ೡಕಾರವು ಹುಟ್ಟಿತ್ತು. ಏಕಾರೇತು=ಏಕಾರದಲ್ಲಿ ಯಾಯಿತ್ತಾದಡೆ, ಐಚ=ಐಕಾರವು, ಓಕಾರೇ=ಓಕಾರದಲ್ಲಿ, ಔ ಸಂಭವಃ=ಎಂಬ ಬೀಜವು ಹುಟ್ಟಿತ್ತು ಎಂದಱಿಯಬೇಕಾದುದು. ಕ್ರಮೇಣೈವ ಸಮುದ್ಭವಾಃ=ತಱುವಾಯಿಂದವೆ ಉತ್ಪತ್ತಿಯಾದವು. ॥೨೨॥

ಶ್ಲೋಕ॥ ಏತೇ ವೈ ವಿಕೃತಿಃ ಪ್ರೋಕ್ತಾ ಅಕಾರಾದಿನವರ್ಣಕಾಃ ।
ಅಕಾರಾದಿವಿಸರ್ಗಾಂತಾಃ ಏತೇ ವೈ ಷೋಡಶಸ್ವರಾಃ ।

ಟೀಕು॥ ಏತೇವೈ ಅಕಾರಾದಿನವಾರ್ಣಕಾಃ=ಆ, ಈ, ಊ, ೠ, ೡ, ಐ, ಔ ಎಂಬೀವೇಳು ಬಿಂದುವಿಸರ್ಗಗಳುಳ್ಳ ಅಂ, ಅಃ, ಎಂಬೆರಡು, ಈ ಒಂಭತ್ತು ಅಕ್ಷರಂಗಳೂ, ವಿಕೃತಿಃ ಪ್ರೋಕ್ತಾಃ=ವಿಕೃತಿ ಎಂದು ಹೇಳಲ್ಪಟ್ಟವು, ಇಂತು ಅಕಾರಾದಿವಿಸರ್ಗಾಂತಾಃ= ಅಕಾರವೇ ಮೊದಲಾಗಿ ಅಃ ಕಾರವೇಕಡೆಯಾದ, ಏತೇವೈ ಷೋಡಶ=ಈ ಹದಿನಾಱು, ಸ್ವರಾಃ=ಸ್ವರಂಗಳೆನಿಸಿಕೊಂಬವು. ॥೨೩॥

ಶ್ಲೋಕ॥ ಕಲಾಮಾತ್ರಾಃ ಸ್ವರಾಜೀವಾಃ ಪ್ರಕೃತಿ ವಿಕೃತಿಸ್ತಥಾ ।
ಪ್ರಾಣಾತ್ಮಾನಾ ಚ ದೇಹೀ ಚ ಕಲಾಪರ್ಯಾಯವಾಚಕಾಃ ।
ಏತಾನಿ ದಶನಾಮಾನಿ ಕಲಾಸ್ವೇವ ಪ್ರಯುಂಜತೇ ॥

ಟೀಕು॥ ಕಲಾ=ಕಲೆಗಳೆಂದು, ಮಾತ್ರಾಃ=ಮಾತ್ರೆಗಳೆಂದು, ಸ್ವರಾಃ=ಸ್ವರಗಳೆಂದು, ಜೀವಾಃ=ಜೀವಂಗಳೆಂದು ಬಹುವಚನ, ಪ್ರಕೃತಿಃ=ಪ್ರಕೃತಿಯೆಂದು, ಕಥಾ=ಹಾಂಗೆ, ವಿಕೃತಿಃ=ವಿಕೃತಿಯೆಂದು, ಪ್ರಾಣಾಃ=ಪ್ರಾಣನೆಂದು, ಆತ್ಮಾ=ಆತ್ಮನೆಂದು, ನಾಚ=ಪುರುಷ ನೆಂದು, ದೇಹೀಚ=ದೇಹಿ ಎಂದು ಏಕವಚನ, ಕಲಾ ಪರ್ಯಾಯವಾಚಕಾಃ=ಕಲೆಗಳ ಪರ್ಯಾಯವಾಚಕಂಗಳು, ಈ ದಶನಾಮಂಗಳೂ ಸ್ವರಾಕ್ಷರಂಗಳಿಗೆ ಸಲುವವು. ॥೨೪॥

ಶ್ಲೋಕ॥ ಕಲಾಭೇದಮಿದಂ ಪ್ರೋಕ್ತಂ ವಿಕಲಾಭೇದಕಂ ಶೃಣು ।
ಕಕಾರಾದಿಕ್ಷಕಾರಾಂತಾಃ ವರ್ಣಾಶ್ಚ ವಿಕಲಾ ಸ್ಮೃತಾಃ ॥

ಟೀಕು॥ ಇದಂ ಕಲಾಭೇದಂ=ಈ ಕಲಾಭೇದವು, ಪ್ರೋಕ್ತಂ=ಹೇಳಲುಪಟ್ಟುದು. ವಿಕಲಾಭೇದಕಂ ಶೃಣು=ವಿಕಲೆಗಳ ಭೇದವನು. ಎಲೆ ಷಣ್ಮುಖನೆ! ಕೇಳು. ಕರಾರಾದಿಕ್ಷ ಕಾರಾಂತಾವರ್ಣಾಶ್ಚ=ಕಕಾರ ಮೊದಲಾಗಿ ಕ್ಷಕಾರ ಕಡೆಯಾಗಿ ಮುವತ್ತೈದು ವರ್ಣಂಗಳು, ವಿಕಲಾಸ್ಮೃತಾಃ=ವಿಕಲಗಳೆಂದು ನೆನೆಯಲುಪಟ್ಟವು. ॥೨೫॥

ಶ್ಲೋಕ॥ ದೇಹೋಪಾಧಿಶರೀರಂ ಚ ಕ್ಷೇತ್ರಾಧಾರೌ ತನುಸ್ತಥಾ ।
ವ್ಯಂಜನಂ ವಿಕಲಾಶಕ್ತಿರ್ಬಿಂದು ಪರ್ಯಾಯವಾಚಕಾಃ ॥

ಟೀಕು॥ ದೇಹ=ದೇಹವೆಂದು, ಉಪಾಧಿ=ಉಪಾಧಿಯೆಂದು, ಶರೀರಂ ಚ=ಶರೀರವೆಂದು, ಕ್ಷೇತ್ರ=ಕ್ಷೇತ್ರವೆಂದು, ಆಧಾರೌ=ಆಧಾರವೆಂದು, ತಥಾ=ಹಾಂಗೆ, ತನು=ತನುವೆಂದು, ವ್ಯಂಜನಂ=ವ್ಯಂಜನವೆಂದು, ವಿಕಲಾ=ವಿಕಲೆಯೆಂದು, ಶಕ್ತಿಃ=ಶಕ್ತಿಯೆಂದು, ಹಿಂದೆ ಹೇಳಿದ ಒಂಭತ್ತು ನಾಮವಾಚಕಂಗಳೂ ತನುಪರ್ಯಾಯವು. ಬಿಂದು ಪರ್ಯಾಯ ವಾಚಕಾಃ=ಸಮಸ್ತಮಂತ್ರರೂಪಿಣಿಯಾದ ಕುಂಡಲಿನೀಶಕ್ತಿಯ ಪರ್ಯಾಯ ವಾಚಕಂಗಳು ವ್ಯಂಜನಾಕ್ಷರದ ಹೆಸರು.

ವ್ಯಂಜನಾರೂಪ ಲಕ್ಷಣಂ=ಕ್, ಖ್, ಗ್, ಘ್, ಙ್; ಚ್, ಛ್, ಜ್, ಝ್, ಞ್; ಟ್, ಠ್, ಡ್, ಢ್, ಣ್; ತ್, ಥ್, ದ್, ಧ್, ನ್; ಪ್, ಫ್, ಬ್, ಭ್, ಮ್; ಯ್, ರ್, ಲ್, ವ್, ಶ್, ಷ್, ಸ್, ಹ್, ಳ್, ಕ್ಷ್, ಎಂದು ಹೀಂಗೆ ಮುವತ್ತೈದು ಅಕ್ಷರಂಗಳು ವ್ಯಂಜನ ರೂಪವಾಗಿಹವು. ಈ ವ್ಯಂಜನಾಕ್ಷರಂಗಳಿಗೆ ದೇಹನಾಮವರ್ತಿಸುವುದು, ಈ ದೇಹವರ್ಣಂಗಳ ಕೂಟದಿಂದ ಸಮಸ್ತ ಜಗದ್ವ್ಯವಹಾರವು ಉದಯವಾಯಿತ್ತು.

ಶ್ಲೋಕ॥ ಕಲಾನಾಂ ವಿಕಲಾನಾಂ ತು ತ್ರೀಣಿ ರೂಪಾಣಿ ವಕ್ಷ್ಯತೇ ॥

ಟೀಕು॥ ಕಲಾನಾಂ=ಅಕಾರಾದಿ ವಿಸರ್ಗಾಂತವಾದ ಕಲಾಕ್ಷರಂಗಳ, ವಿಕಲಾನಾಂ ತು=ಕಕಾರಾದಿ ಕ್ಷಕಾರಾಂತವಾದ ವಿಕಲಾಕ್ಷರಂಗಳ, ರೂಪಾಣಿತ್ರೀಣಿಃ=ಮೂಱು ರೂಪಗಳೂ, ವಕ್ಷ್ಯತೇ=ಹೇಳಲುಪಟ್ಟುದು. ॥೨೭॥

ಶ್ಲೋಕ॥ ಶಿವಾಗ್ನಿಭೂತರುದ್ರಾಶ್ಚ ತ್ರಯೋದಶತಿಥಿಸ್ತಥಾ ।
ಏತೇ ವೈ ಸ್ವರವರ್ಣಾನಿ ಪುಲ್ಲಿಂಗಾಶ್ಚೇತಿ ಕೀರ್ತಿತಾಃ ॥

ಟೀಕು॥ ಲೆಕ್ಕ ಸಂಜ್ಞಾಭಿಧಾನಂಗಳಿಂದ ವರ್ಣಂಗಳ ಕಱುಹ ನಿರೂಪಿಸಿಹನು. ಶಿವ=ಪ್ರಥಮಾಕ್ಷರವು, ಅಗ್ನಿ=ಮೂಱನೆಯದು, ಸ್ವರಾಕ್ಷರಂಗಳಿಗೆ ದೇಹಿನಾಮವರ್ತಿಸುವುದು, ಭೂತ=ಅಯಿದನೆಯಕ್ಷರವು, ರುದ್ರಾಶ್ಚ=ಹನ್ನೊಂದನೆಯಕ್ಷರವು, ತ್ರಯೋದಶ=ಹದಿಮೂರನೆಯಕ್ಷರವು, ತಥಾ=ಹಾಂಗೆ, ತಿಥಿ ಹದಿನೈದನೆಯ ಅಕ್ಷರವು ಎಂಬ, ಏತೇ ವೈ ಸ್ವರವರ್ಣಾನಿ=ಅ, ಇ, ಉ, ಎ, ಓ, ಅಂ, ಎಂಬ ಸ್ವರಾಕ್ಷರವಾಱೂ, ಪುಲ್ಲಿಂಗಾಶ್ಚೇತಿ=ಪುಲ್ಲಿಂಗಗಳೆಂದು ಕೀರ್ತಿತಾಃ=ಹೇಳಲುಪಟ್ಟವು. ॥೨೮॥

ಶ್ಲೋಕ॥ ಪಕ್ಷೋ ವೇದೋ ರಸೋಭಾನು ಮನುಶ್ಚೈವಾಧಿಕಾರಕಮ್ ।
ಏತೇ ವೈ ಷಟ್ಕಬೀಜಾನಿ ಸ್ತ್ರೀಲಿಂಗಾಶ್ಚೇತಿ ಕೀರ್ತಿತಾಃ ॥

ಟೀಕು॥ ಪಕ್ಷಂ=ಸ್ವರವರ್ಣಂಗಳ ಎರಡನೆಯಕ್ಷರವು, ವೇದ=ನಾಲ್ಕನೆಯಕ್ಷರವು, ರಸಃ=ಆಱನೆಯಕ್ಷರವು, ಭಾನುಃ=ಹನ್ನೆರಡನೆಯಕ್ಷರವು, ಮನುಶ್ಚೈವಾ=ಹದಿನಾಲ್ಕನೆಯಕ್ಷರವು, ಅಧಿಕಾರಕಂ=ಹದಿನಾರನೆಯಕ್ಷರವು, ಏತೇವೈ ಷಟ್ಕಬೀಜಾನಿ=ಆ, ಈ, ಊ, ಐ, ಔ, ಅಃ ಎಂಬ ಈ, ಆಱಕ್ಷರಂಗಳೂ, ಸ್ತ್ರೀಲಿಂಗಾಶ್ಚೇತಿ=ಸ್ತ್ರೀಲಿಂಗಗಳೆಂದು, ಕೀರ್ತಿತಾಃ=ನುಡಿಯಲುಪಟ್ಟವು. ॥೨೯॥

ಶ್ಲೋಕ॥ ಋ ೠ ಌ ೡ ಚ ಚತ್ವಾರೋ ನಪುಂಸಕಾಃ ಇತಿ ಸ್ಮೃತಾಃ ।

ಟೀಕು॥ ಋ ೠ ಌ ೡ ಚತ್ವಾರಃ=ಋ ೠ ಌ ೡ ಎಂಬ ನಾಲ್ಕು ಅಕ್ಷರವು, ನಪುಂಸಕಾಃ ಇತಿ=ನಪುಂಸಕವಾಚಿ ಎಂದು, ಸ್ಮೃತಾಃ=ನೆನೆಯಲುಪಟ್ಟುದು. ॥೩೦॥

ಶ್ಲೋಕ॥ ಕಕಾರಶ್ಚ ಗಕಾರಶ್ಚ ಚಕಾರಶ್ಚ ಜಕಾರಕಃ ।
ಟಕಾರಶ್ಚ ಡಕಾರಶ್ಚ ತಕಾರಶ್ಚ ದಕಾರಕಃ ॥

ಪಕಾರಶ್ಚ ಬಕಾರಶ್ಚ ಷಕಾರಶ್ಚ ಕ್ಷಕಾರಕಃ ।
ಏತೇ ದ್ವಾದಶವರ್ಣಾನಿ ಪುಲ್ಲಿಂಗಾಶ್ಚೇತಿ ಕೀರ್ತಿತಾಃ ॥

ಟೀಕು॥ ಕಕಾರಶ್ಚ=ಕಕಾರವು, ಗಕಾರಶ್ಚ=ಗಕಾರವು, ಚಕಾರಶ್ಚ=ಚಕಾರವು, ಜಕಾರಕಃ=ಜಕಾರವು, ಟಕಾರಶ್ಚ=ಟಕಾರವು, ಡಕಾರಶ್ಚ=ಡಕಾರವು, ತಕಾರಶ್ಚ=ತಕಾರವು, ದಕಾರಕಃ=ದಕಾರವು, ಪಕಾರಶ್ಚ=ಪಕಾರವು, ಬಕಾರಶ್ಚ=ಬಕಾರವು, ಷಕಾರಶ್ಚ=ಷಕಾರವು, ಕ್ಷಕಾರಶ್ಚ=ಕ್ಷಕಾರವು, ಕ, ಗ, ಚ, ಜ, ಟ, ಡ, ತ, ದ, ಪ, ಬ, ಷ, ಕ್ಷ ಎಂಬ, ಏತೇ ದ್ವಾದಶವರ್ಣಾನಿ=ಹನ್ನೆರಡು ಅಕ್ಷರಂಗಳು, ಪುಲ್ಲಿಂಗಾಶ್ಚೇತಿ ಕೀರ್ತಿತಾಃ=ಪುಲ್ಲಿಂಗಗಳೆಂದು ಕರೆಯಲುಪಡುತ್ತಿದ್ದವು. ॥೩೨॥

ಶ್ಲೋಕ॥ **ಖಕಾರಂ ಚ ಘಕಾರಂ ಚ ಛಕಾರಂ ಚ ಝುಕಾರಕಮ್ ।**
ಠಕಾರಂ ಚ ಢಕಾರಂ ಚ ಥಕಾರಂ ಚ ಧಕಾರಕಮ್ ॥

ಫಕಾರಂ ಚ ಭಕಾರಂ ಚ ಶಕಾರಂ ಚ ಸಕಾರಕಮ್ ।
ಏತೇ ವೈ ಭಾನುಬೀಜಾನಿ ಜಾಯಾಶ್ಚೇತಿ ಪ್ರಕೀರ್ತಿತಾಃ ॥

ಟೀಕು॥ ಖಕಾರಂ ಚ=ಖಕಾರವು, ಘಕಾರಂ ಚ=ಘಕಾರವು, ಛಕಾರಂ ಚ=ಛಕಾರವು, ಝುಕಾರಂ ಚ=ಝುಕಾರವು, ಠಕಾರಂ ಚ=ಠಕಾರವು, ಢಕಾರಂ ಚ=ಢಕಾರವು, ಥಕಾರಂ ಚ=ಥಕಾರವು, ಧಕಾರಕಂ=ಧಕಾರವು, ಫಕಾರಂ ಚ=ಫಕಾರವು, ಭಕಾರಂ ಚ=ಭಕಾರವು, ಶಕಾರಂ ಚ=ಶಕಾರವು, ಸಕಾರಕಂ=ಸಕಾರವು ಖ ಘ ಛ ಝು ಠ ಢ ಥ ಧ ಫ ಭ ಶ ಸ ಎಂಬ ಏತೇ ವೈ ಭಾನುಬೀಜಾನಿ=ಈ ದ್ವಾದಷಾಕ್ಷರಂಗಳು, ಜಾಯಾಶ್ಚೇತಿ= ಸ್ತ್ರೀಲಿಂಗಗಳೆಂದು ಪ್ರಕೀರ್ತಿತಾಃ=ಹೇಳಲುಪಟ್ಟವು. ॥೩೪॥

ಶ್ಲೋಕ॥ **ಶೇಷಾಂ ನಪುಂಸಕಂ ವಿದ್ಯಾತ್ತ್ರಯೋಭೇದಾ ಇತಿ ಸ್ಮೃತಾಃ ॥**

ಟೀಕು॥ ಶೇಷಂ=ಈ ೨೪ ಅಕ್ಷರಂಗಳಲ್ಲದೆವುಳಿದ ಙ ಞ ಣ ನ ಮ ಯ ರ ಲ ವ ಹ ಳ ಎಂಬ ೧೧ ಅಕ್ಷರಂಗಳು ನಪುಂಸಕಂ=ನಪುಂಸಕಾಕ್ಷರಗಳೆಂದು, ವಿದ್ಯಾತ್=ಅರಿವುದು. ತ್ರಯೋಭೇದಾ ಇತಿ ಸ್ಮೃತಾಃ=ಕಲಾಕ್ಷರ ವಿಕಲಾಕ್ಷರಂಗಳೂ, ಪುಲ್ಲಿಂಗ ಸ್ತ್ರೀಲಿಂಗ, ನಪುಂಸಕಗಳೆಂಬ ಭೇದಂಗಳು ಈ ಪ್ರಕಾರದಿಂದ ನೆನೆಯಲ್ಪಟ್ಟವು. ॥೩೫॥

ಶ್ಲೋಕ॥ **ಅಕಾರದಿ ತ್ರಯೋ ವ್ಯೋಮ ಈಕಾರಾದಿ ತ್ರಯೋಽನಿಲಃ ।**
ಋಕಾರಾದೀನಿ ವರ್ಣಾನಿ ತೇಷಾಮಗ್ನಿರಿತಿ ಸ್ಮೃತಾಃ ।
ಌಕಾರಾದಿತ್ರಯೋ ಹ್ಯಾಪಃ ಓಕಾರಾದಿ ತ್ರಯೋ ಮಹೀ ॥

ಟೀಕು॥ ತೇಷಾಂ=ಆ ಈ ಸ್ವರಾಕ್ಷರಂಗಳೊಳಗೆ ಪಂಚ ತತ್ತ್ವಬೀಜಂಗಳ ನಿರೂಪಿಸಿಹನು, ಅಕಾರಾದಿ=ಅ ಆ ಇ ಎಂಬ, ತ್ರಯಃ=ಮೂಱಕ್ಷರವೂ, ವ್ಯೋಮ=ಆಕಾಶವು, ಈಕಾರಾದಿ=ಈ ಉ ಊ ಎಂಬ, ತ್ರಯಃ=ಮೂಱು ವರ್ಣಂಗಳೂ,

ಅನಿಲಃ=ವಾಯುತತ್ತ್ವವು, ಋಕಾರಾದೀನಿವರ್ಣಾನಿ=ಋ ೠ ಌ ಎಂಬ ಅಕ್ಷರಂಗಳು, ಅಗ್ನಿರಿತಿ=ಅಗ್ನಿ ಎಂದು, ಸ್ಮೃತಃ=ನೆನೆಯಲುಪಟ್ಟುದು. ಌಕಾರಾದಿ=ಌ ಏ ಐ ಎಂಬ, ತ್ರಯೋ ಹಿ=ಮೂಱು, ಆಪಃ=ಅಪ್ತತ್ತ್ವ ಬೀಜಂಗಳು, ಓಕಾರಾದಿ=ಓ ಔ ಅಂ ಎಂಬ ತ್ರಯಃ=ಮೂಱು, ಮಹೀ=ಭೂಮಿತತ್ತ್ವವೆಂದೆನಿಸಿಕೊಂಬವು. ॥೩೬॥

ಶ್ಲೋಕ॥ **ಕಕಾರಾದಿಜಕಾರಾನ್ತಾಃ ಲಕಾರಶ್ಚ ಳಕಾರಕಃ**
ಪೃಥಿವ್ಯಂಶಾಃ ಇತಿ ಜ್ಞೇಯಂ ಚಕಾರಾದೀತಿ ಪಂಚಕಮ್ ।

ವಕಾರಶ್ಚ ಶಕಾರಶ್ಚ ಜಲಾಂಶಕಾಃ ಇತಿ ಸ್ಮೃತಾಃ ।
ಟಕಾರಾದಿ ಣಕಾರಾನ್ತಾಃ ರಕಾರಶ್ಚ ಸಕಾರಕಃ

ತೇಜೋಽಂಶಕಾಃ ಇತಿ ಜ್ಞೇಯಂ ತಕಾರಾದೀತಿ ಪಂಚಕಮ್ ।
ಯಕಾರಶ್ಚ ಷಕಾರಶ್ಚ ಹ್ಯನಿಲಾಂಶಾಃ ಇತಿ ಸ್ಮೃತಮ್ ॥

ಪಕಾರಾದಿ ಮಕಾರಾನ್ತಾಃ ಹಕಾರಶ್ಚ ಕ್ಷಕಾರಕಃ ।
ವ್ಯೋಮಾಂಶಕಾಃ ಇತಿ ಜ್ಞೇಯಂ ಹ್ಯೇಷಾ ವೈ ತ್ವಂಶಕಸ್ಮೃತಿಃ ॥

ಶ್ಲೋಕ॥ **ಪ್ರಕೃತಿಸ್ತತ್ತ್ವಬೀಜಂ ಸ್ಯಾದ್ವಿಕೃತಿರ್ಮೂರ್ತಿರುಚ್ಯತೇ ।**
ಪ್ರಭಾವಂ ವಿಕಲಾಃ ಪ್ರೋಕ್ತಾ ಇತ್ಯೇವಂ ತ್ರಿವಿಧಾ ಭವೇತ್

ಟೀಕು॥ ಮುಂದಣ ಚಕ್ರೋದ್ಧರಣದಲ್ಲಿ ವರ್ಣನ್ಯಾಸಮಾಡುವ, ತತ್ತ್ವ, ಮೂರ್ತಿ, ಪ್ರಭಾವಂಗಳೆಂಬ ಮೂಱುಭೇದಂಗಳಾಗಿಹ ವರ್ಣಂಗಳ ವಿಭಾಗವ ನಿರೂಪಿಸಿಹನು:

ಪ್ರಕೃತಿಃ=ಪ್ರಕತಿ ಎನಿಸಿಕೊಂಬ ಹ್ರಸ್ವತತ್ತ್ವಂಗಳೊಳು, ತತ್ತ್ವಬೀಜಂ ಸ್ಯಾತ್=ತತ್ತ್ವಬೀಜ ವಹುದು, ವಿಕೃತಿಃ=ವಿಕೃತಿಯೆನಿಸಿಕೊಂಬ ದೀರ್ಘಸ್ವರವೊಂಭತ್ತು, ಮೂರ್ತಿ ರುಚ್ಯತೇ=ಮೂರ್ತಿಬೀಜವೆಂದು ನುಡಿಯಲುಪಡುತ್ತಿಹುದು. ಪ್ರಭಾವಂ=ಪ್ರಭಾವ ತತ್ತ್ವಬೀಜವೂ, ವಿಕಲಾಃ ಪ್ರೋಕ್ತಾಃ=ವ್ಯಂಜನಾಕ್ಷರಂಗಳೆಂದು ಹೇಳಲುಪಟ್ಟವು, ಇತಿ=ಈ ಪಜೆಯಿಂದ, ಏವಂ=ಈ ಪ್ರಕಾರವು, ತ್ರಿವಿಧಾ ಭವೇತ್=ಮೂಱು ಪ್ರಕಾರವಹುದು. ॥೪೫॥

ಶ್ಲೋಕ॥ **ಪ್ರಕೃತಿಃಹ್ರಸ್ವಮಿತ್ಯುಕ್ತಂ ವಿಕೃತಿಃ ದೀರ್ಘಮುಚ್ಯತೇ ।**
ಏಕಮಾತ್ರಂ ಭವೇದ್ವಿಮಾತ್ರೋ ದೀರ್ಘ ಉಚ್ಯತೇ ।
ವ್ಯಂಜನಂ ತ್ವರ್ಧಮಾತ್ರಂಸ್ಯಾದಿತ್ಯೇತಲ್ಲಕ್ಷಣಂ ಭವೇತ್ ॥

ಟೀಕು॥ ಪ್ರಕೃತಿಃ=ಪ್ರಕೃತಿಯೆಂದಡೆ, ಹ್ರಸ್ವಮಿತ್ಯುಕ್ತಂ=ಹ್ರಸ್ವವೆಂದು ನುಡಿಯಲ್ಪಟ್ಟುದು. ವಿಕೃತಿಃ ದೀರ್ಘಮುಚ್ಯತೇ=ವಿಕೃತಿಯು ದೀರ್ಘಾಕ್ಷರವೆಂದು ನುಡಿಯಲುಪಡುತ್ತಿಹುದು.

ತ್ರಿಮೂರ್ತಿಸ್ತು ಪ್ಲುತೋ ಜ್ಞೇಯಃ=ಪ್ಲುತವನ್ನು ಮೂಱು ಮಾತ್ರೆಗಳನ್ನುಳ್ಳದೆಂದಱಿವುದು. ವ್ಯಂಜನಂ ತು=ವ್ಯಂಜನಾಕ್ಷರವಾಯಿತ್ತಾದಡೆ, ಅರ್ಧಮಾತ್ರಂಸ್ಯಾತ್=ಅರ್ಧಾಕ್ಷರವಹುದು, ಇತಿ=ಈ ಪ್ರಕಾರವು, ಏತಲ್ಲಕ್ಷಣಂ=ಈ ಲಕ್ಷಣಂಗಳ ಲಕ್ಷಣವು, ಭವೇತ್=ಅಹುದು. ॥೪೨॥

ಏಕಪಂಚಾಶದ್ವರ್ಣಂಗಳ ಅಧಿದೈವ ಫಲಾದಿಗಳನು ನಿರೂಪಿಸಿಹನು:

ಶ್ಲೋಕ॥ ಅಕಾರಃ ಸರ್ವದೈವತ್ಯಂ ರಕ್ತಂ ಸರ್ವವಶೀಕರಮ್ ।
ಆಕಾರಃ ಸ್ಯಾತ್ಪರಾಶಕ್ತಿಃ ಶ್ವೇತಮಾಕರ್ಷಣಂ ಭವೇತ್ ।

ಟೀಕು॥ ಅಕಾರಃ=ವರ್ಗಾದಿವರ್ಣಾದಿಯೆನಿಸಿಕೊಂಬ ಅಕಾರವೆ, ಸಕಲವರ್ಣಕ್ಕೆ ಆದಿಯಪ್ಪುದಱಿಂದವು. "ಅಕ್ಷರಾಣಾಮಾಕಾರೋವೈ" ಅಕ್ಷರಂಗಳೊಳಗೆ ಆ ಮಕಾರವು ಹೇಂಗೆ ಶ್ರೇಷ್ಠವಾಗಿಹುದು ಹಾಂಗೆಯೆಂದು ಪಂಚಾಕ್ಷರಿಯ ಪ್ರಶಂಸೆಯ ಹೇಳುವ ಪುರಾಣಗ್ರಂಥಾದಿಗಳಿಂದವೂ; ಸರ್ವದೈವತ್ಯಂ=ವ್ಯಂಜನ ರೂಪದ ಎಲ್ಲಾ ವರ್ಣಂ ಗಳಿಗೆಯೂ ಅಕಾರವಿಲ್ಲದೆ ವರ್ಣರೂಪವು ಉದಿಸದ ಕಾರಣದಿಂದವೂ ಎಲ್ಲಾ ವರ್ಣಂಗಳೊಳಗೆ ತಾನೆ ಇಪ್ಪ ಕಾರಣದಿಂದವೂ ಎಲ್ಲಾ ದೇವತಾಸ್ವರೂಪವನುಳ್ಳ ದಾಯಿತ್ತು. ರಕ್ತಂ=ಆ ಅಕಾರವು ಕೆಂಪುವರ್ಣವೂ, ಸರ್ವವಶೀಕರಂ=ಎಲ್ಲಾ ಕಾರ್ಯಂಗಳನೂ ವಶಮಾಡಿಕೊಡುವುದು. ಆಕಾರಃ=ಆಕಾರವು, ಪರಾಶಕ್ತಿಃ ಸ್ಯಾತ್= ಪರಾಶಕ್ತಿಯಹುದು, ಶ್ವೇತಂ=ಶ್ವೇತವರ್ಣವಾಗಿಹುದು. ॥೪೩॥

ಶ್ಲೋಕ॥ ಇಕಾರೋ ವಿಷ್ಣುದೈವತ್ಯಂ ಶ್ಯಾಮಂ ರಕ್ಷಾಕರಂ ಭವೇತ್ ।
ಮಾಯಾಶಕ್ತಿರಿತೀಕಾರಃ ಪೀತಂ ಸ್ತ್ರೀಣಾಂ ವಶೀಕರಃ ॥

ಟೀಕು॥ ಇಕಾರಃ ವಿಷ್ಣುದೈವತ್ಯಂ=ಇಕಾರವು ವಿಷ್ಣುದೇವತೆಯಾಗಿ ಉಳ್ಳದು. ಶ್ಯಾಮಂ=ಶ್ಯಾಮವರ್ಣವಾಗಿಹುದು, ರಕ್ಷಾಕರಂ ಭವೇತ್=ರಕ್ಷಣಮಾಡುವುದಹುದು. ಈಕಾರಃ=ಈಕಾರವು, ಮಾಯಾಶಕ್ತಿರಿತಿ=ಮಾಯಾಶಕ್ತಿಯೆನಿಸಿಕೊಂಬುದು, ಪೀತಂ= ಹಳದಿ ವರ್ಣವಾಗಿಹುದು, ಸ್ತ್ರೀಣಾಂ ವಶೀಕರಃ=ಕಾಮಾರ್ಥಜ್ಞಾಪರುಗಳಿಗೆ ಸ್ತ್ರೀಯರು ಗಳವಶವ ಮಾಡಿಕೊಡುವುದು. ॥೪೪॥

ಶ್ಲೋಕ॥ ಉಕಾರಃ ವಾಸ್ತು ದೈವತ್ಯಂ ಕೃಷ್ಣಂ ರಾಜವಶೀಕರಮ್ ।
ಊಕಾರೋ ಭೂಮಿ ದೈವತ್ಯಂ ಶ್ಯಾಮಂ ಲೋಕವಶೀಕರಮ್ ॥

ಟೀಕು॥ ಉಕಾರಂ=ಉಕಾರವು, ವಾಸ್ತುದೈವತ್ಯಂ=ವಾಸ್ತುವೇ ಅಧಿದೇವತೆಯಾಗಿ ಉಳ್ಳುದು. ಕೃಷ್ಣಂ=ಕೃಷ್ಣವರ್ಣವಾಗಿಹುದು, ರಾಜವಶೀಕರಂ=ಷಟ್ಕರ್ಮಕರ್ತೃಗಳಾದ ಮಂತ್ರವಾದಿಗಳಿಗೆ ರಾಜರುಗಳ ವಶಮಾಡಿಕೊಡುವುದು, ಊಕಾರಃ=ಊಕಾರವು,

ಭೂಮಿ ದೈವತ್ಯಂ=ಭೂಮಿದೇವಿಯೆನಿಸಿಕೊಂಬುದು, ಶ್ಯಾಮಂ=ಶ್ಯಾಮ ವರ್ಣವಾಗಿಹುದು, ಲೋಕವಶೀಕರಂ=ಜನವಶ್ಯ ಮಾಡುವುದು. ॥೪೫॥

ಶ್ಲೋಕ॥ ಋಕಾರಃ ಬ್ರಹ್ಮಣೋ ಜ್ಞೇಯಂ ಪೀತಂ ಗ್ರಹವಿನಾಶನಮ್ ।
ಶಿಖಂಡಿರೂಪಂ ೠಕಾರಃ ಹ್ಯಂಜನಂ ಜ್ವರನಾಶನಮ್ ॥

ಟೀಕು॥ ಋಕಾರಃ=ಋಕಾರವು, ಬ್ರಹ್ಮಣೋಜ್ಞೇಯಂ=ಬ್ರಹ್ಮಬೀಜವೆಂದರಿಯಬೇಕಾದುದು, ಪೀತಂ=ಹಳದಿ ವರ್ಣವುಳ್ಳದು, ಗ್ರಹವಿನಾಶನಂ=ಸಮಸ್ತಗ್ರಹಗಳ ಕೆಡಿಸುವುದು, ೠಕಾರಃ=ೠಕಾರವು, ಶಿಖಂಡಿರೂಪಂ=ಶಿಖಂಡಿರೂಪವಾಗಿಹುದು, ಅಂಜನಂ=ಅಂಜನವರ್ಣವನುಳ್ಳದು, ಜ್ವರನಾಶನಂ=ಜ್ವರಂಗಳ ಕೆಡಿಸುವುದು. ॥೪೬॥

ಶ್ಲೋಕ॥ ಅಶ್ವಿನೀಭ್ಯಾಂ ಌ ೡಶ್ಚೈವ ಸಿತರಕ್ತಂ ಜ್ವರಾಪಹೌ ।
ಏಕಾರಂ ವೀರಭದ್ರಂ ಸ್ಯಾತ್ಪೀತಂ ಸರ್ವಾರ್ಥಸಿದ್ಧಿದಮ್ ॥

ಟೀಕು॥ ಅಶ್ವಿನೀಭ್ಯಾಂತು=ಅಶ್ವಿನೀ ದೇವತೆಗಳು, ಌ ೡ ಚ=ಌ ೡ ವರ್ಣಂಗಳಿಗೆ ಅಧಿದೈವಂಗಳೆಂದರಿವುದು; ಸಿತರಕ್ತಂ=ಬಿಳಿಕೆಂಪು ವರ್ಣಂಗಳನುಳ್ಳವು; ಜ್ವರಾಪಹಮ್=ಜ್ವರನಾಶಗುಣವುಳ್ಳವು. ಏಕಾರಃ=ಏಕಾರವು, ವೀರಭದ್ರಂಸ್ಯಾತ್=ವೀರಭದ್ರಬೀಜವಹುದು. ಪೀತಂ=ಹಳದಿವರ್ಣವನುಳ್ಳದು, ಸರ್ವಾರ್ಥ ಸಿದ್ಧಿದಂ=ಸಕಲ ಪ್ರಯೋಜನವುಳ್ಳುದು. ॥೪೭॥

ಶ್ಲೋಕ॥ ಐಕಾರಃ ವಾಗ್ಭವಂ ವಿಂದ್ಯಾತ್ ಸ್ಫಾಟಿಕಂ ಜ್ಞಾನ ಸಿಧ್ಧಿದಮ್ ।

ಟೀಕು॥ ಐಕಾರಃ=ಐಕಾರವು, ವಾಗ್ಭವಂ ವಿಂದ್ಯಾತ್=ವಾಗ್ಭವವೆಂದರಿವುದು, ಸ್ಫಾಟಿಕಂ=ಸ್ಫಟಿಕ ವರ್ಣವಾಗಿಹುದು. ಜ್ಞಾನ ಸಿಧ್ಧಿದಂ=ಜ್ಞಾನ ಸಿಧ್ಧಿದಾಯಕವೆಂದರಿವುದು. ॥೪೮॥

ಶ್ಲೋಕ॥ ಓಕಾರಮೀಶ್ವರಂ ವಿಂದ್ಯಾಜ್ಜೋತಿಃ ಸರ್ವ ಫಲಪ್ರದಮ್ ।
ಔಕಾರಃ ಆದಿಶಕ್ತಿಸ್ಸ್ಯಾಚ್ಛುಕ್ಲಂ ಸರ್ವತ್ರ ಸಿಧ್ಧಿದಮ್ ॥

ಟೀಕು॥ ಓಕಾರಃ=ಓಕಾರವು, ಈಶ್ವರಂ ವಿಂದ್ಯಾತ್=ಈಶ್ವರ ಬೀಜವೆಂದರಿವುದು, ಜ್ಯೋತಿಃ=ತೇಜೋ ವರ್ಣವುಳ್ಳುದು, ಸರ್ವಫಲಪ್ರದಂ=ಸಕಲಫಲ ಪ್ರದಾಯಕವೆಂದರಿವುದು. ಔಕಾರಃ=ಔಕಾರವು, ಆದಿಶಕ್ತಿಃಸ್ಯಾತ್=ಆದಿಶಕ್ತಿಯಹುದು, ಶುಕ್ಲಂ=ಶುಕ್ಲವರ್ಣವನುಳ್ಳದು, ಸರ್ವತ್ರಸಿಧ್ಧಿದಂ=ಎಲ್ಲಾ ಸಿಧ್ಧಿಯ ಕೊಡುವುದು. ॥೪೯॥

ಶ್ಲೋಕ॥ ಅಂಕಾರಸ್ತು ಮಹೇಶಸ್ಸ್ಯಾದ್ರಕ್ತವರ್ಣಂ ಸುಖಪ್ರದಮ್ ।
ಅಃಕಾರಃ ಕಾಲರುದ್ರಂ ಚ ರಕ್ತಂ ಪಾಶನಿಕೃಂತನಮ್ ॥

ಟೀಕು॥ ಅಂಕಾರಸ್ತು=ಅಂಕಾರವಾಯಿತ್ತಾದಡೆ, ಮಹೇಶಸ್ಸ್ಯಾತ್=ಮಹೇಶ ಬೀಜವಹುದು; ರಕ್ತವರ್ಣಂ=ಕೆಂಪುವರ್ಣವಾಗಿಹುದು. ಸುಖಪ್ರದಂ=ಸೌಖ್ಯವಹುದು. ಅಃಕಾರಃ= ಅಃಕಾರವು, ಕಾಲರುದ್ರಂಚ=ಕಾಲರುದ್ರಾಕ್ಷವು, ರಕ್ತಂ=ರಕ್ತ ವರ್ಣವನುಳ್ಳದು, ಪಾಶನಿಕೃಂತನಂ=ಸಂಸಾರ ಪಾಶಂಗಳ ಕತ್ತರಿಸುವುದು, ಈ ಪರಿಯಿಂದ, ಸ್ವರಾಕ್ಷರಾಧಿಕ ದೈವವರ್ಣಫಲಂಗಳಂ ನಿರೂಪಿಸಿ ಸ್ವರ್ಷಾಕ್ಷರ ವ್ಯಾಪಿತಾಕ್ಷರಂಗಳಿಗೆ ಅಧಿದೈವ ಫಲಂಗಳನು ನಿರೂಪಿಸಿಹನು. ॥೫೦॥

ಶ್ಲೋಕ॥ **ಪ್ರಾಜಾಪತ್ಯಂ ಕಕಾರಸ್ಸ್ಯಾತ್ಪೀತಂ ಸೃಷ್ಟಿಕರಂ ಭವೇತ್ ।**
ಖಕಾರೋ ಜಾಹ್ನವೀಜ್ಞೇಯಂ ಕ್ಷೀರಾಭಂ ಪಾಪನಾಶನಮ್ ॥

ಗಕಾರೋ ಗಣರೂಪಂ ಸ್ಯಾದ್ರಕ್ತಾಭಂ ವಿಘ್ನನಾಶನಮ್ ।
ಘಕಾರೋ ಭೈರವೋ ಜ್ಞೇಯಂ ಮುಕ್ತಾಭಂ ಶತ್ರುನಾಶನಮ್ ॥

ಟೀಕು॥ ಕಕಾರಃ=ಕಕಾರವು, ಪ್ರಾಜಾಪತ್ಯಂ=ಬ್ರಹ್ಮನ ಸಂಬಂಧವಾದ ಬೀಜವು, ಸ್ಯಾತ್=ಅಹುದು, ಪೀತಂ=ಪೀತವರ್ಣವನುಳ್ಳದು, ವೃಷ್ಟಿಕರಂ ಚ ಭವೇತ್=ವೃಷ್ಟಿಯ ಮಾಡುವುದಹುದು. ಖಕಾರಃ= ಖಕಾರವು, ಜಾಹ್ನವೀ ಜ್ಞೇಯಂ=ಜಾಹ್ನವಿಯೆಂದಜೆಯ ಬೇಕಾದುದು. ಕ್ಷೀರಾಭಃ=ಕ್ಷೀರದೋಪಾದಿಯಲ್ಲಿ ಬಿಳಿದನುಳ್ಳದು. ಪಾಪನಾಶನಂ= ಪಾಪಂಗಳ ಕೆಡಿಸುವುದು, ಗಕಾರಃ=ಗಕಾರವು, ಗಣರೂಪಂ ಸ್ಯಾತ್=ವಿಘ್ನೇಶ್ವರ ಸ್ವರೂಪವಹುದು, ರಕ್ತಾಭಂ=ರಕ್ತಪ್ರಭೆಯಾಗಿಹುದು, ವಿಘ್ನನಾಶನಂ=ವಿಘ್ನಂಗಳ ಕೆಡಿಸುವುದು, ಘಕಾರಃ=ಘಕಾರವು, ಭೈರವಜ್ಞೇಯಂ=ಭೈರವಬೀಜವೆಂದಜಿವುದು. ಮುಕ್ತಾಭಂ=ಮುತ್ತಿನೋಪಾದಿಯ ಬಿಳಿದನುಳ್ಳುದು. ಶತ್ರುನಾಶನಂ=ಶತ್ರುಗಳ ಕೆಡಿಸುವುದು. ॥೫೨॥

ಶ್ಲೋಕ॥ **ಜಕಾರಃ ಕಾಲಬೀಜಂಸ್ಯಾತ್ಕಾಲಂಸರ್ವಜಯಂ ಭವೇತ್ ।**
ಚಕಾರಃ ಚಂಡರುದ್ರಂ ಸ್ಯಾತ್‌ಅಂಜನಂ ತ್ರಿಪುರಾಪಹಮ್ ॥

ಟೀಕು॥ ಜಕಾರಃ=ಜಕಾರವು, ಕಾಲಬೀಜಂಸ್ಯಾತ್=ಕಾಲಬೀಜವಹುದು. ಕಾಲಂ=ಕಪ್ಪುವರ್ಣವನುಳ್ಳದು. ಸರ್ವಜಯಂಭವೇತ್=ಸರ್ವಜಯವನುಳ್ಳದಹುದು. ಚಕಾರಃ ಚಂಡರುದ್ರಂಸ್ಯಾತ್=ಚಕಾರವುಚಂಡೇಶ್ವರ ಬೀಜವಹುದು, ಅಂಜನಂ= ಅಂಜನವರ್ಣವನುಳ್ಳುದು. ತ್ರಿಪುರಾಪಹಂ= ರಾಕ್ಷಸನಿವಾರಣೆಯಮಾಡುವದು. ॥೫೩॥

ಶ್ಲೋಕ॥ **ಛಕಾರೋ ಭದ್ರಕಾಲೀಸ್ಯಾದ್ರಾಜಾವರ್ತಂ ಜಯಪ್ರದಮ್ ।**
ಜಕಾರೋ ಜಂಭಹಾ ಜ್ಞೇಯಂ ರಕ್ತಾಭಂ ಚ ಜಯಾವಹಮ್ ॥

ಟೀಕು॥ ಛಕಾರಃ=ಛಕಾರವು, ಭದ್ರಕಾಳೀಸ್ಯಾತ್=ಭದ್ರಕಾಳಿಯಹುದು, ರಾಜಾವರ್ತಂ=

ರಾಜಾವರ್ತದವರ್ಣವುಳ್ಳದು, ಜಯಪ್ರದಂ=ಗೆಲವಕೊಡುವುದು, ಜಕಾರಃ=ಜಕಾರವು, ಜಂಭಹಾ=ದೇವೇಂದ್ರನೆಂದು, ಜ್ಞೇಯಂ=ಅಱಿಯಬೇಕಾದುದು, ರಕ್ತಾಭಂ=ರುಧಿರವರ್ಣವಾಗಿಹುದು, ಜಯಾವಹಂ=ಗೆಲವ ಮಾಡುವದು. ॥೫೪॥

ಶ್ಲೋಕ॥ ಝಕಾರೋ ಅರ್ಧನಾರೀಸ್ಯಾತ್‌ಶ್ಯಾಮರಕ್ತಂ ಜಯಾವಹಮ್ ।
ಞಕಾರೋ ಕೋಟಿರ್ವಿಜ್ಞೇಯಂ ಪೀತಂ ರೋಗವಿನಾಶನಮ್ ॥

ಟೀಕು॥ ಝಕಾರಂ=ಝಕಾರವು, ಅರ್ಧನಾರೀಸ್ಯಾತ್=ಅರ್ಧನಾರೀಶ್ವರನಹುದು. ಶ್ಯಾಮರಕ್ತಂ=ಶ್ಯಾಮರಕ್ತವನುಳ್ಳದು, ಜಯಾವಹಂ=ಜಯವನುಂಟುಮಾಡುವದು, ಞಕಾರಃ=ಞಕಾರವು, ಕೋಟಿ=ಕೋಟಿರುದ್ರನೆಂದು, ವಿಜ್ಞೇಯಂ=ಅಱಿಯಬೇಕಾದುದು, ಪೀತಂ=ಪೀತವರ್ಣವನುಳ್ಳದು, ರೋಗವಿನಾಶನಂ=ವ್ಯಾಧಿಗಳ ಕೆಡಿಸುವದು. ॥೫೫॥

ಶ್ಲೋಕ॥ ಭೃಂಗೀಶಃ ಸ್ಯಾಟ್ಟಕಾರಂ ತು ರಕ್ತಂ ಸರ್ವಸುಖಾವಹಮ್ ।
ಠಕಾರಂ ಚಂದ್ರ ಬೀಜಂ ಸ್ಯಾತ್ ಶ್ವೇತೋ ಮೃತ್ಯುವಿನಾಶನಮ್ ॥

ಟೀಕು॥ ಟಕಾರಂತು=ಟಕಾರವಾಯಿತ್ತಾದಡೆ, ಭೃಂಗೀಶಃ ಸ್ಯಾತ್=ಭೃಂಗೀಶ್ವರ ಬೀಜವಹುದು, ರಕ್ತಂ=ಕೆಂಪವರ್ಣವನುಳ್ಳದು, ಸರ್ವಸುಖಾವಹಂ=ಸಮಸ್ತ ಸುಖಂಗಳ ಮಾಡುವದು, ಠಕಾರಂ=ಠಕಾರವು, ಚಂದ್ರಬೀಜಂ ಸ್ಯಾತ್=ಚಂದ್ರ ಬೀಜವಹುದು, ಶ್ವೇತಂ=ಶ್ವೇತವರ್ಣವನುಳ್ಳದು, ಮೃತ್ಯುವಿನಾಶನಂ=ಅಪಮೃತ್ಯುಗಳ ಕೆಡಿಸುವದು,

ಶ್ಲೋಕ॥ ಡಕಾರಶ್ಚೈಕನೇತ್ರಂ ಸ್ಯಾತ್ ಪೀತಂ ಕಾಲಜಯಂ ಭವೇತ್ ।
ಢಕಾರಂ ಯಮಬೀಜಂ ಸ್ಯಾನ್ನೀಲಂ ಮೃತ್ಯುವಿನಾಶನಮ್ ॥

ಟೀಕು॥ ಡಕಾರಂ=ಡಕಾರವು, ಏಕನೇತ್ರಂಸ್ಯಾತ್=ಏಕನೇತ್ರರುದ್ರಬೀಜವಹುದು, ಪೀತಂ=ಹಳದಿ ವರ್ಣವನುಳ್ಳದು, ಕಾಲಜಯಂ ಭವೇತ್= ಕಾಲವ ಜಯಸುವದು, ಢಕಾರಂ=ಢಕಾರವು, ಯಮಬೀಜಂಸ್ಯಾತ್=ಯಮಬೀಜವಹುದು, ನೀಲಂ= ನೀಲವರ್ಣವಾಗಿಹುದು, ಮೃತ್ಯುವಿನಾಶನಂ=ಅಪಮೃತ್ಯುಗಳ ತೊಲಗಿಸುವುದು. ॥೫೭॥

ಶ್ಲೋಕ॥ ಣಕಾರಂ ನಂದಿಬೀಜಂ ಸ್ಯಾದ್ರಕ್ತಾಭಂ ಚಾರ್ಥಸಿದ್ಧಿದಮ್ ।
ತಕಾರಂ ವಾಸ್ತುದೈವತ್ಯಂ ಶ್ವೇತಂ ಸರ್ವಜಯಂ ಭವೇತ್ ॥

ಟೀಕು॥ ಣಕಾರಂ=ಣಕಾರವು, ನಂದಿಬೀಜಂಸ್ಯಾತ್=ನಂದಿಕೇಶ್ವರ ಬೀಜವಹುದು. ರಕ್ತಾಭಂ=ರಕ್ತಹೋಲುವ ವರ್ಣವಹುದು, ಅರ್ಥಸಿದ್ಧಿದಂ=ಅರ್ಥ ಸಿದ್ಧಿಯಹುದು, ತಕಾರಃ=ತಕಾರವು, ವಾಸ್ತುದೈವತ್ಯಂ=ವಾಸ್ತುವಧಿದೇವವಾಗುಳ್ಳುದು, ಶ್ವೇತಂ=ಶ್ವೇತವರ್ಣವನುಳ್ಳದು, ಸರ್ವಜಯಂ ಭವೇತ್=ಸರ್ವಜಯಪ್ರದವಹುದು.

ಶ್ಲೋಕ॥ ಥಕಾರಂ ಧರ್ಮಣೋ ಜ್ಞೇಯಂ ಕುಂದಾಭಂ ಸ್ಯಾಜ್ಜಯಪ್ರದಮ್ ।
ದುರ್ಗಾಬೀಜಂ ದಕಾರಂ ಸ್ಯಾತ್ ಶ್ಯಾಮಂ ಸರ್ವಾರ್ಥಸಿದ್ಧಿದಮ್ ॥

ಟೀಕು॥ ಥಕಾರಂ=ಥಕಾರವು, ಧರ್ಮಣೋಜ್ಞೇಯಂ=ಧರ್ಮಬೀಜ ವೆಂದಱಿಯ ಬೇಕಾದುದು, ಕುಂದಾಭಂ=ಕುಂದುಕುಸುಮದ ಕಾಂತಿಯನುಳ್ಳದು. ಜಯಪ್ರದಂ ಸ್ಯಾತ್=ಜಯವಕೊಡವುದಹುದು, ದಕಾರಂ=ದಕಾರವು, ದುರ್ಗಾಬೀಜಂಸ್ಯಾತ್= ದುರ್ಗಾಬೀಜವಹುದು, ಶ್ಯಾಮಂ=ಶ್ಯಾಮವರ್ಣವಾಗಿಹುದು, ಸರ್ವಾರ್ಥಸಿದ್ಧಿದಂ= ಸಮಸ್ತ ಸಿದ್ಧಿಪ್ರದವಹುದು. ॥೫೯॥

ಶ್ಲೋಕ॥ ಧಕಾರಂ ಧನದಂ ಪ್ರೋಕ್ತಂ ಪೀತಾಭಂ ಚಾರ್ಥಸಿದ್ಧಿದಮ್ ।
ನಕಾರಂ ಚೈವ ಸಾವಿತ್ರೀ ಸ್ಫಾಟಿಕಂ ಪಾಪನಾಶನಮ್ ॥

ಟೀಕು॥ ಧಕಾರಂ=ಧಕಾರವು, ಧನದಂ=ಕುಬೇರನಧಿದೇವತೆಯೆಂದು, ಪ್ರೋಕ್ತಂ=ಹೇಳಲು ಪಡುವದು, ಪೀತಾಭಂ=ಪೀತವರ್ಣವನುಳ್ಳದು, ಅರ್ಥಸಿದ್ಧಿದಂ=ಅರ್ಥಸಿದ್ಧಿಯ ಕೊಡುವುದು, ನಕಾರಂ ಚೈವ=ನಕಾರಾಕ್ಷರವು; ಸಾವಿತ್ರೀ=ಸಾವಿತ್ರಿಯು ಅಧಿದೈವವು; ಸ್ಫಾಟಿಕಂ=ಸ್ಫಾಟಿಕ ವರ್ಣವನುಳ್ಳದು; ಪಾಪನಾಶನಂ=ಸರ್ವಪಾಪನಾಶವಹುದು. ॥೬೦॥

ಶ್ಲೋಕ॥ ಪಕಾರಂ ಪರ್ಜಬೀಜಂ ಸ್ಯಾಚ್ಛುಕ್ಲಾಭಂ ವೃಷ್ಟಿಸಿದ್ಧಿದಮ್ ।
ಫಕಾರಂ ಪಾಶುಪತ್ಯಂ ಸ್ಯಾತ್ ಜ್ಞಾನಂ ಪಾಪನಿಕೃಂತನಮ್ ॥

ಟೀಕು॥ ಪಕಾರಂ=ಪಕಾರವಾಯಿತ್ತಾದಡೆ, ಪರ್ಜಬೀಜಂಸ್ಯಾತ್=ಪರ್ಜನ್ಯಬೀಜವಹುದು; ಶುಕ್ಲಾಭಂ=ಬಿಳಿ ಕಾಂತಿಯನುಳ್ಳದು. ವೃಷ್ಟಿಸಿದ್ಧಿದಂ=ಮಳೆಯನ್ನು ಕೊಡುವುದು, ಫಕಾರಂ=ಫಕಾರವು, ಪಾಶುಪತ್ಯಂ=ಪಶುಪತಿಯೆ ಅಧಿದೈವವಾಗಿಹುದು, ಜ್ಞಾನಂ=ಜ್ಞಾನ ಸ್ವರೂಪವಾಗಿಹುದು, ಪಾಪನಿಕೃಂತನಂ=ಪಾಪನಾಶಕವುಳ್ಳದು. ॥೬೧॥

ಶ್ಲೋಕ॥ ಬಕಾರಂ ತ್ರಿಮೂರ್ತಿಂ ವಿದ್ಯಾತ್ ಪೀತಂ ಸರ್ವಾರ್ಥಸಿದ್ಧಿದಮ್ ।

ಟೀಕು॥ ಬಕಾರಂತು=ಬಕಾರವಾಯಿತ್ತಾದಡೆ, ತ್ರಿಮೂರ್ತಿಂಸ್ಯಾತ್=ತ್ರಿಮೂರ್ತಿಗಳಹ ಬ್ರಹ್ಮವಿಷ್ಣುಮಹೇಶ್ವರರು ಅಧಿದೇವತೆಗಳಹರು, ಪೀತಂ=ಪೀತವರ್ಣವನುಳ್ಳದು ಸರ್ವಾರ್ಥ ಸಿದ್ಧಿದಂ=ಸಮಸ್ತ ಸಿದ್ಧಿಗಳಹವು.

ಶ್ಲೋಕ॥ ಭಕಾರಂ ಭಾರ್ಗವಂ ವಿದ್ಯಾತ್ ರಕ್ತಂ ಸರ್ವಾರ್ಥಸಿದ್ಧಿದಮ್ ।
ಮಕಾರಂ ಮದನಂ ವಿದ್ಯಾತ್ ಶ್ಯಾಮಂ ಸರ್ವಜಯಪ್ರದಮ್ ॥

ಯಕಾರೋ ವಾಯುದೈವತ್ಯಂ ಕೃಷ್ಣಂ ಉಚ್ಚಾಟನಂ ಭವೇತ್ ॥

ಟೀಕು॥ ಭಕಾರಂ=ಭಕಾರವು, ಭಾರ್ಗವಂ ವಿದ್ಯಾತ್=ಭೃಗು ಬೀಜವೆಂದರಿವುದು, ರಕ್ತಂ=ರಕ್ತವರ್ಣವಾಗಿಹುದು, ಸರ್ವಾರ್ಥಸಿದ್ಧಿದಂ=ಸಮಸ್ತ ಸಿದ್ಧಿಪ್ರದವಹುದು; ಮಕಾರಂ=ಮಕಾರವು, ಮದನಂ ವಿದ್ಯಾತ್=ಕಾಮಬೀಜವೆಂದರಿವುದು, ಶ್ಯಾಮಂ= ಶ್ಯಾಮವರ್ಣವಾಗಿಹುದು; ಸರ್ವಜಯಪ್ರದಂ=ಸಕಲ ಜಯಪ್ರದಾಯಕವಹುದು, ವಾಯುದೈವತ್ಯಂ=ಯಕಾರವು ವಾಯುವೆ ಅಧಿದೈವವಾಗುಳ್ಳದು ಕೃಷ್ಣಂ=ಕಪ್ಪುವರ್ಣ ವಾಗಿಹುದು, ಉಚ್ಚಾಟನಂ ಭವೇತ್=ಉಚ್ಚಾಟನ ಕರ್ಮವಹುದು.

ಶ್ಲೋಕ॥ ರಕಾರಂ ವಹ್ನಿದೈವತ್ಯಂ ರಕ್ತಾಭಂ ಸಂಹೃತಿರ್ಭವೇತ್ ।
ಲಕಾರಂ ಪೃಥಿವೀತತ್ತ್ವಂ ಪೀತಂ ಸ್ಯಾತ್ಸ್ತಂಭನಂ ಭವೇತ್ ॥

ಟೀಕು॥ ರಕಾರಂ=ರಕಾರವು, ವಹ್ನಿದೈವತ್ಯಂ=ಅಗ್ನಿಬೀಜವು, ರಕ್ತಾಭಂ=ರಕ್ತವರ್ಣ ವಾಗಿಹುದು, ಸಂಹೃತಿರ್ಭವೇತ್=ಮಾರಣಮಂತ್ರಬೀಜವಹುದು, ಲಕಾರಂ=ಲಕಾರವು, ಪೃಥಿವೀ ತತ್ತ್ವಂ=ಪೃಥಿವೀ ತತ್ತ್ವವು, ಸ್ಯಾತ್=ಅಹುದು, ಪೀತಂ=ಪೀತವರ್ಣವು, ಸ್ತಂಭನಂ ಭವೇತ್=ಸ್ತಂಭನಾರ್ಹವಾದುದು. ॥೬೫॥

ಶ್ಲೋಕ॥ ವಾರುಣಂ ಸ್ಯಾದ್ವಕಾರಂತು ಶುಕ್ಲಾಭಂ ರೋಗನಾಶನಮ್ ।
ಲಕ್ಷ್ಮೀರೂಪಂ ಶಕಾರಂ ಸ್ಯಾತ್ಹೇಮಾಭಂ ಶ್ರೀಕರಂ ಭವೇತ್ ॥

ಟೀಕು॥ ವಕಾರಂತು=ವಕಾರವಾಯಿತ್ತಾದಡೆ, ವಾರುಣಂಸ್ಯಾತ್=ವರುಣಬೀಜವಹುದು, ಶುಕ್ಲಾಭಂ=ಶುಕ್ಲವರ್ಣವು, ರೋಗನಾಶನಂ=ವ್ಯಾಧಿಗಳಕೆಡಿಸುವದು, ಶಕಾರಂ=ಶಕಾರವು, ಲಕ್ಷ್ಮೀರೂಪಂಸ್ಯಾತ್=ಲಕ್ಷ್ಮೀರೂಪವಹುದು, ಹೇಮಾಭಂ=ಸುವರ್ಣವರ್ಣವಾಗಿಹುದು, ಶ್ರೀಕರಂ ಭವೇತ್=ಸಂಪದವ ಮಾಡುವದಹುದು. ॥೬೬॥

ಶ್ಲೋಕ॥ ಷಕಾರಂ ದ್ವಾದಶಾತ್ಮಾನಂ ರಕ್ತಂ ಸರ್ವಾರ್ಥಸಿದ್ಧಿದಮ್ ।
ಸಕಾರಂ ಶಕ್ತಿರೂಪಂ ಸ್ಯಾದ್ರಕ್ತಂ ಸ್ಥಿತಿಕರಂ ಭವೇತ್ ॥

ಟೀಕು॥ ಷಕಾರಂ=ಷಕಾರವು, ದ್ವಾದಶಾತ್ಮಾನಂ=ಸೂರ್ಯಬೀಜವು, ರಕ್ತಂ=ರಕ್ತವರ್ಣವು, ಸರ್ವಾರ್ಥಸಿದ್ಧಿದಂ=ಸರ್ವಾರ್ಥಸಿದ್ಧಿಪ್ರದವು. ಸಕಾರಂ=ಸಕಾರವು, ಶಕ್ತಿರೂಪಂಸ್ಯಾತ್= ಶಕ್ತಿರೂಪವಹುದು, ರಕ್ತಂ=ರಕ್ತವರ್ಣವು, ಸ್ಥಿತಿಕರಂ ಭವೇತ್=ಸ್ಥಿತಿಕರ್ತೃವಹುದು. ॥೬೭॥

ಶ್ಲೋಕ॥ ಹಕಾರಂ ಶಿವಬೀಜಂ ಸ್ಯಾಚ್ಛುದ್ಧ ಸ್ಫಟಿಕಸನ್ನಿಭಮ್ ।
ಅಣಿಮಾದ್ಯಷ್ಟಸಿದ್ಧಿಂ ಚ ಭುಕ್ತಿಮುಕ್ತಿಪ್ರದಾಯಕಮ್ ॥

ಟೀಕು॥ ಹಕಾರಂ=ಹಕಾರವು, ಶಿವಬೀಜಂಸ್ಯಾತ್=ಸಕಲಾಗಮಂಗಳಲ್ಲಿಯೂ ನಿಖಿಲ ಬ್ರಹ್ಮವೆನಿಸಿಹ ಶಿವಾಕ್ಷರವಹುದು. ಶುದ್ಧ ಸ್ಫಟಿಕ ಸನ್ನಿಭಂ=ಆ ಶಿವ ಬೀಜವು

ನಿರ್ಮಲವಾದ ಸ್ಫಟಿಕದ ಪ್ರಭೆಯನುಳ್ಳದು, ಅಣಿಮಾದ್ಯಷ್ಟ ಸಿದ್ಧಿಂ ಚ=ಅಣಿಮಾದಿಯೆಂಬ ಸಿದ್ಧಿ ಮೊದಲಾದ ಅಷ್ಟಮಹಾ ಸಿದ್ಧಿಯನು, ಭುಕ್ತಿಮುಕ್ತಿಪ್ರದಾಯಕಂ=ಭುಕ್ತಿಮುಕ್ತಿಗಳನು ಕೊಡುವಂಥಾದು. ॥೬೮॥

ಶ್ಲೋಕ॥ ಳಕಾರಂ ಆತ್ಮತತ್ತ್ವಂ ಸ್ಯಾದ್ರಕ್ತಾಭಂ ಸರ್ವಸಿದ್ಧಿದಮ್ ।
ವಿದ್ಯಾತತ್ತ್ವಂ ಕ್ಷಕಾರಂ ಸ್ಯಾತ್ ಕ್ಷೀರಾಭಂ ಸುಖಪ್ರದಮ್ ।

ಟೀಕು॥ ಳಕಾರಂ ಚ=ಳಕಾರವು, ಆತ್ಮತತ್ತ್ವಂ ಸ್ಯಾತ್= ಆತ್ಮಬೀಜವಹುದು. ರಕ್ತಾಭಂ=ರಕ್ತವರ್ಣವನುಳ್ಳದು, ಸರ್ವಸಿದ್ಧಿದಂ=ಸಮಸ್ತ ಸಿದ್ಧಿಗಳ ಕೊಡುವದು. ಕ್ಷಕಾರಕಂ=ಕ್ಷಕಾರವು, ವಿದ್ಯಾತತ್ತ್ವಂ ಸ್ಯಾತ್=ವಿದ್ಯಾತತ್ತ್ವಬೀಜವಹುದು, ಕ್ಷೀರಾಭಂ=ಕ್ಷೀರವರ್ಣವಾಗಿಹುದು, ಸುಖಪ್ರದಂ=ಸಮಸ್ತಸುಖಂಗಳ ಕೊಡುವದು. ॥೬೯॥

ಶ್ಲೋಕ॥ ಇತ್ಯೇತೇ ಹ್ಯಧಿದೇವತ್ವ ಫಲವರ್ಣಾಃ ಕ್ರಮೇಣ ತು ।
ಅಕಾರಾದಿ ಕ್ಷಕಾರಾಂತಾಃ ಸಮಾಸಾದಿತಿ ಕೀರ್ತಿತಾಃ ॥

ಟೀಕು॥ ಇತಿ=ಈ ಪ್ರಕಾರದಿಂದ, ಅಧಿದೇವತ್ವ=ವರ್ಣಾಧಿದೇವತೆಗಳನು ಫಲ=ಫಲತತ್ತ್ವದಕ್ಷರೋದ್ಧಾರಣ ಫಲಂಗಳನೂ, ವರ್ಣಾಃ=ತತ್ತದಕ್ಷರ ವರ್ಣಗಳನು, ಅಕಾರಾದಿಕ್ಷಕಾರಾಂತಾಃ=ಅಕಾರಾದಿ ಕ್ಷಕಾರಾಂತವಾದ ಆಯಿವತ್ತೊಂದಕ್ಷರಭೇದಂಗಳೆಲ್ಲವೂ, ಸಮಾಸಾತ್=ಸಮಾಸದಿಂದ, ಪರಿಕೀರ್ತಿತಾಃ=ಹೇಳಲುಪಟ್ಟವು. ॥೭೦॥

ಶ್ಲೋಕ॥ ಕಲಾಜೀವಮಿತಿ ಖ್ಯಾತಂ ವಿಕಲಾದೇಹಮುಚ್ಯತೇ ।
ಕಲಾಶ್ಚವಿಕಲಾಶ್ಚೈವ ದೇಹೀ ದೇಹಮಿತಿಸ್ಮೃತಮ್ ॥

ಟೀಕು॥ ಕಲಾ=ಕಲಾಬೀಜವು, ಜೀವಮಿತಿ=ಜೀವಾಕ್ಷರವೆಂದು, ಖ್ಯಾತಂ=ಹೇಳಲುಪಟ್ಟುದು, ವಿಕಲಾ=ವಿಕಲಾಕ್ಷರವು, ದೇಹಮುಚ್ಯತೇ=ದೇಹವೆಂದು ನುಡಿಸಲುಪಟ್ಟುದು. ಕಲಾಶ್ಚ=ಅಕಾರಾದಿ ವಿಸರ್ಗಾಂತವಾದ ಕಲಾಕ್ಷರಂಗಳು, ವಿಕಲಾಶ್ಚ=ಕಕಾರಾದಿ ಕ್ಷಕಾರಾಂತವಾದವಿಕಲಾಕ್ಷರಂಗಳು, ದೇಹೀದೇಹಮಿತಿ ಸ್ಮೃತಂ=ಜೀವಕಾಯಸಂಬಂಧವೆಂದು ನೆನೆಯಲುಪಟ್ಟುದು. ॥೭೧॥

ಶ್ಲೋಕ॥ ದೇಹಿರೂಪಂ ದ್ವಿಧಾಪ್ರೋಕ್ತಂ ಸ್ಥೂಲಂ ಸೂಕ್ಷ್ಮಂ ತಥೈವ ಚ ।
ದೇಹಮೇಕಂ ವಿನಿರ್ದಿಷ್ಟಂ ಕೇವಲಂ ಸೂಕ್ಷ್ಮಮುಚ್ಯತೇ ॥

ಟೀಕು॥ ದೇಹಿರೂಪಂ=ಸ್ವರಾಕ್ಷರಾದಿ ಸ್ವರೂಪವು, ಸ್ಥೂಲಂ=ಸ್ಥೂಲ ರೂಪವೆಂದು, ತಥೈವಚ=ಹಾಂಗೆ, ಸೂಕ್ಷ್ಮಂ=ಸೂಕ್ಷ್ಮರೂಪವೆಂದು, ದ್ವಿಧಾಪ್ರೋಕ್ತಂ=ಎರಡು ಪ್ರಕಾರವಾಗಿ

ಹೇಳಲುಪಟ್ಟುದು. ದೇಹಂ=ವಿಕಲಾಕ್ಷರ ಸ್ವರೂಪವು, ಏಕಂ ವಿನಿರ್ದಿಷ್ಟಂ=ಒಂದೇ ಸ್ವರೂಪವೆಂದು ನಿರ್ದೇಶಿಸಲುಪಟ್ಟುದು; ಕೇವಲಂ=ಸ್ವರಾಕ್ಷರವ ಕೂಡದೆ ವ್ಯಂಜನ ಮಾತ್ರವಾದ ಬಜೆಯ ವರ್ಣಸ್ವರೂಪವು, ಸೂಕ್ಷ್ಮಮುಚ್ಯತೇ=ಸೂಕ್ಷ್ಮರೂಪವೆಂದು ನುಡಿಯಲುಪಡುತ್ತಿಹುದು. ॥೭೨॥

ಶ್ಲೋಕ॥ ಅಕಾರಾದಿ ವಿಸರ್ಗಾಂತಂ ಕೇವಲಂ ತು ಸ್ವರಾಕೃತಿಃ ।
ತತ್ಸ್ಥೂಲಮಿತಿ ವಿಜ್ಞೇಯಂ ಸೂಕ್ಷ್ಮಂ ಮಧ್ಯಸ್ಥಿತಿರ್ಭವೇತ್ ।

ಟೀಕು॥ಅಕಾರಾದಿವಿಸರ್ಗಾಂತಂ=ಅಕಾರಮೊದಲು ಅಃಕಾರವೆಕಡೆಯಾದ ಹದಿನಾಱು ವರ್ಣಂಗಳು, ಸ್ವರಾಕೃತಿಃ=ಸ್ವರಾಕೃತಿಯಾಗಿಹವು. ತತಃ=ಆ ಕೃತಿಯದೆಸೆಯಿಂದ, ಸ್ಥೂಲಮಿತಿಜ್ಞೇಯಂ=ಸ್ವರಾಕ್ಷರಂಗಳಂ ಸ್ಥೂಲವೆಂದು ಸ್ವರಾಕ್ಷರಂಗಳು ವಿಕಲಾಕ್ಷರಂಗಳೊಳಗೆ ವರ್ತಿಸುವ ನಡವಳಿಯಱಿಯುವುದು. ಸೂಕ್ಷ್ಮಂಭವೇತ್=ಸೂಕ್ಷ್ಮರೂಪವದು. ಕಕಾರಾದೀನಿವರ್ಣಾನಿ=ಕಕಾರವೆ ಮೊದಲಾದ ಮೂವತ್ತೈದು ವರ್ಣಂಗಳನು ವಿಕಲಾಶ್ಚೇತಿ=ವಿಕಲಾಕ್ಷರಗಳೆಂದು, ಕೀರ್ತಿತಂ=ಹೇಳಲ್ಪಡುವುವು. ॥೭೩॥

ಶ್ಲೋಕ॥ ಕಲಾನಾಂ ತತ್ತ್ವವರ್ಣಾನಿ ಸಂಜೀವಾರ್ಣಮಿತಿ ಸ್ಮೃತಮ್ ।

ಟೀಕು॥ ಏವಂ=ಈ ಪ್ರಕಾರವು, ಕಲಾಚ=ಕಲಾಕ್ಷರವು, ವಿಕಲಾ=ವಿಕಲಾಕ್ಷರವು, ಸ್ಥೂಲಸೂಕ್ಷ್ಮಾಕೃತಿರ್ಭವೇತ್=ಸ್ಥೂಲಸೂಕ್ಷ್ಮಾಕ್ಷರಂಗಳಹವು, ಕಲಾನಾಂ=ಕಲಾಕ್ಷಕರಂಗಳೊಳಗಣ, ತತ್ತ್ವವರ್ಣಾನಿ=ಹ್ರಸ್ವಾಕ್ಷರಂಗಳಾದವೆಂದು ಸಂಜೀವಾರ್ಣಾಮಿತಿಸ್ಮೃತಂ=ಆ ವರ್ಣಂಗಳಿಗೆ ಸಂಜೀವಾಕ್ಷರವೆಂಬ ಹೆಸರು ನೆನೆಯಲುಪಟ್ಟಿದು. ॥೭೪॥

ಶ್ಲೋಕ॥ ಕಲಾಹೀನಂ ತು ಯದ್ವರ್ಣಂ ದೇಹಂ ತಸ್ಯವಿನಿರ್ದಿಶೇತ್ ।
ದೇಹಂ ದೇಹೀಸುಸಂಯೋಜ್ಯ ಜೀವೇ ಜೀವಂ ನ ಯೋಜಯೇತ್ ।

ಟೀಕು॥ ಕಲಾಹೀನಂತು ಯದ್ವರ್ಣಂ=ಕಲೆಯೊಡನೆ ಕೂಡಿರದಂಥ ಆವುದಾನೊಂದು ಬೀಜವುಂಟು ಅದು, ತಸ್ಯ=ಆ ಜೀವಾಕ್ಷರಕ್ಕೆ, ದೇಹಂ=ಶರೀರವೆಂದು, ವಿನಿರ್ದಿಶೇತ್=ನಿರ್ದೇಶಿಸಿಹುದು. ಅದುಕಾರಣ, ದೇಹೀ=ದೇಹವೆನಿಸಿಕೊಂಬ ವಿಕಲಾಕ್ಷರದಲ್ಲಿ ದೇಹೀ ಎನಿಸಿಕೊಂಬ ಕಲಾಕ್ಷರವನು, ಸುಸಂಯೋಜ್ಯ=ಕೂಡಿದಡೆ, ಅವಿಕಲಾಂತರ ಸ್ಥಿತಿಯೆನಿಸುವ ಸೂಕ್ಷ್ಮರೂಪವು, ಆ ಕಲಾಕ್ಷರಂಗಳಿಗೆ ಘಟಿಸುವದು, ಆ ದೇಹಾಕ್ಷರದಲ್ಲಿ ದೇಹೀ ಬೀಜವ ಕೂಡುವದು. ಜೀವಾಕ್ಷರದಲ್ಲಿ, ಜೀವಂ=ಜೀವಾಕ್ಷರವನು, ನ ಯೋಜಯೇತ್=ಕೂಡಲಾಗದು.

ಶ್ಲೋಕ॥ ಸರ್ವೇಷಾಂ ದೇಹಭೇದೋಽಸ್ತಿ ಆತ್ಮಭೇದಂ ನ ವಿದ್ಯತೇ ।
ಆತ್ಮಾನಾಂ ಜೀವಮಿತ್ಯುಕ್ತಂ ಜೀವಂ ಜೀವಮಿತಿಸ್ಮೃತಮ್ ॥

ಟೀಕು॥ ಸರ್ವೇಷಾಂ=ಸಮಸ್ತದೇಹಿಗಳಿಗೆಯೂ, ದೇಹಭೇದೋಽಸ್ತಿ=ದೇಹಗಳ ಭೇದವುಂಟಾಗುತ್ತಿಹುದು, ಆತ್ಮಭೇದಂ ನ ವಿದ್ಯತೇ=ಶರೀರಾಂತಸ್ಥವಾದ ಆತ್ಮರಿಗೆ ಭೇದವುಂಟಾಗುತ್ತಿರದು. ಆತ್ಮಾನಾಂ=ಪಟಮಠಾಕಾಶಂಗಳು ಹೇಗೆ ಆಕಾಶಕ್ಕೆ ಭಿನ್ನವಾಗಿಹವು ಹಾಂಗೆ, ವಸ್ತು ಭಿನ್ನವಾಗಿ ಪ್ರತಿಭಿನ್ನ ಶರೀರಂಗಳಲ್ಲಿ ಪೃಥಗಾತ್ಮರುಗಳಿಗೆ, ಜೀವಮಿತ್ಯುಕ್ತಂ=ಕಾಮಾದಿದೋಷಂಗಳಿಂದ, ಹುಡುಗಲುಪಟ್ಟ ಜೀವ ಭಾವವೊಂದಾದ ಕಾರಣ ಜೀವ ಭೇದವುಂಟೆಂದು ನುಡಿಯಲುಪಟ್ಟುದು. ಜೀವಂ=ಜೀವತತ್ತ್ವವಾದ ಆತ್ಮನು, ಜೀವಮಿತಿ ಸ್ಮೃತಂ=ಜೀವ ಸ್ವರೂಪವೆಂದು ನೆನೆಯಲುಪಟ್ಟುದು. ॥೭೬॥

ಶ್ಲೋಕ॥ ತಸ್ಮಾಜ್ಜೀವಾತ್ಪರಂ ನಾಸ್ತಿ ಪಶ್ಚಾನ್ನ ಚ ವಿನಿರ್ದಿಶೇತ್ ।

ಟೀಕು॥ ತಸ್ಮಾತ್=ಅದುಕಾರಣ, ಜೀವಾತ್=ಶರೀರಜೇಷ್ಠತನವು ಜೀವನಿಂದವೂ, ಪರಂನಾಸ್ತಿ=ಬೇಱೊಂದು ವ್ಯಾಪಕವಸ್ತುವುಂಟಾಗುತ್ತಿರದು. ಪಶ್ಚಾತ್=ಮರಳಿ, ನ ಚ ವಿನಿರ್ದಿಶೇತ್=ಉಂಟೆಂದು ನಿರ್ದೇಶಿಸಲಾಗದು. ॥೭೭॥

ಶ್ಲೋಕ॥ ತಸ್ಮಾದ್ವೈ ಜೀವದೇಹೇಷು ಕಲಾಬೀಜಂ ಸುಯೋಜಯೇತ್ ।
ಪ್ರತ್ಯೇಕಂ ವರ್ಣರೂಪಂ ಚ ದೇವತಾತ್ಮಕಮುಚ್ಯತೇ ॥

ಟೀಕು॥ ತಸ್ಮಾದ್ವೈ=ಅದು ಕಾರಣದಿಂದವೆ, ಜೀವದೇಹೇಷು=ಜೀವಾಭಿಧಾನವನುಳ್ಳ ಸ್ವರಾಕ್ಷರಂಗಳ ವ್ಯಾಪಾರಸ್ಥಾನವಾಗಿ ದೇಹವೆನಿಸುವ ವಿಕಲಾಕ್ಷರಂಗಳಲ್ಲಿ, ಕಲಾಬೀಜಂ= ಸರ್ವಮಂತ್ರಸ್ವರೂಪಂಗಳು ವರ್ತಿಸುವ ಕಲಾಕ್ಷರಂಗಳನೂ, ಸುಯೋಜಯೇತ್=ಲೇಸಾಗಿ ಕೂಡುವದು, ಆ ಪ್ರಾಣಾಕ್ಷರಂಗಳ ಕೂಡಲೊಡನೆ, ಪ್ರತ್ಯೇಕಂ ವರ್ಣರೂಪಂ ಚ=ಬೇಱೆ ಬೇಱೆಯಹಂಥಾ ಅಕ್ಷರ ಸ್ವರೂಪವು, ದೇವತಾತ್ಮಕಮುಚ್ಯತೇ= ಬೇಱೆ ಬೇಱೆ ದೇವತಾ ಸ್ವರೂಪವೆಂದು ನುಡಿಯಲುಪಡುತ್ತಿಹುದು. ॥೭೮॥

ಶ್ಲೋಕ॥ ದೇವಾನಾಂ ಬೀಜನಾಮಾನಿ ವರ್ಣಾಸ್ತತ್ರಪ್ರಕಲ್ಪಿತಾಃ ।
ತಸ್ಮಾದ್ವರ್ಣಾನಿ ಚೋಕ್ತಾನಿ ಜ್ಞಾತ್ವಾ ಮಂತ್ರಾನ್ ಸಮುದ್ಧರೇತ್ ॥

ಟೀಕು॥ ತತ್ರ=ಆ ಈ ವರ್ಣಭೇದ ಪಟಲದಲ್ಲಿ, ದೇವತಾನಾಂ=ದೇವತೆಗಳ, ಬೀಜ ನಾಮಾನಿ=ಬೀಜಾಕ್ಷರನಾಮಂಗಳ, ವರ್ಣಾಃ=ದೇವತಾರೂಪವರ್ಣಂಗಳು, ಪ್ರಕಲ್ಪಿತಾಃ=ಲೇಸಾಗಿ ಕಲ್ಪಿಸಲುಪಟ್ಟವು, ತಸ್ಮಾತ್=ಆ ಶಾಸ್ತ್ರ ಕಲ್ಪನದದೆಸೆಯಿಂದ, ಉಕ್ತಾನಿವರ್ಣಾನಿ ಚ=ದೇವ ವರ್ಣಫಲಂಗಳನುಳ್ಳವೆಂದು ನುಡಿಯಲುಪಟ್ಟ ಅಕ್ಷರಂಗಳನೂ, ಜ್ಞಾತ್ವಾ=ಅಱಿದು, ಮಂತ್ರಾನ್=ಮಂತ್ರಗಳನು, ಸಮುದ್ಧರೇತ್=ಉದ್ಧರಿಸುವದು. ॥೭೯॥

ಶ್ಲೋಕ॥ **ದೇವತಾಸ್ಥಾಪನಾಕಾಲೇ ಲಿಂಗೇ ವಾ ಕೌತುಕೇಽಪಿ ವಾ ।**
ದೀಕ್ಷಾಯಾಂ ಪ್ರೋಕ್ಷಣೇ ಕಾಲೇ ಸಕಲೀಕರಣೇ ತಥಾ ।
ವರ್ಣಾನಿ ವಿನ್ಯಸೇದ್ಧೀಮಾನ್ ಮೂರ್ಧಾದಿಕ್ರಮಶಸ್ತಥಾ ॥

ಟೀಕು॥ ದೇವತಾಸ್ಥಾಪನಾ ಕಾಲೇ=ದೇವತೆಗಳ ಸ್ಥಾಪನವ ಮಾಡುವ ಕಾಲದಲ್ಲಿಯೂ ಲಿಂಗೇವಾ=ಲಿಂಗೋದ್ಧರಣಾಂಗದಲ್ಲಿಯಾದಡೆಯೂ, ಕೌತುಕೇಽಪಿವಾ=ಕೌತುಕದಲ್ಲಿ ಯಾದಡೆಯೂ, ದೀಕ್ಷಾಯಾಂ=ದೀಕ್ಷಾ ಕ್ರಿಯೆಯಲ್ಲಿಯಾದಡೆಯೂ, ಪ್ರೋಕ್ಷಣೇ ಕಾಲೇ=ಪ್ರೋಕ್ಷಣೆ ವೇಳೆಯಲ್ಲಿಯಾದಡೆಯೂ, ತಥಾ=ಹಾಂಗೆ, ಸಕಲೀಕರಣೇ= ಸಕಲೀಕರಣದಲ್ಲಿಯೂ, ಧೀಮಾನ್=ಆಗಮಜ್ಞನಾದ ಪುರುಷನು, ತಥಾ=ಹ್ಯಾಂಗೆ ದೇವತಾಸ್ಥಾನಂಗಳು ಹೇಳಿಹವು. ಹಾಂಗೆ, ಮೂರ್ಧಾದಿ=ಶಿರಸ್ಸು ಮೊದಲಾದ ಸ್ಥಾನಂ ಗಳಲ್ಲಿ, ಕ್ರಮಶಃ=ತಱುವಾಯದಿಂದ, ವರ್ಣಾನಿ=ಅಕ್ಷರಂಗಳನೂ, ವಿನ್ಯಸೇತ್=ಲೇಸಾಗಿ ನ್ಯಾಸವಮಾಡುವದು. ॥೮೦॥

ಶ್ಲೋಕ॥ **ಏವಮೇವ ಕ್ರಮೇಣೈವ ಜ್ಞಾತ್ವಾವರ್ಣಾಃ ವಿಶೇಷತಃ ।**
ತತ್ತದ್ವರ್ಣಾಕೃತಿಂ ಧ್ಯಾತ್ವಾ ಜಪೇತ್ಸರ್ವಾರ್ಥಸಿದ್ಧಿದಮ್ ।

ಟೀಕು॥ ಏವಮೇವ=ಈ ಪ್ರಕಾರದಿಂದವೆ, ಕ್ರಮೇಣೈವ=ಕ್ರಮದಿಂದವೆ, ಜ್ಞಾತ್ವಾ=ಅಱಿದು, ವರ್ಣವಿಶೇಷತಃ=ವರ್ಣಂಗಳ ವಿಶೇಷದದೆಸೆಯಿಂದ, ತತ್ತದ್ವರ್ಣಾಕೃತಿಂ=ಆಯಾ ಅಕ್ಷರಂಗಳ ಆಕಾರವನು, ಧ್ಯಾತ್ವಾ=ಧ್ಯಾನಿಸಿ, ಜಪೇತ್=ಜಪಿಸುವದು, ಜಪಿಸಿದರೆ ಆಯಾ ದೇವತಾಜ್ಞಾಪರುಗಳಿಗೆ ಆವರ್ಣಸಮೂಹವು, ಸರ್ವಾರ್ಥಸಿದ್ಧಿದಂ=ಸಮಸ್ತ ಪ್ರಯೋಜನಸಿದ್ಧಿಗಳನು ಕೊಡುವುದು. ॥೮೧॥

ಶ್ಲೋಕ॥ **ವರ್ಣಭೇದಮಿದಂ ಪ್ರೋಕ್ತಂ ಚಕ್ರಭೇದಮಥಶ್ರುಣು ।**

ಟೀಕು॥ ಎಲೆ ಷಣ್ಮುಖನೆ! ಈ ವರ್ಣಭೇದವು ಹೇಳಲ್ಪಟ್ಟುದು, ಚಕ್ರಭೇದವನು ಅನಂತರವು ಮುಂದಣ ಪಟಲದಲ್ಲಿ ಕೇಳು. ॥೮೨॥

ಇತಿ ಶ್ರೀ ವಾತುಲತಂತ್ರೇ ಶುದ್ಧಾಖ್ಯೇ ಸಹಸ್ರಗ್ರಂಥಸಂಹಿತಾಯಾಂ
ಮಲ್ಲಿಕಾರ್ಜುನೇನ ಕರ್ಣಾಟಭಾಷಾ ವಿವೃತೋ
ವರ್ಣಭೇದೋ ನಾಮ ದ್ವಿತೀಯಪಟಲಃ

❖ ❖ ❖

ತೃತೀಯಃ ಚಕ್ರಭೇದಪಟಲಃ

ಶಾ॥ವಿ॥ವೃ॥ ಶ್ರೀ ಶಾಜಾಖಿಲದೇವತಾಪ್ರತಿಲಸದ್ಧೃಗ್ಭಿರ್ಜಗತ್ಕಾಶಯತ್
ಸಾಂನಿಧ್ಯಾತ್ಸಕಲಸ್ಯ ಜನ್ಮವಿಲಯಸ್ಥೈರ್ಯಂ ಸದಾ ಕಾರಯೇತ್ ।
ಸಾಕ್ಷಿತ್ವೇನ ಹೃದಂಬುಜೇ ಚ ವಿದುಷಾಂ ಚಕ್ರಸ್ಯ ಮಧ್ಯೇ ಸ್ಥಿತಂ
ಪ್ರಾಸಾದಂ ಪರಮಂ ಪರಾತ್ಪರತರಂ ಲಿಂಗಂ ಬಭೌ ಹಂಸವತ್ ॥ ॥೧॥

ಶ್ಲೋಕ॥ ಅಥಾತ ಸ್ಸಂಪ್ರವಕ್ಷ್ಯಾಮಿ ಚಕ್ರಭೇದವಿಧಿಂ ಪರಮ್ ।

ಟೀಕು॥ ಅಥ=ಅನಂತರದಲ್ಲಿ, ಅತಃ=ಈ ವರ್ಣಭೇದ ನಿರೂಪಣದಿಂದಂ ಮೇಲೆ, ಪರಂ=ಉತ್ಕೃಷ್ಟವಾದ, ಚಕ್ರಭೇದ ವಿಧಿಂ=ಚಕ್ರಭೇದ ವಿಧಾನವನು, ಸಂಪ್ರವಕ್ಷ್ಯಾಮಿ=ಲೇಸಾಗಿ ಹೇಳಿಹೆನು. ॥೨॥

ಶ್ಲೋಕ॥ ಸರ್ವದೇವಹಿತಾರ್ಥಾಯ ಸರ್ವಲೋಕಹಿತಾಯ ಚ ।
ಮಂತ್ರಾಣಾಂ ಬೋಧನಾರ್ಥಾಯ ಚಕ್ರರೂಪಂ ಪ್ರಕೀರ್ತಿಕಮ್ ॥

ಟೀಕು॥ ಸರ್ವದೇವಹಿತಾರ್ಥಾಯ=ಸಮಸ್ತಜನಂಗಳಿಗೆ ಹಿತವ ಮಾಡುವದ ಕ್ಕೋಸುಗರಂ, ಮಂತ್ರಾಣಾಂ ಬೋಧನಾರ್ಥಾಯ=ಸಮಸ್ತ ಮಂತ್ರಗಳ ಜನರುಗಳಿಗೆ ತಿಳಿಹುವ ಒಡಂಬಡಿಕೆಗೋಸುಗರಂ, ಚಕ್ರರೂಪಂ=ಸರ್ವಮಂತ್ರ ದೇವತಾಮಯವಹ ಚಕ್ರರೂಪವು, ಪ್ರಕೀರ್ತಿತಂ= ಶಿವನಿಂದ ನಿರೂಪಿಸಲುಪಟ್ಟುದು.

ಶ್ಲೋಕ॥ ಸರ್ವದೇವಮಯಂ ಚಕ್ರಂ ಸರ್ವವರ್ಣಾತ್ಮಕಂ ವಿದುಃ ।
ಚಕ್ರರೂಪಂ ತು ತತ್ಸಾಕ್ಷಾತ್‌ಶಿವಜ್ಞಾನಸ್ವರೂಪಕಮ್ ।

ಟೀಕು॥ ಚಕ್ರಂ=ಈ ಶಿವ ಚಕ್ರವನು, ಸರ್ವದೇವಮಯಂ=ಸಮಸ್ತ ದೇವತೆಗಳ ಸ್ವರೂಪವುಳ್ಳದಾಗಿಯೂ, ಸರ್ವವರ್ಣಾತ್ಮಕಂ=ಎಲ್ಲಾ ಅಕ್ಷರಂಗಳರೂಪವನುಳ್ಳ ದಾಗಿಯೂ, ವಿದುಃ=ಅಜೆವುದು, ಚಕ್ರರೂಪಂ ತು=ಈ ಚಕ್ರ ಸ್ವರೂಪವಾಯಿತ್ತಾದಡೆ, ಸಾಕ್ಷಾತ್=ಪ್ರತ್ಯಕ್ಷವಾಗಿ, ಶಿವಜ್ಞಾನ ಸ್ವರೂಪಕಂ=ಶಿವಜ್ಞಾನ ಸ್ವರೂಪವು. ॥೪॥

ಶ್ಲೋಕ॥ ತಸ್ಮಾತ್ತಸ್ಯ ಸ್ವರೂಪಂ ತು ಲಕ್ಷಣಂ ಚಾಧಿದೈವತಮ್ ।
ವರ್ಣನ್ಯಾಸಕ್ರಮಂ ಚೈವ ಸಂಕ್ಷೇಪಾತ್ ಶೃಣು ಷಣ್ಮುಖ ।

ಟೀಕು॥ ಭೋ ಷಣ್ಮುಖ!=ಎಲೆ ಷಡಾನನೆ! ತಸ್ಮಾತ್=ಅದು ಕಾರಣದಿಂದ, ತಸ್ಯ=ಆ ಚಕ್ರದ; ಸ್ವರೂಪಂ ತು=ಸ್ವರೂಪವನು, ಲಕ್ಷಣಂ ಚ=ಉದ್ಧರಿಸುವ ಲಕ್ಷಣವನು,

ಅಧಿದೈವತಂ=ಅಧಿದೈವಂಗಳನು, ವರ್ಣನ್ಯಾಸಕ್ರಮಂ=ಅಕ್ಷರಂಗಳ ಬರೆವ ಕ್ರಮವನೂ, ಸಂಕ್ಷೇಪಾತ್=ಸಂಕ್ಷೇಪ ಮಾತ್ರದಿಂದ, ಶೃಣು=ನಿರೂಪಿಸಿಹೆನು ಕೇಳು. ॥೫॥

ಶ್ಲೋಕ॥ **ಮಹೇಂದ್ರೇ ಮಲಯೇ ಸಹ್ಯೇ ಕೇದಾರೇ ಮಂದರಾಚಲೇ ।**
ಗಂಗಾತೀರೇ ತಥಾ ವಿಂಧ್ಯೇ ಗಹ್ವರೇ ವಾರ್ಧಿತೀರಕೇ ।

ಟೀಕು॥ ಮಹೇಂದ್ರೇ=ಮಹೇಂದ್ರ ಪರ್ವತದಲ್ಲಿಯೂ, ಮಲಯೇ=ಮಲಯ ಪರ್ವತದಲ್ಲಿಯೂ, ಸಹ್ಯೇ=ಸಿಹ್ಯವೆಂಬ ಸ್ಥಾನದಲ್ಲಿಯೂ, ಕೇದಾರೇ=ಕೇದಾರ ಪರ್ವತ ದಲ್ಲಿಯೂ, ಮಂದರಾಚಲೇ=ಮಂದರಪರ್ವತದಲ್ಲಿಯೂ, ಗಂಗಾತೀರೇ=ಗಂಗಾ ತೀರದಲ್ಲಿಯೂ, ತಥಾ=ಹಾಂಗೆ, ವಿಂಧ್ಯೇ=ವಿಂಧ್ಯಪರ್ವತದಲ್ಲಿಯೂ, ಗಹ್ವರೇ=ಗಹ್ವರ ದಲ್ಲಿಯೂ, ವಾರ್ಧಿತೀರೇ=ಸಮುದ್ರತೀರದಲ್ಲಿಯೂ, ॥೬॥

ಶ್ಲೋಕ॥ **ಶಿವಾಲಯೇ ಗವಾಂ ಗೋಷ್ಠೇ ನದೀತೀರೇ ತಟಾಕಿಕೇ ।**
ಅನ್ಯೇಷು ಶುದ್ಧದೇಶೇಷು ದೇಶಿಕಸ್ಯ ಗೃಹೇಽಪಿ ವಾ ॥
ಇತ್ಯೇತೈರ್ಯುಕ್ತದೇಶೇಷು ಚಕ್ರಮುದ್ಧಾರಯೇತ್ಕ್ರಮಾತ್ ।

ಟೀಕು॥ ಶಿವಾಲಯೇ=ಶಿವಾಲಯದಲ್ಲಿಯೂ, ಗವಾಂಗೋಷ್ಠೇ=ಗೋವುಗಳಿದ್ದ ಸ್ಥಾನದಲ್ಲಿಯೂ, ನದೀ ತೀರೇ=ನದಿಗಳ ತಡಿಯಲ್ಲಾದಡೆಯೂ, ತಟಾಕಿಕೇ=ಕೆಱೆಯ ತಡಿಯಲ್ಲಾದಡೆಯೂ, ಅನ್ಯೇಷು ಶುದ್ಧ ದೇಶೇಷು=ಮತ್ತೆ ಕೆಲವು ಶುದ್ಧ ಪ್ರದೇಶಂಗಳಲ್ಲಿ ಯಾದಡೆಯೂ, ದೇಶಿಕಸ್ಯಗೃಹೇಽಪಿ ವಾ=ಆಚಾರ್ಯನ ಗೃಹದಲ್ಲಿಯಾದಡೆಯೂ, ಇತಿ=ಪವಿತ್ರಕಾರಣವಾದ, ಏತೈಃ=ಮಹೇಂದ್ರ ಪರ್ವತವೇ ಮೊದಲಾದ ಈ ಸುಕ್ಷೇತ್ರಂ ಗಳೊಡನೆ, ಯುಕ್ತದೇಶೇಷು=ಕತಡಲ್ಪಟ್ಟ ಸ್ಥಾನಂಗಳಲ್ಲಿ ಆವಸ್ಥಾನಂಗಳಲ್ಲಿಯಾದೊಡೆಯು, ಕ್ರಮಾತ್=ತಂತ್ರವಿಧಾನ ಕ್ರಮದಿಂದ ಚಕ್ರಂ=ಚಕ್ರವನು, ಉದ್ಧಾರಯೇತ್=ಉದ್ಧರಿಸುವದು. ಸ್ಥಲಶುದ್ಧಿಯ ನಿರೂಪಿಸಿಹನು: ॥೭॥

ಶ್ಲೋಕ॥ **ಭೂಪ್ರದೇಶೇ ಶುಭೇ ರಮ್ಯೇ ನಿಮ್ನೋನ್ನತವಿವರ್ಜಿತೇ ।**
ನಾಭಿಮಾತ್ರಂ ಖನಿತ್ವಾ ತು ಪಾಂಸುನಾ ಪೂರಯೇತ್ತತಃ ॥

ಟೀಕು॥ ಶುಭೇ=ಒಳ್ಳಿತ್ತಹಂಥಾ, ರಮ್ಯೇ=ಒಪ್ಪಿಕೆಯುಳ್ಳಂಥಾ, ನಿಮ್ನೋನ್ನತ ವಿವರ್ಜಿತೇ= ಸಮಾನವಾದ, ಭೂಪ್ರದೇಶೇ=ಭೂಮಿಯ ಸ್ಥಾನದಲ್ಲಿ, ನಾಭಿಮಾತ್ರಾಂ=ನಾಭಿಪ್ರಮಾಣ ದಷ್ಟನೂ, ಖನಿತ್ವಾ ತು=ಅಗೆದು, ಪಾಂಸುನಾ=ಲೇಸ ಹಮಳಲಿನಿಂದ, ತತಃ=ತಱು ವಾಯವು, ಪೂರಯೇತ್=ಅಗೆದಷ್ಟನ್ನು ತುಂಬುವದು, ॥೮॥

ಶ್ಲೋಕ॥ **ತಸ್ಯೋರ್ಧ್ವೇ ಮಂಟಪಂ ಕುರ್ಯಾತ್ ದ್ವಾದಶಸ್ತಂಭಸಂಯುತಮ್ ।**
ಚತುರ್ದ್ವಾರ ಸಮಾಯುಕ್ತಂ ರಂಧ್ರಾಷ್ಟಭಿರಲಂಕೃತಮ್ ।

ಟೀಕು॥ ತಸ್ಯೋರ್ಧ್ವೇ=ಆ ಸ್ಥಂಡಿಲ ಭೂಮಿಯ ಮೇಲೆ, ದ್ವಾದಶ ಸ್ತಂಭಸಂಯುತಂ= ಪುರುಷಪ್ರಮಾಣನುಳ್ಳ ಹನ್ನೆರಡು ಕಂಭಗಳೊಡನೆ ಕೂಡಿದಂಥಾ, ಚತುರ್ದ್ವಾರ ಸಮಾಯುಕ್ತಂ=ನಾಲ್ಕು ಬಾಗಿಲುಗಳಿಂದದನೆ ಕೂಡಲುಪಟ್ಟಂಥಾ, ರಂಧ್ರಾಷ್ಟಭಿರ ಲಂಕೃತಂ=ಎಂಟು ಗವಾಕ್ಷಂಗಳಿಂದ ಶೃಂಗರಿಸಲುಪಟ್ಟಹಂಥಾ, ಮಂಟಪಂ= ಮಂಟಪವನು, ಕುರ್ಯಾತ್=ಮಾಡುವದು. ॥೯॥

ಶ್ಲೋಕ॥ ವಿತಾನಧ್ವಜಸಂಯುಕ್ತಂ ದರ್ಭಮಾಲಾಸಮಾಯುತಮ್ ।
ಸರ್ವಾಲಂಕಾರ ಸಂಯುಕ್ತಂ ತರಂಗೇಣೈವ ವೇಷ್ಟಿತಮ್ ।
ದರ್ಪಣೋದರ ಸಂಕಾಶಂ ಗೋಮಯೇನೋಪಲೇಪಯೇತ್ ॥

ಟೀಕು॥ ಆ ಸತ್ಕೃತವಾದ ಮಂಟಪವನು, ವಿತಾನಧ್ವಜ ಸಂಯುಕ್ತಂ=ಮೇಲುಕಟ್ಟು ಧ್ವಜಂಗಳೊಡನೆ ಕೂಡಿದ್ದುದಾಗಿಯೂ, ದರ್ಭಮಾಲಾ ಸಮಾಯುತಂ=ದರ್ಭಂಗಳ ಮಾಲೆಯೊಡನೆ ಕೂಡಿದ್ದುದಾಗಿಯೂ, ಸರ್ವಾಲಂಕಾರಸಂಯುಕ್ತಂ=ಸಕಲ ದರ್ಪಣ ಚಾಮರ ಛತ್ರ್ಯಾದ್ಯಲಂಕಾರಗಳೊಡನೆ ಕೂಡಿದ್ದುದನಾಗಿಯೂ, ತರಂಗೇಣೈವ ವೇಷ್ಟಿತಂ=ತೆರೆಯಿಂದ ಸುತ್ತಲುಪಟ್ಟಿದ್ದುದನಾಗಿಯೂ ಮಾಡುವದು; ಗೋಮಯೇ= ಶುದ್ಧಗೋಮಯದಿಂದವೂ, ದರ್ಪಣೋದರ ಸಂಕಾಶಂ=ಕನ್ನಡಿಯೊಳಗೆ ಹೋಲುವ ಹಾಂಗೆ, ಲೇಪಯೇತ್=ಲೇಪಿಸುವದು. ॥೧೦॥

ಚಕ್ರೋದ್ಧರಣ ಮಾಡುವಹಾಂಗೆ ಶುಚಿತ್ವವ ನಿರೂಪಿಸಿದನು:

ಶ್ಲೋಕ॥ ದೇಶಿಕಸ್ತು ಶುಚಿರ್ಭೂತ್ವಾ ಕ್ಷೀರಭುಗ್ವಿಜಿತೇಂದ್ರಿಯಃ ।
ಪೂರ್ವರಾತ್ರಾಧಿವಾಸಶ್ಚ ಪ್ರಭಾತೇ ಯಂತ್ರಮುದ್ಧರೇತ್ ॥

ಟೀಕು॥ ದೇಶಿಕಸ್ತು=ಯಂತ್ರವನುದ್ಧರಿಸುವಾಚಾರ್ಯನು, ಶುಚಿರ್ಭೂತ್ವಾ=ಶುದ್ಧಾತ್ಮನೂ ಆಗಿ, ಕ್ಷೀರಭುಕ್=ಕ್ಷೀರಾಹಾರವ ಕೊಂಡವನಾಗಿ, ವಿಜಿತೇಂದ್ರಿಯಃ=ಜಿತೇಂದ್ರಿಯನು ಆಗಿ, ಪೂರ್ವರಾತ್ರಾಧಿವಾಸಶ್ಚ=ಮೊದಲು ರಾತ್ರಿಯಲ್ಲಿ ಸ್ಥಂಡಿಲಶಾಯಿಯಾಗಿ, ಪ್ರಭಾತೇ=ಪ್ರಭಾತ ಕಾಲದಲ್ಲಿ, ಯಂತ್ರಮುದ್ಧರೇತ್=ಚಕ್ರವನುದ್ಧರಿಸುವದು. ॥೧೧॥

ಶ್ಲೋಕ॥ ಸುಸ್ನಾಯಾಚಮ್ಯ ವಿಧಿವತ್ಸಕಲೀಕೃತವಿಗ್ರಹಃ ।
ಪುಣ್ಯಾಹಂ ವಾಚಯಿತ್ವಾ ತು ಪ್ರೋಕ್ಷಯೇತ್ ರುದ್ರಿಯೇಣ ತು ॥

ಟೀಕು॥ ಸುಸ್ನಾಯ=ಲೇಸಾಗಿ ಸ್ನಾನವ ಮಾಡಿ, ಆಚಮ್ಯ=ಆಚಮ್ನನವ ಮಾಡಿ, ವಿಧಿವತ್ಸಕಲೀಕೃತವಿಗ್ರಹಃ=ವಿಧಿವತ್ತಾಗಿ ಸಕಲ ಬ್ರಹ್ಮಮಂತ್ರಗಳಿಂದನ್ಯಾಸೀಕರಿಸಲುಪಟ್ಟ ಶರೀರವನುಳ್ಳಾತನಾಗಿ, ಪುಣ್ಯಾಹಂ ವಾಚಯಿತ್ವಾ=ಪುಣ್ಯಾಹವನು ಆಚರಿಸಿ, ರುದ್ರಿಯೇಣ ತು=ಶ್ರೀ ರುದ್ರಮಂತ್ರದಿಂದ ಪ್ರೋಕ್ಷಯೇತ್=ಜಲಪ್ರೋಕ್ಷಣವಮಾಡುವದು. ॥೧೨॥

ಶ್ಲೋಕ॥ **ರಂಗೇಣ ಧಾತುನಾ ಚೈವ ತನ್ಮಧ್ಯೇ ಚಕ್ರಮಾಲಿಖೇತ್ ।**

ಟೀಕು॥ ತನ್ಮಧ್ಯೇ=ಆ ಸ್ಥಂಡಿಲಸ್ಥಾನ ಮಧ್ಯದಲ್ಲಿ, ರಂಗೇಣಧಾತುನಾ ಚೈವ=ರಂಗಮಳ ಧಾತುವಿನಿಂದಲೂ, ಚಕ್ರಮಾಲಿಖೇತ್=ಚಕ್ರವ ಬರೆಯಬೇಕಾದುದು.

ಶ್ಲೋಕ॥ **ಪೂರ್ವಾಪರಗತಂ ತತ್ರ ಯುಗ್ಮಸೂತ್ರಂ ತು ಕಾರಯೇತ್ ।**
ವಿಸ್ತಾರಂ ದ್ವಾದಶಾಂಗುಲ್ಯಂ ತಥಾ ವೈ ದಕ್ಷಿಣೋತ್ತರಮ್ ॥

ಟೀಕು॥ ತತ್ರ=ಆ ಗೋಮಯ ಲೇಪಿತವಾದ ಶುದ್ಧಸ್ಥಾನ ಮಧ್ಯದಲ್ಲಿ, ದ್ವಾದಶಾಂಗುಲ್ಯಂ ವಿಸ್ತಾರಂ=ಹನ್ನೆರಡಂಗುಲ ಪ್ರಮಾಣಿನ ವಿಸ್ತರಂಕೊಂಡು, ಪೂರ್ವಾಪರಗತಂ=ಮೂಡಣ ದಿಕ್ಕಿನಿಂದ ಪಡುವಣ ದಿಕ್ಕಿನ್ನೈದುವ ಹಾಂಗೆ, ಯುಗ್ಮಸೂತ್ರಂ=ಎರಡು ಸೂತ್ರವನು ಮಿಡಿವದು, ತಥಾ ವೈ=ಪೂರ್ವಾಪರಂಗಳಾಗಿ ಸೂತ್ರಂಗಳಂ ಮಿಡಿದ ಹಾಂಗೆ, ದಕ್ಷಿಣೋತ್ತರಂ=ತೆಂಕಣ ಬಡಗಣ ದಿಕ್ಕಿನ್ನೈದುವಹಾಂಗೆ ಎರಡು ಸೂತ್ರಂಗಳಂ ಮಿಡಿವುದು. ಹೀಂಗೆ ನಾಲ್ಕು ಸೂತ್ರಪಾತನವಾದಡೆ ಚತುರಸ್ರಹುಟ್ಟುವುದು. ಈ ಚಕ್ರಕ್ಷೇತ್ರವು ಗುಣಿತಪ್ರಮಾಣಕ್ಕೆ ನೂಱನಾಲ್ವತ್ತು ನಾಲ್ಕಂಗುಲವಹುದು. ॥೧೪॥

ಶ್ಲೋಕ॥ **ಮಧ್ಯಮೇ ಚತುರಸ್ರಂ ತು ವೃತ್ತಂ ತತ್ಕರ್ಣಿಕಾಭವೇತ್ ।**
ಯುಗ್ಮಾಂಗುಲೇನ ತದ್ಬಾಹ್ಯೇ ತ್ರಿವೃತ್ತಂ ಭ್ರಾಮಯೇದ್ಬುಧಃ ।
ಏಕಾಂಗುಲೇನ ತದ್ಬಾಹ್ಯೇ ತ್ರೀಣಿ ವೃತ್ತಾನಿ ಕಾರಯೇತ್ ।

ಟೀಕು॥ ಚತುರಸ್ರಂ ತು ಮಧ್ಯಮೇ=ನಾಲ್ಕು ದಿಕ್ಕಿನಲ್ಲಿಯೂ ದ್ವಾದಶಾದ್ವಾದಶಾಂಗುಲವಾದ ಚತುರಸ್ರದಮಧ್ಯದಲ್ಲಿ ಮೂಡಪಡುವಂ ತೆಂಕಬಡಗವಾಱಾಱಂಗುಲವಹ ಹಾಂಗೆ ಮಧ್ಯಸ್ಥಾನದಲ್ಲಿಯೂ, ಯುಗ್ಮಾಂಗುಲೇನ=ಕವೆಯಾರಮಂ ಎರಡಂಗುಲ ಪ್ರಮಾಣವಹ ಹಾಂಗೆ ಮಾಡಿ, ಆ ಕವೆಯಾರದಿಂದ, ವೃತ್ತಂ=ಮಧ್ಯಸ್ಥಾನದಲ್ಲಿ ಮೊನೆಯನೂಱು ತಿರಿಹಿದಡೆ ಬದ್ಧತ್ವವಹುದು, ತತ್=ಆ ವೃತ್ತವೂ, ಕರ್ಣಿಕಾ ಭವೇತ್=ಕರ್ಣಿಕೆಯೆನಿಸಿ ಕೊಂಬ ವೃತ್ತವಹುದು. ತತ್=ಆ ಕರ್ಣಿಕಾ ವೃತ್ತದ, ಬಾಹ್ಯೇ=ಬಹಿಃಪ್ರದೇಶದಲ್ಲಿ, ಬುಧಃ=ಚಕ್ರೋದ್ಧರನಾದಾಚರ್ಯನು, ಏಕಾಂಗುಲೇನ=ಕವೆಯಾರವನೂ ಮೂಱಂಗುಲ ಪ್ರಮಾಣವಹ ಹಾಂಗೆ, ಹೆಚ್ಚಿಸಿಕೊಂಡು ಮತ್ತೊಂದು ವೃತ್ತ ನಾಲ್ಕಂಗುಲ ಪ್ರಮಾಣವಹ ಹಾಂಗೆ ಹೆಚ್ಚಿಸಿಕೊಂಡು, ಮತ್ತೊಂದು ವೃತ್ತ ಐದಂಗುಲಪ್ರಮಾಣವಹ ಹಾಂಗೆ ಹೆಚ್ಚಿಸಿಕೊಂಡು ಹೀಂಗೆವೊಂದನೊಂದು ಬಳಸಿಕೊಂಡಹಾಂಗೆ, ತ್ರಿವೃತ್ತಂ=ಮೂಱು ವೃತ್ತವನು, ಭ್ರಾಮಯೇತ್=ತಿರುಹುವದು. ತದ್ಭಾಹ್ಯೇ ತ್ರೀಣಿ ವೃತ್ತಾನಿ ಕಾರಯೇತ್= ಹೀಂಗೆ ಕರ್ಣಿಕಾ ವೃತ್ತದ ಹೊಱಗೆ ಅಂಗುಲಂಗುಲ ಪ್ರಮಾಣ ಹೆಚ್ಚಿಸಿ ಮೂಱು ವೃತ್ತಂಗಳ ಮಾಡುವದು.

ಶ್ಲೋಕ॥ ಬಾಹ್ಯೇ ತು ಮುಕುಲಾಕಾರಾನ್ ದ್ವಾತ್ರಿಂಶತ್ಪರಿತೋ ಲಿಖೇತ್ ।

ಟೀಕು॥ ಬಾಹ್ಯೇತು=ಹೊಱಗಣ ವೃತ್ತದಲ್ಲಿ, ಮುಕುಲಾಕಾರಾನ್ ದ್ವಾತ್ರಿಂಶತ್=ಮೂವತ್ತೆರಡು ಮುಕುಲಾಕಾರಂಗಳನೂ, ಪರಿತಃ=ಸುತ್ತಿಬರಲು, ಲಿಖೇತ್=ಬರವುದು.

ಶ್ಲೋಕ॥ ಕರ್ಣಿಕಾಯಾಸ್ತು ಪರಿತಶ್ಚಾಷ್ಟ ಪತ್ರಂ ಸಮಾಲಿಖೇತ್ ।
ತದ್ಬಾಹ್ಯೇ ಚಾಷ್ಟಪತ್ರಂ ತು ಕೃತ್ವಾ ಚೋಪದಲಾನಿ ವೈ ॥

ಟೀಕು॥ ಕರ್ಣಿಕಾಯಾಸ್ತುಪರಿತಃ=ಕರ್ಣಿಕಾವೃತ್ತದ ಮೇಲಣದ ವೃತ್ತದಲ್ಲಿ ಸುತ್ತಲು, ಅಷ್ಟಪತ್ರಂ=ಅಷ್ಟದಿಕ್ಕಿನಲ್ಲಿಯೂ ಅಷ್ಟಪತ್ರಂಗಳನೂ, ಸಮಾಲಿಖೇತ್=ಬರವುದು, ತದ್ಬಾಹ್ಯೇ=ಆ ಅಷ್ಟಪತ್ರಗಳನುಳ್ಳ ವೃತ್ತದ ಹೊಱಗಣ ವೃತ್ತದಲ್ಲಿ, ಅಷ್ಟಪತ್ರಂತು ಕೃತ್ವಾ=ಎಂಟುದಳಂಗಳನೂ ಬರದು, ಉಪದಲಾನಿ ಚ ವೈ=ಉಪದಳಂಗಳನೂ ಬರವುದು. ॥೧೮॥

ಶ್ಲೋಕ॥ ಅಷ್ಟದಿಕ್ಷು ಸಮಂತಾತು ಪಕ್ಷೇ ಪಕ್ಷೇ ಗುಣಾಗುಣಮ್ ।
ತೃತೀಯಾವರಣೇ ಬಾಹ್ಯೇ ದಲಾಂಶ್ಚುಪದಲಾನ್ ಕುರು ॥

ಟೀಕು॥ ಅಷ್ಟದಿಕ್ಷು=ಎಂಟು ದಿಕ್ಕುಗಳಲ್ಲಿ, ಸಮಂತಾತ್ತು=ಸ್ತುತಿಬರಲು, ಪಕ್ಷೇ ಪಕ್ಷೇ ಗುಣಾಗುಣಂ=ಪಕ್ಷ ಪಕ್ಷದಲ್ಲಿ ಗುಣಾಗುಣವಾಗಿ, ಬಾಹ್ಯೇತೃತೀಯಾವರಣೇ=ಹೊಱಗಣ ಮೂಱನೆಯಾವರಣದಲ್ಲಿ, ದಲಾನ್=ಹದಿನಾಱುದಲಂಗಳನೂ, ಉಪದಲಾಂಶ್ಚ=ಹದಿನಾಱು ಉಪದಲಂಗಳನೂ, ಕುರು=ಮಾಡ್ಯೆ ಕುಮಾರನೆ. ॥೧೯॥

ಶ್ಲೋಕ॥ ಕರ್ಣಿಕಾಮಧ್ಯಕೇ ಕುರ್ಯಾದ್ರಂಧ್ರಂ ತತ್ಸೂಕ್ಷ್ಮಕರ್ಣಿಕಾ ।
ತದ್ಬಾಹ್ಯೇ ಪರಿತೋ ಲೇಖ್ಯಂ ಚತುಷ್ಪತ್ರಂ ಸಕೇಸರಮ್ ॥

ಟೀಕು॥ ಕರ್ಣಿಕಾಮಧ್ಯಕೇ=ಕರ್ಣಿಕಾವೃತ್ತಮಧ್ಯದಲ್ಲಿ, ರಂಧ್ರಂ=ಕವೆಯಾರ್ತವನೂಱುವ ರಂಧ್ರವನು, ಕುರ್ಯಾತ್=ಮಾಡುವದು, ತತ್=ಆ ರಂಧ್ರವು, ಸೂಕ್ಷ್ಮಕರ್ಣಿಕಾ=ಸೂಕ್ಷ್ಮಕರ್ಣಿಕೆಯೆನಿಸಿಕೊಂಬುದು, ತದ್ಬಾಹ್ಯೇ=ಆ ಸೂಕ್ಷ್ಮಕರ್ಣಿಕೆಯ ಹೊಱಗೆ, ಪರಿತಃ=ಸುತ್ತಬರವುದು, ಸಕೇಸರಂಚತುಷ್ಪತ್ರಂ=ಕೇಸರಸಹಿತವಾದ ನಾಲ್ಕೆಸಳನೂ ಲೇಖ್ಯಂ=ಬರೆಯಬೇಕಾದುದು. ॥೨೦॥

ಚಕ್ರಂಗಳ ಬರೆವ ವರ್ಣಂಗಳ ನಿರೂಪಿಸಿಹನು:

ಶ್ಲೋಕ॥ ರಾಜಸೇನೈವ ಸೂತ್ರಂ ತು ಸಾತ್ವಿಕೇನ ದಲಾನಿ ವೈ ।
ಕರ್ಣಿಕಾಂ ಪೀತವರ್ಣೇನ ಬೀಜಾನಿ ತಾಮಸೇನ ತು ॥

ಟೀಕು॥ ರಾಜಸೇನೈವ=ರಜೋಗುಣ ಸಂಬಂಧವಾದ ರಕ್ತವರ್ಣದಿಂದ, ಸೂತ್ರಂತು= ಸೂತ್ರಪಾತನವ ಮಾಡುವದು, ಸಾತ್ವಿಕೇನ=ಸತ್ವಗುಣ ಸಂಬಂಧ ಶ್ವೇತ ವರ್ಣದಿಂದ, ದಲಾನಿವೈ=ಬಾಹ್ಯದಳ ಹೊಱಗಾಗಿ ಉಳಿದ ದಳಂಗಳನೂ ಬರವುದು, ಪೀತವರ್ಣೇನ= ಪೀತವರ್ಣದಿಂದ, ಕರ್ಣಿಕಾಃ=ಕರ್ಣಿಕೆಗಳನು ಬರವುದು, ತಾಮಸೇನ ತು=ತಾಮಸಗುಣ ಸಂಬಂಧವಾದ ಕಪ್ಪುವರ್ಣದಿಂದ, ಬೀಜಾನಿ=ಬೀಜಾಕ್ಷರಂಗಳನು ಬರವುದು. ॥೨೧॥

ಶ್ಲೋಕ॥ ರಕ್ತಕೃಷ್ಣಸಿತೇನೈವ ಬಾಹ್ಯೇ ವೃತ್ತ ತ್ರಯೋಽಪಿ ಚ ।
ತದ್ಬಾಹ್ಯೇ ಮುಕುಲಾನ್‌ಸರ್ವಾನ್ ರಕ್ತವರ್ಣೇನ ಲೇಖಯೇತ್ ॥

ಟೀಕು॥ ರಕ್ತವರ್ಣದಿಂದ ಮೊದಲ ವೃತ್ತದ ರೇಖೆಯ ತಿರುಹಬೇಕಾದುದು. ಶ್ವೇತವರ್ಣ ದಿಂದ ಕಡೆಯ ವೃತ್ತದ ರೇಕೆಯ ತಿರುಹಬೇಕಾದುದು. ತಬ್ಬಾಹ್ಯೇ=ಆ ಬಾಹ್ಯವೃತ್ತದಲ್ಲಿ ಬರುವ, ಸರ್ವಾನ್ ಮುಕುಲಾನ್=ಸಮಸ್ತ ದಳಂಗಳನೂ, ರಕ್ತವರ್ಣೇನ=ರಕ್ತವರ್ಣ ದಿಂದ, ಲೇಖಯೇತ್=ಲಿಖಿಸುವದು. ಹೀಂಗೆ ಕ್ರಮೋಕ್ತವಾದ ವರ್ಣಂಗಳಿಂದ ಸೂತ್ರವನು ಮಾಡುವುದು. ಕವೆಯಾರದ ತುದಿಗೆ ಬತ್ತಿಯನು ಸುತ್ತಿ ವೃತ್ತಂಗಳ ತಿರುಹುವುದು. ಕೇಸರದಳಾಕ್ಷರಂಗಳನೂ ಲೆಕ್ಕಣಿಕೆಯಿಂದ ಬರವುದು. ಈ ಕ್ರಮವನಱಿದು ಚಕ್ರವನುದ್ಧರಿಸುವದು. ॥೨೨॥

ಶ್ಲೋಕ॥ ಚಕ್ರನ್ಯಾಸಮಿದಂ ಪ್ರೋಕ್ತಂ ದೇವತಾನ್ಯಾಸಮುಚ್ಯತೇ ।

ಟೀಕು॥ ಇದಂಚಕ್ರನ್ಯಾಸಂ ಪ್ರೋಕ್ತಂ=ಈ ಚಕ್ರನ್ಯಾಸ ನುಡಿಯಲುಪಟ್ಟದು. ದೇವತಾನ್ಯಾಸಮುಚ್ಯತೇ=ದೇವತಾನ್ಯಾಸ ನುಡಿಯಲುಪಡುತ್ತಿಹುದು. ॥೨೩॥

ಶ್ಲೋಕ॥ ಕರ್ಣಿಕಾಮಧ್ಯಕೇ ಪೂಜ್ಯಾ ಶಕ್ತಿರಾಧಾರರೂಪಿಣೀ ।
ಅಂಬಿಕಾದಿಚತುಶ್ಶಕ್ತೀಶ್ಚತುಷ್ಪತ್ರೇಷು ಸಂಯಜೇತ್ ।

ಟೀಕು॥ ಕರ್ಣಿಕಾಮಧ್ಯಕೇ=ಚತುಃಪತ್ರ ಮಧ್ಯದಲ್ಲಿ, ಆಧಾರ ರೂಪಿಣೀಶಕ್ತಿಃ=ಸಮಸ್ತ ಮಂತ್ರಾಧಾರರೂಪಿಣಿಯಾದ ಪರಾಶಕ್ತಿ, ಪೂಜ್ಯಾ=ಪೂಜಾಯೋಗ್ಯಳು, ಚತುಷ್ಪತ್ರೇಷು= ಸೂಕ್ಷ್ಮಕರ್ಣಿಕೆಯ ಬಳಸಿದ್ದ ನಾಲ್ಕು ದಳಂಗಳಲ್ಲಿ, ಅಂಬಿಕಾದಿ ಚತುಶ್ಶಕ್ತೀಃ=ಅಂಬಿಕೆ ಯೆಂಬ ಶಕ್ತಿ ಮೊದಲಾದ ನಾಲ್ವರು ಶಕ್ತಿಯರನು, ಸಂಯಜೇತ್=ಲೇಸಾಗಿ ಪೂಜಿಸುವದು. ॥೨೪॥

ಶ್ಲೋಕ॥ ವಾಮಾದಿಶಕ್ತಯಶ್ಚಾಷ್ಟೌ ಪ್ರಥಮಾವರಣೇ ಯಜೇತ್ ।
ಅಷ್ಟಮೂರ್ತಿಗಣಾಂಶ್ಚೈವ ದ್ವಿತೀಯಾವರಣೇ ಯಜೇತ್ ॥

ಟೀಕು॥ ಪ್ರಥಮಾವರಣೇ=ಮೊದಲಾವರಣದಲಿ, ವಾಮಾದಿಶಕ್ತಿಯಶ್ಚಾಷ್ಟೌ= ಮನೋನ್ಮನೀಯೆಂಬ ಅಷ್ಟಶಕ್ತಿಗಳನೂ, ಯಜೇತ್=ಪೂರ್ವಕ್ರಮ ಮೊದಲಾದ ಎಂಟು ಪತ್ರಂಗಳಲ್ಲಿ ಕ್ರಮದಿಂದ ಭಜಿಸುವದು, ದ್ವಿತೀಯಾವರಣೇ=ಎರಡನೆಯಾವರಣದಲಿ ಗಣಾಂಶ್ಚೈವ=ಉಮಾ ಚಂಡೇಶ್ವರ, ನಂದಿಕೇಶ್ವರ, ಮಹಾಕಾಲ, ಭೃಂಗಿರಿಟಿ, ಗಣೇಶ್ವರ, ವೃಷಭೇಶ್ವರ, ಷಣ್ಮುಖರೆಂಬ ಅಷ್ಟಗಣೇಶ್ವರರನೂ, ಉತ್ತರದಳ ಮೊದಲಾಗಿದ್ದ ದಳಂಗಳಲಿ ಕ್ರಮದಿಂದ ಭಜಿಸುವದು. ಅಷ್ಟಮೂರ್ತಿ=ಅಷ್ಟಮೂರ್ತಿಗಳನೂ, ಉಳಿದದಳಂಗಳಲಿ ಅರ್ಚಿಸುವದು. ॥೨೫॥

ಶ್ಲೋಕ॥ ವಿದ್ಯೇಶಾನ್ ಲೋಕಪಾಲಾಂಶ್ಚ ವಸೂಂಶ್ಚೈವ ತೃತೀಯಕೇ ।
ಬಾಹ್ಯರೇಖಾತ್ರಯೇ ಪೂಜ್ಯಂ ಮಂಡಲಂ ತೃತೀಯಂ ತಥಾ ॥

ಟೀಕು॥ ತೃತೀಯಕೇ=ಮೂಱನೆಯಾವರಣದಲ್ಲಿಯ ಇಪ್ಪತ್ತುನಾಲ್ಕು ದಳಂಗಳಲ್ಲಿ, ವಿದ್ಯೇಶಾನ್=ಅನಂತ, ಸೂಕ್ಷ್ಮ, ಶಿವೋತ್ತಮ, ಏಕನೇತ್ರ, ಏಕರುದ್ರ, ತ್ರಿಮೂರ್ತಿ, ಶ್ರೀಕಂಠ, ಶಿಖಂಡಿಯೆಂಬ, ಅಷ್ಟವಿದ್ಯೇಶ್ವರ ರುದ್ರದೇವತೆಗಳನೂ, ಲೋಕಪಾಲಾಂಶ್ಚ= ಇಂದ್ರ, ಅಗ್ನಿ, ಯಮ, ನಿರ್ಋತಿ, ವರುಣ, ವಾಯು, ಕುಬೇರ, ಈಶಾನರೆಂಬ ಅಷ್ಟಲೋಕಪಾಲಕರುಗಳನೂ, ಅಷ್ಟವಸುಗಳನೂ, ಪೂಜಿಸುವದು, ಬಾಹ್ಯರೇಖಾತ್ರಯೇ= ಹೊಱಗಣ ರೇಖಾತ್ರಯದಲ್ಲಿ, ತಥಾ=ಹಾಂಗೆ, ಮಂಡಲಂ ತೃತೀಯಂ=ತ್ರಿಮಂಡಲವೂ, ಪೂಜ್ಯಂ=ಪೂಜಾಯೋಗ್ಯವು. ॥೨೬॥

ಶ್ಲೋಕ॥ ತತ್ಪತ್ರೇ ಮುಕುಲಾಕಾರೇ ವಾಸ್ತುದೇವಾನ್ ಪ್ರಪೂಜಯೇತ್ ।
ಗಂಧಪುಷ್ಪಾದಿಭಿಶ್ಚೈವ ಪೂರ್ವಾದೀನಿ ಸ್ವನಾಮತಃ ॥

ಟೀಕು॥ ತತ್ಪತ್ರೇ=ಆ ಚಕ್ರದಲ್ಲಿಯ, ಮುಕುಲಾಕಾರೇ=ಮುಗುಳ ಆಕಾರಂಗಳಲ್ಲಿ, ವಾಸ್ತುದೇವಾನ್=ವಾಸ್ತುದೇವತೆಗಳನೂ, ಪ್ರಪೂಜಯೇತ್=ಪೂಜಿಸುವದು, ಪೂರ್ವಾದಿ ರೂಪಂಗಳನೂ, ಸ್ವನಾಮತಃ=ಅವರವರ ಹೆಸರಿನಿಂದ, ಗಂಧ ಪುಷ್ಪಾದಿಭಿಃ=ಗಂಧಪುಷ್ಪ ಮೊದಲಾದ ಪುಜಾದ್ರವ್ಯಂಗಳಿಂದ ಪೂಜೆಯಮಾಡುವುದು. ॥೨೭॥

ಶ್ಲೋಕ॥ ಕರ್ಣಿಕಾಯಾಂ ತು ತನ್ಮಧ್ಯೇ ಶಿವಬೀಜಂ ತು ವಿನ್ಯಸೇತ್ ।
ಪೂರ್ವಪತ್ರೇ ನ್ಯಸೇದ್ಬಿಂದುಮಾತ್ಮಬೀಜಂ ತು ದಕ್ಷಿಣೇ ।

ಟೀಕು॥ ಕರ್ಣಿಕಾಯಾಂ=ಕರ್ಣಿಕಾವೃತ್ತದಲ್ಲಿಯ, ತನ್ಮಧ್ಯೇ=ಆ ಚತುರ್ದಳ ಮಧ್ಯದಲ್ಲಿ, ಶಿವಬೀಜಂ ತು=ಶಿವಬೀಜಾಕ್ಷರವನೆ, ವಿನ್ಯಸೇತ್=ನ್ಯಾಸವಮಾಡುವದು, ಪೂರ್ವಪತ್ರೇ= ಪೂರ್ವದಳದಲ್ಲಿ, ಬಿಂದುಂ=ಸಕಾರವನು, ನ್ಯಸೇತ್=ಲಿಖಿಸುವದು, ಆತ್ಮಬೀಜಂ ತು=ಅಕಾರವನಾಯಿತ್ತಾದಡೆ, ದಕ್ಷಿಣೇ=ತೆಂಕಣ ಎಸಳಿನಲ್ಲಿ ಬರವುದು. ॥೨೮॥

ಶ್ಲೋಕ॥ **ವಾರುಣೇ ಸೂಕ್ಷ್ಮನಾದಂ ತು ವಿದ್ಯಾಬೀಜಂ ತಥೋತ್ತರೇ ।**
ಏವಂತತ್ತದ್ದಲೇ ನ್ಯಸೇತ್ ಪಂಚರೂಪಂ ಷಡಾನನ ॥

ತತ್ತದ್ಬಾಹ್ಯದಲೇ ಸರ್ವಾನ್ ಕ್ರಮಾದ್ವರ್ಣಾನ್ ಪ್ರವಿನ್ಯಸೇತ್ ।

ಟೀಕು॥ ವಾರುಣೇ=ಪಡುವಣದಳದಲ್ಲಿ, ಸೂಕ್ಷ್ಮನಾದಂ ತು=ಐಕಾರವನ್ಯಾಸವ ಮಾಡುವದು, ತಥಾ=ಹಾಂಗೆ, ಉತ್ತರೇ=ಬಡಗಣದಳದಲ್ಲಿ, ವಿದ್ಯಾಬೀಜಂ=ಕ್ಷಕಾರನ್ಯಾಸ ಮಾಡುವದು, ಏವಂ=ಈ ಪ್ರಕಾರದಿಂದ ಷಡಾನನ!=ಭೋ ಷಣ್ಮುಖನೆ! ತತ್ತದ್ದಲೇ=ಆ ಚತುರ್ದಳದಲ್ಲಿ, ಪಂಚರೂಪಂ=ಹಕಾರ, ಸಕಾರ, ಅಕಾರ, ಐಕಾರ, ಕ್ಷಕಾರಗಳೆಂಬ, ಪಂಚಾಕ್ಷರ ಸ್ವರೂಪವನೂ, ನ್ಯಸೇತ್=ಪಂಚಸ್ಥಾನದಲ್ಲಿ ನ್ಯಾಸಮಾಡಿ, ತದ್ಬಾಹ್ಯೇದಲೇ=ಆ ಕರ್ಣಿಕಾವೃತ್ತದ ಹೊಱಗಿನ ಆವರಣತ್ರಯಂಗಳ ದಳಂಗಳಲ್ಲಿಯೂ, ಸರ್ವಾನ್ ವರ್ಣಾನ್=ಪ್ರಥಮಾಕ್ಷರಂಗಳಿಗೆ ವರ್ಣಕ್ಕೆ ಸೇರಿಸುವ ವ್ಯಾಪಕಾಕ್ಷರಂಗಳೂ ಮಧ್ಯಾವರಣಕ್ಕೆ ಸೇರಿಸುವ ಸ್ವರಾಕ್ಷರಂಗಳೂ ಬಹಿರಾವರಣಕ್ಕೆ ಸೇರಿಸುವ ಸ್ಪರ್ಶಾಕ್ಷರಂಗಳೆಂಬ ಈ ತ್ರಿವರ್ಗಾಕ್ಷರಂ ನಾಲ್ವತ್ತೆಂಟನೂ, ಕ್ರಮಾತ್=ಮೂಡಣದಿಕ್ಕಿನ ದಳ ಮೊದಲಾಗಿ ತಱುವಾಯೆಯಿಂದ, ಪ್ರವಿನ್ಯಸೇತ್=ಲೇಸಾಗಿ ಬರವುದು.

ಶ್ಲೋಕ॥ **ಏಕದ್ವಿತ್ರಿತಯೋಶ್ಚೈವ ಹ್ಯೇಕದ್ವಿತ್ರಿತಯಂ ನ್ಯಸೇತ್ ॥**

ಟೀಕು॥ ಏಕ=ಪ್ರಥಮಾವರಣದ ಮೂಡಣವೊಂದು ದಳದಲ್ಲಿಯೂ, ದ್ವಿ=ಮಧ್ಯ ಮಾವರಣದ ಇಂದ್ರಾಗ್ನಿ ದಿಕ್ಕುಗಳಲ್ಲಿ ಆ ದಿಕ್ಕಿನಲ್ಲಿಯೂ, ಹೀಂಗೆ, ಈ ಮೂಱು ದಳಂಗಳಲ್ಲಿಯೂ ಏಕವ್ಯಾಪಕವೊಂದಕ್ಷರವನೂ, ದ್ವಿ=ತತ್ತ್ವಬೀಜ ಮೂರ್ತಿ ಬೀಜಂ ಗಳೆಂಬೆರಡಕ್ಷರವನೂ, ತೃತೀಯಂ=ಪ್ರಭಾವ ಬೀಜಂಗಳೆಂಬ ಮೂಱಕ್ಷರಂಗಳನೂ, ನ್ಯಸೇತ್=ಒಂದು ದಳದಲ್ಲಿ ಬಹಿರಾವರಣದ ಇಂದ್ರದಳದಲ್ಲಿಯೂ ಇಂದ್ರಾಗ್ನಿಗಳ ಮಧ್ಯವಿದಿಕ್ಕು ಆ ವಿದಿಕ್ಕಿನ ಇಂದ್ರದಿಕ್ಕಿನ ಮಧ್ಯದಳದಲ್ಲಿ ಒಂದು ಎರಡು ದಳದಲ್ಲಿ ಎರಡು ಮೂಱುದಳದಲ್ಲಿ ಮೂಱಾಗಿ ಬರವುದು. ॥೩೧॥

ಶ್ಲೋಕ॥ **ಸಂ ಚ ಅಂ ಚ ಸಮೂರ್ತಿಂ ಚ ಕಂ ಚ ಭಾವಂ ಚ ಗಂ ಚ ವೈ ।**
ಷಂ ಚ ಇಂ ಚ ಸಮೂರ್ತಿಂ ಚ ಘಂ ಚ ಭಾವಂ ಚ ಚಂ ಚ ವೈ ।

ಟೀಕು॥ ಸಂ ಚ=ಸಕಾರವನೂ ಪ್ರಥಮಾವರಣದ ಮೂಡಣ ದಳದಲ್ಲಿ ಬರವುದು ಸಮೂರ್ತಿಂ ಚ=ಮೂರ್ತಿ ಬೀಜವೆಂಬ ಅಕಾರದೊಡನೆ ಕೂಡಿದ, ಅಂಚ=ಅಕಾರ ವನೂ ಮಧ್ಯಮಾವರಣದ ಮೂಡಣ ದಳದಲ್ಲಿ ಬರವುದು. ಆ ಮೂರ್ತಿ ಬೀಜವೆಂಬ ಆಕಾರವನು ಇಂದ್ರಾಗ್ನಿಗಳ ಮಧ್ಯದ ಅಪದಿಶದಲ್ಲಿ ಬರವುದು. ಕಂಚ=ಕಕಾರವನೂ,

ಬಾಹ್ಯವೃತ್ತಿಯ ಇಂದ್ರದಳದಲ್ಲಿ ಬರವುದು. ಭಾವಂ ಚ=ಭಾವವೆಂದಡೆ ವಿಕಲಾಕ್ಷರವೆಲ್ಲಕ್ಕೆಯೂ ಒಂದೇ ಅಭಿದಾನವಾಗಿಹುದು. ಅದು ಕಾರಣ ಕಕಾರ ದ್ವಿತೀಯ ವಾದ ಖಕಾರವನೂ ಇಂದ್ರಾಗ್ನಿಗಳ ಮಧ್ಯದ ವಿದಿಕ್ಕಿನ ಇಂದ್ರ ದಿಕ್ಕಿನ ಮಧ್ಯದಳದಲ್ಲಿದ್ದ ದಳದಲ್ಲಿ ಬರವುದು. ಗಂ ಚ ವೈ=ಗಕಾರವನೂ ಆ ಅಪದಿಗ್ದಳದಲ್ಲಿ ಬರವುದು. ಹೀಂಗೆ ಬರದಡೆ ಇಂದ್ರದಳ ಮೊಲಾದ ಎರಡು ದಳದಲ್ಲಿ ಎರಡು ಅಕ್ಷರನ್ಯಾಸ ಮುಗಿವುದು. ಈ ಮೂಱುದಳಗಳಿಂದ ಮುಂದಣ ಅಗ್ನಿದಳವೆಸರಿದ್ದ ದಳದಲ್ಲಿ ಅಕ್ಷರ ನ್ಯಾಸವಿಲ್ಲ. ಅದೇನು ಕಾರಣವೆಂದಡೆ ಸ್ಪರ್ಶಾಕ್ಷರವಿಪ್ಪತ್ತೈದಱೊಳಗೆ ಪ್ರಥಮಾವರಣ ವ್ಯಾಪಕಾಕ್ಷರಗಳೊಳಗೆ ಸೇರಿದ ಮಕಾರವೊಂದು ಕಳೆದು ಇಪ್ಪತ್ತನಾಲ್ಕು ಉಳಿದವು. ಬಾಹ್ಯವೃತ್ತದಲ್ಲಿಯ ದಳ ಮೂವತ್ತೆರಡು. ಇಪ್ಪತ್ತನಾಲ್ಕು ಸಾಲಕ್ಷರಂಗಳ ನ್ಯಾಸವ ಮಾಡಿದಡೆ ಎಂಟು ದಳಂಗಳುಳಿವ ಕಾರಣವಾದಳಗಳಲ್ಲದಲ್ಲಿ ವರ್ಣನ್ಯಾಸವಿಲ್ಲ. ಈ ಕ್ರಮದಿಂದವೆ ಈಶಾಂತವಾಗಿ ತ್ರಿವರ್ಗಾಕ್ಷರಂಗಳ ನ್ಯಾಸವ ಮಾಡುವದು. ಷಂ ಚ=ಷಕಾರವನು ಅಗ್ನಿದಳದಲ್ಲಿ ನ್ಯಾಸಮಾಡುವದು. ಇಂ ಚ=ಇಕಾರವನೂ ಮಧ್ಯಮಾವರಣದ ಅಗ್ನಿದಳದಲ್ಲಿ ನ್ಯಾಸಮಾಡುವದು, ಸಮೂರ್ತಿಂ ಚ=ಮೂರ್ತಿ ಯೆಂದಡೆ ಕಲಾಕ್ಷರ ವಿಕೃತಿಯೆಂಬ ದೀರ್ಘಾಕ್ಷರಕ್ಕೆಯೂ ಒಂದೇ ಅಭಿದಾನವಾಗಿಹುದು, ಅದು ಕಾರಣ ಇಕಾರದಲ್ಲಿ ಹುಟ್ಟಿದ, ಈಕಾರವನೂ ಅಗ್ನಿಯ ಮೊದಲ ಮಧ್ಯದ ಅಪದಿಶಾದಳದಲ್ಲಿ ಬರವುದು, ಫಂ ಚ=ಫಕಾರವನೂ ಬಹಿರಾವರಣದ ಅಗ್ನಿದಳದಲ್ಲಿ ಬರವುದು, ಭಾವಂ ಚ ಚಂ ಚ ವೈ=ಭಕಾರ ಚಕಾರಂಗಳನೂ ಪೂರ್ವೋಕ್ತ ಪ್ರಕಾರದಿಂದವೆ ಬರವುದು. ॥೩೨॥

ಶ್ಲೋಕ॥ ಶಂ ಚ ಉಂ ಚ ಸಮೂರ್ತಿಂ ಚ ಫಂ ಚ ಭಾವಂ ಚ ಝಂ ಚ ವೈ ।
ವಂ ಚ ಖಂ ಚ ಸಮೂರ್ತಿಂ ಚ ಇಾಂ ಚ ಭಾವಂಚ ಠಂ ಚ ವೈ ।

ಟೀಕು॥ ಶಂಚ=ಶಕಾರವನು ಪ್ರಥಮವೃತ್ತದ ಯಾಮ್ಯದಳದಲ್ಲಿ ಬರವುದು. ಉಂ ಚ=ಉಕಾರವನು ಮಧ್ಯಮವೃತ್ತದ ಯಾಮ್ಯದಳದಲ್ಲಿ ಬರವುದು. ಸಮೂರ್ತಿಂ ಚ=ಉಕಾರೋತ್ಪನ್ನವಾದ ಊಕಾರವನೂ ಹಿಂದಣಹಾಂಗೆ ಆ ದಳದ ಸಮೀಪದಲ್ಲಿ ಬರವುದು. ಫಂ ಚ=ಫಕಾರವನೂ ಬಾಹ್ಯವೃತ್ತದ ಯಾಮ್ಯದಳದಲ್ಲಿ ಬರವುದು. ಭಾವಂ ಚ ಝಂ ಚ ವೈ=ಭಕಾರ ಝಕಾರಂಗಳನೂ ಪೂರ್ವೋಕ್ತಾನುಕ್ರಮವಾಗಿಯೇ ಮುಂದಣವೆರಡು ದಳಂಗಳಲ್ಲಿ ಬರವುದು. ವಂ ಚ=ವಕಾರವನೂ ಪ್ರಥಮ ನೈರ್ಋುತ(ನೈರುತ)ದಳದಲ್ಲಿ ಬರವುದು. ಖಂ ಚ=ಖಕಾರವನೂ ಮಧ್ಯವೃತ್ತದ ನೈರ್ಋುತದಳದಲ್ಲಿ ಬರವುದು. ಸಮೂರ್ತಿಂ ಚ=ಖಕಾರದಲ್ಲಿ ಹುಟ್ಟಿದ ಖೂಕಾರವನೂ ಪೂರ್ವೋಕ್ತದಿಂದವೆ ನಿರ್ಋುತಿ ವರುಣ ಮಧ್ಯದಲ್ಲಿ ಬರವುದು. ಇಾಂಚ=ಇಾಕಾರವನೂ

ಬಾಹ್ಯವೃತ್ತದ ನೈರುತ್ಯದಳದಲ್ಲಿ ಬರವುದು. ಭಾವಂ ಚ ಠಂ ಚ ವೈ= ಉಕಾರ ಠಕಾರಂಗಳನೂ ಪೂರ್ವೋಕ್ತವಾಗಿಯೇ ಮುಂದಣವೆರಡು ದಳದಲ್ಲಿ ಬರವುದು.

ಶ್ಲೋಕ॥ ಲಂ ಚ ೡಂ ಚ ಸಮೂರ್ತಿಂ ಚ ಡಂ ಚ ಭಾವಂ ಚ ಣಂ ಚ ವೈ ।
ರಂ ಚ ಏಂ ಚ ಸಮೂರ್ತಿಂ ಚ ತಂ ಚ ಭಾವಂ ಚ ದಂ ಚ ವೈ ।

ಟೀಕು॥ ಲಂ ಚ=ಲಕಾರವನು ಪ್ರಥಮ ವೃತ್ತದ ವರುಣದಳದಲ್ಲಿ ಬರವುದು. ೡಂ ಚ=ೡಕಾರವನೂ ಮಧ್ಯವೃತ್ತದ ವರುಣದಳದಲ್ಲಿ ಬರವುದು, ಸಮೂರ್ತಿಂ ಚ=ಇಕಾರೋತ್ಪತ್ಯವಾದ ಈ ಕಾರವನೂ ಆ ವರುಣದಳದ ಮುಂದಣದಳದಲ್ಲಿ ಬರವುದು. ಡಂ ಚ=ಡಕಾರವನೂ, ಬಾಹ್ಯವೃತ್ತದ ವರುಣದಳದಲ್ಲಿ ಬರವುದು. ಭಾವಂ ಚ ಣಂ ಚ ವೈ=ಅಲ್ಪಪ್ರಾಣಾಕ್ಷರಂಗಳುದಯವಹಕಾರಣ ಖಕಾರಾದಿಗಳು ಮಹಾಪ್ರಾಣವೆನಿಸಿಕೊಂಬವು. ಡಕಾರೋತ್ಪತ್ಯವಾದ ಢಕಾರವನೂ ಣಕಾರವನೂ ಪೂರ್ವೋಕ್ತವಾಗಿ ವರುಣದಳದ ಮುಂದಣವೆರಡು ದಳಂಗಳಲ್ಲಿ ನ್ಯಾಸವ ಮಾಡುವದು. ಏಂ ಚ=ಎಕಾರವನೂ, ಮಧ್ಯವೃತ್ತದ ವಾಯುವ್ಯದಳದಲ್ಲಿ ಬರವುದು. ಸಮೂರ್ತಿಂ ಚ=ಏಕಾರದಲ್ಲಿ ಹುಟ್ಟಿದ ಐಕಾರವನು ವಾಯು ಕುಬೇರರ ಮಧ್ಯದ ಅಪದಿಶದಳದಲ್ಲಿ ಬರವುದು. ತಂ ಚ=ತಕಾರವನು ಬಾಹ್ಯವೃತ್ತದ ಮಾರುತದಳದಲ್ಲಿ ಬರವುದು. ಭಾವಂ ಚ ದಂ ಚ ವೈ=ತಕಾರೋತ್ಪತ್ಯವಾದ ಥಕಾರವನೂ ಹಿಂದಣ ಹಾಂಗೆ ವಾಯುದಳದಿಂದ ಮುಂದಣವೆರಡುದಳಂಗಳಲ್ಲಿ ಬರವುದು. ॥೩೪॥

ಶ್ಲೋಕ॥ ಯಂ ಚ ಓಂ ಚ ಸಮೂರ್ತಿಂ ಚ ಧಂ ಚ ಭಾವಂ ಚ ಪಂ ಚ ವೈ ।
ಮಂ ಚ ಅಂ ಚ ಸಮೂರ್ತಿಂ ಚ ಫಂ ಚ ಭಾವಂ ಚ ಭಂ ಚ ವೈ ॥

ಟೀಕು॥ ಯಂ ಚ=ಯಕಾರವನೂ ಪ್ರಥಮ ವೃತ್ತದ ಕುಬೇರದಳದಲ್ಲಿ ಬರವುದು. ಓಂಚ=ಓಕಾರವನೂ ಮಧ್ಯವೃತ್ತದ ಕುಬೇರದಲ್ಲಿ ಬರವುದು. ಸಮೂರ್ತಿಂ ಚ=ಓಕಾರಕ್ಕೆ ಸಮೂರ್ತಿಯಾದ ಔಕಾರವನೂ ಕುಬೇರ ಈಶಾನ ದಿಕ್ಕುಗಳ ಮಧ್ಯಾಪದಿಶಿಯಲ್ಲಿ ಬರವುದು. ಧಂ ಚ=ಧಕಾರವನೂ ಬಾಹ್ಯವೃತ್ತದ ಕುಬೇರ ದಳದಲ್ಲಿ ಬರವುದು. ಭಾವಂ ಚ ಪಂ ಚ ವೈ=ನಕಾರ ಪಕಾರಂಗಳಲ್ಲಿ ಬರವುದು. ಮಂ ಚ=ಮಕಾರವನೂ ಪ್ರಥಮ ವೃತ್ತದ ಈಶಾನ್ಯ ದಿಕ್ಕಿನ ದಳದಲ್ಲಿ ನ್ಯಾಸವ ಮಾಡುವದು. ಅಂ ಚ=ಅಕಾರದಲ್ಲಿ ಬಿಂದು ಸ್ವರೂಪವನು ಮಧ್ಯವೃತ್ತದ ಈಶಾನ್ಯದಳದಲ್ಲಿ ಬರವುದು. ಸಮೂರ್ತಿಂ ಚ=ಬಿಂದು ದ್ವಿಭಾಗವನ್ನೈದಿ ಅಕಾರವಪ್ಪುತಿರ್ದ ವಿಸರ್ಗಸ್ವರೂಪವನೂ ಈಶಾನ್ಯೇಂದ್ರರುಗಳ ಮಧ್ಯ ವಿಧಗ್ದಳದಲ್ಲಿ ಬರವುದು. ಫಂ ಚ=ಫಕಾರವನೂ, ಬಾಹ್ಯವೃತ್ತದ ಈಶಾನ್ಯದಳದಲ್ಲಿ ಬರವುದು. ಭಾವಂ ಚಂ ಚ ವೈ=ಚಕಾರಭಕಾರಂಗಳನೂ ಈಶಾನದಳದಿಂದ ಮುಂದಣವೆರಡು ದಳಂಗಳಲ್ಲಿ ಬರವುದು. ॥೩೫॥

ಶ್ಲೋಕ॥ ಏತಾನ್ ವರ್ಣಾಂಶ್ಚ ಪೂರ್ವಾದೀನ್ವಿನ್ಯಸೇತ್ಪ್ರಥಮಾದಿಷು ।

ಟೀಕು॥ ಪ್ರಥಮಾದಿಷು=ಪ್ರಥಮಾವರಣ ಮೊದಲಾದ ಮೂಱುಆವರಣಗಳಲ್ಲಿ, ಏತಾನ್ವರ್ಣಾಂಶ್ಚ=ಸ್ವರಾಕ್ಷರ ಮೊದಲಾಗಿ ಭಕಾರ ಕಡೆಯಾಗಿವುಳ್ಳ ವ್ಯಾಪಕಾಕ್ಷರ ಸ್ಪರ್ಶಾಕ್ಷರವೆಂಬ ಈ ನಾಲ್ವತ್ತೆಂಟಕ್ಷರಂಗಳನೂ, ಪೂರ್ವಾದೀನ್=ಮೂಡಣ ಪ್ರಥಮಾವರಣದ ಮೊದಲಾದವನೂ ಕುಱಿತು, ವಿನ್ಯಸೇತ್=ಆಯಾ ದಳ ಲಕ್ಷಣಂಗಳಲ್ಲಿ ನ್ಯಾಸವ ಮಾಡುವದು. ಈ ಪ್ರಕಾರದಿಂ ನ್ಯಾಸವ ಮಾಡುವ ಅಯಿವತ್ತೊಂದಕ್ಷರಂಗಳಿಗೆ ವಿಭಾಷಾ ಸಂಖ್ಯೆಯಾವುದಯಾಯೆಂದಡೆ ವ್ಯಾಪಕಾಕ್ಷರ ಭೇದ ಪ್ರಥಮಾವರಣ ಈಶಾನ ಮೊದಲಾದ ಎರಡು ದಳದಲ್ಲಿ ನ್ಯಾಸವಾದಕ್ಷರಂಗಳೂ, ಮಕಾರ, ಯಕಾರ, ರಕಾರ, ಲಕಾರ, ವಕಾರ, ಶಕಾರ, ಷಕಾರ, ಸಕಾರ, ಇಂತು ಎಂಟಕ್ಷರ; ಹಕಾರ, ಶಿವಬೀಜವಪ್ಪ ಕಾರಣ ಸೂಕ್ಷ್ಮಕರ್ಣಿಕೆಯಲ್ಲಿ ನ್ಯಸ್ತವಾಯಿತ್ತು. ಳಕಾರಕ್ಕೆ ಲಕಾರಳಕಾರಂಗಳಿಗೆ ಭೇದವಿಲ್ಲವಾದ ಕಾರಣ ಲಕಾರಾಂತರ್ಗತವಾದಡೆಯು ಅಹುದು. ಕ್ಷಕಾರವು ವಿದ್ಯಾ ತತ್ತ್ವವಾದ ಕಾರಣ ಜ್ಞಾನಶಕ್ತಿಸ್ವರೂಪದಿಂದ ಶಿವ ಸಮೀಪಸ್ಥವಾಗಿ ಪಡುವಣ ಕರ್ಣಿಕಾದಳದಲ್ಲಿ ನ್ಯಸ್ತವಾಯಿತ್ತು. ಅಂತು ವ್ಯಾಪಕಾಕ್ಷರ ಹತ್ತು ನ್ಯಸ್ತವಾದವು. ಸ್ಪರ್ಶಾಕ್ಷರಭೇದ ಬಾಹ್ಯ ವೃತ್ತದ ಮೂಡಲಾದಿಯಾಗಿ ಮೂಱು ಮೂಱು ದಳಂಗಳ ಮುಂದು ಮುಂದೆ ದಳ ಉಪದಳಂಗಳ ಬಿಟ್ಟು ಇಪ್ಪತ್ತು ನಾಲ್ಕು ದಳಂಗಳಲ್ಲಿ ಇಪ್ಪತ್ತು ನಾಲ್ಕಕ್ಷರಂಗಳೂ ನ್ಯಸ್ತವಾದವು. ಸಾರ ಕಲಾನ್ಯಾಸದಲ್ಲಿಯೂ ಮಕಾರ ಯಕಾರ ಕೂಡಿಹುದಾಗಿ ಯಕಾರ ಸಮೀಪಸ್ಥವಾಗಿ ಪ್ರಥಮಾವರಣದಲ್ಲಿ ನ್ಯಸ್ತವಾಯಿತ್ತು. ಅಂತು ಸ್ಪರ್ಶಾಕ್ಷರವಿಪ್ಪತ್ತೆಂಟೂ ನ್ಯಸ್ತವಾದವು. ಈ ಪಱಿಯಿಂದ ಚಕ್ರದಳಂಗಳಲ್ಲಿ ಏಕಪಂಚಾಶದ್ವರ್ಣನ್ಯಾಸವು ಮುಗಿಯಿತ್ತು. ॥೩೭॥

ಶ್ಲೋಕ॥ ಏತಚ್ಚಕ್ರಂ ಮಹಾಸೇನ! ರಹಸ್ಯಮತಿದುರ್ಲಭಮ್ ।
ವರ್ಣಾನಾಮಧಿದೇವಾಂಶ್ಚ ಪೂಜಯೇತ್ತಾನ್ ಯಥಾ ಕ್ರಮಮ್ ।

ಟೀಕು॥ ಭೋ ಮಹಾಸೇನ!=ಎಲೆ ಸೇನಾವಲ್ಲಭನೆ! ಏತಚ್ಚಕ್ರಂ=ಈ ಚಕ್ರವು, ರಹಸ್ಯಂ=ರಹಸ್ಯವಾದಂಥಾದು, ಅತಿದುರ್ಲಭಂ=ಆರಿಂದಲೂ ಪಡೆಯಬಾರದಂಥಾದು. ಅದು ಕಾರಣ ಈ ಚಕ್ರದಲಿಹ, ವರ್ಣಾನಾಂ=ಅಕಾರಾದಿವರ್ಣಂಗಳ, ತಾನ್ಅಧಿ ದೇವಾಂಶ್ಚ=ಶಿವತತ್ತ್ವ ಮೊದಲಾದ ಅಧಿದೇವತೆಗಳನೂ, ಯಥಾಕ್ರಮಂ=ಯಥಾಕ್ರಮವಹ ಹಾಂಗೆ, ಪೂಜಯೇತ್=ಪೂಜಿಸುವದು. ॥೩೭॥

ಶ್ಲೋಕ॥ ಪ್ರಾಸಾದಾದೀನಿ ಮಂತ್ರಾಣಿ ಸರ್ವಮಸ್ಮಿನ್ ವ್ಯವಸ್ಥಿತಮ್ ।
ತಚ್ಚಕ್ರಂ ಪೂಜಯೇನ್ನಿತ್ಯಂ ಸರ್ವಪೂಜಾಸಮಂ ಭವೇತ್ ॥

ಟೀಕು॥ ಅಸ್ಮಿನ್=ಈ ಚಕ್ರದಲ್ಲಿ, ಪ್ರಾಸಾದಾದೀನಿ ಮಂತ್ರಾಣಿ=ಶುದ್ಧಪ್ರಾಸಾದ ಮೊದಲಾದ ಸಮಸ್ತದೇವತಾ ಮಂತ್ರಗಳೂ, ಸರ್ವಂ=ಆಧಾರ ಶಕ್ತಿ ಮೊದಲಾದ ಸಮಸ್ತದೇವತಾ ಮಂತ್ರವೂ, ವ್ಯವಸ್ಥಿತಂ=ಸ್ಥಿತಿಮಾರ್ಗ ಸೃಷ್ಟಿಮಾರ್ಗ ಸಂಹಾರಮಾರ್ಗಂಗಳೆಂಬ ತ್ರಿಮಾರ್ಗಂಗಳಿಂದ ಉದ್ಧರಿಸುವದಕ್ಕೆ ಕಾರಣವಾದ ಏಕಪಂಚಾಶದ್ವರ್ಣವಾಗಿರುತ್ತಿಹುದು. ತತ್=ಅದುಕಾರಣ, ಚಕ್ರಂ=ವರ್ಣಾತ್ಮಕವಾದ ಚಕ್ರವನೂ, ನಿತ್ಯಂ=ಎಲ್ಲಾಗಳೂ, ಪೂಜಯೇತ್=ಪೂಜಿಸುವದು. ಆ ಈ ಚಕ್ರಪೂಜನವು, ಸರ್ವಪೂಜಾ ಸಮಂ ಭವೇತ್=ಸಕಲ ಸ್ವರೂಪವಾದ ಶಿವನ ಪೂಜೆಯೊಡನೆ ಸಮನಹುದು. ॥೩೮॥

ಶ್ಲೋಕ॥ ರೋಚನಾತ್ಕುಂಕುಮೇನಾಪಿ ಕರ್ಪೂರಾಗರುಚಂದನೈಃ ।
ಭೂರ್ಭುಪತ್ರೇ ಲಿಖೇಚ್ಚಕ್ರಂ ಕಂಡಿಕಾಂ ಕಾರಯೇದ್ಬುಧಃ ॥

ಟೀಕು॥ ಭೂರ್ಭುಪತ್ರೇ=ಭೂರ್ಭುಪತ್ರದಲ್ಲಿ, ರೋಚನಾತ್=ಗೋರಾಚನದಿಂದವೂ, ಕುಂಕುಮೇನಾಪಿ=ಕುಂಕುಮ ಕೇಸರದಿಂದವೂ, ಕರ್ಪೂರಾಗರುಚಂದನೈಃ=ಕರ್ಪೂರ ಅಗಿಲು ಶ್ರೀಗಂಧಂಗಳಿಂದವೂ, ಚಕ್ರಂ=ಚಕ್ರವನೂ, ಲಿಖೇತ್=ಬರವುದು. ಬುಧಃ= ವಿದ್ವಾನ್ ಆದ ಪುರುಷನು, ಕಂಡಿಕಾಂ ಕಾರಯೇತ್=ಯಂತ್ರಪತ್ರವನುಸುತ್ತಿ ತಾಮ್ರ ಸುವರ್ಣ ಪತ್ರಂಗಳಿಂದ ಅಡ್ಡಣಿಯಾಗಿ ಮಾಡುವದು. ॥೩೯॥

ಶ್ಲೋಕ॥ ಶಿರಸಾ ಧಾರಯಿತ್ವಾ ತು ಸರ್ವಕಾಮಾರ್ಥಸಿದ್ಧಿದಮ್ ।
ಆಯುರಾರೋಗ್ಯಮೈಶ್ವರ್ಯಂ ಪುತ್ರ ಪೌತ್ರಾದಿ ವರ್ಧನಮ್ ॥

ಟೀಕು॥ ಶಿರಸಾಧಾರಯಿತ್ವಾ ತು=ಆ ಯಂತ್ರದ ಮಣಿಯನೂ ಶಿರಸ್ಸಿನಿಂದ ಧರಿಸಿದೊಡೆ, ಸರ್ವಕಾಮಾರ್ಥ ಸಿದ್ಧಿದಂ=ಸಮಸ್ತಬಯಕೆಗಳ ಪ್ರಯೋಜನ ಸಿದ್ಧಿಗಳ ಕೊಡುವದು. ಆಯುಃ=ಆಯುಷ್ಯವು, ಆರೋಗ್ಯಂ=ನಿರೋಗತೆಯುಂ, ಐಶ್ವರ್ಯಂ=ಐಶ್ವರ್ಯವೂ, ಪುತ್ರ=ಮಕ್ಕಳು, ಪೌತ್ರ=ಮೊಮ್ಮಕ್ಕಳೂ, ಆದಿ=ಮೊದಲಾದವು, ವರ್ಧನಂ=ಹೆಚ್ಚಿಗೆಯ ಮಾಡುವದು. ॥೪೦॥

ಶ್ಲೋಕ॥ ಸರ್ವರಕ್ಷಾಕರಂ ಚೈವ ಸರ್ವವ್ಯಾಧಿವಿದಾರಣಮ್ ।
ಸರ್ವದುಃಖಪ್ರಶಮನಂ ಸರ್ವಕ್ಷುದ್ರನಿವಾರಣಮ್ ॥

ಟೀಕು॥ ಸರ್ವರಕ್ಷಾಕರಂ ಚೈವ=ಸಮಸ್ತ ರಕ್ಷಣವ ಮಾಡುವದು, ಸರ್ವವ್ಯಾಧಿ ವಿದಾರಣಂ=ಸಮಸ್ತವ್ಯಾಧಿಗಳ ವಿದಾರಿಸುವದು, ಸರ್ವದುಃಖಪ್ರಶಮನಂ=ಎಲ್ಲಾ ದುಃಖಂಗಳ ಕೆಡಿಸುವದು, ಸರ್ವಕ್ಷುದ್ರನಿವಾರಣಂ=ಸಮಸ್ತ ಕ್ಷುದ್ರ ಉಪದ್ರವಂಗಳ ತೊಲಗಿಸುವದು. ॥೪೧॥

ಶ್ಲೋಕ॥ **ಭೂತಪ್ರೇತಪಿಶಾಚಾಶ್ಚ ವೇತಾಲ ಬ್ರಹ್ಮರಾಕ್ಷಸಾಃ ।**
ಯಂತ್ರರೂಪಧರಂ ದೃಷ್ಟ್ವಾ ದೂರಾದ್ಗಚ್ಛಂತಿ ಭೀರವಃ ॥

ಟೀಕು॥ ಯಂತ್ರರೂಪಧರಂ ದೃಷ್ಟ್ವಾ=ಈ ಸಮಸ್ತ ಯಂತ್ರ ಸ್ವರೂಪವಾದ ಯಂತ್ರ ಸ್ವರೂಪವನು ಧರಿಸಿದ್ದ ಪುಣ್ಯ ಶರೀರಿಯ ಕಂಡಡೆ, ಭೂತಾಃ=ಭೂತಂಗಳೂ, ಪ್ರೇತಾಃ=ಪ್ರೇತಂಗಳೂ, ಪಿಶಾಚಾಶ್ಚ=ಪಿಶಾಚಂಗಳೂ, ವೇತಾಲ ಬ್ರಹ್ಮರಾಕ್ಷಸಾಃ=ವೇತಾಳರೂ, ಬ್ರಹ್ಮರಾಕ್ಷಸರೂ, ಭೀರವಃ=ಬೆದಱಿಕೆಯನುಳ್ಳವರಾಗಿ, ದೂರಾತ್=ದೂರದಿಂದವೆ, ಗಚ್ಛಂತಿ=ಓಡಿಹೋಗುತ್ತಿಹರು. ॥೪೨॥

ಶ್ಲೋಕ॥ **ಚಕ್ರಭೇದಮಿದಂ ಪ್ರೋಕ್ತಂ ವರ್ಗಭೇದಮಥ ಶೃಣು ।**

ಟೀಕು॥ ಇದಂ ಚಕ್ರಭೇದಂ ಪ್ರೋಕ್ತಂ=ಈ ಚಕ್ರಭೇದವು ಹೇಳಲುಪಟ್ಟುದು, ಅಥ=ಅನಂತರದಲ್ಲಿ, ವರ್ಗಭೇದಂ=ತ್ರಿವರ್ಗಂಗಳ ಭೇದವನು, ಶೃಣು=ಕೇಳು, ಎಲೆ ಷಣ್ಮುಖನೆ! ॥೪೪॥

ಇತಿ ಶ್ರೀ ವಾತುಲತಂತ್ರೇ ಶುದ್ಧಾಖ್ಯೇ ಸಹಸ್ರಗ್ರಂಥಸಂಹಿತಾಯಾಂ
ಶ್ರೀ ಮಲ್ಲಿಕಾರ್ಜುನೇನ ಕರ್ಣಾಟಭಾಷಾ ವಿವೃತಶ್ಚಕ್ರಭೇದೋನಾಮ
ತೃತೀಯಃ ಪಟಲಃ

❖ ❖ ❖

ಚತುರ್ಥಃ ವರ್ಗಭೇದಪಟಲಃ

ವ। ತಿ। ವೃ। ಅಷ್ಟತ್ರಿಪಂಚಪರಭೇದಕಲಾದಿವರ್ಗಂ
ವರ್ಗತ್ರಯೋದ್ಧೃತಸುಭೂರಿಮಹಾಮನೂನಾಮ್ ।
ಮಧ್ಯೇಽದ್ವಯಂ ಪರಮಮಾಧ್ಯಮನಂತಶಕ್ತಿಂ
ಪ್ರಾಸಾದಮಂತ್ರಮನಿಶಂ ಪ್ರಣಮಾಮಿ ನಿತ್ಯಮ್ ॥೧॥

ಶ್ಲೋಕ॥ ವರ್ಗಭೇದಂ ಪ್ರವಕ್ಷ್ಯಾಮಿ ಸಮಾಸಾಚ್ಛೃಣುಷಣ್ಮುಖ ।

ಟೀಕು॥ ಭೋ ಷಣ್ಮುಖ!=ಎಲೆ ಷಣ್ಮುಖನೆ! ಸಮಾಸಾತ್=ಸಮಾಸದಿಂದ, ವರ್ಗಭೇದಂ=ವರ್ಗಭೇದವನು, ಪ್ರವಕ್ಷ್ಯಾಮಿ=ಲೇಸಾಗಿ ನಿರೂಪಿಸಿಹೆನು. ಶೃಣು=ಕೇಳು.

ಶ್ಲೋಕ॥ ವರ್ಗಂ ತು ತೃತೀಯಂ ಪ್ರೋಕ್ತಂ ಪ್ರಥಮಂ ತು ಸ್ಥಿತಿರುಚ್ಯತೇ ।
ದ್ವಿತೀಯಂ ಸೃಷ್ಟಿವರ್ಗಂ ಸ್ಯಾತ್ ಸಂಹಾರಸ್ತು ತೃತೀಯಕಮ್ ॥

ಟೀಕು॥ ವರ್ಗಂ ತು=ಶಿವಮಂತ್ರಾದಿಗಳನುದ್ಧರಿಸುವ ವರ್ಗವಾಯಿತ್ತಾದಡೆ, ತೃತೀಯಂ=ಮೂಱುಭೇದವಾಗಿಹುದೆಂದು, ಪ್ರೋಕ್ತಂ=ಹೇಳಲುಪಟ್ಟುದು, ಪ್ರಥಮಂ=ಮೊದಲ ವರ್ಗವು, ಸ್ಥಿತಿಃ=ಸ್ಥಿತಿಯೆಂಬ ವರ್ಗವೆಂದು, ಉಚ್ಯತೇ=ನುಡಿಯಲುಪಡುತ್ತಿಹುದು, ಸೃಷ್ಟಿಮಾರ್ಗಂ=ಸೃಷ್ಟಿ ಎಂಬ ವರ್ಗವು, ದ್ವಿತೀಯಂಸ್ಯಾತ್=ಎರಡನೆಯದಹುದು. ಸಂಹಾರಂ ತು=ಸಂಹಾರವೆಂಬವರ್ಗವಾಯಿತ್ತಾದಡೆ, ತೃತೀಯಕಂ=ಮೂಱನೆಯ ವರ್ಗವೆನಿಸಿಕೊಂಬುದು. ॥೩॥

ಶ್ಲೋಕ॥ ಸ್ಥಿತಿಮಾತ್ರಂ ತ್ರಿವರ್ಗಂಸ್ಯಾತ್ಸೃಷ್ಟಿಶ್ಚಾಷ್ಟವಿಧಂ ಭವೇತ್ ।
ಸಂಹಾರಂ ಪಂಚವರ್ಗಂ ಸ್ಯಾತ್ತೇಷಾಂ ಲಕ್ಷಣಮುಚ್ಯತೇ ॥

ಟೀಕು॥ ಸ್ಥಿತಿಮಾತ್ರಂ=ಸ್ಥಿತಿಮಾತ್ರವು, ತ್ರಿವರ್ಗಂಸ್ಯಾತ್=ಮೂಱು ವರ್ಗವಹುದು, ಸೃಷ್ಟಿಶ್ಚ=ಸೃಷ್ಟಿವರ್ಗವು, ಅಷ್ಟವಿಧಂ ಭವೇತ್=ಎಂಟು ವಿಧವಹುದು. ಸಂಹಾರಂ=ಸಂಹಾರವರ್ಗವು, ಪಂಚವರ್ಗಂಸ್ಯಾತ್=ಐದು ಭೇದವನುಳ್ಳವರ್ಗವಹುದು. ತೇಷಾಂ=ಆ ಸೃಷ್ಟಿಸ್ಥಿತಿ ಸಂಹಾರಗಳೆಂಬ ತ್ರಿವರ್ಗಂಗಳ, ಲಕ್ಷಣಮುಚ್ಯತೇ=ಲಕ್ಷಣವು ನುಡಿಯಲುಪಡುತ್ತಿಹುದು. ॥೪॥

ಶ್ಲೋಕ॥ ಚಕ್ರೇ ಯಥಾಸ್ಥಿತಂ ವರ್ಣಂ ತಥಾ ವೈ ಸ್ಥಿತಿರುಚ್ಯತೇ ।
ಪ್ರಥಮಾವರಣೇ ವರ್ಣಂ ಸಕಾರಾದೀನಿ ಚಾಷ್ಟಕಮ್ ॥
ಪ್ರಥಮಂ ವರ್ಗಮಿತ್ಯುಕ್ತಂ ಸಾತ್ವಿಕಂ ನಾಮ ಚೋಚ್ಯತೇ ।

ಟೀಕು॥ ಚಕ್ರೇ=ಚಕ್ರಾವರಣತ್ರಯದಲ್ಲಿ, ಯಥಾವರ್ಣಂ ಸ್ಥಿತಂ=ಹೇಂಗೆ ವ್ಯಾಪಕಾಕ್ಷರ ಸ್ವರಾಕ್ಷರ ಸ್ಪರ್ಶಾಕ್ಷರವು ಆವರಣ ತ್ರಯಾಂತಸ್ಥವಾಗಿಹುದು, ತಥಾ ವೈ=ಹಾಂಗೆ ಅಕ್ಷರತ್ರಯ ಸಂಭೂತವಾದ ವರ್ಣವೆಲ್ಲವೂ, ಸ್ಥಿತಿರುಚ್ಯತೇ=ಸ್ಥಿತಿವರ್ಗವೆಂದು ನುಡಿಯಲುಪಡುವುದು. ಪ್ರಥಮಾವರಣೇ=ಮೊದಲಾವರಣದಲ್ಲಿಯ ಸಕಾರಾದೀನಿ ಚಾಷ್ಟಕಂ ವರ್ಣಂ=ಸ ಷ ಶ ವ ಲ ಯ ರ ಮ ಎಂಬ ಮೂಡಣ ದಳದ ಸಕಾರ ಮೊದಲಾಗಿ ಈಶಾನದಳದ ಮಕಾರ ಕಡೆಯಾದ ಈ ಎಂಟಕ್ಷರವು, ಪ್ರಥಮಂ ವರ್ಗಮಿತ್ಯುಕ್ತಂ=ಸ್ಥಿತಿವರ್ಗಮೊದಲಾದ ವರ್ಗವೆಂದು ನುಡಿಯಲುಪಟ್ಟುದು. ಸಾತ್ವಿಕಂ ನಾಮ ಚೋಚ್ಯತೇ=ಆ ವ್ಯಾಪಕಾಕ್ಷರವೊಂದಕ್ಕೆ ಸಾತ್ವಿಕವೆಂಬ ಹೆಸರು ನುಡಿಯಲು ಪಡುವುದು. ॥೫॥

ಶ್ಲೋಕ॥ ದ್ವಿತೀಯಾವರಣೇ ವರ್ಣಮಕಾರಾದೀನಿ ಷೋಡಶಮ್ ।
ದ್ವಿತೀಯೋ ವರ್ಗಮಿತ್ಯುಕ್ತಂ ರಾಜಸಂ ತು ಪ್ರಶಸ್ಯತೇ ॥

ಟೀಕು॥ ದ್ವಿತೀಯಾವರಣೇ=ಎರಡನೆಯಾವರಣದಲ್ಲಿಯ, ಅಕಾರಾದೀನಿಷೋಡಶ ವರ್ಣಂ=ಮೂಡಣದಳದಲ್ಲಿ ಬರುವ ಅಕಾರ ಮೊದಲಾಗಿ ಅಃಕಾರ ಕಡೆಯಾದ ಹದಿನಾಱುದಳದಲ್ಲಿಯ ಹದಿನಾಱೂ ಸ್ವರಾಕ್ಷರವು, ಸ್ಥಿತಿವರ್ಗದ ಎರಡನೆಯ ವರ್ಗ, ರಾಜಸಂ ತು ಪ್ರಶಸ್ಯತೇ=ರಾಜಸವರ್ಗವೆಂದು ಪ್ರಶಂಸಿಸಲುಪಡುತ್ತಿಹುದು.

ಶ್ಲೋಕ॥ ತೃತೀಯೇ ತು ಕಕಾರಾದಿ ಚತುರ್ವಿಂಶಾಕ್ಷರಂ ತಥಾ ।
ತೃತೀಯವರ್ಗಮಿತ್ಯುಕ್ತಂ ತಾಮಸಂ ಚೇತಿ ಕೀರ್ತಿತಮ್ ॥

ಟೀಕು॥ ತೃತೀಯೇ ತು=ಮೂಱನೆಯಾವರಣದಲ್ಲಿಯ, ತಥಾ ಕಕಾರಾದಿ ಚತುರ್ವಿಂಶಾಕ್ಷರಂ=ಮೊದಲವೆರಡು ವೃತ್ತಂಗಳ ಎಂಟು ಹದಿನಾಱುದಳಂಗಳಲ್ಲಿ ಸಕಾರ ಅಕಾರಾದಿಗಳು ಮೂಡಲಾದಿಯಾಗಿ ಹೇಂಗೆ ಬರೆದಿಹವು ಹಾಂಗೆ ಮೂಡಲಾದಿಯಾಗಿ ಇಪ್ಪತ್ತನಾಲ್ಕುದಳಂಗಳಲ್ಲಿ ಬರೆವ ಕಕಾರಮೊದಲಾಗಿ ಚಕಾರ ಕಡೆಯಾದ ಇಪ್ಪತ್ತು ನಾಲ್ಕು ಸ್ಪರ್ಶಾಕ್ಷರವು, ತೃತೀಯ ವರ್ಗಮಿತ್ಯುಕ್ತಂ=ಮೂಱನೆಯ ವರ್ಗವೆಂದು ನುಡಿಯಲುಪಟ್ಟುದು, ತಾಮಸಂ ಚೇತಿ ಕೀರ್ತಿತಂ=ಆ ಸ್ಪರ್ಶಾಕ್ಷರ ವರ್ಗಕ್ಕೆ ತಾಮಸ ವೆಂಬ ನಾಮ ಹೇಳಲುಪಟ್ಟುದು. ॥೭॥

ಶ್ಲೋಕ॥ ವರ್ಗಭೇದಮಿದಂ ಪ್ರೋಕ್ತಂ ಸ್ಥಿತಿಮಾರ್ಗಂ ಪ್ರಕೀರ್ತಿತಮ್ ॥

ಟೀಕು॥ ಇದಂ ವರ್ಗಭೇದಂ ಪ್ರೋಕ್ತಂ=ಈ ಸ್ಥಿತಿ ಮಾರ್ಗದಲ್ಲಿ ತ್ರಿಭೇದವು ಹೇಳಲು ಪಟ್ಟುದು, ಸ್ಥಿತಿಮಾರ್ಗಂ ಪ್ರಕೀರ್ತಿತಂ=ಈ ಮೂಱು ಮೂಱು ವರ್ಗಾಕ್ಷರಂಗಳ ಸಂಜ್ಞೆಗಳಿಂದ ಮಂತ್ರಂಗಳನುದ್ಧರಿಸುವದು ಸ್ಥಿತಿವರ್ಗವೆಂದು ಹೇಳಲುಪಟ್ಟುದು. ॥೮॥

ಶ್ಲೋಕ॥ ಪಂಚಪ್ರಾಸಾದಮಂತ್ರಾಣಿ ಸ್ಥಿತಿಮಾರ್ಗೇಣ ಚೋದ್ಧರೇತ್ ।
ಏವಂ ಸ್ಥಿತಿಕ್ರಮಂ ಪ್ರೋಕ್ತಂ ಸೃಷ್ಟಿಮಾರ್ಗಂ ತತಃ ಶೃಣು ॥

ಟೀಕು॥ ಪಂಚಪ್ರಾಸಾದಮಂತ್ರಾಣಿ=ಶುದ್ಧ ಮೂಲ ತತ್ತ್ವ ಆದಿ ಆತ್ಮವೆಂಬ ಪಂಚಪ್ರಾಸಾದ ಮಂತ್ರಂಗಳನು, ಸ್ಥಿತಿಮಾರ್ಗೇಣ ಚೋದ್ಧರೇತ್=ಈ ಚಕ್ರಸ್ಥವಾದ ಸ್ಥಿತಿಮಾರ್ಗತ್ರಯಾಕ್ಷರ ಸಂಜ್ಞೆಯಿಂದ ಉದ್ಧರಿಸುವದು, ಏವಂ ಸ್ಥಿತಿಕ್ರಮಂ ಪ್ರೋಕ್ತಂ=ಈ ಪ್ರಕಾರದಿಂ ಸ್ಥಿತಿವರ್ಗ ಕ್ರಮವು ಹೇಳಲ್ಪಟ್ಟುದು. ತತಃ=ಈ ಸ್ಥಿತಿ ಕ್ರಮದಿಂದಂ ಮೇಲೆ, ಸೃಷ್ಟಿವರ್ಗಂ ಶೃಣು= ಸೃಷ್ಟಿಮಾರ್ಗವ ಕೇಳು. ॥೯॥

ಶ್ಲೋಕ॥ ಅಕಾರಾದಿ ಕ್ಷಕಾರಾಂತಂ ವರ್ಣಾನಾಂ ಸೃಷ್ಟಿರುಚ್ಯತೇ ।
ತಸ್ಮಾತ್ಸೃಷ್ಟಿಕ್ರಮೇಣೈವ ಅಷ್ಟವರ್ಗಾಣಿ ಚೋಚ್ಯತೆ ॥

ಟೀಕು॥ ಅಕಾರಾದಿ ಕ್ಷಕಾರಾಂತ ವರ್ಣಾನಾಂ=ಅಕಾರ ಮೊದಲಾಗಿ ಕ್ಷಕಾರ ಕಡೆಯಾಗಿವುಳ್ಳ ವರ್ಣಂಗಳ ಸೃಷ್ಟಿ ಯಾವುದಾನೊಂದು ಕಾರಣದಿಂದ ಹೇಳಲು ಪಡುವುದು, ತಸ್ಮಾತ್=ಅದು ಕಾರಣದಿಂದ, ಸೃಷ್ಟಿ ಕ್ರಮೇಣೈವ=ಸೃಷ್ಟಿಕ್ರಮದಿಂದವು, ಅಷ್ಟ ವರ್ಗಾಣಿ ಚ=ಎಂಟು ವರ್ಗಂಗಳೂ, ಉಚ್ಯತೇ=ಬೇಱೆ ಬೇಱೆ ನುಡಿಯಲು ಪಡುತ್ತಿದ್ದಾವು. ॥೧೦॥

ಶ್ಲೋಕ॥ ಅವರ್ಗಂ ಪ್ರಥಮಂ ವಿಂದ್ಯಾದೈಂದ್ರವರ್ಗಮುದಾಹೃತಮ್ ।
ದ್ವಿತೀಯಂ ತು ಕವರ್ಗಂ ಸ್ಯಾದ್ವಹ್ನಿವರ್ಗಮುದಾಹೃತಮ್ ।

ಟೀಕು॥ ಅವರ್ಗಂ=ಅವರ್ಗವು, ಪ್ರಥಮಂ ವಿಂದ್ಯಾತ್=ಮೊದಲ ವರ್ಗವೆಂದಱಿವುದು, ಐಂದ್ರವರ್ಗಮುದಾಹೃತಂ=ಅ ಆ ವರ್ಗವು ಇಂದ್ರ ಸಂಬಂಧವಾದ ವರ್ಗವೆಂದು ನುಡಿಯಲುಪಟ್ಟುದು. ದ್ವಿತೀಯಂ ತು=ಎರಡನೆಯ ವರ್ಗವಾಯಿತ್ತಾದಡೆ, ಕವರ್ಗಂ ಸ್ಯಾತ್=ಕವರ್ಗವಹುದು, ವಹ್ನಿ ವರ್ಗಮುದಾಹೃತಂ=ಆ ಕವರ್ಗವು ಅಗ್ನಿವರ್ಗವೆಂದು ಹೇಳಲುಪಟ್ಟುದು. ॥೧೧॥

ಶ್ಲೋಕ॥ ಚವರ್ಗಂ ತು ತೃತೀಯಂ ಸ್ಯಾತ್ ಯಾಮ್ಯವರ್ಗಮುದಾಹೃತಮ್ ।
ಟವರ್ಗಂ ತು ಚತುರ್ಥಂ ಸ್ಯಾತ್ ನೈರ್ಋತ್ಯಂ ವರ್ಗಮುಚ್ಯತೇ ।

ಟೀಕು॥ ಚವರ್ಗಂ ತು=ಚವರ್ಗವಾಯಿತ್ತಾದಡೆ, ತೃತೀಯಂ ಸ್ಯಾತ್=ಮೂಱನೆಯ ವರ್ಗವಾಗಿಹುದು. ಯಾಮ್ಯವರ್ಗಮುದಾಹೃತಂ=ಆ ಚವರ್ಗವು ಯಮವರ್ಗವೆಂದು ನುಡಿಯಲುಪಟ್ಟುದು. ಟವರ್ಗಂ ತು=ಟವರ್ಗವಾಯಿತ್ತಾದೆ, ಚತುರ್ಥಂ ಸ್ಯಾತ್= ನಾಲ್ಕನೆಯ ವರ್ಗವಹುದು. ನೈರ್ಋತ್ಯಂ ವರ್ಗಮುಚ್ಯತೇ= ಆ ಟವರ್ಗವು ನಿರ್ಋತಿ ವರ್ಗವೆಂದು ನುಡಿಯಲುಪಡುವುದು. ॥೧೨॥

ಶ್ಲೋಕ॥ ಪಂಚಮಂ ತು ತವರ್ಗಂ ಸ್ಯಾದ್ವಾರುಣಂ ವರ್ಗಮುಚ್ಯತೇ ।
ಪವರ್ಗಂ ಷಷ್ಠಮಾಖ್ಯಾತಂ ಮರುದ್ವರ್ಗಮುದಾಹೃತಮ್ ॥

ಟೀಕು॥ ಪಂಚಮಂ ತು=ಐದನೆಯ ವರ್ಗವಾಯಿತ್ತಾದಡೆ, ತವರ್ಗಂಸ್ಯಾತ್=ತವರ್ಗವಹುದು, ವರುಣವರ್ಗಮುಚ್ಯತೇ=ಆ ತವರ್ಗವು ವರುಣವರ್ಗವೆಂದು ನುಡಿಯಲು ಪಡುವುದು; ಪವರ್ಗಂ=ಪವರ್ಗವು, ಷಷ್ಠಮಾಖ್ಯಾತಂ=ಆಱನೆಯ ವರ್ಗವೆಂದು ನುಡಿಯಲುಪಟ್ಟುದು; ಮರುದ್ವರ್ಗಮುದಾಹೃತಂ=ಆ ಪವರ್ಗವು ವಾಯುವರ್ಗವೆಂದು ನುಡಿಯಲುಪಟ್ಟುದು.

ಶ್ಲೋಕ॥ ಸಪ್ತಮಂ ತು ಯವರ್ಗಂ ಸ್ಯಾತ್ ಕೌಬೇರಂ ವರ್ಗಮುಚ್ಯತೇ ।

ಟೀಕು॥ ಸಪ್ತಮಂತು=ಏಳನೆಯ ವರ್ಗವಾಯಿತ್ತಾದಡೆ, ಯವರ್ಗಂ ಸ್ಯಾತ್ ಯವರ್ಗವಹುದು, ಕೌಬೇರವರ್ಗಮುಚ್ಯತೇ=ಆ ಯವರ್ಗವು ಕುಬೇರ ವರ್ಗವೆಂದು ನುಡಿಯಲುಪಡುತ್ತಿಹುದು. ॥೧೪॥

ಶ್ಲೋಕ॥ ಅಷ್ಟಮಂ ತು ಶವರ್ಗಂ ಸ್ಯಾದೀಶವರ್ಗಮುದಾಹೃತಮ್ ।

ಟೀಕು॥ ಅಷ್ಟಮಂ ತು=ಎಂಟನೆಯ ವರ್ಗವಾಯಿತ್ತಾದಡೆ, ಶವರ್ಗಂ ಸ್ಯಾತ್=ಶವರ್ಗವಹುದು, ಈಶವರ್ಗಮುದಾಹೃತಂ=ಆ ಶವರ್ಗವು ಈಶವರ್ಗವೆಂದು ನುಡಿಯಲುಪಟ್ಟುದು. ॥೧೫॥

ಶ್ಲೋಕ॥ ಏತೇ ವೈ ಚಾಷ್ಟವರ್ಗಾಶ್ಚ ಸೃಷ್ಟಿಮಾರ್ಗಮುದಾಹೃತಮ್ ।

ಟೀಕು॥ ಏತೇ ವೈ ಚಾಷ್ಟವರ್ಗಾಶ್ಚ=ಈ ಪೂರ್ವಶ್ಲೋಕಂಗಳಲ್ಲಿ ಹೇಳಿದ ಸ್ವರಾಕ್ಷರ ೧೬, ಕಕಾರಾದಿ ಙಕಾರಂತ ೫, ಚಕಾರಾದಿ ಞ ಕಾರಾಂತ ೫, ಟಕಾರಾದಿ ಣಕಾರಾಂತ ೫, ತಕಾರಾದಿ ನಕಾರಾಂತ ೫, ಪಕಾರಾದಿ ಮಕಾರಾಂತ ೫, ಯಕಾರಾದಿ ವಕಾರಾಂತ ೪, ಶಕಾರಾದಿ ಕ್ಷಕಾರಾಂತ ೬, ಯಿಂತು ೫೧ ಅಕ್ಷರಂಗಳು ಕ್ರಮದಿಂದ ಇಂದ್ರ, ಅಗ್ನಿ, ಯಮ, ನಿರ್ಋತಿ, ವರುಣ, ವಾಯು, ಕುಬೇರ, ಈಶಾನರೆಂಬ ಪೆಸರು ಪಡದಿಪ್ಪೆಂಟು ವರ್ಗಂಗಳೂ, ಸೃಷ್ಟಿಮಾರ್ಗಮುದಾಹೃತಂ=ಸೃಷ್ಟಿಮಾರ್ಗವೆಂದು ಉದಾಹರಿಸಲುಪಟ್ಟುದು. ॥೧೬॥

ಶ್ಲೋಕ॥ ಸದಾಶಿವಸ್ಯ ಮಂತ್ರಾಸ್ತು ಪಂಚಬ್ರಹ್ಮಾಂಗಮೇವ ಚ ।
ಸೌಮ್ಯಮಂತ್ರಾಶ್ಚ ಸೃಷ್ಟಿಮಾರ್ಗೇಣ ಚೋದ್ಧತಾಃ ॥

ಟೀಕು॥ ಸದಾಶಿವಸ್ಯಮಂತ್ರಾಸ್ತು=ಸದಾಶಿವಮಂತ್ರಂಗಳೂ, ಪಂಚಬ್ರಹ್ಮ=ಸದ್ಯೋಜಾತಾ

ದೀಶಾನಾಂತವಾದ ಪಂಚಬ್ರಹ್ಮಮಂತ್ರಂಗಳು, ಅಂಗಮೇವ ಚ=ಹೃದಯಾದ್ಯಸ್ತ್ರಾಂತವಾದ ಷಡಂಗ ಮಂತ್ರಂಗಳೂ, ಸರ್ವೇ ಚ ಸೌಮ್ಯ ಮಂತ್ರಾಶ್ಚ=ಸಮಸ್ತವಾದ ಸೌಮ್ಯ ಮಂತ್ರಂಗಳೂ ಸೃಷ್ಟಿಮಾರ್ಗೇಣ ಚ=ಈ ವರ್ಣಸೃಷ್ಟಿಕ್ರಮದಿಂದವೆ, ಉದ್ಧತಾಸ್ಯುಃ= ಉದ್ಧರಿಸಲುಪಟ್ಟವಹವು. ॥೧೭॥

ಶ್ಲೋಕ॥ ಏವಂ ಸೃಷ್ಟಿಕ್ರಮಂ ಪ್ರೋಕ್ತಂ ಸಂಹಾರಂ ಚ ತತಃ ಶೃಣು ।

ಟೀಕು॥ ಎಲೆ ಷಣ್ಮುಖನೆ! ಈ ಪ್ರಕಾರದಿಂದ ಸೃಷ್ಟಿಕ್ರಮವು ಹೇಳಲುಪಟ್ಟುದು. ತತಃ= ಅದಱಿಂದ ಮುಂದೆ ಸಂಹಾರಂ ಚ=ಸಂಹಾರಕ್ರಮವನು, ಶೃಣು=ಕೇಳು. ಅಕಾರ ಮೊದಲು ಕ್ಷಕಾರ ಕಡೆಯಾದ ವರ್ಗಭೇದವು ಸೃಷ್ಟಿಮಾರ್ಗವೆಂದು ನಿರೂಪಿಸಿ, ಕ್ಷಕಾರ ಮೊದಲು ಅಕಾರ ಕಡೆಯಾದ ವರ್ಗಭೇದವು ಸಂಹಾರಕ್ರಮವೆಂದು ನಿರೂಪಿಸುತ್ತಿದ್ದಾನು. ॥೧೮॥

ಶ್ಲೋಕ॥ ಕ್ಷಕಾರಾದಿ ಅಕಾರಾಂತಂ ಸಂಹಾರಮಿತಿ ಕೀರ್ತಿತಮ್ ।
ಕ್ಷಕಾರಾದಿ ಯಕಾರಾಂತಂ ದಶಕಂ ಪ್ರಥಮಂ ವಿದುಃ ॥

ಟೀಕು॥ ಕ್ಷಕಾರಾದಿ ಅಕಾರಾಂತಂ=ಕ್ಷಕಾರವು ಮೊದಲಾಗಿ ಅಕಾರವು ಕಡೆಯಾದ ಅವರೋಹಣಾಕ್ಷರಂಗಳೂ, ಸಂಹಾರಮಿತಿ ಕೀರ್ತಿತಂ=ಸಂಹಾರ ವರ್ಗಕ್ರಮವೆಂದು ಹೇಳಲ್ಪಟ್ಟುದು, ಕ್ಷಕಾರಾದಿ ಯಕಾರಾಂತಂ=ಕ್ಷ ಳ ಹ ಸ ಷ ಶ ವ ಲ ರ ಯ ಎಂಬ ಕ್ಷಕಾರ ಮೊದಲು ಯಕಾರ ಕಡೆಯಾದ, ದಶಕಂ=ಹತ್ತಕ್ಷರವು, ಪ್ರಥಮಂ ವಿದುಃ=ಸಂಹಾರ ಕ್ರಮದ ಮೊದಲ ವರ್ಗವೆಂದಱಿವುದು. ॥೧೯॥

ಶ್ಲೋಕ॥ ಪಾರ್ಥಿವಂ ವರ್ಗಮಿತ್ಯುಕ್ತಂ ಮಕಾರಾದಿ ದಶಾಕ್ಷರಮ್ ।
ದ್ವಿತೀಯಂ ವರ್ಗಮಿತ್ಯುಕ್ತಂ ಹ್ಯಾಪೋವರ್ಗಮುದಾಹೃತಮ್ ॥

ಟೀಕು॥ ಪಾರ್ಥಿವಂ ವರ್ಗಮಿತ್ಯುಕ್ತಂ=ಮೊದಲವರ್ಗದ ಹತ್ತಕ್ಷರವೂ ಭೂವರ್ಗವೆಂದು ನುಡಿಯಲ್ಪಟ್ಟುದು. ಮಕಾರಾದಿ ದಶಾಕ್ಷರಂ=ಪೂರ್ವವರ್ಗದ ಅವರೋಹಣ ಕ್ರಮದ ಹಾಂಗೆ ಮಕಾರ ಮೊದಲಾಗಿ ತಕಾರ ಕಡೆಯಾದ ಹತ್ತಕ್ಷರವೂ, ದ್ವಿತೀಯ ವರ್ಗಮಿತ್ಯುಕ್ತಂ ಹಿ=ಎರಡನೆಯ ವರ್ಗವೆಂದು ನುಡಿಯಲ್ಪಟ್ಟುದು, ಆಪೋವರ್ಗಮುದಾಹೃತಂ=ಮಕಾರ ಮೊದಲಾಗಿ ತಕಾರ ಕಡೆಯಾದ ಆ ಹತ್ತಕ್ಷರವೂ ಆಪೋವರ್ಗವೆಂದು ಉದಾಹರಿಸಲ್ಪಟ್ಟುದು. ॥೨೦॥

ಶ್ಲೋಕ॥ ಣಕಾರಾದಿ ಚಕಾರಾಂತಂ ತೃತೀಯಂ ಚಾನಲಂ ವಿದುಃ ।
ಙಕಾರಾದಿ ಕಕಾರಾಂತಂ ಚತುರ್ಥಂ ಮಾರುತಂ ವಿದುಃ ॥

ಟೀಕು॥ ಣಕಾರಾದಿ ಚಕಾರಾಂತಂ=ಣಕಾರ ಮೊದಲಾಗಿ ಚಕಾರವೆ ಕಡೆಯಾದ ಹತ್ತಕ್ಷರವೂ, ತೃತೀಯಂ=ಮೂಱನೆಯ ವರ್ಗವು, ಅನಲಂ ವಿದುಃ=ಆ ದಶಾಕ್ಷರವೂ ಅಗ್ನಿವರ್ಗವೆಂದಱಿವುದು. ಙಕಾರಾದಿ ಕಕಾರಾಂತಂ=ಙಕಾರ ಮೊದಲಾಗಿ ಕಕಾರ ಕಡೆಯಾದ ಐದಕ್ಷರವೂ, ಚತುರ್ಥಂ=ನಾಲ್ಕನೆಯ ವರ್ಗವು; ಮಾರುತಂ ವಿದುಃ= ವಾಯುವರ್ಗವೆಂದಱಿವುದು. ॥೨೧॥

ಶ್ಲೋಕ॥ ಅಃಕಾರಾದಿ ಹ್ಯಕಾರಾಂತ ರುದ್ರಾಂತಂ ವ್ಯೋಮವರ್ಗಕಮ್ ।
ಏತೇ ವೈ ಪಂಚವರ್ಗಾಶ್ಚ ಸಂಹಾರಶ್ಚೇತಿ ಕೀರ್ತಿತಾಃ ॥

ಟೀಕು॥ ಅಃಕಾರಾದಿ ಅಕಾರಾಂತಂ ರುದ್ರಾಂತಂ=ಅಃಕಾರಮೊದಲು ಅಕಾರ ಕಡೆಯಾದ ಲಯಾಂತವು ವ್ಯೋಮವರ್ಗಕಂ=ಆಕಾಶವರ್ಗವೆನಿಸಿಕೊಂಬುದು. ಏತೇ ವೈ ಪಂಚ ವರ್ಗಾಶ್ಚ=ಪೂರ್ವಶ್ಲೋಕಂಗಳಲ್ಲಿ ಹೇಳಿದ ಪೃಥ್ವಿ ಅಪ್‌ತೇಜವಾಯ್ವಾಕಾಶ ಸಂಜ್ಞೆಯನುಳ್ಳ ಈ ಪಂಚವರ್ಗಂಗಳೂ, ಸಂಹಾರಶ್ಚೇತಿ ಕೀರ್ತಿತಾಃ=ಸಂಹಾರ ವರ್ಗಭೇದ ವರ್ಗಂ ಗಳೆಂದು ನುಡಿಯಲ್ಪಟ್ಟವು. ॥೨೨॥

ಶ್ಲೋಕ॥ ರುದ್ರಮಂತ್ರಾಣಿ ಸರ್ವಾಣಿ ಸಂಹಾರೇಣ ಸಮುದ್ಧರೇತ್ ।

ಟೀಕು॥ ಸರ್ವಾಣಿ ಚ ರುದ್ರಮಂತ್ರಾಣಿ=ಸಮಸ್ತಂಗಳಾದ ರುದ್ರಮಂತ್ರಂಗಳನೂ, ಸಂಹಾರೇಣ=ಸಂಹಾರಕ್ರಮದಿಂದ, ಸಮುದ್ಧರೇತ್=ಉದ್ಧರಿಸುವದು. ॥೨೩॥

ಶ್ಲೋಕ॥ ಏವಂ ತ್ರಿವರ್ಗಭೇದಾನಿ ಕೀರ್ತಿತಾನಿ ಸಮಾಸತಃ ।
ವರ್ಗಭೇದಮಿಂದಂ ಪ್ರೋಕ್ತಂ ವರ್ಣಾನಾಮನ್ಯಥ ಶೃಣು॥

ಟೀಕು॥ ಏವಂ=ಈ ಪ್ರಕಾರದಿಂದ, ತ್ರಿವರ್ಗಭೇದಾನಿ=ಸೃಷ್ಟಿಸ್ಥಿತಿಸಂಹಾರಂಗಳೆಂಬ ಮೂಱು ಭೇದ ವರ್ಗಂಗಳೂ, ಸಮಾಸತಃ=ಸಮಾಸದಿಂದ, ಕೀರ್ತಿತಾನಿ= ನುಡಿಯಲ್ಪಟ್ಟವು, ಇದಂ ವರ್ಗಭೇದಂ ಪ್ರೋಕ್ತಂ=ಈ ತ್ರಿವರ್ಗಭೇದವೆಲ್ಲವೂ ಲೇಸಾಗಿ ನುಡಿಯಲ್ಪಟ್ಟುದು, ಅಥ=ಅನಂತರವು, ವರ್ಣಾನಾಮಾನಿ=ಸೂಕ್ಷ್ಮ ಕರ್ಣಿಕೆಯಲ್ಲಿ ನ್ಯಸ್ತವಾಗಿದ್ದ ಮಕಾರ ಮೊದಲಾದ ವರ್ಣಂಗಳ ಪರ್ಯಾಯನಾಮಂಗಳನು ಶೃಣು=ಕೇಳು, ಎಲೆ ಷಣ್ಮುಖನೆ! ಶಿವನು ವರ್ಗತಮಂಗಳ ಭೇದವನು ಕುಮಾರಂಗೆ ನಿರೂಪಿಸಿ ಚಕ್ರಸ್ಥವಾಗಿಹ ವರ್ಣಂಗಳ ನಾಮಂಗಳನೂ ನಿರೂಪಿಸಿಹನು. ॥೨೪॥

ಶ್ಲೋಕ॥ ಚಕ್ರೇ ತು ಕರ್ಣಿಕಾದೀನಿ ವರ್ಣಾನಿ ಚ ಯಥಾ ಕ್ರಮಾತ್ ।
ವಕ್ಷ್ಯೇ ನಾಮಾನಿ ಸಂಕ್ಷೇಪಾತ್‌ಶೃಣು ತತ್ತ್ವಂ ಶಿವಾದಿಕಮ್ ।

ಟೀಕು॥ ಭೋ ಷಣ್ಮುಖ!=ಎಲೆ ಷಣ್ಮುಖನೆ! ಚಕ್ರೇ ತು=ಚಕ್ರದಲ್ಲಿಯ,

ಕರ್ಣಿಕಾದೀನಿ=ಕರ್ಣಿಕಾ ಬೀಜಮೊದಲಾದ, ವರ್ಣಾನಿ ಚ=ವರ್ಣಂಗಳನೂ, ನಾಮಾನಿ=ಆ ವರ್ಣಂಗಳ ಹೆಸರುಗಳನು, ಯಥಾಕ್ರಮಾತ್=ಯಥಾಕ್ರಮದಿಂದ, ಸಂಕ್ಷೇಪಾತ್=ಸಂಕ್ಷೇಪಮಾತ್ರದಿಂದ, ವಕ್ಷ್ಯೇ=ನಿರೂಪಿಸಿಹೆನು; ಶಿವಾದಿಕಂ ತತ್ತ್ವಂ= ಶಿವಾರ್ಣವು ಮೊದಲಾದ ವರ್ಣತತ್ತ್ವವನೂ, ಶೃಣು=ಕೇಳು, ಕರ್ಣಿಕಾ ಮಧ್ಯದಲ್ಲಿಹ ಶಿವಾಕ್ಷರ ಮಹಿಮಾಹ್ವಯಂಗಳನು ನಿರೂಪಿಸಿಹನು. ॥೨೫॥

ಶ್ಲೋಕ॥ ನಾದಂ ಗುಹ್ಯಂ ಪರಂ ಜೀವಂ ದೇಹೀ ಭೂತಂ ಚ ಪಂಚಮಮ್ ।
ಸಾಂತಂ ತತ್ತ್ವಾಂತ ಭೂತಾಂತಂ ಶಿವಾರ್ಣಂ ಶೂನ್ಯಮವ್ಯಯಮ್ ॥

ಟೀಕು॥ ನಾದಂ=ನಾದವೆಂದೂ, ಗುಹ್ಯಂ=ಗುಹ್ಯವೆಂದೂ, ಪರಂ=ಪರವೆಂದೂ, ಜೀವಂ=ಜೀವವೆಂದೂ, ದೇಹೀ=ದೇಹವೆಂದು, ಭೂತಂ ಚ=ಭೂತವೆಂದೂ, ಪಂಚಮಂ=ಪಂಚಮವೆಂದೂ ಸಾಂತಂ=ಸಾಂತವೆಂದೂ, ತತ್ತ್ವಾಂತಂ=ತತ್ತ್ವಾಂತ ವೆಂದೂ, ಭೂತಾಂತಂ=ಭೂತಾಂತವೆಂದೂ, ಶಿವಾರ್ಣಂ=ಶಿವಾಕ್ಷರವೆಂದೂ, ಶೂನ್ಯಂ=ಶೂನ್ಯವೆಂದೂ ಅವ್ಯಯಂ=ಅವ್ಯಯವೆಂದೂ, ಹೀಂಗೆ ತ್ರಯೋದಶನಾ ಮಂಗಳನುಳ್ಳದಾಗಿಹುದು. ಈ ತ್ರಯೋದಶನಾಮಂಗಳನು ನಿರ್ವಚಿಸುತ್ತಿದ್ದಾನು. ॥೨೬॥

ಶ್ಲೋಕ॥ ಸೂಕ್ಷ್ಮತ್ವಾದ್ಘೋಷರೂಪತ್ವಾನ್ನಾದಮಿತ್ಯಭಿಧೀಯತೇ ।
ಚರಾಚರಾದಿ ಭೂತೇಷು ಜೀವರೂಪಂ ಹೃದಿಸ್ಥಿತಮ್ ॥
ತಸ್ಮಾದ್ಗುಹ್ಯಮಿದಂ ಪ್ರೋಕ್ತಂ ಪರಂ ಭಾವಾತ್ಪರಂ ಸ್ಥಿತಮ್ ।

ಟೀಕು॥ ಸೂಕ್ಷ್ಮತ್ವಾತ್ ಅಸ್ಮಿನ್ ವಾತುಲೇ=ಈವಾತುಲಾಗಮದಲ್ಲಿಯ ಕಾಲಜ್ಞಾನದಲ್ಲಿ ಶುದ್ಧಪ್ರಾಸಾದ ಬೀಜವಾದಂಥ ಕುಂಡಲಿನೀಶಕ್ತಿ ತ್ರಿಭೇದವಾಗಿಪ್ಪುದಂ ನಿರೂಪಿಸಿಹೆನು. ॥೨೭॥

ಶ್ಲೋಕ॥ ಸ್ಥೂಲಶಬ್ದ ಇತಿಪ್ರೋಕ್ತಂ ಸೂಕ್ಷ್ಮಂ ಚಿಂತಾಮಯಂ ಭವೇತ್ ।
ಚಿಂತಾ ಯಾ ರಹಿತಂ ಯತ್ತತ್ಪರಂ ಪರಿಕೀರ್ತಿತಮ್ ॥

ಟೀಕು॥ ಸ್ಥೂಲ=ಸ್ಥೂಲಭೇದವು, ಶಬ್ದ ಇತಿಪ್ರೋಕ್ತಂ=ಉಚ್ಚಾರಣಕ್ಕೆ ಯೋಗ್ಯವೆಂದು ಹೇಳಲ್ಪಟ್ಟುದು. ಸೂಕ್ಷ್ಮಂ=ಸೂಕ್ಷ್ಮವೆಂಬ ನಾಮಭೇದವು ಚಿಂತಾಮಯಂ ಭವೇತ್= ನೆನಹಿನ ಸ್ವರೂಪವನುಳ್ಳದಹುದು. ಚಿಂತಾ ಯಾ ರಹಿತಂ=ನೆನಹಿನಿಂದ ತೊಲಗಿದ್ದುದು, ಯತ್=ಆವುದಾನೊಂದು ಶುದ್ಧಪ್ರಸಾದಬೀಜವುಂಟು, ತತ್=ಆ ಶೂನ್ಯ ವರ್ಣವು, ಪರಂ ಪರಿಕೀರ್ತಿತಂ=ಪರವೆಂದು ನುಡಿಯಲುಪಟ್ಟುದು; ಅದು ಕಾರಣ ಸೂಕ್ಷ್ಮತ್ವಾತ್= ಚಿಂತಾಸ್ವರೂಪವಹತನದಿಂದವೂ, ಘೋಷರೂಪತ್ವಾತ್=ಸಮಸ್ತ ತತ್ತ್ವಂಗಳ ಮೇಲೆ ಘೋಷಿಸುವ ಸ್ವರೂಪವಹತನದಿಂದವೂ, ನಾದಮಿತಿ=ನಾದವೆಂದು, ಅಭಿಧೀಯತೇ=

ನುಡಿಯಲುಪಡುತ್ತಿಹುದು, ಚರಾಚರಾದಿ ಭೂತೇಷು=ಜಂಗಮಸ್ಥಾವರಾದಿ ಭೂತಂಗಳಲ್ಲಿ, ಹೃದಿ=ಹೃದಯದಲ್ಲಿ, ಜೀವರೂಪಂ=ಜೀವರೂಪವಾಗಿ, ಸ್ಥಿತಂ= ಇರುತ್ತಿಹುದು. ತಸ್ಮಾತ್=ಅದು ಕಾರಣ, ಇದಂ=ಈ ಸಮಸ್ತವಾದ ದಳ ಭ್ರಾಮಕವಿಲ್ಲದೆ ಹೃದಯಸ್ಥವಾಗಿ ಜೀವ ರೂಪವಾದ ಈ ನಾದಬ್ರಹ್ಮವು, ಗುಹ್ಯಂ ಪ್ರೋಕ್ತಂ=ಆರಿಂದಲೂ ಅಱಿಯಬಾರದಾಗಿ ಗುಹ್ಯವೆಂದು ಹೇಳಲುಪಟ್ಟುದು. ಪರಂ ಭಾವಾತ್=ಹಾಂಗೆ ಜೀವ ರೂಪವಾಗಿರುತ್ತವೂ ಸರ್ವೋತ್ಕೃಷ್ಟವಹತನದಿಂದ, ಪರಸ್ಥಿತಂ=ಜನನ ಸ್ಥಿತಿಲಯಂ ಗಳನೈದುವ ಜೀವಾತ್ಮನಿಂದವೂ ಪರವಾಗಿರುತ್ತಿಹುದು. ॥೨೮॥

ಶ್ಲೋಕ॥ ಜೀವಶ್ಶಿವ ಇತಿಜ್ಞೇಯಸ್ತಸ್ಮಾಜ್ಜೀವಮಿತಿ ಸ್ಮೃತಮ್ ।
ಶಿವಾದ್ಯವನಿಪರ್ಯಂತಂ ದೇಹತ್ವಾದ್ದೇಹಿ ಚೋಚ್ಯತೇ ॥

ಟೀಕು॥ ಜೀವಶ್ಶಿವ ಇತಿ ಜ್ಞೇಯಃ ಕಾಲಜ್ಞಾನೇ=ಕಾಲಜ್ಞಾನದಲ್ಲಿ : ಬ್ರಹ್ಮವಿಷ್ಣುರುದ್ರಶ್ಚ ಇಂದ್ರ ಚಂದ್ರೋ ಬೃಹಸ್ಪತಿಃ॥ ಪ್ರಜಾಪತಿಸ್ತಥಾದಿತ್ಯಶುಕ್ರಸ್ಕಂಧೋ ಭೃಗುಸ್ತಥಾ। ಯೇಚಾಽನ್ಯೇ ಪ್ರಾಣಿನೋ ದೇವಾಃ ಸರ್ವೇ ಪ್ರೋಕ್ತಾ ಪ್ರಾಸಾದಜಾಃ॥ ನಿಷ್ಕಲ ಬ್ರಹ್ಮವೆಂಬ ಶುದ್ಧ ಪ್ರಾಸಾದಾರ್ಣವವು ಸಕಲವಾದುದಕ್ಕೆ ಉದಾಹರಿಸಿಹನು. ಬ್ರಹ್ಮ ವಿಷ್ಣು ರುದ್ರ ಇಂದ್ರ ಚಂದ್ರ ಬೃಹಸ್ಪತಿ ಪ್ರಜಾಪತಿ ಆದಿತ್ಯ ಶುಕ್ರ ಸ್ಕಂಧ ಭೃಗು ಮೊದಲಾದ ದೇವ ಋಷಿಯರು ಗಳೂ, ದಾನವ ಮಾನವಮೃಗ ಪಕ್ಷಿ ಪಾಠೀನಾದಿ ಸಮಸ್ತ ಪ್ರಾಣಿಗಳೂ ಶುದ್ಧಪ್ರಾಸಾದಾಕ್ಷರ ದೆಸೆಯಿಂದ ಹುಟ್ಟಿದವರು.

ಪರಶಿವಸಮುದ್ರೇಹರಿಸ್ಸರ್ವದೇವೇತ್ಯಾದಿ: ಶಿವನದೆಸೆಯಿಂದ ಹುಟ್ಟಿದ ಪ್ರಾಣಿಗಳು ಶಿವನೆಂದಱಿಯಬೇಕಾದುದು. ಹೇಂಗಯಾಯೆಂದಡೆ, ಶರಧಿಯೊಳಗೆ ಹುಟ್ಟಿದ ನೊರೆ ತೆರೆ ಬುದ್ಬುದಶೀಕರಾದಿಗಳನು ಶರಧಿಯೆಂದೇ ಕಾಂಬುದು. ಕಾಂಬಲ್ಲಿ ಭೇದವುಂಟು. ಶರಧಿಗಳುಳ್ಳ ಘನಗಂಭೀರತೆ ಫೇನಾದಿಗಳಿಗಿಲ್ಲಾಗಿ ಶಿವನಿಗುಳ್ಳ ಮಹತ್ತತೆ ಜೀವನಿಗಿಲ್ಲೆಂದಱಿವುದು. ಆ ದೇವರುಗಳು ತಾವು ಶ್ರೇಷ್ಠರುಗಳಾಗಿಹರು. ರುದ್ರಾಣುಗಳು ಮೊದಲಾದ ಸಕಲಾಣುಗಳೂ, ಶಿವನೆಂದುಕಾಂಬುದು. ಪರಿಪೂರ್ಣಭಾವ ಪರಿಪೂರ್ಣ ತಾನಾಗದಿದ್ದಡೆ ಶಿವನು ಪ್ರಾದೇಶಿಕನೆನಿಸುವನು. ಪರಿಪೂರ್ಣಪ್ರಾದೇಶಿಕತ್ವವು ಶಿವತತ್ತ್ವಕ್ಕೆ ಸಿದ್ಧವಾದ ಕಾರಣ, ಶಿವೋಜ್ಞೇಯ ಇತಿ=ಶಿವನು ಜೀವನೆಂದಱಿಯತಕ್ಕಾತನು. ತಸ್ಮಾತ್= ಅದು ಕಾರಣದಿಂದ, ಜೀವಮಿತಿಸ್ಮೃತಂ=ಜೀವನೆಂಬಭಿದಾನವು ಶುದ್ಧ ಪ್ರಾಸಾದಕ್ಕೆ ಉಂಟೆಂದು ನೆನೆಯಲ್ಪಟ್ಟುದು. ಶಿವಾದ್ಯವನಿಪರ್ಯಂತಂ=ಶೂನ್ಯತತ್ತ್ವ ಮೊದಲಾಗಿ ಭೂತತತ್ತ್ವವು ಕಡೆಯಾಗಿವುಳ್ಳ ಸಮಸ್ತತತ್ತ್ವವೂ, ದೇಹತ್ವಾತ್=ಆ ಶುದ್ಧ ವಸ್ತುವಿಂಗೆ ದೇಹವಹತನದಿಂದ, ದೇಹಿ ಚೋಚ್ಯತೇ=ದೇಹಿಯೆಂದು ನುಡಿಯಲು ಪಡುತ್ತಿಹುದು. ॥೨೯॥

ಶ್ಲೋಕ॥ **ಅಕಾಯತ್ವಾದಜೀವತ್ವಾತ್ಭೂತಂ ಚೇತಿ ಪ್ರಕೀರ್ತಿತಮ್ ।**
ತತ್ತ್ವಾದ್ಯೇನ ಕ್ರಮಾದ್ವ್ಯೋಮಂ ಪಂಚಭೂತತ್ವಾತ್ಪಂಚಮಮ್ ॥

ಟೀಕು॥ ಅಕಾಯತ್ವಾತ್=ದೇಹಭಾವವಿದ್ದು ದೇಹಭಾವವಿಲ್ಲದತನದಿಂದವೂ, ಅಜೀವತ್ವಾತ್=ಪೂರ್ವಶ್ಲೋಕಾರ್ಥದ ಜೀವತ್ವವೊಂದಾಗಿಹುದು. ಜೀವತ್ವತನಗಿಲ್ಲದ ದೆಸೆಯಿಂದವೂ, ಸದಸದ್ವಸ್ತುವಾದಕಾರಣ ಅಶುದ್ಧವಸ್ತು, ಭೂತಂಚೇತಿ ಪ್ರಕೀರ್ತಿತಂ= ಭೂತವೆಂದು ನುಡಿಯಲುಪಟ್ಟುದು, ಕ್ರಮಾತ್=ಕ್ರಮದಿಂದ ಸಂಭೂತ ತತ್ತ್ವಂಗಳಿಗೆ ಮೊದಲಾದುದರಿಂದ, ವ್ಯೋಮಂ=ವ್ಯೋಮವೆನಿಸಿಕೊಂಬುದು, ಪಂಚಭೂತತ್ವಾತ್=ಐದು ಪ್ರಕಾರವಾದ ಸದಾಶಿವತತ್ತ್ವವಹತನದಿಂದ, ಪಂಚಮಂ=ಪಂಚಮವೆನಿಸಿಕೊಂಬುದು. ॥೩೦॥

ಶ್ಲೋಕ॥ **ಸಕಾರಸ್ಯ ಪರಂ ತಸ್ಮಾತ್ಸಾನ್ತಂ ಚೇತಿ ಪ್ರಕೀರ್ತಿತಮ್ ।**
ತತ್ಕಕಲಾದಿ ಚ ಶಿವಾನ್ತತ್ವಾತ್ ತತ್ತ್ವಾನ್ತಮಿತಿ ಕೀರ್ತಿತಮ್ ॥

ಟೀಕು॥ ಸಕಾರಸ್ಯಪರಂ=ಸೃಷ್ಟಿಕ್ರಮದ ಶಕ್ತಿಬೀಜಕ್ಕೆ ಮೇಲೇರುತ್ತಿಹುದು. ತಸ್ಮಾತ್=ಅದು ಕಾರಣ, ಸಾನ್ತಂ ಚೇತಿ ಪ್ರಕೀರ್ತಿತಂ=ಸಾಂತವೆಂದು ಹೇಳಲುಪಟ್ಟುದು. ತತ್ಕಲಾದಿ ಚ=ನಿವೃತ್ತಿಕಲೆ ಮೊದಲಾಗಿ, ಶಿವಾನ್ತತ್ವಾತ್=ಶಿವತತ್ತ್ವವು ಕಡೆಯಾಗಿಹತನದಿಂದ ಸರ್ವತತ್ತ್ವಲಯಸ್ಥಾನವು ತಾನೆಯಹಕಾರಣ, ತತ್ವಾನ್ತಮಿತಿ ಕೀರ್ತಿತಂ=ತತ್ತ್ವಾಂತವೆಂದು ನುಡಿಯಲುಪಟ್ಟುದು. ॥೩೧॥

ಶ್ಲೋಕ॥ **ಪೃಥಿವ್ಯಾದಿ ಕ್ರಮಾದ್ವ್ಯೋಮಂ ಭೂಕ್ತಾನ್ತಮಿತಿ ಕೀರ್ತಿತಮ್ ।**
ಸರ್ವವ್ಯಾಪಿ ಪ್ರಭಾವತ್ವಾತ್ಶಿವಾರ್ಣಮಿತಿ ಕೀರ್ತಿತಮ್ ॥

ಟೀಕು॥ ಕ್ರಮಾತ್=ಪೃಥಿವ್ಯಾದಿ ಕ್ರಮದಿಂದ ಸಂಹೃತಿಯನ್ನೈದುವ, ಭೂಮ್ಯಾದಿಗಳಿಗೆ, ವ್ಯೋಮಂ=ಸರ್ವಲಯಸ್ಥಾನವಾದ ವ್ಯೋಮವೆನಿಸಿಕೊಂಬುದು, ಆದಕಾರಣ, ಭೂತಾನ್ತಮಿತಿ ಕೀರ್ತಿತಂ=ಭೂತಾನ್ತವೆಂದು ನುಡಿಯಲುಪಟ್ಟುದು. ಸರ್ವವ್ಯಾಪಿ ಪ್ರಭಾವತ್ವಾತ್=ವರ್ಣತ್ವಮೊದಲಾದ ಸಮಸ್ತ ತತ್ತ್ವಂಗಳನೂ ವ್ಯಾಪೀಕರಿಸಿಹ ಪ್ರಭಾವತ್ವದ ದೆಸೆಯಿಂದ, ಶಿವಾರ್ಣಮಿತಿ ಕೀರ್ತಿತಂ=ಶಿವಾರ್ಣವೆಂದು ಕೀರ್ತಿಸಲುಪಟ್ಟುದು. ॥೩೨॥

ಶ್ಲೋಕ॥ **ವಾಙ್ಮನೋತೀತ ಭಾವತ್ವಾಚ್ಛೂನ್ಯಂ ಚೇತಿ ಪ್ರಕೀರ್ತಿತಮ್ ।**
ಅಕ್ಷೀಣತ್ವಾನ್ಮಹಾಸೇನ ಹ್ಯವ್ಯಯಂ ಚೇತಿ ಕೀರ್ತಿತಮ್॥

ಟೀಕು॥ ವಾಙ್ಮನೋತೀತ ಭಾವತ್ವಾತ್=ವಾಙ್ಮನಸ್ಸುಗಳ ಮೀಱಿ ಭಾವಿಸಿಕೊಂಬು

ದಹತನದಿಂದ, ಶೂನ್ಯಂ ಚೇತಿ ಪ್ರಕೀರ್ತಿತಂ=ಶೂನ್ಯವೆಂದು ನುಡಿಯಲುಪಟ್ಟುದು. ಭೊ ಮಹಾಸೇನ! ಎಲೆ ಸೇನಾವಲ್ಲಭನೆ! ಅಕ್ಷೀಣತ್ವಾತ್=ಆ ಈ ಶಿವಾಕ್ಷರವೂ ಸಮಸ್ತ ಜಗತ್ತೂ ತನ್ನಿಂದ ಹುಟ್ಟಿದಡೆ ತಾನು ಕಿರಿದಾಗದು, ಸಮಸ್ತ ಜಗತ್ತು ತನ್ನಲ್ಲಿ ಅಡಗಿದ್ದಡೆ ತಾನು ಹೆಚ್ಚದು, ಸಮಸ್ತ ಜಗತ್ತು ಸ್ಥಿರಮನೈದಿದಾಗ ತಾನು ವ್ಯಾಪಾರಿಯಲ್ಲ ಹಾಂಗೆ ಕ್ಷಯವೃದ್ಧಿಯಿಲ್ಲದೆ ಸದೋದಯದೆಸೆಯಿಂದ, ಅವ್ಯಯಂಚೇತಿ ಕೀರ್ತಿತಂ=ಅವ್ಯಯ ವೆಂದು ಕೀತಿಸಲುಪಟ್ಟುದು. ॥೩೩॥

ಶ್ಲೋಕ॥ ಏತೇ ಪರ್ಯಾಯನಾಮಾನಿ ಹಕಾರಸ್ಯಾಭಿಧೀಯತೇ ।

ಟೀಕು॥ ಏತೇ=ಈ ಪೂರ್ವ ಶ್ಲೋಕಂಗಳ ಶಬ್ದಾರ್ಥಂಗಳೆಲ್ಲವೂ, ಹಕಾರಸ್ಯ=ಸೂಕ್ಷ್ಮ ಕರ್ಣಿಕಾ ಬೀಜವಪ್ಪ ಹಕಾರಕ್ಕೆ, ಪರ್ಯಾಯನಾಮಾನಿ= ಪರ್ಯಾಯನಾಮಂಗಳಾಗಿ, ಅಭಿಧೀಯತೇ=ಬೇಱೆ ಬೇಱೆ ಹೇಳಲುಪಡುತ್ತಿಹುದು.

ಶ್ಲೋಕ॥ ಕರ್ಣಿಕಾಬೀಜಮೇವೋಕ್ತಂ ಕೇಸರಾಣಿ ತಥೋಚ್ಯತೇ ।

ಟೀಕು॥ ಏವಂ ಕರ್ಣಿಕಾಬೀಜಂ ಉಕ್ತಂ=ಈ ಪ್ರಕಾರದಿಂದ ಕರ್ಣಿಕಾ ಬೀಜವು ಹೇಳಲ್ಪಟ್ಟುದು, ತಥಾ ಕೇಸರಾಣಿ ಉಚ್ಯತೇ=ಹಾಂಗೆ ಕೇಸರಂಗಳೂ ಹೇಳಲುಪಟ್ಟುದು, ಚತುರ್ದಳದಲ್ಲಿಹ ಸಕಾರಾದಿ ಚತುರಕ್ಷರಂಗಳ ಪರ್ಯಾಯ ನಾಮಂಗಳ ನಿರೂಪಿಸಿಹೆನು. ॥೩೪॥

ಶ್ಲೋಕ॥ ಪ್ರವಕ್ಷ್ಯೇ ಕೇಸರಾಣಾಂ ಚ ಚತುಷ್ಪತ್ರೇಷು ವರ್ಣಕಾನ್ ।

ಆಧಾರಶಕ್ತಿ ಕಾರ್ಯಂ ಚ ಪರಂಬಿಂದುರಿತಿಸ್ಮೃತಃ ।
ಏತೇ ಪಞ್ಚನಾಮಾನಿ ಬಿಂದು ಪರ್ಯಾಯ ವಾಚಕಾಃ ॥

ಟೀಕು॥ ಕೇಸರಾಣಾಂಚ=ಸೂಕ್ಷ್ಮಕರ್ಣಿಕೆಯ ಸುತ್ತಲು ಇಹ ಕೇಸರಂಗಳ, ಚತುಷ್ಪತ್ರೇಷು=ನಾಲ್ಕು ದಳಂಗಳಲ್ಲಿರುವ, ವರ್ಣಕಾನ್=ವರ್ಣಂಗಳನು, ಪ್ರವಕ್ಷ್ಯೇ= ನಿರೂಪಿಸಿಹೆನು. ಆಧಾರ ಶಕ್ತಿ ಕಾರ್ಯಂ ಚ ಪರಂಬಿಂದುರಿತಿ ಸ್ಮೃತಃ=ಆಧಾರವೆಂದು, ಶಕ್ತಿಯೆಂದು, ಕಾರ್ಯವೆಂದು, ಪರವೆಂದು, ಬಿಂದುವೆಂದು, ಸಕಾರದ ಪರ್ಯಾಯ ವಾಚಕಂಗಳು, ಪಞ್ಚನಾಮಾನಿ=ಐದು ಹೆಸರುಗಳಾಗಿಹವು. ಪೂರ್ವದಳದ ಅಕ್ಷರ ಹೇಳಲುಪಟ್ಟುದು. ದಕ್ಷಿಣದಳದಕ್ಷರ ಹೇಳಲುಪಡುವದು:

ಶ್ಲೋಕ॥ ಅಕಾರಮಾತ್ಮಬೀಜಂಚ ದೇಹಿ ಕ್ಷೇತ್ರಜ್ಞ ಭೋಗಿನಃ
ಏತೇ ವೈ ಪಞ್ಚನಾಮಾನಿ ಅಕಾರಸ್ಯಾಭಿಧೀಯತೇ॥

ಟೀಕು॥ ಅಕಾರಮಾತ್ಮ ಬೀಜಂ ಚ ದೇಹಿ ಕ್ಷೇತ್ರಜ್ಞ ಭೋಗಿನಃ=ಅಕಾರವೆಂದು, ಆತ್ಮಬೀಜವೆಂದು, ದೇಹಿಯೆಂದು ಕ್ಷೇತ್ರನೆಂದು, ಭೋಗಿಯೆಂದೂ, ಏತೇ ವೈ=ಈ ಪರ್ಯಾಯ ವಾಚಕಂಗಳು, ಪಞ್ಚನಾಮಾನಿ=ಐದು ನಾಮಂಗಳಾಗಿ, ಅಕಾರಸ್ಯ= ಅಕಾರಕ್ಕೆ, ಅಭಿಧೀಯತೇ=ಹೇಳಲುಪಡುತ್ತಿಹವು. ದಕ್ಷಿಣದ ವರ್ಣ ಹೇಳಲು ಪಟ್ಟುದು. ಪಶ್ಚಿಮದಳದ ವರ್ಣ ಹೇಳಲುಪಡುತ್ತಿಸುದು. ॥೩೮॥

ಶ್ಲೋಕ॥ ಐಕಾರಂಚ ಶಿವಾಧೇಯಂ ಪರಂ ನಾದಾತ್ಮಮೇವ ಚ ।
ಏತೇ ವೈ ಪಞ್ಚನಾಮಾನಿ ನಾದಪರ್ಯಾಯವಾಚಕಾಃ ॥

ಟೀಕು॥ ಐಕಾರಂಚ ಶಿವಾಧೇಯ ಪರಂ ನಾದಾನ್ತಮೇವ ಚ=ಐಕಾರವೆಂದು, ಶಿವನೆಂದು, ಆಧೇಯವೆಂದು, ಪರವೆಂದು, ನಾದಾಂತವೆಂದೂ, ಏತೇ ವೈ ಪಞ್ಚನಾಮಾನಿ=ಈ ಐದು ನಾಮಂಗಳೂ, ನಾದ ಪರ್ಯಾಯವಾಚಕಾಃ=ಸೂಕ್ಷ್ಮನಾಮವೆನಿಸುವ ಐಕಾರದ ವಾಚಕಂಗಳು. ಪಶ್ಚಿಮದಳ ವರ್ಣ ಹೇಳಲುಪಟ್ಟುದು. ॥೩೯॥

ಉತ್ತರ ಪತ್ರವರ್ಣಹೇಳಲ್ಪಡುವುದು.

ಶ್ಲೋಕ॥ ವಿದ್ಯಾಬೀಜಂ ಕ್ಷಕಾರಂ ಚ ಕೂಟವರ್ಣಂ ತಥೈವ ಚ ।
ವರ್ಗಾನ್ತಂ ದ್ರಾವಪಞ್ಚೈತೇ ಕ್ಷಕಾರಸ್ಯಾಭಿಧೀಯತೇ ॥

ಟೀಕು॥ ವಿದ್ಯಾಬೀಜಂ=ವಿದ್ಯಾಬೀಜವೆಂದು, ಕ್ಷಕಾರವೆಂದು, ಕೂಟವರ್ಣವೆಂದು, ತಥೈವ ಚ=ಹಾಂಗೆ, ವರ್ಗಾಂಕವೆಂದೂ, ದ್ರಾವವೆಂದೂ, ಏತೇ ಪಞ್ಚ=ಈ ಐದು ನಾಮಂಗಳೂ, ಕ್ಷಕಾರಸ್ಯ=ಕ್ಷಕಾರಕ್ಕೆ, ಅಭಿಧೀಯತೇ=ಬೇಱೆ ಬೇಱೆ ಹೇಳಲು ಪಡುತ್ತಿಹುದು.

ಶ್ಲೋಕ॥ ಬಿಂದುರಾದಿ ಚತುರ್ಥಾನಿ ಕರ್ಣಿಕಾಬೀಜಮಿಷ್ಯತೇ ।

ಟೀಕು॥ ಸಕಾರ ಮೊದಲಾದ ನಾಲ್ಕಕ್ಷರವು ಕರ್ಣಿಕಾಬೀಜವೆಂದು ಇಚ್ಛಿಸಲು ಪಡುತ್ತಿಹುದು. ಕರ್ಣಿಕಾಬೀಜಂಗಳು ಹೇಳಲುಪಟ್ಟುವು. ಪ್ರಥಮಾ ವರ್ಣದಲ್ಲಿಯ ಮೂಡಲಾದಿಯಾಗಿ ಈಶಾನಾಂತವಾದ ದಳಂಗಳಲ್ಲಿಹ ಸಕಾರಾದಿ ಮಕಾರಾಂತವಾದ ಅಷ್ಟಾಕ್ಷರಂಗಳ ಪರ್ಯಾಯನಾಮಂಗಳೂ ಹೇಳಲುಪಟ್ಟವು. ॥೪೧॥

ಶ್ಲೋಕ॥ ಸಕಾರಂ ಶಕ್ತಿಬೀಜಂ ಸ್ಯಾತ್ಪ್ರಥಮಂ ಶುಕ್ಲಧಾತುಕಮ್ ।
ಷಕಾರಂ ದ್ವಿತೀಯಂ ಭಾನುರವಿರ್ಮಜ್ಜಾ ದಿವಾಕರಃ ॥

ಟೀಕು॥ ಸಕಾರಂ=ಸಕಾರವು, ಶಕ್ತಿಬೀಜಂಸ್ಯಾತ್=ಶಕ್ತಿ ಬೀಜವಹುದು. ಪ್ರಥಮಂ=

ಶಿವಮಂತ್ರೋದ್ಧಾರಣಕ್ಕೆ ಪ್ರಥಮವೆನಿಸಿಕೊಂಬುದು. ಶುಕ್ಲಧಾತುಕಂ=ಶುಕ್ಲಧಾತುವೆಂದೂ ಹೆಸರು. ಷಕಾರಂ=ಷಕಾರವು, ದ್ವಿತೀಯಂ=ಸ್ಥಿತಿಮಾರ್ಗದಿಂದ ಶಿವಮಂತ್ರಗಳನುದ್ಧರಿಸುವಡೆ ದ್ವಿತೀಯವೆನಿಸಿಕೊಂಬುದು, ಭಾನುಃ=ಭಾನುವೆಂದು, ರವಿಃ=ರವಿಯೆಂದೂ, ದಿವಾಕರಃ=ದಿವಾಕರನೆಂದೂ, ಸೂರ್ಯಪರ್ಯಾಯ ನಾಮಂಗಳೆಲ್ಲವೂ ಷಕಾರಕ್ಕೆ ವರ್ತಿಸುವವು. ಮಜ್ಜಾ=ಮಜ್ಜೆಯೆಂಬ ಧಾತುವೆನಿಸಿ ಕೊಂಬುದು. ॥೪೨॥

ಶ್ಲೋಕ॥ ಶಕಾರಂ ಶ್ರೀರಮಾಲಕ್ಷ್ಮೀರಸ್ಥಿ ಚ ತ್ರಿತಯಂ ವಿದುಃ ।
ವಕಾರಂ ವರುಣಂ ಹ್ಯಾಪಶ್ಚತುರ್ಥಂ ಮೇದಃ ಈರಿತಮ್ ॥

ಟೀಕು॥ ಶಕಾರಂ=ಶಕಾರವು, ಶ್ರೀ=ಶ್ರೀಯೆಂದು, ರಮಾ=ರಮೆಯೆಂದು, ಲಕ್ಷ್ಮೀಃ=ಲಕ್ಷ್ಮಿಯೆಂದು ಹೆಸರುವೆತ್ತಿಹುದು, ಲಕ್ಷ್ಮಿಪರ್ಯಾಯಂಗಳೂ ಶಕಾರಕ್ಕೆ ವರ್ತಿಸುವುವು, ಅಸ್ಥಿಚ=ಅಸ್ಥಿಯೆಂಬಧಾತುವೆನಿಸಿಕೊಂಬುದು, ತ್ರಿತಯಂ ವಿದುಃ=ಸ್ಥಿತಿಮಾರ್ಗಕ್ಕೆ ಮೂಱನೆಯ ವರ್ಗವೆಂದಱಿವುದು, ವಕಾರಂ=ವಕಾರವು, ವರುಣಂ=ವರುಣನೆಂದೂ, ಆಪಃ=ಅಪ್ಪೆಂದೂ, ಪೆಸರುಪಡೆದಿಹುದು, ಜಲಪರ್ಯಾಯನಾಮಂಗಳೂ ವಕಾರಕ್ಕೆ ವರ್ತಿಸುವವು. ಚತುರ್ಥಂ=ಸ್ಥಿತಿಕ್ರಮಕ್ಕೆ ನಾಲ್ಕನೆಯವರ್ಣವಹುದು, ಮೇದ ಈರಿತಮ್=ಮೇದಸ್ಸಿನಲ್ಲಿಹುದಾಗಿ ಮೇದಸ್ಸೆನಿಸಿಕೊಂಬುದು. ॥೪೩॥

ಶ್ಲೋಕ॥ ಲಕಾರಂ ಪಞ್ಚಮಂ ಚೈಂದ್ರಂ ಮಾಂಸಂ ಚ ಧರಣೀ ಮಹೀ ।
ರಕಾರಂ ಚಾನಲಂ ರಕ್ತಂ ಷಷ್ಠಂ ಕ್ರೋಧಶ್ಚ ಪಾವಕಃ ॥

ಟೀಕು॥ ಲಕಾರಂ=ಲಕಾರವು, ಪಂಚಮಂ=ಸ್ಥಿತಿಮಾರ್ಗಕ್ಕೆ ಅಯಿದನೆ ವರ್ಣವು, ಐದ್ರಂ=ಇಂದ್ರಬೀಜವೆನಿಸಿಕೊಂಬುದು, ಮಾಂಸಂ=ಮಾಂಸನಾಮಧಾತುವನುಳ್ಳದು; ಧರಣೀ=ಧರಣಿಯೆಂದು, ಮಹೀ=ಮಹಿಯೆಂದೂ ಹೀಂಗೆ, ಪೃಥಿವಿಯ ಪರ್ಯಾಯ ನಾಮಂಗಳೆಲ್ಲವೂ ಲಕಾರಕ್ಕೆ ವರ್ತಿಸುವವು. ರಕಾರಂ ಚ=ರಕಾರವು, ರಕ್ತಂ=ರಕ್ತಧಾತುವೆನಿಸಿಕೊಂಬುದು. ಷಷ್ಠಂ=ಸ್ಥಿತಿಕ್ರಮಕ್ಕೆ ಆಱನೆಯ ವರ್ಣವು; ಕ್ರೋಧಶ್ಚ=ಕ್ರೋಧವೆಂದು ನಾಮವುಂಟು, ಅನಲಂ=ಅನಲನೆಂದೂ ನಾಮವುಂಟು; ಪಾವಕಂ=ಪಾವಕನೆಂದು ಅಗ್ನಿಯ ಪರ್ಯಾಯ ನಾಮಂಗಳೆಲ್ಲವೂ ರಕಾರಕ್ಕೆ ವರ್ತಿಸುವುವು. ॥೪೪॥

ಶ್ಲೋಕ॥ ಯಕಾರಂ ಚಾನಿಲಂ ವಾಯುಸ್ಸಪ್ತಮಂ ಮಾರುತಸ್ತಥಾ ।
ಮಕಾರಂ ಕಾಲಮೃತ್ಯುಶ್ಚಾಷ್ಟಮಂ ಮೃತ್ಯುಕಾರಕಮ್ ॥

ಟೀಕು॥ ಯಕಾರಂ=ಯಕಾರವು, ಅನಿಲಂ=ವಾಯುಬೀಜವು, ಸ್ನಾಯುಃ=ಸ್ನಾಯುವೆಂಬ

ಧಾತುವೆನಿಸಿಕೊಂಬುದು. ಸಪ್ತಮಂ=ಸ್ಥಿತಿಮಾರ್ಗಕ್ಕೆ ಏಳನೆಯವರ್ಣವು, ತಥಾ=ಹಾಂಗೆ, ಮಾರುತಃ=ಮಾರುತವೆನಿಸುವುದು, ವಾಯುವಿನ ಪರ್ಯಾಯ ನಾಮಂಗಳು ಯಕಾರಕ್ಕೆ ವರ್ತಿಸುವವು. ಮಕಾರಂ=ಮಕಾರವು, ಕಾಲಮೃತ್ಯುಶ್ಚ=ಕಾಲಮೃತ್ಯುವೆಂಬ ಹೆಸರನುಳ್ಳದು. ಅಷ್ಟಮಂ=ಸ್ಥಿತಿವರ್ಗಕ್ಕೆ ಎಂಟನೆಯಕ್ಷರದ ಸಂಜ್ಞೆಯ ಪಡವುದು. ಮೃತ್ಯುಕಾರಕಂ=ಮೃತ್ಯುಕಾರಕವೆಂದು ನಾಮವನುಳ್ಳದು.

ಶ್ಲೋಕ॥ ಏತೇ ಪ್ರಥಮವರ್ಗಸ್ಯ ತ್ವೇವಂ ನಾಮ ಪ್ರಕೀರ್ತಿತಾಃ ।

ಟೀಕು॥ ಏವಂ=ಈ ಪ್ರಕಾರದಿಂದ, ಪ್ರಥಮವರ್ಗಸ್ಯತು=ಸ್ಥಿತಿವರ್ಗದ ತ್ರಿಭೇದಗಳೊಳಗಣ ಮೊದಲ ವರ್ಗವೆನಿಸಿಹ ಪ್ರಥಮಾವರಣದ, ಏತೇನಾಮಪ್ರಕೀರ್ತಿತಾಃ=ಅಷ್ಟಾಕ್ಷರಂಗಳ ಈ ನಾಮ ಪರ್ಯಾಯನಾಮಂಗಳೂ ಹೇಳಲ್ಪಟ್ಟವು. ॥೪೬॥

ಶ್ಲೋಕ॥ ದ್ವಿತೀಯಂ ತು ಕಲಾಜ್ಞೇಯಂ ತತ್ಕಲಾಧ್ಯಕ್ಷರಂ ಶೃಣು ॥

ಟೀಕು॥ ಭೋ ಷಣ್ಮುಖ!=ಎಲೆ ಷಣ್ಮುಖನೆ!, ದ್ವಿತೀಯಂ ತು=ಎರಡನೆಯ ವರ್ಗವೆನಿಸುವ, ಷೋಡಶದಳಂಗಳನುಳ್ಳ ಮಧ್ಯಾವರಣವಾಯಿತ್ತಾದಡೆ, ಕಲಾಜ್ಞೇಯಂ=ಷೋಡಶ ಕಲಾವರ್ಣಂಗಳನುಳ್ಳ ಆವರಣವೆಂದಱಿಯಬೇಕಾದುದು. ತತ್=ಆ ಮಧ್ಯಾವರಣದಲ್ಲಿಹ, ಕಲಾಧ್ಯಕ್ಷರಂ=ಷೋಡಶಾಕ್ಷರಂಗಳ ಮೊದಲಕ್ಷರವಾದ ಅಕಾರದ ಪರ್ಯಾಯದ ನಾಮಂಗಳನು ಹೇಳಿಹನು. ॥೪೭॥

ಶ್ಲೋಕ॥ ಆದಿಬೀಜಂ ಚ ವರ್ಣಾದಿಃ ವರ್ಗಾದಿಶ್ಚ ಕಲಾದಿ ಚ ।

ಟೀಕು॥ ಆದಿಬೀಜಂ ಚ=ಆದಿಬೀಜವೆಂದೂ, ವರ್ಣಾದಿ=ವರ್ಣಾದಿಯೆಂದೂ, ವರ್ಗಾದಿಶ್ಚ=ವರ್ಗಾದಿಯೆಂದೂ, ಕಲಾದಿಚ=ಕಲಾದಿಯೆಂದೂ, ಸ್ವರಾದಿಶ್ಚೈವ=ಸ್ವರಾದಿಯೆಂದೂ, ಮಾತ್ರಾದಿ ಚ=ಮಾತ್ರಾದಿಯೆಂದೂ, ಆದಿ ಪ್ರಕೃತಿರೇವ ಚ=ಆದಿ ಪ್ರಕೃತಿಯೆಂದೂ; ॥೪೮॥

ಶ್ಲೋಕ॥ ಜೀವಾದಿಶ್ಚ ಕಲಾಮಾತ್ರಾ ಚಾದಿಶ್ಚೈವ ಸ್ವರಸ್ತಥಾ ।
ಏತೇ ಪರ್ಯಾಯ ನಾಮಾನಿ ಜ್ಞಾತ್ವಾ ಮಂತ್ರಾನ್ ಸಮುದ್ಧರೇತ್ ॥

ಟೀಕು॥ ಜೀವಾದಿಶ್ಚ=ಜೀವಾದಿಯೆಂದೂ, ಕಲಾ=ಕಲೆಯೆಂದೂ, ಮಾತ್ರಾ=ಮಾತ್ರೆಯೆಂದೂ, ಆದಿಶ್ಚೈವ=ಆದಿಯೆಂದೂ, ತಥಾ ಚ=ಹಾಂಗೆ, ಸ್ವರಃ=ಸ್ವರವೆಂದೂ, ಹೀಂಗೆ ಗುಣಾನಾಮಂಗಳಾದ, ಏತೇ ಪರ್ಯಾಯ ನಾಮಾನಿ=ಈ ಅಕಾರದ ಪರ್ಯಾಯದ ನಾಮಂಗಳನೂ, ಗ್ರಂಥಭಾರವಾದುದೆಂದನುಕ್ತವಾದ ಶೇಷಾಕ್ಷರ ಬಹಿರಾವರಣಾಕ್ಷರಂಗಳ

ಸಮಸ್ತ ಮಂತ್ರಶಾಸ್ತ್ರಂಗಳಲ್ಲಿದ್ದ ಪರ್ಯಾಯ ನಾಮಂಗಳನೂ, ಜ್ಞಾತ್ವಾ=ಮಂತ್ರೋದ್ಧಾರ ಪ್ರವೀಣನಾದಾತನಜಿದು, ಮಂತ್ರಾನ್=ಶಿವಮಂತ್ರಾದಿಮಂತ್ರಂಗಳನು, ಸಮುದ್ಧರೇತ್= ಉದ್ಧರಿಸುವದು. ॥೪೯॥

ಶ್ಲೋಕ॥ ವರ್ಗಭೇದಮಿದಂ ಪ್ರೋಕ್ತಂ ಮನ್ತ್ರಭೇದಮಥ ಶೃಣು ।

ಟೀಕು॥ ಇದಂವರ್ಗಭೇದಂ ಪ್ರೋಕ್ತಂ ಮಂತ್ರಭೇದಮಥ ಶೃಣು=ವರ್ಗಭೇದವು ಹೇಳಲುಪಟ್ಟುದು. ಅನಂತರದಲಿ ಎಲೆ ಕುಮಾರನೆ! ಮಂತ್ರಭೇದವನು ಕೇಳು. ॥೫೦॥

ಇತಿ ವಾತುಲತನ್ತ್ರೇ ಶುದ್ಧಾಖ್ಯೇ ಸಹಸ್ರ ಗ್ರಂಥಸಂಹಿತಾಯಾಂ
ಶ್ರೀ ಮಲ್ಲಿಕಾರ್ಜುನೇನ ಕರ್ಣಾಟಭಾಷಾ ವಿಮೃತೋ
ವರ್ಗಭೇದೋ ನಾಮ ಚತುರ್ಥಃ ಪಟಲಃ

❖ ❖ ❖

ಪಂಚಮಃ ಮಂತ್ರಭೇದಪಟಲಃ

ಶಾ॥ವಿ॥ವೃ॥ ಯೋ ಮನ್ತ್ರೋಽನ್ತರದಿವ್ಯಯೋಗನಿರತೈರ್ಭಾವ್ಯಸ್ಸತಾಂ ಹೃತ್ಸ್ಥಲೇ ।
ತಾರಾಗ್ರೇ ಶಿವಲಿಂಗಮೂರ್ಧ್ನಿವಿಲಸಚ್ಚಕ್ರಾನ್ತರಾಲೇ ಸ್ಥಿತಃ ॥
ಸರ್ವೈರಾತ್ಮಭಿರಾನನೇಷು ಸತತಂ ಜಪ್ಯಃ ಸ್ವಶಕ್ತ್ಯಾಯುತಮ್ ।
ಮನ್ಯೇ ತಂ ವಿಪರೀತಜಪ್ಯಮನಘಂ ಮನ್ತ್ರಂ ಮಹಾಸಿದ್ಧಿದಮ್ ॥ ॥೧॥

ಪರಮೇಶ್ವರನು ಶಿವ ಮಂತ್ರಾದಿಗಳನುದ್ಧರಿಸುವ ಪ್ರಕಾರವನು ಆರೋದ್ಧಕವಾದ ಮಂತ್ರಗಳ ಫಲಪ್ರದವನು ಯೋಗಂಗಳನೂ ನಿರೂಪಿಸಿಹನು.

ಶ್ಲೋಕ॥ ಅಥಾತಸ್ಸಂಪ್ರವಕ್ಷ್ಯಾಮಿ ಮನ್ತ್ರಭೇದಮಿದಂ ಪರಮ್ ।
ಭುಕ್ತಿದಂ ಮುಕ್ತಿದಂ ಚೈವ ಸರ್ವಾಕಾಮಾರ್ಥ ಸಿದ್ಧಿದಮ್ ॥

ಟೀಕು॥ ಅಥ=ಅನಂತರದಲ್ಲಿ, ಅತಃ=ಈ ವರ್ಗ ಪಟಲದಿಂದಂ ಮೇಲೆ, ಪರಂ=ಉತ್ಕೃಷ್ಟ ವಾದ, ಮಂತ್ರಭೇದಮಿದಂ=ಮಂತ್ರಭೇದಂಗಳ ವಿಧಿಯನು, ಸಂಪ್ರವಕ್ಷ್ಯಾಮಿ=ಲೇಸಾಗಿ ನಿರೂಪಿಸುವೆನು, ಆಮಂತ್ರ ವಿಧಾನವು, ಭುಕ್ತಿದಂ=ಇಹದಲ್ಲಿಯ ಭುಕ್ತಪ್ರದವಾಗಿಹುದು, ಮುಕ್ತಿದಂ ಚೈವ=ಪರದಲ್ಲಿಯೂ ಮುಕ್ತಿಯ ಕೊಡುವುದು, ಸರ್ವಕಾಮಾರ್ಥ ಸಿದ್ಧಿದಂ=ಸಮಸ್ತ ಬಯಕೆಗಳ ಪ್ರಯೋಜನಸಿದ್ಧಿಗಳನು ಕೊಡುವುದು. ॥೨॥

ಶ್ಲೋಕ॥ ಮನ್ತ್ರಂತು ದೇವತಾರೂಪಂ ಮನ್ತ್ರರೂಪಮಿದಂ ಜಗತ್ ।
ಪರಾರ್ಧಕೋಟಿಮನ್ತ್ರಾಶ್ಚ ಶಿವವಕ್ತ್ರಾದ್ವಿನಿರ್ಗತಾಃ ॥

ಟೀಕು॥ ಮಂತ್ರಂ ತು=ಮಂತ್ರವಾಯಿತ್ತಾದಡೆ, ದೇವತಾರೂಪಂ=ಸಮಸ್ತ ದೇವತಾಸ್ವ ರೂಪವು, ಮಂತ್ರರೂಪಮಿದಂ ಜಗತ್=ಈ ಜಗತ್ತೆಲ್ಲವೂ ಮಂತ್ರಸ್ವರೂಪವಾಗಿಹುದು, ಪರಾರ್ಧಕೋಟಿ ಮಂತ್ರಾಶ್ಚ=ಅಂಥಾ ದೇವತಾರೂಪ ಜಗದ್ರೂಪವಾಗಿಹ ಮಂತ್ರಂಗಳೂ ಪರಾರ್ಧ ಕೋಟಿ ಮಂತ್ರಂಗಳುಂಟು, ಆ ಪರಾರ್ಧ ಕೋಟಿ ಮಂತ್ರಂಗಳೂ, ಶಿವವಕ್ತ್ರಾದ್ವಿ ನಿರ್ಗತಾಃ=ನಾದಬ್ರಹ್ಮವಾದ ಪರಮೇಶ್ವರನ ಮುಖದತ್ತಣಿಂದ ಹೊಱವಂಟವಾಗಿ ಪ್ರವರ್ತಿಸುತ್ತಿಹವು. ॥೩॥

ಶ್ಲೋಕ॥ ಕರ್ಷಣಾದಿಕ್ರಿಯಾಸ್ಸರ್ವಾಃ ಮನ್ತ್ರೇಣೈವ ಪ್ರಕೀರ್ತಿತಾಃ ।
ತಸ್ಮಾನ್ಮನ್ತ್ರಃ ಕ್ರಿಯಾರ್ಥತ್ವಾದ್ವಿನಾ ಮನ್ತ್ರಂ ಕ್ರಿಯಾ ನ ಚ ॥

ಟೀಕು॥ ಸರ್ವಾಃ=ಸಮಸ್ತವಾದ, ಕರ್ಷಣಾದಿ ಕ್ರಿಯಾಃ=ಕರ್ಷಣ ಮೊದಲಾದ

ಸತ್ಕರ್ಮಂಗಳೂ, ಮಂತ್ರೇಣೈವ=ಮಂತ್ರದಿಂದಲೇ ಮಾಡಲುಪಡುವವೆಂದು, ಪ್ರಕೀರ್ತಿತಾಃ=ಹೇಳಲುಪಟ್ಟವು, ತಸ್ಮಾತ್=ಅದು ಕಾರಣದಿಂದ, ಮಂತ್ರಂ=ಮಂತ್ರವು, ಕ್ರಿಯಾರ್ಥತ್ವಾತ್=ಕ್ರಿಯೆಗಳಿಗೆ ಪ್ರಯೋಜನತ್ವವಾದ ಕಾರಣ, ಮಂತ್ರಂ ವಿನಾ=ಮಂತ್ರವನು ತೊಲಗಿ, ಕ್ರಿಯಾ ನ ಚ=ಕ್ರಿಯೆಯಿಲ್ಲ. ॥೪॥

ಶ್ಲೋಕ॥ ಮನ್ತ್ರೇಣ ದೇವತಾ ಸ್ಥಾಪ್ಯಾ ಮನ್ತ್ರೇಣ ಯಜನಾದಯಃ ।
ಸ್ನಾನಂ ಮನ್ತ್ರೇಣ ಕರ್ತವ್ಯಂ ಮನ್ತ್ರೇಣಾಹುತಿತರ್ಪಣಮ್ ॥

ಟೀಕು॥ ಮಂತ್ರೇಣ=ಮಂತ್ರದಿಂದವೆ, ದೇವತಾಸ್ಥಾಪ್ಯಾ=ದೇವತಾಸ್ಥಾಪ್ಯವು, ಮಂತ್ರೇಣ= ಮಂತ್ರದಿಂದವೆ, ಸ್ನಾನಂ=ಸ್ನಾನವು, ಕರ್ತವ್ಯಂ=ಮಾಡಬೇಕಾದುದು, ಮಂತ್ರೇಣಾಹುತಿ ತರ್ಪಣಂ=ಮಂತ್ರದಿಂದವೆ, ಆಹುತಿ ತರ್ಪಣಂ=ಹುತತರ್ಪಣವು. ॥೫॥

ಶ್ಲೋಕ॥ ಪ್ರಾಯಶ್ಚಿತ್ತಂ ತು ಮನ್ತ್ರೇಣ ದೀಕ್ಷಾ ಮನ್ತ್ರೇಣ ಚೈವ ಹಿ ।
ಅಣಿಮಾದೀನಿ ಮನ್ತ್ರೇಣ ಸಾಲೋಕ್ಯಾದಿಪದಂ ತಥಾ

ಟೀಕು॥ ಮಂತ್ರೇಣ=ಮಂತ್ರದಿಂದವು, ಪ್ರಾಯಶ್ಚಿತ್ತಂ ತು=ಪ್ರಾಯಶ್ಚಿತ್ತವು ಮಾಡಲು ಬೇಕಾದುದು, ಮಂತ್ರೇಣ ಚೈವ ಹಿ=ಮಂತ್ರದಿಂದವೆಯಲಾ, ದೀಕ್ಷಾ=ದೀಕ್ಷೆಮಾಡಲು ಯೋಗ್ಯವು, ಮಂತ್ರೇಣ=ಮಂತ್ರದಿಂದವೆ ಅಣಿಮಾದೀನಿ=ಅಣಿಮಾದ್ಯಷ್ಟ ಮಹದೈಶ್ವರ್ಯಂಗಳು ಲಭಿಸುವವು. ತಥಾ=ಹಾಂಗೆ, ಸಾಲೋಕ್ಯಾದಿಪದಂ= ಸಾಲೋಕ್ಯಾದಿ ಚತುರ್ವಿಧಪದವು ಎಯಿದಲುಪಡುವುದು. ॥೬॥

ಶ್ಲೋಕ॥ ಮನ್ತ್ರೇಣ ಪಾತಕಾದೀನಿ ಮುಚ್ಯನ್ತೇ ಸರ್ವಜನ್ಮಿನಾಮ್ ।
ಸರ್ವಮನ್ತ್ರಕ್ರಿಯಾಶ್ಚೈವ ಮನ್ತ್ರಂ ಶೃಣು ಷಡಾನನ

ಟೀಕು॥ ಮಂತ್ರೇಣ=ಮಂತ್ರದಿಂದವು, ಸರ್ವಜನ್ಮಿನಾಂ=ಎಲ್ಲಾ ಜನ್ಮಂಗಳ ಪಾತಕಾದೀನಿ= ತ್ರಿಕರಣ ಕ್ಷತವಾದ ಪಾತಕಾದಿಗಳು, ಮುಚ್ಯಂತೇ=ಬಿಡಲುಪಡುತ್ತಿಹವು, ಅದು ಕಾರಣದಿಂದ, ಭೋ ಷಡಾನನ!=ಎಲೆ ಷಣ್ಮುಖನೆ!, ಮಂತ್ರಂ=ಮಂತ್ರವನು, ಸರ್ವಮಂತ್ರ ಕ್ರಿಯಾಶ್ಚೈವ=ಸಮಸ್ತಮಂತ್ರಂಗಳಿಂದ ಮಾಡುವ ಕ್ರಿಯೆಗಳನು, ಶೃಣು=ಕೇಳು. ॥೭॥

ಮಂತ್ರಶಬ್ದಕ್ಕೆ ನಿರ್ವಚನ ನುಡಿದಾನು:

ಶ್ಲೋಕ॥ ಮನನಂ ಸರ್ವಪಕ್ಷೇಷು ತ್ರಾಣಂ ಸಂಸಾರಸಾಗರಾತ್ ।
ಮನನತ್ರಾಣಧರ್ಮಿತ್ವಾನ್ಮನ್ತ್ರಮಿತ್ಯಭಿಧೀಯತೇ ॥

ಟೀಕು॥ ಸರ್ವಪಕ್ಷೇಷು=ಎಲ್ಲಾ ಪಕ್ಷಂಗಳಲ್ಲಿಯೂ, ಮನನಂ=ಶಿವನ ನೆನಹ ಮಾಡುವದು, ಸಂಸಾರ ಸಾಗರಾತ್=ಸಂಸಾರವೆಂಬ ಸಮುದ್ರದದೆಸೆಯಿಂದ, ತ್ರಾಣಂ=ರಕ್ಷಿಸುವದು. ಮನನತ್ರಾಣಧರ್ಮಿತ್ವಾತ್=ನೆನಹು ರಕ್ಷಣಂಗಳ ಧರ್ಮವುಳ್ಳತನದಿಂದ, ಮಂತ್ರಮಿತಿ=ಮಂತ್ರವೆಂದು, ಅಭಿದೀಯತೇ=ನಿರ್ವಚಿಸಲು ಪಡುತ್ತಿಹುದು. ॥೮॥

ಶ್ಲೋಕ॥ ಯಥಾಽಽದರಃ ಸ್ವನಾಮ್ನಾ ತು ಜನಃ ಸನ್ನಿಹಿತೋ ಭವೇತ್ ।
ತಥಾ ಮನ್ತ್ರಪ್ರಯೋಗೇಣ ತತ್ರಸನ್ನಿಹಿತೋ ಶಿವಃ ॥

ಟೀಕು॥ ಯಥಾ=ಹೇಂಗೆ ಲೋಕದಲ್ಲಿ, ಜನಃ=ಜನರು, ಸ್ವನಾಮ್ನಾತು=ತಮ್ಮ ಹೆಸರನ್ನು ಹಿಡಿದು ಕೂಗಿದಾಗ, ಆದರಃ=ಆದರದಿಂದ ಹೇಗೆ, ಸನ್ನಿಹಿತೋ ಭವೇತ್=ಸಮೀಪಸ್ಥರಾಗುವರೋ; ತಥಾ=ಹಾಂಗೆ, ಶಿವಃ=ಶಿವನು, ಮಂತ್ರಪ್ರಯೋಗೇಣ=ತನ್ನ ಅಭಿದಾನ ಮಂತ್ರಪ್ರಯೋಗದಿಂದ, ತತ್ರ=ಆ ಶಿವ ಮಾಂತ್ರಿಕನಲ್ಲಿ, ಸನ್ನಿಹಿತಃ ಭವೇತ್=ಸನ್ನಿಹಿತನಹನು. ॥೯॥

ಶ್ಲೋಕ॥ ತಸ್ಮಾನ್ಮಂತ್ರಂ ಮಹಾಸೇನ ರಹಸ್ಯಂ ನ ಪ್ರಕಾಶಯ ।

ಟೀಕು॥ ಭೋ ಮಹಾಸೇನ!=ಎಲೆ ಕುಮಾರ!, ತಸ್ಮಾತ್=ಅದು ಕಾರಣದಿಂದ, ರಹಸ್ಯಂ=ರಹಸ್ಯವಹಂಥಾ, ಮಂತ್ರಂ=ಮಂತ್ರವನು, ನ ಪ್ರಕಾಶಯ=ಶಿವಭಕ್ತಿ ಪರಾಙ್ಮುಖರಲ್ಲಿ ಪ್ರಕಾಶಿಸದಿರು. ॥೧೦॥

ಶ್ಲೋಕ॥ ಪೂರ್ವೋಕ್ತದೇಶೇ ಕೃತ್ವಾ ತು ಮಂಟಪಂ ಲಕ್ಷಣಾನ್ವಿತಮ್ ।
ಗೋಮಯೇನಾನುಲಿಪ್ಯಾಥ ಮಂಟಪಂ ಭೂಷಯೇತ್ತತಃ ॥

ಟೀಕು॥ ಪೂರ್ವೋಕ್ತದೇಶೇ=ಹಿಂದೆಚಕ್ರೋದ್ಧರಣಕ್ಕೆ ನಿರೂಪಿಸಿದಂಥಾ ಶುದ್ಧ ಪ್ರದೇಶದಲ್ಲಿ, ಲಕ್ಷಣಾನ್ವಿತಂ ಮಂಟಪಂ ಕೃತ್ವಾ ತು=ಲಕ್ಷಣಂಗಳೊಡನೆ ಕೂಡಿದಂಥಾ ಮಂಟಪವನು ಮಾಡಿ, ಅಥ=ಅನಂತರದಲ್ಲಿ, ಗೋಮಯೇನ=ಗೋಮಯದಿಂದ, ಅನುಲೇಪ್ಯ=ಆ ಮಂಟಪವಲೇಪಿಸಿ, ತತಃ=ಅದಱಿಂದಂ ಮೇಲೆ, ಮಂಟಪಂ=ಆ ಮಂಟಪವನು, ಭೂಷಯೇತ್=ಅಲಂಕರಿಸುವದು. ॥೧೧॥

ಶ್ಲೋಕ॥ ಪ್ರೋಕ್ಷಯೇದಸ್ತ್ರಮನ್ತ್ರೇಣ ತನ್ಮಧ್ಯೇ ಚಕ್ರಮಾಲಿಖೇತ್ ।

ಟೀಕು॥ ಅಸ್ತ್ರಮಂತ್ರೇಣ=ಅಸ್ತ್ರಮಂತ್ರದಿಂದ, ಪ್ರೋಕ್ಷಯೇತ್=ಆ ಮಂಟಪದಲ್ಲಿ, ಜಲಪ್ರೋಕ್ಷಣವ ಮಾಡುವದು, ತನ್ಮಧ್ಯೇ=ಆ ಪವಿತ್ರಮಂಟಪದ ಮಧ್ಯದಲ್ಲಿ, ಚಕ್ರಂ=ಚಕ್ರವನು, ಆಲಿಖೇತ್=ಲಿಖಿಸುವದು. ॥೧೨॥

ಶ್ಲೋಕ॥ ಕರ್ಣಿಕಾನ್ ಕೇಸರಾಂಶ್ಚೈವ ದಲಾಂಶ್ಚೋಪದಲಾಂ ತಥಾ ।
ಕ್ರಮೇಣೈವತು ಸಂಲಿಖ್ಯ ಆಧಾರಾದೀನ್ ಪ್ರಪೂಜಯೇತ್ ।

ಟೀಕು॥ ಕರ್ಣಿಕಾನ್=ಕರ್ಣಿಕಂಗಳನು, ಕೇಸರಾಂಶ್ಚೈವ=ಕೇಸರಂಗಳನು, ದಲಾಂಶ್ಚ=ದಳಂಗಳನೂ, ತಥಾ=ಹಾಂಗೆ, ಉಪದಲಾನ್=ಉಪದಳಂಗಳನು, ಕ್ರಮೇಣೈವ ತು=ಕ್ರಮದಿಂದವೆ, ಸಂಲಿಖ್ಯ=ಲೇಸಾಗಿ ಲಿಖಿಸಿ, ಆಧಾರಾದೀನ್=ಆಧಾರಶಕ್ತಿ ಮೊದಲಾದ ದೇವತೆಗಳನು, ಪ್ರಪೂಜಯೇತ್=ಲೇಸಾಗಿ ಪೂಜಿಸುವದು. ॥೧೩॥

ಶ್ಲೋಕ॥ ತನ್ಮಧ್ಯೇ ಶಿವಪೂಜಾದಿ ಪ್ರಕುರ್ಯಾತ್ಪೂರ್ವವತ್ಕ್ರಮಾತ್ ।

ಟೀಕು॥ ತನ್ಮಧ್ಯೇ=ಆ ಚಕ್ರ ಮಧ್ಯದಲ್ಲಿ, ಪೂರ್ವವತ್=ಆಧಾರ ಶಕ್ತಿಗಳ ಪೂಜಿಸುವ ಹಾಂಗೆ, ಶಿವಪೂಜಾದಿ=ಶಿವಪೂಜೆ ಮೊದಲಾದ ದೇವತಾಪೂಜೆಗಳನು, ಕ್ರಮಾತ್=ತಱುವಾಯದಿಂದ, ಪ್ರಕುರ್ಯಾತ್=ಲೇಸಾಗಿ ಮಾಡುವದು. ॥೧೪॥

ಶ್ಲೋಕ॥ ತಚ್ಚಕ್ರೇ ಸ್ಥಿತಿಮಾರ್ಗೇಣ ಪ್ರಾಸಾದಂ ತು ಸಮುದ್ಧರೇತ್ ।

ಟೀಕು॥ ತಚ್ಚಕ್ರೇ=ಆ ಚಕ್ರದಲ್ಲಿಹ, ಸ್ಥಿತಿ ಮಾರ್ಗೇಣ=ಸ್ಥಿತಿ ಮಾರ್ಗದಿಂದ, ಪ್ರಾಸಾದಂ ತು=ಪಂಚ ಪ್ರಾಸಾದ ಮಂತ್ರವನು, ಸಮುದ್ಧರೇತ್=ಉದ್ಧರಿಸುವದು. ॥೧೫॥

ಶ್ಲೋಕ॥ ಪ್ರಾಶಬ್ದಂ ಸ್ಯಾಚ್ಛಿವಂ ಜ್ಞೇಯಂ ಸಾಶಬ್ದಂ ಶಕ್ತಿರುಚ್ಯತೇ ।
ತತ್ಸ್ವರೂಪಂ ತು ದಂ ಶಬ್ದಂ ತ್ರಿವರ್ಣಮಭಿಧೀಯತೇ ॥

ಟೀಕು॥ ಪ್ರಾಶಬ್ದಃ=ಪ್ರಾಯೆಂಬ ಶಬ್ದವು, ಶಿವಂಜ್ಞೇಯಂಸ್ಯಾತ್=ಶಿವನೆಂದಱಿಯ ಬೇಕಾದುದಹುದು, ಸಾ ಶಬ್ದಂ=ಸಾ ಎಂಬ ಶಬ್ದವು, ಶಕ್ತಿರುಚ್ಯತೇ=ಶಕ್ತಿಯೆಂದು ನುಡಿಯಲುಪಡುವುದು, ದಂ ಶಬ್ದಂ ತು=ದ ಎಂಬ ಶಬ್ದವಾಯಿತ್ತಾದಡೆ, ತತ್ಸ್ವರೂಪಂ= ಆ ಪ್ರಾಸಾ ಎಂಬ ಶಿವಶಕ್ತ್ಯಕ್ಷರಂಗಳ ಸ್ವರೂಪವೆಂದು ನುಡಿಯಲು ಪಡುವುದು; ತ್ರಿವರ್ಣಮಭಿಧೀಯತೇ=ಹೀಂಗೆ ಪ್ರಾಸಾದವೆಂಬ ಮೂಱಕ್ಷರವು, ಅಭಿಧೀಯತೆ= ತ್ರಯಾಭಿಧಾನವಾಗಿ ನುಡಿಯಲುಪಡುವುದು. ॥೧೬॥

ಶ್ಲೋಕ॥ ದಾನೇತಿ ಮುಕ್ತಿದಂ ಯಸ್ಮಾತ್ತಸ್ಮಾತ್ಪ್ರಾಸಾದಮಿಷ್ಯತೇ ।

ಟೀಕು॥ ಯಸ್ಮಾತ್=ಆವುದಾನೊಂದು ಕಾರಣದಿಂದ, ದಂ ದಾನೇ ಇತಿ=ದಂ ಎಂಬ ಧಾತು ದಾನಾರ್ಥದ ಉಂಟು, ತಸ್ಮಾತ್=ಆ ಕಾರಣದಿಂದ, ಮುಕ್ತಿದಂ=ಮುಕ್ತಿಯ ಕೊಡುವುದು, ಪ್ರಾಸಾದಮಿಷ್ಯತೇ=ಪ್ರಾಸಾದ ಮಂತ್ರವೆಂದಿಚ್ಛೈಸಲುಪಡುತ್ತಿಹುದು. ॥೧೭॥

ಶ್ಲೋಕ॥ ಅಜ್ಞಾನಂ ಜ್ಞಾನವಿಜ್ಞೇಯಂ ತ್ರಿವಿಧಂ ವಿನ್ಯ್ಯತೇ ಕ್ರಮಾತ್ ।
ಅಂಧಕಾರವದಜ್ಞಾನಂ ಜ್ಞಾನಂ ದೀಪ್ತಿವದುಚ್ಯತೇ ॥

ಜ್ಞೇಯಂ ಭಾಸ್ಕರವತ್ಪ್ರೋಕ್ತಮಿತಿ ಜ್ಞಾನಂ ವಿಶಿಷ್ಯತೇ ।

ಟೀಕು॥ ಅಜ್ಞಾನಂ=ಅಜ್ಞಾನವೆಂದೂ, ಜ್ಞಾನಂ=ಜ್ಞಾನವೆಂದೂ, ವಿಜ್ಞೇಯಂ=ವಿಜ್ಞೇಯವೆಂದೂ, ತ್ರಿವಿಧಂ=ಮೂಱುವಿಧವು, ಕ್ರಮಾತ್=ತಱುವಾಯಿಂದ, ವಿಂದ್ಯತೇ=ಅರಿಯಲುಪಡುತ್ತಿಹದು. ಅಜ್ಞಾನಂ=ಅಜ್ಞಾನವು, ಅಂಧಕಾರವತ್=ಕತ್ತಲೆಯ ಹಾಂಗೆಂದಱಿಯಲುಪಡುವುದು, ಇತಿ=ಈ ಪರಿಯಿಂದ, ಜ್ಞಾನಂ=ಜ್ಞಾನವು, ದೀಪ್ತಿವದುಚ್ಯತೇ=ಬೆಳಗಿನಂಥಾದೆಂದು ನುಡಿಯಲುಪಡುತ್ತಿಹುದು, ವಿಜ್ಞೇಯಂ=ಅಱಿಯಲುಪಡುತಕ್ಕವಸ್ತುವು, ಭಾಸ್ಕರವತ್ಪ್ರೋಕ್ತಂ=ಸೂರ್ಯನ ಹೋಲುವಂಥಾದುದೆಂದು ಹೇಳಲುಪಟ್ಟುದು, ಇತಿ=ಈ ಪರಿಯಿಂದ, ಜ್ಞಾನಂ=ಜ್ಞಾನತ್ವವು, ವಿಶಿಷ್ಯತೇ=ವಿಶೇಷಿಸಲುಪಡುತ್ತಿಹುದು, ಜ್ಞಾನತತ್ತ್ವವು ವಿಶೇಷ್ಯವೆಂಬುದಕ್ಕೆ ಕಾರಣವಾವುದಯಾಯೆಂದಡೆ ಶಿವಶಕ್ತಿಸ್ವರೂಪವಾದ ಪ್ರಾಸಾದ ಮಂತ್ರವು, ಅವನಾನೊಬ್ಬನ ಮನಮಧ್ಯದಲ್ಲಿ ಪ್ರಕಾಶಿಸುತ್ತಿಹುದು. ಆತಂಗೆ ಮಱಹೆಂಬ ಅಂಧಕಾರವಿಲ್ಲ. ಆತನು ನಿತ್ಯ ಮುಕ್ತನು. ಆ ಪರಶಿವ ತಾನು ತನ್ನ ಚಿಚ್ಛಕ್ತಿ ಪ್ರಭಾಪುಂಜದಿಂದ ರಂಜಿತನಾಗಿಹನು, ಆ ಶಿವನನಱಿವುದಕ್ಕೆಯೂ ಆತನ ಚಿಚ್ಛಕ್ತಿಯಿಂದಲ್ಲದೆ ಅಱಿಯಬಾರದು, ಸೂರ್ಯನು ಹೇಂಗೆ ತನ್ನ ದೀಪ್ತಿಯಿಂದಲಱಿಹಿಸಿಕೊಂಬನು ಹಾಂಗೆ ಶಿವನು ತನ್ನ ಚಿಚ್ಛಕ್ತಿಯಿಂದವು ಅಱುಹಿಸಿಕೊಂಬನು ಆದ ಕಾರಣ ಚಿಚ್ಛಕ್ತಿಯೆನಿಸುವಂಥ ಜ್ಞಾನ ವಿಶೇಷಿಸಲುಪಟ್ಟುದು.

ಶ್ಲೋಕ॥ ಶಿವಜ್ಞಾನಾತ್ಪರಂ ಜ್ಞಾನಂ ನ ಹಿ ಲೋಕೇಷು ವಿದ್ಯತೇ ।

ಟೀಕು॥ ಶಿವಜ್ಞಾನಾತ್=ಶಿವಪ್ರಾಸಾದ ಮಂತ್ರಮಯವಾದ ಜ್ಞಾನತತ್ತ್ವಕ್ಕಿಂದವೂ ಪರಂ=ಅಧಿಕವಾದ, ಜ್ಞಾನಂ=ಬೇಱೊಂದು ಮಂತ್ರಜ್ಞಾನವು, ಲೋಕೇಷು=ಲೋಕಂಗಳಲ್ಲಿಯೂ, ನ ವಿದ್ಯತೇ ಹಿ=ಉಂಟಾಗುತ್ತಿರದಲಾ. ॥೧೯॥

ಶ್ಲೋಕ॥ ಪ್ರಾಸಾದಂ ಪಞ್ಚಧಾಪ್ರೋಕ್ತಂ ತದ್ಭೇದಂ ವಕ್ಷ್ಯತೇಽಧುನಾ ।
ಶುದ್ಧೋ ಮೂಲಂ ತಥಾ ತತ್ತ್ವಮಾದಿರಾತ್ಮೇತಿಪಞ್ಚಧಾ ॥

ಟೀಕು॥ ಪ್ರಾಸಾದಂ=ಶಿವಜ್ಞಾನ ಸ್ವರೂಪವಾದ ಪ್ರಾಸಾದ ಮಂತ್ರವು, ಪಂಚಧಾ=ಅಯಿದು ಪ್ರಕಾರವಾಗಿಹುದೆಂದು, ಪ್ರೋಕ್ತಂ=ಹೇಳಲುಪಟ್ಟುದು, ಆ ಪಂಚಪ್ರಾಸಾದ ಮಂತ್ರಂಗಳಾವುವೆಂದಡೆ, ತತ್=ಆ ಪ್ರಾಸಾದ ಮಂತ್ರದ, ಭೇದಂ=ಅಯಿದು ಪ್ರಕಾರವಾದ ಭೇದವು, ಅಧುನಾ=ಈಗಳು, ವಕ್ಷ್ಯತೇ=ಹೇಳಲುಪಡುತ್ತಿಹುದು. ಶುದ್ಧಃ=ಶುದ್ಧ ಪ್ರಾಸಾದವೆಂದೂ, ಮೂಲಃ=ಮೂಲ ಪ್ರಾಸಾದವೆಂದೂ, ತಥಾ=ಹಾಂಗೆ, ತತ್ತ್ವಂ=ತತ್ತ್ವ ಪ್ರಾಸಾದವೆಂದೂ, ಆದಿಃ=ಆದಿಪ್ರಾಸಾದವೆಂದೂ, ಆತ್ಮೇತಿ=ಆತ್ಮ ಪ್ರಾಸಾದವೆಂದೂ, ಪಂಚಧಾ=ಅಯಿದು ಪ್ರಕಾರಂಗಳಾಗಿಹವು. ॥೨೦॥

ಶ್ಲೋಕ॥ ಪಞ್ಚಪ್ರಾಸಾದಮಿತ್ಯುಕ್ತಂ ಶುದ್ಧಪ್ರಸಾದಮುಚ್ಯತೇ ।

ಟೀಕು॥ ಇತಿ=ಈ ಪ್ರಕಾರದಿಂದ, ಪಂಚ ಪ್ರಾಸಾದಮುಕ್ತಂ=ಪಂಚಪ್ರಾಸಾದ ನುಡಿಯಲು ಪಟ್ಟುದು. ಶುದ್ಧ ಪ್ರಾಸಾದಮುಚ್ಯತೇ=ಪಂಚ ಪ್ರಾಸಾದಂಗಳನೂ ವ್ಯಕ್ತವಾಗಿ ನಿರೂಪಿಸು ವಡೆ ಆ ಪಂಚ ಪ್ರಾಸಾದಂಗಳೊಳು ಮೊದಲಾದ ಶುದ್ಧ ಪ್ರಾಸಾದ ನುಡಿಯಲ್ಪಡು ತ್ತಿದ್ದುದು. ॥೨೧॥

ಶ್ಲೋಕ॥ ಶುದ್ಧಂ ಶಿವಮಿತಿ ಪ್ರೋಕ್ತಂ ತಸ್ಮಾಚ್ಛುದ್ಧಂ ಪ್ರಕೀರ್ತಿತಮ್ ।

ಟೀಕು॥ ಸಮಸ್ತ ದೋಷರಹಿತವಾದ ತತ್ತ್ವವು, ಶಿವಮಿತಿ=ಶಿವತತ್ತ್ವವೆಂದು, ಪ್ರೋಕ್ತಂ=ಹೇಳಲುಪಟ್ಟುದು, ತಸ್ಮಾತ್=ಆ ಶಿವನು ಶುದ್ಧ ವಸ್ತುವಾದ ಕಾರಣ, ಶುದ್ಧಂ ಪ್ರಕೀರ್ತಿತಂ=ಆ ಶಿವಬೀಜವು ಶುದ್ಧವೆಂದು ಹೇಳಲುಪಟ್ಟುದು. ॥೨೨॥

ಶ್ಲೋಕ॥ ನಾದಾಖ್ಯಂ ಯತ್ಪರಂ ಬೀಜಂ ಸರ್ವಭೂತೇ ವ್ಯವಸ್ಥಿತಮ್ ।
ತಚ್ಛುದ್ಧಮಿತಿಜ್ಞೇಯಂ ಸರ್ವಕಾರಣಕಾರಣಮ್ ॥

ಟೀಕು॥ ನಾದಾಖ್ಯಂ=ನಾದ, ಗುಹ್ಯ, ಪರ, ಜೀವ, ದೇಹಿ, ಭೂತಪಂಚಮ, ಸಾಂತ, ತತ್ತ್ವಾಂತ, ಭೂತಾಂತ, ಶಿವಾರ್ಣ, ಶೂನ್ಯ, ಅವ್ಯಯವೆಂಬ ಪರ್ಯಾಯ ನಾಮಂಗಳ ನುಳ್ಳ, ಸರ್ವಭೂತೇವ್ಯವಸ್ಥಿತಂ ಯತ್ಪರಂ ಬೀಜಂ=ಸಮಸ್ತಪ್ರಾಣಿಯಲ್ಲಿಯೂ ಇರುತ್ತಿಹ ಅವುದಾನೊಂದು ಉತ್ಕೃಷ್ಟಾಕ್ಷರವುಂಟು, ಸರ್ವಕಾರಣ ಕಾರಣಂ ತತ್=ಸಮಸ್ತ ಕಾರಣಂಗಳಿಗೆ ಕಾರಣವಾದ ಆ ಶಿವ ಬೀಜವು, ಶುದ್ಧಮಿತಿ ಜ್ಞೇಯಂ=ಶುದ್ಧಪ್ರಾಸಾದ ವೆಂದಱಿಯಬೇಕಾದುದು. ॥೨೩॥

ಶ್ಲೋಕ॥ ಮುಕ್ತಿದಂ ಪರಮಂ ದಿವ್ಯಂ ಸರ್ವಸಿದ್ಧಿ ಪ್ರದಾಯಕಮ್ ।
ತದ್ವಿದಿತ್ವಾ ಮಹಾಸೇನ ದೇಶಿಕಃ ಪಾಶಹಾ ಭವೇತ್ ॥

ಟೀಕು॥ ಮುಕ್ತಿದಂ=ಮುಕ್ತಿಯ ಕೊಡುವಂಥಾ, ಪರಮಂ=ಉತ್ಕೃಷ್ಟವಾದಂಥಾ, ದಿವ್ಯಂ=ತನ್ನಚಿಚ್ಛಕ್ತಿಯ ದೀಪ್ತಿಮಂ ತುವಾದಂಥಾ, ಸರ್ವಸಿದ್ಧಿ ಪ್ರದಾಯಕಂ= ಅಣಿಮಾದ್ಯಷ್ಟಮಹದೈಶ್ವರ್ಯ ಮೊದಲಾದ ಸರ್ವಸಿದ್ಧಿಗಳನೂ ಕೊಡುವಂಥಾ, ತತ್=ಆ ಶುದ್ಧ ಪ್ರಸಾದವನು, ಭೋ ಮಹಾಸೇನ!=ಎಲೆ ಕುಮಾರನೆ!, ದೇಶಿಕಃ=ಆಚಾರ್ಯನಾದ ಪುರುಷನಱಿದೊಡೆ ತನ್ನ ಶಿಷ್ಯರುಗಳ, ಪಾಶಹಾ ಭವೇತ್=ಸಮಸ್ತ ಸಂಸಾರ ಪಾಶಂಗಳನು ದಹಿಸುವಾತನಹನು. ॥೨೪॥

ಶ್ಲೋಕ॥ ಶುದ್ಧಪ್ರಾಸಾದಮೇವೋಕ್ತಂ ಮೂಲಪ್ರಾಸಾದಮುಚ್ಯತೇ ।

ಟೀಕು॥ ಶುದ್ಧಪ್ರಾಸಾದಮೇವೋಕ್ತಂ=ಶುದ್ಧಪ್ರಾಸಾದವು ಹೀಂಗೆ ನುಡಿಯಲುಪಟ್ಟುದು. ಮೂಲಪ್ರಾಸಾದಮುಚ್ಯತೇ=ಮೂಲಪ್ರಾಸಾದವು ಹೇಳಲುಪಡುತ್ತಿಹುದು. ॥೨೫॥

ಶ್ಲೋಕ॥ ಸರ್ವೇಷಾಮೇವ ತತ್ವಾನಾಂ ಮೂಲಂ ಶಿವ ಇತಿ ಸ್ಮೃತಃ ।
ತಸ್ಮಾನ್ಮೂಲಮಿತಿ ಪ್ರೋಕ್ತಂ ಮೂಲಮನ್ತ್ರಂ ತದುಚ್ಯತೇ ॥

ಟೀಕು॥ ಸರ್ವೇಷಾಂ ತತ್ವಾನಾಂ=ಎಲ್ಲಾ ತತ್ತ್ವಂಗಳಿಗೆಯೂ, ಶಿವ ಏವಮೂಲಮಿತಿ ಸ್ಮೃತಂ=ಶಿವನೇ ಮೂಲವೆನಿಸಿದಾತನೆಂದು ನೆನೆಯಲುಪಟ್ಟನು, ತಸ್ಮಾತ್=ಅದು ಕಾರಣದಿಂದ, ಮೂಲಮಿತಿ ಪ್ರೋಕ್ತಂ=ಆ ಶಿವಾಕ್ಷರವು ಮೂಲಪ್ರಾಸಾದವೆಂಬ ಹೆಸರನುಳ್ಳ ದೆಂದು ಹೇಳಲುಪಟ್ಟುದು. ತನ್ಮೂಲಮಂತ್ರಮುಚ್ಯತೇ=ಆ ಮೂಲಮಂತ್ರೋದ್ಧಾರಣವು ಹೇಳಲುಪಟ್ಟುದು. ॥೨೬॥

ಶ್ಲೋಕ॥ ಷಷ್ಠಂ ತ್ರಯೋದಶಾನ್ತಂ ಚ ಪಂಚಮೇ ವಿನಿಯೋಜಯೇತ್ ।
ಶಿವ ಶಕ್ತಿ ಸಮಾಯುಕ್ತಂ ಶಿವಮನ್ತ್ರಮಿಹೋಚ್ಯತೇ ।

ಟೀಕು॥ ಷಷ್ಠಂ=ಸ್ಥಿತಿ ವರ್ಗದ ಮೊದಲ ವರ್ಗವೆನಿಸಿಹ ಸಾತ್ವಿಕ ನಾಮವನುಳ್ಳ, ಪ್ರಥಮಾವರಣದ ಮೂಡಣದಳದಲ್ಲಿ ಬರೆದಿಹ ಸಕಾರ ಮೊದಲುಗೊಂಡೆಣಿಸಿದಡೆ ರಕಾರವಾಱನೆಯದಾಗಿಹುದು. ಅದು ಕಾರಣ ರಕಾರಕ್ಕೆ ಷಷ್ಠಂ ಎಂಬ ಹೆಸರು ವರ್ತಿಸುವದು. ಷಷ್ಠಃ=ಷಷ್ಠವನೆಂಬ ಅಭಿಧಾನವನುಳ್ಳ ರಕಾರವನೂ, ತ್ರಯೋದಶಾನ್ತಂ= ಸ್ಥಿತಿವರ್ಗದ ಎರಡನೆಯದೆನಿಸಿಹ ರಾಜಸನಾಮವನುಳ್ಳ ದ್ವಿತೀಯಾವರಣದ ಮೂಡಣದಳದಲ್ಲಿ ಬರೆದಿಹ ಅಕಾರವ ಮೊದಲುಗೊಂಡೆಣಿಸಿದಡೆ ಔಕಾರ ಹದಿಮೂಱರ ಕಡೆಯಣಕ್ಷರವಾಗಿಹುದು. ಅದುಕಾರಣ ಔಕಾರಕ್ಕೆ ತ್ರಯೋದಶಾಂತವೆಂಬ ಹೆಸರು ವರ್ತಿಸುವುದು. ತ್ರಯೋದಶಾಂತಂ ಚ=ತ್ರಯೋದಶಾಂತ ಸಂಜ್ಞೆಯನುಳ್ಳ ಔಕಾರವನು, ಪಂಚಮೇ=ಪಂಚಮವೆಂಬ ಹೆಸರನುಳ್ಳ ಹಕಾರದಲ್ಲಿ ವಿನಿಯೋಜ ಯೇತ್=ಲೇಸಾಗಿ ಕೂಡುವದು. ಕೂಡಿದಡೆ ಹ್ರೌ ಎಂಬುದಹುದು. ಶಿವಶಕ್ತಿಸಮಾಯುಕ್ತಂ=ಆಧಾರಶಕ್ತಿ ಕಾರ್ಯಪರಬಿಂದುವೆಂಬ ಪಂಚಾಭಿಧಾನವನುಳ್ಳ ಸಕಾರವು ಮಂತ್ರಂಗಳನುದ್ಧರಿಸುವಲ್ಲಿ ಶೂನ್ಯವಾಗಿಹುದು. ಆ ಶೂನ್ಯವಾಚಕವು ಅಪಭ್ರಂಶದಲ್ಲಿ ಸೊನ್ನೆಯೆನಿಸಿಕೊಂಬುದು. ಆ ಸೊನ್ನೆಯನುದ್ಧರಿಸುವಾಗಳು ಆ ಶಕ್ತ್ಯಕ್ಷರವೊಂದೊಂದು ನಾಮವ ಸಂಬಂಧಿಸಿದೊಡೆಯೂ ಸೊನ್ನೆ ಎಂದಱಿವುದು. ಆಧಾರಾದಿಯ ಶಿವಶಕ್ತಿ ಕಾರ್ಯಕಾರಣ ಪರಾಪರ ಬಿಂದುನಾದವೆಂದು ಹೀಂಗೆ ದ್ವಯವಾಚ್ಯವಾದಡೆಯೂ ಸೊನ್ನೆಯೆಂದಱಿವುದು. ಇದು ಕಾರಣ, ಶಿವಶಕ್ತಿ ಸಮಾಯುಕ್ತಂ=ಹ್ರೌಕಾರವು ಸೊನ್ನೆಯೊಡನೆ ಕೂಡಲುಪಟ್ಟದಾಗಿಹುದು. ಇದು ಕಾರಣ ಹ್ರೌಂ ಎಂದು (ಅಥರ್ವವೇದೇ) ಉದ್ಧೃತವಾಯಿತ್ತು. ಈ ಹ್ರೌಂ ಎಂಬ ಮೂಲ ಪ್ರಾಸಾದ ಮಂತ್ರವು, ಇಹ=ಈ ಶುದ್ಧಾಖ್ಯ ತಂತ್ರದಲ್ಲಿ, ಶಿವಮಂತ್ರಮುಚ್ಯತೇ= ಶಿವಮಂತ್ರವೆಂದು ನುಡಿಯಲು ಪಡುತ್ತಿಹುದು. ಕ್ರಿಯಾಸಾರೇ–" ಅಥರ್ವವೇದೇ

ಯತ್ಪ್ರೋಕ್ತೋ ಮನ್ತ್ರಪ್ರಾಸಾದ ಸಂಜ್ಞಕಃ । ಸಮಸ್ತಾಭೀಷ್ಟಕೃತ್ವಾಯಃ ನಾಶ್ರಿತಾನಾಮ ನಾರತಮ್ । ಬ್ರಹ್ಮಾಙ್ಗೈಸ್ಸದ್ವಿಧಾ ಪ್ರೋಕ್ತೋ ಮನ್ತ್ರಪ್ರಾಸಾದಸಂಜ್ಞಕಃ । ವೈದಿಕಾಸ್ತಾನ್ತ್ರಿಕೊ ಇತಿ ವಹ್ನಿಯೋಗ ವಿಯೋಗತಃ । ಅಥರ್ವವೇದದಲ್ಲಿಃ ಯಾವುದಾನೊಂದು ಪ್ರಾಸಾದ ಮಂತ್ರ ಹೇಳಲುಪಟ್ಟಿಹುದೋ ಆ ಪ್ರಾಸಾದಮಂತ್ರವು ತನ್ನನ್ನಾಶ್ರಯಿಸಿದವರಿಗೆ ಹಿರಿದಾಗಿ ಅಭೀಷ್ಟಸಿದ್ಧಿಗಳ ಮಾಡುವದು. ಆ ಮಂತ್ರವು ಬ್ರಹ್ಮಭೇದಾಂಗ ಭೇದಂಗಳೊಡನೆ ಕೂಡಿದ್ದುದಾಗಿಯೂ ರಕಾರದ ಕೂಟದಿಂದವೂ ಅಗಲಿಕೆಯಿಂದವೂ ಎರಡು ಪ್ರಕಾರವಾಗಿಹದು. ॥೨೭॥

ಶ್ಲೋಕ॥ ಷಷ್ಠಂ ತ್ರಯೋದಶಾನ್ತಾದ್ವೌ ಬೀಜ ತ್ರಿದಶ ವರ್ತನಃ ।
ಬಿನ್ದು ನಾದೌ ಚ ಯುಂಜೀತ ತತ್ಪ್ರಾಸಾದ ಚ ಮೀರಿತಮ್ ।

ಟೀಕು॥ ಷಷ್ಠಂ ತ್ರಯೋದಶಾಂತಾದ್ವೌ=ರಕಾರ ಔ ಕಾರಂಗಳೆರಡನೂ, ಬಿಂದು ನಾದೌಚ=ಸೊನ್ನೆಯನು, ತ್ರಿದಶ ವರ್ತನೋ ಬೀಜಯುಂಜೀತ=ಹಕಾರಾಕ್ಷರದಲ್ಲಿ ಕೂಡುವದು. ಯತ್=ಆವುದಾನೊಂದು ರಕಾರ ಔಕಾರ ಬಿಂದು ಯೋಗವಾದ ಹಕಾರವುಂಟು, ತತ್=ಆ ಶಿವಾಕ್ಷರವು, ಪ್ರಾಸಾದಮೀರಿತಂ=ಪ್ರಾಸಾದ ಮಂತ್ರವೆಂದು ನುಡಿಯಲುಪಟ್ಟುದು. ಇತಿ ವಹ್ನಿಯೋಗಃ ಈ ಪರಿಯಿಂ ರಕಾರಯೋಗವು, ॥೨೮॥

ಶಾರ್ದೂಲ ತಿಲಕದಲ್ಲಿ:

ಶ್ಲೋಕ॥ ಸಾಂತಸದ್ಯಾಂತಸಂಯುಕ್ತೋ ಬಿನ್ದುಭೂಷಿತ ಮಸ್ತಕಃ ।
ಪ್ರಾಸಾದಾಖ್ಯೋಮನುಪ್ರೋಕ್ತೋ ಭಜತಾಂ ಸರ್ವಸಿದ್ಧಿದಂ ।

ಟೀಕು॥ ಸಕಾರಕ್ಕೆ ಕಡೆಯಾದ ಹಕಾರವು ಸದ್ಯೋಜಾತಾಭಿದಾನವನು ಓಕಾರಕ್ಕೆ ಕಡೆಯಾದ ಔಕಾರದೊಡನೆ ಕೂಡಿದ್ದುದಾಗಿ ಬಿಂದುವಿನಿಂದಲಂಕರಿಸಲು ಪಟ್ಟುದಾಗಿಹುದು. ಪ್ರಾಸಾದಾಖ್ಯೋಮನುಪ್ರೋಕ್ತೋ ಭಜತಾಂ ಸರ್ವಸಿದ್ಧಿದಂ=ಪ್ರಾಸಾದ ಮಂತ್ರವು ಭಜಿಸುತ್ತಿಹವರುಗಳಿಗೆ ಸಮಸ್ತ ಸಿದ್ಧಿಯ ಕೊಡುವಂಥಾದ್ದು. ಇತಿವಹ್ನಿಯೋಗೇನ ಮಿತ್ಯುಕ್ತಂ=ಈ ಪರಿಯಿಂದಗ್ನಿ ಬೀಜವಹ ರಕಾರವ ತೊಲಗಿಹುದಜಿಂದ ಹೌಂ ಎಂದು ಪ್ರಾಸಾದಮಂತ್ರವು ನುಡಿಯಲುಪಟ್ಟುದು. ಈ ಶಿವಮಂತ್ರವು, ವಹ್ನಿಯೋಗೇನ=ವಿಯೋಗದಿಂದ ವೈದಿಕ ತಾಂತ್ರಿಕವೆಂಬೆರಡು ಭೇದವಾಗಿದ್ದು ಈ ಶುದ್ಧಾಖ್ಯತಂತ್ರದಲ್ಲಿ ವೈದಿಕ ಪ್ರಾಸಾದವೆ ಮೂಲ ಪ್ರಾಸಾದವೆನಿಸಿಕೊಂಬುದು. ಆ ಈ ಪ್ರಾಸಾದ ಮಂತ್ರಕ್ಕೆ ಮೂರ್ತಿಭಾವನೆಯನು ನಿರೂಪಿಸಿಹನು. ॥೨೯॥

ಶ್ಲೋಕ॥ ಶಿವಮೇಕಂ ವಿಜಾನೀಯಾನ್ಮನ್ತ್ರಮೂರ್ತಿಃ ಪರಂ ಶಿವಮ್ ।
ನಾದಂ ಕಿರೀಟಮಿತ್ಯುಕ್ತಂ ಬಿನ್ದುವಕ್ತ್ರಮುದಾಹೃತಮ್ ।

ಹಕಾರಂ ದೇಹಮಿತ್ಯುಕ್ತಂ ದ್ವಯೌಶೃಙ್ಗೇ ಭುಜೌ ತಥಾ ।
ವಹ್ನಿಂ ಪಾದದ್ವಯಂ ವಿನ್ಯಾನ್ಮನ್ತ್ರಮೂರ್ತಿರುದಾಹೃತಾ ।

ಟೀಕು॥ ಶಿವಮೇಕಂ ವಿಜಾನೀಯಾತ್=ಶಿವತತ್ತ್ವವು ಅದ್ವಯವೆಂದಱಿವುದು, ಪರಂ ಶಿವಂ=ಪರವೆನಿಸಿಕೊಂಬ ಶಿವತತ್ತ್ವವು, ಮಂತ್ರಮೂರ್ತಿಃ=ಮಂತ್ರವೇ ಮೂರ್ತಿಯಾಗಿ ಹಾತನಾದನು. ಶಿವಮಂತ್ರಾದಿ ಮಂತ್ರಂಗಳನುದ್ಧರಿಸುವೊಡೆ ನಾಗರ ಲಿಪಿಯಿಂದವೆ ಉದ್ಧರಿಸಬಹುದು, ಉಳಿದ ಲಿಪಿಗಳಿಂದುದ್ಧರಿಸಬಾರದು. ಆಗಮೋದ್ಧರಣವು. ಹಕಾರಂ ದೇಹಮಿತ್ಯುಕ್ತಂ=ಆ ಪರಮೇಶ್ವರಂಗೆ ಹಕಾರವೇ ದೇಹವೆಂದು ನುಡಿಯಲುಪಟ್ಟುದು. ಬಿಂದುವಕ್ತ್ರಮುದಾಹೃತಂ=ಬಿಂದುರೂಪಂ ಪರಾಶಕ್ತಿಃ, ಆ ಪರಮೇಶ್ವರನ ನಿಃಕಲಾಶಕ್ತಿ ಎನಿಸುವ ಪರಾಶಕ್ತಿತಾನೆ ಬಿಂದು ಸ್ವರೂಪವಾಯಿತು, ಆ ಬಿಂದು ಶಬ್ದವು ಶಕ್ತಿ ಬೀಜಕ್ಕೆಯೂ, ಶಕ್ತಿಬೀಜಂಗಳೆನಿಸುವ ವಿಕಾಲಾಕ್ಷರಂಗಳಿಗೆಯೂ ವರ್ತಿಸುವದು, ಶಾಂತ್ಯತೀತಾಪರಾಶಕ್ತಿಃ=ಆ ನಿಃಕಲಾಶಕ್ತಿಯೆಂಬವರೆಗೆ ಶಾಂತ್ಯತೀತೆಯೆಂಬ ಕಲಾ ನಾಮವು ವರ್ತಿಸುವದು. ಪೌಷ್ಕರೇ=ಪೌಷ್ಕರದಲ್ಲಿ, “ಲಯಾದಿವ್ಯಾಪ್ತಿತಿರ್ಯಾತ್ಮಶುದ್ಧೋ ದ್ವೌವಾಯತೊ ಜನನೀ ಸಾ ತು ಕುಂಡಲಿನೀ ಶರ್ಮ್ಭೋರ್ನಿತ್ಯಾಧಿಷ್ಠಯರೂಪಿಣೀ।” ಲಯಭೋಗ ಅಧಿಕಾರಂಗಳೆಂದು ಬೇಱೆ ಬೇಱೆ ಪರ್ಯಾಯ ವಾಚಕಂಗಳನು ಶಿವತತ್ತ್ವ ಸದಾಶಿವತತ್ತ್ವ ಮಹೇಶ್ವರತತ್ತ್ವಂಗಳೆಂಬ ವ್ಯಾಪಾರವು ಶುದ್ಧಮಾರ್ಗವು ಆವುದಾನೊಂದಱಿಂದ ಹುಟ್ಟಿತು, ಆ ನಿಷ್ಕಲೆಯೆಂಬ ಬಿಂದು ತಾನೆ ಆ ಪರಮೇಶಂಗೆ ಅಧಿಷ್ಠಾನರೂಪಿಣಿಯಾದ ಕುಂಡಲಿನೀ ಶಕ್ತಿ ಎನಿಸಿಕೊಂಬುದು. ಆ ಕುಂಡಲಿನೀ ಶಕ್ತಿಯೆ ಬಿಂದುವೆಂಬ ಪರ್ಯಾಯ ನಾಮಂಗಳಿಗೆ ನಾನಾ ಶ್ಲೋಕಂಗಳಲ್ಲಿ ಅರ್ಥ ಪ್ರವರ್ತಿಸುವದು, ಪರಮೇಶ್ವರನ ಲೀಲಾ ವ್ಯಾಪಾರಂಗಳಿಗೆ ಬಿಂದು ಮುಖ್ಯವಾಗಿಹ ಕಾರಣ, ಬಿಂದುವಕ್ತ್ರಮುದಾಹೃತಂ=ಬಿಂದುವೆ ಮುಖವೆಂದು ಹೇಳಲುಪಟ್ಟುದು. ಆ ಪ್ರಾಸಾದಾಕ್ಷರಕ್ಕೆ ಮೇಲೆ ಸೊನ್ನೆಯಹುದಾಗಿಯೂ ಮುಖದ ಹಾಂಗೆ ಒಪ್ಪುತ್ತಿಹುದು. “ನಾದಂ ಕಿರೀಟಮಿತ್ಯುಕ್ತಂನಾದಶ್ಚೈವಾದಿರುಚ್ಯತೇ”=ಆ ಪರಶಿವನ ನಿಷ್ಕಲಾ ಶಕ್ತಿಯಪ್ಪ ನಾದಶಕ್ತಿಗೆ ಆದಿ ಶಕ್ತಿ ಎಂಬ ಪರ್ಯಾಯನಾಮವು ಹೇಳಲುಪಡುವುದು. ಔಕಾರಮಾದಿಶಕ್ತಿಸ್ಸ್ಯಾತ್=ಔಕಾರವು ಆದಿಶಕ್ತಿಬೀಜವೆನಿಸುವದು. “ಅಕಾರನಾದಮಿತ್ಯುಕ್ತಂ ಉಕಾರಬಿನ್ದುರುಚ್ಯತೇ”=ಅಕಾರವೇ ನಾದವು ಉಕಾರವೇ ಬಿಂದುವೆಂದು ಹೇಳಲುಪಡುತ್ತಿಹುದು. ಅಕಾರಕ್ಕೆ ಇಕಾರ ಉಕಾರಂಗಳ ಕೂಟವಾದುದಱಿಂದ ಸಂಧ್ಯಕ್ಷರ ಚತುರಕ್ಷರಂಗಳಾದವು. ಅಕಾರ ಇಕಾರದ ಕೂಟದಿಂದವು ವಿಕೃತ್ಯಕ್ಷರದ ಕೂಟದಿಂದವೂ, ಏಐಕಾರಂಗಳು ಹುಟ್ಟಿದವು. ಅಕಾರ ಉಕಾರಂಗಳ ಕೂಟದಿಂದ ವಿಕೃತ್ಯಕ್ಷರದ ಕೂಟ ದಿಂದವು ಓಔಕಾರಂಗಳು ಹುಟ್ಟಿದವು. ಅದು ಕಾರಣ ನಾದಬಿಂದುಗಳೆಂಬ ಎರಡು

ಶಕ್ತಿಗಳ ಕೂಟವೆ ಆದಿಶಕ್ತಿ ಎನಿಸಿಕೊಂಬುದು. ಇಂತು ನಾದವೆನಿಸುವ ಆದಿಶಕ್ತಿ ರೇಖೆಗಪ್ಪ ದಕಾರ ರೇಖೆಗಳೆ ಆ ಶಿವಮೂರ್ತಿ ಬೀಜಕ್ಕೆ, ಕಿರೀಟ ಮಿತ್ಯುಕ್ತಂ=ಮಕುಟ ವೆಂದು ನುಡಿಯಲುಪಟ್ಟುದು. ತಥಾ=ಹಾಂಗೆ, ದ್ವಯೌಶೃಂಗೌ=ಶಾಂಭವೀರೇಖೆ ಯೆನಿಸುವ ಆದ್ಯರೇಖೆಯ ಉಭಯ ಶೃಂಗಗಳೆ. ಭುಜೌ=ಆ ಶಿವಮೂರ್ತಿಗೆ ಭುಜಂಗಳೆನಿಸಿಕೊಂಬವು, ವಹ್ನಿಪಾದದ್ವಯಂ ವಿಂದ್ಯಾತ್=ಅಗ್ನಿರೇಖೆಗಳೆನಿಸುವ ಹ ಕಾರದ ಅಂ ರೇಖೆಗಳನೆ ಆ ಶಿವಮೂರ್ತಿ ಬೀಜಕ್ಕೆ ಪಾದದ್ವಯವೆಂದಱಿವುದು. ಮಂತ್ರಮೂರ್ತಿಮುದಾಹೃತಂ=ಈ ಪ್ರಕಾರದಿಂದ ಶಿವಮಂತ್ರವು ಶಿವದೇಹ ಹಕಾರ ವೆಂದು ಹೇಳಲುಪಟ್ಟುದು. ಈ ಶಿವಮಂತ್ರವೆ ತ್ರಿಭೇದವಾಗಿಹುದೆಂದು ನಿರೂಪಿಸುತ್ತಿದ್ದಾನು. ॥೩೧॥

ಶ್ಲೋಕ॥ ಸ್ಥೂಲಂ ಸೂಕ್ಷ್ಮಂ ಪರಂ ಚೈವ ತ್ರಿವಿಧಂ ತು ಪ್ರಕೀರ್ತಿತಮ್ ।
ಸ್ಥೂಲವರ್ಣಾಕೃತಿಂ ವಿಂದ್ಯಾತ್ ಸೂಕ್ಷ್ಮಂ ತಚ್ಛಬ್ದಮುಚ್ಯತೇ ॥

ಟೀಕು॥ ಸ್ಥೂಲಂ=ಸ್ಥೂಲವೆಂದೂ, ಸೂಕ್ಷಂ=ಸೂಕ್ಷ್ಮವೆಂದೂ, ಪರಂಚೈವ=ಪರವೆಂದೂ ತ್ರಿವಿಧಂ ತು=ಮೂಱುವಿಧವಾಗಿಹುದೆಂದು ಪ್ರಕೀರ್ತಿತಂ=ಹೇಳಲುಪಟ್ಟುದು. ಸ್ಥೂಲಂ= ಸ್ಥೂಲಭೇದವನು, ವರ್ಣಾಕೃತಿಂ ವಿಂದ್ಯಾತ್= ಅಕ್ಷರಾಕಾರವಾಗಿಯಱಿಯುವುದು, ಸೂಕ್ಷ್ಮಂ=ಸೂಕ್ಷ್ಮವೆಂಬ ಭೇದವು. ತಚ್ಛಬ್ದಮುಚ್ಯತೇ=ಆ ವರ್ಣಧ್ವನಿಯೆಂದು ಹೇಳಲು ಪಡುತ್ತಿಹುದು. ॥೩೨॥

ಶ್ಲೋಕ॥ ಅಕಾರಾದಿ ಕ್ಷಕಾರಾನ್ತಂ ಪಂಚಭೌತಿಕಮುಚ್ಯತೇ ।
ಪಂಚ ಪಂಚ ಪ್ರಯುಂಜೀತ ಪಂಚಾಶದ್ವರ್ಣಮೀರಿತಮ್ ॥

ಟೀಕು॥ ಅಕಾರಾದಿ ಕ್ಷಕಾರಾನ್ತಂ=ಅಕಾರಮೊದಲಾಗಿ ಕ್ಷಕಾರ ಕಡೆಯಾದ, ಐವತ್ತಕ್ಷರವು, ಪಂಚಭೌತಿಕಮುಚ್ಯತೇ=ಪೃಥಿವ್ಯಾದಿ ಪಂಚಮಹಾಭೂತ ಸಂಬಂಧವಾದುದೆಂದು ನುಡಿಯಲುಪಡುತ್ತಿಹುದು. ಪಂಚಪಂಚ ಪ್ರಯುಂಜೀತ=ಆ ಅಕ್ಷರಾಧ್ಯಕ್ಷರಂಗಳನು ಪ್ರತ್ಯೇಕ ಭೂಮ್ಯಾದಿಗಳಿಗೆ ಹತ್ತು ಹತ್ತಾಗಿ ಪ್ರಯೋಗಿಸುವದು, ಹೀಂಗೆ ಪ್ರಯೋಗಿಸಿದಡೆ, ಪಂಚಾಶದ್ವರ್ಣಮೀರಿತಂ=ಐದು ಭೂತಂಗಳಿಗೆಯೂ, ಐವತ್ತು ವರ್ಣವಿಭಾಗ ಹೇಳಲು ಪಟ್ಟುದು. ॥೩೩॥

ಶ್ಲೋಕ॥ ಅನ್ತರ್ಯತ್ಪಞ್ಚಮಂ ಬೀಜಂ ತತ್ಪರಂ ಪರಿಕೀರ್ತಿತಮ್ ।

ಟೀಕು॥ ಅನ್ತಃ=ಈ ಪಂಚಾಶದ್ವರ್ಣಂಗಳೊಳಗೆ ಯತ್ ಪಂಚಮಂ ಬೀಜಂ= ಪರಿಪೂರ್ಣವಾಗಿರುವಂಥ ಆವುದಾನೊಂದು ಪಂಚಮಾಕ್ಷರವುಂಟು, ತತ್ಪರಂ ಪರಿಕೀರ್ತಿತಂ=ಆ ಚಿಂತಾರಹಿತವಾದ ಶಿವವರ್ಣವು ಪರವೆಂದು ಹೇಳಲುಪಟ್ಟುದು.

ಶ್ಲೋಕ॥ ಪಾಂಚ ಭೌತಿಕ ಸಂಬಂಧಃ ಜೀವಾಧಾರಮಿತಿಸ್ಮೃತಮ್ ।
ಏವಂ ಜ್ಞಾತ್ವಾ ತು ಮಂತ್ರಜ್ಞಸ್ಸರ್ವಾಪಾಪಾತ್ಪ್ರಮುಚ್ಯತೇ ॥

ಟೀಕು॥ ಪಾಂಚಭೌತಿಕ ಸಂಬಂಧಃ=ಪಂಚಭೌತಿಕ ಸಂಬಂಧವಾದ ಪಂಚಾಶದ್ವರ್ಣವು, ಜೀವಾಧಾರಮಿತಿ ಸ್ಮೃತಂ=ಜೀವಾಭಿಧಾನವನುಳ್ಳ ಶಿವಾಕ್ಷರಕ್ಕೆ ಪರ್ಯಷ್ಟಕವಾದುದೆಂದು ನೆನೆಯಲುಪಟ್ಟುದು. ಮಂತ್ರಜ್ಞಃ=ಶಿವಮಂತ್ರಾಭಿಜ್ಞನಾದಾತನೂ, ಏವಂ ಜ್ಞಾತ್ವಾತು=ಈ ಪರಿಯಿಂದಅರಿದಡೆ, ಸರ್ವಪಾಪಾತ್=ಸಮಸ್ತ ಪಾಪದತ್ತಣಿಂದ, ಪ್ರಮುಚ್ಯತೇ=ಬಿಡಲು ಪಡುತ್ತಿಹನು. ॥೩೪॥

ಶ್ಲೋಕ॥ ಏವಂ ಪಂಚಭೂತತತ್ವಂ ಜೀವ ಪ್ರಾಸಾದಮಿಷ್ಯತೇ ।
ಬ್ರಹ್ಮಾದಿ ಸ್ತಂಭಪರ್ಯನ್ತಂ ಜಗದ್ಯೋನಿಶ್ಚರಾಚರಮ್ ॥

ಟೀಕು॥ ಏವಂ ವೈ=ಈ ಪ್ರಕಾರದಿಂದವು, ಪಂಚ ಭೂತತ್ವಂ=ಪಂಚಭೌತಿಕತ್ವವು, ಜೀವಪ್ರಾಸಾದಮಿಷ್ಯತೇ=ಜೀವಪ್ರಸಾದವೆಂದೂ ಇಚ್ಛೈಸಲುಪಡುತ್ತಿಹುದು. ಬ್ರಹ್ಮಾದಿ ಸ್ತಂಭಪರ್ಯನ್ತಂ=ಬ್ರಹ್ಮಮೊದಲಾಗಿ ತೃಣ ಕಡೆಯಾದ, ಚರಾಚರಂ=ಸ್ಥಾವರ ಜಂಗಮವು, ಜಗದ್ಯೋನಿಃ=ಲೋಕೋತ್ಪತ್ತಿಯು. ॥೩೫॥

ಶ್ಲೋಕ॥ ಭೂತಂ ಭವ್ಯಂ ಭವಿಷ್ಯತ್ ಯತ್ ಪ್ರಾಸಾದೇ ಸರ್ವಮುದ್ಧೃತಮ್ ।
ಮೂಲಪ್ರಾಸಾದಮಿತ್ಯುಕ್ತಂ ತತ್ತ್ವಪ್ರಾಸಾದಮುಚ್ಯತೇ ॥

ಟೀಕು॥ ಯತ್=ಅವುದಾನೊಂದು ವಸ್ತುವು, ಭೂತಂ=ಹಿಂದಣಕಾಲದಲ್ಲಿ ಆದುದು, ಭವ್ಯಂ=ಈ ಕಾಲದಲ್ಲಿಯಾಗತಕ್ಕದು, ಭವಿಷ್ಯತ್=ಮುಂದಣ ಕಾಲದಲ್ಲಿ ಆಗಲುಳ್ಳದು ಆದ, ಸರ್ವಂ=ಸಮಸ್ತವೂ, ಪ್ರಾಸಾದೇ=ಮೂಲ ಪ್ರಾಸಾದದಲ್ಲಿಯೆ, ಉದ್ಧೃತಂ= ಉದ್ಧರಿಸಲ್ಪಟ್ಟುದು. ಇತಿ ಮೂಲಪ್ರಾಸಾದಮುಕ್ತಂ=ಈ ಪರಿಯಿಂ ಮೂಲಪ್ರಾಸಾದ ನುಡಿಯಲುಪಟ್ಟುದು. ತತ್ವಪ್ರಾಸಾದಮುಚ್ಯತೇ=ತತ್ವಪ್ರಾಸಾದವು ನುಡಿಯಲುಪಡುತ್ತಿದ್ದುದು. ॥೩೬॥

ಶ್ಲೋಕ॥ ತತ್ತ್ವಂ ಚೈವಾದಿಬೀಜಂ ಚ ತತ್ವಾನ್ತೇ ವಿನಿಯೋಜಯೇತ್ ।
ಕಾರ್ಯಕಾರಣ ಸಂಯುಕ್ತಂ ಸರ್ವ ತತ್ತ್ವಾತ್ಮಕಂ ವಿದುಃ ॥

ಟೀಕು॥ ತತ್ತ್ವಾಂತೇ=ತತ್ತ್ವಾಂಕವೆನಿಸುವ ವ್ಯಂಜನರೂಪವಾದ ಹಕಾರದಲ್ಲಿ ಆದಿ ಬೀಜಂಚ=ಆದಿ ಬೀಜವೆನಿಸಿಕೊಂಬ ಅಕಾರವನೂ, ವಿನಿಯೋಜಯೇತ್=ಕೂಡುವದು, ಹ್ ಎಂಬ ವ್ಯಂಜನ ವರ್ಣದಲ್ಲಿ ಅ ಎಂಬ ಸ್ವರವೂ ಕೂಡಿದಡೆ ಹ ಎಂದಾಯಿತ್ತು. ಕಾರ್ಯಕಾರಣ ಸಂಯುಕ್ತಂ=ಹಕಾರವೂ ಬಿಂದುವಿನೊಡನೆ ಕೂಡಲು ಹಂ ಎಂದುದ್ಧೃತವಾಯ್ತು. ಈ ಮಂ ಎಂಬಕ್ಷರವೆ ತತ್ತ್ವಂಚ=ತತ್ತ್ವಪ್ರಾಸಾದವು,

ಸರ್ವತತ್ವಾತ್ಮಕಂವಿದುಃ=ಈ ತತ್ವಪ್ರಾಸಾದವನೂ ಸರ್ವ ತತ್ತ್ವಸ್ವರೂಪವಾದುದಾಗಿ ಅಱಿವುದು. ತತ್ತ್ವಪ್ರಾಸಾದ ಹೇಳಲುಪಟ್ಟುದು.

ಆದಿಪ್ರಾಸಾದವು ಹೇಳಲುಪಡುವದು:

ಶ್ಲೋಕ॥ ಪ್ರಥಮಂ ಚತುರ್ದಶಂ ಚೈವ ಜೀವಾಂತೇ ವಿನಿಯೋಜಯೇತ್ ।
ಆಧಾರಾಧೇಯ ಸಂಯುಕ್ತಂ ಆದಿಬೀಜಮಿಹೋಚ್ಯತೇ ॥

ಟೀಕು॥ ಪ್ರಥಮಂ=ರಾಜಸವರ್ಗವೆನಿಸುವ ಮಧ್ಯಮಾವರಣದ ಇಂದ್ರದಳಾಕ್ಷರವಪ್ಪ ಅಕಾರವನು ಅಕಾರಕ್ಕೆ ಹದಿನಾಲ್ಕನೆಯದಾದ ಔಕಾರವನು, ಜೀವಾಂತೇ= ಜೀವಾಂತನಾಮವನುಳ್ಳ ಹಕಾರದಲ್ಲಿ, ವಿನಿಯೋಜಯೇತ್=ಕೂಡುವದು, ಹ್ ಎಂಬ ವ್ಯಂಜನದಲ್ಲಿ ಅ ಎಂಬ ಸ್ವರವ ಕೂಡಿದರೆ ಹ ಎಂಬಕ್ಷರ ರೂಪವಹುದು. ಆ ಹಕಾರದಲ್ಲಿ ಔ ಎಂಬ ಸ್ವರವ ಕೂಡಿದಡೆ ಹೌ ಎಂದುದ್ಧರಣವಹುದು. ಆಧಾರಾಧೇಯ ಸಂಯುಕ್ತಂ=ಆ ಉದ್ಧೃತವಾದ ವರ್ಣವು ಬಿಂದುವಿನೊಡನೆ ಕೂಡಲು- ಪಟ್ಟಡೆ ಹೌಂ ಎಂಬ ವರ್ಣವಹುದು. ಈ ಹೌಂ ಎಂಬ ತಾಂತ್ರಿಕ ಪ್ರಾಸಾದ ಮಂತ್ರವನು, ಇಹ=ಈ ಶುದ್ಧಾಖ್ಯತಂತ್ರದಲ್ಲಿ, ಆದಿಬೀಜಮುಚ್ಯತೇ= ಆದಿಪ್ರಾಸಾದಬೀಜವೆಂದು ನುಡಿಯಲುಪಡುತ್ತಿಹುದು. ॥೩೮॥

ಶ್ಲೋಕ॥ ಆದಿಶಕ್ತಿಃ ಸ್ವಬೀಜೇನ ಸಂಯೋಗಾದಭಿಧೀಯತೆ ।
ಏತಚ್ಛಿವಮಯಂ ಬೀಜಂ ಸರ್ವಸ್ಥಿತಿಕರಂ ಪರಮ್ ॥

ಟೀಕು॥ ಆದಿಶಕ್ತಿಃ ಸ್ವಬೀಜೇನ ಸಂಯೋಗಾತ್=ತನ್ನ ಆದಿಶಕ್ತಿ ಎಂಬ ಬೀಜಾಕ್ಷರ ದೊಡತನಕೂಟದದೆಸೆಯಿಂದ, ಅಭಿದೀಯತೇ=ಆದಿಪ್ರಸಾದವೆಂದು ನುಡಿಯಲು ಪಡುತ್ತಿಹುದು. ಏತತ್‌ಶಿವಮಯಂ ಬೀಜಂ=ಈ ಶಿವಸ್ವರೂಪವಾದ ಆದಿಪ್ರಾಸಾದಾಕ್ಷರವು, ಪರಂ=ಪರವಹಂಥಾದ್ದು, ಸರ್ವಸ್ಥಿತಿಕರಂ=ಸರ್ವಸ್ಥಿತಿ ಕರ್ತೃ ವಾದಂಥಾದ್ದು, ॥೩೯॥

ಶ್ಲೋಕ॥ ಆದಿಪ್ರಾಸಾದಮಿತ್ಯುಕ್ತಮಾತ್ಮಪ್ರಾಸಾದಮುಚ್ಯತೇ ।

ಟೀಕು॥ ಆದಿಪ್ರಾಸಾದಂ ಇತ್ಯುಕ್ತಂ=ಈ ಪ್ರಕಾರದಿಂದ ಆದಿಪ್ರಸಾದ ಹೇಳಲುಪಟ್ಟುದು; ಆತ್ಮಪ್ರಾಸಾದಂ=ಆತ್ಮ ಪ್ರಾಸಾದವು; ಉಚ್ಯತೇ=ಹೇಳಲುಪಡುವುದು. ॥೪೦॥

ಶ್ಲೋಕ॥ ಭೂತಾಂತಂ ತು ಸಮುದ್ಧೃತ್ಯ ಆತ್ವಾದಿಪ್ರಕೃತಿ ಸಂಯುತಮ್ ।
ಪ್ರಥಮಂ ತು ಸಮುದ್ಧೃತ್ಯ ಆತ್ವಾದಿಪ್ರಕೃತಿ ಸಂಯುತಮ್ ।

ತಯೋರ್ಮಧ್ಯಗತಾಶಕ್ತಿರಾತ್ಮಬೀಜಮಿತಿ ಸ್ಮೃತಮ್ ॥

ಟೀಕು॥ ಭೂತಾಂತಂ ಸಮುದ್ಧೃತ್ಯ=ಭೂತಾಂತವೆಂಬ ಹೆಸರನುಳ್ಳ ಹಿ ಎಂಬ ವರ್ಣ ವನುದ್ಧರಿಸಿ, ಆದಿಪ್ರಕೃತಿ ಸಂಯುತಂ=ಪ್ರತ್ಯಕ್ಷರವೇಳಕ್ಕೆ ಮೊದಲಾದ ಅಕಾರದೊಡನೆ ಕೂಡಲುಪಟ್ಟುದನಾಗಿ ಮಾಡಿ ದೇಹಯೆಂಬ ಬೀಜವಹುದು. ಪ್ರಥಮಂತು ಸಮುದ್ಧೃತ್ಯ= ಸಾತ್ವಿಕವರ್ಗದ ಇಂದ್ರದಳಾಕ್ಷವಾದ ಸ ಯೆಂಬ ವ್ಯಂಜನವನುದ್ಧರಿಸಿ, ಆದಿಪ್ರಕೃತಿ ಸಂಯುತಂ=ಅಕಾರದೊಡನೆ ಕೂಡಿದುದಾಗಿ ಮಾಡಿದಡೆ ಸ ಯೆಂಬ ವರ್ಣವಹುದು. ತಯೋಃ=ಆ ಹಕಾರ ಸಕಾರಂಗಳೆರಡಱ, ಮಧ್ಯಗತಂ=ಶಕ್ತಿ ಮಧ್ಯದಲ್ಲಿ ಸೊನ್ನೆಯ ನೇಯಿಸಿದಡೆ ಹಂಸ ಎಂಬ ಮಂತ್ರರೂಪವಹುದು. ಆತ್ಮ ಬೀಜಮಿತಿ ಸ್ಮೃತಂ=ಈ ಹಂಸ ಎಂಬ ದ್ವಯಾಕ್ಷರಮಾತ್ಮಪ್ರಾಸಾದವೆಂದು ನುಡಿಯಲುಪಟ್ಟುದು.

ಶ್ಲೋಕ॥ ಹೃತ್ಸರೋರುಹ ಮಧ್ಯೇ ಚ ಸಂಸ್ಥಿತಂ ಸರ್ವಕಾರಣಮ್ ।
ಆತ್ಮಪ್ರಾಸಾದಮಿತ್ಯುಕ್ತಂ ಜೀವಪ್ರಾಸಾದಮುಚ್ಯತೇ ।

ಟೀಕು॥ ಹೃತ್ಸರೋರುಹ ಮಧ್ಯೇಚ=ಹೃತ್ಕಮಲ ಮಧ್ಯದಲ್ಲಿ, ಸರ್ವ ಕಾರಣಂ= ಎಲ್ಲಾವಕ್ಕೆಯೂ ಕಾರಣವಾಗಿ, ಸಂಸ್ಥಿತಂ=ಈ ಹಂಸ ಮಂತ್ರದಲ್ಲಿರುತ್ತಿಹುದು. ಆತ್ಮಪ್ರಾಸಾದಮಿತ್ಯುಕ್ತಂ=ಆತ್ಮಪ್ರಾಸಾದವೆಂದು ನುಡಿಯಲುಪಟ್ಟುದು. ಈ ಹಂಸ ಮಂತ್ರವೇ, ಜೀವಪ್ರಾಸಾದಮುಚ್ಯತೇ=ಜೀವನೆನಿಸಿಕೊಂಬ ಪ್ರಾಸಾದಮಂತ್ರವೆಂದು ನುಡಿಯಲುಪಡುತ್ತಿಹುದು. ॥೪೨॥

ಶ್ಲೋಕ॥ ಏತೇ ವೈ ಶಿವಬೀಜತ್ವಾತ್‌ಶಿವಮಂತ್ರಾಃ ಇತಿಸ್ಮೃತಾಃ ।
ಶುದ್ಧಾದಿ ಚಾತ್ಮಪರ್ಯಂತಂ ಸ್ಥಿತಿಮಾರ್ಗೇಣ ಚೋದಿತಾಃ ॥

ಟೀಕು॥ ಏತೇವೈ ಶಿವಬೀಜತ್ವಾತ್=ಈ ಐದು ಪ್ರಾಸಾದ ವರ್ಣಂಗಳೂ ಶಿವಬೀಜವಪ್ಪುದು ಕಾರಣವಾಗಿ, ಶಿವಮಂತ್ರಾಃ ಇತಿ ಸ್ಮೃತಾಃ=ಶಿವಮಂತ್ರಂಗಳೆಂದು ನೆನೆಯಲುಪಟ್ಟವು. ಶುದ್ಧಾದಿ ಚಾತ್ಮ ಪರ್ಯಂತಂ=ಶುದ್ಧ ಪ್ರಾಸಾದ ಮೊದಲಾಗಿ ಆತ್ಮ ಪ್ರಾಸಾದ ಕಡೆಯಾದಂಥ ಪಂಚಮಂತ್ರಂಗಳೂ, ಸ್ಥಿತಿಮಾರ್ಗೇಣ ಚೋದಿತಾಃ=ಸ್ಥಿತಿಮಾರ್ಗ ದಿಂದವೇ ಉದ್ಧರಿಸಲುಪಟ್ಟುವು. ॥೪೩॥

ಶ್ಲೋಕ॥ ಶಿವಮನ್ತ್ರಮಿದಂ ಪ್ರೋಕ್ತಂ ಸದಾಶಿವಮಥಶ್ರುಣು ।

ಟೀಕು॥ ಶಿವಮಂತ್ರಂಮಿದಂ ಪ್ರೋಕ್ತಂ=ಈ ಪಂಚ ಶಿವಮಂತ್ರವು ನುಡಿಯಲು ಪಟ್ಟುದು, ಅಥ=ಅನಂತರದಲ್ಲಿ, ಸದಾಶಿವಂ=ಸದಾಶಿವಮಂತ್ರಭೇದವಂ, ಶೃಣು=ಕೇಳು, ಸದಾಶಿವ ಮಂತ್ರಂಗಳಂ ನಿರೂಪಿಸುತ್ತಿದ್ದಾನು. ॥೪೪॥

ಶ್ಲೋಕ॥ ಮೋಕ್ಷದಂ ಚಾಭಿವೃದ್ಧಿಶ್ಚ ಕಾಮ್ಯಂ ಶಾನ್ತಿಕ ಪೌಷ್ಟಿಕಾಮ್ ।
ಮೋಕ್ಷದಂ ಚಾಕ್ಷರಂ ಪಂಚ ಅಭಿವೃದ್ಧಿಃ ಷಡಕ್ಷರಮ್ ॥

ಕಾಮ್ಯಮಷ್ಟಾಕ್ಷರಂ ವಿನ್ದ್ಯಾತ್ ಶಾನ್ತಿಕಂ ತು ನವಾಕ್ಷರಮ್ ।
ಪೌಷ್ಟಿಕಂ ದಶಬೀಜಂ ಸ್ಯಾತ್ ಮನ್ತ್ರಾಃ ಪಂಚವಿಧಾಃ ಸ್ಮೃತಾಃ ॥

ಟೀಕು॥ ಮೋಕ್ಷದಂ ಚ=ಮೋಕ್ಷದವೆಂದೂ, ಅಭಿವೃದ್ಧಿಶ್ಚ=ಅಭಿವೃದ್ಧಿಯೆಂದೂ, ಕಾಮ್ಯಂ=ಕಾಮ್ಯವೆಂದೂ, ಶಾಂತಿಕ ಪೌಷ್ಟಿಕಂ=ಶಾಂತಿಕ ಪೌಷ್ಟಿಕಗಳೆಂದು ಐದು ಭೇದವಾಗಿಪ್ಪುದು, ಮೋಕ್ಷದಂ ಚಾಕ್ಷರಂ ಪಂಚ=ಮೋಕ್ಷದವೆಂಬ ಮಂತ್ರಂ ಪಂಚಾಕ್ಷರ ವಾಗಿಪ್ಪುದು. ಅಭಿವೃದ್ಧಿಷಡಕ್ಷರಂ=ಅಭಿವೃದ್ಧಿಯೆಂಬ ಮಂತ್ರವು ಷಡಕ್ಷರವಾಗಿಪ್ಪುದು. ಕಾಮ್ಯಮಷ್ಟಾಕ್ಷರಂ ವಿಂದ್ಯಾತ್=ಕಾಮ್ಯಮೆಂಬ ಮಂತ್ರವಷ್ಟಾಕ್ಷರವೆಂದಱಿವುದು. ಶಾಂತಿಕಂ ತು=ಶಾಂತಿಕವೆಂಬಕ್ಷರವಾಯಿತ್ತಾದಡೆ ನವಾಕ್ಷರಂ=ಒಂಭತ್ತು ಅಕ್ಷರವನುಳ್ಳದು. ಪೌಷ್ಟಿಕಂ ದಶಬೀಜಂ ಸ್ಯಾತ್=ಪೌಷ್ಟಿಕವೆಂಬ ಮಂತ್ರವು ದಶಾಕ್ಷರವಹುದು. ಮಂತ್ರಾಃ=ಹೀಂಗೆ ಈ ಸದಾಶಿವಮಂತ್ರಂಗಳೂ, ಪಂಚವಿಧಾಃ ಸ್ಮೃತಾಃ=ಐದು ವಿಧಂಗಳಾಗಿ ನೆನೆಯಲುಪಟ್ಟುವು. ॥೪೬॥

ಶ್ಲೋಕ॥ **ಈಶೇ ತುರ್ಯಮುದ್ಧೃತ್ಯ ಐಂದ್ರೇ ಚತುರ್ದಶಾನ್ವಿತಮ್ ।**
ಪರಾಪರ ಸಮಾಯುಕ್ತಂ ಶಕ್ತಿಂ ಚಾದಿ ಕಲಾನ್ವಿತಾಮ್ ॥

ಸೋಮಾನ್ತಂ ದ್ವಿಕಲೋಪೇತಂ ಸೋಮಾದಿತ್ವಾದಿಸಂಯುತಮ್ ।
ಪಞ್ಚಾಕ್ಷರಮಿದಂ ಪ್ರೋಕ್ತಂ ಮುಕ್ತಿದಂ ಪರಮಂ ವಿದುಃ ॥

ಟೀಕು॥ ಈಶೇ ತುರೀಯಮುದ್ಧೃತ್ಯ=ಈಶ ವರ್ಗದ ಸಕಾರಕ್ಕೆ ನಾಲ್ಕನೆಯದಾದ ಷ ಕಾರವು, ಐಂದ್ರೇಚತುರ್ದಶಾನ್ವಿತಮ್=ಇಂದ್ರವರ್ಗವೆನಿಸಿಹ ಸ್ವರಾಕ್ಷರದ ಅಕಾರಕ್ಕೆ ಹದಿನಾಲ್ಕನೆಯ ವರ್ಣವಾದ ಔ ಕಾರದೊಡನೆ ಕೂಡಲ್ಪಟ್ಟದ್ದಾಗಿಯೂ, ಪರಾಪರ ಸಮಾಯುಕ್ತಂ=ಸೊನ್ನೆಯೊಡನೆ ಕೂಡಲುಪಟ್ಟುದಾಗಿಯೂ ಮಾಡುವದು. ಹೀಂಗೆ ಮಾಡಿದಡೆ ಹೌಂ ಎಂಬ ಪ್ರಾಸಾದ ಬೀಜವಹುದು. ಈ ಆದಿ ಪ್ರಾಸಾದದ ಬೀಜವು ಸದಾಶಿವಮಂತ್ರವೈದಕ್ಕೆಯೂ ಆದ್ಯಕ್ಷರವಾಗಿಪ್ಪುದು. ಶಕ್ತಿ ಚಾದಿ ಕಲಾನ್ವಿತಂ=ಶಕ್ತಿಬೀಜವಹ ಸ ಎಂಬ ವ್ಯಂಜನಾಕ್ಷರವೂ ಆದಿಕಲೆಯೆನಿಸುವ ಅಕಾರದೊಡನೆ ಕೂಡಲುಪಟ್ಟು ಸ ಎಂಬ ವರ್ಣವಹುದು. ಸೋಮಾನ್ತಂದ್ವಿಕಲೋಪೇತಂ=ಕುಬೇರ ವರ್ಗದ ಕಡೆಯದಹ ವಕಾರವು ಆ ಕುಬೇರ ವರ್ಗಕ್ಕೆ ಕಡೆಯಾಗಿ ಈಶಾದ್ಯವಾದ ಶಕಾರವೂ ಎಂಬ ಎರಡಕ್ಷರಕ್ಷರವೂ ಎರಡು ಕಲೆಯೆಂಬ ಅಕಾರವನೂ ಮೂಱು ಕಲೆಯೆಂಬ ಇಕಾರವನೂ ಕೂಡಿಕೊಂಡಿಹಂಥಾವು. ಆ ಸ್ವರ ಕೂಟದಿಂದ ವಾಶಿ ಎಂಬ ವರ್ಣವಹವು. ಆ ವರ್ಣಂಗಳ ಪೂರ್ವಪರವಾಗಿ ಮಾಡಿಕೊಂಡಡೆ ಶಿವಾ ಎಂದಹವು. ಸೋಮಾದಿ ತು=ಕುಬೇರ ವರ್ಗಕ್ಕೆ ಮೊದಲಹ ಯ್ ಎಂಬ ವ್ಯಂಜನಾಕ್ಷರವಾಯಿತ್ತಾದಡೆ, ಆದಿ ಸಂಯುಕ್ತಂ=ಆದಿಯೆನಿಸಿಹ ಅಕಾರದೊಡನೆ ಕೂಡಲುಪಟ್ಟಡೆ ಯ ಎಂಬ

ವರ್ಣವಹುದು. ಇದಂ ಪಂಚಾಕ್ಷರಂ=ಈ ಹೌಂ ಸ ಶಿವಾ ಯ ಎಂಬ ಪಂಚಾಕ್ಷರವೂ ಪರಮಂ=ಅಧಿಕತರಹಂಥಾ, ಮುಕ್ತಿದಂ=ಮುಕ್ತಿದವೆಂಬ ಮಂತ್ರವೆಂದು, ವಿದುಃ=ಅಱಿವುದು. ॥೪೮॥

ಶ್ಲೋಕ॥ ಭೂತಾನ್ತಂ ತು ಸಮುದ್ಧೃತ್ಯ ಸಪ್ತಸಪ್ತ ಸ್ವರಾನ್ವಿತಮ್ ।
ಕಾರ್ಯಕಾರಣಸಂಯುಕ್ತಮೀಶಾದ್ಯಂ ತ್ರಿಕಲಾಯುತಮ್ ॥
ಸೋಮಾನ್ತಂ ದ್ವಿಕಲೋಪೇತಂ ಸೋಮಾದಿತ್ವಾದಿ ಸಂಯುತಮ್ ।

ವರುಣಾಂತಂ ಚಾದಿಯುಕ್ತಂ ಮಾರುತಾಂತಂ ಕಲಾನ್ವಿತಮ್ ।
ಏವಂ ಷಡಕ್ಷರಂ ಪ್ರೋಕ್ತಂ ಸರ್ವಸಿದ್ಧಿಪ್ರದಾಯಕಮ್ ॥

ಟೀಕು॥ ಭೂತಾಂತಂ ತುಸಮುದ್ಧೃತ್ಯ ಸಪ್ತಸಪ್ತಸ್ವರಾನ್ವಿತಮ್=ಮಕಾರವನುದ್ಧರಿಸಿ ಚತುರ್ದಶ ಸ್ವರವೆಂಬ ಔಕಾರದೊಡನೆ ಕೂಡಲುಪಟ್ಟುದನಾಗಿ ಮಾಡಿದಡೆ ಹೌಂ ಎಂಬ ಆದಿ ಬೀಜವಹುದು, ಈಶಾದ್ಯಂ ತ್ರಿಕಲಾಯುತಂ=ಈಶ ವರ್ಗದ ಮೊದಲಕ್ಷರವಪ್ಪ ಶಕಾರವು ಮೂಱುಕಲೆಯೆನಿಸಿಹ ಇಕಾರದೊಡನೆ ಕೂಡಲುಪಟ್ಟಡೆ ಶಿಯೆಂಬ ವರ್ಣವಹುದು. ಸೋಮಾಂತ ದ್ವಿಕಲೋಪೇತಂ=ಕುಬೇರವರ್ಗದ ಕಡೆಯಪ್ಪ ವಕಾರಂ ದ್ವಿಕಲೆಯೆಂಬ ಆಕಾರವ ಕೂಡಲುಪಟ್ಟಡೆ ವಾ ಎಂಬ ವರ್ಣವಹುದು. ಸೋಮಾದಿತ್ವಾದಿ ಸಂಯುತಂ=ಕುಬೇರ ವರ್ಗವಪ್ಪಾದಿಯ ಯ್ ಎಂಬ ವ್ಯಂಜನಾಕ್ಷರವೂ ಆದಿಯೆಂಬ ಅಕಾರದೊಡನೆ ಕೂಡಲುಪಟ್ಟಡೆ ಯ ಎಂಬ ವರ್ಣವಹುದು. ವರುಣಾಂತಮಾದಿ ಸಂಯುಕ್ತಂ=ವರುಣ ವರ್ಗದ ಕಡೆಯಪ್ಪ ನ್ ಎಂಬ ವ್ಯಂಜನಾಕ್ಷರವೂ ಆದಿಯೆಂಬ ಅಕಾರದೊಡನೆ ಕೂಡಲುಪಟ್ಟಡೆ ನ ಎಂಬ ವರ್ಣವಹುದು. ಮಾರುತಾಂತಂ ಕಲಾಯುತಂ=ವಾಯುವರ್ಗ ಕಡೆಯಪ್ಪ ಮ್ ಎಂಬ ವ್ಯಂಜನಾಕ್ಷರವು ಆದಿಯೆಂಬ ಅಕಾರದಡೊಡನೆ ಕೂಡಲುಪಟ್ಟಡೆ ಮ ಎಂಬ ವರ್ಣವಹುದು. ಏವಂ ಷಡಕ್ಷರಂ ಪ್ರೋಕ್ತಂ ಏವಂ=ಈ ಪ್ರಕಾರದಿಂದ, ಷಡಕ್ಷರಂ=ಹೌಂ ಶಿವಾಯನಮಃ ಎಂಬ ಷಡಕ್ಷರವು, ಸರ್ವಸಿದ್ಧಿ ಪ್ರದಾಯಕಂ=ಸಮಸ್ತ ಸಿದ್ಧಿಗಳ ಕೊಡುವ ಅಭಿವೃದ್ಧಿಯೆಂಬ ಮಂತ್ರವೆಂದು, ಪ್ರೋಕ್ತಂ=ನುಡಿಯಲುಪಟ್ಟುದು. ॥೫೧॥

ಶ್ಲೋಕ॥ ಗುಹ್ಯಂ ಚತುರ್ದಶೋಪೇತಂ ಶಿವಶಕ್ತಿಸಮಾಯುತಮ್ ।
ವರ್ಗಾದಿಜೀವ ಸಂಯುಕ್ತಂ ಶಕ್ತಿ ಶಕ್ತಿ ಕಲಾನ್ವಿತಮ್ ॥

ಶಕ್ತಿರ್ಮಾತ್ರಾದಿ ಸಂಯುಕ್ತಂ ವಾರುಣೇತಿ ಚತುರ್ಥಕಮ್ ॥
ತೃತೀಯಂ ಚಾಷ್ಟಿಸಂಯುಕ್ತಂ ಸೋಮಾಂತಂ ದ್ವಿಕಲಾಯುತಮ್ ।
ಅನಿಲಾದಿಕಲೋಪೇತಮೇವಮಷ್ಟಾಕ್ಷರಂ ವಿದುಃ ॥

ಟೀಕು॥ ಗುಹ್ಯಂ ಚತುರ್ದಶೋಪೇತಂ=ಗುಹ್ಯವೆಂಬ ಹಕಾರವು ಚತುರ್ದಶವೆಂಬ ಔಕಾರದೊಡನೆ ಕೂಡಲುಪಟ್ಟು ಬಿಂದುವಿನೊಡನೆ ಕೂಡಲುಪಟ್ಟಡೆ ಹೌಂ ಎಂಬ ಆದಿಬೀಜವಹುದು. ವರ್ಗಾದಿ ಜೀವಸಂಯುಕ್ತಂ=ವರ್ಗಾದಿ ಎಂಬ ಅಕಾರವು ಹ್ ಎಂಬ ವ್ಯಂಜನಾಕ್ಷರದೊಡನೆ ಕೂಡಲುಪಟ್ಟಡೆ ಹ ಎಂಬ ವರ್ಣವಹುದು. ಶಕ್ತಿ=ಶಕ್ತಿ ಎಂಬ ಬಿಂದುವ ಕೂಡಿದಡೆ ಹಂ ಎಂಬುದಾಯಿತ್ತು. ಶಕ್ತಿಕಲಾನ್ವಿತಂ=ಸ್ ಎಂಬ ಶಕ್ತಿಬೀಜವು ಕಲೆಯೆಂಬ ಅಕಾರ ಸ್ವರವ ಕೂಡಿದಡೆ ಸ ಎಂಬ ವರ್ಣ ವಹುದು. ಶಕ್ತಿಮಾತ್ರಾದಿ ಸಂಯುಕ್ತಂ=ವ್ಯಂಜನಶಕ್ತಿಬೀಜವು ಮಾತೃದಯೆಯೆಂಬ ಅಕಾರವ ಕೂಡಲುಪಟ್ಟುದು. ಮತ್ತೆಯು ಸ ಯೆಂಬ ವರ್ಣವಹುದು. ವಾರುಣೇತು ಚತುರ್ಥಕಂ= ವರುಣ ವರ್ಗದ ನಾಲ್ಕನೆಯ ದ ಎಂಬ ವರ್ಣವು, ಆಕಾರದೊಡನೆ ಉದ್ಧೃತವಾದರೆ ದಾ ಎಂದಹುದು. ತೃತೀಯಂಚಾಸ್ಥಿ ಸಂಯುಕ್ತಂ=ಮೂಜನೆಯ ಸ್ವರವಪ್ಪ ಇ ಕಾರವು ಅಸ್ಥಿಯೆಂಬ ಅಭಿದಾನವನುಳ್ಳ ಶ ಎಂಬದು ಸ್ವರವ ಕೂಡಲುಪಟ್ಟಡೆ ಶಿ ಎಂಬ ವರ್ಣವಹುದು. ಸೋಮಾಂತಂ ದ್ವಿ ಕಲಾಯುತಂ=ಸೋಮಾಂತವೆಂಬ ವಕಾರವು ಎರಡನೆಯ ಕಲೆಯಪ್ಪ ಆಕಾರದೊಡನೆ ಕೂಡಿದುದಾದೊಡೆ ವಾ ಎಂಬ ವರ್ಣವಹುದು. ಅನಿಲಾದಿ ಕಲೋಪೇತಂ=ಯ್ ಎಂಬ ವ್ಯಂಜನಾಕ್ಷರವು ಆದಿಕಲೆಯೆಂಬ ಅಕಾರಾಂತ ವಾದಡೆ ಯ ಎಂಬ ವರ್ಣವಹುದು. ಏವಂ=ಈ ಪ್ರಕಾರದಿಂದ, ಅಷ್ಟಾಕ್ಷರಂ ವಿದುಃ= ಹೌಹಂಸಸದಾಶಿವಾಯ ಎಂಬ ಅಷ್ಟಾಕ್ಷರ ಮಂತ್ರವು. ನವಾಕ್ಷರ ಭೇದವ ನಿರೂಪಿಸುತ್ತಿದ್ದಾನು. ॥೫೩॥

ಶ್ಲೋಕ॥ **ಭೂತಾನ್ತಂತು ಸಮುದ್ಧೃತ್ಯ ಷಟ್‌ಪಂಚ ತ್ರಿಕಲಾಯುತಮ್ ।**

ಅನಿಲಾನ್ತಮಾದಿಸಂಯುಕ್ತಂ ಲಯಾದಿ ವರುಣಾದಿಕಮ್ ।
ತಯೋರ್ಮಧ್ಯಗತಂ ಯಾನ್ತಮಾದಿಬೀಜೇನ ಸಂಯುತಮ್ ॥

ಸಪ್ತಮಾದ್ಯಂ ಸಮುದ್ಧೃತ್ಯ ಷಟ್‌ಪಂಚಕಲಾಯುತಮ್ ।
ಸಪ್ತಮನ್ತ್ರಸಮಾಯುಕ್ತಸಪ್ತಮಾನ್ತಂ ದ್ವಿಸಂಯುತಮ್ ॥

ಗುಹ್ಯ ಮಾತ್ರಾದಿ ಸಂಯುಕ್ತಂ ಶಕ್ತಿಂ ಚೋಪರಿ ವಿನ್ಯಸೇತ್ ।
ಶಕ್ತಿ ಮಾತ್ರಾದಿ ಸಂಯುಕ್ತಮೇವಂ ನವಾಕ್ಷರಂ ವಿದುಃ ॥

ಟೀಕು॥ ಭೂತಾನ್ತಂ ತು ಸಮುದ್ಧೃತ್ಯ=ಹಕಾರವನುದ್ಧರಿಸಿ ಷಟ್ ಪಂಚ ತ್ರಿಕಲಾಯುತಂ= ಹದಿನಾಲ್ಕನೆಯ ಕಲೆ ಎನಿಪ ಔಕಾರದೊಡನೆ ಕೂಡುವದು, ಗುಹ್ಯ ಮಾತ್ರಾದಿ ಸಂಯುಕ್ತಂ=ಹ್ ಎಂಬ ವ್ಯಂಜನ ಹ ಕಾರವನು ಆತ್ಮಬೀಜವೆಂಬ ಅಕಾರವ ಕೂಡಿದಡೆ ಹ ಎಂಬ ವರ್ಣವಹುದು. ಶಕ್ತಿಂ ಚೋಪರಿವಿನ್ಯಸೇತ್=ಆ ಹೌ ಕಾರ ಹಕಾರಂಗಳ ಮೇಲೆ ಬಿಂದುನಿರಿಸಿದೊಡೆ ಹೌಂ ಹಂ ಎಂಬ ವರ್ಣವಹುದು. ಶಕ್ತಿಮಾತ್ರ

ಸಮಾಯುಕ್ತಂ=ಸ್ ಎಂಬ ವ್ಯಂಜನವು ಅಕಾರದೊಡನೆ ಕೂಡಲುಪಟ್ಟಡೆ ಸ ಎಂಬ ವರ್ಣವಹುದು. ಸಪ್ತಮಾಂತಂ ದ್ವಿಸಂಯುಕ್ತಂ=ಏಳನೆಯ ವರ್ಗದ ಕಡೆಯ ವಕಾರವನೂ ಆ ಹಿಂದಣ ಸಕಾರವ ಕೂಡಿದಡೆ ಸ್ವ ಎಂಬ ವರ್ಣವಹುದು. ಅನಿಲಾಂತ ಮಾದಿಭೂತಾಂತಂ=ಅನಿಲ ವರ್ಗದ ಕಡೆಯ ಮ್ ಎಂಬ ವ್ಯಂಜನದೊಡನೆ ಆದಿಭೂತ ವೆಂಬ ಮಕಾರದ ಕಡೆಯ ಅಕ್ಷರವಪ್ಪ ಅಕಾರವ ಕೂಡಿದಡೆ ಮ ಎಂಬಕ್ಷರವಹುದು. ಈ ಸ್ಪಷ್ಟಮಾಗದೆಂದುದ್ಧರಿಸುವಾಗ ಆಯಾ ವರ್ಗ ಸ್ಥಿತಿ ವರ್ಣಂಗಳ ಮಾರ್ಗ ದಿಂದುದ್ಧರಿಸಲಾಗದೆಂದು ವಿಕಲ್ಪಿಸಬಾರದು. ಅಕ್ಷರಂಗಳಭಿದಾನ ಸಂಜ್ಞೆವಿಡಿವಲ್ಲಿ ನಾಮಸಂಜ್ಞೆಗಳು ಬರುತ್ತಿಹವು. ಲಯಾದಿವರುಣಾದಿಕಂ=ಲ ಯ ವರ್ಗದ ಮೊದಲಕ್ಷರ ಮಂ ವರುಣ ವರ್ಗಕ್ಕೆ ಮೊದಲಪ್ಪ ತಕಾರಮಂ ಉದ್ಧರಿಸಿ. ತಯೋರ್ಮಧ್ಯಗತಂಯಾಂತ ಮಾದಿ ಬೀಜೇನ ಸಂಯುತಂ=ಆ ಮಕಾರ ತಕಾರಂಗಳ ಮಧ್ಯದಲ್ಲಿ ಯಕಾರಕ್ಕೆ ಕಡೆಯ ತ್ ಎಂಬ ವ್ಯಂಜನವೂ ಅಕಾರದೊಡನೆ ಮಾಡಿ ರಯೆಂಬ ವರ್ಣವ ಕೂಡಿಸಿದೊಡೆ ಕ್ಷರತಂಯೆಂಬನುಕ್ರಮವಹುದು. ಸಪ್ತಮಾದ್ಯಂ ಸಮುದ್ಧೃತ್ಯ=ಆ ತ್ರಯೋದಶಾಕ್ಷರದ ಮುಂದೆ ಯಕಾರವನುದ್ಧರಿಸಿ, ಷಟ್ಪಂಚಮಕಲಾಯುತಂ=ಅಜನೆಯ. ಅಯಿದನೆಯ ವರ್ಣವೆನಿಸುವ ಮ್ ಎಂಬ ವ್ಯಂಜನಾಕ್ಷರಂ ಅಕಾರದೊಡನೆ ಕೂಡಲುಪಟ್ಟಡೆ ಮ ಎಂಬ ವರ್ಣವಹುದು. ಬಿಂದುನಾದಸಮಾಯುಕ್ತಂ=ಎಲ್ಲಾ ಬೀಜಂಗಳೂ ಬಿಂದುವಿನೊಡಗೂಡಲುಪಟ್ಟಿಹುದು. ಏವಂ=ಈ ಪ್ರಕಾರದಿಂದ ನವಾಕ್ಷರಂ ವಿದುಃ=ಹೌಂ ಹಂ ಸ್ವಂ ಮಂ ಕ್ಷಂ ರಂ ತಂ ಯಂ ಮಂ ಎಂಬ ನವಾಕ್ಷರ ಮಂತ್ರವಿದು ಶಾಂತಿಕ ಮಂತ್ರವೆಂದಱಿವುದು. ॥೫೭॥

ಶ್ಲೋಕ॥ ಏತದ್ವೈಪರಮಂ ಬೀಜಂ ಸರ್ವಸಿದ್ಧಿಪ್ರದಾಯಕಮ್ ।

ಟೀಕು॥ ಈ ನವಾಕ್ಷರಂ ಪರತರವೆನಿಸಿಪ್ಪ ಬೀಜವು. ಸಮಸ್ತ ಸಿದ್ಧಿಗಳಂ ಕೊಡುವಂಥದು.

ಶ್ಲೋಕ॥ ಪರಾತ್ಪರಂ ಸಮುದ್ಧೃತ್ಯ ಐನ್ದ್ರೇ ಚತುರ್ದಶಾನ್ವಿತಮ್ ॥

ಕಾರ್ಯಕಾರಣ ಸಂಯುಕ್ತಂ ಶಕ್ತಿಬೀಜ ಸಮನ್ವಿತಮ್ ।
ಈಶೇ ತೃತೀಯಕಂ ಚಾಘೋ ಪರೇ ದ್ವಿತೀಯಜೀವಯುಕ್ ॥

ಸಪ್ತಮಾಂತಂ ದ್ವಿಸಂಯುಕ್ತಂ ಷಷ್ಠಾಂತಂ ಷಟ್ಕಲಾನ್ವಿತಮ್ ।
ಭೂತಾಂತಂ ಸಮುದ್ಧೃತ್ಯ ವಹ್ನಿಂ ತಸ್ಯೋಪರಿ ನ್ಯಸೇತ್ ॥

ಪಂಞ್ಚಮಾನ್ತಂ ಕಲೋಪೇತಂ ಭಾನ್ತಮೇಕಾರಸಂಯುತಮ್ ।
ಪಂಚಪಂಚಮಮಾದಿಸ್ಯಾತ್ ಷಷ್ಠಾಂತಂ ಸಪ್ತಮಾದಿಕಮ್ ॥

ಬಿಂದುನಾದ ಸಮಾಯುಕ್ತಂ ದಶಬೀಜಮಹೋಚ್ಯತೇ ।

ಟೀಕು॥ ಪರಾತ್ಪರಂ ಸಮುದ್ಧೃತ್ಯ=ಹಕಾರವನುದ್ಧರಿಸಿ, ಐಂದ್ರಚತುರ್ದಶಾದಿಕಂ=ಐಂದ್ರ ವರ್ಗದ ಹದಿನಾಲ್ಕು ಸ್ವರವೆನಿಸಿಪ್ಪ ಔಕಾರವಕೂಡುವದು, ಕಾರ್ಯಕಾರಣ ಸಂಯುಕ್ತಂ=ಬಿಂದುವಕೂಡಿದಡೆ ಹಾಂ ಎಂಬುದೇ ಬೀಜವಹುದು. ಶಕ್ತಿಬೀಜ ಸಮನ್ವಿತಂ=ಸ್ ಎಂಬ ವ್ಯಂಜನಮಂ ಬೀಜನಾಮವನುಳ್ಳ ಅಕಾರದೊಡನೆ ಕೂಡಿದಡೆ ಸ ಎಂಬ ವರ್ಣವಹುದು. ಈಶೇ ತೃತೀಯಕಂ ಚಾದೌ=ಈ ಹಿಂದಣ ಸಕಾರಕ್ಕೆ ಪರವಾಗಿ ಮುಂದಣದ ಉದ್ಧರಣಾಕ್ಷರಕ್ಕೆ ಮೊದಲಲ್ಲಿ ಈಶ ವರ್ಗದ ತೃತೀಯಾಕ್ಷರ ವೆನಿಸುವ ಸಕಾರವಮತ್ತೊಂದನುದ್ಧರಿಸಿ, ಪರೇ ದ್ವಿತೀಯ ಜೀವಯುಕ್=ಇದಱಿಂದ ಮೇಲೆ ಈಶವರ್ಗದ ದ್ವಿತೀಯಮೆನಿಸಿಪ್ಪ ಷ್ ಎಂಬ ವರ್ಣವು ಜೀವಾಭಿದಾನದ ಅಕ್ಷರದೊಡನೆ ಕೂಡಿದಡೆ ಷ ಎಂಬ ವರ್ಣವಹುದು. ಸಪ್ತಮಾಂತಂ ದ್ವಿಸಂಯುಕ್ತಂ= ಏಳನೆಯ ವರ್ಗದ ಕಡೆಯ ವಕಾರವೆಂಬ ಈ ಎರಡಕ್ಷರ ಸಂಯೋಗವಾದಡೆ ಷ್ವ ಎಂಬಕ್ಷರವಹುದು. ಷಷ್ಠಾಂತಂ ಷಟ್ಕಲಾನ್ವಿತಂ=ಷಡ್ವರ್ಗದ ಕಡೆಯ ಮಕಾರವಾಱನೆಯ ಸ್ವರವಪ್ಪ ಊಕಾರವ ಕೂಡಿದಡೆ ಮೂಅಕ್ಷರವಹುದು. ಭೂತಾಂತಂ ತು ಸಮುದ್ಧೃತ್ಯ ವಹ್ನಿಂ ತಸ್ಯೋಪರಿನ್ಯಸೇತ್=ಹಕಾರವನುದ್ಧರಿಸಿ ಅದರ ಮೇಲೆ ತಕಾರವ ಪ್ರಯೋಗಿಸುವದು. ಪಂಚಮಾಂತಂ ಕಲೋಪೇತಂ=ಆ ಹ ಎಂಬ ವರ್ಣವು ಆಱನೆಯ ಸ್ವರವಪ್ಪ ಊಕಾರವ ಕೂಡಿದಡೆ ಹೂ ಎಂಬ ಬೀಜವಹುದು. ಭಾಂತಮೇಕಾರ ಸಂಯುಕ್ತಂ=ಭಕಾರದ ಕಡೆಯಪ್ಪ ಮಕಾರಂ ಏ ಎಂಬ ಸ್ವರಾಕ್ಷರವ ಕೂಡಿದಡೆ ಮೈ ಎಂಬ ವರ್ಣವಹುದು, ಪಂಚ ಪಂಚಮಮಾದಿಸ್ಯಾತ್=ಪಂಚ ವರ್ಗದ ಐದನೆ ಅಕ್ಷರವಪ್ಪ ನಕಾರ ಮುಂದಣ ವರ್ಣೋಚ್ಚರಣಕ್ಕೆ ಮೊದಲಾಗಿಹುದು. ಷಷ್ಠಾಂಕಂ ಸಪ್ತಮಾಧಿಕಂ=ಆ ನ ಕಾರದ ಮೇಲೆ ಮ ಕಾರ ಯ ಕಾರಂಗಳನು ಉದ್ಧರಿಸುವುದು, ಬಿಂದುನಾದ ಸಮಾಯುಕ್ತಂ=ಈ ಮಂತ್ರಬೀಜಂಗಳೆಲ್ಲವೂ ಬಿಂದುಯುಕ್ತವಾಗಿಹವು. ದಶಬೀಜಂ=ಹೌಂ, ಸಂ ಸಂ ಷ್ವಂ ಮೂಂ ಹ್ರೂಂ ಮೇಂ ನಂ ಮಂ ಯಂ ಎಂ ದಶಬೀಜ ಮಂತ್ರವು, ಇಹ=ಈ ಶುದ್ಧಾಖ್ಯತಂತ್ರದಲ್ಲಿ ಉಚ್ಯತೇ=ಪೌಷ್ಟಿಕ ಮಂತ್ರವೆಂದು ನುಡಿಯಲುಪಟ್ಟುದು. ॥೬೩॥

ಶ್ಲೋಕ॥ ಏತೇ ಪಂಚ ವಿಧಾಃ ಪ್ರೋಕ್ತಾಃ ಮನ್ತ್ರಾಃ ಪಂಚಾಕ್ಷರಾದಯಃ ।

ಟೀಕು॥ ಪಂಚಾಕ್ಷರಾದಯಃ=ಪಂಚಾಕ್ಷರ, ಷಡಕ್ಷರ ಅಷ್ಟಾಕ್ಷರ ನವಾಕ್ಷರ ದಶಾಕ್ಷರಂಗಳನುಳ್ಳ, ಏತೇ ಪಂಚವಿಧಾಃ ಮಂತ್ರಾಃ=ಮೋಕ್ಷವೆಂದು, ವೃದ್ಧಿಯೆಂದು, ಕಾಮ್ಯವೆಂದು, ಶಾಂತಿಯೆಂದು, ಪೌಷ್ಟಿಕಮೆಂದು ಪಂಚ ಪ್ರಕಾರವಾದ ಈ ಸದಾಶಿವ ಮಂತ್ರಂಗಳೂ, ಪ್ರೋಕ್ತಾಃ=ಲೇಸಾಗಿ ಹೇಳಲುಪಟ್ಟವು. ॥೬೪॥

ಶ್ಲೋಕ॥ ಸದಾಶಿವಮಿತಿ ಪ್ರೋಕ್ತಂ ಮಹೇಶಂ ಶೃಣು ಷಣ್ಮುಖ ॥

ಟೀಕು॥ ಎಲೆ ಷಣ್ಮುಖನೆ! ಇತಿ=ಪೂರ್ವಶ್ಲೋಕೋದ್ಧರಣ ಪ್ರಕಾರದಿಂದ, ಸದಾಶಿವಂ ಪ್ರೋಕ್ತಂ=ಸದಾಶಿವ ಮಂತ್ರವು ಹೇಳಲುಪಟ್ಟುದು, ಮಹೇಶಂ=ಮಹೇಶ ಮಂತ್ರವು ಹೇಳಲ್ಪಡುವುದು, ಶೃಣು=ಕೇಳು. ॥೬೫॥

ಶ್ಲೋಕ॥ ಮಹೇಶಂ ರುದ್ರಮೂರ್ತಿತ್ವಾತ್ಸಂಹಾರೇಣ ಸಮುದ್ಧರೇತ್ ।

ಟೀಕು॥ ಮಹೇಶಂ=ಮಹೇಶ್ವರ ತತ್ತ್ವವು, ರುದ್ರಮೂರ್ತಿತ್ವಾತ್=ರುದ್ರಮೂರ್ತಿಗಳನುಳ್ಳಹ ತನದಿಂದ, ಸಂಹಾರೇಣ ಸಮುದ್ಧರೇತ್=ರೌದ್ರ ಮಂತ್ರಂಗಳಂ ಸಂಹಾರವರ್ಗಕ್ರಮದಿಂದ ಉದ್ಧರಿಸುವದು. ॥೬೬॥

ಶ್ಲೋಕ॥ ತಸ್ಯಭೇದಂ ತ್ರಿಧಾಜ್ಞೇಯಂ ಸೃಷ್ಟಿಸ್ಥಿತಿಲಯಂ ತಥಾ ॥

ಟೀಕು॥ ತಸ್ಯಭೇದಂ=ಆ ರೌದ್ರ ಮಂತ್ರಭೇದಂ, ತ್ರಿಧಾಜ್ಞೇಯಂ=ಮೂಱು ಪ್ರಕಾರವೆಂದಱಿಯತಕ್ಕದ್ದು. ಸೃಷ್ಟಿ ಮಂತ್ರವೆಂದೂ, ಸ್ಥಿತಿ ಮಂತ್ರವೆಂದೂ, ಲಯಮಂತ್ರ ವೆಂದೂ ಇಂತು, ತ್ರಿವಿಧಂ=ಮೂಱು ವಿಧವಾಗಿಹುದು. ಈ ಭೇದದೊಳು ಸೃಷ್ಟಿಮಂತ್ರವಂ ನಿರೂಪಿಸಿಹೆನು: ॥೬೭॥

ಶ್ಲೋಕ॥ ಭೂಮೌತೃತೀಯಮುದ್ಧೃತ್ಯ ಸಲಿಲಾದ್ಯಂ ಸಮಾಯುತಮ್ ।
ಭೂಮೌ ನವಾರ್ಣಕಂ ವಿನ್ಯಾದಮ್ಬರೇತು ಷಡಕ್ಷರಮ್ ।
ಆಧಾರಾಧೇಯ ಸಂಯುಕ್ತಂ ಸೃಷ್ಟಿಬೀಜಮಿಹೋಚ್ಯತೇ ॥

ಟೀಕು॥ ಭೂಮೌ ತೃತೀಯಮುದ್ಧೃತ್ಯ=ಭೂ ವರ್ಗದಲ್ಲಿ ಮೂಱನೆಯ ವರ್ಣವನಿಸಿಪ್ಪ ಹ ಕಾರವನುದ್ಧರಿಸಿ, ಸಲಿಲಾದ್ಯಂ ಸಮಾಯುತಂ=ಜಲವರ್ಗದ ಮೊದಲಪ್ಪ ಮಕಾರಮಂ ಹಕಾರದೊತ್ತಿನೊಳು ಸೇರಿಸುವದು. ಭೂಮೌ ನವಾರ್ಣಕಂ ವಿಂದ್ಯಾತ್= ಆ ಎರಡಕ್ಷರದಿಂ ಮುಂದೆ ಭೂವರ್ಗದಲ್ಲಿಯ ಒಂಬತ್ತನೆಯಕ್ಷರಮಪ್ಪ ರಕಾರಮಂ ಉದ್ಧರಿಸಬೇಕೆಂದಱಿವುದು. ಅಂಬರೇತು ಷಡಕ್ಷರಂ=ಆಕಾಶ ವರ್ಗದಲ್ಲಿಯಾಯಿತ್ತಾದಡೆ ಷಡಕ್ಷರಂ=ಆಱನೆಯಕ್ಷರಮಪ್ಪ ಏ ಕಾರವನುದ್ಧರಿಸುವದು. ಆಧಾರಾಧೇಯ ಸಂಯುಕ್ತಂ=ಈ ಚತುರ್ದಶಾಕ್ಷರಂಗಳುಂ ಬಿಂದುವ ಕೂಡಿಕೊಂಡಿಹವು. ಹಂ ಮಂ ರಂ ಏಂ ಎಂಬ ಈ ಮಂತ್ರ ಬೀಜಂ, ಇಹ=ಈ ಶುದ್ಧಾಖ್ಯ ತಂತ್ರದಲ್ಲಿ ಸೃಷ್ಟಿ ಬೀಜ ಮುಚ್ಯತೇ=ಸೃಷ್ಟಿ ಬೀಜವೆಂದು ನುಡಿಯಲುಪಡುತ್ತಿಹುದು. ॥೬೮॥

ಶ್ಲೋಕ॥ ಪೃಥಿವ್ಯಾಂತು ತೃತೀಯಸ್ಯ ವ್ಯೋಮಾನ್ತೇನ ಸಮನ್ವಿತಮ್ ।
ಶಕ್ತಿಂ ತಸ್ಯೋಪರಿನ್ಯಸೇತ್ತದ್ವರ್ಗೇ ತುರ್ಯಕಂ ಭವೇತ್ ॥

ಲಯಾದ್ಯಮನಲಂ ಚೈವ ಪಾರ್ಥಿವಾನ್ತೇನ ಸಂಯುತಮ್ ।
ವ್ಯೋಮಷಷ್ಠ ಸಮಾಯುಕ್ತಂ ಕಾರ್ಯಕಾರಣಸಂಯುತಮ್ ॥

ಸ್ಥಿತಿ ಬೀಜಮಿದಂ ಪ್ರೋಕ್ತಂ ಸಂಹಾರಂ ಚಾಧುನೋಚ್ಯತೆ ॥

ಟೀಕು॥ ಪೃಥಿವ್ಯಾಂತು=ಭೂವರ್ಗದಲ್ಲಿ, ತೃತೀಯಂ=ಮೂಱನೆಯಕ್ಷರವಪ್ಪ ಹ್ ಎಂಬ ವ್ಯಂಜನಾಕ್ಷರಂ ಈ ವ್ಯಂಜನಾಕ್ಷರವನುದ್ಧರಿಸಿ, ವ್ಯೋಮಾಂತೇನ ಸಮನ್ವಿತಂ=ವ್ಯೋಮ ವರ್ಗದ ಕಡೆಯಪ್ಪ ಅಕಾರದೊಡನೆ ಕೂಡಲುಪಟ್ಟಡೆ ಹ ಎಂಬ ವರ್ಣವಹುದು. ಶಕ್ತಿಂ ತಸ್ಯೋಪರಿನ್ಯಸ್ಯ=ಅದಱ ಮೇಲೆ ಬಿಂದುವನಿಕ್ಕಿದೊಡೆ ಹಂ ಎಂದಾಯಿತ್ತು. ತದ್ವರ್ಗೇ ತುರ್ಯಕಂ ಭವೇತ್ ತದ್ವರ್ಗೇ=ಆ ಭೂತವರ್ಗದಲ್ಲಿ ತುರ್ಯಕಂ ಭವೇತ್=ಗಣನಾಭಿದಾನದಲ್ಲಿ ತುರ್ಯಶಬ್ದವು ನಾಲ್ಕರ ಸಂಜ್ಞೆ, ತುರ್ಯಕ ನಾಲ್ಕನೆಯಕ್ಷರ ವಪ್ಪ ಸಕಾರವಾಹಕಾರದ ಮುಂದಣ ವರ್ಣವಹುದು. ಶಕ್ತಿಂ ತಸ್ಯೋಪರಿನ್ಯಸ್ಯ ಅದಱ ಮೇಲೆ ಬಿಂದುವನಿಕ್ಕಿದೊಡೆ ಹಂ ಎಂದಾಯಿತ್ತು. ಲಯಾದ್ಯಂ=ಲಯವರ್ಗದ ಮೊದಲಕ್ಷರವಪ್ಪ ಕ್ಷಕಾರ ಮೂಱನೆಯಕ್ಷರವು, ಅನಲಂ ಚೈವ=ಅಗ್ನಿಬೀಜವಪ್ಪ ರಕಾರಂ ನಾಲ್ಕನೆಯ ಬೀಜವು. ಪಾರ್ಥಿವಾಂತೇನ ಸಂಯುತಂ=ಭೂ ವರ್ಗದ ಕಡೆಯಕ್ಷರವಪ್ಪ ಯಕಾರವೈದನೆಯ ಬೀಜವಾಗಿ ಕೂಡುವುದು. ವ್ಯೋಮಷಷ್ಠಂ=ವ್ಯೋಮವರ್ಗದಲ್ಲಿಯ ಆಱನೆಯಕ್ಷರವಪ್ಪ ಲಕಾರವಾಱನೆಯ ಬೀಜವಾಗಿ, ಸಮಾಯುಕ್ತಂ=ಕೂಡಲುಪಟ್ಟುದುದು. ಕಾರ್ಯಕಾರಣ ಸಂಯುತಂ=ಈ ಷಡ್ವರ್ಣಂಗಳುಂ ಬಿಂದುವ ಕೂಡಿಕೊಂಡಹವು. ಇದಱ ಬೀಜಂ ಹಂ ಸಂ ಕ್ಷಂ ರಂ ಯಂ ಏಂ ಎಂಬ ಈ ಷಡಕ್ಷರಂ, ಸ್ಥಿತಿ ಪ್ರೋಕ್ತಂ=ಸ್ಥಿತಿಬೀಜವೆಂದು ಹೇಳಲುಪಟ್ಟುದು. ಸಂಹಾರಂ=ಸಂಹಾರ ಮಂತ್ರಬೀಜವು, ಅಧುನಾ=ಈಗಳುಂ, ಉಚ್ಯತೇ=ನುಡಿಯಲುಪಡುತ್ತಿಹುದು. ॥೭॥

ಶ್ಲೋಕ॥ ಮಹೀವರ್ಗೇ ತೃತೀಯಂ ಸ್ಯಾದ್ವ್ಯೋಮಾನ್ತೇನ ಸಮಾಯುತಮ್ ।
ಶಿವಶಕ್ತಿಸಮಾಯುಕ್ತಂ ಪೃಥಿವ್ಯಾದಿ ಸಮುದ್ಧರೇತ್ ।

ದ್ವಿತೀಯಾದ್ಯಂ ಸಮುದ್ಧೃತ್ಯ ತೇಜೋ ವೈ ಪಾರ್ಥಿವಾನ್ತಕಮ್ ।
ವ್ಯೋಮಷಡ್ವರ್ಣಕಂ ಬಿನ್ದುಂ ಸಂಹಾರಂ ಚೇತಿ ಕೀರ್ತಿತಮ್ ॥

ಟೀಕು॥ ಮಹೀವರ್ಗೇ ತೃತೀಯಂ=ಭೂವರ್ಗದಲ್ಲಿಯ ಮೂಱನೆಯಕ್ಷರವಪ್ಪ ಹ್ ಎಂಬ ವ್ಯಂಜನವು, ವ್ಯೋಮಾಂತೇನ ಸಮಾಯುತಂ ಸ್ಯಾತ್=ಆಕಾಶವರ್ಗದ ಕಡೆಯಪ್ಪ ಅಕಾರದೊಡನೆ ಕೂಡಿದುದಹುದು. ಕೂಡಿದಡೆ ಹ ಎಂಬ ವರ್ಣವಹುದು. ಶಿವಶಕ್ತಿ ಸಮಾಯುಕ್ತಂ=ಈ ಹಕಾರಂ ಬಿಂದುಯುಕ್ತವಾಗಿಪ್ಪುದಂ, ಪೃಥಿವ್ಯಾದಿ ಸಮುದ್ಧರೇತ್=ಈ ಹಂ ಎಂಬ ಬೀಜದ ಮುಂದೆ ಭೂವರ್ಗದ ಮೊದಲಕ್ಷರವನುದ್ಧರಿಸುವದು. ದ್ವಿತೀಯಾದ್ಯಂ ಸಮುದ್ಧೃತ್ಯ=ಎರಡನೆಯ ವರ್ಗದ ಮೊದಲ ಮ ಎಂಬುದನೂ

ಕ್ಷಕಾರದ ಮುಂದುದ್ಧರಿಸುವದು. ತೇಜೋ ವೈ ಪಾರ್ಥಿವಾಂತಕಂ ಬಿಂದುಂ=ವ್ಯೋಮ ವರ್ಗದಲ್ಲಿಯ ಷಡ್ವರ್ಣವೆನಿಸಿಹ ಯಕಾರವಮಂ ಉದ್ಧರಿಸಿ ಈ ಎಲ್ಲಾ ವರ್ಣಂಗಳಿಗೆ ಬಿಂದುವ ಕೂಡುವುದು. ಹೀಂಗೆ ಉದ್ಧರಿಸಿದಡೆ ಹಂ ಕ್ಷಂ ಮಂ ರಂ ಯಂ ಏಂ ಎಂಬ ಷಡ್ವರ್ಗಂಗಳಹವು. ಸಂಹಾರಂಚೇತಿ ಕೀರ್ತಿತಂ=ಈ ಷಡ್ಬೀಜಂ=ಸಂಹಾರ ಮಂತ್ರಬೀಜವೆಂದು ನುಡಿಯಲುಪಟ್ಟುದು. ॥೭೪॥

ಶ್ಲೋಕ॥ ಮಹೇಶಮೇವಮಾಖ್ಯಾತಂ ಶಕ್ತಿ ಬೀಜಮಥಶೃಣು ।

ಟೀಕು॥ ಭೋ ಷಣ್ಮುಖ!=ಎಲೆ ಕುಮಾರನೆ!, ಏವಂ=ಈ ಪ್ರಕಾರದಿಂದ ಮಹೇಶ ಮಾಖ್ಯಾತಂ=ಈ ಸೃಷ್ಟಿ ಸ್ಥಿತಿ ಲಯ ಭೇದವಾಗಿ ಮಹೇಶಮಂತ್ರ ಹೇಳಲುಪಟ್ಟುದು. ಅತಃ=ಈ ಶಿವ ಸದಾಶಿವ ಮಹೇಶ ಮಂತ್ರಂಗಳಿಂದ ಮೇಲೆ, ಶಕ್ತಿಬೀಜಂ ಶೃಣು=ಶಕ್ತಿ ಬೀಜಮಂತ್ರಮಂ ಕೇಳು. ಪಂಚಶಕ್ತಿ ಬೀಜಂಗಳಂ ನಿರೂಪಿಸುತ್ತಿದ್ದಾನು: ॥೭೫॥

ಶ್ಲೋಕ॥ ಶಕ್ತಿಬೀಜಂ ಸಮುದ್ಧೃತ್ಯ ವಿಕೃತಿರ್ವಹ್ನಿ ಸಂಯುತಮ್ ।
ಬಿಂದುನಾದಸಮಾಯುಕ್ತಂ ಶಕ್ತಿಬೀಜಮಿದಂ ಪರಮ್ ।

ಟೀಕು॥ ಶಕ್ತಿಬೀಜಂ ಸಮುದ್ಧೃತ್ಯ=ಶಕ್ತಿಬೀಜವಪ್ಪ ಸಕಾರವನುದ್ಧರಿಸಿ ವಿಕೃತಿರ್ವಹ್ನಿ ಸಂಯುತಂ=ವಿಕೃತಿ ಎಂಬ ಅಕಾರಮಂ ಅಗ್ನಿ ಎಂಬ ರಕಾರಮಂ ಕೂಡಿದಡೆ ಸ್ರಾ ಎಂಬುದಹುದು. ಬಿಂದುನಾದ ಸಮಾಯುಕ್ತಂ=ಬಿಂದುವಿನೊಡನೆ ಕೂಡಿದಡೆ ಸ್ರಾಂ ಎಂಬ ವರ್ಣವಹುದು. ಇದಂ ಪರಂ ಶಕ್ತಿಬೀಜಂ=ಈ ಉತ್ಕೃಷ್ಟವಹಂಥಾ, ಶಕ್ತಿ ಬೀಜಂ=ಸಮಸ್ತ ಶಕ್ತ್ಯಾಶ್ರಯವಾದುದು. ॥೭೬॥

ಶ್ಲೋಕ॥ ಪ್ರಥಮಾ ಶಕ್ತಿರಿತ್ಯುಕ್ತಂ ದ್ವಿತೀಯಾಶಕ್ತಿರುಚ್ಯತೇ ॥

ಟೀಕು॥ ಪ್ರಥಮಾಶಕ್ತಿಮಿತ್ಯುಕ್ತಂ=ಈ ಬೀಜಂ ಪ್ರಥಮಾ ಶಕ್ತಿಬೀಜವೆಂದು ಹೇಳಿದುದು. ದ್ವಿತೀಯಾ ಶಕ್ತಿಃ=ಇನ್ನು ದ್ವಿತೀಯ ಶಕ್ತಿಮಂತ್ರ ಸ್ವರೂಪವನು ಹೇಳಿಹೆನು. ॥೭೭॥

ಶ್ಲೋಕ॥ ನಾದಾದ್ಯಂ ತು ಸಮುದ್ಧೃತ್ಯ ಷಷ್ಠಂ ಮಾಯಾಸಮನ್ವಿತಮ್ ।
ಬಿನ್ದುನಾದ ಸಮಾಯುಕ್ತಂ ದ್ವಿತೀಯಾಶಕ್ತಿರುಚ್ಯತೇ ॥

ಟೀಕು॥ ನಾದಾದ್ಯಂತು ಸಮುದ್ಧೃತ್ಯ=ಹಕಾರಕ್ಕೆ ಮೊದಲೆನಿಸಿಹ ಸಕಾರಮನುದ್ಧರಿಸಿ ಷಷ್ಠಂ ಮಾಯಾ ಸಮನ್ವಿತಂ=ಷಷ್ಠವೆಂಬ ರಕಾರಮಂ ಮಾಯೆ ಎಂಬ ಈ ಕಾರಮಂ ಕೂಡಿ, ಬಿಂದುನಾದ ಸಮಾಯುಕ್ತಂ=ಸೊನ್ನೆಯೊಡನೆ ಕೂಡಲುಪಟ್ಟಡೆ, ಸ್ರೀಂ ಎಂಬ ಬೀಜವಹುದು. ದ್ವಿತೀಯಾ ಶಕ್ತಿರುಚ್ಯತೇ=ಸ್ರೀಂ ಎಂಬ ಶಕ್ತಿಬೀಜವು ದ್ವಿತೀಯ ಶಕ್ತಿಬೀಜವೆಂದು ನುಡಿಯಲುಪಡುತ್ತಿಹುದು. ॥೭೮॥

ಶ್ಲೋಕ॥ ತತ್ತ್ವಾನ್ತಾದ್ಯಂ ಧರಾವಹ್ನಿಬಿನ್ದುನಾದಸಮಾಯುತಮ್ ।
ತೃತೀಯಾಶಕ್ತಿರಿತ್ಯುಕ್ತಂ ಚತುರ್ಥಾಶಕ್ತಿರುಚ್ಯತೇ ॥

ಟೀಕು॥ ತತ್ತ್ವಾನ್ತಾದ್ಯಂಧರಾವಹ್ನಿಬಿಂದುನಾದಸಮಾಯುತಮ್=ಹಕಾರಕ್ಕೆ ಮೊದಲಕ್ಷರವಹ ಸಕಾರದೊಡನೆ ಧರಾಭಿದಾನವನುಳ್ಳ ಊಕಾರಮಂ ವಹ್ನಿನಾಮವನುಳ್ಳ ರಕಾರಮಂ ಬಿಂದುವಂ ಕೂಡಿದೊಡೆ ಸ್ರೂಂ ಎಂಬ ಬೀಜವಹುದು. ಈ ಸ್ರೂಂ ಎಂಬ ಬೀಜಂ, ತೃತೀಯಾ ಶಕ್ತಿರಿತ್ಯುಕ್ತಂ=ಮೂಱನೆಯ ಶಕ್ತಿಬೀಜವೆಂದು ನುಡಿಯಲು ಪಟ್ಟುದು. ॥೭೯॥

ಶ್ಲೋಕ॥ ಜೀವಾದ್ಯಂ ವಹ್ನಿಸಂಯುಕ್ತಂ ಕಲಾದ್ವಾದಶಕಾಭೇದ್ಯಮ್ ।
ಬಿನ್ದುನಾದ ಸಮಾಯುಕ್ತಂ ಚತುರ್ಥಾಶಕ್ತಿರುಚ್ಯತೇ ॥

ಟೀಕು॥ ಜೀವಾದ್ಯಂ ವಹ್ನಿ ಸಂಯುಕ್ತಂ=ಜೀವಾಕ್ಷರಕ್ಕೆ ಮೊದಲಪ್ಪ ಸಕಾರದೊಡನೆ ವಹ್ನಿನಾಮವನ್ನುಳ್ಳ ರಕಾರಮಂ ಕೂಡಿ, ಕಲಾದ್ವಾದಶಕಾಭೇದ್ಯಂ=ದ್ವಾದಶ ಕಲೆಯಪ್ಪ ಐಕಾರದಿಂದ ಭೇದಿಸತಕ್ಕುದ ಮಾಡಿ, ಬಿಂದುನಾದಸಮಾಯುತಂ=ಸೊನ್ನೆಯ ಕೂಡಿದಡೆ, ಸ್ರೈಂ ಎಂಬ ಬೀಜವಹುದು. ಈ ಸ್ರೈಂ ಎಂಬ ಬೀಜಂ, ಚತುರ್ಥಾ ಶಕ್ತಿರುಚ್ಯತೇ=ನಾಲ್ಕನೆಯ ಶಕ್ತಿ ಎಂದು ಹೇಳಲುಪಡುತ್ತಿಹುದು. ॥೮೦॥

ಶ್ಲೋಕ॥ ಭೂತಾದ್ಯಂ ವಹ್ನಿ ಸಂಯುತಂ ಚತುರ್ದಶ ಕಲೋಪೇತಮ್ ।

ಬಿನ್ದುನಾದಸಮಾಯುಕ್ತಂ ಪಂಚಮಾ ಶಕ್ತಿರೀರಿತಾ ।
ಏತೇಷಾಂ ಶಕ್ತಿಬೀಜಾನಾಂ ಶಿವಾಂಗಮಿವ ಚೋದ್ಧೃತಮ್ ॥

ಟೀಕು॥ ಭೂತಾದ್ಯಂ ವಹ್ನಿ ಸಂಯುತಂ=ಸಕಾರ ವಹ್ನಿ ಬೀಜದೊಡನೆ ಕೂಡಿದುದಾಗಿ, ಚತುರ್ದಶ ಕಲೋಪೇತಂ=ಹದಿನಾಲ್ಕನೆಯ ಕಲೆಯೊಡನೆ ಕೂಡಿಹುದುದಾಗಿ ಬಿಂದುನಾದಸಮಾಯುಕ್ತಂ=ಸೊನ್ನೆಯೊಡನೆ ಕೂಡಲುಪಟ್ಟಡೆ ಸ್ರೌಂ ಎಂಬ ಬೀಜ ವಹುದು. ಶಿವಾಂಗಮಿವ ಚೋದ್ಧೃತಂ=ಈ ಶಕ್ತಿಬೀಜಂ ಶಿವಾಂಗಬೀಜವಹ ಹಾಂಗೆ ಉದ್ಧರಿಸಲುಪಟ್ಟುದು. ॥೮೧॥

ಶ್ಲೋಕ॥ ಏತಾಸಾಂ ಪಞ್ಚಶಕ್ತೀನಾಮುಮಾಶಕ್ತ್ಯಾದಿರೇವ ಚ ।
ಉಮಾಽಮ್ಬಿಕಾ ಗಣಾನೀ ಚ ಈಶ್ವರೀ ಚ ಮನೋನ್ಮನೀ ॥

ಟೀಕು॥ ಈ ಪಂಚ ಶಕ್ತಿಬೀಜಂಗಳೊಳಗೆ ಉಮಾಶಕ್ತಿ ಮೊದಲ ಶಕ್ತಿ ಎನಿಸಿಕೊಂಬುದು. ಉಮೆ, ಅಂಬಿಕೆ, ಗಣಾನಿ, ಈಶ್ವರೀ, ಮನೋನ್ಮನೀ ಎಂಬ ಶಕ್ತಿಗಳು ಕ್ರಮದಿಂದ ದಶಾಂಶ ಸಂಭೂತ ಶಕ್ತಿಗಳು. ॥೮೨॥

ಶ್ಲೋಕ॥ ವಹ್ನೇರ್ಗಣಂ ಸಮುದ್ಧೃತ್ಯ ವಹ್ನಿಮಾಯಾಸಮನ್ವಿತಮ್ ।
ಬಿನ್ದುನಾದ ಸಮಾಯುಕ್ತಂ ಗೌರೀಬೀಜಮಿದಂ ಪರಮ್ ॥

ಟೀಕು॥ ವಹ್ನೇರ್ಗಣ ಸಮುದ್ಧೃತ್ಯ=ಗಕಾರವನುದ್ಧರಿಸಿ, ವಹ್ನಿಮಾಯಾ ಸಮನ್ವಿತಮ್=ರಕಾರ ಈ ಕಾರಂಗಳನದರೊಳಗೆ ಕೂಡಿ, ಬಿಂದುನಾದ ಸಮಾಯುತಂ=ಸೊನ್ನೆಯ ಕೂಡಿದಡೆ ಗ್ರೀಂ ಎಂಬ ವರ್ಣಬಹುದು. ಇದಂ ಈ ಗ್ರೀಂ ಕಾರಂ, ಪರಂ=ಅತಿಶಯವಾದಂಥಾ, ಗೌರೀ ಬೀಜಂ=ಗೌರೀ ಬೀಜವೆನಿಸಿಕೊಂಬುದು. ॥೮೩॥

ಶ್ಲೋಕ॥ ಅನ್ಯಾಸಾಂ ಚೈವಶಕ್ತೀನಾಂ ಸ್ವನಾಮಾದ್ಯಕ್ಷರೇಣ ತು ।
ಕಾರ್ಯಕಾರಣ ಸಂಯುಕ್ತಂ ಸರ್ವೇಷಾಂ ಶಕ್ತಿರುಚ್ಯತೇ ॥

ಟೀಕು॥ ಅನ್ಯಾಸಾಂ ಶೈವಶಕ್ತೀನಾಂ ಸ್ವನಾಮಾಧ್ಯಕ್ಷರೇಣ ತು=ತಮ್ಮ ತಮ್ಮ ಹೆಸರುಗಳ ಮೊದಲಕ್ಷರದೊಡನೆ, ಕಾರ್ಯಕಾರಣ ಸಂಯುಕ್ತಂ=ಬಿಂದುವ ಕೂಡಿದಡೆ, ಸರ್ವೇಷಾಂ ಶಕ್ತಿರುಚ್ಯತೇ=ಎಲ್ಲಾ ಶಕ್ತಿಗಳಿಗೆಯೂ ಬೀಜಾಕ್ಷರಂಗಳಹವೆಂದು ನುಡಿಯಲುಪಡುವುದು. ॥೮೪॥

ಶ್ಲೋಕ॥ ಮನ್ತ್ರಮೇವ ಸಮಾಖ್ಯಾತಂ ಮನ್ತ್ರನ್ಯಾಸಮಥಶೃಣು ।

ಟೀಕು॥ ಎಲೆ ಷಣ್ಮುಖನೆ! ಈ ಪ್ರಕಾರದಿಂದ, ಮಂತ್ರಂ=ಮಂತ್ರವು, ಸಮಾಖ್ಯಾತಂ=ಹೇಳಲುಪಟ್ಟುದು. ಅಥ=ಅನಂತರ, ಮಂತ್ರನ್ಯಾಸಂ=ಮಂತ್ರನ್ಯಾಸವ, ಶೃಣು=ಕೇಳು. ॥೮೫॥

ಶ್ಲೋಕ॥ ಲಿಙ್ಗಸ್ಯ ಸ್ಥಾಪನಾಕಾಲೇ ತತ್ತ್ವಮನ್ತ್ರಾಶ್ಚ ವಿನ್ಯಸೇತ್ ।
ಕುಂಭೇಷ್ವನ್ತರ್ಗತಾನ್ಮನ್ತ್ರಾನ್ ಲಿಂಗವತ್ಪೂರಿತಾನ್ಬಹಿಃ ॥

ಟೀಕು॥ ಲಿಂಗಸ್ಯ ಸ್ಥಾಪನಾ ಕಾಲೇ=ಶಿವಲಿಂಗ ಸ್ಥಾನಪನಾವಸರದಲ್ಲಿ, ತತ್ತ್ವ ಮಂತ್ರಾಶ್ಚ ವಿನ್ಯಸೇತ್=ತತ್ತ್ವಂಗಳಂ ಮಂತ್ರಂಗಳಂ ನ್ಯಾಸವ ಮಾಡುವದು. ಕುಂಭೇಷು=ಸ್ಥಾಪಿತ ಕುಂಭಂಗಳಲ್ಲಿ, ಮಂತ್ರಾನ್=ಮಂತ್ರಗಳನೂ, ಅಂತರ್ಗತಾನ್=ಕುಂಭಾಂತರ್ಗತವಾದವನಾಗಿಯುಂ, ಲಿಂಗಂ=ಲಿಂಗದಲ್ಲಿ ಹೇಂಗೆ, ಬಹಿಃಪೂರಿತಾನ್=ಹಾಂಗೆ ಪೂರಿಸಲ್ಪಟ್ಟವನಾಗಿಯುಂ ನ್ಯಾಸವಮಾಡುವದು.

ಶ್ಲೋಕ॥ ತಯೋರ್ಯೋಗೇ ಕ್ರಿಯಾವಸ್ಥಾ ಸುಪ್ರತಿಷ್ಠೇತಿ ಕೀರ್ತಿತಾಃ ।

ಟೀಕು॥ ತಯೋರ್ಯೋಗೇ=ಆ ಲಿಂಗಸ್ಥಾಪನ ಕುಂಭಸ್ಥಾಪನಂಗಳಲ್ಲಿಯ ಕ್ರಿಯಾವಸ್ಥೆ, ಸುಪ್ರತಿಷ್ಠೇತಿ ಕೀರ್ತಿತಾಃ=ಸುಪ್ರತಿಷ್ಠೆಯೆಂದು ಕೀರ್ತಿಸಲುಪಟ್ಟುದು. ॥೮೭॥

ಶ್ಲೋಕ॥ ಪ್ರಾಣ ಪ್ರಕೃತಿ ಯೋಗಂ ತು ಜ್ಞಾತ್ವಾ ಸ್ಥಾಪನಮಾಚರೇತ್ ।
ಪ್ರಾಣಂ ಮನ್ತ್ರಮಿತಿಪ್ರೋಕ್ತಂ ಪ್ರಕೃತಿರ್ಮೂರ್ತಿರುಚ್ಯತೇ ॥

ಟೀಕು॥ ಪ್ರಾಣ ಪ್ರಕೃತಿ ಯೋಗಂ ಜ್ಞಾತ್ವಾ=ಪ್ರಾಣ ಪ್ರಕೃತಿಗಳ ಕೂಟಮನಜೆದು, ಸ್ಥಾಪನಮಾಚರೇತ್=ಸ್ಥಾಪನವನಾಚರಿಸುವದು. ಪ್ರಾಣಂ=ಪ್ರಾಣವು, ಮಂತ್ರಮಿತಿ ಪ್ರೋಕ್ತಂ=ಮಂತ್ರವೆಂದು ಹೇಳಲುಪಟ್ಟುದು, ಪ್ರಕೃತಿಃ=ಪ್ರಕೃತಿಯೆ, ಮೂರ್ತಿರುಚ್ಯತೇ= ಮೂರ್ತಿ ಎಂದು ನುಡಿಯಲುಪಡುತ್ತಿಹುದು. ॥೮೮॥

ಶ್ಲೋಕ॥ ಮನ್ತ್ರಮೂರ್ತಿಸುಸಂಯೋಗಂ ಶಿವಸಾನ್ನಿಧ್ಯಕಾರಣಮ್ ।
ತಸ್ಮಾದ್ವೈ ಮನ್ತ್ರಮೂರ್ತೀಶ್ಚ ಲಿಂಗಮಧ್ಯೇ ತು ವಿನ್ಯಸೇತ್ ॥

ಟೀಕು॥ ಮಂತ್ರಮೂರ್ತಿಸುಸಂಯೋಗಂ=ಮಂತ್ರಂಗಳ ಮೂರ್ತಿಗಳ ಲೇಸಹ ಕೂಟಂ, ಶಿವಸಾನ್ನಿಧ್ಯ ಕಾರಣಂ=ಪರಮೇಶ್ವರನ ಸಾನ್ನಿಧ್ಯಕ್ಕೆ ಕಾರಣವು, ತಸ್ಮಾದ್ವೈ=ಅದು ಕಾರಣದಿಂದ, ಮಂತ್ರಮೂರ್ತೀಶ್ಚ=ಮಂತ್ರಂಗಳನೂ ಮೂರ್ತಿಗಳನೂ, ಲಿಂಗಮಧ್ಯೇ ತು=ಶಿವಲಿಂಗಮಧ್ಯದಲ್ಲಿಯೆ, ವಿನ್ಯಸೇತ್=ನ್ಯಾಸವಮಾಡುವದು. ॥೮೯॥

ಶ್ಲೋಕ॥ ಮೂರ್ಧ್ನಿ ಪ್ರವಿನ್ಯಸೇಚ್ಛುದ್ಧಂ ಮೂಲಂ ಸ್ಯಾತ್ಸೂತ್ರಮಧ್ಯಕೇ ।
ತತ್ತ್ವಂ ತು ದಕ್ಷಿಣೇ ಪ್ರೋಕ್ತಂ ಆದಿಂ ವಾಮೇ ತು ವಿನ್ಯಸೇತ್ ।
ಆತ್ಮಾನಂ ಸೂತ್ರಮೂಲೇತು ವಿನ್ಯಸೇತ್ತು ವಿಚಕ್ಷಣಃ ॥

ಟೀಕು॥ ಶಿವಲಿಂಗದಲ್ಲಿ ಪಂಚಪ್ರಾಸಾದ ಮಂತ್ರಂಗಳನಿರಿಸುವ ಕ್ರಮುವಂ ನಿರೂಪಿಸಿಹನು. ಶಿವಲಿಂಗೋದ್ಧರಣದ ಸೂತ್ರ ಸಂಜ್ಞೆಯಿಂದವು ಪ್ರತಿಷ್ಠ ಲಿಂಗದಲ್ಲಿಯುಂ ಉದ್ಧರಣ ಲಿಂಗದಲ್ಲಿಯುಂ ಮಾಡಬೇಕು. ಅದು ಕಾರಣ, ಮೂರ್ಧ್ನಿ=ಶಿವಲಿಂಗದ ಮಸ್ತಕದಲ್ಲಿ, ಶುದ್ಧಂ=ಹ ಎಂಬ ಪ್ರಾಸಾದ ಮಂತ್ರಮವನು, ಪ್ರವಿನ್ಯಸೇತ್=ಲೇಸಾಗಿ ನ್ಯಾಸವ ಮಾಡುವದು. ಸೂತ್ರಮಧ್ಯಕ್ಕೆ, ಲಿಂಗೋದ್ಧರಣಾರ್ಥಂ=ಪಾತನಂ ಮಾಡಿದ ಸಪ್ತಾದಶ ಸೂತ್ರಂಗಳ, ಮಧ್ಯಸೂತ್ರಮಂ ನ್ಯಾಸ ಸಂಜ್ಞೆಯೆಂದು ಹೇಳುವದು. ಪ್ರತಿಷ್ಠಾಲಿಂಗಮಂ ಮಾಳ್ಪಲ್ಲಿ, ಲಿಂಗತುಂಗಚತುರ್ವಿಂಶತ್ಯಂಶಾರ್ಧಂ=ಮಧ್ಯದಲ್ಲಿ ಪಾತನಂಗೈದ ಸೂತ್ರಮಂ ನ್ಯಾಸ ಸಂಜ್ಞೆಗಂ ಪೇಳುವದು. ಲಿಂಗದ್ವಿಪಜ್ಕ್ತಿಯ ಅಷ್ಟಕೋಷ್ಟಂಗಳಿಂ ಕೆಳಗಷ್ಪೋರ್ಧ ಪಟ್ಟಿಕಾರೇಖೆಯಿಂ ಮೇಲಪ್ಪಾಜ್ಯಪ್ರದಾರಿಕಾ ರೇಖಾ ಸ್ಥಾನದಲ್ಲಿ ಮೂಲಂ ಹ್ರಾಂ ಎಂಬ ಮೂಲಪ್ರಸಾದಮಂತ್ರಮಂ ನ್ಯಾಸಮಂ ಮಾಳ್ಪುದಹುದು. ದಕ್ಷಿಣೇ=ದ್ವಿಪಜ್ಕ್ತಿ ಮಧ್ಯಮುಪ್ಪ ದಕ್ಷಿಣಾಸ್ಥಾನದಲ್ಲಿ, ತತ್ತ್ವಂತು=ಹಂ ಎಂಬ ತತ್ತ್ವಪ್ರಾಸಾದಮಂತ್ರಮಂ, ಪ್ರೋಕ್ತಂ=ನ್ಯಸ್ತವೆಂದು ಹೇಳಲುಪಟ್ಟುದು. ವಾಮೇ ತು ದ್ವಿಪಜ್ಕ್ತಿ=ಮಧ್ಯಮಪ್ಪ ವಾಮಸ್ಥಾನದಲ್ಲಿಯಾಯಿತ್ತಾದಡೆ, ಆದಿ=ಹಾಂ ಎಂಬ ಆದಿ ಪ್ರಾಸಾದ ಮಂತ್ರಮಂ

ವಿನ್ಯಸೇತ್=ನ್ಯಾಸಂ ಮಾಡುವದು. ಸೂತ್ರಮೂಲೇತು=ಊರ್ಧ್ವಪಟ್ಟಿಕೆಯ ಆಜ್ಯಪ್ರ ದಾರಿಕೆಯ ಮಧ್ಯಸೂತ್ರ ಮೂಲದಲ್ಲಿ, ಆತ್ಮನಂ=ಹಂಸ ಎಂಬ ಆತ್ಮ ಪ್ರಾಸಾದ ಮಂತ್ರಮಂ, ವಿಚಕ್ಷಣಃ ವಿನ್ಯಸೇತ್=ಅಜಿಕೆಯುಳ್ಳ ಪುರುಷಂ ನ್ಯಾಸಂ ಮಾಳ್ಪುದು.

ಶ್ಲೋಕ॥ ಮನ್ತ್ರನ್ಯಾಸಮಿದಂ ಪ್ರೋಕ್ತಂ ತತ್ತ್ವನ್ಯಾಸಮಥೋಚ್ಯತೇ ॥

ಟೀಕು॥ ಇದಂ ಮಂತ್ರನ್ಯಾಸಂ=ಈ ಶಿವ ಮಂತ್ರನ್ಯಾಸವು ಪ್ರೋಕ್ತಂ=ಹೇಳಲುಪಟ್ಟುದು. ಅಥ=ಅನಂತರದಲ್ಲಿ, ತತ್ತ್ವನ್ಯಾಸಂ=ಸದಾಶಿವತತ್ತ್ವನ್ಯಾಸವು ಉಚ್ಯತೇ=ಹೇಳಲು ಪಡುವದು. ॥೯೨॥

ಶ್ಲೋಕ॥ ಕರ್ಮೇಶಂ ಪುರತೋನ್ಯಸ್ಯ ಕರ್ತೃ ಸವ್ಯೇ ತು ವಿನ್ಯಸೇತ್ ।
ಮೂರ್ತಿ ವೈ ಚಾಪರೇ ನ್ಯಸ್ಯತ್ವಮೂರ್ತಿಮಿತರೇ ನ್ಯಸೇತ್ ।
ಊರ್ಧ್ವೇ ತು ಶಿವಸಾದಾಖ್ಯಂ ಪಞ್ಚತತ್ತ್ವಾನಿ ವಿನ್ಯಸೇತ್ ॥

ಟೀಕು॥ ಹಿಂದೆ ಹೇಳಿದ ಮಂತ್ರನ್ಯಸ್ತವಾದ ಸ್ಥಾನಂಗಳಲ್ಲಿ ತತ್ತ್ವನ್ಯಾಸಕ್ರಮಮಂ ನಿರೂಪಿಸಿಹನು. ಕರ್ಮೇಶಂ=ಕರ್ಮೇಶತತ್ತ್ವಮಂ, ಪುರತಃ=ಸೂತ್ರಮೂಲದಲ್ಲಿ, ನ್ಯಸ್ಯ=ನ್ಯಾಸಂ ಮಾಡಿ, ಕರ್ತೃ=ಕರ್ತೃಸಾದಾಖ್ಯತತ್ತ್ವಮಂ, ಸವ್ಯೇತು=ಸವ್ಯಭಾಗದಲ್ಲಿ ನ್ಯಾಸಂ ಮಾಡುವದು. ಮೂರ್ತಿವೈ=ಮುರ್ತಿಸಾದಾಖ್ಯಮಂ, ಅಪರೇ=ಅಪರಸ್ಯ ಭಾಗದಲ್ಲಿ, ನ್ಯಸೇತ್=ನ್ಯಾಸಂ ಮಾಡಿ ಆ, ಮೂರ್ತಿಂ=ಆ ಮೂರ್ತಿ ಸಾದಾಖ್ಯವನು, ಇತರೇನ್ಯಸೇತ್=ಉಳಿದ ಸ್ಥಾನದಲ್ಲಿ ನ್ಯಾಸವ ಮಾಡುವದು. ಉರ್ಧ್ವೇತು=ಊರ್ಧ್ವ ಸ್ಥಾನದಲ್ಲಿಯಾಯಿತ್ತಾದಡೆ, ಶಿವಸಾದಾಖ್ಯಂ=ಶಿವಸಾದಾಖ್ಯ ತತ್ತ್ವಮಂ ನ್ಯಾಸಂ ಮಡುವದು, ಪಂಚ ತತ್ತ್ವಾನಿ ವಿನ್ಯಸೇತ್=ಹೀಂಗೆ ಕ್ರಮದಿಂದೈದು ತತ್ತ್ವಂಗಳಂ ನ್ಯಾಸಂ ಮಾಡುವದು. ॥೯೩॥

ಶ್ಲೋಕ॥ ಪಞ್ಚಮೂರ್ತಿಮಯಂ ದೇವಂ ಸರ್ವಕಾರಣಕಾರಣಮ್ ।
ಅಷ್ಟತ್ರಿಂಶತ್ಕಲೋಪೇತಂ ಧ್ಯಾತ್ವಾ ತು ಸಕಲೀಕೃತಮ್ ॥

ಟೀಕು॥ ಪಂಚಮೂರ್ತಿಮಯಂ=ಪಂಚಮೂರ್ತಿಗಳ ಸ್ವರೂಪವನುಳ್ಳಂಥಾ ಅಷ್ಟತ್ರಿಂ ಶತ್ಕಲೋಪೇತಂ=ಮೂವತ್ತೆರಡು ಕಲೆಗಳೊಡನೆ ಕೂಡಿದಂಥಾ ಸಕಲೀಕೃತಂ=ಸಕಲೀಕೃತ ನಾದಂಥಾ, ಸರ್ವಕಾರಣಕಾರಣಂ=ಸಮಸ್ತ ಕಾರಣಂಗಳಿಗೆ ಕಾರಣವಾದಂಥಾ ದೇವಂ=ಪರಮೇಶ್ವರನನು, ಧ್ಯಾತ್ವಾ ತು=ಧ್ಯಾನವ ಮಾಡಿ, ॥೯೪॥

ಶ್ಲೋಕ॥ ಆವಾಹಯೇತ್ತತೋ ದೇವಂ ಪಂಚಾಕ್ಷರ ವಿಧಾನತಃ ।
ಷಡಕ್ಷರೇಣ ಮನ್ತ್ರೇಣ ಸ್ಥಾಪಯೇತ್ತು ವಿಚಕ್ಷಣಃ ॥

ಅಷ್ಟಾಕ್ಷರೇಣ ಮನ್ತ್ರೇಣ ಸನ್ನಿಧೀಕರಣಂ ಕುರು ।
ನಿವೇದಯ ನವಾರ್ಣೇನ ದಶಬೀಜೇನ ಪೂಜಯ ॥

ಟೀಕು॥ ಪೂರ್ವೋಕ್ತ ಸದಾಶಿವ ಮಂತ್ರ ಪಂಚಕಾನುಷ್ಠಾನಮಂ ಕುಮಾರಂಗೆ ಹೇಳಿಹನು. ತತಃ=ಆ ಧ್ಯಾನದಿಂದಂ ಮೇಲೆ, ಪಂಚಾಕ್ಷರ ವಿಧಾನತಃ=ಪಂಚಾಕ್ಷರ ವಿಧಾನದಿಂದ, ದೇವಂ ಆವಾಹಯ=ಪರಮೇಶ್ವರನನಾಹ್ವಾನಿಸ್ಯೆ. ವಿಚಕ್ಷಣಃ=ವಿಚಕ್ಷಣನಾದಾತನು ಷಡಕ್ಷರೇಣ ಮಂತ್ರೇಣ=ಷಡಕ್ಷರ ಮಂತ್ರದಿಂದ, ಸ್ಥಾಪಯೇತ್=ಸ್ಥಾಪಿಸುವನು, ಅಷ್ಟಾಕ್ಷರೇಣ ಮಂತ್ರೇಣ=ಅಷ್ಟಾಕ್ಷರ ಮಂತ್ರದಿಂದ ಸನ್ನಿಧೀಕರಣಂ ಕುರು=ಸಾನ್ನಿಧ್ಯವ ಮಾಡಿಕೊಳ್ಳೈ. ನವಾರ್ಣವೇನ=ನವಾಕ್ಷರಮಂತ್ರದಿಂದ ಮನಸಾದಿಗಳ ನಿವೇದಯ= ನಿವೇದಿಸು. ದಶಬೀಜೇನ=ದಶಬೀಜಾಕ್ಷರ ಮಂತ್ರದಿಂದ, ಪೂಜಯ=ಆ ಹಸ್ತಮಲ ಮಧ್ಯದಲ್ಲಿ ಶಿವನಂ ಭಾವಪುಷ್ಪಾದಿಗಳಿಂದ ಪೂಜಿಸ್ಯೆ.

ಶ್ಲೋಕ॥ ಪಾದ್ಯಂ ಗನ್ಧಾದಿಕಂ ದದ್ಯಾತ್‌ಬ್ರಹ್ಮಾಂಗೈಃ ಸಹ ಬುದ್ಧಿಮಾನ್ ।
ಸಕಲಸ್ಥಾಪನಾಕಾಲೇ ತದ್ಬೀಜಂ ಹೃದಿವಿನ್ಯಸೇತ್ ॥

ಟೀಕು॥ ಬುದ್ಧಿಮಾನ್=ಬುದ್ಧಿಮಾನ್ ಪುರುಷಂ, ಬ್ರಹ್ಮಾಂಗೈಃ ಸಹ=ಬ್ರಹ್ಮಮಂತ್ರಾಂಗ ಮಂತ್ರಂಗಳೊಡನೆ ಕೂಡಿ, ಪಾದ್ಯಂ=ಪಾದ್ಯಮಂ, ಗಂಧಾದಿಕಂ=ಗಂಧ ಮೊದಲಾದ ವಸ್ತುವಂ, ದದ್ಯಾತ್=ಕೊಡುವುದು. ಸಕಲ ಸ್ಥಾಪನಾಕಾಲೇ=ಮಹೇಶಮೂರ್ತಿಗಳಂ ಸ್ಥಾಪನಂ ಮಾಡುವ ಕಾಲದಲ್ಲಿ, ತದ್ಬೀಜಂ=ರೌದ್ರಮಂತ್ರಬೀಜಮಂ, ಹೃದಿ=ಆ ಮೂರ್ತಿಗಳ ಹೃದಯದಲ್ಲಿ, ವಿನ್ಯಸೇತ್=ನ್ಯಾಸಂ ಮಾಡುವದು. ॥೯೭॥

ಶ್ಲೋಕ॥ ಸೃಷ್ಟಿಮೂರ್ತೌ ನ್ಯಸೇತ್ ಸೃಷ್ಟಿಂ ಸ್ಥಿತಿಮೂರ್ತೌನ್ಯಸೇತ್ಸ್ಥಿತಿಮ್ ।
ಸಂಹಾರೇ ಸಂಹೃತಿರ್ಬೀಜಂ ವಿನ್ಯಸೇತ್ತು ವಿಚಕ್ಷಣಃ ।

ಟೀಕು॥ ಆ ಮಹೇಶ್ವರನ ಪಂಚವಿಂಶತಿ ಮೂರ್ತಿಗಳುಂ, ಸಕಲ ಸೃಷ್ಟಿಸ್ಥಿತಿ ಲಯಂಗಳಿಗೆ ಕಾರಣವಾಗಿ ಪ್ರಾದುರ್ಭೂತವಾಗಿ ಸೃಷ್ಟಿಮೂರ್ತಿ ಸ್ಥಿತಿಮೂರ್ತಿ ಸಂಹಾರಮೂರ್ತಿ ಗಳೆಂದುದಾಗಿಪ್ಪವು. ಅದು ಕಾರಣ ಸೃಷ್ಟಿಮೂರ್ತೌ=ಸೃಷ್ಟಿಯಲ್ಲಿ, ಸೃಷ್ಟಿಂ ವಿನ್ಯಸೇತ್= ಸೃಷ್ಟಿಮಂತ್ರ ಬೀಜಮಂ ನ್ಯಾಸಂ ಮಾಡುವದು. ಸ್ಥಿತಿ ಮೂರ್ತೌ=ಸ್ಥಿತಿಮೂರ್ತಿಯಲ್ಲಿ, ಸ್ಥಿತಿಂ ವಿನ್ಯಸೇತ್=ಸ್ಥಿತಿಮಂತ್ರ ಬೀಜಮಂ ನ್ಯಾಸಂ ಮಾಡುವದು. ಸಂಹಾರೇ= ಸಂಹಾರಮೂರ್ತಿಯಲ್ಲಿ ಸಂಹೃತಿರ್ಬೀಜಂ=ಸಂಹಾರ ಮಂತ್ರ ಬೀಜಮಂ, ವಿಚಕ್ಷಣೋ ವಿನ್ಯಸೇತ್=ವಿಚಕ್ಷಣನಾದಾತಂ ನ್ಯಾಸಂ ಮಾಡುವದು. ॥೯೮॥

ಶ್ಲೋಕ॥ ಶಕ್ತೀನಾಂ ಸ್ಥಾಪನಾಕಾಲೇ ತತ್ತದ್ಬೀಜಂ ಹೃದಿನ್ಯಸೇತ್ ।

ಟೀಕು॥ ಶಕ್ತೀನಾಂ=ಉಮಾದಿ ಶಕ್ತಿಮೂರ್ತಿಗಳನ್ನು, ಸ್ಥಾಪನಾಕಾಲೇ=ಸ್ಥಾಪನವಂ ಮಾಡುವ ಕಾಲದಲ್ಲಿ, ತತ್ತದ್ಬೀಜಂ=ಆಯಾ ಶಕ್ತಿಬೀಜಂಗಳಂ, ಹೃದಿ=ಹೃದಯದಲ್ಲಿ, ವಿನ್ಯಸೇತ್=ನ್ಯಾಸಂ ಮಾಡುವದು. ಉಮಾದಿ ಶಕ್ತಿಗಳ ಸ್ಥಾಪನವಂ ಮಾಡುವ ಕಾಲದಲ್ಲಿ ಆಯಾಶಕ್ತಿ ಬೀಜಂಗಳಂ ಆಯಾ ಶಕ್ತಿಗಳ ಹೃದಯದಲ್ಲಿ ನ್ಯಾಸಂ ಮಾಡುವದು. ॥೯೯॥

ಶ್ಲೋಕ॥ ಕ್ರಿಯಾಶರೀರಮಿತ್ಯುಕ್ತಂ ಮನ್ತ್ರಜೀವಮಿತಿ ಸ್ಮೃತಮ್ ।
ತಸ್ಮಾಜ್ಜೀವಂ ಶರೀರಂ ಚ ಜ್ಞಾತ್ವಾ ಸರ್ವಂ ಸಮಾಚರೇತ್ ।

ಟೀಕು॥ ಕ್ರಿಯಾ=ಸತ್ಕರ್ಮವು, ಶರೀರಮಿತ್ಯುಕ್ತಂ=ದೇಹವೆಂದು ಹೇಳಲುಪಟ್ಟುದು. ಮಂತ್ರಂ=ಮಂತ್ರವು, ಜೀವಮಿತಿ ಸ್ಮೃತಂ=ಜೀವನೆಂದು ನೆನೆಯಲುಪಟ್ಟುದು. ಕ್ರಿಯಾ ಮಂತ್ರಂಗಳ ಕೂಟವಲಾ. ಶಿವಸಾನ್ನಿಧ್ಯ ಕಾರಣಂ=ಪರಮೇಶ್ವರನ ಸಾನ್ನಿಧ್ಯಕ್ಕೆ ಕಾರಣವು. ತಸ್ಮಾತ್=ಅದು ಕಾರಣದಿಂದ, ಜೀವಂ ಶರೀಂ ಚ ಜ್ಞಾತ್ವಾ=ಆ ಮಂತ್ರಕ್ರಿಯೆಗಳು ಜೀವಕಾಯಂಗಳಂಥಾವೆಂದಱಿವುದು. ಸರ್ವಂ ಸಮಾಚರೇತ್=ಎಲ್ಲಾ ಕ್ರಿಯೆಯನೂ ಆಚರಿಸುವದು. ॥೧೦೦॥

ಶ್ಲೋಕ॥ ಮನ್ತ್ರಭೇದಮಿದಂ ಪ್ರೋಕ್ತಂ ಪ್ರಣವಂ ಚ ತತಃ ಶೃಣು ।

ಟೀಕು॥ ಮಂತ್ರಭೇದಮಿದಂ=ಈ ಮಂತ್ರಭೇದವಂ, ಪ್ರೋಕ್ತಂ=ಹೇಳಲುಪಟ್ಟುದು. ತತಃ=ಅದಱಿಂದಂ ಮೇಲೆ, ಪ್ರಣವಂ ಚ=ಪ್ರಣಮಭೇದಮಂ, ಶೃಣು=ಕೇಳು. ಈ ಮಂತ್ರಭೇದವಂ ಹೇಳಲುಪಟ್ಟುದು. ಅದಱಿಂದಂ ಮೇಲೆ ಪ್ರಣಮ ಭೇದಮಂ ಕೇಳು. ॥೧೦೧॥

ಇತಿ ಶ್ರೀ ವಾತುಲತನ್ತ್ರೇ ಶುದ್ಧಾಖ್ಯೇ ಸಹಸ್ರಗ್ರಂಥಸಂಹಿತಾಯಾಂ
ಶ್ರೀ ಮಲ್ಲಿಕಾರ್ಜುನೇನ ಕರ್ಣಾಟಭಾಷಾ ವಿವೃತೋ
ಮನ್ತ್ರಭೇದೋ ನಾಮ ಪಞ್ಚಮಃ ಪಟಲಃ

❖ ❖ ❖

ಷಷ್ಠಃ ಪ್ರಣವಭೇದಪಟಲಃ

ವ। ತಿ। ವೃತ್ತ॥ ಉಚ್ಚಾರಯಂತಿ ಯಮಿನಃ ಶಿವಸಂಗಮಾಯ
ವಾಮಾದಿಶಕ್ತಿ ಸಹಿತಂ ಸಕಲಸ್ಯ ಹೇತುಮ್ ।
ದೇವಾದಿ ಜನ್ಮವಿಲಯಸ್ಥಿತಿಭೂಮಿಭೂತಂ
ಉಚ್ಚಾರಯಾಮಿ ಹೃದಯಂ ಪ್ರಣವಂ ತಥಾಽಽನ್ತಮ್ ॥

ಶ್ಲೋಕ॥ ಅಥ ಪ್ರಣವಭೇದಂ ತು ಪ್ರವಕ್ಷ್ಯಾಮಿ ಸಮಾಸತಃ ।
ಸರ್ವಪಾಪಹರಂ ಚೈವ ಮುಕ್ತಿದಂ ಪರಮಂ ನೃಣಾಮ್ ॥

ಟೀಕು॥ ಅಥ=ಅನಂತರದಲ್ಲಿ, ಸರ್ವಪಾಪಹರಂ=ಸಮಸ್ತ ಪಾಪ ಪರಿಹಾರವನುಂಟು ಮಾಡುವಂಥಾದು, ಮುಕ್ತಿದಂ=ಮುಕ್ತಿಯನುಂಟುಮಾಡುವಂಥಾದು, ಪರಮಂ=ಉತ್ಕೃಷ್ಟ ವಾದಂಥಾದು, ನೃಣಾಂ=ನರರುಗಳಿಗೆ, ಸರ್ವಪಾಪಹರಂ ಚೈವ=ಎಲ್ಲಾ ಪಾಪಂಗಳ ಪರಿಹಾರಕರವಾದಂಥಾದು ಆದ, ಪ್ರಣವಭೇದಂ=ಪ್ರಣಮ ಭೇದಂಗಳನು ಸಮಾಸತಃ=ಸಮಾಸದಿಂದ ಪ್ರವಕ್ಷ್ಯಾಮಿ=ನಿರೂಪಿಸಿಹೆನು. ॥೨॥

ಶ್ಲೋಕ॥ ಪ್ರಣವಂ ಸರ್ವದೇವಾಖ್ಯಂ ಸರ್ವದೇವಮಯಂ ವಿದುಃ ।
ಸರ್ವೇಷಾಂ ಚೈವ ಮಂತ್ರಾಣಂ ಪ್ರಣವಂ ಪ್ರಾಣಮುಚ್ಯತೇ ॥

ಟೀಕು॥ ಪ್ರಣವಂ-ಓಂಕಾರವು, ಸರ್ವದೇವಾಖ್ಯಂ=ಶಿವಾಕ್ಷರಂ ಮಧ್ಯಸ್ಥವಾಗಿ ಎಲ್ಲಾ ವರ್ಣಂಗಳಿಗಿಂದ ಹೊರಹೊಮ್ಮಿದುದರಿಂದ ವರ್ಣಾದಿ ದೇವತೆಗಳಪ್ಪ ಎಲ್ಲಾ ದೇವತೆಗಳು ತನ್ನವಾದ ಕಾರಣ ಸರ್ವದೇವತಾ ನಾಮವನುಳ್ಳಬೇಕಾಯಿತ್ತು, ಸರ್ವದೇವಮಯಂವಿದುಃ=ಎಲ್ಲಾ ದೇವತೆಗಳ ನಾಮಂ ತನ್ನವಾದ ಕಾರಣ ಎಲ್ಲಾ ದೇವ ಸ್ವರೂಪವು ತನ್ನವೆಂದಜೆವುದು, ಸರ್ವೇಷಾಂ ಚೈವ ಮಂತ್ರಾಣಾಂ=ಎಲ್ಲಾ ದೇವತಾ ಮಂತ್ರಂಗಳಿಗೆಯೂ, ಪ್ರಣವಂ=ಓಂಕಾರಂ ಪ್ರಾಣಸ್ವರೂಪವೆಂದು, ಉಚ್ಯತೇ= ನುಡಿಯಲುಪಡುವುದು. ॥೩॥

ಆ ಪ್ರಣವ ಭೇದಂಗಳಂ ನಿರೂಪಿಸಿಹನು.

ಶ್ಲೋಕ॥ ಪ್ರಣವಂ ಪಞ್ಚಭೇದಂ ಸ್ಯಾತ್ತದ್ಭೇದಂ ಶೃಣು ಷಣ್ಮುಖ ।

ಟೀಕು॥ ಭೋ ಷಣ್ಮುಖ!=ಎಲೆ ಷಣ್ಮುಖನೆ!, ಪ್ರಣವಂ=ಸಮಸ್ತ ದೇವಾದಿ ಜನ್ಮಸ್ಥವಪ್ಪ ಈ ಪ್ರಣವವು, ಪಂಚಭೇದಂ ಸ್ಯಾತ್=ಅಯಿದು ಭೇದವಹುದು. ತದ್ಭೇದಂ ಶೃಣು=ಆ ಪಂಚ ಪ್ರಣವ ಭೇದವಂ ಕೇಳು. ॥೪॥

ಶ್ಲೋಕ॥ ಸಾಕಲ್ಯಂ ಶಾಂಭವಂ ಸೌಖ್ಯಂ, ಸಾವಶ್ಯಂ ಸಾಯುಜಂ ತಥಾ ।
ಏತೇ ವೈ ಪಞ್ಚಭೇದಾಸ್ತು ಪಞ್ಚವಕ್ತ್ರೇಷು ಚೋದ್ಧೃತಾಃ ॥

ಟೀಕು॥ ಸಾಕಲ್ಯಂ=ಸಾಕಲ್ಯ ಪ್ರಣವವೆಂದುಂ, ಶಾಂಭವಂ=ಶಾಂಭವ ಪ್ರಣವವೆಂದುಂ, ಸೌಖ್ಯಂ=ಸೌಖ್ಯ ಪ್ರಣವವೆಂದುಂ, ಸಾವಶ್ಯಂ=ಸಾವಶ್ಯ ಪ್ರಣವವೆಂದುಂ, ತಥಾ ಸಾಯುಜಂ=ಹಾಂಗೆ ಸಾಯುಜ್ಯ ಪ್ರಣವವೆಂದೂ, ಏತೇ ವೈ ಪಂಚ ಭೇದಾಸ್ತು=ಈ ಪಂಚ ಭೇದಂಗಳೂ, ಪಂಚವಕ್ತ್ರೇಷು ಚ=ಸದಾಶಿವನ ಪಂಚವಕ್ತ್ರಂಗಳಿಂದ, ಉದ್ಧೃತಾಃ= ಹೊರಹೊಮ್ಮಲುಪಟ್ಟವು. ॥೫॥

ಶ್ಲೋಕ॥ ಅಕಾರಂ ಚ ಉಕಾರಂ ಚ ಮಕಾರಂ ಚ ತ್ರಿಧಾ ಭವೇತ್ ।
ತೃತೀಯಾನ್ತರ್ಗತಂ ನಾದಂ ಚತುರ್ಥಂ ಮುಕ್ತಿಕಾರಣಮ್ ॥

ಟೀಕು॥ ಅಕಾರಂಚ=ಅಕಾರವು, ಉಕಾರಂಚ=ಉಕಾರವು, ಮಕಾರಂಚ=ಮಕಾರವು ವೆಂದು, ತ್ರಿಧಾ ಭವೇತ್=ಮೂರುಪ್ರಕಾರವಹುದು. ತೃತೀಯಾಂತರ್ಗತಂ=ಈ ತ್ರಿಮಾತ್ರಾಂತರ್ಗತವಾಗಿಹಂಥಾ, ಮುಕ್ತಿ ಕಾರಣಂ=ಮೋಕ್ಷಕ್ಕೆ ಕಾರಣವಾದಂಥ, ನಾದಂ=ಶುದ್ಧ ಶಿವಾಕ್ಷರವಪ್ಪ ಹಕಾರಂ ಚತುರ್ಯಕ್ಷರವಾಗಿಪ್ಪುದು. ॥೬॥

ಶ್ಲೋಕ॥ ಅಕಾರಂ ದಕ್ಷಿಣಾಂಶಸ್ಯಾದ್ವಾಮಾಂಶಸ್ಯಾದುಕಾರಕಮ್ ।

ಮಕಾರಂ ಮಧ್ಯದೇಹಂ ಸ್ಯಾತ್ತಸ್ಮಾತ್ರಿಪ್ರಣವಾತ್ಮಕಮ್ ।
ಹಕಾರಂ ತಸ್ಯ ಮಧ್ಯೇತು ಸಂಸ್ಥಿತಂ ಸರ್ವಕಾರಣಮ್ ॥

ಟೀಕು॥ ಪ್ರಣವ ಸ್ವರೂಪವಂ ನಿರೂಪಿಸಿಹನು:
ಅಕಾರಂ ದಕ್ಷಿಣಾಂಶ ಸ್ಯಾತ್=ಅಕಾರಂ ಬಲದ ಭಾಗವಹುದು. ಉಕಾರಂ ವಾಮಾಂಶಸ್ಯಾತ್=ಉಕಾರವು ವಾಮಭಾಗವಹುದು. ಮಕಾರಂ ಮಧ್ಯದೇಹಂ ಸ್ಯಾತ್=ಮಕಾರವು ಶಿವಾಕ್ಷರಕ್ಕೆ ಮಧ್ಯ ಶರೀರವಹುದು. ತಸ್ಮಾತ್=ಅದು ಕಾರಣದಿಂದ, ತ್ರಿ=ಈ ಬ್ರಹ್ಮಜೀವವಪ್ಪ ಅಕಾರಂ ವಿಷ್ಣುಬೀಜವಪ್ಪ ಉಕಾರಂ ರುದ್ರಬೀಜವಪ್ಪ ಮಕಾರವೆಂಬ ಅಕ್ಷರ ತ್ರಯಂ, ಪ್ರಣವಾತ್ಮಕಂ=ಪ್ರಣವ ಸ್ವರೂಪವಾಗಿಪ್ಪುದು. ತಸ್ಯ ಮಧ್ಯೇತು=ಆ ತ್ರಯಾಕ್ಷರ ಸ್ವರೂಪ ಮಧ್ಯದಲ್ಲಿ, ಸರ್ವಕಾರಣಂ=ಸರ್ವಕ್ಕೆಯೂ ಕಾರಣವಾದ, ಹಕಾರಂ=ಹಕಾರವು, ಸಂಸ್ಥಿತಂ=ಇರುತ್ತಿಹುದು. ॥೭॥

ಶ್ಲೋಕ॥ ಅಕಾರಂ ಬ್ರಹ್ಮದೈವತ್ಯಂ ಉಕಾರಂ ವಿಷ್ಣುದೈವತಮ್ ।
ಮಕಾರಂ ರುದ್ರದೈವತ್ಯಂ ಓಂಕಾರಂ ತುಸದಾಶಿವಮ್ ॥
ನಾದಂ ಶಿವಮಯಂ ವಿನ್ದ್ಯಾತ್ ಪಂಚ ದೇವಾತ್ಮಕಂ ವಿದುಃ ।

ಟೀಕು॥ ಅಕಾರಂಚ=ಅಕಾರವು, ಬ್ರಹ್ಮದೈವತ್ಯಂ=ಬ್ರಹ್ಮವೇ ಅಧಿದೇವತೆಯಾಗಿ ಉಳ್ಳದು. ಉಕಾರಂ=ಉಕಾರವು, ವಿಷ್ಣುದೈವತಂ=ವಿಷ್ಣುವೇ ಅಧಿದೈವವಾಗಿ ಉಳ್ಳದು. ಮಕಾರಂ=ಮಕಾರವು, ರುದ್ರದೈವತ್ಯಂ=ರುದ್ರನೇ ಅಧಿದೈವವಾಗಿ ಉಳ್ಳದು. ಓಂಕಾರಂ ತು=ಓಂಕಾರವಾಯಿತ್ತಾದಡೆ, ಸದಾಶಿವಂ=ಸದಾಶಿವ ಬೀಜವು; ನಾದಂ ಶಿವಮಯಂ ವಿಂದ್ಯಾತ್=ಹಕಾರಂ ಶಿವಸ್ವರೂಪವೆಂದಱಿವುದು. ಪಂಚ ದೇವಾತ್ಮಕಂ ವಿದುಃ=ಈ ಪಂಚಾಕ್ಷರ ಸಂಯೋಗವಾಗಿಪ್ಪ ಪ್ರಣವಂ ಪಂಚದೇವತಾಸ್ವರೂಪವೆಂದಱಿವುದು. ॥೮॥

ಶ್ಲೋಕ॥ ಅಕಾರೋಕಾರಸಂಯೋಗಾದೋಕಾರಂ ಸ್ವರಮುಚ್ಯತೇ ।
ಓಮಿತ್ಯೇಕಾಕ್ಷರಂ ಬ್ರಹ್ಮ ವದನ್ತಿ ಸರ್ವಯೋಗಿನಃ ॥

ಟೀಕು॥ ಅಕಾರೋಕಾರ ಸಂಯೋಗಾತ್=ಅಕಾರ ಉಕಾರಂಗಳ ಕೂಟದದೆಸೆಯಿಂದ, ಓಕಾರ ಸ್ವರಮುಚ್ಯತೇ=ಓ ಎಂಬ ವರ್ಣವಾಯಿತ್ತೆಂದು ನುಡಿಯಲು ಪಡುತ್ತಿಹುದು. ಓಮಿತ್ಯಕ್ಷರಂ=ಮಕಾರಮನುಸ್ವಾರವಾದ ಕಾರಣ ಬಿಂದುವಾಯಿತ್ತು. ಇಂತು ಅಕಾರ ಉಕಾರ ಮಕಾರ ಓಕಾರ ಹಕಾರಂಗಳ ಯೋಗವಾದುದು ಓಂ ಎಂಬ ವೊಂದೇ ಪ್ರಣವಾಕ್ಷರವು. ಬ್ರಹ್ಮ=ಪರಬ್ರಹ್ಮವೆಂದು, ಯೋಗಿನಃ=ಸಮಸ್ತ ಶಿವಯೋಗಿಗಳು, ವದಂತಿ=ನುಡಿಯುತ್ತಿಹರು. ಈ ಪ್ರಣವವೇ ಸಾಕಲ್ಯಾದಿ ಲಕ್ಷಣವನುಳ್ಳದಾದ ಕಾರಣ ಸಾಕಲ್ಯ ಭೇದವಂ ನಿರೂಪಿಸಿಹನು. ॥೯॥

ಶ್ಲೋಕ॥ ಪಞ್ಚಮಂ ಪ್ರಥಮೋಪೇತಂ ತೃತೀಯಾನ್ತರ್ಗತಂ ಪರಮ್ ।
ಸಾಕಲ್ಯಮಿತಿ ವಿಜ್ಞೇಯಂ ಪೂರ್ವವಕ್ತ್ರೇತು ಜಾಯತೇ ॥

ಟೀಕು॥ ಪಞ್ಚಮಂ=ಅಯಿದನೆಯ ಸ್ವರಮಪ್ಪ ಉಕಾರಂ, ಪ್ರಥಮೋಪೇತಂ=ಸ್ವರಾದಿಯಪ್ಪ ಅಕಾರದೊಡನೆ ಕೂಡಲುಪಟ್ಟೊಡೆ ಓ ಎಂಬ ಮತ್ತೊಂದು ವರ್ಣವಹುದು. ತೃತೀಯಾಂತರ್ಗತಂ ಪರಂ=ತೃತೀಯ ಎಂಬ ಮಕಾರಾಂತರ್ಗತವಾಗಿ ಹಕಾರವಿರುತ್ತಿಹುದು. ಅಂತು ಅ ಉ ಮ ಹ ಎಂಬ ಚತುರಕ್ಷರಯುಕ್ತವಾದ ಶಿವಬೀಜವೇ, ಸಾಕಲ್ಯಮಿತಿ ವಿಜ್ಞೇಯಂ=ಸಾಕಲ್ಯ ಪ್ರಣವವೆಂದಱಿಯಬೇಕಾಯಿತ್ತು. ಪೂರ್ವವಕ್ತ್ರೇತು ಜಾಯತೇ=ಈ ಸಾಕಲ್ಯ ಸದಾಶಿವ ಪೂರ್ವಮುಖದಲ್ಲಿ ಉದ್ಧೃತವಾಗುತ್ತಿಹುದು. ಪ್ರಣವಬ್ರಹ್ಮಕ್ಕೆ ಮತ್ತೊಂದು ಸಾಕಲ್ಯಾಭಿದಾನಮಂ ಆರೋಪಿಸಿಹನು. ಹೀಂಗೆ ಶಿವತತ್ತ್ವಬೀಜಕ್ಕೆ ಸದಾಶಿವತತ್ತ್ವಭೇದಮಪ್ಪ ಶುದ್ಧಾಖ್ಯವೆಂಬ ಮತ್ತೊಂದಭಿದಾನವನಾರೋಪಿಸಿಹನು. ಹಾಂಗೆ ನಿಶ್ಚಿತವು. ಸೌಖ್ಯಭೇದ ಲಕ್ಷಣಮಂ ನಿರೂಪಿಸಿಹನು.

ಶ್ಲೋಕ॥ ವರ್ಗಾದಿ ಪಞ್ಚಮಂ ಚೈವ ಷಷ್ಠಾನ್ತಂ ಜೀವ ಸಂಯುತಮ್ ।
ತೃತೀಯಸ್ವರಸಂಯುಕ್ತಂ ಸೌಖ್ಯಂ ವೈ ಪಶ್ಚಿಮಾನನೇ ॥

ಟೀಕು॥ ವರ್ಗಾದಿ ಎಂದಡೆ ಅಕಾರವು, ಪಂಚಮಂ ಚೈವ=ಅಯಿದನೆಯ ಸ್ವರಮಪ್ಪ ಉಕಾರಮುಮಾಜಿನೆಯ ಪವರ್ಗದ ಕಡೆಯಕ್ಷರವಪ್ಪ ಮಕಾರವು, ಜೀವ ಸಂಯುತಂ= ಪ್ರಣವ ಮಾತ್ರಾ ಸ್ವರೂಪಾಂತಸ್ಥವಾಗಿ ಶಿವಬೀಜವಪ್ಪುದಾಗಿ ಎಲ್ಲಾ ವಿನೋದಂಗಳಲ್ಲಿಯೂ ಹಕಾರ ಸಹಿತವಾದ, ತೃತೀಯ ಸ್ವರ ಸಂಯುಕ್ತಂ=ತೃತೀಯ ಸ್ವರವಪ್ಪ ಇಕಾರದೊಡನೆ ಕೂಡಿಹುದು. ಅಂತು ಅ ಉ ಮ ಹ ಇ ಎಂಬ ಸೌಖ್ಯಂ ವೈ=ಸೌಖ್ಯಪ್ರಣವವೆನಿಸಿಕೊಂಬುದು. ಪಶ್ಚಿಮಾನನೇ=ಈ ಸೌಖ್ಯ ಪ್ರಣವಂ ಪಶ್ಚಿಮ ದಿಕ್ಕಿನಲ್ಲಿಹುದಿತ್ತು. ಸಾವಶ್ಯ ಭೇದಕ್ಕೆ ಲಕ್ಷಣವ ನಿರೂಪಿಸಿಹನು. ॥೧೧॥

ಶ್ಲೋಕ॥ ಅಕಾರಂ ಪಞ್ಚಮಾನ್ತಂ ಚ ಮಕಾರಂ ತತ್ತ್ವಬೀಜಕಮ್ ।
ಏಕಾದಶ ಕಲೋಪೇತಂ ಸಾವಶ್ಯಂ ಸೌಮ್ಯ ವಕ್ತ್ರಕೇ ॥

ಟೀಕು॥ ಅಕಾರಂ=ಅಕಾರಮಂ, ಪಂಚಮಾಂತಂ ಚ=ಐದನೆಯ ಸ್ವರಾಂತವಪ್ಪ ಉಕಾರಮಂ, ಮಕಾರಂ=ಮಕಾರಮಂ, ತತ್ತ್ವಬೀಜಕಂ=ಎಲ್ಲಾ ತತ್ತ್ವಂಗಳಿಗೆಯೂ ಶಿವತತ್ತ್ವಂ ಪ್ರಭುವೆನಿಸಿಪ್ಪುದಾಗಿ ತತ್ತ್ವಬೀಜವೆಂದಡಂ ಹಕಾರವು, ಏಕಾದಶ ಕಲೋಪೇತಂ=ಹನ್ನೊಂದನೆಯ ಕಲೆಯೆನಿಸಿಪ್ಪ ಏ ಕಾರ ಸಹಿತವಾಗಿಪ್ಪುದು. ಅಂತು ಅ ಉ ಮ ಹ ಏ ಈ ಪಂಚ ಮಾತ್ರಂಗಳುಂ, ಸಾವಶ್ಯಂ=ಸಾವಶ್ಯ ಪ್ರಣವಾಂಗ ವೆನಿಸಿಪ್ಪುದು. ಸೌಮ್ಯವಕ್ತ್ರಕೇ=ಸಾವಶ್ಯ ಪ್ರಣವಂ ಸೌಮ್ಯವಕ್ತ್ರದಲ್ಲಿ ಸಂಭೂತವಾಯಿತ್ತು. ಸಾಯುಜ್ಯ ಪ್ರಣವಲಕ್ಷಣಂ ಸೌಮ್ಯವಕ್ತ್ರದಲ್ಲಿ ಸಂಭೂತವಾಯಿತ್ತು. ಸಾಯುಜ್ಯ ಪ್ರಣವಲಕ್ಷಣಮಂ ನಿರೂಪಿಸುತ್ತಿಹನು. ॥೧೨॥

ಶ್ಲೋಕ॥ ಆದಿಪ್ರಕೃತಿವರ್ಣಂ ಚ ಪಞ್ಚಮಾನ್ತಂ ಷಡನ್ತಕಮ್ ।
ಗುಹ್ಯಂ ಚತುರ್ದಶೋಪೇತಂ ಸಾಯುಜ್ಯಂ ಜೋರ್ಧ್ವವಕ್ತ್ರಕೇ ॥

ಟೀಕು॥ ಆದಿ ಪ್ರಕೃತಿ ವರ್ಣಂ ಚ=ಆದಿಪ್ರಕೃತಿವರ್ಣವೆಂಬ ಅಕಾರಮಂ, ಪಂಚಮಾಂತಂ=ಅದರ ಕಡೆಯ ಸ್ವರವಪ್ಪ ಉಕಾರಮಂ, ಷಡಂತಕಂ=ಆಜಿನೆಯ ವರ್ಗದ ಕಡೆಯಪ್ಪ ಮಕಾರಮಂ, ಗುಹ್ಯಂ=ಗುಹ್ಯನಾಮವನುಳ್ಳ ಹಕಾರಮುಂ, ಚತುರ್ದಶೋಪೇತಂ=ಚತುರ್ದಶ ಸ್ವರವೆಂಬ ಔಕಾರದೊಡನೆ ಕೂಡಿಹುದು. ಅಂತು ಅ ಉ ಮ ಹ ಔ ಎಂಬ ಈ ಪಂಚ ಮಾತ್ರೆಗಳೊಡನೆ ಕೂಡಿಪ್ಪುದು. ಸಾಯುಜ್ಯಂ ಚ=ಸಾಯುಜ್ಯಪ್ರಣವೆವೆನಿಸಿಕೊಂಬುದು. ಊರ್ಧ್ವ ವಕ್ತ್ರಕೇ=ಈ ಸಾಯುಜ್ಯ ಪ್ರಣವಂ ಸದಾಶಿವನ ಊರ್ಧ್ವ ವಕ್ತ್ರದಲ್ಲಿ ಉತ್ಪತ್ತಿಯಾಯಿತ್ತು. ಈ ಪ್ರಕಾರದಿಂದ ಪ್ರಣವಾಂಗಗಳಪ್ಪ ಮಾತ್ರೆಗಳು ಸಂಖ್ಯಾಯೋಗಂಗಳಾಗಿಪ್ಪವು. ಈ ಸರ್ವ ಮಾತ್ರಾಂತಸ್ಥವಪ್ಪ ಶಿವಬೀಜಂ ಈ ಪ್ರಣವಭೇದದಲ್ಲಿ ಗಣ್ಯವಾಗಿಪ್ಪುದು. ಪ್ರಣವಭೇದವಂ ನಿರೂಪಿಸಿಯಾ

ಪ್ರಣವಭೇದಂಗಳಿಗೆ ವರ್ಣ ಛಂದ ಋಷಿ ಭೂತ ತತ್ತ್ವ ಅಧಿದೈವತ ಮಾತ್ರಾ ಸಂಖ್ಯೆಗಳಂ ನಿರೂಪಿಸಿಹನು. ॥೧೩॥

ಶ್ಲೋಕ॥ ಸಾಕಲ್ಯಂ ರಕ್ತವರ್ಣಂ ಸ್ಯಾತ್ ಛಂದೋಽನುಷ್ಟುಪ್ ಪ್ರಕೀರ್ತಿತಮ್ ।
ಋಷಿಸ್ಸನತ್ಕುಮಾರಸ್ತು ಪಾರ್ಥಿವಂ ಭೂತಮುಚ್ಯತೇ ॥

ತತ್ತ್ವಂ ಕರ್ಮೇಶಮಿತ್ಯುಕ್ತಮೀಶಾನಶ್ಚಾಧಿ ದೈವತಮ್ ।
ಮಾತ್ರಾಶ್ಚತುರ್ಭಿಸ್ಸಂಯುಕ್ತಂ ಸರ್ವಸಿದ್ಧಿಕರಂ ಪರಮ್ ॥

ಟೀಕು॥ ಸಾಕಲ್ಯಂ=ಸಾಕಲ್ಯ ಪ್ರಣವವು, ರಕ್ತವರ್ಣಂ ಸ್ಯಾತ್=ರಕ್ತವರ್ಣವೆನಿಸಿಹುದು. ಛಂದೋಽನುಷ್ಟುಪ್ಪ್ರಕೀರ್ತಿತಂ=ಆ ಸಾಕಲ್ಯಕ್ಕೆ ಅನುಷ್ಟುಪ್ ಛಂದವೆಂದು ಹೇಳಲುಪಟ್ಟುದು. ಸನತ್ಕುಮಾರಸ್ತು ಋಷಿಃ=ಆ ಪ್ರಣವಕ್ಕೆ ಸನತ್ಕುಮಾರನೇ ಋಷಿ. ಪಾರ್ಥಿವಂ ಭೂತಮುಚ್ಯತೇ=ಪೃಥ್ವಿಯೇ ಭೂತವೆಂದು ನುಡಿಯಲುಪಡುವುದು. ಕರ್ಮೇಶಂ ತತ್ತ್ವಮಿತ್ಯುಕ್ತಂ=ಕರ್ಮೇಶ ತತ್ತ್ವವೆಂದು ನುಡಿಯಲುಪಟ್ಟುದು, ಈಶಾನ ಈಶಾನಶ್ಚಾಧಿ ದೈವತಂ=ಕರ್ಮೇಶ ಪರ್ಯಾಹ್ವಯಮಪ್ಪ ಈಶಾನ ದೇವತೆಯೇ ಅಧಿದೈವವಾಗಿಪ್ಪುದು. ಮಾತ್ರಾಚತುರ್ಭಿಸ್ಸಂಯುಕ್ತಂ ಆ ಪ್ರಣವವು ಚತುರ್ಮಾತ್ರಾಸಮೇತವಾಗಿಪ್ಪುದು. ಸರ್ವಸಿದ್ಧಿಕರಂ=ಈ ಸಾಕಲ್ಯಪ್ರಣವಂ ಉತ್ಕೃಷ್ಟವಹಂಥಾದು, ಸರ್ವಸಿದ್ಧಿಗಳಂ ಕೊಡುವುದು. ॥೧೪॥

ಶ್ಲೋಕ॥ ಶಾಮ್ಭವಂ ತ್ವಂಜನಪ್ರಖ್ಯಂ ತ್ರಿಷ್ಟುಪ್ ಛನ್ದಃ ಪ್ರಕೀರ್ತಿತಮ್ ॥

ಭಾರದ್ವಾಜ ಋಷಿಃಜ್ಞೇಯಸ್ಸಲಿಲಂ ಭೂತಮುಚ್ಯತೇ ।
ತತ್ತ್ವಂ ಕರ್ತೃ ಸಮಾಖ್ಯಾತಮೀಶ್ವರಸ್ತ್ವಧಿದೈವತಮ್ ॥

ಪಞ್ಚಮಾತ್ರಾ ಸಮೋಪೇತಂ ಸರ್ವಸಿದ್ಧಿಪ್ರದಾಯಕಮ್ ।

ಟೀಕು॥ ಶಾಂಭವಂ ತು=ಶಾಂಭವಪ್ರಣವವಾಯಿತ್ತಾದಡೆ, ಅಂಜನಪ್ರಖ್ಯಂ=ಅಂಜನ ವರ್ಣವ ಹೋಲುವಂಥಾದು, ತ್ರಿಷ್ಟುಪ್ ಛಂದಃ ಪ್ರಕೀರ್ತಿತಂ=ಆ ಪ್ರಣವಕ್ಕೆ ತ್ರಿಷ್ಟುಪ್ ಛಂದವೆಂದು ಹೇಳಲುಪಟ್ಟುದು, ಭಾರದ್ವಾಜ ಋಷಿಃಜ್ಞೇಯಃ=ಭಾರದ್ವಾಜನೆ ಈ ಪ್ರಣವಾರ್ಹ ಋಷಿ. ಸಲಿಲಂ ಭೂತಮುಚ್ಯತೇ=ಸಲಿಲವು ಭೂತವೆಂದು ಹೇಳಲು ಪಡುವುದು. ತತ್ತ್ವವು, ಕರ್ತೃ ಸಮಾಖ್ಯಾತಂ=ಕರ್ತೃಸಾದಾಖ್ಯ ತತ್ತ್ವವೆಂದು ಹೇಳಲುಪಟ್ಟುದು. ಈಶ್ವರಸ್ತ್ವಧಿದೈವತಂ=ಈಶ್ವರನೇ ಅಧಿದೈವವು, ಪಞ್ಚಮಾತ್ರಾ ಸಮಾಹಿತಂ=ಅಯಿದು ಮಾತ್ರಂಗಳೊಡನೆ ಕೂಡಲುಪಡುವುದು. ಸರ್ವಸಿದ್ಧಿ ಪ್ರದಾಯಕಂ=ಈ ಶಾಂಭವಪ್ರಣವಂ ಸಮಸ್ತ ಸಿದ್ಧಿಗಳಂ ಕೊಡುವುದು.

ಶ್ಲೋಕ॥ ಸೌಖ್ಯಂ ಗೋಕ್ಷೀರವರ್ಣಂ ಸ್ಯಾಚ್ಛನ್ದೋ ಬೃಹತಿರುಚ್ಯತೇ ॥

ವಿಶ್ವಾಮಿತ್ರ ಋಷಿರ್ಜ್ಞೇಯಸ್ತೇಜೋ ಭೂತಮಿತಿ ಸ್ಮೃತಮ್ ।
ಸಮೂರ್ತಂ ತತ್ತ್ವಮಿತ್ಯುಕ್ತಂ ಬ್ರಹ್ಮಾ ತಸ್ಯಾಧಿದೈವತಮ್ ॥

ಚತುರ್ಮಾತ್ರಾ ಸಮಾಯುಕ್ತಂ ಸರ್ವಸಮ್ಪತ್ಕರಂ ಪರಮ್ ।

ಟೀಕು॥ ಸೌಖ್ಯಂ ಗೋಕ್ಷೀರವರ್ಣಂ ಸ್ಯಾತ್=ಸೌಖ್ಯವೆಂಬ ಪ್ರಣವಂ ಕ್ಷೀರಾಭವಾಗಿಹುದು. ಬೃಹತೀ ಛಂದೋಚ್ಯತೇ=ಈ ಪ್ರಣವಕ್ಕೆ ಬೃಹತಿ ಎಂಬ ಛಂದವೆಂದು ನುಡಿಯಲು ಪಡುವುದು. ವಿಶ್ವಾಮಿತ್ರ ಋಷಿಃ ಜ್ಞೇಯಃ=ವಿಶ್ವಾಮಿತ್ರನೆಂಬ ಋಷಿಯಜಿಯಲುತಕ್ಕಾತನು. ತೇಜೋ ಭೂತಮಿತಿಸ್ಮೃತಂ=ಅಗ್ನಿಭೂತವೆಂದು ನೆನೆಯಲುಪಟ್ಟುದು. ಸಮೂರ್ತಂ ತತ್ತ್ವಮಿತ್ಯುಕ್ತಂ=ಮೂರ್ತಿಸಾದಾಖ್ಯ ತತ್ತ್ವವೆಂದು ನುಡಿಯಲುಪಟ್ಟುದು. ತಸ್ಯಾಧಿದ್ಯೆವತಂ ಬ್ರಹ್ಮ=ಈ ಪ್ರಣವಕ್ಕೆ ಮೂರ್ತ ಪರ್ಯಾಯನಾಮವನುಳ್ಳ ಬ್ರಹ್ಮವೆಂಬ ಶಿವಮೂರ್ತಿಯೆ ಅಧಿದ್ಯೆವಂ, ಚತುರ್ಮಾತ್ರಾ ಸಮಾಯುಕ್ತಂ=ನಾಲ್ಕು ಮಾತ್ರಂಗಳೊಡನೆ ಕೂಡಿಪ್ಪುದು. ಪರಂ=ಈ ಪ್ರಣವಾಂತಸ್ಥವಾದ ಶಿವ ಬೀಜವು, ಸರ್ವಸಂಪತ್ಕರಂ=ಸಮಸ್ತ ಸಂಪತ್ಕರವಂ ಮಾಡುವದು. ॥೨೧॥

ಶ್ಲೋಕ॥ ಸಾವಶ್ಯಂ ಕುಂಕುಮಾಭಂ ಸ್ಯಾಚ್ಛನ್ದೋ ಜಗತಿರುಚ್ಯತೇ ।

ಗೌತಮೋಽಸ್ಯ ಋಷಿರ್ಜ್ಞೇಯಃ ಮಾರುತಂ ಭೂತಮುಚ್ಯತೇ ।
ಅಮೂರ್ತಂ ತತ್ತಮಿತ್ಯುಕ್ತಮೀಶಃ ತಸ್ಯಾಧಿದೈವತಮ್ ॥

ಪಞ್ಚಮಾತ್ರಾ ಸಮೋಪೇತಂ ಸರ್ವವಶ್ಯಕರಂ ಪರಮ್ ।

ಟೀಕು॥ ಸಾವಶ್ಯಂ ಕುಂಕುಮಾಭಂ ಸ್ಯಾತ್=ಸಾವಶ್ಯಪ್ರಣವಂ ಕುಂಕುಮವ ಹೋಲುವದು. ಛಂದೋಜಗತಿರುಚ್ಯತೇ=ಜಗತೀಛಂದವೆಂದು ನುಡಿಯಲುಪಡುವುದು. ಅಸ್ಯ=ಈ ಪ್ರಣಮಕ್ಕೆ, ಗೌತಮೋಋಷಿಃ ಜ್ಞೇಯಃ=ಗೌತಮನೆ ಋಷಿ ಎಂದಜೆಯತಕ್ಕಾತನು. ಮಾರುತಂ ಭೂತಮುಚ್ಯತೇ=ವಾಯುಭೂತವೆಂದು ನುಡಿಯಲುಪಡುತ್ತಿಹನು. ಅಮೂರ್ತಂ ತತ್ತ್ವಮಿತ್ಯುಕ್ತಂ=ಅಮೂರ್ತಸಾದಾಖ್ಯ ತತ್ತ್ವವೆಂದು ನುಡಿಯಲುಪಟ್ಟುದು. ಈಶ ತಸ್ಯಾಧಿದ್ಯೆವತಂ=ಈಶ ತತ್ತ್ವವೇ ಅಧಿದೇವತೆ, ಪಂಚಮಾತ್ರಾ ಸಮೋಪೇತಂ= ಅಯಿದು ಮಾತ್ರೆಗಳೊಡನೆ ಕೂಡಿಹುದು. ಸರ್ವವಶ್ಯಕರಂಪರಂ=ಈ ಸಾವಶ್ಯ ಪ್ರಣವಂ ಸಮಸ್ತವಶ್ಯಂಗಳಂ ಮಾಡುವದು. ಉತ್ಕೃಷ್ಟವಹಂಥಾದು. ಸಾಯುಜ್ಯಪ್ರಣವದ ಛಂದ ಮೊದಲಾದವ ಹೇಳುವುದಕ್ಕೆ ಗ್ರಂಥವಿಲ್ಲ. ॥೨೪॥

ಶ್ಲೋಕ॥ ಸಾಯುಜ್ಯಂ ಸ್ಫಟಿಕಾಭಾಸಂ ಛನ್ದೋ ವೈ ಜಗತೀ ಸ್ಮೃತಮ್ ॥

ಅಗಸ್ತ್ಯೋಽಸ್ಯ ಋಷಿರ್ಜ್ಞೇಯಃ ವ್ಯೋಮಭೂತಮುದಾಹೃತಮ್ ।
ಶಿವಾಖ್ಯಂ ತತ್ತ್ವಮಿತ್ಯುಕ್ತಂ ಅಧಿದೈವಂ ಸದಾಶಿವಃ ॥

ಪಂಚಮಾತ್ರಾ ಸಮೋಪೇತಂ ಸರ್ವಾಭೀಷ್ಟ ಫಲಪ್ರದಮ್ ॥

ಪ್ರಣವಂ ಸರ್ವವರ್ಣಾನಾಂ ಶಿವಬೀಜಮುದಾಹೃತಮ್ ।
ಬಿನ್ದುನಾದ ಪ್ರಕಾರೇಣ ಪ್ರಣವಾಕೃತಿರುಚ್ಯತೇ ॥

ಟೀಕು॥ ಸರ್ವವರ್ಣಾನಾಂ=ಪೂರ್ವ ಶ್ಲೋಕೋಕ್ತವಾದ ಪ್ರಣವಾಂಗ ಮಾತ್ರೆಗಳೊಳಗೆ, ಪ್ರಣವಂ=ಪ್ರಾಣಭೂತವೆನಿಸಿ ಪ್ರಣವ ನಾಮಂಬೆತ್ತಿಪ್ಪುದು. ಶಿವಬೀಜ ಮುದಾಹೃತಂ= ಶಿವಾಕ್ಷರವೆಂದು ನುಡಿಯಲುಪಟ್ಟುದು. ಬಿಂದುನಾದ ಪ್ರಕಾರೇಣ=ಸಮಸ್ತವರ್ಣಂಗಳೆ ಆ ನಾದಬ್ರಹ್ಮಕ್ಕೆ ಶಕ್ತ್ಯಕ್ಷರವಪ್ಪ ಕಾರಣ ಶಿವಶಕ್ತಿಪ್ರಕಾರದಿಂದ, ಪ್ರಣವಾಕೃತಿರುಚ್ಯತೇ= ಪ್ರಣವಾಕಾರಂ ನುಡಿಯಲು ಪಡುತ್ತಿಹುದು.

ಶ್ಲೋಕ॥ ಸೃಷ್ಟಿಸ್ಥಿತಿನಿಮಿತ್ತಾಯ ಚೋಚ್ಚಾರಣಮಧೋಮುಖಮ್ ।
ಸಾಕಲ್ಯಾದೀನಿ ಪಞ್ಚೈತೇ ಕ್ರಮೇಣ ಪರಿಕೀರ್ತಿತಾಃ ॥

ಟೀಕು॥ ಸೃಷ್ಟಿ ಸ್ಥಿತಿ ನಿಮಿತ್ತಾಯ=ಉತ್ಪತ್ಯವಾದ ಶರೀರಾದಿಗಳ, ಸ್ಥಿತಿ ನಿಮಿತ್ತಾಯ=ಸ್ಥಿತಿ ಕಾರಣಕ್ಕೋಸುಗರ, ಅಧೋಮುಖಂ=ಉದಯಾಂತರವನ್ನೈದುವ ಹಾಂಗೆ, ಉಚ್ಚಾರಣಂ=ಎಲ್ಲಾ ಮುಮುಕ್ಷುಗಳೂ ಬ್ರಹ್ಮಾಹವಯವನುಳ್ಳ ಪ್ರಣವೋಚ್ಚಾರಣಮಂ ಮಾಡುವದು. ಸಾಕಲ್ಯಾದೀನಿ ಪಂಚೈತೇ=ಪೂರ್ವ ಶ್ಲೋಕೋಕ್ತವಾದ ಈ ಸಾಕಲ್ಯಾದಿ ಪಂಚಪ್ರಣವಂಗಳುಂ, ಕ್ರಮೇಣ ಪ್ರಕೀರ್ತಿತಾಃ=ಕ್ರಮದಿಂದ ಕೀರ್ತಿಸಲ್ಪಟ್ಟವು. ॥೨೮॥

ಶ್ಲೋಕ॥ ಪ್ರಣವಭೇದಮಿದಂ ಪ್ರೋಕ್ತಂ ಬ್ರಹ್ಮಭೇದಮಥಶೃಣು।

ಟೀಕು॥ ಭೋ ಷಣ್ಮುಖ!=ಎಲೆ ಷಣ್ಮುಖನೆ! ಇದಂ ಪ್ರಣವ ಭೇದಂ=ಈ ಪ್ರಣವ ಭೇದವು, ಪ್ರೋಕ್ತಂ=ಹೇಳಲುಪಟ್ಟುದು. ಅಥ=ಅನಂತರಂ, ಬ್ರಹ್ಮಭೇದಂ=ಬ್ರಹ್ಮಭೇದಮಂ, ಶೃಣು=ಕೇಳು. ॥೩೦॥

ಎಲೆ ಷಣ್ಮುಖನೆ! ಈ ಪ್ರಣವ ಭೇದಂ ಹೇಳಲುಪಟ್ಟುದು. ಅನಂತರಂ ಬ್ರಹ್ಮಭೇದಮಂ ಕೇಳು.

ಇತಿ ವಾತುಲತನ್ತ್ರೇ ಶುದ್ಧಾಖ್ಯೇ ಸಹಸ್ರಗ್ರಂಥಸಂಹಿತಾಯಾಂ ಮಲ್ಲಿಕಾರ್ಜುನೇನ
ಕರ್ಣಾಟಭಾಷಾ ವಿವೃತೋ ಪ್ರಣವಭೇದೋ ನಾಮ ಷಷ್ಠಃ ಪಟಲಃ

❖ ❖ ❖

ಸಪ್ತಮಃ ಬ್ರಹ್ಮಭೇದಪಟಲಃ

ಶಾ॥ವಿ॥ವೃ॥ ಯೇನೇದಂ ಪರಯಾ ವಿಭಕ್ತಮುಖಿಲಂ ಪಂಚಾಶದರ್ಣಂ ಮಹಃ
ಬ್ರಹ್ಮಾಖ್ಯಂ ನಿಜಭೂತಮೇತದಖಿಲಂ ವಿಶ್ವಾಧಿಕಂ ರಾಜತೇ ।
ಕ್ಷೇತ್ರಜ್ಞಾದಿಸಮಸ್ತವರ್ಣಜನಿತಂ ವಾಗ್ಬ್ರಹ್ಮಶ್ರುತ್ಯಾಧಿಕಮ್
ವಿಶ್ವೋತ್ಪತ್ತಿ ವಿನಾಶಸಂಸ್ಥಿತಿಕೃತೇ ತಸ್ಮೈ ನಮೋ ಬ್ರಹ್ಮಣೇ ॥ ॥೧॥

ಶ್ಲೋಕ॥ ಅಥ ವಕ್ಷ್ಯೇ ವಿಶೇಷೇಣ ಬ್ರಹ್ಮಭೇದವಿಧಿಂ ಪರಮ್ ।

ಟೀಕು॥ ಅಥ=ಆನಂತರದಲ್ಲಿ, ಪರಂ=ಉತ್ಕೃಷ್ಟವಾದಂಥ, ಬ್ರಹ್ಮಭೇದವಿಧಿಂ, ಬ್ರಹ್ಮಭೇದ ವಿಧಿಯಂ, ವಿಶೇಷೇಣ ವಕ್ಷ್ಯೇ=ವಿಶೇಷಿಸಿ ನಿರೂಪಿಸಿಹೆನು. ॥೨॥

ಶ್ಲೋಕ॥ ಬೃಹತ್ವಾತ್ ಬೃಂಹಣತ್ವಾಚ್ಚ ಬ್ರಹ್ಮೇತಿ ಪರಿಕೀರ್ತಿತಮ್ ।
ಬ್ರಹ್ಮತತ್ತ್ವಮಿತಿಜ್ಞೇಯಂ ಭವೇತ್ ತದ್ಬ್ರಹ್ಮ ಪಂಚಧಾ ॥

ಟೀಕು॥ ಬೃಹತ್ವಾತ್=ದೇಡ್ಡಿತ್ತಹತನದಿಂದವೂ, ಬೃಂಹಣತ್ವಾಚ್ಚ=ಎಲ್ಲ ಕಡೆಯಲ್ಲಿಯೂ ಪರಿಪೂರ್ಣವಹತನದಿಂದಲೂ, ಬ್ರಹ್ಮೇತಿ ಪರಿಕೀರ್ತಿತಂ=ಬ್ರಹ್ಮವೆಂದು ನುಡಿಯಲು ಪಡುತ್ತಿಹುದು, 'ಸರ್ವಂ ಖಲ್ವಿದಂ ಬ್ರಹ್ಮ'ವೆಂಬ ಈ ಸಮಸ್ತಕ್ಕೆಯುಂ, ಬ್ರಹ್ಮತತ್ತ್ವಮಿತಿ= ಬ್ರಹ್ಮಾಭಿಧಾನವು, ಜ್ಞೇಯಂ=ಈ ಪ್ರಕಾರದಿಂದಅಱಿಯಬೇಕಾದುದು, ತತ್‌ಬ್ರಹ್ಮ=ಆ ಶಿವತತ್ತ್ವವೆಂಬ ಪರಬ್ರಹ್ಮತತ್ತ್ವವು ತನ್ನ ಸಕಲ ಗುಣ ಪ್ರಭಾವದಿಂದವು, ಪಂಚಧಾ= ಅಯಿದು ಪ್ರಕಾರವಹುದು. ॥೩॥

ಶ್ಲೋಕ॥ ಪಂಚಬ್ರಹ್ಮ ಪ್ರಕಾರೇಣ ಪಂಚವಿಂಶತಿ ಭೇದಕಮ್ ।
ಏಭಿರ್ಭೇದೈರ್ಯುತಂ ಪಂಚವಿಂಶತಿ ತತ್ತ್ವಸಂಯುತಮ್॥

ಟೀಕು॥ ಪಂಚಬ್ರಹ್ಮ ಪ್ರಕಾರೇಣ=ಪಂಚಬ್ರಹ್ಮಪ್ರಕಾರದಿಂದ ಒಂದೊಂದು ಬ್ರಹ್ಮವೂ ಅಯಿದೈಯಿದು ಭೇದವಾಗಿ, ಪಂಚವಿಂಶತಿ ಭೇದಕಂ=ಇಪ್ಪತ್ತಯಿದು ಭೇದವಾಯಿತು, ಏಭಿಃ ಭೇದಯುತಂ=ಈ ಭೇದಂಗಳೊಡನೆ ಕೂಡಿದಂಥ ಎಲ್ಲಾ ತತ್ತ್ವಂಗಳೊಡನೆ ಕೂಡಿದಂಥಾ ಬ್ರಹ್ಮವು, ಪಂಚವಿಂಶತಿ ತತ್ತ್ವಸಂಯುತಂ=ಇಪ್ಪತ್ತಯಿದು ಬ್ರಹ್ಮಭೇದ ವೆನಿಸಿಪ್ಪುದು. ॥೪॥

ಶ್ಲೋಕ॥ ಇತ್ಯೇತತ್ಪಂಚ ಭೇದತ್ವಾತ್ಪಂಚಬ್ರಹ್ಮಮುದಾಹೃಮ್ ।

ಟೀಕು॥ ಇತ್ಯೇತತ್ಪಂಚಭೇದತ್ವಾತ್=ಈ ಪ್ರಕಾರದಿಂದ ಈ ನಿಷ್ಕಲ ಬ್ರಹ್ಮವೆನಿಸಿಪ್ಪ

ಶಿವತತ್ತ್ವವು ಸಕಲಮಪ್ಪ ಲೀಲಾಮಾತ್ರದಿಂದ ಪಂಚೀಕೃತ ಭೇದತತ್ತ್ವದ ದೆಸೆಯಿಂದ, ಪಂಚಬ್ರಹ್ಮಮುದಾಹೃತಂ=ಪಂಚಬ್ರಹ್ಮಮಯವಾದುದೆಂದು ನುಡಿಯಲುಪಟ್ಟುದು.

ಶ್ಲೋಕ॥ ಮೂರ್ತಿಬ್ರಹ್ಮ ತಥಾ ಪೂರ್ವಂ ತತ್ತ್ವಬ್ರಹ್ಮ ದ್ವಿತೀಯಕಮ್ ।
ಭೂತಬ್ರಹ್ಮ ತೃತೀಯಂ ಸ್ಯಾತ್ ಪಿಂಡಬ್ರಹ್ಮ ಚತುರ್ಥಕಮ್ ।
ಪಂಚಮಂ ಚ ಕಲಾಬ್ರಹ್ಮಂ ಬ್ರಹ್ಮಪಂಚಕಮೀರಿತಮ್ ।

ಟೀಕು॥ ಪೂರ್ವಂ=ಪ್ರಥಮದಲ್ಲಿ, ಮೂರ್ತಿ ಬ್ರಹ್ಮಂ=ಮೂರ್ತಿ ಬ್ರಹ್ಮವು; ತಥಾ=ಹಾಂಗೆ, ದ್ವಿತೀಯಕಂ=ಎರಡನೆಯದು, ತತ್ತ್ವಬ್ರಹ್ಮಂ=ತತ್ತ್ವ ಬ್ರಹ್ಮವು, ಭೂತಬ್ರಹ್ಮಂ=ಭೂತಬ್ರಹ್ಮವು, ತೃತೀಯಂ ಸ್ಯಾತ್=ಮೂರನೆಯದಹುದು, ಚತುರ್ಥಕಂ ತು=ನಾಲ್ಕನೆಯದು, ಪಿಂಡ ಬ್ರಹ್ಮಂ=ಪಿಂಡ ಬ್ರಹ್ಮವು, ಪಂಚಮಂಚ=ಅಯಿದನೆಯದು, ಕಲಾಬ್ರಹ್ಮಂ=ಕಲಾಬ್ರಹ್ಮವೆನಿಸಿ ಕೊಂಬುದು, ಹೀಂಗೆ, ಬ್ರಹ್ಮಪಂಚಕಂ ಈರಿತಮ್=ಪಂಚಬ್ರಹ್ಮಾಭಿದಾನವು ಹೇಳಲು ಪಟ್ಟುದು. ॥೨॥

ಶ್ಲೋಕ॥ ಏತೇಷಾಂ ಪಂಚಬ್ರಹ್ಮಾನಾಂ ಲಕ್ಷಣಂ ವಕ್ಷ್ಯತೇಽಧುನಾ ।

ಟೀಕು॥ ಈ ಪಂಚಬ್ರಹ್ಮಾಭಿಧಾನಮಂ ಪೇಳ್ದನಂತರದಲ್ಲಿ, ಮಿಶ್ರಪಂಚಬ್ರಹ್ಮ ಲಕ್ಷಣವು ಹೇಳಲುಪಟ್ಟುದು. ॥೩॥

ಶ್ಲೋಕ॥ ಬ್ರಹ್ಮಾ ವಿಷ್ಣುಶ್ಚ ರುದ್ರಶ್ಚ ಮೂರ್ತಯಃ ಪ್ರಣವಾಧಿಪಾಃ ।
ತಸ್ಮಾತ್ಪ್ರಣವರೂಪಂ ತು ಮೂರ್ತಿರೂಪಮುದಾಹೃತಮ್ ।

ಟೀಕು॥ ಬ್ರಹ್ಮಾ=ಬ್ರಹ್ಮನು, ವಿಷ್ಣುಃ=ವಿಷ್ಣುವು, ರುದ್ರಂ ಚ=ರುದ್ರನು ಎಂಬೀ ಮೂರ್ತಯಃ=ಸರ್ಗ ಸ್ಥಿತ್ಯಂತ್ಯ ಕರ್ತೃಗಳಪ್ಪ ಈ ತ್ರಿಮೂರ್ತಿಗಳು, ಪ್ರಣವರೂಪಂ ತು=ಪ್ರಣವದ ಅವಯವಂಗಳಪ್ಪ ಅಕಾರ ಉಕಾರ ಮಕಾರಂಗಳಿಗೆ ಅಧಿಪತಿಗಳಾಗಿಪ್ಪುದು, ತಸ್ಮಾತ್=ಆ ಕಾರಣದದೆಸೆಯಿಂದ ಪ್ರಣವಸ್ವರೂಪವು, ಮೂರ್ತಿರೂಪಂ= ಮೂರ್ತಿ ಮಯವಾದುದೆಂದು, ಉದಾಹೃತಂ=ನುಡಿಯಲುಪಟ್ಟುದು. ॥೪॥

ಶ್ಲೋಕ॥ ಸಾಕಲ್ಯಾದಿಸ್ತು ಯತ್ಪಂಚಮೂರ್ತಿಬ್ರಹ್ಮ ತದುಚ್ಯತೇ ।

ಟೀಕು॥ ಸಾಕಲ್ಯಾದಿಸ್ತುಯತ್ಪಂಚ=ಸಾಕಲ್ಯಪ್ರಣವ ವರ್ಣ ಮೊದಲಾಗಿ ಆವುದಾನೊಂದು ಪ್ರಣವಾಂಗ ಸಮೂಹವುಂಟು, ತತ್=ಆ ಬೀಜವೆಲ್ಲವೂ, ಮೂರ್ತಿ ಬ್ರಹ್ಮಮುಚ್ಯತೇ= ಮೂರ್ತಿಬ್ರಹ್ಮವೆಂದು ನುಡಿಯಲುಪಡುತ್ತಿಹುದು. ॥೫॥

ಶ್ಲೋಕ॥ ಏತೇಷಾಂ ಚೈವ ತತ್ತ್ವಾನಾಂ ಶಿವತತ್ತ್ವಂ ಪ್ರಭುಃ ಸ್ಮೃತಮ್ ।
ಏತಚ್ಛಿವಮಯಂ ಬೀಜಂ ಶಿವಾರ್ಣಂ ಚೇತಿ ಕೀರ್ತಿತಮ್ ॥

ಟೀಕು॥ ಏತೇಷಾಂ ಚೈವ ತತ್ತ್ವಾನಾಂ=ಈ ತ್ರಿವರ್ಣ ಸಂಭೂತವಾದ ಸಮಸ್ತವರ್ಣ ತತ್ತ್ವಂಗಳಿಗೆ, ಶಿವತತ್ತ್ವಂ=ಶಿವತತ್ತ್ವವೇ, ಪ್ರಭುಃ=ಪ್ರಭುವೆಂದು, ಸ್ಮೃತಂ=ನೆನೆಯಲು ಪಟ್ಟುದು, ಏತತ್ ಶಿವಮಯಂ ಬೀಜಂ=ಈ ಶಿವತತ್ತ್ವವಾದ ಬೀಜಂ, ಶಿವಾರ್ಣಂ ಚ ಇತಿ ಕೀರ್ತಿತಂ='ಹ'ಕಾರವೆಂದು ಎಲ್ಲಾ ಆಗಮಂಗಳಲ್ಲಿ ಹೇಳಲ್ಪಟ್ಟುದು. ॥೧೦॥

ಶ್ಲೋಕ॥ ತಸ್ಮಾತ್ ಶುದ್ಧಾದಿ ಚಾತ್ಮಾನ್ತಂ ತತ್ತ್ವಬ್ರಹ್ಮಂ ಪ್ರಕೀರ್ತಿತಮ್ ।

ಟೀಕು॥ ತಸ್ಮಾತ್=ಅದು ಕಾರಣದಿಂದ, ಶುದ್ಧಾದಿ ಚಾತ್ಮಾನಂ=ಈ ಶುದ್ಧಪ್ರಾಸಾದಂ ಮೊದಲಾಗಿ ಆತ್ಮಪ್ರಾಸಾದ ಕಡೆಯಾಗಿ ಪಂಚ ಪ್ರಾಸಾದ ಮಂತ್ರವು, ತತ್ತ್ವ ಬ್ರಹ್ಮಂ=ತತ್ತ್ವಬ್ರಹ್ಮವೆಂದು, ಪ್ರಕೀರ್ತಿತಂ=ಹೇಳಲುಪಟ್ಟುದು. ॥೧೧॥

ಶ್ಲೋಕ॥ ಪ್ರಥಮಂ ಮಾಂಸಬೀಜಂ ಸ್ಯಾದ್ವಿತೀಯಂ ಮೇದಸೋ ಭವೇತ್ ।
ತ್ರಿತಯಂ ಷಷ್ಠಭೇದಂ ತು ಚತುರ್ಥಂ ಸಪ್ತಮಂ ತಥಾ ॥
ಪಂಚಮಂ ಪಂಚಮಂ ವಿಂದ್ಯಾತ್ ಪಾಂಚಭೌತಿಕಮುಚ್ಯತೇ ॥

ಟೀಕು॥ ಮಾಂಸಬೀಜಂ=ಮಾಂಸಬೀಜವೆನಿಸಿಹ 'ಲ'ಕಾರಂ ಪ್ರಥಮಂ ಸ್ಯಾತ್= ಪ್ರಥಮಭೂತಬೀಜವಹುದು; ದ್ವಿತೀಯಂ=ಎರಡನೆಯ ಭೂತಬೀಜವೇ ಮೇದ ಸೋಭವೇತ್=ಮೇದೋವರ್ಣವೆನಿಸಿಹ 'ವ'ಕಾರವಹುದು. ಷಷ್ಠಭೇದಂತು= ಷಷ್ಠಾಭಿಧಾನವನುಳ್ಳ 'ರ'ಕಾರವಾಯಿತ್ತಾದೊಡೆ, ತ್ರಿತಯಂತು ಮೂಱನೆಯ ಭೂತಬೀಜವಹುದು. ಚತುರ್ಥಂ ತಥಾ=ನಾಲ್ಕನೆಯ ಭೂತಬೀಜವಹ ಹಾಂಗೆ, ಸಪ್ತಮಂ=ಸಪ್ತಮಾಭಿಧಾನವುಳ್ಳ 'ಯ'ಕಾರವಹುದು; ಪಂಚಮಾ=ಪಂಚಮಾಖ್ಯವನುಳ್ಳ 'ಹ'ಕಾರವು, ಪಂಚಮಂ=ಅಯಿದನೆಯ ಭೂತಬೀಜವಹುದು, ಹೀಂಗೆ, ಪಾಂಚಭೌತಿಕ ಮುಚ್ಯತೇ=ಪಂಚಭೌತಿಕತತ್ತ್ವವು ನುಡಿಯಲ್ಪಡುತ್ತಿಹುದು. ॥೧೨॥

ಶ್ಲೋಕ॥ ಮಾಂಸಂ ವೈ ಪಾರ್ಥಿವಂ ಬೀಜಂ ಮೇದಸೋ ಹ್ಯಾಪ ಉಚ್ಯತೇ ।
ಷಷ್ಠಂ ತೇಜೋ ವಿನಿರ್ದಿಷ್ಟಂ ಸಪ್ತಮಂ ಮಾರುತಾತ್ಮಕಮ್ ॥

ಪಂಚಮಂ ವ್ಯೋಮಬೀಜಂ ಸ್ಯಾತ್ ಭೂತಬ್ರಹ್ಮೇತಿ ಕೀರ್ತಿತಮ್ ।

ಟೀಕು॥ ಮಾಂಸಂ ವೈ=ಮಾಂಸಬೀಜವಾದ 'ಲ'ಕಾರವು, ಪಾರ್ಥಿವಂ ಬೀಜಂ=ಪೃಥಿವೀ ಬೀಜವು; ಮೇದಸಃ=ಮೇದೋಬೀಜವಾದ 'ವ'ಕಾರವು, ಆಪ ಹಿ ಉಚ್ಯತೇ=ಅಪ್‌ಬೀಜವೆಂದು ನುಡಿಯಲುಪಡುತ್ತಿಹುದು, ಷಷ್ಠಂ=ಷಷ್ಠಬೀಜವೆಂಬ 'ರೇಫ'ವು, ತೇಜೋವಿನಿರ್ದಿಷ್ಟಂ=ಅಗ್ನಿಭೂತಬೀಜವೆಂದು ನಿರ್ದೇಶಿಸಲುಪಟ್ಟುದು, ಸಪ್ತಮಂ=ಸಪ್ತಮ ಬೀಜವಾದ 'ಯ'ಕಾರವು ಮಾರುತಾತ್ಮಕಂ= ವಾಯುಭೂತ ಸ್ವರೂಪವಾದ ಬೀಜಂ, ಪಂಚಮಂ=ಪಂಚಮ ಬೀಜವಾದ 'ಹ'ಕಾರವು, ವ್ಯೋಮಬೀಜಂ

ಸ್ಯಾತ್=ಆಕಾಶಬೀಜವೆಂದಜಿವುದು. ಭೂತಬ್ರಹ್ಮೇತಿ=ಈ ಪ್ರಕಾರದಿಂದ ಪಂಚಭೂತಬ್ರಹ್ಮ ವೆಂದು, ಕೀರ್ತಿತಂ=ನುಡಿಯಲುಪಟ್ಟುದು. ॥೧೪॥

ಪಿಂಡಬ್ರಹ್ಮವಂ ನಿರೂಪಿಸಿಹನು.

ಶ್ಲೋಕ॥ ಸಪ್ತಕೇ ಪ್ರಕೃತೌ ವರ್ಣೇ ತುರೀಯಂ ಪಂಚಮಂ ತ್ಯಜೇತ್ ।
ಶೇಷೇಷು ಪಂಚವರ್ಣೇಷು ಪಂಚಮಂ ಸಹ ಯೋಜಯೇತ್ ॥

ಬಿಂದುನಾದ ಸಮಾಯುಕ್ತಂ ಪಂಚಾರ್ಣಾನಾಮನುಕ್ರಮಾತ್ ।
ಪ್ರಕೃತಿಸ್ವರಸಂಯುಕ್ತಂ ಹಕಾರೇಷು ಅನುಕ್ರಮಾತ್ ॥

ಟೀಕು॥ ಪ್ರಕೃತೌ ಸಪ್ತಕೇ ವರ್ಣೇ=ಪ್ರಕೃತಿಯೆಂಬ ಸ್ವರಾಕ್ಷರಂಗಳಲ್ಲಿ ಅ ಇ ಯ ಋ ೯ ಏ ಓ ಎಂಬೀ ಏಳಕ್ಷರಂಗಳಲ್ಲಿ ತುರೀಯಂ ನಾಲ್ಕನೆಯ ಋಕಾರವನ್ನು ಪಂಚಮಂ= ಅಯಿದನೆಯದಾದ ೯ ಕಾರವನ್ನೂ, ತ್ಯಜೇತ್=ಬಿಡುವುದು, ಶೇಷೇಷು ಪಂಚವರ್ಣೇಷು=ಉಳಿದ ಅಯಿದು ಅಕ್ಷರಂಗಳಲ್ಲಿ ಒಂದೊಂದಕ್ಕೂ 'ಹ'ಕಾರವನ್ನು, ಸಹಯೋಜಯೇತ್=ಕೂಡಿಸುವದು, ಪಂಚಾರ್ಣಾನಾಂ=ಈ ಪ್ರಕೃತಿಸ್ವರ ಪಂಚಕಯುಕ್ತ ವಾದ ಅಯಿದಕ್ಷರಂಗಳಲ್ಲಿಯುಂ ತಱುವಾಯಿಂದೆ, ಅನುಕ್ರಮಾತ್ ನಾದ ಸಂಯುಕ್ತಂ= ಸೊನ್ನೆಯಂ ಕೂಡುವದು ಪಂಚ ಹಕಾರಂಗಳಲ್ಲಿ ಒಂದೊಂದಕ್ಕೂ, ಅನುಕ್ರಮಾತ್ ಪ್ರಕೃತಿಸ್ವರಸಂಯುಕ್ತಂ=ಅನುಕ್ರಮವಾಗಿ ಪ್ರಕೃತಿ ಸ್ವರಮಂ ಕೂಡಿಸುವದು, ಹೀಂಗೆ ಕೂಡಿದಡೆ ಹಂ ಹಿಂ ಹುಂ ಹೇಂ ಹೋಂ ಎಂಬ ಪಂಚತಾಂತ್ರಿಕ ಪಿಂಡಬ್ರಹ್ಮ ಬೀಜಂಗಳಪ್ಪವು, ರೇಫವನ್ನು ಕೂಡಿದಡೆ ಹ್ರಂ ಹ್ರಿಂ ಹ್ರುಂ ಹ್ರೇಂ ಹ್ರೋಂ ಎಂಬ ವಹ್ನಿಯುಕ್ತೋದ್ಧರಣ ವೈದಿಕ ಪಿಂಡಬ್ರಹ್ಮಬೀಜಂಗಳಪ್ಪವು. ॥೧೬॥

ಶ್ಲೋಕ॥ ತೇಷಾಂ ನಾಮಾನಿ ವಕ್ಷ್ಯಾಮಿ ಸಮಾಸಾತ್‌ಶೃಣು ಷಣ್ಮುಖ ।

ಟೀಕು॥ ಭೋ ಷಣ್ಮುಖ!=ಎಲೆ ಷಡಾನನೆ! ತೇಷಾಂ ನಾಮಾನಿ=ಆ ಪಿಂಡಬ್ರಹ್ಮಂಗಳ ಹೆಸರುಗಳನು, ಸಮಾಸಾತ್=ಸಮಾಸದಿಂದ, ವಕ್ಷ್ಯಾಮಿ=ಹೇಳಿಹೆನು, ಶೃಣು=ಕೇಳು.

ಶ್ಲೋಕ॥ ಸದ್ಯೋಜಾತಂ ತಥಾಪೂರ್ವಂ ವಾಮದೇವಂ ದ್ವಿತೀಯಕಮ್ ।
ಅಘೋರಂ ತು ತೃತೀಯಂ ಸ್ಯಾತ್ ಚತುರ್ಥಂ ಪುರುಷಂ ಹಿ ವೈ ॥

ಈಶಾನಂ ಪಂಚಮಂ ವಿಂದ್ಯಾತ್ ಪಂಚನಾಮಾನಿ ಚೋಚ್ಯತೇ ।

ಟೀಕು॥ ಸದ್ಯೋಜಾತಂ=ಸದ್ಯೋಜಾತವೆಂಬ ಶಿವ ವಕ್ತ್ರಬ್ರಹ್ಮವು, ಪೂರ್ವಂ= ಮೊದಲ ಬ್ರಹ್ಮವು, ತಥಾ=ಹಾಂಗೆ, ವಾಮದೇವಂ=ವಾಮದೇವ ವಕ್ತ್ರಬ್ರಹ್ಮವು, ದ್ವಿತೀಯಕಂ= ಎರಡನೆಯ ಬ್ರಹ್ಮವು, ಅಘೋರಂತು=ಅಘೋರ ವಕ್ತ್ರ ಬ್ರಹ್ಮವಾದಡೆ, ತೃತೀಯಕಂ ಸ್ಯಾತ್=ಮೂಱನೆಯ ಬ್ರಹ್ಮವು, ಪುರುಷಂ=ತತ್ಪುರುಷವಕ್ತ್ರ ಬ್ರಹ್ಮವು, ಚತುರ್ಥಂ ಹಿ

ವೈ=ನಾಲ್ಕನೆಯ ಬ್ರಹ್ಮವಹುದು, ಈಶಾನಂ=ಈಶಾನ ಬ್ರಹ್ಮವಕ್ತ್ರವಾಯಿತ್ತಾದಡೆ, ಪಂಚಮಂ ವಿಂದ್ಯಾತ್=ಅಯಿದನೆಯ ಬ್ರಹ್ಮವೆಂದಱಿವುದು, ಆ ಈ ಪಂಚಬ್ರಹ್ಮ ಬೀಜಂಗಳು, ಪಂಚನಾಮಾನಿ ಚೋಚ್ಯತೇ= ಪಂಚಬ್ರಹ್ಮಾಭಿಧಾನವನುಳ್ಳವೆಂದು ನುಡಿಯಲು ಪಡುತ್ತಿಹುದು. ॥೧೯॥

ಶ್ಲೋಕ॥ ಪ್ರಣವಾದಿ ಚತುರ್ಥ್ಯಂತಂ ಸ್ವನಾಮಪದಮಧ್ಯಾಗಾಃ ।
ನಮಸ್ಕಾರಾಂತ ಸಂಯುಕ್ತಾನ್ ಸದ್ಯಾದೀನ್ ಯೋಜಯೇತ್ಕ್ರಮಾತ್ ॥

ಟೀಕು॥ ಪ್ರಣವಾದಿ ಚತುರ್ಥ್ಯಂತಂ ಸ್ವನಾಮಪದಮಧ್ಯಗಾಃ=ಮೊದಲಲ್ಲಿ ಪ್ರಣಮಮಂ ಉದ್ಧರಿಸಿ ಆ ಸದ್ಯೋಜಾತ ಮೊದಲಾದ ತಮ್ಮ ತಮ್ಮ ನಾಮಶಬ್ದಂಗಳಂ, ಚತುರ್ಥ್ಯಂತಮಧ್ಯದಲ್ಲಿ ಉದ್ಧರಿಸಿ, ನಮಸ್ಕಾರಾಂತ ಸಂಯುಕ್ತಾನ್ ಸದ್ಯಾದೀನ್=ನಮಃ ಎಂಬ ಪದಮಂ ಕೂಡಿಸಿ ಸದ್ಯೋಜಾತಾದಿ ಮಂತ್ರಂಗಳಂ ಕ್ರಮವಾಗಿ ತಱಿವಾಯಿಂದೆ ಪ್ರಯೋಗಿಸುವುದು. ಹೀಂಗೆ ಪ್ರಯೋಗಿಸಿದಡೆ ಪಂಚಬ್ರಹ್ಮ ಮಂತ್ರಂಗಳು ಪುಟ್ಟುವವು. ಈ ಪಂಚೋದ್ಧರಣ ಮಂತ್ರಂಗಳು ಹೇಂಗೆಂದಡೆ : ॥೨೦॥

ಓಂ ಹ್ರಾಂ ಸದ್ಯೋಜಾತಾಯನಮಃ
ಓಂ ಹ್ರೀಂ ವಾಮದೇವಾಯನಮಃ
ಓಂ ಹ್ರೂಂ ಅಘೋರಾಯನಮಃ
ಓಂ ಹ್ರೇಂ ತತ್ಪುರುಷಾಯ ನಮಃ
ಓಂ ಹ್ರೋಂ ಈಶಾನಾಯನಮಃ

ಈ ಹೀಂಗೆ ಓಂಕಾರ ಬೀಜಾಕ್ಷರಯುಕ್ತವಾಗಿ ಪಂಚಬ್ರಹ್ಮ ಮಂತ್ರಂಗಳುದ್ಧೃತವಪ್ಪವು.

ಶ್ಲೋಕ॥ ಶಿವಾರ್ಣೇ ಬೀಜವರ್ಣಾನಿ ಸಂಯೋಗಾತ್ಪಿಂಡಮುಚ್ಯತೇ ।
ಕರ್ಮೇಶಂ ಪಿಂಡರೂಪತ್ವಾತ್ಪಿಂಡಬ್ರಹ್ಮಮುದಾಹೃತಮ್ ॥

ಟೀಕು॥ ಶಿವಾರ್ಣೇ ಬೀಜವರ್ಣಾನಿ=ಶಿವಾಕ್ಷರಮಪ್ಪ ಹಕಾರದಲ್ಲಿ ಪ್ರಕೃತಿ ಪಂಚಾಕ್ಷರಂಗಳು, ಸಂಯೋಗಾತ್=ಕೂಡುವುದರದೆಸೆಯಿಂದ, ಪಿಂಡಂ=ಪಿಂಡವೆಂದು, ಉಚ್ಯತೇ=ನುಡಿಯಲುಪಡುತ್ತಿಹುದು, ಕರ್ಮೇಶಂ=ಕರ್ಮೇಶ ತತ್ತ್ವಂ, ಪಿಂಡರೂಪತ್ವಾತ್=ಪಿಂಡರೂಪವಪ್ಪಕಾರಣದಿಂದ, ಪಿಂಡಬ್ರಹ್ಮಂ=ಪಿಂಡಬ್ರಹ್ಮವೆಂದು, ಉದಾಹೃತಂ=ಉದ್ಧೃತವಾದುದು. ॥೨೧॥

ಹೀಂಗೆ ಪಿಂಡಬ್ರಹ್ಮಮೆಂಬ ಪಂಚಬ್ರಹ್ಮವಂ ನಿರೂಪಿಸಿ ಈ ಪಂಚಬ್ರಹ್ಮಮಂತ್ರಂಗಳೇ ಅಷ್ಟಾತ್ರಿಂಶತ್ಕಲೆಗಳಂ ಸಂಬಂಧಿಸಿ ಆ ಈ ಮಂತ್ರಂಗಳನೇ ಕಲಾಬ್ರಹ್ಮಂಗಳೆಂದು ನಿರೂಪಿಸುತ್ತಿದ್ದಾನು.

ಶ್ಲೋಕ॥ ಈಶಾನಂ ಪುರುಷಂ ಚೈವ ಅಘೋರಂ ವಾಮದೇವಕಮ್ ।
ಸದ್ಯೋಜಾತಶ್ಚ ಪಂಚೈತೇ ಕಲಾಬ್ರಹ್ಮ ಪ್ರಕೀರ್ತಿತಾಃ ॥

ಟೀಕು॥ ಈಶಾನಂ=ಈಶಾನಮೆಂದುಂ, ಪುರುಷಂ=ತತ್ಪುರುಷಮೆಂದುಂ, ಅಘೋರಂ= ಅಘೋರಮೆಂದುಂ, ವಾಮದೇವಕಂ=ವಾಮದೇವನೆಂದುಂ, ಸದ್ಯೋಜಾತಂ ಚ=ಸದ್ಯೋಜಾತಮೆಂದುಂ, ಪಂಚೈತೇ=ಆ ಈ ಪಂಚತತ್ತ್ವಂಗಳುಂ ಮರಳಿ, ಕಲಾಬ್ರಹ್ಮಂ= ಕಲಾಬ್ರಹ್ಮವೆಂದು, ಪ್ರಕೀರ್ತಿತಂ=ಕೊಂಡಾಡಲುಪಟ್ಟುದು.

ಶ್ಲೋಕ॥ ಈಶಾನಸ್ಯ ಕಲಾಃ ಪಂಚಪುರುಷಸ್ಯ ಚತುಃಕಲಾಃ ।
ಅಘೋರಸ್ಯ ಕಲಾಶ್ಚಾಷ್ಟೌ ವಾಮದೇವೇ ತ್ರಯೋದಶ ॥

ಸದ್ಯಸ್ಯಾಷ್ಟಕಲಾಜ್ಞೇಯಃ ಅಷ್ಟತ್ರಿಂಶತ್ ಕಲಾಃ ಸ್ಮೃತಾಃ ।

ಟೀಕು॥ ಈಶಾನಸ್ಯ=ಈಶಾನ ತತ್ತ್ವಕ್ಕೆಯು, ಪಂಚಕಲಾಃ=ಅಯಿದು ಕಲೆಗಳು, ಪುರುಷಸ್ಯ= ಪುರುಷ ತತ್ತ್ವಕ್ಕೆ, ಚತುಃಕಲಾಃ=ನಾಲ್ಕು ಕಲೆಗಳು, ಅಘೋರಸ್ಯ=ಅಘೋರತತ್ತ್ವಕ್ಕೆ ಅಷ್ಟೌ ಕಲಾಃ=ಎಂಟು ಕಲೆಗಳು; ವಾಮದೇವೇ=ವಾಮದೇವದಲ್ಲಿ, ತ್ರಯೋದಶ= ಹದಿಮೂರು ಕಲೆಗಳೂ, ಜ್ಞೇಯಃ=ಇಹವೆಂದು ತಿಳಿಯಲುತಕ್ಕುದು. ॥೨೪॥

ಸದ್ಯಸ್ಯ=ಸದ್ಯೋಜಾತದಲ್ಲಿ, ಅಷ್ಟೌ ಕಲಾಃ ಜ್ಞೇಯಾಃ=ಎಂಟು ಕಲೆಗಳೆಂದು ತಿಳಿಯಲುಪಟ್ಟದು, ಅಷ್ಟ ತ್ರಿಂಶತ್ ಕಲಾ ಸ್ಮೃತಾಃ=ಹೀಂಗೆ ಮೂವತ್ತೆಂಟು ಕಲೆಗಳು ಪಂಚಬ್ರಹ್ಮ ಮಂತ್ರಂಗಳಿಗೆ ಭಾಗವಾಗಿಪ್ಪವೆಂದು ನೆನೆಯಲ್ಪಟ್ಟವು. ॥೨೫॥

ಕಲಾಬ್ರಹ್ಮ ಮಂತ್ರಂಗಳಂ ವಿಭಜಿಸುತ್ತಿದ್ದಾನು.

ಶ್ಲೋಕ॥ ಈಶಾನಃ ಸರ್ವವಿದ್ಯಾನಾಂ ಪ್ರಥಮಂ ಪರಿಕೀರ್ತಿತಮ್ ।
ಈಶ್ವರಃ ಸರ್ವಭೂತಾನಾಂ ದ್ವಿತೀಯಂ ಪರಿಕೀರ್ತಿತಮ್ ॥

ಟೀಕು॥ ಈಶಾನಸ್ಸರ್ವವಿದ್ಯಾನಾಂ=ಈಶಾನಸ್ಸರ್ವ ವಿದ್ಯಾನಾಂ ಎಂಬ ಪದವು ಪ್ರಥಮಂ=ಮೊಲದನೆಯ ಪದವೆಂದು, ಪರಿಕೀರ್ತಿತಂ=ನುಡಿಯಲುಪಟ್ಟುದು, ಈಶ್ವರಃ ಸರ್ವಭೂತನಾಂ=ಈಶ್ವರಃ ಸರ್ವಭೂತಾನಾಂ ಎಂಬ ಕಲಾಪದವು, ದ್ವಿತೀಯಂ= ಎರಡನೆಯ ಪದವೆಂದು ಪರಿಕೀರ್ತಿತಂ=ನುಡಿಯಲುಪಟ್ಟುದು. ॥೨೬॥

ಶ್ಲೋಕ॥ ಬ್ರಹ್ಮಾಧಿಪತಿರಿತ್ಯೇವ ಬ್ರಹ್ಮಣೋಽಧಿಪತಿಸ್ತಥಾ ।
ಬ್ರಹ್ಮೇತೀದಂ ತೃತೀಯಂ ಸ್ಯಾತ್ ಶಿವೋ ಮೇಽಸ್ತು ಚತುರ್ಥಕಮ್ ॥

ಟೀಕು॥ ಬ್ರಹ್ಮಾಧಿಪತಿರಿತ್ಯೇವ=ಬ್ರಹ್ಮಾಧಿಪತಿಯೆಂಬುದುಂ, ತಥಾ=ಹಾಂಗೆ,

ಬ್ರಹ್ಮಣೋಽಧಿಪತಿಃ=ಬ್ರಹ್ಮಣೋಧಿಪತಿಯೆಂಬುದು, ಬ್ರಹ್ಮೇತೀದಂ=ಬ್ರಹ್ಮವೆಂಬೀ ಕಲಾರೂಪವು; ತೃತೀಯಂ ಸ್ಯಾತ್=ಮೂಱನೆಯದಹುದು, ಶಿವೋಮೇಽಸ್ತು=ಶಿವೋಮೇಽಸ್ತು ಎಂಬಪದಂ, ಚತುರ್ಥಕಂ=ನಾಲ್ಕನೆಯದಹುದು. ॥೨೭॥

ಶ್ಲೋಕ॥ ಸದಾಶಿವೋಮಿತಿ ಜ್ಞೇಯಂ ಪಂಚಮಂ ಪರಿಕೀರ್ತಿತಮ್ ।
ಏತಾ ಈಶಾನ ರೂಪಾಶ್ಚ ಪಂಚಸಂಖ್ಯಾ ಪ್ರಕೀರ್ತಿತಾಃ ॥

ಟೀಕು॥ ಸದಾಶಿವೋಮಿತಿ ಜ್ಞೇಯಂ=ಸದಾಶಿವೋಂ ಎಂದಱಿಯತಕ್ಕರೂಪವು, ಪಂಚಮಂ ಇತಿ=ಅಯಿದನೆಯದೆಂದು, ಪರಿಕೀರ್ತಿತಂ=ಹೇಳಲುಪಟ್ಟುದು, ಏತಾ ಈಶಾನರೂಪಾಶ್ಚ=ಆ ಈ ಈಶಾನ ಕಲಾರೂಪಂಗಳು, ಪಂಚಸಂಖ್ಯಾ ಇತಿ=ಅಯಿದು ರೂಪಂಗಳೆಂದು ಪ್ರಕೀರ್ತಿತಾಃ=ಹೇಳಲುಪಟ್ಟವು. ॥೨೮॥

ಶ್ಲೋಕ॥ ತತ್ಪುರುಷಾಯ ವಿದ್ಮಹೇ ಪ್ರಥಮಂ ಪರಿವಕ್ಷ್ಯತೇ ।
ಮಹಾದೇವಾಯ ಧೀಮಹಿ ತನ್ನೋ ಚೇತಿ ದ್ವಿತೀಯಕಮ್ ॥

ಟೀಕು॥ ತತ್ಪುರುಷಾಯ ವಿದ್ಮಹೇ=ತತ್ಪುರುಷಾಯ ವಿದ್ಮಹೇ ಎಂಬ ಪದಂ ಪ್ರಥಮಂ=ಪ್ರಥಮವೆಂದು, ಪರಿವಕ್ಷ್ಯತೇ=ಹೇಳಲುಪಡುವದು; ಮಹಾದೇವಾಯ ಧೀಮಹಿ ತನ್ನೋಚೇತಿ=ಮಹಾದೇವಾಯ ಧೀಮಹಿ ತನ್ನೋ ಎಂಬ ಸ್ವರೂಪವು, ದ್ವಿತೀಯಕಂ=ಎರಡನೆಯ ಕಲಾಪದವು. ॥೨೯॥

ಶ್ಲೋಕ॥ ರುದ್ರಸ್ತೃತೀಯಮಿತ್ಯುಕ್ತಂ ಚತುರ್ಥಂ ತು ಪ್ರಚೋದಯಾತ್ ।
ಏವಂ ಪುರುಷಕಲಾಶ್ಚೈವ ಚತ್ವಾರಶ್ಚೇತಿ ಕೀರ್ತಿತಾಃ ॥

ಟೀಕು॥ ರುದ್ರಃ=ರುದ್ರಃ ಎಂಬ ಪದ, ತೃತೀಯಮಿತ್ಯುಕ್ತಂ=ಮೂಱನೆಯ ಕಲೆಯೆಂದು ಹೇಳಲ್ಪಟ್ಟುದು. ಚತ್ವಾರಶ್ಚೇತಿ=ನಾಲ್ಕನೆಯ ಕಲೆಯಾಯಿತ್ತಾದಡೆ, ಪ್ರಚೋದಯಾತ್=ಪ್ರಚೋದಯಾತ್ ಎಂಬ ಪದವು, ಏವಂ=ಈ ಪ್ರಕಾರದಿಂದ ಪುರುಷಕಲಾಶ್ಚ=ತತ್ಪುರುಷ ಮಂತ್ರದಲ್ಲಿ, ಚತ್ವಾರಃ ಇತಿ ಕೀರ್ತಿತಾಃ=ನಾಲ್ಕು ಕಲೆಗಳು ಇಹವೆಂದು ಹೇಳಲುಪಟ್ಟುದು. ॥೩೦॥

ಶ್ಲೋಕ॥ ಅಘೋರೇಭ್ಯಸ್ತಥಾಪೂರ್ವಂ ಅಘೋರೇಭ್ಯೋ ದ್ವಿತೀಯಕಮ್ ।
ಘೋರಘೋರಸ್ತೃತೀಯಂ ಸ್ಯಾತ್ತರೇಭ್ಯಶ್ಚ ಚತುರ್ಥಕಮ್ ॥

ಟೀಕು॥ ಆ ಈ ಪುರುಷನ ಕಲೆಗಳ ಹಾಂಗೆ, ಅಘೋರೇಭ್ಯಃ='ಅಘೋರಬ್ರಹ್ಮಕ್ಕೆ' ಅಘೋರೇಭ್ಯಃ=ಅಘೋರೇಭ್ಯಃ ಎಂಬ ಪದವು ಪೂರ್ವಂ=ಮೊದಲನೆಯದು; ಅಥ ಘೋರೇಭ್ಯಃ=ಅಥ ಘೋರೇಭ್ಯಃ ಎಂಬ ಪದವು, ದ್ವಿತೀಯಕಂ=ದ್ವಿತೀಯ ಕಲೆಯು,

ತೃತೀಯಂ ಸ್ಯಾತ್=ಮೂಱನೆಯ ಕಲೆಯಾದಡೆ, ಘೋರಘೋರಃ=ಘೋರಘೋರಃ ಎಂಬ ಪದವು. ತರೇಭ್ಯಃ=ತರೇಭ್ಯಃ ಎಂಬುದು, ಚತುರ್ಥಕಂ=ನಾಲ್ಕನೆಯ ಕಲೆಯು.

ಶ್ಲೋಕ॥ ಸರ್ವತಃ ಪಂಚಮಂ ವಿದ್ಯಾತ್ ಷಷ್ಠಂ ಸರ್ವಮುದಾಹೃತಮ್ ।
ಸರ್ವೇಭ್ಯೋ ನಮಸ್ತೇ ಅಸ್ತು ಸಪ್ತಮಂ ಚೇತಿ ಕೀರ್ತಿತಮ್ ॥

ಅಷ್ಟಂತುಂ ರುದ್ರರೂಪೇಭ್ಯಶ್ಚಾಘೋರಸ್ಯಾಷ್ಟಕಂ ಸ್ಮೃತಮ್ ॥

ಟೀಕು॥ ಸರ್ವತಃ='ಸರ್ವತಃ' ಎಂಬ ಪದಂ, ಪಂಚಮಂ ವಿದ್ಯಾತ್=ಅಯಿದನೆಯ ಕಲೆಯೆಂದು ತಿಳಿಯಲ್ಪಡುವುದು, ಸರ್ವಂ=ಸರ್ವ ಎಂಬ ಪದವು ಷಷ್ಠಮುದಾಹೃತಂ= ಆಱನೆಯ ಕಲೆಯೆಂದು ಹೇಳಲುಪಡುವದು, ಸರ್ವೇಭ್ಯೋ ನಮಸ್ತೇ ಅಸ್ತು=ಸರ್ವೇಭ್ಯೋ ನಮಸ್ತೇ ಅಸ್ತು ಎಂಬುದು, ಸಪ್ತಮಂಚ ಕೀರ್ತಿತಂ=ಏಳನೆಯ ಕಲೆಯೆಂದು ಹೇಳಲು ಪಡುವದು, ರುದ್ರರೂಪೇಭ್ಯಶ್ಚ=ರುದ್ರರುಪೇಭ್ಯಃ ಎಂಬ ಪದವು, ಅಷ್ಟಕಂ=ಎಂಟನೆಯ ದೆಂದು, ಸ್ಮತಃ=ನೆನೆಯಲುಪಟ್ಟುದು. ಈ ಪ್ರಕಾರದಿಂ ಅಘೋರಸ್ಯ=ಅಘೋರ ಮಂತ್ರದಲ್ಲಿ, ಅಷ್ಟಕಮಿತಿ ಸ್ಮತಂ=ಎಂಟು ಕಲೆಗಳಿಹವು ಎಂದು ನುಡಿಯಲುಪಟ್ಟುದು. ॥೩೩॥

ಶ್ಲೋಕ॥ ಪ್ರಥಮಂ ವಾಮದೇವಾಯ ಜ್ಯೇಷ್ಠಾಯೇತಿ ದ್ವಿತೀಯಕಮ್ ।
ತೃತೀಯಂ ರುದ್ರಾಯ ನಮಃ ಕಾಲಾಯೇತಿ ಚತುರ್ಥಕಮ್ ॥

ಟೀಕು॥ ವಾಮದೇವಾಯ=ವಾಮದೇವಾಯ ನಮಃ ಎಂಬ ಪದಂ, ಪ್ರಥಮಂ=ಪ್ರಥ, ಕಲೆಯು, ಜ್ಯೇಷ್ಠಾಯ ಇತಿ=ಜ್ಯೇಷ್ಠಾಯನಮಃ ಎಂಬುದುಂ, ದ್ವಿತೀಯಕಂ=ಎರಡನೆಯ ಕಲೆಯು, ರುದ್ರಾಯನಮಃ=ರುದ್ರಾಯನಮಃ ಎಂಬುದುಂ, ತೃತೀಯಂ=ಮೂರನೆಯ ಪದವು, ಕಾಲಾಯ ಇತಿ=ಕಾಲಾಯನಮಃ ಎಂಬುದುಂ, ಚತುರ್ಥಕಂ=ನಾಲ್ಕನೆಯ ಕಲೆಯು. ॥೩೪॥

ಶ್ಲೋಕ॥ ಪಂಚಮಂ ಕಲ ಇತ್ಯುಕ್ತಂ ವಿಕರಣಾಯ ನಮಸ್ತು ಷಟ್ ।
ಸಪ್ತಮಂ ಬಲಮಿತ್ಯುಕ್ತಂ ಅಷ್ಟಮಂ ವಿಕರಣಾಯ ಚ ॥

ಟೀಕು॥ ಕಲ=ಕಲ ಎಂಬ ಪದಂ, ಪಂಚಮಂ ಇತ್ಯಕ್ತಂ=ಅಯಿದನೆಯ ಕಲೆಯು, ವಿಕರಣಾಯ=ವಿಕರಣಾಯನಮಃ, ಎಂಬ ಪದವಾಯಿತ್ತಡೆ, ಷಟ್=ಆರನೆಯ ಕಲೆಯು, ಬಲಂ=ಬಲಂ ಎಂಬ ಕಲೆಯು, ಸಪ್ತಮಂ, ಇತ್ಯುಕ್ತಂ=ಏಳನೆಯದೆಂದು ನುಡಿಯಲ್ಪಟ್ಟುದು, ವಿಕರಣಾಯ ಎಂಬ ಪದಂ, ಅಷ್ಟಮಂ=ಅಷ್ಟಮಕಲೆಯು. ॥೩೫॥

ಶ್ಲೋಕ॥ ನವಮಂ ಬಲ ಇತ್ಯುಕ್ತಂ ದಶಮಂ ಪ್ರಮಥನಾಯ ಚ ।
ಸರ್ವಭೂತದಮನಾಯನಮಶ್ಚೈಕಾದಶಂ ಸ್ಮೃತಮ್ ॥

ಟೀಕು॥ ಬಲ=ಬಲ ಎಂಬುದುಂ, ನವಮಂ ಇತ್ಯುಕ್ತಂ=ನವಮ ಕಲೆಯೆಂದು ಹೇಳಲ್ಪಟ್ಟುದು, ಪ್ರಮಥನಾಯ ಚ=ಪ್ರವಾಥನಾಥಾಯ ನಮಃ ಎಂಬುದೂ, ದಶಮಂ=ದಶಮ ಕಲೆಯು, ಸರ್ವಭೂತದಮನಾಯ ನಮಶ್ಚ=ಸರ್ವಭೂತ ದಮನಾಯ ನಮಃ ಎಂಬುದುಂ, ಏಕಾದಶಂ ಸ್ಮೃತಂ= ಏಕಾದಶ ಕಲೆಯೆಂದು ನುಡಿಯಲ್ಪಟ್ಟುದು. ॥೩೬॥

ಶ್ಲೋಕ॥ ದ್ವಾದಶಂ ಚ ಮನಶ್ಚೇತಿ ತ್ರಯೋದಶೋನ್ಮನಾಯ ಚ ।
ಏತಾಃ ತ್ರಯೋದಶಕಲಾಃ ವಾಮದೇವಕಲಾಃ ಸ್ಮೃತಾಃ ॥

ಟೀಕು॥ ಮನಶ್ಚೇತಿ=ಮನ ಎಂಬುದುಂ, ದ್ವಾದಶಂ ಚ=ದ್ವಾದಶ ಕಲೆಯು, ಉನ್ಮನಾಯ ಚ=ಉನ್ಮನಾಯನಮಃ ಎಂಬುದುಂ, ತ್ರಯೋದಶಂ=ತ್ರಯೋದಶಕಲೆಯು, ವಾಮದೇವ ಮಂತ್ರಂಗಳು ವಾಮದೇವಾಯ ನಮೋ ಜ್ಯೇಷ್ಠಾಯ ನಮೋ ರುದ್ರಾಯನಮಃ ಕಾಲಾಯನಮಃ ಕಲವಿಕರಣಾಯ ನಮೋ ಬಲವಿಕರಣಾಯ ನಮಸ್ಸರ್ವಭೂತದ ಮನಾಯ ನಮೋ ಮನೋನ್ಮನಾಯ ನಮಃ ಎಂಬೀ ತ್ರಯೋದಶ ಕಲೆಗಳಹವು. ॥೩೭॥

ಸದ್ಯೋಜಾತ ಮಂತ್ರ ಕಲೆಗಳಂ ನಿರೂಪಿಸಿಹನು.

ಶ್ಲೋಕ॥ ಸದ್ಯೋಜಾತಂ ಪ್ರಪದ್ಯಾಮಿ ಪ್ರಥಮಂ ಪರಿಕೀರ್ತಿತಮ್ ।
ದ್ವಿತೀಯಂ ಸದ್ಯೋಜಾತಾಯ ವೈ ನಮಶ್ಚೇತಿ ಕೀರ್ತಿತಮ್ ॥

ಟೀಕು॥ ಸದ್ಯೋಜಾತಂ ಪ್ರಪದ್ಯಾಮಿ='ಸದ್ಯೋಜಾತಂ ಪ್ರಪದ್ಯಾಮಿ' ಎಂಬುದು, ಪ್ರಥಮಂ=ಪ್ರಥಮ ಕಲೆಯೆಂದುಂ, ಪರಿಕೀರ್ತಿತಂ=ನುಡಿಯಲ್ಪಟ್ಟುದು, ಸದ್ಯೋಜಾತಾಯ ವೈ ನಮಃ ಚ='ಸದ್ಯೋಜಾತಾಯ ವೈ ನಮಃ' ಎಂಬುದುಂ ದ್ವಿತೀಯಂ= ದ್ವಿತೀಯ ಕಲೆಯೆಂದುಂ, ಕೀರ್ತಿತಂ=ಹೇಳಲ್ಪಟ್ಟುದು. ॥೩೮॥

ಶ್ಲೋಕ॥ ತೃತೀಯಂ ತು ಭವೇ ಚೈವಾಽಭವೇ ಚೇತಿ ಚತುರ್ಥಕಮ್ ।
ಪಂಚಮಂ ಚ ನಾತಿಭವೇ ಷಷ್ಠಂ ಚೇತಿ ಭಜಸ್ವಮಾಮ್ ॥

ಟೀಕು॥ ತೃತೀಯಂ ತು=ಮೂಱನೆಯದಾಯಿತ್ತಾದಡೆ, ಭವೇ ಚೈವಾ='ಭವೇ' ಎಂಬ ರೂಪವುಂ, ಮತ್ತೆಯುಂ, ಅಭವೇಚೇತಿ='ಅಭವೇ' ಎಂಬುದುಂ ಚತುರ್ಥಕಂ=ಚತುರ್ಥ ಕಲೆಯು. ನಾತಿಭವೇ ಚ='ನಾತಿಭವೇ' ಎಂಬುದುಂ, ಪಂಚಮಂ=ಪಂಚಮ ಕಲೆಯು, ಷಷ್ಠಂ ಚೇತಿ=ಆಱನೆಯ ಕಲೆಯಾಯಿತ್ತಾದಡೆ, ಭಜಸ್ವಮಾಂ ಎಂಬುದುಂ. ॥೩೯॥

ಶ್ಲೋಕ॥ ಸಪ್ತಮಂ ತು ಭವಂ ವಿಂದ್ಯಾದುದ್ಭವಂ ಚಾಷ್ಟಮಂ ಭವೇತ್ ।

ಟೀಕು॥ ಭವಂ='ಭವವೆಂಬ ರೂಪಂ, ಸಪ್ತಮಂತು ವಿಂದ್ಯಾತ್=ಏಳನೆಯ ಕಲೆಯೆಂದಱಿವುದು, ಉದ್ಭವಂ ಚ=ಉದ್ಭವಾಯ ನಮಃ' ಎಂಬುದುಂ ಅಷ್ಟಮಂ ಭವೇತ್=ಎಂಟನೆಯ ಕಲೆಯಹುದು. ॥೪೦॥

ಶ್ಲೋಕ॥ ಏವಮಷ್ಟಕಲಾ ಪ್ರೋಕ್ತಾಃ ಸದ್ಯೋಜಾತಮುದಾಹೃತಮ್ ।

ಟೀಕು॥ ಏವಮಷ್ಟ ಕಲಾಪ್ರೋಕ್ತಃ=ಈ ಅಷ್ಟಕಲಾಯುಕ್ತವಾಗಿರ್ದುದು ಸದ್ಯೋಜಾತಂ= ಸದ್ಯೋಜಾತಕಲಾಬ್ರಹ್ಮವೆಂದು ನುಡಿಯಲ್ಪಟ್ಟುದು, ಸದ್ಯೋಜಾತಮಂತ್ರಃ ಸದ್ಯೋಜಾತಂ ಪ್ರಪದ್ಯಾಮಿ ಸದ್ಯೋಜಾತಾಯ ವೈನಮಃ। ಭವೇ ಭವೇ ನಾತಿಭವೇ ಭಜಸ್ವಮಾಂ ಭವೋದ್ಭವಾಯ ನಮಃ ॥೪೧॥

ಶ್ಲೋಕ॥ ಈಶಾನಾದೀನಿ ಸದ್ಯಾಂತಮಷ್ಟತ್ರಿಂಶತ್ಕಲಾಃ ಸ್ಮತಾಃ ।
ಅಷ್ಟತ್ರಿಂಶತ್ಕಲೋಪೇತಂ ಕಲಾದ್ಯಂ ತತ್ಪ್ರಕೀರ್ತಿತಮ್ ॥

ಟೀಕು॥ ಈಶಾನಾದೀನಿ ಸದ್ಯಾಂತಂ=ಈಶಾನ ಮೊದಲಾಗಿ ಸದ್ಯೋಜಾತ ಕಡೆಯಾಗಿ, ಅಷ್ಟತ್ರಿಂಶತ್‌ಕಲಾಃ=ಮೂವತ್ತೆಂಟು ಕಲೆಗಳಿಂ ಕೂಡಿದ ಬ್ರಹ್ಮಕಲೆಗಳುಂ ಸ್ಮೃತಾಃ= ನೆನೆಯಲ್ಪಟ್ಟವು, ಅಷ್ಟತ್ರಿಂಶತ್ಕಲೋಪೇತಂ=ಮೂವತ್ತೆಂಟು ಕಲೆಗಳಿಂದು ಪೇತವಾದುದಂ, ಕಲಾದ್ಯಂ ತತ್ ಪ್ರಕೀರ್ತಿತಂ=ಕಲಾಬ್ರಹ್ಮಸ್ವರೂಪವೆಂದು ಹೇಳಲ್ಪಟ್ಟುದು.

ಈ ಪರಿಯಿಂದ ಪಂಚಕಲಾ ಬ್ರಹ್ಮ ನುಡಿಯಲ್ಪಟ್ಟಿದೆ. ಪೂರ್ವಶ್ಲೋಕೋಕ್ತ ಪ್ರಮಾಣ ದಿಂದ ಪರಬ್ರಹ್ಮವಪ್ಪ ಶಿವಬೀಜಂ ಸಾಕಾಲ್ಯಾದಿ ಸಾಯುಜ್ಯಾಂತವಾದ ಪ್ರಣವ ಬೀಜಂಗಳೆಂಬ ಸ್ವರೂಪವನುಳ್ಳದಾದ ಕಾರಣ ಮೂರ್ತಿಮತ್ತೆನಿಸಿತ್ತಾಗಿ ಪ್ರಣವಪಂಚಕ ವೆಂದು ನುಡಿಯಲ್ಪಟ್ಟದು. ಭೂಮ್ಯಾಕಾಶಾಂತವಾದ ಪಂಚಭೌತಿಕ ಬೀಜಂಗಳೊಳ್ ತಾನು ವ್ಯೋಮಬೀಜವಪ್ಪ ಕಾರಣ ತನ್ನ ಭೋಗವಕ್ತ್ರ ಪಂಚಕ ಸಾಧನಾರ್ಥಂ ಭೂತವೆನಿಸಿತ್ತಾಗಿ ಲಕಾರಾದಿ ಹಕಾರಾಂತವಾದ ಭೂತವರ್ಣಪಂಚಕವೆಂದು ನುಡಿಯಲ್ಪಟ್ಟುದು. ಸದ್ಯಾದಿ ಈಶಾನಾಂತವಾದ ಪಂಚವಕ್ತ್ರ ಬೀಜವು ಭೌತಿಕಸ್ಥಮಾದಾತ್ಮ ತತ್ತ್ವದಲ್ಲಿ ತೋಱುತ್ತಿರ್ಪ ಕಾರಣ ಆತ್ಮಬೀಜಂಗಳಪ್ಪ ಸ್ವರಾಕ್ಷರಸ್ಥವಾಗುವುದಱಿಂ 'ಹ್ರಸ್ವಂ ಸ್ಯಾತ್ ಬ್ರಹ್ಮ ನಿಚಯಂ' ಎಂಬುದಱಿಂದ 'ಹ್ರಸ್ವಂ ಸ್ಯಾತ್ ಬ್ರಹ್ಮ ಪ್ರೋಕ್ತಾನಿ' ಎಂಬುದಱಿಂದ ಹ್ರಸ್ವಸ್ವರ ಪಂಚಕವೆನಿಸಿತ್ತಾಗಿ "ಸದ್ಯಾದಿ ವಕ್ತ್ರ ಪಂಚಕಂ ಪಿಂಡಬ್ರಹ್ಮ ಪಂಚಕ"ವೆಂದು ನುಡಿಯಲ್ಪಟ್ಟುದು. ಕರ್ಮಸಾದಾಖ್ಯಮೆಂದೊಡಂ ದಿವ್ಯಲಿಂಗ ಮೆಂದೊಡಂ ನಾಮಭೇದವಿಲ್ಲ. ಆ ಈ ಪಂಚಬ್ರಹ್ಮಬೀಜಂಗಳೇ ಆರಾಧಕರ್ಗಳಿಂದ ಜಪ್ಯರೂಪಮಪ್ಪ ನಿಮಿತ್ತಂ ಪಂಚಬ್ರಹ್ಮ ಮಂತ್ರ ವಿಭಾಗಂಗಳಾದವು.

"ಅಷ್ಟತ್ರಿಂಶತ್ಕಲೋಪೇತಂ ಕಲಾದ್ಯಂ ತತ್ ಪ್ರಕೀರ್ತಿತಮ್" ಎಂಬುದಱಿಂದ "ಪಂಚಾಕ್ಷರೇಣ ಮಂತ್ರೇಣ ಯತ್ತತ್ತ್ವಂ ಪರಿಕೀರ್ತಿತಂ । ಕಲಾದ್ಯಂತಂ ವಿಜಾನೀಯಾತ್॥" ಎಂಬ ಶಿವಭೇದಾಷ್ಟಕದಲ್ಲಿಯ ಶ್ಲೋಕಾರ್ಥದಿಂದ ಸ್ವಪರಾಶಕ್ತಿ ಸಂಭೂತವಾಗಿ ಜ್ಯೋತಿರ್ದೇವತಾಧಿಪತಿಗಳಾಗಿಯುಳ್ಳ ಸಮಸ್ತವರ್ಣ ಕಲೆಗಳಿಗೆ ತಾನೇ ಆಶ್ರಯವಾದ ಕಾರಣ ಪಿಂಡಬ್ರಹ್ಮ ಮಂತ್ರಪಂಚಕವೇ ಕಲಾಬ್ರಹ್ಮಮಂತ್ರಪಂಚಕವೆಂದು ನುಡಿಯಲ್ಪಟ್ಟುದು. ಹೀಂಗೆ ಪಂಚಬ್ರಹ್ಮ ವಿಭಾಗಮಪ್ಪ ಪಂಚವಿಂಶತಿ ಬ್ರಹ್ಮಂ ಕೀರ್ತಿಸಲ್ಪಟ್ಟುದು ॥೪೨॥

ಶ್ಲೋಕ॥ ಮೂರ್ತ್ಯಾದಿ ಕಲಾಂತಾನಾಂ ಲಕ್ಷಣಂ ವರ್ಣ್ಯತೇ ಕ್ರಮಾತ್ ।

ಟೀಕು॥ ಮೂರ್ತ್ಯಾದಿ ಕಲಾಂತಾನಾಂ=ಮೂರ್ತಿಬ್ರಹ್ಮ ಮೊದಲಾಗಿ ಕಲಾಬ್ರಹ್ಮ ಕಡೆಯಾದ ಪಂಚವಿಂಶತ್ ಬ್ರಹ್ಮಂಗಳ, ಲಕ್ಷಣಂ=ಲಕ್ಷಣವುಂ, ವರ್ಣ್ಯತೇ ಕ್ರಮಾತ್= ತಱುವಾಯಿಂದೆ ವರ್ಣಿಸಲ್ಪಟ್ಟುದು. ॥೪೩॥

ಶ್ಲೋಕ॥ ಈಶಾನಶ್ಚೇಶ್ವರೋ ಬ್ರಹ್ಮಾ ಶಿವಶ್ಚೇತಿ ಸದಾಶಿವಃ ।
ಪಂಚಮೂರ್ತ್ಯಾಕೃತಿರ್ಯದ್ಯತ್ತತ್ತದ್ವೈ ಪ್ರಣವಾಕೃತಿಃ ॥

ಟೀಕು॥ ಈಶಾನಶ್ಚ=ಈಶಾನನುಂ, ಈಶ್ವರಃ ಚ=ಈಶ್ವರನನುಂ, ಬ್ರಹ್ಮಾಚ=ಬ್ರಹ್ಮೇಶನುಂ ಶಿವಃ ಚ=ಶಿವನು, ಸದಾಶಿವಃ ಚ=ಸದಾಶಿವನೆಂಬ, ಪಂಚಮೂರ್ತ್ಯಾಕೃತಿಃ= ಪಂಚಮೂರ್ತ್ಯಾಕಾರವು, ಯತ್ತತ್=ಆವಾವ ರೂಪಮುಂಟು, ತತ್ತತ್=ಆಯಾಸ್ವರೂಪವೇ ಪ್ರಣವಾಕೃತಿಃ=ಪ್ರಣವಸ್ವರೂಪವು. ॥೪೪॥

ಶ್ಲೋಕ॥ ಸದ್ಯಾದೀನಾಂ ಚ ಪಂಚಾನಾಂ ಕ್ರಮೇಣ ಪರಿಲಕ್ಷ್ಯತೇ ।

ಟೀಕು॥ ಸದ್ಯಾದೀನಾಂ ಚ ಪಂಚನಾಂ=ಸದ್ಯೋಜಾತಾದಿ ಮೊದಲಾದ ಪಂಚಪ್ರಣವ ಮೂರ್ತಿಗಳ ಲಕ್ಷಣಂ, ಕ್ರಮೇಣ ಪರಿಲಕ್ಷ್ಯತೇ=ತಱುವಾಯಿಂ ಲಕ್ಷಿಸಲ್ಪಟ್ಟುದು.

ಶ್ಲೋಕ॥ ಕರ್ಮ ಕರ್ತೃ ಸಮೂರ್ತಿಶ್ಚ ಅಮೂರ್ತಿಶ್ಚ ಶಿವಸ್ತಥಾ ।
ಪಂಚಸಾದಾಖ್ಯ ತತ್ತ್ವಾನಾಂ ಯದ್ಭವಂ ವಿನ್ಯಸೇತ್ಕ್ರಮಾತ್ ।
ತದ್ಭಾವಮಾತ್ಮಕಾದೀನಿ ಶುದ್ಧಾನ್ತಾನಿ ಚ ಲಕ್ಷ್ಯತೇ ॥

ಟೀಕು॥ ಕರ್ಮ ಕರ್ತೃ ಸಮೂರ್ತಂಚ=ಕರ್ಮ ಸಾದಾಖ್ಯ, ಕರ್ತೃಸಾದಾಖ್ಯ, ಮೂರ್ತ ಸಾದಾಖ್ಯವೂ, ಅಮೂರ್ತಿ ಚ=ಅಮೂರ್ತಿಸಾದ್ಯಾಖ್ಯ, ಚ ಶಿವಃ ತಥಾ=ಶಿವಸಾದಾಖ್ಯ ಎಂಬ, ಪಂಚಸಾದಾಖ್ಯ ತತ್ತ್ವಾನಾಂ=ಪಂಚತತ್ತ್ವಸಾದಾಖ್ಯಂ, ಯದ್ಭಾವಂ=ಆವುದಾನೊಂದು ಭಾವವುಂಟು ಆ ಭಾವವನು, ಕ್ರಮಾತ್=ಸದ್ಯಾದಿ ಮೂರ್ತಿಗಳಲ್ಲಿ ಕ್ರಮದಿಂದ,

ವಿನ್ಯಸೇತ್=ಇರಿಸುವದು, ತದ್ಭಾವಮಾತ್ಮಕಾದೀನಿ= ಹೀಂಗೆದೊಡೆ ಆತ್ಮ ಪ್ರಾಸಾದ ಮೊದಲಾಗಿ, ಶುದ್ಧಾಂತಾನಿ ಚ ಲಕ್ಷ್ಯತೇ=ಶುದ್ಧ ಪ್ರಾಸಾದ ಕಡೆಯಾದ ಪಂಚ ಪ್ರಾಸಾದಂಗಳು ಕುಱುಹುಗೊಳಲ್ಪಟ್ಟಿಹವು. ॥೪೬॥

ಶ್ಲೋಕ॥ ಪಾರ್ಥಿವಂ ಪೀತವರ್ಣಂ ಸ್ಯಾತ್ ಶುಕ್ಲಾಭಂ ಹ್ಯಾಪ ಈರಿತಮ್ ।
ರಕ್ತಾಭಂ ತೈಜಸಂ ಪ್ರೋಕ್ತಂ ಕೃಷ್ಣಾಭಮನಿಲಂ ವಿದುಃ ॥

ವ್ಯೋಮಂ ಧೂಮ್ರನಿಭಂ ವಿಂದ್ಯಾದೇವಂ ಭೂತಾಕೃತಿರ್ಭವೇತ್ ।

ಟೀಕು॥ ಪಾರ್ಥಿವಂ=ಭೂಮಿಯ ಸ್ವರೂಪವು, ಪೀತವರ್ಣಂಸ್ಯಾತ್= ಪೀತವರ್ಣ ವಹುದು, ಶುಕ್ಲಾಭಂ ಆಪ ಈರಿತಂ=ಜಲಸ್ವರೂಪವು ಶ್ವೇತವರ್ಣವೆಂದು ಹೇಳಲ್ಪಡು ವದು, ತೈಜಸಂ=ಅಗ್ನಿಯ ಸ್ವರೂಪು ಕೆಂಪುವರ್ಣವೆಂದಱಿವುದು, ಅನಿಲಂ=ವಾಯು ಸ್ವರೂಪವು, ಕೃಷ್ಣಾಭಂ=ಕಪ್ಪುವರ್ಣವೆಂದಱಿವುದು, ವ್ಯೋಮಂ=ಆಕಾಶವರ್ಣವು ಧೂಮ್ರನಿಭಂ=ಧೂಮಸದೃಶವೆಂದಱಿವುದು, ಏವಂ=ಈ ಪ್ರಕಾರದಿಂದವು ಭೂತಾ ಕೃತಿರ್ಭವೇತ್=ಪಂಚಭೂತಾಕಾರಂಗಳಹವು. ॥೪೮॥

ಶ್ಲೋಕ॥ ಗೋಕ್ಷೀರಂ ಶಂಖವರ್ಣಾಭಂ ಜಟಾಮಕುಟಮಂಡಿತಮ್ ।
ಚತುರ್ವಕ್ತ್ರಂ ಚತುರ್ಬಾಹು ನೇತ್ರದ್ವಾದಶಭಿರ್ಯುತಮ್ ॥

ಸರ್ವಾಭರಣ ಸಂಯುಕ್ತಂ ಏವಂ ಸದ್ಯಮುದಾಹೃತಮ್ ।

ಟೀಕು॥ ಗೋಕ್ಷೀರಂ ಶಂಖವರ್ಣಾಭಂ=ಗೋಕ್ಷೀರ ಶಂಖವರ್ಣಂಗಳ ಹೋಲು ವಂಥಾದ್ದು, ಜಟಾಮಕುಟ ಮಂಡಿತಂ=ಜಟಾಮಕುಟದಿಂದ ಒಪ್ಪುವಂಥಾದ್ದು, ಚತುರ್ವಕ್ತ್ರಂ=ನಾಲ್ಕು ಮುಖಂಗಳನುಳ್ಳಂಥಾದ್ದು, ನೇತ್ರ ದ್ವಾದಶಭಿರ್ಯುತಂ=ಹನ್ನೆರಡು ಕಣ್ಣುಗಳನುಳ್ಳಂಥಾದ್ದು, ಸರ್ವಾಭರಣ ಸಂಯುಕ್ತಂ=ಸಮಸ್ತಾಲಂಕಾರಂಗಳೊಡನೆ ಕೂಡಿಹಂಥಾದ್ದು, ಏವಂ=ಈ ಪ್ರಕಾರಮಾಗಿರುವಂಥಾದ್ದು, ಸದ್ಯಂ=ಸದ್ಯೋಜಾತ ಸ್ವರೂಪವೆಂದು, ಉದಾಹೃತಂ=ಉದಾಹರಿಸಲುಪಟ್ಟುದು. ॥೫೦॥

ಶ್ಲೋಕ॥ ಜಪಾಪುಷ್ಪನಿಭಂ ವಾಮಂ ಜಟಾವಕುಟಮಂಡಿತಮ್ ।
ಚತುರ್ವಕ್ತ್ರಂ ಸಮಾಯುಕ್ತಂ ಚತುರ್ಭುಜ ಸಮನ್ವಿತಮ್ ॥

ನೇತ್ರದ್ವಾದಶಭಿರ್ಯುಕ್ತಂ ಸರ್ವಾವಯವಸಂಯುತಮ್ ।
ರಕ್ತವಸ್ತ್ರಧರಂ ದೇವಂ ರಕ್ತವಸ್ತ್ರೋತ್ತರೀಯಕಮ್ ॥

ದಕ್ಷಹಸ್ತದ್ವಯೇನೈವಾಭಯಂ ಟಂಕಂ ದಧಾನಕಮ್ ।
ದಧಾನಂ ವರದಂ ಶೂಲಂ ವಾಮಹಸ್ತದ್ವಯೇನ ಚ ॥

ರಕ್ತಗಂಧಾನುಲಿಪ್ತಾಂಗಂ ರಕ್ತಮಾಲ್ಯೈರಲಂಕೃತಮ್ ।
ಸರ್ವಲಕ್ಷಣ ಸಂಯಕ್ತಂ ಸರ್ವಾಭರಣ ಭೂಷಿತಮ್ ॥

ವಾಮದೇವಮಿದಂ ಪ್ರೋಕ್ತಂ ಸರ್ವವಶ್ಯಕರಂ ಪರಮ್ ॥

ಟೀಕು॥ ಜಪಾಪುಷ್ಪನಿಭಂ=ಮನೋಹರಮಾದ ರುದ್ರಪುಷ್ಪವ ಹೋಲುವಂಥಾ, ಜಟಾಮಕುಟ ಮಂಡಿತಂ=ಜಟಾಮಕುಟದಿಂದಲಂಕೃತವಾದ, ಚತುರ್ವಕ್ತ್ರಂ ಸಮಾಯುಕ್ತಂ=ನಾಲ್ಕು ಮುಖಂಡಗಳೊಡನೆ ಕೂಡಿದಂಥಾ, ನೇತ್ರದ್ವಾದಶಭಿರ್ಯುಕ್ತಂ=ಹನ್ನೆರಡು ಕಣ್ಣುಗಳನುಳ್ಳಂಥಾ, ಸರ್ವಾವಯವ ಸಂಯುತಂ=ಸಮಸ್ತಾವಯವಂಗಳಿಂದ ಶೋಭನವುಳ್ಳಂಥಾ, ರಕ್ತವಸ್ತ್ರಧರಂ=ಕೆಂಪುವಸ್ತ್ರವ ಧರಿಸಿಹಂಥಾ, ರಕ್ತವಸ್ತ್ರೋತ್ತರೀಯಂ=ಕೆಂಪು ಹೊದಿಕೆಯನುಳ್ಳಂಥ, ದೇವಂ=ದೇವನಾದ, ದಕ್ಷ ಹಸ್ತದ್ವಯೇನೈವಾಭಯಂ ಟಂಕಂ ದಧಾನಂ=ಬಲಗೈಗಳಲ್ಲಿ ಅಭಯಮುದ್ರೆ ಟಂಕಗಳನು ಧರಿಸಿದಂಥ, ವಾಮಹಸ್ತದ್ವಯೇನ=ಎಡದ ಬಾಹುಗಳಲ್ಲಿ, ವರದಂ ಚ ಶೂಲಂದಧಾನಂ=ವರದ ಶೂಲಂಗಳನು ಧರಿಸಿರುವಂಥ, ರಕ್ತಗಂಧಾನುಲಿಪ್ತಾಂಗಂ=ಕುಂಕುಮಗಂಧಾನು ಲೇಪಿತವಾದಂಥ ಅವಯವನುಳ್ಳಂಥಾ, ರಕ್ತಮಾಲ್ಯೈರಲಂಕೃತಂ=ಕೆಂಪು ಪುಷ್ಪಂಗಳ ಮಾಲಾದಿಗಳಿಂದಲಂಕೃತವಾದಂಥಾ, ಸರ್ವಲಕ್ಷಣ ಸಂಯುಕ್ತಂ=ಎಲ್ಲಾ ಲಕ್ಷಣಂಗಳೊಡನೆ ಕೂಡಿಹಂಥ, ಸರ್ವಾಭರಣ ಭೂಷಿತಂ=ಸಮಸ್ತಾಭರಣಂಗಳಿಂದ ಭೂಷಿಸಲ್ಪಟ್ಟಂಥ, ಏವಂ=ಈ ಸ್ವರೂಪಮನುಳ್ಳದು, ವಾಮದೇವಂ ಪ್ರೋಕ್ತಂ=ವಾಮದೇವ ಸ್ವರೂಪನೆಂದು ಹೇಳಲ್ಪಟ್ಟುದು, ಪರಮಂ=ಆ ಈ ಉತ್ಕೃಷ್ಟವಾದಂಥ ಮೂರ್ತಿಸ್ವರೂಪಂ ಧ್ಯಾತೃಗಳಿಗೆ, ಸರ್ವವಶ್ಯಕರಂ=ಸಮಸ್ತವಂ ವಶವಮಾಡಿಕೊಡುವದು, ವಾಮಂ=ವಾಮದೇವ ಮೂರ್ತಿಯೆಂದು ಪ್ರೋಕ್ತಂ=ಹೇಳಲ್ಪಟ್ಟುದು.

ಶ್ಲೋಕ॥ ಮಹೇಶ್ವರೋತ್ತರಮುಖಂ ವಾಮದೇವಮಭೀಷ್ಟದಮ್ ॥

ಟೀಕು॥ ವಾಮದೇವಂ=ವಾಮದೇವ ಮೂರ್ತಿಯಂ, ಮಹೇಶ್ವರಃ=ಮಹೇಶ್ವರನೆಂದುಂ, ಉತ್ತರ ಮುಖಂ=ಉತ್ತರ ಮುಖನೆಂದುಂ, ಅಭೀಷ್ಟದಂ=ಅಭೀಷ್ಟಪ್ರದನೆಂದುಂ, ತಿಳಿಯಪಡತಕ್ಕುದು. ॥೫೬॥

ಶ್ಲೋಕ॥ ಭಿನ್ನಾಂಜನಸಮಪ್ರಖ್ಯಮಘೋರಂ ರೌದ್ರರೂಪಕಮ್ ।
ಚತುರ್ವಕ್ತಂ ಚತುರ್ಬಾಹು ಜಟಾಮಕುಟಮಂಡಿತಮ್ ॥

ದ್ವಾದಶಾಕ್ಷಿ ಸಮಾಯುಕ್ತಂ ದಂಷ್ಟ್ರಾ ಕರಾಳಮಾಸ್ಯಕಮ್ ।
ವ್ಯಾಘ್ರಚರ್ಮಾಂಬರಧರಂ ವ್ಯಾಘ್ರಚರ್ಮೋತ್ತರೀಯಕಮ್ ॥

ಪಾದನೂಪುರ ಸಂಯುಕ್ತಂ ಸರ್ವಾಭರಣಭೂಷಿತಮ್ ।
ದಿವ್ಯಗಂಧಾನುಲಿಪ್ತಾಂಗಂ ದಿವ್ಯಪುಷ್ಪೈರಲಂಕೃತಮ್ ॥

ಟಂಕಶೂಲಸಮಾಯುಕ್ತಂ ವರದಾಭಯ ಸಂಯುತಮ್ ।
ಸರ್ವಾವಯವಸಂಯುಕ್ತಂ ಸರ್ವಲಕ್ಷಣ ಸಂಯುತಮ್ ॥

ಅಘೋರರೂಪಮೇವಂ ಹಿ ಸರ್ವಶತ್ರುಂ ಜಯಂ ಭವೇತ್ ॥

ಟೀಕು॥ ಭಿನ್ನಾಂಜನಸಮಪ್ರಖ್ಯಾ=ಚೂರ್ಣಿಸಿದ ಅಂಜನವ ಹೋಲುವ ಕಪ್ಪು ವರ್ಣವ ನುಳ್ಳ, ರೌದ್ರರೂಪಕಂ=ಭಯಂಕರಮಾದ ರೂಪವನುಳ್ಳಂಥಾದ್ದು, ಚತುರ್ವಕ್ತ್ರಂ=ನಾಲ್ಕು ಮುಖಂಗಳನುಳ್ಳಂಥ, ಚತುರ್ಬಾಹು=ನಾಲ್ಕು ಬಾಹುಗಳನುಳ್ಳಂಥಾ, ಜಟಾಮಕುಟ ಮಂಡಿತಂ=ಜಟಾಮಕುಟದಿಂದಲಂಕೃತವಾದಂಥಾದ್ದು, ದ್ವಾದಶಾಕ್ಷಿ ಸಮಾಯುತಂ= ಹೆನ್ನೆರಡು ಕಣ್ಣುಗಳನುಳ್ಳಂಥಾದ್ದು, ದಂಷ್ಟ್ರಾಕರಾಳಮಾಸ್ಯಕಂ= ಕೋರೆಹಲ್ಲುಗಳಿಂದ ಕೂಡಿ ಭಯಂಕರಮಾದಮುಖಗಳನುಳ್ಳಂಥಾದ್ದು, ವ್ಯಾಘ್ರ ಚರ್ಮಾಂಬರಧರಂ=ವ್ಯಾಘ್ರ ಚರ್ಮಾಂಬರಧಾರಿಯಾದಂಥಾದ್ದು, ವ್ಯಾಘ್ರ, ಚರ್ಮೋತ್ತರೀಯಕಂ=ವ್ಯಾಘ್ರ ಚರ್ಮ ವನ್ನೇ ಹೊದಿಕೆಯನುಳ್ಳಂಥಾ, ಪಾದನೂಪುರ ಸಂಯುಕ್ತಂ=ಪಾದಂಗಳಲ್ಲಿ ನೂಪುರಂಗಳ ನುಳ್ಳಂಥಾ, ಸರ್ವಾಭರಣಭೂಷಿತಂ= ಸಮಸ್ತಾಭರಣಂಗಳಿಂದಲಂಕೃತಮಾದಂಥಾ, ದಿವ್ಯಗಂಧಾನುಲಿಪ್ತಾಂಗಂ=ದಿವ್ಯ ಗಂಧಂಗಳಿಂದ ಲಿಪ್ತವಾದ ಅವಯವಗಳನುಳ್ಳಂಥಾದ್ದು, ದಿವ್ಯಪುಷ್ಪೈರಲಂಕೃತಂ= ದಿವ್ಯಪುಷ್ಪಂಗಳಿಂದಲಂಕೃತವಾದಂಥಾದ್ದು, ಟಂಕ ಶೂಲ ಸಮಾಯುಕ್ತಂ=ಬಾಹುಗಳಲ್ಲಿ ಟಂಕ ಶೂಲಾ ಧರಿಸಿದಂಥಾದ್ದು, ವರದಾಭಯ ಸಂಯುತಂ=ವರದಾಭಯ ಮುದ್ರೆಗಳನು ಧರಿಸಿದಂಥಾದ್ದು, ಸರ್ವಾವಯವ ಸಂಯುತಂ=ಸರ್ವಾವಯಗಳಿಂದ ಕೂಡಿದಂಥಾ, ಸರ್ವಲಕ್ಷಣ ಸಂಯುತಂ= ಸರ್ವಲಕ್ಷಣ ಸಂಪನ್ನನಾದಂಥಾದ್ದು, ಅಘೋರರೂಪಂ ಏವಂ=ಅಘೋರ ಮೂರ್ತಿ ಸ್ವರೂಪವು, ಸರ್ವಶತ್ರುಂ ಜಯಂ ಭವೇತ್ ಹಿ=ಆ ಈ ಮೂರ್ತಿಧ್ಯಾನವಂ ಮಾಡಿದ ಧ್ಯಾತೃಗಳಿಗೆ ಸಮಸ್ತ ಶತ್ರು ಜಯುವಂ ಮಾಡುವುದು.

ಶ್ಲೋಕ॥ ಪುರುಷಂ ಕುಂಕುಮಾಭಂಸ್ಯಾಚ್ಚತುರ್ವಕ್ತ್ರಂ ಚತುರ್ಭುಜಮ್ ।
ಜಟಾಮಕುಟಸಂಯುಕ್ತಂ ನೇತ್ರೈರ್ದ್ವಾದಶಭಿರ್ಯುತಮ್ ॥

ಸರ್ವಾವಯವ ಸಂಯುಕ್ತಂ ಪೀತಾಂಬರಧರಂ ಪರಮ್ ।
ಪೀತವಸ್ತ್ರೋತ್ತರೀಯಂಚ ಸರ್ವಾಭರಣ ಭೂಷಿತಮ್ ॥

ಸವ್ಯೇತು ಟಂಕಮಭಯಂ ಶೂಲಂ ವರದಮನ್ಯಕೇ ।
ದಿವ್ಯ ಗಂಧಾನುಲಿಪ್ತಾಂಗಂ ದಿವ್ಯಪುಷ್ಪೈರಲಂಕೃತಮ್ ॥

ಏವಂ ತತ್ಪುರುಷಂ ವಿಂದ್ಯಾತ್ಸರ್ವಸಿದ್ಧಿಪ್ರದಾಯಕಮ್ ।

ಟೀಕು॥ ಪುರುಷಂ=ತತ್ಪುರುಷ ಮೂರ್ತಿ ಸ್ವರೂಪವಾಯಿತ್ತಾದೊಡೆ, ಕುಂಕುಮಾಭಂ= ಕುಂಕುಮ ವರ್ಣದ ಹೋಲಿಕೆಯ ಶರೀರವನುಳ್ಳಂಥಾ ಶರೀರವನುಳ್ಳುದು, ಚತುರ್ಮುಖಂ=ನಾಲ್ಕು ಮುಖವನುಳ್ಳಂಥಾ, ಚತುರ್ಭುಜಂ=ನಾಲ್ಕು ತೋಳು ಗಳನುಳ್ಳಂಥಾ, ನೇತ್ರೈರ್ದ್ವಾದಶಭಿರ್ಯುತಂ=ಹನ್ನೆರಡು ಕಣ್ಣುಗಳನುಳ್ಳಂಥಾ, ಜಟಾಮಕುಟ ಸಂಯುಕ್ತಂ=ಜಟಾಮಕುಟ ಮೊದಲಾದವಂಗಳೊಡನೆ ಕೂಡಿದಂಥಾ, ಪೀತವಸ್ತ್ರೋತ್ತರೀಯಂ ಚ=ಹಳದಿ ವಸ್ತ್ರದ ಉಡಿಗೆ ಹೊದಿಕೆಗಳನುಳ್ಳಂಥಾ, ಸರ್ವಾಭರಣ ಭೂಷಿತಂ=ಸಮಸ್ತಾಭರಣಂಗಳಿಂದಲಂಕರಿಸಲ್ಪಟ್ಟಂಥಾ, ದಿವ್ಯಗಂಧಾನುಲಿಪ್ತಾಂಗಂ= ದಿವ್ಯವಾದ ಗಂಧಂಗಳಿಂದಲೂ, ದಿವ್ಯಪುಷ್ಪೈರಲಕೃತಂ=ದಿವ್ಯವಾದ ಪುಷ್ಪಂಗಳಿಂದಲಂಕರಿಸಲುಪಟ್ಟಂಥಾ, ಸವ್ಯೇತು=ಎಡದ ಹಸ್ತದಲ್ಲಿ ಟಂಕವನ್ನೂ ಅಭಯವನ್ನೂ ಧರಿಸಿದಂಥಾ, ಅನ್ಯಕೇ=ಬಲದ ಹಸ್ತದಲ್ಲಿ ಶೂಲಂ=ಶೂಲವನ್ನು ಧರಿಸಿದಂಥಾ, ಏವಂ=ಈ ಪ್ರಕಾರವಾದಂಥಾ, ತತ್ಪುರುಷಂ=ತತ್ಪುರುಷ ಮೂರ್ತಿಯಂ, ವಿಂದ್ಯಾತ್=ಅಜೆಯಲುಪಡುವದು, ಸರ್ವಸಿದ್ಧಿ ಪ್ರದಾಯಕಂ=ಆ ಈ ಸ್ವರೂಪು ಧ್ಯಾನವುಳ್ಳ ಧ್ಯಾತೃಗಳಿಗೆ, ಸಮಸ್ತಸಿದ್ಧಿಗಳನುಂಟುಮಾಡುವಂಥಾದ್ದು. ॥೬೫॥

ಶ್ಲೋಕ॥ **ಈಶಾನಂ ಸ್ಫಟಿಕಾಭಂ ಸ್ಯಾತ್ ಜಟಾಮಕುಟಮಂಡಿತಮ್ ।**
ಚತುರ್ವಕ್ತ್ರ ಸಮಾಯುಕ್ತಂ ದ್ವಾದಶಾಕ್ಷಿ ಸಮನ್ವಿತಮ್ ॥

ಚತುರ್ಭುಜ ಸಮಾಯುಕ್ತಂ ಸರ್ವಲಕ್ಷಣ ಸಮನ್ವಿತಮ್ ।
ಶುಕ್ಲಾಂಬರಧರಂ ಸೌಮ್ಯಂ ಶುಕ್ಲವಸ್ತ್ರೋತ್ತರೀಯಕಮ್ ॥

ಟಂಕಶೂಲ ಸಮಾಯುಕ್ತಂ ವರದಾಭಯಸಂಯುತಮ್ ।
ಸರ್ವಾವಯವಸಂಯುಕ್ತಂ ಸರ್ವಾಭರಣಭೂಷಿತಮ್ ॥

ದಿವ್ಯಗಂಧಾನುಲಿಪ್ತಾಂಗಂ ದಿವ್ಯಪುಷ್ಪೈರಲಂಕೃತಮ್ ।
ಧ್ಯಾಯೇದೀಶಾನ ರೂಪಂ ತು ಸದ್ಯೋಮೋಕ್ಷಪ್ರದಾಯಕಮ್ ॥

ಟೀಕು॥ ಈಶಾನಂ=ಈಶಾನಮೂರ್ತಿ ಸ್ವರೂಪವಾಯಿತ್ತಾದೊಡೆ ಸ್ಫಟಿಕಾಭಂ ಸ್ಯಾತ್=ಸ್ಫಟಿಕವರ್ಣವ ಹೋಲುವ ಶರೀರವನುಳ್ಳದು, ಆ ಮೂರ್ತಿ ಸ್ವರೂಪಂ ಸದ್ಯಾದಿ ಮೂರ್ತಿಗಳ ಹಾಂಗೆ, ಚತುರ್ವಕ್ತ್ರಂ ಸಮಾಯುಕ್ತಂ=ನಾಲ್ಕು ಮುಖಂಗಳುಳ್ಳದು, ದ್ವಾದಶಾಕ್ಷಿ ಸಮನ್ವಿತಂ=ದ್ವಾದಶ ನೇತ್ರಂಗಳಿಂದ ಕೂಡಿದುದೂ, ಚತುರ್ಭುಜ ಮಾಯುಕ್ತಂ= ನಾಲ್ಕು ಭುಜಗಂಳಿಂದ ಕೂಡಿದುದೂ, ಸರ್ವಲಕ್ಷಣ ಸಮನ್ವಿತಂ=ಸಮಸ್ತ ಲಕ್ಷಣಂಗಳಿಂದ ಕೂಡಿದುದೂ, ಶುಕ್ಲಾಂಬರಧರಂ=ಶುಕ್ಲವಸ್ತ್ರವನ್ನು ಧರಿಸಿದ, ಸೌಮ್ಯಂ, ಸೌಮ್ಯವಾದ, ಶುಕ್ಲವಸ್ತ್ರ ಉತ್ತರೀಯಕಂ=ಶುಕ್ಲವಸ್ತ್ರವನ್ನು ಉತ್ತರೀಯವಾಗಿ

ಧರಿಸಿದಂಥಾದ್ದು, ಟಂಕಶೂಲ ಸಮಾಯುಕ್ತಂ ವರದಾಭಯ ಸಂಯುತಂ=ಹಸ್ತಂಗಳಲ್ಲಿ ಟಂಕಶೂಲಂಗಳೆಂಬ ಆಯುಧಂಗಳನೂ ಅಭಯಮುದ್ರೆಗಳನು ಧರಿಸಿದಂಥಾದ್ದು, ಸರ್ವಾವಯವ ಸಂಯುಕ್ತಂ ಸವಾಭರಣಭೂಷಿತಂ=ಸರ್ವಾಂಗ ಸುಂದರವೂ ಸಮಸ್ತಾಭರಣಂಗಳಿಂದಲಂಕೃತವಾದಂಥಾದ್ದು, ದಿವ್ಯಗಂಧಾನುಲಿಪ್ತಾಂಗಂ= ದಿವ್ಯಗಂಧ ದಿಂದ ಲೇಪನಗೊಂಡಂಥ ಅವಯವಗಳನುಳ್ಳಂಥಾದ್ದು, ದಿವ್ಯಪುಷ್ಪೈರಲಂಕೃತಂ= ದಿವ್ಯಗಂಧಪುಷ್ಪಮಾಲೆಗಳಿಂದಲಂಕೃತವಾದಂಥಾದ್ದು, ಏವಂ ಈಶಾನ ರೂಪಂ ತು=ಆ ಈ ಪ್ರಕಾರದಿಂದ ಈಶಾನಮೂರ್ತಿಯ ಸ್ವರೂಪವೆಂದು ಹೇಳಲುಪಟ್ಟುದು, ಸದ್ಯೋಮೋಕ್ಷಪ್ರದಾಯಕಂ=ಕೂಡಲೇ ಮೋಕ್ಷ ಪ್ರದಾಯಕವಾದ, ಈಶಾನಂ=ಈಶಾನ ಮೂರ್ತಿಯಂ, ಧ್ಯಾಯೇತ್=ಧ್ಯಾನಿಸಲ್ಪಡತಕ್ಕುದು. ॥೯೯॥

ಶ್ಲೋಕ॥ ಅಘೋರ ರೌದ್ರಮಿತ್ಯುಕ್ತಂ ಚೇಶಂ ಸೌಮ್ಯಮುದಾಹೃತಮ್ ।

ಟೀಕು॥ ಅಘೋರ ರೌದ್ರಮಿತ್ಯುಕ್ತಂ=ಅಘೋರಮೂರ್ತಿ ರೌದ್ರಮೂರ್ತಿಯಾದ ಕಾರಣ, ಈಶಂ ಚ ಸೌಮ್ಯಮುದಾಹೃತಂ=ಮಹೇಶ ಸಂಬಂಧವಾದುದೆಂದು ನುಡಿಯಲು ಪಟ್ಟುದು, ಈಶಾನ ಮೂರ್ತಿ ಸ್ವರೂಪವಾಯಿತ್ತಾದೊಡೆ ಸದಾಶಿವನ ಸಂಬಂಧವಾದು ದೆಂದುದಾಹರಿಸಲ್ಪಟ್ಟಿತು. ಆ ಈ ಅಂತರದಲ್ಲಿ ಪಿಂಡಸಾದಾಖ್ಯಭೇದ ಮಂತ್ರವಿಟ್ಟು ನಿರೂಪಿಸಿಹನು. ॥೭೦॥

ಶ್ಲೋಕ॥ ಸದ್ಯಂ ಮೂರ್ತಂ ವಿಜಾನೀಯಾತ್ ಅಮೂರ್ತಂ ವಾಮದೇವಕಮ್ ।
ಅಘೋರಂ ಕರ್ತೃರೂಪಂ ಸ್ಯಾತ್ ಕರ್ಮಂ ತತ್ಪುರುಷಂ ಭವೇತ್ ॥

ಶಿವಸಾದಾಖ್ಯಮೀಶಾನಂ ಪಂಚತತ್ತ್ವಾತ್ಮಕಂ ವಿದುಃ ॥

ಟೀಕು॥ ಸದ್ಯಂ=ಸದ್ಯೋಜಾತವೆಂಬ ಪಿಂಡವಾಯಿತ್ತಾದೊಡೆ, ಮೂರ್ತಂ ವಿಜಾನೀಯತ್=ಮೂರ್ತಸಾದಾಖ್ಯ ತತ್ತ್ವವೆಂದಱಿವುದು, ಕರ್ತೃರೂಪಂ= ಕರ್ತೃಸಾದಾಖ್ಯತತ್ತ್ವವೇ, ಅಘೋರಂ ಸ್ಯಾತ್=ಅಘೋರವೆಂಬ ಪಿಂಡವಾಯಿತ್ತಾದೊಡೆ, ಕರ್ಮಂ ಭವೇತ್=ಕರ್ಮಸಾದಾಖ್ಯತತ್ತ್ವವೆಂದಱಿವುದು, ಈಶಾನಂ=ಈಶಾನಮೂರ್ತಿ ಯೆಂಬ ಪಿಂಡವೆಂದಱಿವುದು, ಶಿವಸಾದಾಖ್ಯಂ= ಶಿವಸಾದಾಖ್ಯತತ್ತ್ವವೆಂದಱಿವುದು, ಏವಂ=ಈ ಪ್ರಕಾರದಿಂದ ಪಂಚತತ್ತ್ವಾತ್ಮಕಂ ಭವೇತ್=ಅನ್ಯೋನ್ಯ ಭೇದದಿಂ ಪಿಂಡಬ್ರಹ್ಮ ಪಂಚಕಂ ಸಾದಾಖ್ಯತತ್ತ್ವಪಂಚಕವೆಂದಱಿವುದು. ॥೭೧॥

ಶ್ಲೋಕ॥ ಪಂಚಮೂರ್ತ್ಯಾತ್ಮಕಂ ಯುಕ್ತಂ ಪಿಂಡಬ್ರಹ್ಮಾಕೃತಿರ್ಭವೇತ್ ।

ಟೀಕು॥ ಪಂಚಮೂರ್ತ್ಯಾತ್ಮಕಂಯುಕ್ತಂ=ಪಂಚಮೂರ್ತಿಸ್ವರೂಪವಾದುದಾವುದಾ

ನೊಂದು ಶಿವತತ್ತ್ವಸ್ವರೂಪವುಂಟು, ತತ್ ಪಿಂಡಬ್ರಹ್ಮಾಕೃತಿಃ ಭವೇತ್=ಆ ತತ್ತ್ವವೇ ಪಿಂಡಬ್ರಹ್ಮಾಕಾರವಹುದು. ॥೭೩॥

ಶ್ಲೋಕ॥ ಏವಂ ಪಿಂಡಾಕೃತಿಃ ಪ್ರೋಕ್ತಂ ಕಲಾರೂಪಮಿಹೋಚ್ಯತೇ ॥

ಟೀಕು॥ ಏವಂ=ಈ ಪ್ರಕಾರದಿಂದ, ಪಿಂಡಾಕೃತಿಃ ಪ್ರೋಕ್ತಂ=ಪಿಂಡಬ್ರಹ್ಮಾಕಾರಂ ನುಡಿಯಲುಪಟ್ಟುದು. ಆ ಈ ಪಿಂಡಬ್ರಹ್ಮಂಗಳ, ಕಲಾರೂಪಂ=ಕಲಾಸ್ವರೂಪವು, ಇಹ ಉಚ್ಯತೇ=ಈ ಪಟಲದಲ್ಲಿ ಹೇಳಲ್ಪಟ್ಟುದು. ॥೭೪॥

ಶ್ಲೋಕ॥ ಶಂಖಂ ಕುಂದೇಂದು ವರ್ಣಂ ಚ ಸ್ಫಟಿಕ ಕ್ಷೀರ ಸನ್ನಿಭಮ್ ।
ಈಶಾನಸ್ಯ ಕಲಾನಾಂತು ಪಂಚವರ್ಣಾಃ ಪ್ರಕೀರ್ತಿತಾಃ ॥

ಟೀಕು॥ ಶಂಖಂ=ಶಂಖವರ್ಣಮುಂ, ಕುಂದೇಂದು=ಮೊಲ್ಲೆಯ ಪೂವಿನ ವರ್ಣಮುಂ ಚಂದ್ರವರ್ಣಮುಂ, ಚ=ಹಾಗೂ, ಸ್ಫಟಿಕ=ಸ್ಫಟಿಕ ವರ್ಣಮುಂ, ಕ್ಷೀರಸನ್ನಿಭಂ=ಕ್ಷೀರ ಸಮಾನವರ್ಣಮುಂ, ಪಂಚವರ್ಣಾಃ=ಇಂತು ಅಯಿದು ವರ್ಣಂಗಳು, ಈಶಾನಸ್ಯ ಕಲಾನಾಂ ತು=ಈಶಾನ ಮೂರ್ತಿಯೈದರ ವರ್ಣಂಗಳೆಂದು ಪ್ರಕೀರ್ತಿತಾಃ= ಹೇಳಲುಪಟ್ಟವು. ॥೭೫॥

ಶ್ಲೋಕ॥ ರಕ್ತಾಸಿತಶ್ವೇತಪೀತಾಃ ತತ್ಪುರುಷಕಲಾಃ ಸ್ಮೃತಾಃ ।
ಅಘೋರಸ್ಯಕಲಾಶ್ಚಾಷ್ಟೌ ಅಂಜನಾರುಣ ಪೀತಕಾಃ ॥

ಶ್ಯಾಮನೀಲ ಶ್ವೇತರಕ್ತ ಕಾಂಚನಾಭಾಃ ಪ್ರಕೀರ್ತಿತಾಃ ।
ಜಪಾಪೀತಾಂಜನಶ್ಯಾಮಶುಕ್ಲಶ್ಯಾಮಾಂಜನಾರುಣಾಃ ॥

ಅಂಜನಂ ಸ್ಫಟಿಕಂ ರಕ್ತಂ ನೀಲಂ ಮರಕತಂ ತಥಾ ।
ಏತೇ ವಾಮಕಲಾನಾಂ ತು ತ್ರಯೋದಶ ಸಮೀರಿತಾಃ ॥

ಟೀಕು॥ ತತ್ಪುರುಷಕಲಾಃ=ತತ್ಪುರುಷಮೂರ್ತಿಯ ನಾಲ್ಕು ಕಲೆಗಳು, ರಕ್ತಾ=ಕೆಂಪು ವರ್ಣಮುಂ, ಸಿತ=ಕೃಷ್ಣವರ್ಣಮುಂ, ಶ್ವೇತ=ಶುಕ್ಲ ವರ್ಣಮುಂ ಪೀತಾಃ=ಪೀತವರ್ಣಃ ಗಳುಮೆಂದುಂ, ಸ್ಮೃತಾಃ=ನೆನೆಯಲುಪಟ್ಟದು, ಅಂಜನಂ=ಆಂಜನಸ್ವರೂಪಮುಂ, ಅರುಣ=ಕೆಂಪುವರ್ಣಮುಂ, ಪೀತಕಾಃ=ಪೀತವರ್ಣಮುಂ, ಶ್ಯಾಮ=ಶ್ಯಾಮ ವರ್ಣಮುಂ, ನೀಲ=ನೀಲ ವರ್ಣಮುಂ, ಶುಕ್ಲ=ಬಿಳಿಯ ವರ್ಣಮುಂ, ರಕ್ತ=ರಕ್ತವರ್ಣ ಮುಂ, ಕಾಂಚನಾಭಾಃ= ಕಾಂಚನವರ್ಣಂಗಳುಮೆಂದು, ಅಷ್ಟೌ=ಈ ಎಂಟು ವರ್ಣಂಗಳು ಅಘೋರಮೂರ್ತಿಕಲೆಯ ಎಂಟು ವರ್ಣಂಗಳೆಂದು, ಕೀರ್ತಿತಾಃ= ಹೇಳಲುಪಟ್ಟವು. ಜಪಾ=ಕೆಂಪಿನ ದಾಸಣದ ವರ್ಣಮುಂ, ಪೀತಾ=ಹಳದಿ ವರ್ಣಮುಂ,

ಅಂಜನಂ=ಅಂಜನವರ್ಣಮುಂ, ಶ್ಯಾಮ=ಶ್ಯಾಮ ವರ್ಣಮುಂ, ಶುಕ್ಲ=ಬಿಳಿಯ ವರ್ಣಮುಂ, ಮತ್ತೆಯುಂ ಶ್ಯಾಮ=ಶ್ಯಾಮವರ್ಣಮುಂ ಅಂಜನಂ=ಅಂಜನ ವರ್ಣಮುಂ, ಅರುಣಾಃ=ಅರುಣಾವರ್ಣಂಗಳುಮುಂ, ಸ್ಫಟಿಕಂ=ಸ್ಫಟಿಕ ವರ್ಣಮುಂ, ರಕ್ತಂ=ರಕ್ತ ವರ್ಣಮುಂ, ನೀಲಂ=ನೀಲವರ್ಣಮುಂ, ಮರಕತಂ=ಪಚ್ಚೆಯ ವರ್ಣಮುಂ, ಏತೇ ತ್ರಯೋದಶ=ಈ ಹದಿಮೂರು ವರ್ಣಂಗಳು, ವಾಮಕಲಾನಾಂ ತು=ತ್ರಯೋದಶ ವಾಮದೇವ ಮೂರ್ತಿ ಕಲೆಯ ತ್ರಯೋದಶವರ್ಣಂಗಳೆಂದು ಸಮೀರಿತಾಃ= ನೆನೆಯಲುಪಟ್ಟವು. ॥೭೮॥

ಶ್ಲೋಕ॥ **ರಕ್ತಂ ಸಿತಂ ನೀಲಂ ಕೃಷ್ಣಂ ಪೀತಂ ಸಕುಂಕುಮಕಮ್ ।**
ಭಿನ್ನಾಂಜನಂ ಚಾರುಣಂ ಚ ತ್ವಷ್ಟೌ ಸದ್ಯ ಕಲಾಃ ಸ್ಮೃತಾಃ ॥

ಟೀಕು॥ ರಕ್ತಂ=ಕೆಂಪು, ಸಿತಂ=ಬಳಿದು, ತಥಾ=ಹಾಂಗೆ, ನೀಲಂ=ನೀಲವು, ಪೀತಂ= ಪೀತ ವರ್ಣವು, ಸಕುಂಕುಮಕಂ=ಕುಂಕುಮವರ್ಣವು, ಭಿನ್ನಾಂಜನಂ= ಚೂರ್ಣಾಂಜನವು, ಅರುಣಂ=ನಸುಗೆಂಪು ವರ್ಣವು, ಅಷ್ಟೌ ಚ=ಈ ಎಂಟು ವರ್ಣಂಗಳು, ಸದ್ಯಃ ಕಲಾಃ=ಅಷ್ಟ ಸದ್ಯೋಜಾತಮೂರ್ತಿಯ ಕಲಾವರ್ಣಂಗಳೆಂದು ನೆನೆಯಲ್ಪಟ್ಟವು. ॥೭೯॥

ಶ್ಲೋಕ॥ **ಕಲಾರೂಪಾಣಿ ಸರ್ವಾಣಿ ತ್ರಿಣೇತ್ರಾಶ್ಚ ಚತುರ್ಭುಜಾಃ ।**
ಅಭಯಂ ವರದಂ ಚೈವ ಶೂಲಂ ಪರಶುಧಾರಿಣಃ ॥

ಸರ್ವಲಕ್ಷಣ ಸಂಯುಕ್ತಂ ಸರ್ವಾಭರಣಭೂಷಿತಾಃ ।

ಟೀಕು॥ ಕಲಾರೂಪಾಣಿ ಸರ್ವಾಣಿ=ಮೂವತ್ತೆಂಟು ಕಲಾರೂಪಂಗಳು, ತ್ರಿಣೇತ್ರಾಶ್ಚ ಚತುರ್ಭುಜಾಃ=ತ್ರಿಣೇತ್ರ ಚತುರ್ಭುಜಂಗಳುಳ್ಳವಾಗಿ, ಅಭಯ ವರದಂ ಚೈವ=ಅಭಯ ವರದ ಮುದ್ರೆಗಳನುಳ್ಳ, ಶೂಲಂ ಪರಶುಧಾರಿಣಃ=ಶೂಲ ಪರಶುಗಳನ್ನು ಧರಿಸಿದ ಹಸ್ತಗಳನುಳ್ಳ, ಸರ್ವಾಭರಣ ಭೂಷಿತಾಃ=ಸರ್ವಾಭರಣಂಗಳಿಂದಕರಿಸಲ್ಪಟ್ಟವಾಗಿ, ಸರ್ವಲಕ್ಷಣ ಸಂಯುಕ್ತಂ=ಎಲ್ಲಾ ಲಕ್ಷಣಂಗಳಿಂದ ಕೂಡಿಹಂಥ ಮೂರ್ತಿಗಳಪ್ಪವು.

ಶ್ಲೋಕ॥ **ಕಲಾರೂಪೇಷು ಸರ್ವೇಷು ವಾಮಾದ್ಯಾಃ ಶಕ್ತಯಃ ಸ್ಥಿತಾಃ ।**
ಅಷ್ಟತ್ರಿಂಪತ್ಕಲಾನಾಂತು ಅಷ್ಟತ್ರಿಂಶಚ್ಚ ಶಕ್ತಯಃ ॥

ಟೀಕು॥ ಕಲಾರೂಪೇಷು ಸರ್ವೇಷು=ಸಮಸ್ತ ಕಲಾಸ್ವರೂಪಂಗಳಲ್ಲಿ, ವಾಮದ್ಯಾಃ ಶಕ್ತಯಃ ಸ್ಥಿತಾಃ=ವಾಮಾದಿ ಶಕ್ತಿಗಳಿರುತ್ತಿಹವು, ಅಷ್ಟತ್ರಿಂಶತ್‌ಕಲಾನಾಂ ತು=ಮುವತ್ತೆಂಟು ಕಲೆಗಳಿಗೆಯು, ಅಷ್ಟತ್ರಿಂಶತಿ ಶಕ್ತಯಃ=ಮೂವತ್ತೆಂಟು ಶಕ್ತಿಗಳುಂಟಾಗಿಹವು. ॥೮೨॥

ಶ್ಲೋಕ॥ ಏವಂ ಶಕ್ತಿ ಕಲೋಪೇತಂ ನ್ಯಾಸಕಾಲೇ ತು ವಿನ್ಯಸೇತ್ ।

ಟೀಕು॥ ನ್ಯಾಸಕಾಲೇ ತು=ಸಕಲೀಕರಣ ಸಮಯದಲ್ಲಿ, ಏವಂ=ಈ ಪ್ರಕಾರದಿಂದ, ಶಕ್ತಿ ಕಲೋಪೇತಂ=ವಾಮಾದಿಶಕ್ತಿಗಳೊಡನೆಯುಂ, ಅಕಾರಾದಿ ವರ್ಣಂಗಳೊಡನೆಯುಂ, ಷೋಡಶ ಚಂದ್ರಕಲೆ, ದ್ವಾದಶ ಸೌರಕಲೆ, ದಶವಹ್ನಿ ಕಲೆಗಳೊಡನೆ ಕೂಡಿಹ ಕಲಾಬ್ರಹ್ಮ ಪಂಚಕಮಂ ಸಕಲೀಕರಣವ ಮಾಡುವ ವೇಳೆಯಲ್ಲಿ ತತ್ತ್ವದಂಗಗಳಲ್ಲಿ ಅಂಗುಷ್ಠಾದಿ ಕನಿಷ್ಠಾಂತಮಾದ ಅಂಗುಲಿ ಭೇದಂಗಳನರಿದು, ವಿನ್ಯಸೇತ್=ವಿನ್ಯಾಸವ ಮಾಡುವುದು. ॥೮೩॥

ಶ್ಲೋಕ॥ ಮೂರ್ತಿತತ್ತ್ವಂ ತಥಾಭೂತಂ ಪಿಂಡಂ ಚೈವ ಕಲಾ ತಥಾ ।
ಪಂಚಬ್ರಹ್ಮಾಣಿ ಚೈತಾನಿ ಸರ್ವಕಾರ್ಯೇಷು ಯೋಜಯೇತ್ ॥

ಟೀಕು॥ ಮೂರ್ತಿತತ್ತ್ವಂ=ಮೂರ್ತಿ ಬ್ರಹ್ಮ, ತತ್ತ್ವಂ=ತತ್ತ್ವ ಬ್ರಹ್ಮ, ತಥಾ=ಹಾಂಗೆ, ಭೂತಂ=ಭೂತಬ್ರಹ್ಮ ಚ=ಮತ್ತು ಪಿಂಡಂ=ಪಿಂಡಬ್ರಹ್ಮ, ತಥಾ=ಹಾಂಗೆ, ಕಲಾ=ಕಲಾಬ್ರಹ್ಮ ಮೆಂಬ, ಪಚಬ್ರಹ್ಮಾಣಿ=ಈ ಪಂಚಬ್ರಹ್ಮಂಗಳಂ ಸರ್ವಕಾರ್ಯೇಷು=ಸಮಸ್ತ ಕಾರ್ಯಂಗಳಲ್ಲಿ, ಯೋಜಯೇತ್=ಪ್ರಯೋಗಿಸುವದು. ॥೮೪॥

ಶ್ಲೋಕ॥ ಬ್ರಹ್ಮಭೇದಮಿದಂ ಪ್ರೋಕ್ತಂ ಅಂಗಭೇದಮಥಶೃಣು ।

ಟೀಕು॥ ಎಲೆ ಷಣ್ಮುಖನೆ! ಬ್ರಹ್ಮಭೇದಂ ಇದಂ=ಈ ಬ್ರಹ್ಮಭೇದವಂ, ಪ್ರೋಕ್ತಂ=ನಿರೂಪಿಸಲ್ಪಟ್ಟಿತು, ಅಥ=ಅನಂತರದಲ್ಲಿ ಅಂಗಭೇದಂ=ಅಂಗಭೇದಮಂ ನಿರೂಪಿಸಿಹೆನು, ಶೃಣು=ಕೇಳು. ॥೮೫॥

ಇತಿ ವಾತುಲತಂತ್ರೇ ಶುದ್ಧಾಖ್ಯೇ ಸಹಸ್ರಗ್ರಂಥಸಂಹಿತಾಯಾಂ
ಶ್ರೀಮಲ್ಲಿಕಾರ್ಜುನೇನ ಕರ್ಣಾಟಭಾಷಾ ವಿವೃತೋ
ಬ್ರಹ್ಮಭೇದೋ ನಾಮ ಸಪ್ತಮಃ ಪಟಲಃ

❖ ❖ ❖

ಅಷ್ಟಮಃ ಅಂಗಭೇದಪಟಲಃ

ಇಂ॥ವ॥ವೃ॥ ಬ್ರಹ್ಮಾಧಿಕಂ ವಿಶ್ವಜಗತ್ಸಮೂಹಂ
ವಹ್ನಿಕೃತತ್ವಾತ್ ಪರಮೇಶ್ವರಸ್ಯ ।
ಸರ್ವಾಣಿ ಚಾಂಗಾನಿ ಭವಂತಿ ತಸ್ಮಾ
ದಂಗೇಶ್ವರಂ ತಂ ಸತತಂ ಭಜಾಮಿ ॥ ॥೧॥

ಪರಮೇಶ್ವರಂ ಕುಮಾರಂಗೆ ಬ್ರಹ್ಮಭೇದವಂ ನಿರೂಪಿಸಿ ಆ ಬ್ರಹ್ಮಾವಯಂಗಳಪ್ಪ ಷಡಂಗಭೇದಮಂ ನಿರೂಪಿಹನು.

ಶ್ಲೋಕ॥ ಅತಃ ಪರಂ ಪ್ರವಕ್ಷ್ಯಾಮಿ ಲಿಂಗಭೇದವಿಧಿಂ ಪರಮ್ ।
ಅಂಗಂ ಷಡ್ಭೇದಮಿತ್ಯುಕ್ತಂ ತಸ್ಮಾತ್ ಷಡಂಗಮುಚ್ಯತೇ ॥

ಟೀಕು॥ ಅತಃ ಪರಂ=ಆ ಈ ಪರಬ್ರಹ್ಮಪಟಲಕ್ಕಿಂದ ಮೇಲೆ, ಪರಂ=ಆಧಿಕಮಪ್ಪ, ಅಂಗಭೇದವಿಧಿಂ=ಅಂಗಭೇದ ವಿಧಿಯಂ, ಪ್ರವಕ್ಷ್ಯಾಮಿ=ಲೇಸಾಗಿ ನಿರೂಪಿಸಿಹೆನು, ಅಂಗ ಷಡ್ಭೇದಂ ಇತ್ಯುಕ್ತಂ=ಅಂಗ ತಾನಾಱು ಭೇದವೆಂದು ನುಡಿಯಲ್ಪಟ್ಟುದು, ತಸ್ಮಾತ್=ಅದು ಕಾರಣ, ಷಡಂಗಮುಚ್ಯತೇ=ಆಱಂಗಗಳು ಬೇರೆ ಬೇರೆ ಹೇಳಲ್ಪಟ್ಟುವು.

ಶ್ಲೋಕ॥ ಷಡಂಗಮಂಗ ಭೇದಾನಿ ಷಟ್ತ್ರಿಂಶತಿದಿತಿ ತಾನಿ ತು ।
ಏಭಿರ್ಭೇದೈಃ ಸಮಾಯುಕ್ತಂ ಅಂಗಂ ಷಟ್ತ್ರಿಂಶತಿ ಕ್ರಮಾತ್ ॥

ಟೀಕು॥ ಅಂಗಂ ಷಟ್‌ಭೇದಂ=ಅಂಗಂಗಳು ಆಱುವಿಧಮಪ್ಪವು, ಅಂಗಭೇದಾನಿ= ಅಂಗವೊಂದೊಂದಕ್ಕೆ ಪ್ರತಿಭೇದಂಗಳಪ್ಪವು. ತಾನಿ ತು=ಆ ಪ್ರತಿ ಭೇದಂಗಳು ಷಟ್ತ್ರಿಂಶತ್ ಇತಿ=ಮೂವತ್ತಾಱು ಎಂದು ಹೇಳಲುಪಟ್ಟವು, ಏಭಿರ್ಭೇದೈಃ ಸಮಾಯುಕ್ತಂ=ಅಂಗಂ ಆ ಈ ಮೂವತ್ತಾಱು ಭೇದಂಗಳೊಡನೆ ಕೂಡಲ್ಪಟ್ಟ ತಱುವಾಯಿಂದೆ ಒಂದೊಂದಂಗಂ, ಷಟ್‌ತ್ರಿಂಶತ್ ಇತಿ ಉಚ್ಯತೇ=ಮೂವತ್ತಾಱು ಅಂಗಂಗಳಾಗುತ್ತಿಹವು ಎಂದು ಹೇಳಲುಪಟ್ಟವು.

ಶ್ಲೋಕ॥ ತೇಷಾಂ ತು ಲಕ್ಷಣಂ ವಕ್ಷ್ಯೇ ಸಮಾಸಾತ್ ಶೃಣು ಷಣ್ಮುಖ ।

ಟೀಕು॥ ಭೋ ಷಣ್ಮುಖ!=ಎಲೆ ಷಣ್ಮುಖನೆ! ತೇಷಾಂ ತು ಲಕ್ಷಣಂ ತು=ಆಱು ಅಂಗಂಗಳ ಲಕ್ಷಣಮಂ, ಸಮಾಸಾತ್=ಸಮಾಸದಿಂದ, ವಕ್ಷ್ಯೇ=ಹೇಳಿಹೆನು, ಶೃಣು=ಕೇಳು. ॥೪॥

ಶ್ಲೋಕ॥ ಶಿವಾಂಗಂ ಚೈವ ಭೂತಾಂಗಂ ಕೂಟಾಂಗಂ ಚ ತಥೈವ ಚ ।
ವಿದ್ಯಾಂಗಂಚೈವ ಶಕ್ತ್ಯಂಗಂ ಸಾಮಾನ್ಯಾಂಗಂ ತಥೈವ ಚ ॥

ಏತಾನಿ ಚಾಂಗನಾಮಾನಿ ಶಿವಾಂಗಾನಿ ಷಡಾ ಸಹ ॥

ಟೀಕು॥ ಶಿವಾಂಗಂ=ಶಿವಾಂಗಮೆಂದುಂ, ಚಏವ=ಹಾಂಗೆಯೆ ಭೂತಾಂಗಂ= ಭೂತಾಂಗಮೆಂದುಂ, ಕೂಟಾಂಗಂ=ಕೂಟಾಂಗಮೆಂದುಂ, ತಥೈವ ಚ=ಹಾಂಗೆಯೆ, ವಿದ್ಯಾಂಗಂ=ವಿದ್ಯಾಂಗಮೆಂದುಂ, ತಥೈವ ಚ=ಹಾಂಗೆ, ಶಕ್ತ್ಯಂಗಂಚೈವ= ಶಕ್ತ್ಯಂಗವೆಂದು, ಸಾಮಾನ್ಯಂಗಂ ತಥೈವ ಚ=ಹಾಂಗೆ ಸಾಮಾನ್ಯಾಂಗಮೆಂದು, ಏತಾನಿ ಚಾಂಗಾನಿ=ಹೀಂಗೆ ಷಡಂಗಂಗಳ ಹೆಸರು; ಶಿವಾಂಗಾನಿ=ಆ ಈ ಷಡಂಗಗಳೊಡನೆಯುಂ ಶಿವಾಕ್ಷರಕ್ಕವಯವಂಗಳಾದ ವಿಕೃತಿ ಷಡಕ್ಷರಂಗಳಿರುತ್ತಿಹವು, ನಾದಬ್ರಹ್ಮವೆಲ್ಲಾಸ್ಥಾನಂಗಳಲ್ಲಿಯುಂ ಪರಿಪೂರ್ಣಮಾಗಿಪ್ಪುದಾಗಿ ಆ ಈ ಸಮಸ್ತಾಂಗಂಗಳು ಶಿವಾಂಗಂಗಳೆಂದೆನಿಸಿಕೊಂಬವು. ॥೬॥

ಶ್ಲೋಕ॥ ಶಿವಾಂಗಂ ಪ್ರಥಮಂ ವಿದ್ಯಾತ್ ಭೂತಾಂಗಂ ಚ ದ್ವಿತೀಯಕಮ್ ।
ಕೂಟಾಂಗಂ ಚ ತೃತೀಯಂ ಸ್ಯಾದ್ವಿದ್ಯಾಂಗಂ ಚ ಚತುರ್ಥಕಮ್ ॥

ಶಕ್ತ್ಯಂಗಂ ಪಂಚಮಂ ವಿದ್ಯಾತ್ಸಾಮಾನ್ಯಾಂಗಂ ಚ ಷಷ್ಠಕಮ್ ॥

ಟೀಕು॥ ಶಿವಾಂಗಂ=ಶಿವಾಗಮಂ,ಪ್ರಥಮಂ=ಮೊದಲನೆಯದೆಂದು, ವಿದ್ಯಾತ್ ತಿಳಿಯತಕ್ಕುದು. ಕೂಟಾಂಗಂ=ಕೂಟಾಂಗವುಂ, ತೃತೀಯಂಸ್ಯಾತ್= ಮೂಱನೆಯದಹುದು, ವಿದ್ಯಾಂಗಂ ಚ=ವಿದ್ಯಾಂಗಮಂ, ಚತುರ್ಥಕಂ= ನಾಲ್ಕನೆಯದೆಂದಱಿವುದು, ಶಕ್ತ್ಯಂಗಂ=ಶಕ್ತ್ಯಂಗಮಂ, ಪಂಚಮಂ ವಿದ್ಯಾತ್= ಅಯಿದನೆಯದೆಂದಱಿವುದು, ಷಷ್ಠಕಂ ಚ=ಆಱನೆಯದು ಸಾಮಾನ್ಯಾಂಗಮೆಂದಱಿವುದು.

ಶ್ಲೋಕ॥ ಏತೇಷಾಂ ಚೈವಮಂಗಾನಾಂ ಶಿವಾಂಗಂ ಪೂರ್ವಮುಚ್ಯತೇ ॥

ಟೀಕು॥ ಏತೇಷಾಂ ಚೈವಮಂಗಾನಾಂ=ಈ ಪ್ರಕಾರವಾಗಿಪ್ಪೀ ಷಡಂಗಂಗಳೊಳಗೆ, ಶಿವಾಂಗಂ=ಶಿವಾಂಗವುಂ, ಪೂರ್ವಮುಚ್ಯತೇ=ಪ್ರಥಮಾಂಗವಾಗಿ ನಿರೂಪಿಸಲುಪಟ್ಟುದು. ॥೮॥

ಶ್ಲೋಕ॥ ನವಾರ್ಣವಿಕೃಷ್ವಾಸು ತುರ್ಯಂ ಪಂಚಮಮಷ್ಟಮಮ್ ।
ತ್ರೀಣಿವರ್ಣಾನಿ ಸಂತ್ಯಜ್ಯ ತೇಷಾಂ ಷಟ್ ಪರಸಂಯುತಾಃ ॥

ಕಾರ್ಯಕಾರಣ ಸಂಯುಕ್ತಾಃ ಸರ್ವೇಷಾಂ ಚ ಷಡಾನನ ॥

ಟೀಕು॥ ನವಾರ್ಣವಿಕೃತಿಷ್ವಾಸು=ಆ ಈ ಊ ಋೂ ೯ ಐ ಔ ಅಂ ಅಃ ಎಂಬೀ

ವಿಕೃತಿ ವರ್ಣಂಗಳಲ್ಲಿ, ತುರ್ಯಂ=ನಾಲ್ಕನೆಯ, ಪಂಚಮಂ=ಅಯಿದನೆಯ, ಅಷ್ಟಮಂ= ಎಂಟನೆಯ ಸ್ಥಾನಂಗಳಲ್ಲಿಯ, ತ್ರೀಣಿವರ್ಣಾನಿ= ಋೂ ಇ ಅಂ ಎಂಬೀ ಮೂಱು ವರ್ಣಂಗಳಂ ಸಂತ್ಯಜ್ಯ=ಬಿಟ್ಟು ಉಳಿದ ಆಱುವರ್ಣಂಗಳು ಪರಸಂಯುತಾಃ= ಪರಬೀಜವಾದ ಹ ಕಾರದೊಡನೆ, ಸಂಯುತಾಃ=ಕೂಡಿಹುದು, ಭೋ ಷಡಾನನ!=ಎಲೆ ಷಣ್ಮುಖನೆ!, ಈ ಷಡಂಗಬೀಜಂಗಳಪ್ಪ ವಿಕೃತಿ ಷಡಕ್ಷರಂಗಳೊಡನೆ ಕೂಡಿಹ ಬೀಜವಾಱರೊಳಗೆ ವಿಸರ್ಗಯುಕ್ತವಾದುದೊಂದು ಬೀಜಂ ಹೊರಗಾಗಿ ಉಳಿದ ಪಂಚಾಕ್ಷರಂಗಳಿಗೆಯುಂ ಬಿಂದುವ ಕೂಡುವದು. ಹೀಂಗೆ ಕೂಡಿದೊಡೆ ಹಾಂ ಹೀಂ ಹೂಂ ಹೈಂ ಹೌಂ ಹಃ ಎಂಬ ಈ ಶಿವಾಂಗಾಕ್ಷರವಾಱು ಉದ್ಧರಣವಾವಹವು, ಆ ಈ ಶಿವಾಂಗಂ ರಕಾರ ಹೊಱಗಪ್ಪುದಱಿಂ ತಾಂ ತ್ರಿಕಾಂಗವೆನಿಸಿಕೊಂಬುದು, ಹ್ರಾಂ ಹ್ರೀಂ ಹ್ರೂಂ ಹ್ರೈಂ ಹ್ರೌಂ ಹ್ರಃ ಎಂಬ ಈ ಶಿವಾಂಗ ಬೀಜಂಗಳು ವಹ್ನಿಯುಕ್ತ ಮಾಗಿಪ್ಪುದಱಿಂ ವೈದಿಕ ಶಿವಾಂಗಮೆನಿಸಿಕೊಂಬುದು. ನ್ಯಾಸತ್ರಯಮಂ ಮಾಳ್ಪೊಡೆ ಆ ಈ ಉಭಯಾಂಗಬೀಜಮಂ ಬೇಱೆ ಎಂದು ಕಾಣಲಾಗದು. ಷಡಂಗ ಮಂತ್ರಂಗಳಿಗೆ ಆ ಈ ಬೀಜಕ್ರಮಮಂ ನಿರೂಪಿಸಿಹನು.

ಶ್ಲೋಕ॥ ಪ್ರಥಮಂ ಹೃದಯಂ ವಿಂದ್ಯಾತ್ ದ್ವಿತೀಯಂ ತು ಶಿರೋ ಭವೇತ್ ।
ತೃತೀಯಂ ತು ಶಿಖಾಂ ವಿಂದ್ಯಾತ್ ಚತುರ್ಥಂ ಕವಚಂ ಭವೇತ್ ॥

ಪಂಚಮಂ ನೇತ್ರತ್ರಯಂ ಸ್ಯಾತ್ ಷಷ್ಠಮಸ್ತ್ರಮುದಾಹೃತಮ್ ।

ಟೀಕು॥ ಪ್ರಥಮಂ ಹೃದಯಂ ವಿಂದ್ಯಾತ್=ಹಾಂ ಅಥವಾ ಹ್ರಾಂ ಎಂಬ ಮೊದಲಕ್ಷರಂ ಹೃದಯ ಬೀಜವೆಂದಱಿವುದು, ದ್ವಿತೀಯಂ ತು ಶಿರೋ ಬೀಜಂ=ಹೀಂ ಅಥವಾ ಹ್ರೀಂ ಎಂಬ ಎರಡನೆಯಕ್ಷರಂ ಶಿರೋಬೀಜಂ, ತೃತೀಯಂ ತು ಶಿಖಾಂ ವಿಂದ್ಯಾತ್=ಹೂಂ ಅಥವಾ ಹ್ರೂಂ ಎಂಬ ತೃತೀಯಾಕ್ಷರಂ ಶಿಖಾಬೀಜವೆಂದಱಿವುದು, ಚತುರ್ಥಂ=ಹೈಂ ಅಥವಾ ಹ್ರೈಂ ಎಂಬ ಚತುರ್ಥಬೀಜಂ, ಕವಚಂ ಭವೇತ್=ಕವಚ ಬೀಜವಹುದು. ಪಂಚಮಂ ನೇತ್ರತ್ರಯಂ ಸ್ಯಾತ್=ಹೌಂ ಅಥವಾ ಹ್ರೌಂ ಎಂಬ ಪಂಚಮ ಬೀಜಂ ನೇತ್ರತ್ರಯ ಬೀಜವೆಂದಱಿವುದು, ಷಷ್ಠಂ=ಹಃ ಅಥವಾ ಹ್ರಃ ಎಂಬ ಷಷ್ಠ ಬೀಜಂ, ಅಸ್ತ್ರಬೀಜಮುದಾಹೃತಂ=ಅಸ್ತ್ರ ಬೀಜವೆಂದು ಉದಾಹರಿಸಲು ಪಟ್ಟುದು. ॥೧೨॥

ಶ್ಲೋಕ॥ ಏತೇ ಶಿವಾಂಗ ನಾಮಾನಿ ಕೀರ್ತಿತಾನಿ ಕ್ರಮಾದ್ವಿದುಃ ।

ಟೀಕು॥ ಏತೇ ಶಿವಾಂಗ ನಾಮಾನಿ=ಈ ಹೇಳಲ್ಪಟ್ಟ ಆಱು ವರ್ಣಂಗಳು ಶಿವಾಂಗ ನಾಮಂಗಳೆಂದು ಕ್ರಮಾತ್=ಕ್ರಮದಿಂದ, ವಿದುಃ=ಅಱಿವುದು.

ಶ್ಲೋಕ॥ ಆದೌ ಪ್ರಣವಮುಚ್ಚಾರ್ಯ ಶಿವಾರ್ಣಂ ತದನಂತರಮ್ ।
ಅಭಿಧಾನಂ ಚತುರ್ಥ್ಯಂತಂ ನಮಸ್ಕಾರದಿಭಿರ್ಯುತಮ್ ॥

ಟೀಕು॥ ಆದೌ=ಮೊದಲಲ್ಲಿ, ಪ್ರಣವಮುಚಾರ್ಯ=ಓಂಕಾರವನುಚ್ಚರಿಸಿ ತದನಂತರಂ= ತಜುವಾಯಲ್ಲಿ ವಿಕೃತಿ ಸ್ವರಯುಕ್ತವಾದ, ಶಿವಾರ್ಣಂ=ಶಿವಾಕ್ಷರಮಂ ಹೃದಯಾದ್ಯಸ್ತ್ರಾಂತ ಮಾದ, ಅಭಿಧಾನಂ=ಷಡಂಗಾಭಿಧಾನಂ ಚತುರ್ಥ್ಯಂತಂ=ಚತುರ್ಥ್ಯಂತಮಾಗಿಯುಂ, ನಮಸ್ಕಾರಾಭಿರ್ಯುತಂ=ನಮಃ ಸ್ವಾಹಾ ವಷಟ್ ಹೂಂ ವೌಷಟ್ ಫಟ್ ಎಂಬ ಈ ಷಟ್ಪಲ್ಲವಂಗಳೊಡನೆ ಕೂಡಿದುದನುಮಾಗಿ ಷಡಂಗಮಂತ್ರವನುಚ್ಚರಿಸುವದು, ಈ ಉಚ್ಚಾರಣ ಕ್ರಮವು ಹೇಗೆಂದೊಡೆ, "ವೈದಿಕ:ಓಂ ಹ್ರಾಂ ಹೃದಯಾಯ ನಮಃ, ಓಂ ಹ್ರೀಂ ಶಿರಸೇ ಸ್ವಾಹಾ, ಓಂ ಹ್ರೂಂ ಶಿಖಾಯೈ ವಷಟ್, ಓಂ ಹ್ರೈಂ ಕವಚಾಯ ಹುಂ, ಓಂ ಹ್ರೌಂ ನೇತ್ರತ್ರಯಾಯವೌಷಟ್, ಓಂ ಹ್ರಃ ಅಸ್ತ್ರಾಯ ಫಟ್" ಎಂದು ಹೀಂಗೆ ಷಡಂಗ ಮಂತ್ರೋದ್ಧರಣ ಕ್ರಮಂ, ಷಡಂಗ ಪಲ್ಲವೋದ್ಧಾರಣ ಕ್ರಮ ಹೇಂಗೆಂದೊಡೆ ಕ್ರಿಯಾಸಾರದಲ್ಲಿ ಪರಮೇಶ್ವರಂ ಬ್ರಹ್ಮಂಗೆ ನಿರೂಪಿಸಿದನು. ॥೧೪॥

ಶ್ಲೋಕ॥ ಸ್ರಷ್ಟುಃ ವಿಂಶತಿಕಂ ಬೀಜಂ ಪಂಚವಿಂಶತಿಕಂ ತತಃ ।
ದ್ವ್ಯಕ್ಷರಂ ಸವಿಸರ್ಗಂ ಚ ಹೃನ್ಮಂತ್ರೇ ಪಲ್ಲವಂ ಸ್ಮೃತಮ್ ॥

ಟೀಕು॥ ವಿಂಶತಿಕಂ ಸ್ರಷ್ಟುಃ ಬೀಜಂ=ಬ್ರಹ್ಮ ಬೀಜವಪ್ಪ ಕಕಾರಕ್ಕೆ ಇಪ್ಪತ್ತನಾಲ್ಕನೆಯ ಅಕ್ಷರಮಪ್ಪ ನಕಾರಮಂ, ತತಃ=ತಜುವಾಯಿಂದ, ಪಂಚವಿಂಶತಿಕಂ=ಇಪ್ಪತ್ತಯಿದನೆಯಪ್ಪ ಮಕಾರಮಂ, ದ್ವ್ಯಕ್ಷರಂ=ಎಂಬೆರಡಕ್ಷರಂ, ಸವಿಸರ್ಗಂಚ=ವಿಸರ್ಗಸಹಿತದೊಡೆ ನಮಃ ಎಂದಹುದು, ಈ ನಮಃ ಎಂಬೆರಡಕ್ಷರ, ಹೃನ್ಮಂತ್ರೇ ಪಲ್ಲವಂ ಸ್ಮೃತಂ=ಹೃದಯ ಮಂತ್ರ ಪಲ್ಲವವೆಂದು ನೆನೆಯಲ್ಪಟ್ಟುದು. ॥೧೫॥

ಶ್ಲೋಕ॥ ಪ್ರಾಣಸ್ಯ ಸಪ್ತಮೇ ಹ್ಯಾಪಃ ದ್ವಿತೀಯಸ್ವರಯುಕ್ ಕ್ರಮಾತ್ ।
ಖೇ ದ್ವಿತೀಯ ಸ್ವರಂ ತದ್ವತ್ ಶಿರೋಮಂತ್ರಸ್ಯ ಪಲ್ಲವಮ್ ॥

ಟೀಕು॥ ಪ್ರಾಣಸ್ಯ ಸಪ್ತಮೇ=ಪ್ರಾಣಬೀಜವಪ್ಪ ಯಕಾರಕ್ಕೆ ಏಳನೆಯ ಬೀಜವಾದ ಸಕಾರವನ್ನು, ಹ್ಯಾಪಃ=ಅಬ್ಬೀಜವಾದ ವಕಾರನುದ್ಧರಿಸಿ, ದ್ವಿತೀಯ ಸ್ವರಯುಕ್ ಕ್ರಮಾತ್=ಎರಡನೆಯ ಸ್ವರಮಪ್ಪ ಆಕಾರವನು ಕ್ರಮದಿಂದ ಕೂಡುವದು, ಖೇ=ಆಕಾಶಬೀಜವಪ್ಪ ಹಕಾರವನುದ್ಧರಿಸಿ ಹಾಂಗೆ ಎರಡನೆಯ ಸ್ವರವಾದ ಆಕಾರಮಂ ಕೂಡಿದೊಡೆ 'ಸ್ವಾಹಾ' ಎಂದು ಧೃತಮಪ್ಪುದಾಗಿ ಈ ದ್ವಯಾಕ್ಷರಂ, ಶಿರೋಮಮತ್ರ ಪಲ್ಲವಂ=ಶಿರೋಮಂತ್ರ ಪಲ್ಲವವೆಂದು ತಿಳಿವುದು. ॥೧೬॥

ಶ್ಲೋಕ॥ ಪಾರ್ಥಿವಾಂತಾಕ್ಷರಂ ಯಸ್ಯ ತೃತೀಯಾಕ್ಷರಂ ತತಃ ।
ದಶಾಂತವ್ಯಂಜನಂ ತದ್ವತ್ ಶಿಖಾಮಂತ್ರಸ್ಯ ಪಲ್ಲವಮ್ ॥

ಟೀಕು॥ ಪಾರ್ಥಿವಾಂತಾಕ್ಷರಂ=ಪಾರ್ಥಿವಾಂತಾಕ್ಷರವಾದ ಲಕಾರದ ಕಡೆಯಹಣ ವಕಾರ ಅದಱ, ತತಃ=ತಱುವಾಯಲ್ಲಿ ಆ ವಕಾರಕ್ಕೆ, ತೃತೀಯಂಚಾಕ್ಷರಂ=ಮೂಱನೆಯ ಅಕ್ಷರಮಪ್ಪ ಷಕಾರವು, ದಶಾಂತ ವ್ಯಂಜನಂ=ಕಕಾರಕ್ಕೆ ದಶಾಂತಮಪ್ಪ ವ್ಯಂಜನರೂಪ ಮಾದ ಟಕಾರವು, ತದ್ವತ್=ಹಾಂಗೆ ಕೂಡಿದೊಡೆ ವಷಟ್ ಎಂಬ ಬೀಜವರ್ಣದ್ವಯ ಹುದು, ಶಿಖಾಮಂತ್ರಸ್ಯಪಲ್ಲವಂ=ಇದುಶಿಖಾಮಂತ್ರ ಪಲ್ಲವವೆಂದಱಿವುದು. ॥೧೭॥

ಶ್ಲೋಕ॥ ಚತುರ್ಥಾಂತಂ ಸ್ವರಂ ಬಿಂದು ನಾದೌ ಚ ಗಗನಾಕ್ಷರೇ ।
ಯುಂಜ್ಯಾತ್ ಕವಚಮಂತ್ರಸ್ಯ ಪಲ್ಲವಂ ಪರಿಕೀರ್ತಿತಮ್ ॥

ಟೀಕು॥ ಚತುರ್ಥಾಂತಂ ಸ್ವರಂ=ನಾಲ್ಕನೆಯ ಸ್ವರಾಂತಮಪ್ಪ ಉಕಾರವನು, ಬಿಂದು ನಾದೌ=ಸೊನ್ನೆಯದನು, ಗಗನಾಕ್ಷರೇ=ವ್ಯೋಮಬೀಜವಪ್ಪ ಹಕಾರದಲ್ಲಿ ಯುಂಜ್ಯಾತ್= ಕೂಡುವದು, ಹೀಂಗೆ ಕೂಡಿದೊಡೆ ಹುಂ ಎಂಬ ವರ್ಣವಹುದು. ಕವಚ ಮಂತ್ರಸ್ಯ ಪಲ್ಲವಂ ಪರಿಕೀರ್ತಿತಂ=ಕವಚಮಂತ್ರ ಪಲ್ಲವವೆಂದಱಿವುದು. ॥೧೮॥

ಶ್ಲೋಕ॥ ಬೀಜದ್ವಯೇ ಶಿಖಾಯಾಶ್ಚ ಪಲ್ಲವೇ ಪೂರ್ವಮಕ್ಷರಮ್ ।
ಚತುರ್ದಶಸ್ವರೋಪೇತಂ ನೇತ್ರಮಂತ್ರಸ್ಯ ಪಲ್ಲವಮ್ ॥

ಟೀಕು॥ ಬೀಜದ್ವಯೇ ಶಿಖಾಯಾಶ್ಚ ಪಲ್ಲವೇ=ಶಿಖಾಮಂತ್ರವೆರಡಕ್ಷರವನುಳ್ಳ ಪಲ್ಲವದಲ್ಲಿಯ, ಪೂರ್ವಮಕ್ಷರಂ=ಮೊದಲಕ್ಷರಮಂ, ಚತುರ್ದಶಸ್ವರೋಪೇತಂ= ಹದಿನಾಲ್ಕನೆಯ ಸ್ವರಮಪ್ಪ ಔಕಾರದಲ್ಲಿ, ಉಪೇತಂ=ಹೀಂಗೆ ಕೂಡಿದಡೆ, ವೌಷಟ್ ಯೆಂದುದ್ಧರಣವಹುದು, ಈ ವರ್ಣದ್ವಯಂ ನೇತ್ರಮಂತ್ರಸ್ಯ ಪಲ್ಲವಂ=ನೇತ್ರಮಂತ್ರ ಪಲ್ಲವವೆನಿಸಿಕೊಂಬುದು. ॥೧೯॥

ಶ್ಲೋಕ॥ ಏಕವಿಂಶತಿ ವರ್ಣಾಂತಂ ದಶಾಂತವ್ಯಂಜನಂ ತಥಾ ।
ಏತದಾಯುಧ ಮಂತ್ರಸ್ಯ ಪಲ್ಲವಂ ಚೇತಿ ಕೀರ್ತಿತಮ್ ॥

ಟೀಕು॥ ಏಕವಿಂಶತಿ ವರ್ಣಾಂತಂ=ಕಕಾರಕ್ಕೆ ಇಪ್ಪತ್ತೊಂದನೆಯ ಅಕ್ಕರಮಪ್ಪ ಪಕಾರದ ಕಡೆಯ ಫಕಾರ, ತಥಾ=ಹಾಂಗೆ, ದಶಾಂತ ವ್ಯಂಜನಂ=ಟಕಾರ ಇವಂ ಕೂಡಿದೊಡೆ ಫಟ್ ಎಂಬ ಗುರ್ವಕ್ಷರಮಪ್ಪುದು, ಏತದಾಯುಧಮಂತ್ರಸ್ಯ ಪಲ್ಲವಂ ಚೇತಿ=ಆ ಇದು ಅಸ್ತ್ರಮಂತ್ರ ಪಲ್ಲವವೆಂದು, ಕೀರ್ತಿತಂ=ಹೇಳಲ್ಪಟ್ಟುದು, ಇದು ಷಣ್ಮಂತ್ರಪಲ್ಲವೋ ದ್ಧರಣ. ಈ ಪಲ್ಲವವ ಅನುಕ್ರಮದಿಂದ ನಿರೂಪಿಸಿಹನು. ॥೨೦॥

ಶ್ಲೋಕ॥ ನಮೋಽನ್ತಂ ಹೃದಯಂ ವಿಂದ್ಯಾತ್ ಸ್ವಾಹಾನ್ತಂ ಚ ಶಿರೋ ಭವೇತ್ ।
ವಷಡನ್ತಂ ಶಿಖಾಜ್ಞೇಯಾ ಹುಂ ಕಾರಂ ಕವಚಂ ಭವೇತ್ ॥

ವೌಷಡನ್ತಂ ತು ನೇತ್ರಂ ಸ್ಯಾತ್ ಫಟ್ಕಾರಂ ಚಾಸ್ತ್ರಮಂತ್ರತಃ ॥

ಟೀಕು॥ ನಮೋಽನ್ತಂ=ನಮೋ ಎಂಬ ಪಲ್ಲವಾಂತವಾದುದು, ಹೃದಯಂ=ಹೃದಯ ಮಂತ್ರವೆಂದು, ವಿಂದ್ಯಾತ್=ಅಱಿವುದು, ಸ್ವಾಹಾನ್ತಂ=ಸ್ವಾಹಾಂತವಾದುದು, ಶಿರೋ ಮಂತ್ರಂ ಭವೇತ್=ಶಿರೋಮಂತ್ರವಹುದು, ವಷಡನ್ತಂ=ವಷಡನ್ತ ಪಲ್ಲವಾನ್ತವಾದುದು, ಶಿಖಾಜ್ಞೇಯಾ=ಶಿಖಾಮಂತ್ರವೆಂದಱಿವುದು, ಕವಚಂ=ಕವಚಮಂತ್ರಕ್ಕಾಯಿತ್ತೊಡೆ, ಹುಂಕಾರಂ ಭವೇತ್=ಹುಂಕಾರಾನ್ತವಹುದು, ನೇತ್ರಂತು=ನೇತ್ರಮಂತ್ರವಾಯಿತಾದೊಡೆ, ವೌಷಡನ್ತಂ ಸ್ಯಾತ್=ವೌಷಡಂತವಾಗಿಯೂ, ಅಸ್ತ್ರ ಮಂತ್ರತಃ=ಅಸ್ತ್ರ ಮಂತ್ರವು, ಫಟ್ಕಾರಶ್ಚ=ಫಟ್ ಎಂಬುದು ಪಲ್ಲವವಹುದು, ಆ ಈ ಪ್ರಕಾರದಿಂದ ಶಿವಾಂಗಂ ನುಡಿಯಲ್ಪಟ್ಟುದು, ಹಾಂಗೆ ಭೂತಾಂಗಂ ನುಡಿಯಲ್ಪಡುವುದು. ॥೨೧॥

ಶ್ಲೋಕ॥ ಪಾರ್ಥಿವಂ ಜೀವಸಂಯುಕ್ತಂ ದ್ವಿತೀಯಸ್ವರಭೂಷಿತಮ್ ।
ಬಿಂದುನಾದ ಸಮಾಯುಕ್ತಂ ಪ್ರಥಮಂ ಬೀಜಮುಚ್ಯತೇ ॥

ಟೀಕು॥ ಪಾರ್ಥಿವಂ=ಭೂ ಬೀಜವಪ್ಪ ಲಕಾರಂ, ಜೀವ ಸಂಯುಕ್ತಂ=ಶಿವಬೀಜವಪ್ಪ ಹಕಾರದೊಡನೆ ಕೂಡಲ್ಪಟ್ಟುದಾಗಿಯುಂ, ದ್ವಿತೀಯ ಸ್ವರ ಭೂಷಿತಂ=ಎರಡನೆಯ ಸ್ವರದಿಂದ ಭೂಷಿಸಲ್ಪಟ್ಟುದಾಗಿಯುಂ, ನಾದಬಿಂದು ಸಮಾಯುಕ್ತಂ=ಬಿಂದುವಿನೊಡನೆ ಕೂಡಲ್ಪಟ್ಟುದಾಗಿಹುದು, ಹೀಂಗೆ ಕೂಡಿದೊಡೆ ಹ್ಲಾಂ ಎಂಬ ವರ್ಣಮುದ್ಧೃತವಪ್ಪುದು, ಪ್ರಥಮಂ ಬೀಜಮುಚ್ಯತೇ=ಆ ಈ ಬೀಜಂ ಪ್ರಥಮ ಭೂಂತಾಗ ಬೀಜವೆಂದು ಹೇಳಲ್ಪಡುತ್ತಿಹುದು. ॥೨೨॥

ಶ್ಲೋಕ॥ ಶಿವಾರ್ಣಂ ಜೀವನೋಪೇತಂ ಚತುರ್ಥಂ ಸ್ವರಭೂಷಿತಮ್ ।
ಶಿವಶಕ್ತಿ ಸಮಾಯುಕ್ತಂ ದ್ವಿತೀಯಂ ಬೀಜಮುಚ್ಯತೇ ॥

ಟೀಕು॥ ಶಿವಾರ್ಣಂ ಜೀವನೋಪೇತಂ=ಜಲಬೀಜವಪ್ಪ ವಕಾರದೊಡನೆ ಕೂಡಿದ ಹಕಾರಂ, ಚತುರ್ಥಂ ಸ್ವರ ಭೂಷಿಂ=ಈಕಾರ ಸ್ವರದಿಂದಲಂಕರಿಸಲ್ಪಟ್ಟುದಾಗಿಯುಂ ಶಿವಶಕ್ತಿ ಸಮಾಯಕ್ತಂ=ಸೊನ್ನೆಯೊಡನೆ ಕೂಡಲ್ಪಟ್ಟುದಾಗಿಹುದು, ಹೀಂಗೆ ಕೂಡಲ್ಪಟ್ಟುದೆ ಹ್ವೀಂ ಎಂಬ ಬೀಜವಹುದು, ದ್ವಿತೀಯಂ ಬೀಜಮುಚ್ಯತೇ=ಆ ಈ ಜೀಜಂ ಎರಡನೆಯ ಭೂತಾಂಗಬೀಜವೆಂದು ನುಡಿಯಲ್ಪಡುತ್ತಿಹುದು. ॥೨೩॥

ಶ್ಲೋಕ॥ ಪಂಚಮಂ ಷಷ್ಠ ಸಂಯುಕ್ತಂ ಪಂಚಮಾನ್ತ ಕಲಾಯುತಮ್ ।
ಆಧಾರಾಧೇಯ ಸಂಯುಕ್ತಂ ತೃತೀಯಂ ಬೀಜಮುಚ್ಯತೇ ॥

ಟೀಕು॥ ಪಂಚಮಮಂ=ಪಂಚಮಬೀಜವಪ್ಪ ಹಕಾರಂ, ಷಷ್ಠ ಸಂಯುಕ್ತಂ=ಷಷ್ಠಾಭಿಧಾನವನುಳ್ಳ ರೇಫದೊಡನೆ ಕೂಡಿದುದಾಗಿಯು, ಪಂಚಮಾನ್ತ ಕಲಾಯುತಂ=ಷಷ್ಠ ಸ್ವರಮಾದ ಊಕಾರಂ ಕೂಡಿದ್ದುದಾಗಿಯುಂ ಬಿಂದುವಿನೊಡನೆ ಕೂಡಲ್ಪಟ್ಟುದಾಗಿಹುದು. ಹೀಂಗೆ ಕೂಡಲ್ಪಟ್ಟರೆ ಹ್ರೂಂ ಎಂಬ ಬೀಜವಹುದು. ತೃತೀಯ ಬೀಜಮುಚ್ಯತೇ=ಆ ಈ ಬೀಜಂ ಮೂಱನೆಯ ಭೂತಾಂಗಮೆಂದು ನುಡಿಯಲ್ಪಡುತ್ತಿಹುದು. ॥೨೪॥

ಶ್ಲೋಕ॥ ಭೂತಾಂತಮನಿಲೋಪೇತಂ ಪಂಚ ಸಪ್ತಕಲಾನ್ವಿತಮ್ ।
ಪರಾಪರಸಮಾಯುಕ್ತಂ ಚತುರ್ಥಂ ಬೀಜಮುಚ್ಯತೇ ॥

ಟೀಕು॥ ಭೂತಾಂತಂ=ವಾಯು ವರ್ಣಮಪ್ಪ ಯಕಾರದೊಡನೆ, ಅನಿಲೋಪೇತಂ=ಹಕಾರಂ, ಪಂಚಸಪ್ತಮೋಪೇತಂ=ದ್ವಾದಶಕಲೆಯಪ್ಪ ಐಕಾರದೊಡನೆ ಕೂಡಿದ್ದುದಾಗಿ ಬಿಂದುವಿನೊಡನೆ ಕೂಡಲ್ಪಟ್ಟುದಾಗಿಹುದು, ಪರಾಪರಸಮಾಯುಕ್ತಂ ಈ ಹೀಂಗೆ ಸಮುದ್ಯತಮಾದೊಡೆ ಹ್ಯೈಂ ಎಂಬ ಬೀಜವಹುದು. ಚತುರ್ಥಂ ಬೀಜಮುಚ್ಯತೇ=ಆ ಈ ಬೀಜಂ ಚತುರ್ಥಭೂತಾಂಗಬೀಜವೆಂದು ನುಡಿಯಲ್ಪಡುತ್ತಿಹುದು. ॥೨೫॥

ಶ್ಲೋಕ॥ ತತ್ತ್ವಾಂತಂ ತತ್ತ್ವ ಸಂಯುಕ್ತಂ ಕಲಾಂತೇನ ಸಮನ್ವಿತಮ್ ।
ಕಾರ್ಯಕಾರಣಸಂಯುಕ್ತಂ ಪಂಚಮಂ ಬೀಜಮುಚ್ಯತೇ ॥

ಟೀಕು॥ ತತ್ತ್ವಾಂತಂ=ತತ್ತ್ವಾಂತಮೆಂದೊಡೆ ಹಕಾರದ ಪರ್ಯ್ಯಾಯನಾಮವು. ಹಕಾರದೊಡನೆ, ತತ್ತ್ವ ಸಂಯುಕ್ತಂ=ಮತ್ತೆಯೂ ವ್ಯಂಜನರೂಪಮಪ್ಪ ಹಕಾರದೊಡನೆ ಕೂಡಲ್ಪಟ್ಟುದಾಗಿಹುದು, ಕಲಾಂತೇನ ಸಮನ್ವಿತಂ=ಕಲಾಂತಮೆಂದೊಡೆ ಔಕಾರನಾಮವು, ಔಕಾರದೊಡನೆ ಕೂಡಲ್ಪಟ್ಟುದಾಗಿಯುಂ ಬಿಂದುವಿನೊಡನೆಯುಂ, ಕಾರ್ಯಕಾರಣ ಸಂಯುಕ್ತಂ=ಕೂಡಲ್ಪಟ್ಟುದಾಗಿಹುದು, ಹೀಂಗೆ ಕೂಟಮಾದೊಡೆ ಹ್ವೌಂ ಎಂಬ ಬೀಜವಹುದು, ತತ್ ಪಂಚಮಂ ಬೀಜಮುಚ್ಯತೇ=ಆ ಈ ಬೀಜಂ ಅಯಿದನೆಯ ಭೂತಾಂಗಬೀಜವೆಂದು ನುಡಿಯಲ್ಪಡುತ್ತಿಹುದು. ॥೨೬॥

ಶ್ಲೋಕ॥ ಶಕ್ತ್ಯನ್ತಂ ಶಿವಸಂಯುಕ್ತಮಾದಿಬೀಜಂ ಕಲಾನ್ವಿತಮ್ ।
ತಯೋರ್ಮಧ್ಯಗತೋ ಬಿಂದುಃ ಷಷ್ಠಂ ಬೀಜಮುದಾಹೃತಮ್ ॥

ಟೀಕು॥ ಶಕ್ತ್ಯಂತಂ=ಶಕ್ತಿಬೀಜವಪ್ಪ ಸಕಾರದ ಕಡೆಯಹ ಹಕಾರಂ, ಶಿವಸಂಯುಕ್ತಂ=ಮತ್ತೆಯೂ ವ್ಯಂಜನರೂಪಮಪ್ಪ ಹಕಾರದೊಡನೆ ಕೂಡಲ್ಪಟ್ಟುದಾಗಿಹುದು, ಆದಿ ಬೀಜಂ ಕಲಾನ್ವಿತಂ=ಮೊದಲ ವ್ಯಂಜನರೂಪಮಪ್ಪ ಹಕಾರ ಅಕಾರೋಪೇತವಾಗಿಹುದು, ತಯೋರ್ಮಧ್ಯಗತೋ ಬಿಂದುಃ=ಹೀಂಗಿಹ ಸ್ವರಯುಕ್ತವಾದ ವ್ಯಂಜನರೂಪವಾದ ಆ ಎರಡು ಹಕಾರಗಳ ಮಧ್ಯದಲ್ಲಿ ಬಿಂದುವಿಹುದು, ಹೀಂಗುದ್ಧೃತವಾದೊಡೆ ಹಂಹ್

ಎಂಬ ಬೀಜವಹುದು, ಷಷ್ಠಂ ಬೀಜಮುದಾಹೃತಂ=ಆ ಈ ಬೀಜಂ ಷಷ್ಠಭೂತ ಬೀಜಾಂಗವೆಂದು ನುಡಿಯಲ್ಪಡುತ್ತಿಹುದು. ॥೨೭॥

ಶ್ಲೋಕ॥ ಪಂಚಭಿರ್ಗ್ರನ್ಥಿಯುರ್ಕ್ತಂ ಭೇದ್ಯ ಮಂತ್ರೇಣ ಚಾತ್ಮನಿ ।

ಅರ್ಥ॥ ಅಸ್ತ್ರಮಂತ್ರದೊಡನೆಯುಂ ಪಂಚಭೂತಗ್ರಂಥಿಗಳೊಡನೆಯುಂ ಕೂಡಿಹ ಭೂತಾಂಗಬೀಜವು ಆತ್ಮನಲ್ಲಿರುತ್ತಿಹುದು. ॥೨೮॥

ಶ್ಲೋಕ॥ ಏವಂ ಭೂತಾಂಗಮಾಖ್ಯಾತಂ ಕೂಟಾಂಗಾನಿ ತತಃ ಶೃಣು ॥

ಟೀಕು॥ ಏವಂ ಭೂತಾಂಗಮಾಖ್ಯಾತಂ=ಪೂರ್ವ ಶ್ಲೋಕಾರ್ಥ ಪ್ರಕಾರದಿಂ ಹ್ಲಾಂ ಹ್ಲೀಂ ಹ್ಲೂಂ ಹ್ಲೈಂ ಹೌಂ ಹಂಹ್ ಎಂಬ ಷಡ್ಭೇದಂ ಭೂತಾಂಗಬೀಜವು. ಈ ಪಜಿ ಯಿಂದ ಭೂತಾಂಗಂ ನುಡಿಯಲುಪಟ್ಟುದು; ಭೋ ಷಣ್ಮುಖ!=ಎಲೆ ಷಣ್ಮುಖನೇ! ತತಃ=ಈ ಭೂಂತಾಂಗ ನಿರೂಪಣದಿಂದೆ ಮೇಲೆ ಕೂಟಾಂಗಾನಿ ಶೃಣು=ಕೂಟಾಂಗ ಗಳಂ ಕೇಳು. ॥೨೯॥

ಶ್ಲೋಕ॥ ಪ್ರಥಮಸ್ಯ ದ್ವಿತೀಯಂ ತು ಚತುರ್ಥಂ ಪಂಚಮಾಂತಕಮ್ ।
ರುದ್ರಾಂತಂ ರುದ್ರತುರ್ಯಾರ್ಣಂ ಅಂತಂ ಕೂಟಾಕ್ಷರೇಣಯುಕ್ ॥

ಬಿಂದು ನಾದಸಮಾಯುಕ್ತಂ ಕೂಟಾಂಗಮಿದಮಿರಿತಮ್ ॥

ಟೀಕು॥ ಪ್ರಥಮಸ್ಯ ದ್ವಿತೀಯಂ ತು=ಅವರ್ಗದ ಎರಡನೆಯ ಅಕ್ಷರಮಂ, ಚತುರ್ಥಂ= ನಾಲ್ಕನೆಯ ಅಕ್ಷರಮುಂ, ಪಂಚಮಾಂತಕಂ=ಪಂಚಮಾಂತಕವಾದ ಷಷ್ಠಕಾರಮುಂ, ರುದ್ರಾಂತಂ=ದ್ವಾದಶಾಕ್ಷರಮುಂ ರುದ್ರತುರ್ಯಂಚ=ಚತುರ್ದಶಾಕ್ಷರಮುಂ, ಅಂತಂ= ಸ್ವರಾಂತಮಪ್ಪ ವಿಸರ್ಗಮುಂ, ಕೂಟಾಕ್ಷರೇಣ, ಯುಕ್=ಕೂಟವರ್ಣಾಭಿದಾನವನುಳ್ಳ ಕ್ಷಕಾರದೊಡನೆ ಕೂಡಿಪ್ಪವು, ಹೀಂಗೆ ಬೀಜಕ್ಕೆ ಅಂತವರ್ಣಂಗಳು ಕೂಡಿದೊಡೆ ಕ್ಷಾಂ ಕ್ಷೀಂ ಕ್ಷೂಂ ಕ್ಷೈಂ ಕ್ಷೌಂ ಕ್ಷಃ ಈ ಷಡ್ವರ್ಣವು ಹೀಂಗೆ ಬಿಂದುಯುತಮಾಗಿಪ್ಪುದು, ಈ ಷಡ್ಬೀಜಂ ಕೂಟಾಂಗಮೆಂದುಂ ಹೇಳಲ್ಪಟ್ಟುದು.

ಶ್ಲೋಕ॥ ಏವಂ ಕೂಟಾಂಗಮಿತ್ಯುಕ್ತಂ ವಿದ್ಯಾಂಗಾನಿ ತತಃ ಶೃಣು ।

ಟೀಕು॥ ಭೋ ಷಣ್ಮುಖ!=ಎಲೆ ಕುಮಾರನೆ! ಏವಂ ಕೂಟಾಂಗಮಿತ್ಯುಕ್ತಂ=ಇದು ಕೂಟಾಂಗಮೆಂದು ಹೇಳಲುಪಟ್ಟುದು, ತತಃ=ಕೂಟಾಂಗದ ತಱುವಾಯಿಂದ ಮೇಲೆ, ವಿದ್ಯಾಂಗಾನಿ ಶೃಣು=ವಿದ್ಯಾಂಗಗಳಂ, ಶೃಣು=ಕೇಳು, ಅಘೋರಾಸ್ತ್ರ ಪರ್ಯಂತವಾದ ಈ ಶ್ಲೋಕಾಂತಸ್ಥ ವರ್ಣಂಗಳಸ್ತವ್ಯಸ್ತಂಗಳಾಗಿದ್ದವಾಗಿ ಆಗಮಜ್ಞರಪ್ಪ ಮಹಂತರು

ಆಗಮಂಗಳ ಮಂತ್ರಾಂಗ ಶ್ಲೋಕಂಗಳಂ ಆಲೋಚಿಸಿ ನಿರ್ಧರಿಸಿ ಈ ಶ್ಲೋಕಾರ್ಥಂಗಳಂ ತಿದ್ದಿ ವ್ಯಾಖ್ಯಾನಿಸುವುದು. ॥೩೨॥

ಶ್ಲೋಕ॥ ಪ್ರಕಾರಂ ತು ಸಮುದ್ಧೃತ್ಯ ತಕಾರಂತು ಸಮುದ್ಧರೇತ್ ।
ದಕಾರೋಪೇತರಾಕಾರಂ ಯಕಾರಂ ಚ ನಮೋಽನ್ತಕಮ್ ॥ ॥೩೩॥

ಏವಂ ವಿದ್ಯಾಂಗಮಾಖ್ಯಾಂತಂ ಪ್ರಾಕಾರಂ ಚ ಸಮುದ್ಧರೇತ್ ।
ನಕಾರಂ ಚೈವ ವಾಕಾರಂ ತಕಾರೇಣ ಮಕಾರಯುಕ್ ॥ ॥೩೪॥

ನಮೋಽಂತಂ ತು ಸಮುದ್ಧೃತ್ಯ ಸ್ವಾಹಾಂತಂ ಶಿರಸಾ ವಿದುಃ ।
ಶಕಾರಂ ಚೈವ ವಾಕಾರಂ ಫಟ್ ಚ ಹುಂಕಾರಮೇವ ಚ ॥ ॥೩೫॥

ವಷಟ್ಕಾರಸಮಾಯುಕ್ತಂ ಶಿಖಾಬೀಜಮುದಾಹೃತಮ್ ।
ಶಿಕಾರಂ ಚೈವ ವಾಕಾರಂ ತಕಾರೇಣ ಮಕಾರಯುಕ್ ॥ ॥೩೬॥

ತಕಾರಂ ಚ ಮಕಾರಂ ಚ ಹಕಾರಂ ಚ ಸಮುದ್ಧರೇತ್ ।
ತಕಾರಂ ಚ ಜಕಾರಂ ಚ ಅನುಸ್ವಾರಂ ಚ ಸರ್ವತಃ ॥ ॥೩೭॥

ಜಕಾರೇತು ಸಮಾಯುಕ್ತಂ ಮಕಾರಂ ಚ ಪಕಾರಕಮ್ ।
ತಕಾರಂ ಚ ಶಿಕಾರಂ ಚ ಮಕಾರಂ ಚ ಸಮುದ್ಧರೇತ್ ॥ ॥೩೮॥

ಆಕಾರಂ ಚ ವಕಾರಂ ಚ ನಕಾರಂ ಚ ವಕಾರಯುಕ್ ।
ವಹ್ನಿಶಿಖಾರ ಸಂಯುಕ್ತಂ ಯಕಾರಂ ತು ಮಕಾರಯುಕ್ ॥ ॥೩೯॥

ಯ ಹಕಾರಂ ಪ್ರಕಾರಂ ಚ ಅನುಸ್ವಾರ ಸಮಾಯುತಮ್ ।
ಕಕಾರಂ ಚ ಮಕಾರಂ ಚ ಪಕಾರಂ ಚ ಶಿಕಾರಕಮ್ ॥ ॥೪೦॥

ಅನುಸ್ವಾರಸಮಾಯುಕ್ತಂ ಗ್ರಕಾರಂ ಚ ಲಕಾರಕಮ್ ।
ರುಕಾರಂ ಚ ಭಕಾರಂ ಚ ಮಕಾರೇಣ ಸಮುಚ್ಚಯಮ್ ॥ ॥೪೧॥

ಅಕಾರಂ ಚೈವ ವಾಕಾರಂ ಹಕಾರಂ ಚ ಏಕಾರಕಮ್ ।
ಶಿಕಾರಂ ಚ ಲಕಾರಂ ಚ ಮಕಾರಂ ಹಾರಮೇವ ಚ ॥ ॥೪೨॥

ಕ್ಷಕಾರಂ ಚ ವಕಾರಂ ಚ ಕಕಾರಂ ಚ ವಿಕಾರಕಮ್ ।
ನಕಾರೇಣ ಸಮಾಯುಕ್ತಂ ಬನ್ಧ ಶಬ್ದಮುದಾಹೃತಮ್ ॥ ॥೪೩॥

ಪೂರ್ಣಂ ಚೈವ ತು ಪೂರ್ಣಂ ಚ ಕಹತ್ಕಹ ಸಮಾಯುತಮ್ ।
ಕಿರಿದ್ವಂದ್ವ ಸಮಾಯುಕ್ತಂ ಸೂಕ್ಷ್ಮ ಸೂಕ್ಷ್ಮ ಸಮಾಯುತಮ್ ॥ ॥೪೪॥

ಈಕಾರಂ ಚ ಏಕಾರಂ ಚ ರಿಕಾರಿ ಹಾರಮೇವ ಚ ।
ಚಕಾರಂ ಚ ಮಕಾರಂ ಚ ಏಕಾರಂ ಚ ಪ್ರಕಾರಕಮ್ ॥ ॥೪೫॥

ಷಿಕಾರಂ ಚ ಶ್ಯಕಾರಂ ಚ ಸ ಷ ಚೈವ ಮಕಾರಕಮ್ ।
ಷಟ್ಕಾರಂ ಸ್ತಂಭಯಶ್ಚೇತಿ ಸ್ತಂಭಶಬ್ದಂ ತಥೈವ ಚ ॥ ॥೪೬॥

ಯಕಾರಂ ಚೈವ ಹುಂಕಾರಂ ಫಟ್ಕಾರೇಣ ಸಮಾಯುತಮ್ ।
ಏವಂ ಕವಚಮಾಖ್ಯಾತಂ ಸರ್ವರಕ್ಷಾಕರಂ ಭವೇತ್ ॥ ॥೪೭॥

ಶ್ಲೋಕ॥ ಶಿವಾಸ್ತ್ರಂ ಪಶುಪತ್ಯಸ್ತ್ರಂ ಬ್ರಹ್ಮಾಸ್ತ್ರಂ ಕ್ಷುರಿಕಾಸ್ತ್ರಕಮ್ ।
ವ್ಯೋಮಾಸ್ತ್ರಮಿತ್ಯಘೋರಾಸ್ತ್ರಂ ಏತದ್ವಿದ್ಯಾಂಗಮೀರಿತಮ್ ॥

ಟೀಕು॥ ಶಿವಾಸ್ತ್ರಂ=ಶಿವಾಸ್ತ್ರವುಂ, ಪಶುಪತ್ಯಸ್ತ್ರಂ=ಪಾಶುಪತಾಸ್ತ್ರವುಂ, ಬ್ರಹ್ಮಾಸ್ತ್ರಂ=ಬ್ರಹ್ಮಾಸ್ತ್ರವುಂ, ಹಾಂಗೆ ಕ್ಷುರಿಕಾಸ್ತ್ರಕಂ=ಕ್ಷುರಿಕಾಸ್ತ್ರವುಂ, ವ್ಯೋಮಾಸ್ತ್ರಂ=ವ್ಯೋಮಾಸ್ತ್ರವುಂ, ತಥಾ=ಹಾಂಗೆ, ಅಘೋರಾಸ್ತ್ರಂ=ಅಘೋರಾಸ್ತ್ರವುಂ, ಏತತ್ ವಿದ್ಯಾಂಗಂ=ವಿದ್ಯಾಂಗವಾದ ಅಸ್ತ್ರಂಗಳೆಂದು, ಈರಿತಂ=ಹೇಳಲುಪಟ್ಟವು. ॥೪೮॥

ಶ್ಲೋಕ॥ ಶಿವಾಸ್ತ್ರಮಂತ್ರೋದ್ಧಾರಂ ಚ ಪ್ರವಕ್ಷ್ಯೇ ಶೃಣು ಷಣ್ಮುಖ ।
ಓಂಕಾರಂ ಪ್ರಥಮಂ ಬೀಜಂ ಶಿಕಾರಂ ಚ ದ್ವಿತೀಯಕಮ್ ॥ ॥೪೯॥

ತೃತೀಯ ಬೀಜಂ ವಾಕಾರಂ ಸ್ತ್ರಾಕಾರಂ ಚ ಚತುರ್ಥಕಮ್ ।
ಪಂಚಮಂ ತು ಯಕಾರಂ ಸ್ಯಾತ್ ಷಷ್ಠಂ ಫಟ್ಕಾರಮೇವ ಚ ॥ ॥೫೦॥

ಶಿವಾಸ್ತ್ರಮಂತ್ರಃ ಷಡ್ವರ್ಣಃ ಸರ್ವಸಿದ್ಧಿಪ್ರದಾಯಕಃ ।
ಶಿವಾಸ್ತ್ರ ಮಂತ್ರಸ್ಸಂಪ್ರೋಕ್ತಚ್ಛೃಣು ಪಾಶುಪತಂ ಮತಮ್ ॥ ॥೫೧॥

ಓಂಕಾರಂ ಪ್ರಥಮಂ ಬೀಜಂ ಶ್ಲೀಂಕಾರಂ ಚ ದ್ವಿತೀಯಕಮ್ ।
ಪಕಾರಂ ಸ್ಯಾತ್ ತೃತೀಯಂ ತು ಶುಕಾರಂ ಚ ಚತುರ್ಥಕಮ್ ॥ ॥೫೨॥

ಹುಂಕಾರಂ ಪಂಚಮಂ ಬೀಜಂ ಫಟ್ಕಾರಂ ಷಷ್ಠಬೀಜಕಮ್ ।
ಏಷ ಪಾಶುಪತಾಸ್ತ್ರಾಖ್ಯಮಸ್ತ್ರಂ ಷಡ್ವರ್ಣಕೋ ಭವೇತ್ ॥ ॥೫೩॥

ಪ್ರೋಕ್ತಂ ಹಿ ಪಾಶುಪತಾಸ್ತ್ರಂ ಬ್ರಹ್ಮಾಸ್ತ್ರಂ ಚ ತತಃ ಶೃಣು ।
ಓಂಕಾರಂ ಪ್ರಥಮಂ ಬೀಜಂ ಬ್ರಕಾರಸ್ತು ದ್ವಿತೀಯಕಮ್ ॥ ॥೫೪॥

ಹ್ಮಾಕಾರಂ ಸ್ಯಾತ್ ತೃತೀಯಂ ತು ಸ್ತ್ರಾಕಾರಸ್ತು ಚತುರ್ಥಕಮ್ ।
ಯಕಾರಂ ಪಂಚಮಂ ಬೀಜಂ ಷಷ್ಠಂ ಫಟ್ಕಾರಕೋ ಭವೇತ್ ॥ ॥೫೫॥

ಅಯಂ ಬ್ರಹ್ಮಾಸ್ತ್ರ ಮಂತ್ರಶ್ಚ ಷಡ್ವರ್ಣಃ ಶುಭದೋ ಭವೇತ್ ।
ಬ್ರಹ್ಮಾಸ್ತ್ರ ಮಂತ್ರಸ್ಸಂಪ್ರೋಕ್ತಃ ಕ್ಷುರಿಕಾಸ್ತ್ರಮಥ ಶೃಣು ॥ ॥೫೬॥

ಶಿಕಾರಂ ಪ್ರಥಮಂ ಬೀಜಂ ಛಿಕಾರಂ ತು ದ್ವಿತೀಯಕಮ್ ।
ಕ್ಷುಕಾರಃ ಸ್ಯಾತ್ ತೃತೀಯಂ ಚ ರಿಕಾರಂ ಚ ಚತುರ್ಥಕಮ್ ॥ ॥೫೭॥

ಕಾಕಾರಂ ಪಂಚಮಂ ಬೀಜಂ ಸ್ತ್ರಾಕಾರಂ ಷಷ್ಠವರ್ಣಕಮ್ ।
ಯಕಾರಂ ಸಪ್ತಮಂ ಬೀಜಂ ಫಟ್ಕಾರಂ ಚಾಷ್ಟಮಂ ಭವೇತ್ ॥ ॥೫೮॥

ಕ್ಷುರಿಕಾಸ್ತ್ರಮನುಶ್ಚಾಷ್ಟವರ್ಣೋಽಯಂ ಸ್ಯಾದ್ರಸಪ್ರದಃ ।
ಕ್ಷುರಿಕಾಸ್ತ್ರಮನುಃ ಪ್ರೋಕ್ತಃ ವ್ಯೋಮಾಸ್ತ್ರಂ ಚ ತತಃ ಶೃಣು ॥ ॥೫೯॥

ಓಕಾರಂ ಪ್ರಥಮಂ ಬೀಜಂ ಮಾಂಕಾರಂ ಚ ದ್ವಿತೀಯಕಮ್ ।
ತೃತೀಯಬೀಜಂ ಮಿಾಂಕಾರಂ ಸರ್ವ ಕಾರಣ ಕಾರಣಮ್ ॥ ॥೬೦॥

ಚತುರ್ಥಬೀಜಂ ಮೂಂಕಾರಂ ವ್ಯಾಕಾರಂ ಪಂಚಮಂ ಭವೇತ್ ।
ಷಷ್ಠವರ್ಣಂ ಮಕಾರಂ ಚ ವ್ಯಾಕಾರಂ ಸಪ್ತಮಂ ಭವೇತ್ ॥ ॥೬೧॥

ಪಿಕಾರಮಷ್ಟಮಂ ಬೀಜಂ ನೇಕಾರಂ ನವಮಂ ಸ್ಮೃತಮ್ ।
ಓಂಕಾರಂ ದಶಮಂ ಬೀಜಂ ವ್ಯೋಮಾಸ್ತ್ರಂ ತು ದಶಾರ್ಣಕಮ್ ॥ ॥೬೨॥

ಶ್ಲೋಕ॥ ವ್ಯೋಮಾಸ್ತ್ರಮಂತ್ರಃ ಸಂಪ್ರೋಕ್ತಶ್ಚಾಘೋರಾಸ್ತ್ರಮಥಶೃಣು ।

ಟೀಕು॥ ವ್ಯೋಮಾಸ್ತ್ರ ಮಂತ್ರಃ=ವ್ಯೋಮಸ್ತ್ರಮಂತ್ರೋದ್ಧಾರಮಂ, ಸಂಪ್ರೋಕ್ತಃ= ನಿರೂಪಿಸಲುಪಟ್ಟದು, ಅಥ=ತಱುವಾಯಿಂದೆ, ಅಘೋರಾಸ್ತ್ರಮಂ=ಅಘೋರಾಸ್ತ್ರ ಮಂತ್ರಮಂ, ಶೃಣು=ಕೇಳು. ॥೬೩॥

ಶ್ಲೋಕ॥ ಪ್ರಕಾರಂಚ ಸ್ಫುಕಾರಂಚ ರಕಾರಂಚ ಸ್ಫುಕಾರಕಮ್ ॥ ॥೬೪॥

ರಕಾರಂ ಚೈವ ವಿನ್ಯಸ್ಯ ಘೋರಂ ಚೈವ ತು ಘೋರಕಮ್ ।
ತಕಾರಂ ಚೈವ ವಿನ್ಯಸ್ಯ ರಕಾರಂ ಚೈವ ವಿನ್ಯಸೇತ್ ॥ ॥೬೫॥

ತಕಾರಂ ಚ ನುಕಾರಂ ಚ ರೂಕಾರಂ ಚ ಪಕಾರಕಮ್ ।
ಚಟಶ್ಚೈವ ಚಟಶ್ಚೈವ ಪ್ರಚಟಃ ಪ್ರಚಟಸ್ತಥಾ ॥

ಸ್ವಾಹಾಶ್ಚೈವ ಸಮಾಯುಕ್ತಂ ಮಂತ್ರೋ ಹೇತಿರುದಾಹೃತಮ್ ॥

ಟೀಕು॥ ಸ್ಫುಕಾರಂ ರಕಾರಂ ಸ್ಫುಕಾರಂ ರಕಾರಂ ಘೋರಂ ಘೋರಂ ತಕಾರಂ ರಕಾರಂ ತಕಾರಂ ನುಕಾರ ರೂಕಾರಮಂ ಪಕಾರಮಂ ಚಟ ಚಟ ಪ್ರಚಟಮುಂ

ಕಹಕಹ, ವಮವಮ, ಘಾತಯ ಘಾತಯ ಹೂ ಘಟ್‌ಕಾರಂಗಳುಮಂ ಉದ್ಧರಿಸುವುದು, ತಱುವಾಯಿಂ ಸ್ವಾಹಾಕಾರಮಂ ಸೇರಿಸಿದೊಡೆ ಪ್ರಸ್ಫುರ ಸ್ಫುರ ಘೋರ ಘೋರತರ ತನುರೂಪ ಚಟಚಟ ಪ್ರಚಟ ಪ್ರಚಟ ಕಹಕಹ ವಮವಮ ಘಾತಯ ಘಾತಯ ಹುಂ ಫಟ್ ಸ್ವಾಹಾ ಎಂಬೀ ಮಂತ್ರಂ ಅಘೋರಾಸ್ತ್ರಮಪ್ಪುದು. ॥೬೭॥

ಶ್ಲೋಕ॥ ಏವಂ ವಿದ್ಯಾಂಗಮಾಖ್ಯಾತಂ ಶಕ್ತ್ಯಂಗಾನಿ ತತಃ ಶೃಣು ।

ಟೀಕು॥ ಭೋ ಷಣ್ಮುಖ!=ಎಲೆ ಕುಮಾರನೆ! ವಿದ್ಯಾಂಗಮಾಖ್ಯಾತಂ=ವಿದ್ಯಾಂಗಗಳು ನಿರೂಪಿಸಲ್ಪಟ್ಟವು, ತತಃ=ನಂತರದಲ್ಲಿ ಶಕ್ತ್ಯಂಗಾನಿ=ಶಕ್ತ್ಯಂಗಗಳಂ, ಶೃಣು=ಕೇಳು.

ಶ್ಲೋಕ॥ ಆಧಾರಂ ಶಕ್ತಿಬೀಜಂ ಚ ಬಿಂದುನಾದ ಸಮನ್ವಿತಮ್ ॥

ಟೀಕು॥ ಆಧಾರಂ ಶಕ್ತಿಬೀಜಂ ಚ=ಆಧಾರನಾಮವನುಳ್ಳ ಸಕಾರಮಂ ಶಕ್ತಿಬೀಜವಪ್ಪ ಆಕಾರದೊಡನೆಯುಂ ಬಿಂದುವಿನೊಡನೆಯುಂ, ಸಮನ್ವಿತಂ=ಕೂಡುವುದು. ಏವಂ ಚ ಪ್ರಥಮಂ ಇತ್ಯುಕ್ತಂ=ಈ ಪರಿಯಿಂದುದ್ಧರಣವಾದ ಸಾಂ ಎಂಬ ಬೀಜಂ ಶಕ್ತ್ಯಂಗಮೆಂದು ಹೇಳಲ್ಪಟ್ಟುದು. ॥೬೯॥

ಶ್ಲೋಕ॥ ಪ್ರಥಮಂ ಬೀಜಮಿತ್ಯುಕ್ತಂ ದ್ವಿತೀಯಂ ಬೀಜಮುಚ್ಯತೇ ।

ಟೀಕು॥ ಪ್ರಥಮಂ ಬೀಜಂ ಇತ್ಯುಕ್ತಂ=ಹೀಂಗೆ ಪ್ರಥಮ ಬೀಜಂ ಹೇಳಲ್ಪಟ್ಟುದು, ದ್ವಿತೀಯಂ ಬೀಜಮುಚ್ಯತೇ=ತಱುವಾಯಿಂದಂ, ದ್ವಿತೀಯ ಬೀಜಂ ಉಚ್ಯತೇ=ದ್ವಿತೀಯ ಬೀಜವುಂ ಹೇಳಲ್ಪಡುವುದು. ॥೭೦॥

ಶ್ಲೋಕ॥ ಪೀತಾಭಯುಕ್ ಶಕ್ತಿಬೀಜಂ ಬಿಂದುನಾದಸಮಾಯುತಮ್ ।

ಟೀಕು॥ ಪೀತಾಭಯುಕ್=ಈ ಕಾರಮುಂ ಸಕಾರಮುಂ, ಬಿಂದುನಾದ ಸಮಾಯುತಂ= ಬಿಂದುವಿನೊಡನೆ ಕೂಡಿಹುದು, ಹೀಂಗೆ ಕೂಟವಮಾಡಿದೊಡೆ ಸೀಂ ಎಂಬ ವರ್ಣ ವಹುದು. ಆ ಈ ವರ್ಣಂ ಎರಡನೆಯ ಶಕ್ತ್ಯಂಗಬೀಜವೆಂದು ಹೇಳಲ್ಪಡುವುದು. ॥೭೧॥

ಶ್ಲೋಕ॥ ದ್ವಿತೀಯಂ ಬೀಜಮಿತ್ಯುಕ್ತಂ ತೃತೀಯಂ ಬೀಜಮುಚ್ಯತೇ ।

ಟೀಕು॥ ದ್ವಿತೀಯ ಬೀಜಮಿತ್ಯುಕ್ತಂ=ದ್ವಿತೀಯ ಬೀಜಂ ಹೇಳಲ್ಪಟ್ಟುದು, ತೃತೀಯಂ ಬೀಜ ಉಚ್ಯತೇ=ತಱುವಾಯಿಂದಂ, ತೃತೀಯ ಬೀಜಂ ನಿರೂಪಿಸಲ್ಪಡುವುದು. ॥೭೨॥

ಶ್ಲೋಕ॥ ಊಕಾರಂ ಶಕ್ತಿ ಬೀಜಂ ಚ ಬಿಂದುನಾದಸಮನ್ವಿತಮ್ ।

ಟೀಕು॥ ಊಕಾರಂ ಶಕ್ತಿ ಬೀಜಂ ಚ=ಊಕಾರಮುಂ ಸಕಾರಮುಂ, ಬಿಂದು ನಾದಸಮನ್ವಿತಂ=ಬಿಂದುವ ಕೂಡಿಹುದು, ಹೀಂಗೆ ಕೂಟಮಾದೊಡೆ ಸೂಂ ಎಂಬ

ವರ್ಣಮಹುದು, ಆ ಈ ವರ್ಣಂ ತೃತೀಯ ಶಕ್ತ್ಯಂಗಬೀಜವೆಂದು ನುಡಿಯಲ್ಪಡುತ್ತಿಹುದು. ॥೭೩॥

ಶ್ಲೋಕ॥ ತೃತೀಯಂ ಬೀಜಮಿತ್ಯುಕ್ತಂ ಚತುರ್ಥಂ ಬೀಜಮುಚ್ಯತೇ ॥

ಟೀಕು॥ ತೃತೀಯಂ ಬೀಜಮಿತ್ಯುಕ್ತಂ=ಹೀಂಗೆ ತೃತೀಯ ಶಕ್ತ್ಯಂಗ ಬೀಜವೆಂದು ನುಡಿಯಲ್ಪಟ್ಟುದು, ಚತುರ್ಥಂ ಬೀಜಂ ಉಚ್ಯತೇ=ನಾಲ್ಕನೆಯ ಶಕ್ತ್ಯಂಗಬೀಜವುಂ ನುಡಿಯಲ್ಪಡುವುದು. ॥೭೪॥

ಶ್ಲೋಕ॥ ಐಕಾರಂ ಶಕ್ತಿಸಂಯುಕ್ತಂ ಕಾರ್ಯಕಾರಣಸಂಯುತಮ್ ।

ಟೀಕು॥ ಐಕಾರಂ ಶಕ್ತಿಸಂಯುಕ್ತಂ=ಸಕಾರಮುಂ ಐಕಾರಮುಮನುದ್ಧರಿಸಿ, ಕಾರ್ಯಕಾರಣ ಸಂಯುತಂ=ಬಿಂದುವಿನೊಡನೆ ಕೂಡಲ್ಪಟ್ಟಿಹುದು, ಹೀಂಗೆ ಕೂಟಮಾದೊಡೆ ಸೈಂ ಎಂಬ ವರ್ಣೋದ್ಧರಣವಹುದು. ಆ ಈ ಧೃತ ಬೀಜಂ ನಾಲ್ಕನೆಯ ಶಕ್ತ್ಯಂಗ ಬೀಜ ವೆಂದು ನುಡಿಯಲ್ಪಟ್ಟುದು. ॥೭೫॥

ಶ್ಲೋಕ॥ ಚತುರ್ಥಂ ಬೀಜಮಿತ್ಯುಕ್ತಂ ಪಂಚಮಂ ಬೀಜಮುಚ್ಯತೇ ।

ಟೀಕು॥ ಚತುರ್ಥಂ ಬೀಜಮಿತ್ಯುಕ್ತಂ=ನಾಲ್ಕನೆಯ ಶಕ್ತ್ಯಂಗಬೀಜಂ ನಿರೂಪಿಸಲ್ಪಟ್ಟುದು, ಪಂಚಮಂ ಬೀಜಂ ಉಚ್ಯತೇ=ಐದನೆಯ ಶಕ್ತ್ಯಂಗಬೀಜಂ ಹೇಳಲ್ಪಡುವುದು. ॥೭೬॥

ಶ್ಲೋಕ॥ ಶಕ್ತಿಶ್ಚತುರ್ದಶೋಪೇತಾ ಶಿವಶಕ್ತಿ ಸಮಾಯುತಾ ।

ಟೀಕು॥ ಶಕ್ತಿಃ ಚತುರ್ದಶೋಪೇತಾ=ಸಕಾರಮುಂ ಚತುರ್ದಶಸ್ವರಮುಂ ಶಿವಶಕ್ತಿಸಮೋಪೇತಾ=ಬಿಂದುವಿನೊಡನೆ ಕೂಟಮಾಗಿಹುದು. ಹೀಂಗೆ ಕೂಟಮಾದೊಡೆ ಸೌಂ ಎಂಬ ವರ್ಣವಹುದು. ಆ ಈ ವರ್ಣಂ ಐದನೆಯ ಶಕ್ತ್ಯಂಗಬೀಜವೆಂದು ನುಡಿಯಲ್ಪಡುತ್ತಿಹುದು. ॥೭೭॥

ಶ್ಲೋಕ॥ ಪಂಚಮಂ ಬೀಜಮಿತ್ಯುಕ್ತಂ ಷಷ್ಠಂ ಬೀಜಮಥೋಚ್ಯತೇ

ಇತಿ ಪಂಚಮಂ ಬೀಜಂ ಉಕ್ತಂ=ಹೀಂಗೆ ಐದನೆಯ ಶಕ್ತ್ಯಂಗ ಬೀಜಂ ಉಕ್ತವಾದುದು, ಅಥ=ತಱುವಾಯಿಂದೆ, ಷಷ್ಠಂ ಬೀಜಂ=ಆಱನೆಯ ಶಕ್ತ್ಯಂಗ ಬೀಜವು, ಉಚ್ಯತೇ= ನಿರೂಪಿಸಲ್ಪಡುವುದು. ॥೭೮॥

ಶ್ಲೋಕ॥ ಸ್ವರಾಂತಂ ಶಕ್ತಿಸಂಯುಕ್ತಂ ವರ್ಣೇನೈವ ತು ಸಂಯುತಮ್ ।

ಟೀಕು॥ ಸ್ವರಾಂತಂ ಶಕ್ತಿಸಂಯುಕ್ತಂ=ಸ್ವರಾಂತಮಪ್ಪವಿಸರ್ಗಂ, ವರ್ಣೇನೈವತು ಸಂಯುತಂ=ಸಕಾರದೊಡನೆ ಕೂಡಿಹುದು. ಹೀಂಗೆ ಸಕಾರಮಂ ಅಕಾರಂ

ವಿಸರ್ಗಗಳೊಡನೆ ಕೂಟವಾದೊಡೆ ಸಃ ಎಂದು ಷಷ್ಠಶಕ್ತ್ಯಂಗಬೀಜವೆಂದು ಹೇಳಲ್ಪಡುತ್ತಿಹುದು. ॥೭೯॥

ಶ್ಲೋಕ॥ ಏತೇ ಶಕ್ತ್ಯಂಗಮಾಖ್ಯಾತಂ ಸಾಮಾನ್ಯಾಂಗಮಥೋಚ್ಯತೇ ।

ಟೀಕು॥ ಏತೇ ಶಕ್ತ್ಯಂಗಂ ಆಖ್ಯಾತಂ=ಪೂರ್ವ ಶ್ಲೋಕೋದ್ಧರಣಮಾದ ರೇಫರಹಿತಮಾದ ಸಾಂ ಸೀಂ ಸೂಂ ಸೌಂ ಸಃ ಎಂದುಂ ತಾಂತ್ರಿಕಂ, ರೇಫಸಹಿತಮಾದ ಸ್ರಾಂ ಸ್ರೀಂ ಸ್ರೂಂ ಸ್ರೌಂ ಸ್ರಃ ಎಂದುಂ ವೈದಿಕಂ. ಹೀಂಗೆ ಶಿವಾಂಗ ವರ್ಣಂಗಳೇ ಶಕ್ತ್ಯಂಗ ವರ್ಣಂಗಳೆಂದುಂ ಆಱು ವಿಧಂಗಳಾಗಿ ಹೇಳಲ್ಪಟ್ಟವು. ಅಥ=ತಱುವಾಯಿಂದೆ, ಸಾಮಾನ್ಯಾಂಗಂ=ಸಾಮಾನ್ಯಂಗವುಂ,ಉಚ್ಯತೇ=ನುಡಿಯಲ್ಪಡುವುದು. ॥೮೦॥

ಶ್ಲೋಕ॥ ಆದಿವರ್ಗೇಽಶ್ವಿನೌ ವೇದಾಃ ರಸೋಭಾನುರ್ಮನುಸ್ತಥಾ ।
ಷೋಡಶಾರ್ಣಂ ಷಡೇತೇ ಚ ಸಾಮಾನ್ಯಾಂಗಮಿತೀರ್ಯತೇ ॥

ಟೀಕು॥ ಆದಿವರ್ಗೇ=ಪ್ರಥಮ ವರ್ಗವಾದ ಸ್ವರವರ್ಗದಲ್ಲಿಯ, ಅಶ್ವಿನೌ=ಪಕ್ಷಸ್ವರಾಕ್ಷರವುಂ, ವೇದ=ನಾಲ್ಕನೆಯ ಸ್ವರವರ್ಣವುಂ, ರಸಂ=ಆಱನೆಯ ಸ್ವರವರ್ಣವುಂ, ತಥಾ=ಹಾಂಗೆ, ಭಾನು=ದ್ವಾದಶ ಸ್ವರವರ್ಣವುಂ, ಚ=ಹಾಗೂ, ಷೋಡಶಾರ್ಣಂ=ಹದಿನಾಱನೆಯ ಸ್ವರವುಂ ಎಂಬ ಆ ಈ ಊ ಐ ಔ ಅಃ ಎಂಬೀ ವಿಕೃತಿ ವರ್ಣಂಗಳ ಸ್ವರಂಗಳಾಱು ಸಮಸ್ತ ದೇವತೆಗಳಿಗೆ, ಸಾಮಾನ್ಯಾಂಗಂ ಇತಿ=ಸಮಾನತ್ವಮಾದ ಅಂಗವೆಂದು, ಈರ್ಯತೇ=ನುಡಿಯಲ್ಪಡುತ್ತಿಹುದು. ॥೮೧॥

ಶ್ಲೋಕ॥ ಬ್ರಹ್ಮವಿಷ್ಣುಸುರೇಂದ್ರಾಶ್ಚ ಆದಿತ್ಯೇಂದು ಗುಹಾಸ್ತಥಾ ।
ಮದನೋ ಕ್ಷೇತ್ರ ವಿಘ್ನೇಶಾಶ್ಚಾಷ್ಟಮೂರ್ತಿರ್ವಸುಸ್ತಥಾ ॥

ವಿದ್ಯೇಶಾಶ್ಚ ಗಣೇಶಾಶ್ಚ ಲೋಕಪಾಲಾಯುಧಾನಿ ಚ ।
ಸಿದ್ಧವಿದ್ಯಾಧರಶ್ಚೈವ ಲೋಕಪಾಲಾಯುಧಸ್ತಥಾ ॥

ಶ್ಲೋಕ॥ ಯಕ್ಷಕಿನ್ನರಭೂತಾಶ್ಚ ಋಷಯಃ ಖೇಚರಾಸ್ತಥಾ ।

ಅರ್ಥ॥ ಬ್ರಹ್ಮ ವಿಷ್ಣು ದೇವೇಂದ್ರ ಆದಿತ್ಯ ಚಂದ್ರಮ ಷಣ್ಮುಖ ಮದನ ಕ್ಷೇತ್ರಪಾಲ ವಿಘ್ನೇಶ್ವರರೆಂಬ ಆ ಈ ದೇವತೆಗಳು, ಭವಾದ್ಯಷ್ಟ ಮೂರ್ತಿಗಳುಂ, ಶ್ರೀಕಣ್ಠಾದ್ಯಷ್ಟ ವಿದ್ಯೇಶ್ವರರುಂ, ಉಮಾದಿ ಗಣೇಶ್ವರರುಂ, ಇಂದ್ರಾದಿ ಲೋಕಪಾಲರುಗಳುಂ, ವಜ್ರಾದ್ಯಾಯುಧಂಗಳುಂ, ಯಕ್ಷಕಿನ್ನರ ಭೂತಂಗಳುಂ ಸಪ್ತ ಋಷಿಗಳುಂ, ಗಗನಗಾಮಿಗಳಾದ ದೇವತೆಗಳುಂ ಈ ಸಮಸ್ತರುಂ ॥೮೪॥

ಶ್ಲೋಕ॥ **ಅನ್ಯೇಷಾಂ ಸರ್ವದೇವಾನಾಂ ಸ್ವನಾಮಾದ್ಯಕ್ಷರಂ ತಥಾ ।**

ಟೀಕು॥ ಅನ್ಯೇಷಾಂ ಈ ಪೂರ್ವ ಶ್ಲೋಕೋಕ್ತವಾದ ಬ್ರಹ್ಮಾದಿಗಳಲ್ಲದೆ ಮತ್ತೆ ಕೆಲವು ದೇವತಾನಾಮವನುಳ್ಳ, ಸರ್ವದೇವಾನಾಂ=ಸಮಸ್ತ ದೈವಗಳುಂ, ತಥಾ=ಹಾಂಗೆ, ಸ್ವನಾಮಾದ್ಯಕ್ತರಂ=ತಮ್ಮ ತಮ್ಮ ಹೆಸರುಗಳುಂಟು ಹಾಂಗಪ್ಪ ಅಭಿಧಾನಂಗಳ ಮೊದಲಕ್ಷರವು. ॥೮೫॥

ಶ್ಲೋಕ॥ **ಸಾಮಾನ್ಯೇಷು ಸಮಾಯೋಗಾದ್ಬಿಂದುನಾದಸಮನ್ವಿತಮ್ ।**
ತೇಷಾಮಂಗಾನಿ ಚೋಕ್ತಾನಿ ಮೂಲಂ ತದ್ಬೀಜಮುಚ್ಯತೇ ॥

ಟೀಕು॥ ಸಾಮಾನ್ಯೇಷು ಸಮಾಯೋಗಾತ್=ಸಾಮಾನ್ಯಾಂಗವಾಣಿರಲ್ಲಿ ಕೂಡುವದೆಸೆಯಿಂದ, ಬಿಂದುಸಮನ್ವಿತಂ=ಬಿಂದುವುಂ ಕೂಡಿಕೊಂಡಿಹುದು. ತೇಷಾಮಂಗಾನಿ ಚೋಕ್ತಾನಿ=ಹೀಂಗೆ ಷಟ್‌ಸ್ವರ ಸಂಯುತವಾದ ಎಲ್ಲಾ ದೇವತೆಗಳ ನಾಮಂಗಳ ಮೊದಲಕ್ಷರಂಗಳು ಆಯಾ ಎಲ್ಲಾ ದೇವತಾಂಶಗಳೆಂದು ನುಡಿಯಲ್ಪಟ್ಟವು, ಮೂಲಂತದ್ಬೀಜಮುಚ್ಯತೇ=ಆಯಾದೇವತಾಬೀಜಂಗಳೆ ಮೂಲಬೀಜವೆಂದು ಹೇಳಲ್ಪಡುವುದು. ಈ ದೇವತಾಂಗಗಳಪ್ಪ ಯೋಗಾನುಮಾನಂಗಳು ಹೀಂಗೆಯೆ ಎಂದರೆ ವರ್ಣಪಟಲದಲ್ಲಿ ಪ್ರೋಕ್ತವಾದ ತತ್ತದ್ದೇವತಾ ಬೀಜಂಗಳಲ್ಲಿ ಸಾಮಾನ್ಯಾಂಗ ವರ್ಣಂಗಳಂ ಪ್ರಯೋಗಿಸುವ ತತ್ಪ್ರಯೋಗಂ. ಬ್ರಹ್ಮಬೀಜಂ=ಕಾಂ ಕೀಂ ಕೂಂ ಕೈಂ ಕೌಂ ಕಃ ಎಂದು ಹೀಂಗೆ ಬ್ರಹ್ಮಾಂಗಬೀಜಮಂತ್ರಮಂ ಪ್ರಯೋಗಿಸುವುದು. ಇಂದ್ರಬೀಜಂ=ಜಕಾರಂ ಇಂದ್ರಬೀಜಂ, ಸಾಮಾನ್ಯಾಂಗ ವರ್ಣಂಗಳಂ ಸೇರಿಸಿದೊಡೆ ಜಾಂ ಜೀಂ ಜೂಂ ಜೈಂ ಜೌಂ ಜಃ ಎಂದು ಹೀಂಗೆ ಸುರೇಂದ್ರಾಂಗಮಂತ್ರಮಂ ಪ್ರಯೋಗಿಸುವುದು. ಸೂರ್ಯಬೀಜಂ=ಷಕಾರಂ, ಸಾಮಾನ್ಯಾಂಗ ವರ್ಣಂಗಳಂ ಸೇರಿಸಿದೊಡೆ ಷಾಂ ಷೀಂ ಷೂಂ ಷೈಂ ಷೌಂ ಷಃ ಎಂದು ಹೀಂಗೆ ಸೂರ್ಯಾಂಗ ಮಂತ್ರಮಂ ಪ್ರಯೋಗಿಸುವುದು. ಚಂದ್ರಬೀಜಂ=ಠಕಾರಂ ಚಂದ್ರ ಬೀಜಂ, ಸಾಮಾನ್ಯಾಂಗ ವರ್ಣಂಗಳಂ ಸೇರಿಸಿದೊಡೆ ಠಾಂ ಠೀಂ ಠೂಂ ಠೈಂ ಠೌಂ ಠಃ ಎಂದು ಚಂದ್ರಾಂಗಮಂತ್ರಮಂ ಪ್ರಯೋಗಿಸುವುದು. ಮನ್ಮಥಬೀಜಂ=ಮಕಾರಂ ಮದನ ಬೀಜಂ, ಸಾಮಾನ್ಯಾಂಗ ವರ್ಣಂಗಳಂ ಸೇರಿಸಿದೊಡೆ ಮಾಂ ಮೀಂ ಮೂಂ ಮೈಂ ಮೌಂ ಮಃ ಎಂದು ಮದನಾಂಗಬೀಜಮಂತ್ರಮಂ ಪ್ರಯೋಗಿಸುವುದು. ಕ್ಷೇತ್ರಪಾಲ ಬೀಜಂ=ಕ್ಷ ಎಂಬ ವರ್ಣಂ ಕ್ಷೇತ್ರಪಾಲವರ್ಣಂ, ಕ್ಷಾಂ ಕ್ಷೀಂ ಕ್ಷೂಂ ಕ್ಷೈಂ ಕ್ಷೌಂ ಕ್ಷಃ ಎಂದು ಹೀಂಗೆ ಕ್ಷೇತ್ರಪಾಲಾಂಗ ಮಂತ್ರಮಂ ಪ್ರಯೋಗಿಸುವುದು, ವಿಘ್ನಬೀಜಂ=ಗ ಎಂಬ ವರ್ಣಂ ವಿಘ್ನವರ್ಣಂ, ಗಾಂ ಗೀಂ ಗೂಂ ಗೈಂ ಗೌಂ ಗಃ ಎಂದು ಹೀಂಗೆ ಗಣೇಶ್ವರಾಂಗ ಮಂತ್ರಮಂ ಪ್ರಯೋಗಿಸುವುದು, ಸ್ವರವರ್ಣಾಭಿಧಾನಮೆಂದೊಡಂ

ಮೂಲ ಬೀಜವೆಂದು ಪ್ರಯೋಗಿಸುವುದು. ಇವು ಮೊದಲಾದ ದೇವತಾಂಗ ಬೀಜಂಗಳಂ ಅಂಗಮಂತ್ರಂಗಳಂ ಕೂಡಿಕೊಂಡು ಆಯಾ ಅಂಗಮಂತ್ರಂಗಳಿಂದ ಆಯಾದೇವತಾಮಂತ್ರಗಳಂ ಜಪಿಸುವ ಮೊದಲಲ್ಲಿ ಅಂಗನ್ಯಾಸ ಕರನ್ಯಾಸ ದೇಹನ್ಯಾಸ ಗಳೆಂಬ ನ್ಯಾಸತ್ರಯಂಗಳನಾಚರಿಸುವುದು. ಅನಂತರದಲ್ಲಿ ಷಟ್ತ್ರಿಂಶದಂಗಂಗಳ ವರ್ಣಂಗಳು ಹೇಳಲ್ಪಡುವುದು. ॥೮೭॥

ಶ್ಲೋಕ॥ ಹೃದಯಂ ಶುಕ್ಲವರ್ಣಂ ಸ್ಯಾತ್ಪೀತವರ್ಣಂ ಶಿರಸ್ತಥಾ ।
ಶಿಖಾಂ ರಕ್ತಸಮಾಂ ವಿದ್ಯಾತ್ಕವಚಂ ಸ್ಫಟಿಕಪ್ರಭಮ್ ॥

ಟೀಕು॥ ಶಿವಾಂಗ ಹೃದಯಂ=ಶಿವಾಂಗ ಹೃದಯ ಮಂತ್ರಂ, ಶುಕ್ಲವರ್ಣಂ ಸ್ಯಾತ್=ಶುಕ್ಲವರ್ಣವಹುದು, ತಥಾ=ಹಾಂಗೆ, ಶಿರಃ=ಶಿರೋಮಂತ್ರಂ, ಪೀತವರ್ಣಂ=ಪೀತವರ್ಣವಹುದು, ಶಿಖಾಂ=ಶಿಖೆಯುಂ, ರಕ್ತಸಮಾಂ=ರಕ್ತಸಮವೆಂದು ವಿದ್ಯಾತ್=ಅಱಿವುದು, ಕವಚಂ=ಕವಚಮಂತ್ರಂ, ಸ್ಫಟಿಕಪ್ರಭಂ=ಸ್ಫಟಿಕವರ್ಣವನುಳ್ಳದು.

ಶ್ಲೋಕ॥ ನೇತ್ರಂ ಶ್ಯಾಮನಿಭಂ ವಿದ್ಯಾತ್ ಕೃಷ್ಣಾಭಂ ಚಾಸ್ತ್ರಮುಚ್ಯತೇ
ಏವಂ ಶಿವಾಂಗಮಾಖ್ಯಾತಂ ಭೂತಾಂಗಂ ಚ ತಥೋಚ್ಯತೇ ॥

ಟೀಕು॥ ನೇತ್ರಂ=ನೇತ್ರಾಂಗಮಂತ್ರಂ, ಶ್ಯಾಮನಿಭಂ=ಕಪ್ಪುವರ್ಣವನುಳ್ಳದಾಗಿಹುದೆಂದು, ವಿದ್ಯಾತ್=ಅಱಿವುದು, ಅಸ್ತ್ರಂ=ಅಸ್ತ್ರಾಂಗಮಂತ್ರಂ, ಕೃಷ್ಣಾಭಂ=ಕೃಷ್ಣವರ್ಣವನುಳ್ಳದೆಂದು, ಉಚ್ಯತೇ=ಹೇಳಲ್ಪಡುವುದು, ಏವಂ=ಈ ಪ್ರಕಾರದಿಂದೆ, ಶಿವಾಂಗಂ=ಶಿವಾಂಗ ವರ್ಣಂ, ಆಖ್ಯಾತಂ=ಹೇಳಲುಪಟ್ಟುದು, ತಥಾ=ಹಾಂಗೆಯೇ, ಭೂತಾಂಗಂ ಚ=ಭೂತಾಂಗಗಳುಂ ಉಚ್ಯತೇ=ಹೇಳಲ್ಪಡುವುದು. ॥೮೯॥

ಶ್ಲೋಕ॥ ಪೀತಂ ಶುಕ್ಲನಿಭಂ ರಕ್ತಂ ಕೃಷ್ಣಂ ಧೂಮ್ರಂ ಚ ಪಾವಕಮ್ ।
ಭೂತಾಂಗಾನಾಂ ವರ್ಣಭೇದಾಃ ಸಮಾಸಾತ್ ಪರಿಕೀರ್ತಿತಾಃ ॥

ಟೀಕು॥ ಪೀತಂ=ಭೂತಾಂಗ ಹೃದಯವರ್ಣಂ ಪೀತವರ್ಣವಾಗಿಹುದು, ಶುಕ್ಲಂ=ಶಿರೋವರ್ಣಂ ಶುಕ್ಲವರ್ಣವಾಗಿಹುದು, ಅರುಣಂ=ಶಿಖಾವರ್ಣಂ ಅರುಣವರ್ಣ ವುಳ್ಳದು, ಚ ಏವಂ=ಹಾಂಗೆಯೆ, ಕೃಷ್ಣಂ=ಕವಚ ವರ್ಣಂ ಕೃಷ್ಣಂ, ಧೂಮ್ರಂ=ನೇತ್ರವರ್ಣಂ ಧೂಮ್ರ ವರ್ಣಂ, ಪಾವಕಂ ಚ=ಅಸ್ತ್ರವರ್ಣವಾಯಿತ್ತಾದೊಡೆ ಅಗ್ನಿವರ್ಣ ಮೆಂದು ಹೇಳಲುಪಟ್ಟುದು, ಈ ಆಱು ವರ್ಣಂಗಳು, ಭೂತಾಂಗಾನಾಂ ವರ್ಣಾನಾಂ=ಭೂತಾಂಗವಾಱರ ವರ್ಣಂಗಳೆಂದು, ಪರಿಕೀರ್ತಿತಾಃ=ಹೇಳಲ್ಪಟ್ಟವು.

ಶ್ಲೋಕ॥ ಶ್ವೇತಂ ರಕ್ತಂ ತಥಾ ನೀಲಂ ಕುಂಕುಮಂ ಪೀತಮಂಜನಮ್ ।
ಕೂಟಾಂಗಾನಾಂ ತು ವರ್ಣಾಶ್ಚ ಸಮಾಸಾತ್ ಪರಿಕೀರ್ತಿತಾಃ ॥

ಟೀಕು॥ ಶ್ವೇತಂ=ಕೂಟಾಂಗ ಹೃದಯ ವರ್ಣಂ ಶ್ವೇತವರ್ಣಂ, ರಕ್ತಂ=ಶಿರೋವರ್ಣಂ ರಕ್ತವರ್ಣಂ, ತಥಾ=ಹಾಂಗೆ, ನೀಲಂ=ಶಿಖಾ ವರ್ಣಂ ನೀಲವರ್ಣಂ, ಕುಂಕುಮಂ= ಕವಚವರ್ಣಂ ಕುಂಕುಮ ವರ್ಣಂ, ಪೀತಂ=ನೇತ್ರ ವರ್ಣಂ ಪೀತಮುಮಂ ಅಂಜನ ವರ್ಣಂಗಳುಮುಮೆಂದು ಕೂಟಾಂಗವಾಱಿರ ವರ್ಣಂಗಳೆಂದು, ಪರಿಕೀರ್ತಿತಾಃ= ಹೇಳಲುಪಟ್ಟವು. ॥೯೧॥

ಶ್ಲೋಕ॥ ಜಪಾಕುಸುಮಕುಂದಾಭಂ ಪಾವಕಂ ಚೇಂದ್ರ ನೀಲಕಮ್ ।
ಸಿಂಧೂರಂ ಹರಿತಾಲಂ ಚ ವಿದ್ಯಾಂಗಾನಾಮನುಕ್ರಮಾತ್ ॥

ಟೀಕು॥ ಜಪಾಕುಸುಮ=ವಿದ್ಯಾಂಗ ಹೃದಯವರ್ಣಂ ದಾಸವಾಣ ಹೂವಿನ ವರ್ಣವಹುದು, ಕುಂದಾಭಂ=ಶಿರೋವರ್ಣಂ ಕುಂದಕುಸುಮವರ್ಣವಹುದು, ಪಾವಕಂ ಚ=ಶಿಖಾವರ್ಣವಾಯಿತ್ತಾದೊಡೆ ಅಗ್ನಿ ವರ್ಣಂ, ಇಂದ್ರ ನೀಲಕಂ=ಕವಚ ವರ್ಣಂ ಇಂದ್ರನೀಲಮಣಿಯ ವರ್ಣವಹುದು, ಸಿಂಧೂರಂ=ನೇತ್ರವರ್ಣಂ ಸಿಂಧೂರವರ್ಣ ವಹುದು, ಹರಿತಾಲಂ ಚ=ಅಸ್ತ್ರ ವರ್ಣವಾಯಿತ್ತಾದೊಡೆ ಹರಿತಾಲ ವರ್ಣವಹುದು, ಅನುಕ್ರಮಾವಾಗಿಂತಿವರ ಷಡ್ವರ್ಣಂಗಳು, ವಿದ್ಯಾಂಗಾನಾಂ=ವಿದ್ಯಾಂಗಂಗಳ ವರ್ಣಂ ಗಳೆಂದು ಹೇಳಲುಪಟ್ಟವು. ॥೯೨॥

ಶ್ಲೋಕ॥ ಪೀತಂ ಶ್ಯಾಮಂ ತಥಾ ರಕ್ತಂ ಕೃಷ್ಣಂ ಮರಕತಂ ತಥಾ ।
ಏತೈರೇವ ಸವರ್ಣಾನಿ ಶಕ್ತ್ಯಂಗಾನಾಂ ಕ್ರಮೇಣ ತು ॥

ಟೀಕು॥ ಶಕ್ತ್ಯಂಗದ ಹೃದಯ ವರ್ಣಂ ಆಕಾಶವರ್ಣವುಂ, ಶಿರೋವರ್ಣಂ= ರಕ್ತ ವರ್ಣಂ, ಶಿಖಾವರ್ಣಂ=ಪೀತವರ್ಣ, ಕವಚವರ್ಣಂ=ಶ್ಯಾಮವರ್ಣ, ನೇತ್ರವರ್ಣಂ= ಕೃಷ್ಣವರ್ಣ, ಹಾಂಗೆಯೆ ಅಸ್ತ್ರವರ್ಣಂ=ಪಚ್ಚೆಯ ವರ್ಣಂಗಳೆಂಬೀಯಾಱು ವರ್ಣಂ ಗಳೆಂದು ಹೇಳಲ್ಪಟ್ಟುವು.

ಶ್ಲೋಕ॥ ಸ್ಫಟಿಕಂ ರಕ್ತಪೀತಂ ಚ ಶ್ಯಾಮಂ ಸ್ಯಾತ್ಕಾಂಚನಾರುಣೇ ।
ಏತಾನ್ಯುಕ್ತಾನಿ ವರ್ಣಾನಿ ಸಾಮಾನ್ಯಾಂಗಮುದೀರಿತಮ್ ॥

ಟೀಕು॥ ಸಾಮಾನ್ಯಾಂಗ ಹೃದಯ ವರ್ಣಂ ಸ್ಫಟಿಕವರ್ಣ, ಶಿರೋವರ್ಣಂ ರಕ್ತವರ್ಣ, ಶಿಖಾವರ್ಣಂ ಪೀತವರ್ಣ, ಕವಚವರ್ಣಂ ಶ್ಯಾಮವರ್ಣ, ನೇತ್ರವರ್ಣಂ ಕಾಂಚನ ವರ್ಣ ಹಾಂಗೆಯೆ ಅಸ್ತ್ರವರ್ಣ ಅರುಣವರ್ಣವೆಂಬೀ ಆಱುವರ್ಣಂಗಳು ಈ ವರ್ಣಭೇದವನುಳ್ಳುದು ಸಾಮಾನ್ಯಾಂಗವೆಂದು ಹೇಳಲ್ಪಟ್ಟುದು. ॥೯೪॥

ಶ್ಲೋಕ॥ ಚತುರ್ಭುಜಂ ತ್ರಿಣೇತ್ರಂ ಚ ಜಟಾಮಕುಟಮಂಡಿತಮ್ ।
ಸರ್ವಲಕ್ಷಣ ಸಂಯುಕ್ತಂ ಸರ್ವಾಭರಣಭೂಷಿತಮ್ ॥

ತ್ರಿಶೂಲಮಭಯಂ ಸವ್ಯೇ ಕಪಾಲಂ ವರಮನ್ಯಕೇ ।
ಹಾರಕೇಯೂರ ಸಂಯುಕ್ತಂ ಕಟಕೈಃ ಕುಣ್ಡಲೈರ್ಯುತಮ್ ॥

ಹೃದಾದಿವರ್ಣ ಪರ್ಯಂತಂ ಸ್ವರೂಪಂ ಸೌಮ್ಯಮುಚ್ಯತೇ ॥

ಟೀಕು॥ ನಾಲ್ಕುಭುಜ ಮೂಱು ನೇತ್ರಂಗಳನುಳ್ಳಂಥ ಜಟಾಮಕುಟದಿಂದೊಪ್ಪುವಂಥ, ಸರ್ವಲಕ್ಷಣಂಗಳೊಡನೆ ಕೂಡಿದಂಥ, ಸಮಸ್ತಾಭರಣಂಗಳಿಂದ ಭೂಷಿತವಾದಂಥ, ತ್ರಿಶೂಲಾಭಯಂಗಳಂ ಬಲದ ಹಸ್ತದಲ್ಲಿ ಧರಿಸಿದಂಥ, ಕಪಾಲವರದಂಗಳಂ ವಾಮಹಸ್ತದಲ್ಲಿ ಧರಿಸಿದಂಥ, ಹಾರಕೇಯೂರಂಗಳೊಡನೆ ಕೂಡಿದಂಥ, ಕಟಕಕುಂಡಲಂಗಳೊಡನೆ ಸಂಯುತವಾದಂಥ, ಹೃದಯಾದಿ ವರ್ಣಪರ್ಯಾಂತವಾದೀ ಸ್ವರೂಪಂ ಸೌಮ್ಯರೂಪಮೆಂದು ನುಡಿಯಲ್ಪಡುತ್ತಿಹುದು. ॥೯೭॥

ಶ್ಲೋಕ॥ **ಶೇಷಾಃ ರೌದ್ರಕೃತಿರ್ಜ್ಞೇಯಾಃ ಸರ್ವೇಷಾಂ ರೂಪಮೀರಿತಮ್ ॥**

ಟೀಕು॥ ಉಳಿದವು ರುದ್ರಸಂಬಂಧವಾದಂಥವೆಂದಱಿಯಬೇಕಾದುದು. ಈ ಪ್ರಕಾರದಿಂದೆ ಸಮಸ್ತಾಂಗಂಗಳ ಸ್ವರೂಪಂ ಹೀಂಗೆ ಹೇಳಲ್ಪಟ್ಟವು. ॥೯೮॥

ಶ್ಲೋಕ॥ **ಶಿವಾಂಗೈಸ್ತು ಯಜೇದ್ದೇವಂ ಸ್ಥಾಪನಾದೀನಿ ಸರ್ವಶಃ ।**

ಟೀಕು॥ ಶಿವಾಂಗಂಗಳಿಂದೆ ಪರಮೇಶ್ವರನಂ ಪೂಜಿಸುವುದು. ಎಲ್ಲಾ ಪ್ರತಿಷ್ಠಾಪನಾದಿ ಕ್ರಿಯೆಗಳಂ ಮಾಡುವುದು. ॥೯೯॥

ಶ್ಲೋಕ॥ **ಭೂತಾಂಗೈಶ್ಚೈವ ಷಡ್ವಕ್ತ್ರ ಪಾದಾದೇಃ ಭೂತಶೋಧನಮ್ ।**
ಅಣೌ ನಾಮಾನಿ ಸಂಯೋಜ್ಯ ಭೂತಾಂಗೇಷು ಸಮಾಚರೇತ್ ॥

ಟೀಕು॥ ಎಲೆ ಕುಮಾರನೆ! ಭೂತಾಂಗಂಗಳಲ್ಲಿ ಪಾದಾದಿಯಾಗಿ ಮಸ್ತಕ ಪರ್ಯಂತರ ಪಂಚಭೂತ ಶುದ್ಧಿಯಂ ಮಾಡುವುದು. ಮತ್ತೆಯೂ ಭೂತಾಂಗಂಗಳಲ್ಲಿಯೇ ಆ ಭೂತ ಶುದ್ಧಿಯಂ ಮಾಡುವ ಮಂತ್ರಂಗಳಲ್ಲಿ ಭೂತನಾಮಂಗಳಂ ಪ್ರಯೋಗಿಸಿ ಮಂತ್ರೋಚ್ಚಾರಣಮಂ ಮಾಡುವುದು. ॥೧೦೦॥

ಶ್ಲೋಕ॥ **ಕೂಟಾಂಗೈಶ್ಚೈವ ವಿದ್ಯಾಂಗೈಃ ಪ್ರಾಯಶ್ಚಿತ್ತಂತು ಕಾರಯೇತ್ ।**

ಟೀಕು॥ ಕೂಟಾಂಗ ವಿದ್ಯಾಂಗಂಗಳಾಯಿತ್ತಾದೊಡೆ ಶೈವಾಚಾರ್ಯಂ ತನ್ನ ಶೈವವ್ರತಾದಿಗಳ್ಗೆ ಹಾನಿಯಾದೊಡಂ ಶಿಷ್ಯರ ಶೈವವ್ರತಾದಿಗಳ್ಗೆ ಹಾನಿಯಾದೊಡಂ ಆ ವ್ರತಾದಿಗಳ ಶುದ್ಧ್ಯರ್ಥಂ ತತ್ತದುಕ್ತಪ್ರಕಾರದಿಂ ಪ್ರಾಯಶ್ಚಿತ್ತಮಂ ಮಾಡುವುದು, ಮಾಡಿಸುವುದು. ॥೧೦೧॥

ಶ್ಲೋಕ॥ ಶಕ್ತೀನಾಂ ಸ್ಥಾಪನಾಕಾಲೇ ಶಕ್ತ್ಯಂಗೈಸ್ತು ಸಮಾಚರೇತ್ ।

ಟೀಕು॥ ಉಮಾದಿ ಶಕ್ತಿಗಳ ಸ್ಥಾಪನವ ಮಾಡುವ ವೇಳೆಯಲ್ಲಿ ಆಯಾ ಶಕ್ತ್ಯಂಗಂಗಳಿಂದವೇ ಸಮಸ್ತ ಕ್ರಿಯೆಗಳನಾಚರಿಸುವದು. ॥೧೦೨॥

ಶ್ಲೋಕ॥ ಅನ್ಯೇಷಾಂ ಸರ್ವದೇವಾನಾಂ ಸಾಮಾನ್ಯಾಂಗೈಸ್ತುಯೋಜಯೇತ್ ॥

ಟೀಕು॥ ಉಳಿದೆಲ್ಲಾ ದೇವತೆಗಳ ಸ್ಥಾಪನಾದಿಗಳಂ ಸಾಮಾನ್ಯಾಂಗಂಗಳಿಂದ ಪ್ರಯೋಗಿಸುವುದು. ॥೧೦೩॥

ಶ್ಲೋಕ॥ ಏವಂ ಷಡಂಗಮಾಖ್ಯಾಂತಂ ವಿಶೇಷಸ್ತ್ವಧುನೋಚ್ಯತೇ ।

ಟೀಕು॥ ಈ ಪ್ರಕಾರದಿಂ ಷಡಂಗಂ ನುಡಿಯಲ್ಪಟ್ಟುದು. ಆ ಈ ಷಡಂಗಂಗಳೊಳು ಹೃದಯಾಂಗ ವಿಶೇಷವೆಂದು ಹೇಳಲ್ಪಡುವದು. ॥೧೦೪॥

ಶ್ಲೋಕ॥ ಕೇವಲಂ ಜ್ಞಾನಜಂ ಚೈವ ಯೋಗಜಂ ಭೂತಜಂ ತಥಾ ।
ಕಾಮದಂ ಚ ಕ್ರಮೇಣೈವ ಹೃದಯಂ ಪಂಚಧಾ ಭವೇತ್ ॥

ಟೀಕು॥ ಕೇವಲ ಹೃದಯಮೆಂದುಂ, ಜ್ಞಾನಜ ಹೃದಯಮೆಂದುಂ, ಯೋಗಜ ಹೃದಯ ಮೆಂದುಂ, ಭೂತಜ ಹೃದಯಮೆಂದುಂ ಹಾಂಗೆ ಕಾಮದ ಹೃದಯಮೆಂದುಂ ಕ್ರಮದಿಂದವೆ ಹೃದಯಾಂಗವೈದು ಪ್ರಕಾರವಹುದು. ॥೧೦೫॥

ಶ್ಲೋಕ॥ ಶಿವಾಂಗಂ ಹೃದಯಂ ಯತ್ತು ಕೇವಲಂ ಸಮುದಾಹೃತಮ್ ।

ಟೀಕು॥ ಆವುದಾನೊಂದು ಪೂರ್ವೋಕ್ತವಾದ ಶಿವಾಂಗ ಹೃದಯವುಂಟು ಆ ಹೃದಯ ಕೇವಲ ಹೃದಯಮೆಂದು ಹೇಳಲ್ಪಟ್ಟುದು. ॥೧೦೬॥

ಶ್ಲೋಕ॥ ಸಾಂತಯಾಂತಸಮಾಯುಕ್ತಮಾದಿ ವರ್ಗಾಂತಸಂಯುತಮ್ ।
ಜ್ಞಾನಾತ್ಮ ಹೃದಯಂ ಬಿಂದುಃ ಸಮಾಸಾತ್ಪರಿಕೀರ್ತಿತಮ್ ॥

ಟೀಕು॥ ಸಾಂತವಾದ ಹಕಾರಮಂ ಯಾಂತವಾದ ರೇಫ ಔಕಾರಂ ಹಾಂಗೆ ಬಿಂದು ಗಳೊಡನೆ ಕೂಡಿದೊಡೆ ಆ ಈ ಕೂಟಮಾದ ಹೃದಯಬೀಜಂ ಹ್ರೌಂ ಎಂಬ ಜ್ಞಾನಾತ್ಮ ಹೃದಯಮೆಂದು ಪರ್ಯಾಯದಿಂದ ನುಡಿಯಲ್ಪಟ್ಟುದು. ॥೧೦೭॥

ಶ್ಲೋಕ॥ ಭೂತಾಂತಮನಿಲೋಪೇತಂ ತತ್ತ್ವಾಂತಂ ಸ್ವರಸಂಯುತಮ್ ।
ಶಿವಶಕ್ತಿ ಸಮಾಯುಕ್ತಂ ಯೋಗಜಂ ಹೃದಯಂ ವಿದುಃ ॥

ಟೀಕು॥ ಅನಿಲ ಬೀಜವಾದ ಯಕಾರದಿಂ ಕೂಡಿದ ಭೂತಾಂತ ಹಕಾರಮಂ ಮತ್ತಂ

ತತ್ತ್ವಾಂತವಾದ ವ್ಯಂಜನ ಹಕಾರಮಂ ಉದ್ಧರಿಸಿ ಆ ಉಭಯಾಕ್ಷರಕ್ಕೆ ಅಕಾರಮಂ ಅನುಸ್ವಾರಮಂ ಕೂಡಿದೊಡೆ ಹ್ಯಂ ಹಂ ಎಂಬೀ ಹೃದಯಾಕ್ಷರಮಂ ಯೋಗಜ ಹೃದಯವೆಂದಱಿವುದು. ॥೧೦೮॥

ಶ್ಲೋಕ॥ **ಪಂಚಮಂ ಪಾರ್ಥಿವೋಪೇತಂ ದ್ವಿತೀಯಸ್ವರ ಸಂಯುತಮ್ ।**
ಬಿಂದುನಾದ ಸಮಾಯುಕ್ತಂ ಭೂತಜಂ ಹೃದಯಂ ವಿದುಃ ॥

ಟೀಕು॥ ಪಾರ್ಥಿವ ಬೀಜಮಪ್ಪ ಲಕಾರದಿಂ ಕೂಡಿದ ಪಂಚಮವೆಂಬ ಹಕಾರಮಂ ಆಕಾರ ಅನುಸ್ವಾರಂಗಳಿಂದುದ್ಧರಿಸಿದೊಡೆ ಹ್ಲಾಂ ಎಂಬೀ ಹೃದಯಾಕ್ಷರಮಂ ಭೂತಜ ಹೃದಯಬೀಜವೆಂದಱಿವುದು. ॥೧೦೯॥

ಶ್ಲೋಕ॥ **ತತ್ತ್ವಾಂತಮನಿಲಾಂತಂ ಚ ದಶಾನ್ತಾಂತ ಕಲಾನ್ವಿತಮ್ ।**
ಬಿಂದುನಾದ ಸಮಾಯುಕ್ತಂ ಹೃದಯಂ ಸರ್ವಕಾಮದಂ ॥

ಟೀಕು॥ ತತ್ತ್ವಾಂತವಾದ ಹಕಾರಮಂ ಅನಿಲಾಂತವಾದ ರೇಫಮಂ ಐಕಾರದೊಡನೆ ಉದ್ಧರಿಸಿ ಬಿಂದುವಿನೊಡನೆ ಕೂಡಿಸಿದೊಡೆ ಹ್ರೈಂ ಎಂಬೀ ಹೃದಯಾಕ್ಷರಂ ಸಮಸ್ತ ಬಯಕೆಗಳಂ ಕೊಡುವಂಥ ಕಾಮದ ಹೃದಯವೆಂದೆನಿಸಿಕೊಂಬುದು. ॥೧೧೦॥

ಶ್ಲೋಕ॥ **ಹೃದಯಾದಿ ನಮೋಽಂತಂ ತು ಸರ್ವೇಷಾಂ ಸಹ ಯೋಜಯೇತ್ ।**

ಟೀಕು॥ ಪೂರ್ವೋಕ್ತ ಪಂಚಹೃದಯಂಗಳಂ ಹೃದಯವೇ ಮೊದಲಾಗಿ ನಮಸ್ಕಾರವೇ ಕಡೆಯ ಹಾಂಗೆ ಹೃದಯ ವಿಶೇಷ ಐದಕ್ಕೆಯು ಸೇರಿಸಿ ಪ್ರಯೋಗಿಸಲುತಕ್ಕುದು. ಅದು ಹೇಂಗೆಂದೊಡೆ : "ಹ್ರಾಂ ಕೇವಲಹೃದಯಾಯನಮಃ, ಹ್ರೌಂ ಜ್ಞಾನಜ ಹೃದಯಾಯನಮಃ, ಹ್ಯಂ ಹಂ ಯೋಗಜಹೃದಯಾಯನಮಃ, ಹ್ಲಾಂ ಭೂತಜ ಹೃದಯಾಯನಮಃ, ಹ್ರೈಂ ಕಾಮದಹೃದಯಾಯನಮಃ" ಎಂಬುದುಂ. ॥೧೧೧॥

ಶ್ಲೋಕ॥ **ಈಶಾನಂ ಪ್ರಥಮಂ ವಿಂದ್ಯಾತ್ ಶುಕ್ಲವರ್ಣಮುದಾಹೃತಮ್ ।**
ಈಶ್ವರಂ ಜ್ಞಾನ ಹೃದಯಂ ತಪ್ತಕಾಂಚನ ಸಂನಿಭಮ್ ॥

ಟೀಕು॥ ಆದಿಯಪ್ಪ ಕೇವಲ ಹೃದಯಮಂ ಈಶಾನರೂಪವನ್ನಾಗಿಯೇ ಅಱಿವುದು. ಕೇವಲ ಹೃದಯಂ ಶುಭ್ರವರ್ಣವೆಂದು ನುಡಿಯಲ್ಪಟ್ಟುದು. ಈಶ್ವರರೂಪಂ ಜ್ಞಾನ ಜಹೃದಯವೆಂಬ ಹೃದಯಂ ಪುಟವಿಟ್ಟ ಸುವರ್ಣದ ಸಮಾನವಾದಂಥಾದ್ದು.

ಶ್ಲೋಕ॥ **ಯೋಗಜಂ ಬ್ರಹ್ಮರೂಪಂ ಸ್ಯಾತ್ ಪೀತವರ್ಣಂ ತು ನಿರ್ದಿಶೇತ್ ।**
ಭೂತಜಂ ಚೇಶರೂಪಂ ತು ರತ್ನವರ್ಣಮುದಾಹೃತಮ್ ॥

ಟೀಕು॥ ಯೋಗಜವೆಂಬ ಹೃದಯಂ ಬ್ರಹ್ಮೇಶ ತತ್ತ್ವಸ್ವರೂಪವವಹುದು. ಆ ಯೋಗಜ ಹೃದಯವು ಪೀತವರ್ಣವನುಳ್ಳದೆಂದು ನಿರ್ದೇಶಿಸುವುದು. ಭೂತಜವೆಂಬಾ ಹೃದಯಂ ಈಶ್ವರ ಸ್ವರೂಪವಹುದು. ಭೂತಜಹೃದಯಂ ಮಾಣಿಕ್ಯವರ್ಣಮೆಂದು ನುಡಿಯಲ್ಪಡುವುದು. ॥೧೧೩॥

ಶ್ಲೋಕ॥ ಸಾದಾಖ್ಯಂ ಕಾಮದಂ ವಿಂದ್ಯಾತ್ ಶುದ್ಧಸ್ಫಟಿಕ ಸನ್ನಿಭಮ್ ।

ಟೀಕು॥ ಸಾದಾಖ್ಯಂ ಕಾಮದಹೃದಯವೆಂದಱಿವುದು. ನಿರ್ಮಲವಾದಂಥ ಪಳುಕಿನ ಸಮಾನವರ್ಣವೆಂದಱಿವುದು. ॥೧೧೪॥

ಶ್ಲೋಕ॥ ಸರ್ವಕರ್ಮವಿಶೇಷೇಣ ಕಾಮದೇನೈವ ಕಾರಯೇತ್ ।

ಟೀಕು॥ ಕೇವಲ ಹೃದಯಾಂಗಮಂತ್ರದಿಂದವೇ ಯಜನವನಾಚರಿಸುವದು. ಜ್ಞಾನಜ ಹೃದಯದಿಂದಾಯಿತ್ತಾದೊಡೆ ಸ್ಥಾಪನವನಾಚರಿಸುವುದು. ಯೋಗಜಹೃದಯದಿಂದವೆ ಜಲಪ್ರೋಕ್ಷಣವಂ ಮಾಡುವುದು. ಭೂತಜಹೃದಯಾಂಗ ಮಂತ್ರದಿಂ ದೀಕ್ಷಾಕಾರ್ಯಮ ನಾಚರಿಸುವುದು. ವಿಶೇಷಿಸಿಯುಂ ಕಾಮದಹೃದಯದಿಂದವೆ ಎಲ್ಲಾ ಕ್ರಿಯೆಗಳಂ ಮಾಡುವುದು. ॥೧೧೫॥

ಶ್ಲೋಕ॥ ಏವಂ ಹೃದಯಾಮಾಖ್ಯಾತಂ ಅಸ್ತ್ರಭೇದಮಥ ಶೃಣು ।

ಟೀಕು॥ ಈ ಪ್ರಕಾರದಿಂದ ಹೃದಯ ವಿಶೇಷಂ ನುಡಿಯಲುಪಟ್ಟುದು. ತಱುವಾಯಿಂದೆ ಅಸ್ತ್ರಭೇದವಂ ಕೇಳು. ॥೧೧೬॥

ಶ್ಲೋಕ॥ ಶಿವಾಸ್ತ್ರಂ ಕ್ಷುರಿಕಾಸ್ತ್ರಂ ಚ ತಥಾ ಪಾಶುಪತಾಸ್ತ್ರಕಮ್ ।
ವ್ಯೋಮಾಸ್ತ್ರಂ ಚೈವಾಘೋರಾಸ್ತ್ರಂ ಪಂಚಾಸ್ತ್ರಂ ಚೇತಿ ಕೀರ್ತಿತಮ್ ॥

ಟೀಕು॥ ಶಿವಾಸ್ತ್ರಮೆಂದುಂ, ಕ್ಷುರಿಕಾಸ್ತ್ರಮೆಂದುಂ, ಹಾಂಗೆ ಪಾಶುಪತಾಸ್ತ್ರಮೆಂದುಂ ವ್ಯೋಮಾಸ್ತ್ರಮೆಂದುಂ ಅಘೋರಾಸ್ತ್ರಮೆಂದುಂ ಹೀಂಗೆ ಅಸ್ತ್ರಮಂತ್ರಂಗಳೈದು ಮಂತ್ರಂ ಗಳೆಂದು ಹೇಳಲ್ಪಟ್ಟವು. ॥೧೧೭॥

ಶ್ಲೋಕ॥ ಷಡಕ್ಷರಂ ಶಿವಾಸ್ತ್ರಂ ಸ್ಯಾತ್ ಕ್ಷುರಿಕಾತ್ವಷ್ಟ ವರ್ಣಕಮ್ ।
ಪಾಶುಪತಂ ತು ಪಂಚಾರ್ಣಂ ವ್ಯೋಮಾಸ್ತ್ರಂ ತು ದಶಾರ್ಣಕಮ್ ॥

ಚತ್ವಾರಿಂಶದಘೋರಾಸ್ತ್ರಂ ಏವಂ ಪಂಚಾಸ್ತ್ರಮುಚ್ಯತೇ ।

ಟೀಕು॥ ಶಿವಾಸ್ತ್ರಂ ಆಱಕ್ಷರವಹುದು. ಕ್ಷುರಿಕಾಸ್ತ್ರವಾಯಿತ್ತಾದೊಡೆ ಎಂಟಕ್ಷರವಹುದು. ಪಾಶುಪತಾಸ್ತ್ರಂ ಅಯಿದಕ್ಷರವಹುದು. ವ್ಯೋಮಾಸ್ತ್ರಂ ದಶವರ್ಣವನುಳ್ಳದು.

ಅಘೋರಾಸ್ತ್ರಂ ನಾಲ್ವತ್ತು ಅಕ್ಷರವನುಳ್ಳದು. ಶಾರದಾ ತಿಲಕೋದ್ಧರಣದಲ್ಲಿ-ಅಘೋರಾಸ್ತ್ರಂ ಅಯಿವತ್ತೊಂದು ಅಕ್ಷರವನುಳ್ಳದಾಗಿಹುದು. ಪಾಶುಪತಾಸ್ತ್ರಂ ಷಡಕ್ಷರವನುಳ್ಳದಾಗಿಹುದು. ಈ ಪ್ರಕಾರದಿಂದ ಪಂಚಾಸ್ತ್ರವರ್ಣಮುಂ ಸಂಖ್ಯೆಯುಂ ನುಡಿಯಲ್ಪಟ್ಟುದು. ॥೧೧೯॥

ಶ್ಲೋಕ॥ **ಸರ್ವ ಕರ್ಮಾರ್ಹಕಂ ವಿಂದ್ಯಾತ್ಪೂಜಕಃ ಸರ್ವಕರ್ಮಸು ।**

ಟೀಕು॥ ಸಮಸ್ತ ತತ್ತ್ವ ಮಂತ್ರ ಜನ್ಮಸ್ಥಳವಪ್ಪ ಮಹಾಲಿಂಗಮಂ ಸಿಂಹಪೀಠದಲ್ಲಿ ಪೂಜಿಸುವ ಬಾಹ್ಯಪೂಜಕನಾಗಿಹ ಶುದ್ಧಶೈವಂ ಈ ಪಂಚಾಸ್ತ್ರಮಂತ್ರಮಂ ಎಲ್ಲಾ ಕ್ರಿಯೆಗಳಲ್ಲಿಯುಂ ಎಲ್ಲಾ ಸತ್ಕರ್ಮಕ್ಕೆಯುಂ ಯೋಗ್ಯವಾಹಂಥಾವೆಂದಜೀವುದು. ॥೧೨೦॥

ಶ್ಲೋಕ॥ **ಶಿವಾಂಗಾದಿ ಷಡಂಗಾನಿ ಕೀರ್ತಿತಾನಿ ಷಡಾನನ ।**
ಅಂಗಭೇದೋ ಮಯಾऽऽಖ್ಯಾತಃ ಮಂತ್ರಜಾತಮಥಶೃಣು ॥

ಟೀಕು॥ ಎಲೆ ಷಣ್ಮುಖನೆ! ಆ ಈ ಪರಿಯಿಂ ಶಿವಾಂಗವುಂ ಭೂತಾಂಗವುಂ ಕೂಟಾಂಗವುಂ ವಿದ್ಯಾಂಗವುಂ ಹಾಂಗೆ ಶಕ್ತ್ಯಂಗವುಂ ಸಾಮಾನ್ಯಾಂಗಂಗಳೆಂದು ಆಱು ಭೇದವಾಗಿ ನುಡಿಯಲ್ಪಟ್ಟವು. ಆ ಈ ಪೂರ್ವಾರ್ಧಂ ಅಂಗಭೇದವೆಂದುಂ ನುಡಿಯಲ್ಪಟ್ಟುದು. ತಱುವಾಯಿಂದ ಮಂತ್ರಜಾತಮಂ ಕೇಳು. ॥೧೨೧॥

ಇತಿ ಶ್ರೀವಾತುಲತಂತ್ರೇ ಶುದ್ಧಾಖ್ಯೇ ಸಹಸ್ರಗ್ರಂಥಸಂಹಿತಾಯಾಂ
ಶ್ರೀಮಲ್ಲಿಕಾರ್ಜುನೇನ ಕರ್ಣಾಟಭಾಷಾ ವಿವೃತ
ಮಂಗಭೇದೋ ನಾಮ ಅಷ್ಟಮಃ ಪಟಲಃ

❖ ❖ ❖

ನವಮಃ ಮಂತ್ರಜಾತಪಟಲಃ

ಶಾ॥ವಿ॥ವೃ॥ ವಿಷ್ಣು ಬ್ರಹ್ಮ ಸುರೇನ್ದ್ರಚನ್ದ್ರರವಿಭಿಃ ಸದ್ಭೂತಿಮದ್ಭಿಃ ಪರೈಃ
ದೇವಾದ್ಯೈಃ ಪರಮನ್ತ್ರ ವಿದ್ಭಿರಖಿಲೈಸ್ಸದ್ಭಕ್ತಿ ಮದ್ಭಿಃ ನೃಭಿಃ ।
ಸದ್ಭಿಸ್ಸತ್ಪಥವರ್ತಿಭಿರ್ಮನುಮುನಿವ್ರಾತೈರುಪಾಸ್ಯಂ ಮಹತ್
ಶ್ರೀಲಿಙ್ಗಂ ಶಿವತತ್ತ್ವಮುಖ್ಯನಿಲಯಂ ಹೃದ್ಯಂ ಪ್ರಪದ್ಯೇಽನಿಶಮ್ ॥

ಶ್ಲೋಕ॥ ಅಥಾತಸ್ಸಮ್ಪ್ರವಕ್ಷ್ಯಾಮಿ ಮನ್ತ್ರಜಾತಂ ತತಃ ಶೃಣು ।

ಟೀಕು॥ ಎಲೆ ಷಣ್ಮುಖನೆ! ಅಂಗಭೇದ ಪಟಲದಿಂದಂ ಮೇಲೆ ಮಂತ್ರಜಾತಮಂ ನಿರೂಪಿಸುವದು ಕಾರಣಂ ಕೇಳು. ॥೨॥

ಶ್ಲೋಕ॥ ಮನ್ತ್ರಾಣಿ ಜಾಯಂತೇ ಯಸ್ಮಾನ್ಮನ್ತ್ರಜಾತಮಿತಿಸ್ಮೃತಮ್ ।
ತಸ್ಮಾನ್ಮನ್ತ್ರಮಯಂ ಲಿಙ್ಗಂ ವಕ್ಷ್ಯೇ ಸಂಕ್ಷೇಪತಃ ಶೃಣು ।

ಟೀಕು॥ ಯಸ್ಮಾತ್=ಆವುದಾನೊಂದು ಜನ್ಮಸ್ಥಿತಿ ಸಂಹಾರ ಸ್ಥಾನವಾದ ತತ್ತ್ವದ ದೆಸೆಯಿಂದ, ಮಂತ್ರಾಣಿ=ಪರಾರ್ಧಕೋಟಿ ಮಂತ್ರಂಗಳೂ, ಜಾಯಂತೇ=ಪ್ರತಿ ಭಿನ್ನವಾಗಿ ತತ್ತದ್ದೇವತಾ ಸ್ವರೂಪವಾಗಿ ಹುಟ್ಟುತ್ತವಿಹವು. ತನ್ಮಂತ್ರಜಾತಮಿತಿಸ್ಮೃತಂ=ಆ ತತ್ತ್ವಂ ಮಂತ್ರಜಾತವೆಂದು ನೆನೆಯಲುಪಟ್ಟುದು. ತಸ್ಮಾತ್=ಅದು ಕಾರಣದಿಂದ, ಲಿಂಗಂ= ಜಗಜನ್ಮಾದಿ ಸ್ಥಲವಪ್ಪ ಶಿವಲಿಂಗವುಂ, ಮಂತ್ರಮಯಂ=ಎಲ್ಲಾ ಮಂತ್ರ ಸ್ವರೂಪವ ನುಳ್ಳದಾಗಿ, ಸಂಕ್ಷೇಪತೋವಕ್ಷ್ಯೇ=ಸಂಕ್ಷೇಪ ಮಾತ್ರದಿಂದ ನಿರೂಪಿಸಿಹೆನು. ಕೇಳು. ॥೩॥

ಶ್ಲೋಕ॥ ಸರ್ವಲೋಕ ಹಿತಾರ್ಥಾಯ ಸರ್ವಪ್ರಾಣಿ ಹಿತಾಯ ಚ ।
ಸರ್ವಮನ್ತ್ರಪ್ರಸಿದ್ಧ್ಯರ್ಥಂ ಭುಕ್ತಿಮುಕ್ತ್ಯರ್ಥಮುಚ್ಯತೇ ॥

ಟೀಕು॥ ಸರ್ವಲೋಕಹಿತಾರ್ಥಾಯ=ಎಲ್ಲಾ ಲೋಕಂಗಳಿಗೆ ಹಿತವಹ ಪ್ರಯೋಜನ ಕ್ಕೋಸುಗರಂ, ಸರ್ವಪ್ರಾಣಿ ಹಿತಾಯ ಚ=ಎಲ್ಲಾ ಜೀವಂಗಳ ಹಿತಕ್ಕೋಸುಗರಂ, ಭುಕ್ತಿಮುಕ್ತ್ಯರ್ಥಂ=ಇಹಪರ ಸೌಖ್ಯಕ್ಕೋಸುಗರಂ, ಉಚ್ಯತೇ=ಶಿವಲಿಂಗೋದ್ಧರಣಂ ನಿರೂಪಿಸಲುಪಡುತ್ತಿದ್ದುದು. ॥೪॥

ಶ್ಲೋಕ॥ ಶಾಲಿಪಿಷ್ಟಾಕ್ತ ಸೂತ್ರೇಣ ಸೂತ್ರಪಾತಮಥಾಚರೇತ್ ।
ಗೋಮಯಾಲೇಪಿತೇ ಕ್ಷೇತ್ರೇ ನಿಮ್ನೋನ್ನತ ವಿವರ್ಜಿತೇ ॥

ಟೀಕು॥ ನಿಮನ್ನೋನ್ನತ ವಿವರ್ಜಿತೇ ಗೋಮಯಾಲೇಪಿತೇ ಕ್ಷೇತ್ರೇ=ಗುಳಿಕೆವದಿಲ್ಲದಂಥಾ

ಗೋಮಯದಿಂದ ಲೇಪಿಸಲುಪಟ್ಟಂಥಾ ಸ್ಥಂಡಿಲಭೂಮಿಯಲ್ಲಿ, ಶಾಲಿಪಿಷ್ಟಾಕ್ತಸೂತ್ರೇಣ= ರಾಜಾನ್ನದ ಹಿಟ್ಟಿನಲ್ಲಿ ಅಟ್ಟಲುಪಟ್ಟ ಸೂತ್ರದಿಂದ, ಅಥ ಸೂತ್ರಪಾತಮಾಚರೇತ್= ಅನಂತರಂ ಸೂತ್ರಪಾತನಮನಾಚರಿಸುವದು. ॥೫॥

ಶ್ಲೋಕ॥ ಪ್ರಾಕ್ಸೂತ್ರಾಣಿ ಸಪ್ತದಶ ತಥೈವೊದಗ್ರತಾನಿ ಚ ।
ಪಙ್ಕ್ತಯಃ ಷೋಡಶಸ್ಯುಸ್ತಾಃ ಪ್ರಾಗುದಂಙ್ಮುಖಾಸ್ತಥಾ ।

ಟೀಕು॥ ಪ್ರಾಕ್ಸೂಕ್ರಾಣಿ ಸಪ್ತದಶ=ಮೂಡಪಡುವಲಾಗಿ ಮೊದಲ ಸೂತ್ರಪಾತನಂಗಳೂ ಹದಿನೇಳಂ ಮಿಡಿವುದು. ತಥೈವೋದಗ್ರತಾನಿ ಚ=ಹಾಂಗೆ ತೆಂಕಬಡಗಲಾಗಿಯೂ ಹದಿನೇಳು ಸೂತ್ರಂಗಳಂ ಮಿಡಿವುದು. ಹೀಂಗೆ ಸೂತ್ರಪಾತನಂ ಮಾಡಿದಡೆ, ಷೋಡಶ ಪಙ್ಕ್ತಯಃ ಸ್ಯುಃ=ಹದಿನಾಱು ಪಂಕ್ತಿಗಳಹವು. ತಾಃ=ಆ ಪಂಕ್ತಿಗಳು, ತಥಾ ಪ್ರಾಗುದಂಙ್ ಮುಖಾಃ=ಸೂತ್ರಪಾತನಂ ಮಾಡಿದ ಹಾಂಗೆ ಮೂಡಪಡುವ ತೆಂಕಮುಖವಾಗಿಹವು.

ಶ್ಲೋಕ॥ ಷಟ್ಪಞ್ಚಾಶತ್ಸಮಾಧಿಕ್ಯಕೋಷ್ಠಾನಿ ದ್ವಿಶತಾನಿ ಚ ।

ಟೀಕು॥ ಹಿಂಗಿಹ ಹದಿನಾಱು ಪಂಕ್ತಿಗಳಂ ನೆನೆಸಿದಡೆ ಷಟ್ಪಂಚಾಶತ್ಸಮಾಧಿಕ್ಯ ಕೋಷ್ಠಾನಿ ದ್ವಿಶತಾನಿಚ=ಐವತ್ತಾಱು ಕೋಷ್ಠಂಗಳಧಿಕತೆಯನುಳ್ಳ ಇನ್ನೂಱು ಕೋಷ್ಠಂಗಳೂ ಇನ್ನೂಱ ಐವತ್ತಾಱು ಚತುರಸ್ರಂಗಳಹವು. ॥೭॥

ಶ್ಲೋಕ॥ ಪಶ್ಚಿಮಾದಿನ್ದ್ರಪರ್ಯನ್ತಂ ಲಿಙ್ಗಾರ್ಥಂ ವೀಥಿಕಾಸ್ತ್ಯಜೇತ್ ॥

ಟೀಕು॥ ಪಶ್ಚಿಮದಿಕ್ಕು ಮೊದಲಾಗಿ, ಇಂದ್ರ ಪರ್ಯಂತಂ ಲಿಂಗಾಕಾರವ ಮಾಡಲೋಸು ಕರಂ ವೀಧಿಗಳಂ ಬಿಡುವುದು. ॥೮॥

ಶ್ಲೋಕ॥ ಪಶ್ಚಾಚ್ಚತ್ವಾರಿ ಚತ್ವಾರಿ ವೀಥ್ಯೋಃ ಕೋಷ್ಠಾನಿ ಮಧ್ಯಮೇ ।
ಸಂರಕ್ಷ್ಯ ಪಾರ್ಶ್ವ ದ್ವೈತಯೋಃ ಷಟ್ ಷಟ್ಕೋಷ್ಠಾನಿ ಲೋಪಯೇತ್ ।

ಟೀಕು॥ ಮಧ್ಯಮೇ ವೀಥ್ಯೋಃ ಚತ್ವಾರಿಚತ್ವಾರಿ ಸಂರಕ್ಷ್ಯ=ಮಧ್ಯದಲ್ಲಿ ಎರಡೆರಡು ವೀಥಿಗಳ ನಾಲ್ಕು ನಾಲ್ಕು ಮನೆಗಳನುಳ್ಳಹ, ಪಶ್ಚಾತ್ಪಾರ್ಶ್ವದ್ವೈತಯೋಃ ಷಟ್‌ಷಟ್ಕೋಷ್ಠಾನಿ ಲೋಪಯೇತ್=ಮರಳಿ ಪಾರ್ಶ್ವದ್ವಯಂಗಳ ಆಱಾಱು ಮನೆಗಳಂ ಬಿಡುವದು.

ಶ್ಲೋಕ॥ ತದೂರ್ಧ್ವ ಪಙ್ಕ್ತಿಂ ಸಂರಕ್ಷ್ಯ ತದೂರ್ಧ್ವಂ ದ್ವಾದಶಂ ಕ್ಷಿಪೇತ್ ।
ಪಾರ್ಶ್ವಯೋರುಭಯೋ ಸ್ತತ್ರದ್ವೇದ್ವೇಕೋಷ್ಠೇ ಚ ಲೋಪಯೇತ್ ॥

ಟೀಕು॥ ತದೂರ್ಧ್ವ ಪಂಕ್ತಿಂ ಸಂರಕ್ಷ್ಯ=ಆ ಎರಡು ಪಂಕ್ತಿಯ ಮೇಲಣ ವಿಜ್ಞೇಯನುಳುಹಿ, ತದೂರ್ಧ್ವಂ ದ್ವಾದಶಂ ಕ್ಷಿಪೇತ್=ಅದಱಿಂದಂ ಮೇಲಣ ಪಂಕ್ತಿಯ ಮಧ್ಯೆ, ತದೋರ್ಧ್ವೇದಶ ಸಂರಕ್ಷ್ಯ=ಆ ಪಂಕ್ತಿಯ ಮೇಲಣ ಪಂಕ್ತಿಯಲ್ಲಿ ಹತ್ತು ಕೋಷ್ಠಂಗಳಂ

ರಕ್ಷಿಸಿ, ಪಾರ್ಶ್ವಯೋಸ್ತಿ ತ್ರಿಲೋಪಯೇತ್=ಎರಡಕ್ಕೂ ಕಡೆಯಲ್ಲಿಯುಂ ಮೂಱು ಮೂಱು ಕೋಷ್ಠಂಗಳಂ ಲೋಪ ಮಾಡುವದು.

ಶ್ಲೋಕ॥ ತದೂರ್ಧ್ವಂ ದ್ವಾದಶಂ ರಕ್ಷ್ಯ ದ್ವೇದ್ವೇ ಪಾರ್ಶ್ವೇ ಚ ಲೋಪಯೋತ್ ।
ತದೂರ್ಧ್ವ ಪಙ್ಕ್ತಿಂ ಸಂರಕ್ಷ್ಯ ತತೋಲಿಙ್ಗ ದ್ವಿಪಙ್ಕ್ತಿತಃ ।

ಟೀಕು॥ ತದೂರ್ಧ್ವೇ ದ್ವಾದಶಂ ರಕ್ಷ್ಯ=ಅದಱಿಂದಂ ಮೇಲೆ ಹನ್ನೆರಡದು ಮನೆಯಂತಾಯ್ದು, ದ್ವೇದ್ವೇ ಪಾರ್ಶ್ವೇ ಚ ಲೋಪಯೇತ್=ಎರಡೆರಡು ಕೋಷ್ಠಂಗಳಂ ಪಾರ್ಶ್ವಂಗಳಲ್ಲಿ ಬಿಡುವದು. ತದೂರ್ಧ್ವ ಪಂಕ್ತಿಂ ಸಂರಕ್ಷ್ಯ=ಅದಱಿಂದಂ ಮೇಲಣ ಪಂಕ್ತಿಯಂ ಕಾಯ್ದು, ತತಃ=ಅದಱಿಂದಂ ಮೇಲೆ, ದ್ವಿಪಂಕ್ತಿತಃ ಲಿಂಗಂ=ಎರಡು ಪಂಕ್ತಿಯಿಂ ಲಿಂಗಾಕಾರವಹುದು. ॥೧೧॥

ಶ್ಲೋಕ॥ ಪಙ್ಕ್ತ್ಯೋಶ್ಚತ್ವಾರಿ ಚತ್ವಾರಿ ಕೋಷ್ಠಾನ್ಯೂರ್ಧ್ವೇ ಚ ರಕ್ಷಯೇತ್ ।
ಷಟ್ ಷಟ್ ಕೋಷ್ಠಾನಿ ಪಙ್ಕ್ತ್ಯೋಶ್ಚ ಪಾರ್ಶ್ವಯೋರುಭಯೋಸ್ತ್ಯಜೇತ್ ।

ಟೀಕು॥ ಪಂಙ್ಕ್ತ್ಯೋಶ್ಚತ್ವಾರಿ ಚತ್ವಾರಿ ಕೋಷ್ಠಾನಿ=ಎರಡು ಪಂಕ್ತಿಗಳಲ್ಲಿ ನಾಲ್ಕು ನಾಲ್ಕು ಕೋಷ್ಠಂಗಳನೂ, ಊರ್ಧ್ವೇಚ ರಕ್ಷಯೇತ್=ಮೇಲಣ ಮಧ್ಯ ಸ್ಥಾನದಲ್ಲಿ ರಕ್ಷಿಸುವದು. ಪಂಕ್ತ್ಯೋಶ್ಚ ಉಭಯೋಃ ಪಾರ್ಶ್ವಯೋಃ=ಎರಡು ಪಂಕ್ತಿಗಳ ಉಭಯ ಪಾರ್ಶ್ವಂಗಳಲ್ಲಿ, ಷಟ್ ಷಟ್ ಕೋಷ್ಠಾನಿ ತ್ಯಜೇತ್=ಆಱಾಱು ಕೋಷ್ಠಂಗಳಂ ತ್ಯಜಿಸುವದು. ॥೧೨॥

ಶ್ಲೋಕ॥ ಏವಂ ಲಿಂಗಂ ಸಮಾಸಾಧ್ಯ ಬ್ರಹ್ಮವಿಷ್ಣ್ವೀಶ ಪೀಠಕಮ್ ।

ಟೀಕು॥ ಏವಂಲಿಂಗಂ ಸಮಾಸಾಧ್ಯ=ಈ ಪ್ರಕಾರದಿಂ ಲಿಂಗಾಕಾರವನ್ನೆದಿಸಿದಡೆ, ಬ್ರಹ್ಮ ವಿಷ್ಣ್ವೀಶ ಪೀಠಕಂ=ಉತ್ಪತ್ತಿ ಸ್ಥಿತಿ ಸಂಹಾರ ಕರ್ತೃಗಳಪ್ಪ ತ್ರಿದೇವತಾ ಸ್ಥಾನಂಗಳಹ ಪೀಠಿಕೆಯನುಳ್ಳ ಲಿಂಗಾಕಾರವಹುದು. ಈ ಬ್ರಹ್ಮವಿಷ್ಣ್ವೀಶ ಪೀಠಕಂ=ಎಂಬಲ್ಲಿ ದುರ್ವಾದಂ ಹುಟ್ಟುವಡೆ ಪರಿಹಾರವು ಹೇಂಗೆಂದಡೆ ಶಕ್ತಿ ಎಂಬ ನಾಮಂ ಪೀಠಿಕೆಗೆ ಸಲುವುದು. ಶಿವನೆಂಬ ನಾಮಂ ಲಿಂಗಶಲಾಕೆಗಳುಳ್ಳುದು. ಆ ಶಿವನ ದಿವ್ಯಶಕ್ತಿಯೆ ಸ್ವರ್ಗ ಸ್ಥಿತ್ಯಂತಕರ್ತೃಗಳಪ್ಪ ತ್ರಿದೇವತಾ ಸ್ವರೂಪವನ್ನೆದಿತೆಂಬುದಕ್ಕುದಾಹರಣಂ. ಕೂರ್ಮೇ ಈಶ್ವರ ಗೀತಾಸು=ಕೂರ್ಮ ಪುರಾಣಗಳಲ್ಲಿಯ ಗೀತೆಗಳಲ್ಲಿ ಈಶ್ವರಃ ॥೧೩॥

ಶ್ಲೋಕ॥ ಏಕಾ ಸರ್ವಾಂತರಾ ಶಕ್ತಿಃ ಕರೋತಿ ವಿವಿಧಂ ಜಗತ್ ।
ಆಸ್ಥಾಯ ಬ್ರಹ್ಮಣೋರೂಪಂ ಮನ್ಮಯೀ ಮದಧಿಷ್ಠಿತಾ ॥

ಟೀಕು॥ ಮನ್ಮಯೀ=ನನ್ನ ಸ್ವರೂಪವೆ ಆದಂಥಾ, ಮದಧಿಷ್ಠಿತಾಃ=ನಾನಾದ ಸರ್ಗಾಧಿಷ್ಠಿತವಾದಂಥಾ, ಸರ್ವಾಂತರಾ ಏಕಾಶಕ್ತಿಃ=ಸರ್ವಾಂತರಸ್ಥೆಯಾದ ನನ್ನದೊಂದು

ಶಕ್ತಿ, ಬ್ರಹ್ಮಣೋರೂಪಮಾಸ್ಥಾಯ=ಬ್ರಹ್ಮಸ್ವರೂಪವನವಧರಿಸಿ, ವಿವಿಧಂ ಜಗತ್ಕರೋತಿ= ಹಲವು ವಿಧವಾದ ಜಗತ್ತಂ ಸೃಷ್ಟಿಸಿಹವು. ॥೧೪॥

ಶ್ಲೋಕ॥ **ಅನ್ಯಾ ಚ ಶಕ್ತಿರ್ವಿಪುಲಾ ಸಂಸ್ಥಾಪಯತಿ ಮೇ ಜಗತ್ ।**
ಭೂತ್ವಾ ನಾರಾಯಣೋಽನನ್ತೋ ಜಗನ್ನಾಥೋ ಜಗನ್ಮಯಃ ।

ಟೀಕು॥ ಮೇ=ನನ್ನ, ವಿಪುಲಾ ಅನ್ಯಾಚ ಶಕ್ತಿಃ=ದೊಡ್ಡಿತ್ತಾದ ಮತ್ತೊಂದು ಶಕ್ತಿ, ಜಗನ್ಮಯಃ=ವಿಶ್ವರೂಪವನುಳ್ಳಂಥ, ಜಗನ್ನಾಥಃ=ಜಗದ್ರಕ್ಷಕನಾದಂಥ, ಅನಂತಃ=ಕಡೆ ಇಲ್ಲದಂಥ ರೂಪವನುಳ್ಳಂಥಾ, ನಾರಾಯಣೋ ಭೂತ್ವಾ=ನಾರಾಯಣನಾಗಿ, ಜಗತ್ಸಂ ಸ್ಥಾಪಯತಿ=ಜಗಸ್ಥಾಪನಮಂ ಮಾಡುತ್ತಿಹುದು. ॥೧೫॥

ಶ್ಲೋಕ॥ **ತೃತೀಯಾ ಮಹತೀ ಶಕ್ತಿಃ ನಿಹಂತಿ ಸಕಲಂ ಜಗತ್ ।**
ತಾಮಸೀ ಮೇ ಸಮಾಖ್ಯಾತಾ ಕಾಲಾಖ್ಯಾ ರುದ್ರರೂಪಿಣೀ ।

ಟೀಕು॥ ಮೇ=ನನ್ನ, ತಾಮಸೀ ಸಮಾಖ್ಯಾತಾ=ತಮೋಗುಣ ಸಂಬಂಧಿನಿಯೆಂದು ನುಡಿಯಲುಪಟ್ಟಂಥಾ, ಮಹತೀತೃತೀಯಾ ಶಕ್ತಿಃ=ದೊಡ್ಡಿತ್ತಹಂಥಾ ಮೂಱನೆಯ ಶಕ್ತಿ, ಕಾಲಾಖ್ಯಾರುದ್ರರೂಪಿಣೀ=ಕಾಲಾ ಎಂಬ ಹೆಸರನುಳ್ಳ ರುದ್ರರೂಪಿಣಿಯಾಗಿ, ಸಕಲಂ ಜಗನ್ನಿಹಂತಿ=ಸಮಸ್ತ ಜಗತ್ತಂ ಸಂಹರಿಸುತ್ತಿಹುದು. ಇತ್ಯಾದಿ, ಇವು ಮೊದಲಾದವು ತ್ರಿದೇವತಾ ಸ್ವರೂಪವಾದ ದಿವ್ಯಶಕ್ತಿಯೆ ಪೀಠಿಕೆಯಾಯಿತೆಂಬುದರ್ಥ.

ಶ್ಲೋಕ॥ **ಪಟ್ಟಿಕಾ ಕಞ್ಜ ಕಣ್ಠಾಬ್ಜ ಪಟ್ಟಿಕಾಜ್ಯಪ್ರಧಾರಿಕಾ ।**
ಷಡಙ್ಗಾನಿ ಚ ಪೀಠಸ್ಯ ಕ್ರಮಾತ್ಪ್ರೋಕ್ತಾನಿ ಷಣ್ಮುಖ ॥

ಟೀಕು॥ ಭೋ ಷಣ್ಮುಖ!=ಎಲೆ ಷಣ್ಮುಖನೆ!, ಪಟ್ಟಿಕಾ ಕಂಜ ಕಂಠಾಬ್ಜ=ಪ್ರಧಾರಿಕಾ=ಅಧಃ ಪಟ್ಟಿಕೆಯೆಂದು, ಅಧಃ ಕಂಜವೆಂದು ಕಂಠವೆಂದು, ಕಂಠವೆಂಬ ಸ್ಥಾನಕ್ಕೆ ಮತ್ತೊಂದು ವೃತ್ತವೆಂಬ ನಾಮಂ ಸಲುವದು. ಊರ್ಧ್ವಾಬ್ಜವೆಂದುಂ ಊರ್ಧ್ವಪಟ್ಟಿಕೆಯೆಂದುಂ ಆಜ್ಯಪ್ರಧಾರಿಕೆಯೆಂದುಂ ಶಿವಲಿಂಗದ ಪೀಠದ ಕೆಳಗಣ ನಾಲ್ಕು ಕೋಷ್ಠಮಾಡಲಾಗಿ ಶಿವಲಿಂಗಾಕಾರದ ಮೊದಲ ಪಂಕ್ತಿಯ ನಾಲ್ಕು ಕೋಷ್ಠಸ್ಥಾನ ಕಡೆಯಾಗಿ, ಕ್ರಮಾತ್ ಷಡಂಗಾನಿ ಪ್ರೋಕ್ತಾನಿ=ಕ್ರಮದಿಂದ ಷಡಂಗಂಗಳು ಹೇಳಲುಪಟ್ಟವು. ॥೧೭॥

ಶ್ಲೋಕ॥ **ಮನ್ತ್ರನ್ಯಾಸಕ್ರಮಂ ಲಿಙ್ಗೇ ಶೃಣು ವತ್ಸ ಸಮಾಸತಃ ।**

ಟೀಕು॥ ಎಲೆ ಕುಮಾರನೆ! ಶಿವಲಿಂಗದಲ್ಲಿ ಮಂತ್ರಂಗಳ ನ್ಯಾಸವ ಮಾಡುವ ಕ್ರಮವಂ ಸಮಾಸದಿಂದ ನಿರೂಪಿಸಿಹೆನು. ಕೇಳು. ॥೧೮॥

ಶ್ಲೋಕ॥ ಅಙ್ಗಭೇದೇ ಷಡಙ್ಗಾನಿ ಪ್ರೋಕ್ತಮನ್ತ್ರಾನಿ ವಿನ್ಯಸೇತ್ ।

ಟೀಕು॥ ಅಂಗಭೇದೇ=ಷಡಂಗಭೇದದಲ್ಲಿ, ಷಡಂಗಾನಿ ಪ್ರೋಕ್ತ ಮಂತ್ರಾಣಿವಿನ್ಯಸೇತ್=ಷಡಂಗಂಗಳೆಂದು ಹೇಳಲುಪಟ್ಟ ಮಂತ್ರಂಗಳನು ನ್ಯಾಸವಮಾಡುವದು. ॥೧೯॥

ಶ್ಲೋಕ॥ ಹೃದಯಂ ಪಟ್ಟಿಕಾಯಾಂತು ಶಿರಃ ಕಞ್ಜೇ ಶಿಖಾಂ ಗಲೇ ।
ಕವಚಂ ಕಮಲೇ ನೇತ್ರೇ ಪಟ್ಟ್ಯಾಮಸ್ತ್ರಂ ಚ ಧಾರಿಕೇ ।

ಟೀಕು॥ ಪಟ್ಟಿಕಾಯಾಂತು ಹೃದಯಂ=ಅಧಃ ಪಟ್ಟಿಕೆಯಲ್ಲಿ ಹೃದಯ ಮಂತ್ರವ ನ್ಯಾಸವ ಮಾಡುವದು, ಕಂಜೇಶಿರಃ=ಅಧಃ ಕಂಜದಲ್ಲಿ ಶಿರೋಮಂತ್ರಮಂ ನ್ಯಾಸವ ಮಾಡುವದು. ಶಿಖಾಂ ಗಲೇ=ಶಿಖಾಮಂತ್ರವನೂ ಕಂಠಸ್ಥಾನದಲ್ಲಿ ನ್ಯಾಸವ ಮಾಡುವದು. ಕವಚಂ ಕಮಲೇ=ಕವಚ ಮಂತ್ರವನು ಉರ್ಧ್ವ ಕಂಜದಲ್ಲಿ ನ್ಯಾಸವ ಮಾಡುವದು. ನೇತ್ರಂ ಪಟ್ಯಾಂ=ನೇತ್ರ ಮಂತ್ರಮಂ ಆಜ್ಯ ಪ್ರಧಾರಿಕೆಯಲ್ಲಿ ನ್ಯಾಸವ ಮಾಡುವದು.

ಶ್ಲೋಕ॥ ಪ್ರೋಕ್ತಂ ಷಡಙ್ಗವಿನ್ಯಾಸಂ ವಕ್ಷ್ಯಾಮ್ಯಾಧಾರಷಟ್ಕಮಾತ್ ।

ಟೀಕು॥ ಷಡಂಗ ವಿನ್ಯಾಸಂ ಪ್ರೋಕ್ತಂ=ಹಿಂಗೆ ಷಡಂಗ ನ್ಯಾಸಂ ನುಡಿಯಲುಪಟ್ಟುದು. ಆಧಾರ ಷಟ್ಕಮಾತ್ ವಕ್ಷ್ಯಾಮಿ=ಆಧಾರಾದಿ ಷಟ್ ಚಕ್ರಂಗಳನು ನ್ಯಾಸ ಕ್ರಮದಿಂದ ನಿರೂಪಿಸಿಹೆನು. ॥೨೧॥

ಶ್ಲೋಕ॥ ಕಞ್ಜಸ್ಯಾಧಮಥಾಧಾರಂ ವಾದಿಸಾನ್ತಂ ಚತುರ್ದಲೇ ।
ಸ್ವಾಧಿಷ್ಠಾನೇ ಚ ಷಟ್ಪತ್ರೇ ಬಾದಿಲಾನ್ತಂ ತತೋನ್ಯಸೇತ್ ।

ಟೀಕು॥ ಕಂಜಸ್ಯಾಧಮಾಥಾಧಾರಂ=ಅಧಃ ಕಂಜದಿಂದ ಕೆಳಗಣ ಅಧಃ ಪಟ್ಟಿಕೆ ಆಧಾರ ಸ್ಥಾನವೆನಿಸಿಕೊಂಬುದು. ಚತುರ್ದಲೇ ವಾದಿಸಾನ್ತಂ=ಚತುಃಕೋಷ್ಠಂಗಳೆ ಚತುಃ ಪತ್ರವೆಂದಱಿವುದು. ವಾದಿಸಾನ್ತಂ=ವಷಶಸ ಎಂಬ ವಕಾರ ಮೊದಲಾಗಿ ಸಕಾರ ಕಡೆಯಾದ ನಾಲ್ಕಕ್ಷರವಂ ನ್ಯಾಸವ ಮಾಡುವದು. ಸ್ವಾಧಿಷ್ಠಾನೇ ಚ ಷಟ್ಪತ್ರೇ=ಅಧಃ ಕಂಜ ಸ್ವಾಧಿಷ್ಠಾನವೆನಿಸಿಕೊಂಬುದು. ಆ ಸ್ವಾಧಿಷ್ಠಾನ ಸ್ಥಾನದಲ್ಲಿಯ ಷಟ್ಕೋಷ್ಠಂಗಳೆಂಬ ಆಱಿಸಳಿನಲ್ಲಿ ಈ ಪರಿಯಿಂ ಎಲ್ಲಾಕೋಷ್ಠಂಗಳ ದಳ ಸಂಜ್ಞೆಯೆಂದಱಿವುದು. ತತೋಬಾದಿಲಾನ್ತಂ ನ್ಯಸೇತ್=ಆಯಾಧಾರದಿಂದಂ ಮೇಲೆ ಬ ಭ ಮ ಯ ರ ಲ ಎಂಬ ಬಕಾರ ಮೊದಲಾಗಿ ಲಕಾರ ಕಡೆಯಾದ ಆಱಕ್ಷರಂಗಳಂ ನ್ಯಾಸವ ಮಾಡುದು.

ಶ್ಲೋಕ॥ ತತೋ ಮಣೌ ದಶದಲೇ ಡಾದಿ ಫಾನ್ತಂ ನ್ಯಸೇತ್ತತಃ ।
ಹೃದಯೇ ದ್ವಾದಶದಲೇ ಕಾದಿ ಠಾನ್ತಂ ನ್ಯಸೇತ್ತತಃ ।

ಟೀಕು॥ ತತಃ=ಅದಱಿಂದಂ ಮೇಲೆ, ಮಣೌ ದಶದಲೇ=ವೃತ್ತ ಸ್ಥಾನಂ ಮಣಿ

ಮಾಂಕವೆನಿಸಿಕೊಂಬುದು. ಆ ಮಣಿಪೂರಕದಲ್ಲಿಯ ಹತ್ತುದಳದಲ್ಲಿ ಡಾದಿ ಫಾಂತಂ ನ್ಯಸೇತ್=ಡ ಢ ಣ ತ ಥ ದ ಧ ನ ಪ ಫ ಎಂಬ ಡಕಾರ ಮೊದಲಾಗಿ ಫಕಾರ ಕಡೆಯಾದ ಹತ್ತಕ್ಷರಮಂ ನ್ಯಾಸ ಮಾಡುದು. ತತಃ=ಆ ಮಣಿಪೂರಕದಿಂದ ಮೇಲೆ, ಹೃದಯೇ ದ್ವಾದಶ ದಲೇ=ಊರ್ಧ್ವಕಂಜವೆಂಬ ನಾಮವನುಳ್ಳ ಹೃದಯಸ್ಥಾನದಲ್ಲಿಯ ಹನ್ನೆರಡು ದಳದಲ್ಲಿ, ಕಾದಿ ಠಾನ್ತಂನ್ಯಸೇತ್=ಕ ಖ ಗ ಘ ಙ ಚ ಛ ಜ ಝ ಞ ಟ ಠ ಎಂಬ ಕಕಾರ ಮೊದಲಾಗಿ ಠಕಾರ ಕಡೆಯಾದ ಹನ್ನೆರಡಕ್ಷರಮಂ ನ್ಯಾಸವ ಮಾಡುವದು. ತತಃ=ಆ ಹೃದಯಸ್ಥಾನದ ಮೇಲೆ, ॥೨೩॥

ಶ್ಲೋಕ॥ ಪಟ್ಯಾಂ ಕಣ್ಠೇ ಷೋಡಶಕೇ ಆದಿ ವರ್ಗಂ ನ್ಯಸೇತ್ತತಃ ।
ಆಜ್ಞಾಯಾಂ ದ್ವಿದಲೇ ಚೋರ್ಧ್ವೇ ಳಕ್ಷಯುಗ್ಮಂ ನ್ಯಸೇತ್ತತಃ ॥

ಟೀಕು॥ ಆಜ್ಞಾಯಾಂ ದ್ವಿದಲೇಚೋರ್ಧ್ವೇ ಳ ಕ್ಷಯುಗ್ಮಂ ನ್ಯಸೇತ್=ಅ ಆ ಇ ಈ ಉ ಊ ಋ ೠ ಌ ಏ ಐ ಓ ಔ ಅಂ ಅಃ ಎಂಬ ಅಕಾರ ಮೊದಲಾಗಿ ಅಃ ಕಾರ ಕಡೆಯಾದ ಹದಿನಾಱಕ್ಷರಮಂ ನ್ಯಾಸವ ಮಾಡುವದು. ತತಃ=ಆ ಕಂಠಸ್ಥಾನದಿಂದಂ ಮೇಲೆ; ಊರ್ಧ್ವೇಚಾಜ್ಞಾಯಾಂ ದ್ವಿದಲೇ=ಈ ಪಂಚಸ್ಥಾನಕ್ಕಿಂದಂ ಮೇಲೆ ಇವಂ ಆಜ್ಯ ಪ್ರಧಾರಿಕೆ ಎಂಬ ಆಜ್ಞಾ ಚಕ್ರದಲ್ಲಿಯ ನಾಲ್ಕು ಕೋಷ್ಠಂಗಳ ಮಧ್ಯದ ಎರಡು ದಳದಲ್ಲಿ, ಳ ಕ್ಷ ಯುಗ್ಮಂ ನ್ಯಸೇತ್=ಳ ಕ್ಷ ಎಂಬ ಎರಡಕ್ಷರಮಂ ನ್ಯಾಸವ ಮಾಡುವದು. ತತಃ=ಆ ಈ ರುದ್ರಮೂರ್ತಿ ಬೀಜಂಗಳ ನ್ಯಾಸವ ಮಾಡಿದ ಕಾರಣದಿಂದ ಈ ಏಕ ಪಂಚಾಶದ್ವರ್ಣಂ ರುದ್ರಮೂರ್ತಿ ಬೀಜಂಗಳೆಂಬ ಅರ್ಥೋರ್ೀದಾರಣವು. ಶಾರದಾ ತಿಲಕೇ : ಶಾರದಾ ತಿಲಕದಲ್ಲಿ: ॥೨೪॥

ಶ್ಲೋಕ॥ ಶ್ರೀ ಕಣ್ಠೋನಂತ ಸೂಕ್ಷ್ಮಶ್ಚ ತ್ರಿಮೂರ್ತಿರಮರೇಶ್ವರಃ ।
ಅರ್ಘೀಶೋಭಾರಭೂತಿಶ್ಚಾತ್ರಿ ದಿಶೋಸ್ಥಾಣುಕೋಹರಃ ॥

ಚಂದೀಶೋಜಾತುಕಃ ಸದ್ಯೋಜಾತಶ್ಚಾನುಗ್ರಹೇಶ್ವರಃ ।
ಅಕ್ರೂರಶ್ಚಮಹಾಸೇನಃ ಷೋಡಶಸ್ವರಮೂರ್ತಯಃ ॥

ಟೀಕು॥ ಶ್ರೀಕಂಠ ಅನಂತ ಸೂಕ್ಷ್ಮ ತ್ರಿಮೂರ್ತಿ ಅಮರೇಶ್ವರ ಅರ್ಘೀಶಃ ಭಾರಭೂತಿ ಅತ್ರೀಃ ಸ್ಥಾಣು ಹರ ಚಂದೀಶ ಜತಿಕ ಸದ್ಯೋಜಾತ ಅನುಗ್ರಹೇಶ್ವರ ಅಕ್ರೂರ ಮಹಾಸೇನ ಎಂದು ಹೀಂಗೆ ಹದಿನಾಱುನಾಮವನುಳ್ಳ ರುದ್ರಮೂರ್ತಿಗಳು, ಹದಿನಾಱು ಸ್ವರಾಕ್ಷರ ಮೂರ್ತಿಗಳೆಂದಱಿವುದು. ॥೨೬॥

ಶ್ಲೋಕ॥ ಪಶ್ಚಾಕ್ಕ್ರೋಟೀಶ ಚಂಡೇಶ ಪಞ್ಚಾನ್ತಕ ಶಿವೋತ್ತಮಾಃ ।
ಅಥೈಕ ರುದ್ರಕೂರ್ಮೈಕ ನೇತ್ರಾಶ್ಚ ಚತುರಾನನಃ ॥

ಅಜೇಶಸ್ಸರ್ವಸೋಮೇಶಃ ಲಾಙ್ಗುಲೀದಾರುಕಾಸ್ತಥಾ ।
ಅರ್ಧನಾರೀಶ್ವರಶ್ಚೋಮಾಕಾನ್ತಶ್ಚಾಷಾಢೀ ದಣ್ಡಿನೌ ॥

ಸ್ತ್ಯರತಿರ್ಮೀನ ಮೇಷಾಖ್ಯಾಲೋಹಿತಶ್ಚ ಶಿಖಿಸ್ತಥಾ ।
ಸಕಲಾಂಡದ್ವಿಲಣ್ಡೇಶಾ ಸ ಮಹಾಕಾಲ ಪಾಲನೌ ॥

ಭುಜಙ್ಗೇಶ ಪಿನಾಕೇಶ ಖಡ್ಗೇಶಾಖ್ಯ ಬಕಸ್ತಥಾ ।
ಶ್ವೇತ ಭೃಗ್ವೀಶ ಕುಲಿಶ ಶಿವಾಸಂವರ್ತಕಸ್ತಥಾ ॥

ಏತೇರುದ್ರಾ ಸ್ಮೃತಾ ರಕ್ತಾ ಧೃತಶೂಲ ಕಪಾಲಿಕಾಃ ।

ಟೀಕು॥ ಮರಳಿ ವಿಕಲಾಕ್ಷರಾದಿ ದೇವತೆಗಳ ವಿವರ:
ಕೋಟೀಶ, ಚಂಡೇಶ, ಪಂಚಾಂತಕ, ಶಿವೋತ್ತಮ, ಏಕರುದ್ರ, ಕೂರ್ಮೇಶ, ಏಕನೇತ್ರ, ಚತುರಾನನ, ಅಜೇಶ, ಸರ್ವ, ಸೋಮೇಶ, ಲಾಂಗುಲಿ, ದಾರುಕ, ಅರ್ಧನಾರೀಶ್ವರ, ಉಮಾಕಾಂತ, ಆಷಾಢಿ, ದಂಡಿ, ಅತ್ರಿರುದ್ರ, ಮೀನರುದ್ರ, ಮೇಷರುದ್ರ, ಲೋಹಿತ, ಶಿಖೀ, ಸಕಲಂಡ, ದ್ವಿಲಂಡ, ಈಶ, ಮಹಾಕಾಲ, ಕಪಾಲಿ, ಭುಜಂಗೇಶ, ಪಿನಾಕೇಶ, ಖಡ್ಗೇಶ, ಬಕ, ಶ್ವೇತ, ಭೃಂಗೀಶ, ಲಕುಲೀಶ, ಶಿವ, ಸಂವರ್ತಕ ಎಂಬ ಈ ಮುವತ್ತೈದು ನಾಮವನುಳ್ಳ ತ್ರಿಶೂಲ ಕಪಾಲಂಗಳಂ ಧರಿಸಿಹ, ರಕ್ತವರ್ಣದ ರುದ್ರರುಗಳು ಮುವತ್ತೈದು ವಿಕಲಾಕ್ಷರಾದಿ ದೇವತೆಗಳೆಂದಱಿವುದು. ಹಿಂಗೆ ಕಲಾಕ್ಷರ ವಿಕಲಾಕ್ಷರಂಗಳೆಂಬ ಏಕಪಂಚಾಶದ್ವರ್ಣಂಗಳು. ಏಕಪಂಚಾಶದ್ವರ್ಣಂಗಳು ಏಕ ಪಂಚಾಶದ್ರುದ್ರ ಬೀಜಂ ಗಳಾದ ಕಾರಣ ಈ ವರ್ಣ ಪೂರ್ವವಾದ ಷಟ್‌ಚಕ್ರಂ ಶಿವಚಕ್ರಂಗಳೆಂದಱಿವುದು.

ಶ್ಲೋಕ॥ ಏತಾನಿ ಶಿವಚಕ್ರಾಣಿ ಶಕ್ತಿ ಚಕ್ರಾಣ್ಯಥೋ ನ್ಯಸೇತ್ ।

ಟೀಕು॥ ಏತಾನಿ ಶಿವಚಕ್ರಾಣಿ=ಆಧಾರ, ಸ್ವಾದಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿ ಆಜ್ಞಾ ಎಂಬ ಈ ವರ್ಣನ್ಯಾಸಂಗಳಾದ ಷಟ್‌ಚಕ್ರಂಗಳೂ ಶಿವಚಕ್ರಂಗಳೆಂದು ನುಡಿಯಲುಪಡುತ್ತಿಹುದು. ಶಕ್ತಿಚಕ್ರಾಣ್ಯಥೋ ನ್ಯಸೇತ್=ಅನಂತರಂ ಶಕ್ತಿಗಳ ಸಮೂಹಮಂ ನ್ಯಾಸಮಾಡುವದು. ಈ ಷಟ್‌ಚಕ್ರಾಂತಸ್ಥವಾದ ಏಕಪಂಚಾ ಶದ್ರುದ್ರಾಭಿದಾನವನುಳ್ಳ ಏಕಪಂಚಾಶದ್ವರ್ಣಂಗಳೂ ಶಿವಮಂತ್ರಂಗಳನುದ್ಧರಿಸುವಲ್ಲಿ ಶಿವಬೀಜಂಗಳಾಗಿಹವು. ಶಕ್ತಿಬೀಜಂಗಳನುದ್ಧರಿಸುವಲ್ಲಿ ಶಕ್ತಿಬೀಜಂಗಳಾಗಿಹವು. ಅದೇನುಕಾರಣವಯಾಯೆಂದಡೆ ಏಕಪಂಚಾಶದ್ರುದ್ರರುಗಳೂ ಏಕಪಂಚಾಶಚ್ಛಕ್ತಿ ಗಳೆನಿಸಿಕೊಂಬಹವು. ಆ ಏಕಪಂಚಾಶಚ್ಛಕ್ತಿ ಬೀಜಂಗಳೆಂಬ ಅರ್ಥಕ್ಕೆ ಉದಾಹರಣಂ ಪುನಃಶಾರದಾ ತಿಲಕೇ: ॥೩೧॥

ಶ್ಲೋಕ॥ ಪೂರ್ಣೋದರೀ ಸ್ಯಾದ್ವಿರಜಾ ಶಾಲ್ಮಲೀ ತದನನ್ತರಮ್ ।
ಲೋಲಾಕ್ಷೀ ವರ್ತುಲಾಕ್ಷೀ ಚ ದೀರ್ಘಘೋಣಾಸ್ಸಮೀರಿತಾ ॥

ಸುದೀರ್ಘಮುಖೀ ಗೋಮುಖ್ಯೇ ದೀರ್ಘಜಿಹ್ವಾ ತಥೈವ ಚ ।
ಕುಣ್ಡೋದರ್ಯೋರ್ದ್ವಕೇಶ್ಯಾಚ ತಥಾ ವಿಕೃತಮುಖ್ಯಪಿ ॥

ಜ್ವಾಲಾಮುಖೀ ತಥಾ ಜ್ಞೇಯಾ ಪಶ್ಚಾದುಲ್ಕಾಮುಖೀ ಸ್ಮೃತಾ ।
ಸಶ್ರೀಮುಖೀ ಚ ವಿದ್ಯಾ ಚ ಮುಖ್ಯೇತಾ ಸ್ವರಶಕ್ತಯಃ ॥

ಟೀಕು॥ ಪೂರ್ಣೋದರಿ, ವಿರಜೆ, ಶಾಲ್ಮಲಿ, ಲೋಲಾಕ್ಷಿ, ವರ್ತುಲಾಕ್ಷಿ, ದೀರ್ಘಘೋಣೆ, ದೀರ್ಘಮುಖಿ, ಗೋಮುಖಿ, ದೀರ್ಘಜಿಹ್ವಾ, ಕುಂಡೋದರಿ, ಊರ್ಧ್ವಕೇಶಿ, ವಿಕೃತಮುಖೀ, ಜ್ವಾಲಾಮುಖಿ, ಉಲ್ಕಮುಖಿ, ಶ್ರೀಮುಖಿ, ವಿದ್ಯಾಮುಖಿ, ಎಂದು ಹೀಂಗೆ ಷೋಡಶನಾಮುವನುಳ್ಳ ಶಕ್ತಿ ದೇವತೆಯರು, ಷೋಡಶ ರುದ್ರಶಕ್ತಿಯರೆಂದಜೀವುದು. ॥೩೪॥

ಶ್ಲೋಕ॥ ಮಹಾಕಾಳೀ ಸರಸ್ವತ್ಯಾ ಸರ್ವಸಿದ್ಧಿ ಸಮನ್ವಿತೇ ।
ಗೌರೀತ್ರೈಲೋಕ್ಯ ವಿದ್ಯಾಸ್ತ್ಯಾತ್ ಮನ್ತ್ರಶಕ್ತಿಸ್ತತಃ ಪರಮ್ ॥ ॥೩೫॥

ಆತ್ಮಶಕ್ತಿರ್ಭೂತಮಾತಾ ತಥಾಲಂಬೋದರೀಮತಾ ।
ದ್ರಾವಿಣೀ ನಗರೀಭೂಯಾಃಖೇಚರೀ ಚಾಪಿ ಮಞ್ಜರೀ ॥ ॥೩೬॥

ರೂಪಿಣೀ ವಿರಜೇ ಪಶ್ಚಾತ್ ಕಾಲೋದರ್ಯಾಪಿ ಪೂತನಾ ।
ಸ್ಯಾದ್ಭದ್ರಕಾಳೀ ಯೋಗಿನ್ಯೌ ಶಙ್ಖಿನೀ ಗರ್ಜಿನೀ ತಥಾ ॥ ॥೩೭॥

ಕಾಲರಾತ್ರಿಶ್ಚ ಕೂರ್ದನ್ಯಾ ಕಪರ್ದಿನ್ಯಾಪಿವಾಙ್ಮಯಾ ।
ಜಯಾ ಚ ಸುಮುಖೇಶ್ವರ್ಯಾ ರೇವತೀ ಮಾಧವೀತಥಾಃ ॥ ॥೩೮॥

ವಾರುಣೀ ವಾಯುವೀ ಪ್ರೋಕ್ತಾ ಪಶ್ಚಾದ್ರಕ್ಷೋವಧಾರಿಣೀ ।
ತತಶ್ಚ ಸಹಜಾಲಕ್ಷ್ಮೀ ವ್ಯಾಪಿನೀ ಮಾಯವಾನ್ವಿತಾ ॥ ॥೩೯॥

ಶ್ಲೋಕ॥ ಏತಾ ರುದ್ರಾಙ್ಗಪೀಠಸ್ಥಾ ಸಿನ್ದೂರಾರುಣ ವಿಗ್ರಹಾ ।
ರಕ್ತೋತ್ಪಲ ಕಪಾಲಾಭ್ಯಾಮಲಂಕೃತ ಕರಾಮ್ಬುಜಾಃ ॥

ಟೀಕು॥ ಮಹಾಕಾಳಿ, ಸರಸ್ವತಿ, ಗೌರಿ, ತ್ರೈಲೋಕ್ಯ ವಿದ್ಯಾ, ಮಂತ್ರಶಕ್ತಿ, ಆತ್ಮಶಕ್ತಿ, ಭೂತಮಾತೆ, ಲಂಬೋದರಿ, ದ್ರಾವಿಣಿ, ನಗರಿ, ಖೇಚರಿ, ಮಂಜರಿ, ರೂಪಿಣಿ, ವಿರಜೆ, ಕಾಲೋದರಿ, ಪೂತನೆ, ಭದ್ರಕಾಳಿ, ಯೋಗಿನೀ, ಶಂಕಿನಿ, ಗರ್ಜಿನಿ, ಕಾಳರಾತ್ರಿ, ಕೂರ್ದನಿ, ಕಪರ್ದಿನಿ, ವಾಙ್ಮಯೆ, ಸುಮುಖಿ, ಈಶ್ವರಿ, ರೇವತಿ, ಮಾಧವಿ, ವಾರುಣೀ,

ವಾಯುವೀ, ರಕ್ಷೋವಧಾರಿಣೀ, ಸಹಜೆ, ಲಕ್ಷ್ಮಿ, ವ್ಯಾಪಿನಿ, ಮಾಯವಾನ್ವಿತೆ, ಎಂಬ ಈ ಮುವತ್ತೈದು ಶಕ್ತಿ ದೇವತೆಗಳೂ ಮೂವತ್ತೈದು ರುದ್ರಾಂಗ ಬೀಜಂಗಳ ಪೀಠದಲ್ಲಿರುತ್ತಿಹರು. ಸಿಂಧೂರದೋಪಾದಿ ಕೆಂಪುವರ್ಣವನುಳ್ಳವರು. ಕನ್ನೈದಿಲ ಕಪಾಲಂಗಳಿಂದಲಂಕರಿಸಲ್ಪಟ್ಟ ಹಸ್ತಂಗಳುಳ್ಳವರು. ಹೀಂಗೆ ಅಯಿವತ್ತೊಂದು ರುದ್ರಬೀಜಂಗಳೂ ಐವತ್ತೊಂದು ಶಕ್ತಿಬೀಜಂಗಳೂ ಎಂಬಭಿದಾನವ ಪಡವವು. ಅಥಃ ಶಿವಚಕ್ರಾಣಿನ್ಯಸೇತ್=ಶಿವಚಕ್ರನ್ಯಾಸವ ಮಾಡಿದನಂತರಂ ಈ ಶಕ್ತಿ ಚಕ್ರಂಗಳ ನ್ಯಾಸವ ಮಾಡುವದು. ॥೪೦॥

ಶ್ಲೋಕ॥ ಆಧಾರಾದಿಗಲಾನ್ತಂ ಚ ವರ್ಣಾನಿ ಪೂರ್ವವಿನ್ನ್ಯಸೇತ್ ।
ಆಜ್ಞಾಯಾಂ ತು ವಿಶೇಷೋಸ್ತಿ ಶಕ್ತಿ ಪಕ್ಷೇ ಹಳೇ ನ್ಯಸೇತ್ ।

ಟೀಕು॥ ಆಧಾರಾದಿಗಲಾಂತಂ ಚ=ಆಧಾರ ಸ್ವಾದಿಷ್ಠ, ಮಣಿಪೂರಕ, ಅನಾಹತ ವಿಶುದ್ಧಿ, ಎಂಬೈದು ಚಕ್ರಪರ್ಯಂತರಂ, ವರ್ಣಾನಿ ಪೂರ್ವ ವಿನ್ಯಸೇತ್=ಅಕ್ಷರಂಗಳು ಮೊದಲಲ್ಲಿ ಶಿವಚಕ್ರ ನ್ಯಾಸ ಹೇಂಗೆ ಮಾಡಿಹುದು. ಆಜ್ಞಾಯಾಂತು=ಆಜ್ಞಾಸ್ಥಾನದಲ್ಲಿ ಯಾಯಿತ್ತಾದಡೆ, ವಿಶೇಷೋಽಸ್ತಿ=ವಿಶೇಷ ಉಂಟಾಗಿರುತ್ತಿಹುದು. ಶಿವಚಕ್ರನ್ಯಾಸ ಮಾಡುವಡೆ, ಳ ಕಾರ ಕ್ಷಕಾರಂಗಳಂ ನ್ಯಾಸವಾದ ಪಕ್ಷೇ ಹಕಾರ ಳಕಾರಮಂ ನ್ಯಾಸವ ಮಾಡುವದು. ॥೪೧॥

ಶ್ಲೋಕ॥ ವರ್ಣಾಧಿದೈವತಾಸ್ತತ್ರ ಪೂರ್ವವತ್ಪರಿಕಲ್ಪಯೇತ್ ।

ಟೀಕು॥ ತತ್ರ=ಆ ಶಿವಚಕ್ರದ ಶಕ್ತಿಚಕ್ರಂಗಳಲ್ಲಿ, ವರ್ಣಾಧಿದೈವತಾಃ=ವರ್ಣಾಧಿ ದೈವತಂಗಳನು, ಪೂರ್ವವತ್ಪರಿಕಲ್ಪಯೇತ್=ಹಿಂದಣ ಚಕ್ರೋದ್ಧರಣದಲ್ಲಿ ಹೇಂಗೆ ಕಲ್ಪಸಿಹವು ಹಾಂಗೆ ರುದ್ರರಂ ರುದ್ರ ಶಕ್ತಿಗಳಂ ಕಲ್ಪಿಸುವದು. ॥೪೨॥

ಶ್ಲೋಕ॥ ಏವಂ ಷಟ್ಚಕ್ರಮಾಖ್ಯಾತಂ ಮೂರ್ತಮನ್ತ್ರಂ ನ್ಯಸೇತ್ತತಃ ।

ಟೀಕು॥ ಏವಂ ಷಟ್ಚಕ್ರಮಾಖ್ಯಾತಂ=ಈ ಪ್ರಕಾರದಿಂ ಷಟ್‌ಚಕ್ರನ್ಯಾಸಂ ನುಡಿಯಲು ಪಟ್ಟುದು. ತತೋ ಮೂರ್ತಮನ್ತ್ರಂ ನ್ಯಸೇತ್=ಆ ತಋುವಾಯಲ್ಲಿ ಮೂರ್ತಮಂತ್ರವಂ ನ್ಯಾಸವ ಮಾಡುವುದು. ॥೪೩॥

ಶ್ಲೋಕ॥ ನಾದಂ ಲಿಙ್ಗೇ ಚ ವಿನ್ಯಸ್ಯ ಬಿನ್ದು ಮಾಜ್ಯಪ್ರಧಾರಿಕೇ ।
ಪಟ್ಟ್ಯಾದಿ ಕಙ್ಠಪರ್ಯನ್ತಂ ಮಕಾರಂ ವಿನ್ಯಸೇತ್ತತಃ ।
ವೃತ್ತೇ ತೂಕಾರಕಂ ನ್ಯಸ್ಯ ಅಕಾರಂ ಕಂಜಪಟ್ಟಕೇ ॥

ಟೀಕು॥ ನಾದಂ ಲಿಂಗೇ ಚ ವಿನ್ಯಸ್ಯ=ಹಕಾರಮಂ ಆಜ್ಯಪ್ರಧಾರಿಕೆಯ ಮೇಲಣ

ಪಂಕ್ತಿಯ ಮೇಲಣ ಚತುಃ ಕೋಷ್ಠಮಧ್ಯದಲ್ಲಿ ನ್ಯಾಸವ ಮಾಡಿ, ಬಿಂದುಮಾಜ್ಯ ಪ್ರಧಾರಿಕೇ=ಓಂಕಾರವಂ ಆಜ್ಯಪ್ರಧಾರಿಕೆಯಲ್ಲಿ ನ್ಯಾಸವ ಮಾಡುವದು. ಪಟ್ಟ್ಯಾದಿ ಕಂಜ ಪರ್ಯಂತಂ ಮಕಾರಂ ನ್ಯಸೇತ್=ಊರ್ಧ್ವಪಟ್ಟಿಕೆ ಮೊದಲಾಗಿ ಊರ್ಧ್ವ ಕಂಜ ಪರ್ಯಂತರ ಮಕಾರಮಂ ನ್ಯಾಸವ ಮಾಡುವದು. ವೃತ್ತೇತು=ವೃತ್ತಸ್ಥಾನದಲ್ಲಿ ಯಾಯಿತ್ತಾದಡೆ, ಉಕಾರಂ ನ್ಯಸ್ಯ=ಉಕಾರಮಂ ನ್ಯಾಸವ ಮಾಡಿ, ಅಕಾರಂ ಕಂಜ ಪಟ್ಟಿಕೇ=ಅಕಾರಮಂ ಅಧಃಕಂಜ ಪಟ್ಟಿಕೆಗಳ ಸ್ಥಾನದಲ್ಲಿ ನ್ಯಾಸಂ ಮಾಡುವದು. ॥೪೪॥

ಶ್ಲೋಕ॥ ಸೂಕ್ಷ್ಮಪಞ್ಚಾಕ್ಷರಂ ನ್ಯಸ್ತಂ ಸ್ಥೂಲಪಞ್ಚಾಕ್ಷರಂ ಶೃಣು ।

ಟೀಕು॥ ಸೂಕ್ಷ್ಮಪಂಚಾಕ್ಷರಂ ನ್ಯಸ್ತಂ=ಈ ಪ್ರಕಾರದಿಂದ ನ್ಯಾಸದ ಹ ಓಂ ಮ ಉ ಅ ಎಂಬ ಈ ಪ್ರಣವದ ವಿಭಾಗಾಕ್ಷರವೈದು ಸೂಕ್ಷ್ಮ ಪಂಚಾಕ್ಷರವೆನಿಸಿಕೊಂಬವು. ಈ ಸೂಕ್ಷ್ಮ ಪಂಚಾಕ್ಷರಂ ಹೀಂಗೆ ನ್ಯಾಸವ ಮಾಡಲುಪಟ್ಟುದು. ಸ್ಥೂಲ ಪಂಚಾಕ್ಷರಂ ಶೃಣು=ಎಲೆ ಕುಮಾರ! ಸ್ಥೂಲಪಂಚಾಕ್ಷರ ನ್ಯಾಸಮಂ ಕೇಳು. ॥೪೫॥

ಶ್ಲೋಕ॥ ನಕಾರಾದಿ ಯಕಾರಾನ್ತಂ ಪಞ್ಚಾರ್ಣಂ ತತ್ರ ವಿನ್ಯಸೇತ್ ।

ಟೀಕು॥ ನಕಾರ ಮಃಕಾರ ಶಿಕಾರ ವಾಕಾರ ಯಕಾರಂಗಳೆಂದೈದಕ್ಷರಂಗಳ, ಆಧಾರ ಸ್ವಾದಿಷ್ಠ, ಮಣಿಪೂರಕ, ಅನಾಹತ, ವಿಶುದ್ಧಿ ಎಂಬೈದು ಚಕ್ರಸ್ಥಾನ ಮಧ್ಯದಲ್ಲಿ ಕ್ರಮದಿಂ ನ್ಯಾಸವ ಮಾಡುವದು. ॥೪೬॥

ಶ್ಲೋಕ॥ ಪಞ್ಚಾಕ್ಷರಮಿದಂ ಪ್ರೋಕ್ತಂ ಷಡಕ್ಷರಮಥೋಚ್ಯತೇ ।

ಟೀಕು॥ ಪಂಚಾಕ್ಷರಮಿದಂ ಪ್ರೋಕ್ತಂ=ನಮಃ ಶಿವಾಯ ಎಂಬ ಈ ಐದಕ್ಷರ ಸ್ಥೂಲ ಪಂಚಾಕ್ಷರವೆನಿಸಿಕೊಂಬುದು, ಈ ಸ್ಥೂಲ ಪಂಚಾಕ್ಷರಂಗಳ ನ್ಯಾಸವ ಹೇಳಲುಪಟ್ಟುದು. ಷಡಕ್ಷರಮಥೋಚ್ಯತೆ=ಅನಂತರಂ ಷಡಕ್ಷರ ನ್ಯಾಸಂ ನುಡಿಯಲುಪಟ್ಟುದು. ॥೪೭॥

ಶ್ಲೋಕ॥ ತಾರಂ ಲಿಙ್ಗೇ ಪ್ರವಿನ್ಯಸ್ಯ ಪಟ್ಟಿಕಾಯಾಂ ನಕಾರಕಮ್ ।
ಮಕಾರಮೂರ್ಧ್ವ ಕಂಜೇ ತು ಶಿಕಾರಂ ವೃತ್ತಮಧ್ಯಕೇ ।
ಅಧಃಕಞ್ಜೇ ಚ ವಾಕಾರಂ ಚಾಧಃ ಪಟ್ಯಾಂ ಯಕಾರಕಮ್ ॥

ಟೀಕು॥ ತಾರಂ ಲಿಂಗೇ ಪ್ರವಿನ್ಯಸ್ಯ=ಓಂಕಾರಮಂ ಶಿವಲಿಂಗದಲ್ಲಿ ನ್ಯಾಸವ ಮಾಡಿ, ಪಟ್ಟಿಕಾಯಾಂ ನಕಾರಕಂ=ಶಕ್ತಿ ಪೀಠದ ಊರ್ಧ್ವ ಪಟ್ಟಿಕೆಯಲ್ಲಿ ನಕಾರಮಂ ನ್ಯಾಸಮಂ ಮಾಡುವದು. ಊರ್ಧ್ವಕಂಜೇ ಮಕಾರಕಂ=ಊರ್ಧ್ವಕಂಜದಲ್ಲಿಯಾಯಿತ್ತಾದಡೆ ಮಕಾರಮಂ ನ್ಯಾಸಮಂ ಮಾಡುವದು, ಶಿಕಾರಂ ವೃತ್ತ ಮಧ್ಯಕೇ=ಶಿಕಾರಮಂ ವೃತ್ತ ಮಧ್ಯದಲ್ಲಿ ನ್ಯಾಸವ ಮಾಡುವದು. ಅಧಃ ಕಂಜೇ ವಾಕಾರಂ=ಅಧಃ ಕಂಜದಲ್ಲಿ

ವಾಕಾರಮಂ ನ್ಯಾಸವ ಮಡುವದು. ಅಧಃ ಪಟ್ಯಾಂ ಯಕಾರಕಂ=ಕೆಳಗಣಪಟ್ಟಿಕೆಯಲ್ಲಿ ಯಕಾರಮಂ ನ್ಯಾಸಮಂ ಮಾಡುವದು. ॥೪೯॥

ಶ್ಲೋಕ॥ ಏವಂ ಷಡಕ್ಷರಂ ಪ್ರೋಕ್ತಂ ಷಡಧ್ವನ್ಯಾಸಮುಚ್ಯತೇ ॥

ಟೀಕು॥ ಏವಂ=ಈ ಪ್ರಕಾರದಿಂದ ಷಡಧ್ವನ್ಯಾಸಂ=ಅನಂತರದಲ್ಲಿ ಭುವನಾದಿ ಷಡಧ್ವನ್ಯಾಸವಂ, ಉಚ್ಯತೇ=ಹೇಳಲುಪಡುವುದು. ಓಂ ನಮಃಶಿವಾಯ ಎಂಬ ಷಡಕ್ಷರ ಮಂತ್ರನ್ಯಾಸಂ, ಪ್ರೋಕ್ತಂ=ನುಡಿಯಲುಪಟ್ಟುದು. ಈ ಪಂಚಾಕ್ಷರ ಷಡಕ್ಷರಗಳೆಂಬ ಮಂತ್ರಂ ವೇದಾಗಮ ಪುರಾಣಂಗಳಲ್ಲಿ ಸರ್ವತ್ರ ಪ್ರಸಿದ್ಧಕಾರಣ ವಿಶುದ್ಧಾಖ್ಯದಲ್ಲಿ ಪರಮೇಶ್ವರನುದ್ಧರಣಮಂ ನಿರೂಪಿಸಿದುದು. ॥೫೦॥

ಶ್ಲೋಕ॥ ಧಾನ್ತಂ ಭಾನ್ತಂ ಚ ಮಾನ್ತಂ ಚ ತೃತೀಯ ಸ್ವರಭೂಷಿತಮ್ ।
ಲಾನ್ತಂ ಪಕ್ಷಸ್ವರೋಪೇತಂ ಮಾನ್ತಂ ಪಞ್ಚಾಕ್ಷರಂ ಸ್ಮೃತಮ್ ॥

ಟೀಕು॥ ದಕಾರದ ಕಡೆಯಣ ನಕಾರ, ಭಕಾರದ ಕಡೆಯಣ ಮಕಾರ, ವಕಾರದ ಕಡೆಯಣ ಮೂಱನೆಯ ಸ್ವರದಿಂದ ಭೂಷಿತವಾದ ಶಿಕಾರ, ಲಕಾರದ ಕಡೆಯಣ ಪಕ್ಷಸ್ವರದೊಡನೆ ಕೂಡಿದ ವಾಕಾರ, ಮಕಾರದ ಕಡೆಯಣ ಯಕಾರ ಹಿಂಗೆ ಉದ್ಧೃತ ಮಾದಡೆ ಪಂಚಾಕ್ಷರವೆಂದು ನೆನೆಯಲುಪಟ್ಟುದೆಂದು ರಹಸ್ಯೋದ್ಧರಣಂ. ॥೫೧॥

ಶ್ಲೋಕ॥ ಹೃದಯಂ ವಪರಂ ಸೂಕ್ಷ್ಮಲಾನ್ತೋನನ್ತಾನ್ವಿತೋಮರುತ್ ।
ಪಞ್ಚಾಕ್ಷರೋ ಮನುಪ್ರೋಕ್ತಸ್ತಾರಾದ್ಯೋಽಯಂ ಷಡಕ್ಷರಃ ।

ಟೀಕು॥ ಹೃದಯಂ=ಹೃದಯಮಂತ್ರ ಪಲ್ಲವವಪ್ಪ ನಮಃ ಎಂಬೆರಡಕ್ಷರಂ ಮಂತ್ರೋದ್ಧರಣವ ಮಾಡುವಲ್ಲಿ ಹೃದಯವೆಂದು ನುಡಿಸಿಕೊಂಬುದು. ಅದಾಗಿ ನಮಃ ಎಂಬೆರಡಕ್ಷರವು ವಪರಂ=ವಕಾರಕ್ಕೆ ಮೇಲಾದಶಕಾರಂ, ಸೂಕ್ಷ್ಮ=ಸೂಕ್ಷ್ಮರುದ್ರಾಭಿಧಾನವ ನುಳ್ಳ ಇಕಾರ ಸ್ವರವನುಳ್ಳಹುದಾಗಿಹುದು. ಹಿಂಗಾದಡೆ ಶಿ ಎಂಬ ವರ್ಣವಪ್ಪುದು. ಲಾಂತೋನನ್ತಾನ್ವಿತಃ=ಲಕಾರಕ್ಕೆ ಕಡೆಯಾದ ವಕಾರಂ=ಅನಂತನೆಂಬ ರುದ್ರಾಭಿದಾನವ ನುಳ್ಳ ಆ ಎಂಬ ಸ್ವರದೊಡನೆ ಕೂಡಿದುದಾಗಿಹುದು. ಹಿಂಗಾದಡೆ ವಾ ಎಂಬ ವರ್ಣವಹುದು. ಮರುತ್=ವಾಯುಬೀಜವಪ್ಪ ಯಕಾರಂ ಕಡೆಯವರ್ಣವಾಗಿಹುದು. ಹೀಂಗೆ ನವಶ್ಶಿವಾಯ ಎಂಬ ಪಂಚಾಕ್ಷರೋದ್ಧರಣಂ. ತಾರಾದ್ಯೋಽಯಂ ಷಡಕ್ಷರಂ= ಆವುದಾನೊಂದು ಈ ಮಂತ್ರಪ್ರಣವಾದಿಯಾಗಿದ್ದುತ್ತಾದಡೆ ಷಡಕ್ಷರವೆನಿಸಿಕೊಂಬುದೆಂದು ಶಾರದಾ ತಿಲಕೋದ್ಧರಣ. ಇತ್ಯಾದುದ್ಧರಣಂ ಬಹು. ಷಡಧ್ವನ್ಯಾಸಮುಚ್ಯತೇ= ಷಡಧ್ವನ್ಯಾಸಂ ನುಡಿಯಲುಪಡುವದು. ॥೫೨॥

ಶ್ಲೋಕ॥ ಜಗತ್ಯಾಂ ಭುವನಾಧ್ವಾನಂ ಪದಾಧ್ವಾನಂ ಚ ಪಂಕಜೇ ।
ತತ್ತ್ವಾಧ್ವಾನಂ ಪಟ್ಟಿಕಾಯಾಂ ಮನ್ತ್ರಾಧ್ವಾನಂ ಪ್ರಧಾರಿಕೇ ।
ಏವಂ ಷಡಧ್ವನೋ ನ್ಯಸ್ತ್ವಾ ಸರ್ವಮನ್ತ್ರಾತ್ಮಕಂ ಶಿವಮ್ ॥

ಟೀಕು॥ ಜಗತ್ಯಾಂಭುವನಧ್ವಾನಂ=ಪೃಥ್ವೀಸ್ಥಾನವಪ್ಪ ಆಧಾರ ಸ್ಥಾನದಲ್ಲಿ ಭುವನಾಧ್ವಾನವನೂ, ಪಂಕಜೇಪದಾಧ್ವಾನಂ=ಅಧಃ ಪಂಕಜದಲ್ಲಿ ಪದಾಧ್ವಾನವನೂ, ವೃತ್ತೇತುವರ್ಣಾಧ್ವಾನಂ=ಮಣಿಪೂರಕ ಸ್ಥಾನದಲ್ಲಿ ವರ್ಣಾಧ್ವಾವನೂ, ಕಲಾಧ್ವಾನಂಚ ಪಂಕಜೇ= ಉರ್ಧ್ವಪಂಕಜದಲ್ಲಿ ಕಲಾಧ್ವಾನವನೂ, ಪಟ್ಟಿಕಾಯಾಂತತ್ತ್ವಾಧ್ವಾನಂ=ಊರ್ಧ್ವಪಟ್ಟಿಕೆಯಲ್ಲಿ ತತ್ತ್ವಾಧ್ವಾನವನೂ, ಪ್ರಧಾರಿಕೇ ಮಂತ್ರಾರ್ಧ್ವಾನಂ=ಆಜ್ಯಪ್ರಧಾರಿಕೆಯಲ್ಲಿ ಮಂತ್ರಾಧ್ವಾವವನೂ, ನ್ಯಸ್ತ್ವಾ=ನ್ಯಾಸಮಂ ಮಾಡಿ, ಸರ್ವಮಂತ್ರಾತ್ಮಕಂ ಶಿವಂ=ಎಲ್ಲಾ ಮಂತ್ರಸ್ವರೂಪವಾದಂಥಾದುದು ಶಿವಲಿಂಗವೆಂದಱಿವುದು. ॥೫೩॥

ಶ್ಲೋಕ॥ ಸಪ್ತಕೋಟಿ ಮಹಾಮನ್ತ್ರೈರ್ಮನ್ತ್ರಿತಂ ಲಿಙ್ಗಮುಚ್ಯತೇ ।
ಜ್ಞಾತ್ವಾ ಸಮರ್ಚಯೇನ್ಮನ್ತ್ರೀ ತ್ವನ್ಯಥಾ ನಿಷ್ಫಲಂ ಭವೇತ್ ।

ಟೀಕು॥ ಸಪ್ತಕೋಟಿ ಮಹಾಮನ್ತ್ರೈಃ=ಏಳು ಕೋಟಿ ಮಹಾಮಂತ್ರಂಗಳಿಂದ, ಮಂತ್ರಿತಂ ಲಿಂಗಮುಚ್ಯತೇ=ಮಂತ್ರಿಸಲುಪಟ್ಟುದು ಶಿವಲಿಂಗವೆಂದು ನುಡಿಯಲುಪಡುತ್ತಿಹುದು. ಮನ್ತ್ರೀ ಜ್ಞಾತ್ವಾಸಮರ್ಚಯೇತ್=ಶಿವಮಾಂತ್ರಿಕನಾದ ಮಹಾತ್ಮನು ಸರ್ವಮಯವಾದುದು ಶಿವಲಿಂಗವೆಂದಱಿವುದು. ತತ್‌ಶಿವಲಿಂಗಮಂ ಪೂಜಿಸುವದು. ಅನ್ಯಥಾ ನಿಷ್ಫಲಂ ಭವೇತ್=ಈ ಶಿವಲಿಂಗಮಂ ಪೂಜಿಸುವದು. ಅನ್ಯಥಾ ನಿಷ್ಫಲಂ ಭವೇತ್=ಈ ಶಿವಲಿಂಗ ಮಹಾತ್ಮವನಱಿಯದೆ ದುರ್ಭಾವದಿಂ ಬೇಱೊಂದು ರೀತಿಯಾಗಿ ಪೂಜಿಸಿದಡೆ ಆ ಪೂಜೆ ನಿಃಫಲವಹುದು. ॥೫೪॥

ಶ್ಲೋಕ॥ ಕಾಮಿಕಾದಿಷು ತನ್ತ್ರೇಷು ಅಷ್ಟಾವಿಂಶತಿಭೇದತಃ ।

ಟೀಕು॥ ಕಾಮಿಕಾದಿಷು ತಂತ್ರೇಷು=ಕಾಮಿಕಾಗಮ ಮೊದಲಾದ ಎಲ್ಲಾ ಆಗಮಂಗಳಲ್ಲಿ ಅಷ್ಟಾವಿಂಶತಿಭೇದತಃ=ಇಪ್ಪತ್ತೆಂಟು ಭೇದದಿಂದ, ॥೫೫॥

ಶ್ಲೋಕ॥ ಪ್ರೋಕ್ತಾನಿ ಮನ್ತ್ರಜಾತಾನಿ ತತ್ಸರ್ವಂ ವಿನ್ಯಸೇದ್ಬುಧಃ ॥

ಟೀಕು॥ ಪ್ರೋಕ್ತಾನಿ ಮನ್ತ್ರಜಾತಾನಿ=ನುಡಿಯಲು ಪಟ್ಟ ಮಂತ್ರಜಾತಂಗಳೆಷ್ಟುಂಟು, ತತ್ಸರ್ವಂ=ಆ ಸಮಸ್ತವನೂ, ಬುಧೋವಿನ್ಯಸೇತ್=ಆಗಮಜ್ಞನಾದ ವಿದ್ವಾಂಸನು ಶಿವಲಿಂಗದಲ್ಲಿ ನ್ಯಾಸವ ಮಾಡುವದು. ॥೫೬॥

ಶ್ಲೋಕ॥ ತಸ್ಮಾತ್ಸರ್ವ ಪ್ರಯತ್ನೇನ ಮನ್ತ್ರಜಾತಮಿದಂ ಮತಮ್ ।

ಟೀಕು॥ ತಸ್ಮಾತ್=ಅದು ಕಾರಣವಾಗಿ, ಸರ್ವಪ್ರಯತ್ನೇನ=ಎಲ್ಲ ಪ್ರಯತ್ನದಿಂದವೂ, ಇದಂ ಮಂತ್ರ ಜಾತಮತಂ=ಈ ಶಿವಲಿಂಗಂ ಮಂತ್ರಜಾತವೆಂದು ನೆನೆಯಲುಪಟ್ಟುದು.

ಶ್ಲೋಕ॥ **ಆದಿವಾಲಂ ಸವಾಲಂ ಚ ಕೌಮಾರಂ ಚ ತ್ರಿಕೋಣಕಮ್ ।**
ಯೌವನಂ ಚೈವ ಜಾತೀನಾಂ ಪ್ರಕೃತಿರ್ವಿಕೃತಿಸ್ಥಥಾ ॥

ಬ್ರಾಹ್ಮಣಃ ಕ್ಷತ್ರಿಯೋ ವೈಶ್ಯಃ ಶೂದ್ರಜಾತಿ ಪ್ರಕೀರ್ತಿತಾಃ ।
ಸ್ತ್ರೀಪುನ್ನಪುಂಸಕಂ ಚೈವ ಚಲನ ಸ್ಥಾನಮಾಸನಮ್ ॥

ಶುದ್ಧಂ ಮಿಶ್ರಂ ಚ ಸಙ್ಕೀರ್ಣಂ ಮನ್ತ್ರರೂಪಮಥಶೃಣು ।
ಏಕೋನವಿಂಶತಿರ್ಮನ್ತ್ರಾಃ ತೇಷಾಂ ಲಕ್ಷಣಮುಚ್ಯತೇ ॥

ವಾಗ್ಭವಂ ಮುಖಮಿತ್ಯಾಹುರೋಷ್ಠಾನ್ತಂ ಗ್ರೀವಮೇವ ಚ ।
ಪಾರುಷ್ಯರೂಪಮೇವಂ ತು ವಾಸವಾಹನಮುಚ್ಯತೇ ॥

ಟೀಕು॥ ಆದಿವಾಲ, ಸವಾಲ, ಕೌಮಾರ, ಯೌವನ, ಪ್ರಕೃತಿ, ವಿಕೃತಿ, ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ, ಸ್ತ್ರೀ, ಪುರುಷ, ನಪುಂಸಕ, ಚಲನ, ಸ್ಥಾನ, ಆಸನ, ಶುದ್ಧ, ಮಿಶ್ರ, ಸಂಕೀರ್ಣ, ಮಂತ್ರರೂಪ, ವಾಸವಾಹನ ಎಂದು ಹೀಂಗೆ ಹತ್ತೊಂಭತ್ತು ನಾಮಂಗಳು ಹೇಳಲು ಪಡುತ್ತಿಹವು. ಈ ನವದಶನಾಮ ಲಕ್ಷಣಂಗಳಂ ಸ್ಪಷ್ಟವಾಗಿ ನಿರೂಪಿಸಿಹನು. ॥೬೧॥

ಶ್ಲೋಕ॥ **ಶುದ್ಧಂ ಚಾಕಾರ ಸಂಯುಕ್ತಮಾದಿವಾಲಂ ಪ್ರಕೀರ್ತಿತಮ್ ।**
ಅಷ್ಟಬೀಜಂ ಸಮಾಯುಕ್ತಂ ಸವಾಲಂ ಚೇತಿ ಕೀರ್ತಿತಮ್ ॥

ಟೀಕು॥ ಅಕಾರದೊಡನೆ ಕೂಡಿದ್ದ ಶುದ್ಧ ಮಂತ್ರವು ಆದಿವಾಲವೆಂದು ಹೇಳಲು ಪಟ್ಟುದು. ಎಂಟು ಬೀಜದೊಡನೆ ಕೂಡಿದ ಮಂತ್ರ ಸವಾಲಮಂತ್ರವೆಂದು ಹೇಳಲು ಪಟ್ಟುದು. ॥೬೨॥

ಶ್ಲೋಕ॥ **ಪಞ್ಚಸ್ವರ ಸಮಾಯುಕ್ತಂ ಕೌಮಾರಂ ತು ಪ್ರಕೀರ್ತಿತಮ್ ।**
ಯೌವನಂ ಚೈವ ಸರ್ವೇಷಾಂ ಮನ್ತ್ರಜಾತಂ ಪ್ರಕೀರ್ತಿತಮ್ ॥

ಟೀಕು॥ ಅಯಿದು ಸ್ವರದೊಡನೆ ಕೂಡಿದ್ದುದು ಕೌಮಾರವೆಂದು ಹೇಳಲುಪಟ್ಟುದು. ಎಲ್ಲಾ ದೇವತಾಮಂತ್ರಜಾತಂ ಯೌವನವೆಂದು ಹೇಳಲುಪಟ್ಟುದು. ॥೬೩॥

ಶ್ಲೋಕ॥ **ಏಕಾಕ್ಷರಂ ಬ್ರಾಹ್ಮಣೋಜಾತಂ ಪಞ್ಚಾಕ್ಷರಂ ನೃಪಸ್ಯ ತು ।**
ಷಡಕ್ಷರ ಸಮಾಯುಕ್ತಂ ವೈಶ್ಯಂ ಶೂದ್ರಂ ಪ್ರಕೀರ್ತಿತಮ್ ॥

ಟೀಕು॥ ಈ ಕ್ರಮದಿಂದೇಣಿಸಲುಪಟ್ಟ ವರ್ಣಮಂತ್ರ ಚತುರ್ಥಾಂತವಾಗಿಪ್ಪುದೆಂದು ಹೇಳಲುಪಟ್ಟುದು. ॥೬೪॥

ಶ್ಲೋಕ॥ ಸ್ವಾಹಾಕಾರೋ ಭವೇನ್ನಾರೀ ನಮೋಽನ್ತಂ ಪುರುಷಾಕೃತಿಃ ।
ಫಟ್ಕಾರಂ ಚ ವಷಟ್ಕಾರಂ ನಪುಂಸಕಮಿತಿ ಸ್ಮೃತಮ್ ॥

ಟೀಕು॥ ಸ್ವಾಹಾ ಎಂಬ ಪಲ್ಲವಾಕಾರವೇ ಸ್ತ್ರೀರೂಪವು. ನಮಸ್ಕಾರ ಪಲ್ಲವವೇ ಪುರುಷಾಕಾರ. ಫಟ್ಕಾರ ವಷಟ್ಕಾರ ಪಲ್ಲವಂಗಳೆ ನಪುಂಸಕಾಕಾರವೆಂದು ನೆನೆಯಲು ಪಟ್ಟುದು. ॥೬೫॥

ಶ್ಲೋಕ॥ ವಿಪ್ರಂ ಸ್ವಾಹಾನ್ತಕಂ ಪ್ರೋಕ್ತಂ ನೃಪವೈಶ್ಯಾದಿ ಸಂಯುತಮ್ ।
ಇನ್ದ್ರಾದಿಶಯನಸ್ಥಾನಂ ಮನ್ತ್ರಜಾತಂ ಪ್ರಕೀರ್ತಿತಮ್ ॥

ಟೀಕು॥ ಮರಳಿ ಸ್ವಾಹಾ ಎಂಬ ಮಂತ್ರಾಂತವೂ ಕ್ಷತ್ರಿಯ ವೈಶ್ಯ ಶೂದ್ರ ಸಹಿತವಾದ ವಿಪ್ರಮಂತ್ರವು, ಇಂದ್ರಾದಿಗಳ ಇರುವಿನ ಸ್ಥಾನವು ಮಂತ್ರಜಾತವೆಂದು ಹೇಳಲು ಪಟ್ಟುದು. ॥೬೬॥

ಶ್ಲೋಕ॥ ಶುದ್ಧಮೇಕಾಕ್ಷರಂ ಪ್ರೋಕ್ತಂ ವೇದಾಕ್ಷರಂತು ಮಿಶ್ರಕಮ್ ।
ಸಙ್ಕೀರ್ಣೋಽಬಹುಧಾಮನ್ತ್ರಂ ತ್ರಿವಿಧಂ ಮನ್ತ್ರಮುಚ್ಯತೇ ॥

ಟೀಕು॥ ಏಕಾಕ್ಷರ ಮಂತ್ರವೇ ಶುದ್ಧಮಂತ್ರವೆಂದು ಹೇಳಲುಪಟ್ಟುದು. ಚತುರಕ್ಷರ ಮಂತ್ರವು ಮಿಶ್ರಮಂತ್ರವೆನಿಸಿಕೊಂಬುದು. ಹಲವು ವಿಕಾರ ವರ್ಣಾಂಗಗಳುಳ್ಳ ಮಂತ್ರವೇ ಸಂಕೀರ್ಣ ಮಂತ್ರವೆಂದು ಹೇಳಲುಪಟ್ಟುದು. ಹೀಂಗೆ ಮಂತ್ರಂಗಳೂ ಮೂಱು ವಿಧವಾಗಿ ಹೇಳಲುಪಡುತ್ತಿಹವು. ॥೬೭॥

ಶ್ಲೋಕ॥ ಮನ್ತ್ರಾದೌ ಶೀರ್ಷಕಂ ಪ್ರೋಕ್ತಂ ಮನ್ತ್ರೋರ್ಧ್ವೇ ವದನಂ ಮತಮ್ ।
ಮನ್ತ್ರಪಾರ್ಶ್ವೇತು ಬಾಹ್ವೇ ತು ತಸ್ಯಾಪ್ಯಧರ ಸಂಯುತಮ್ ॥

ಟೀಕು॥ ಮಂತ್ರಾದಿಯೇ ಶಿರಸ್ಸೆಂದು ಹೇಳಲು ಪಟ್ಟುದು. ಮಂತ್ರದ ಊರ್ಧ್ವ ಪ್ರದೇಶವೇ ವದನವೆಂದು ನೆನೆಯಲು ಪಟ್ಟುದು. ಮಂತ್ರದ ಬಾಹುಂಗಳೆ ಉಭಯಪಾರ್ಶ್ವಂಗಳು. ಆ ಮಂತ್ರದ ಕೆಳಗಣ ಪ್ರದೇಶದೊಡನೆಯೂ ಕೂಡಿಹವು. ॥೬೮॥

ಶ್ಲೋಕ॥ ಪಾರ್ಶ್ವೇ ತು ಚಕ್ಷುಃ ಶ್ರೋತ್ರಾಣಿ ಚತುರ್ಮಧ್ಯೇ ತು ನಾಸಿಕಾ ।
ತಸ್ಯಾ ಉರ್ಧ್ವೇ ಲಲಾಟಂ ಚ ಬಿನ್ದುರ್ಮಸ್ತಕಮುಚ್ಯತೇ ॥

ಟೀಕು॥ ಮಂತ್ರದ ಉಭಯ ಪಾರ್ಶ್ವಗಳಲ್ಲಿ ನೇತ್ರಶೋತ್ರಂಗಳಹವು. ಆ ನಾಲ್ಕಱ

ಮಧ್ಯದಲ್ಲಿ ನಾಸಿಕವಹುದು. ಆ ನಾಸಿಕೆಯ ಮೇಲೆ ಲಲಾಟವಿಹುದು. ಬಿಂದುವು ಮಸ್ತಕವೆನಿಸುತ್ತದೆ. ॥೯॥

ಶ್ಲೋಕ॥ ಓಷ್ಠಃ ಶಬ್ದೇನ ಭಿನ್ನ ಸ್ಯಾದಾಸ್ಯಾನ್ತರ ಸಮನ್ವಿತಮ್ ।

ಟೀಕು॥ ಮಂತ್ರನಾದವೇ ಜಿಹ್ವಾ ಎಂದು ಹೇಳಲುಪಟ್ಟುದು. ವರ್ಣರೂಪವಹ ಶಬ್ದವೆ ಆ ಜಿಹ್ವೆಯಲ್ಲಿ ಉಚ್ಚರಿಸುವ ಶಬ್ದವೆಂದು ನೆನೆಯಲುಪಟ್ಟುದು. ಆ ಮುಖದಲ್ಲಿರುವ ಓಷ್ಠವು ಆ ಶಬ್ದದಿಂದ ಭಿನ್ನವಾದುದಹುದು. (ಪ್ರಣವಾಂತ ಸಮಾಯುಕ್ತಂ) ಆ ನಾಸಿಕೋರ್ಧ್ವದಲ್ಲಿ ನೊಸಲು. ಬಿಂದುವೆ ಮಸ್ತಕವೆಂದು ಹೇಳಲು ಪಡುವುದು. ॥೭೦॥

ಶ್ಲೋಕ॥ ನಾದೋಜಿಹ್ವಾಸಮಾಖ್ಯಾತಂ ಶಬ್ದಃ ಶಬ್ದಮಿತಿ ಸ್ಮೃತಮ್ ।

ಪ್ರಣವಾನ್ತ ಸಮಾಯುಕ್ತಂ ಮನ್ತ್ರಾನ್ತೇಚ ಪ್ರತಿಷ್ಠಿತಮ್ ।
ಮನ್ತ್ರರೂಪಮಿದಂ ಪ್ರೋಕ್ತಂ ಮಂತ್ರವಾಸಸ್ತಥೋಚ್ಯತೇ ॥

ಟೀಕು॥ ಮಂತ್ರಸ್ವರೂಪಂ ಪ್ರಣವಾನ್ತ=ಪ್ರಣವದ ಕಡೆಯಲ್ಲಿಯೂ, ಮಂತ್ರಾಂತೇ ಚ=ಮಂತ್ರಾಂತಂಗಳಪ್ಪ ಪಲ್ಲವಂಗಳ ಕಡೆಯಲ್ಲಿಯೂ, ಪೃಷ್ಠತಃ=ಹಿಂಭಾಗದಲ್ಲಿಯೂ, ಸಮಾಯುಕ್ತಂ=ಕೂಡಿರುತ್ತಿಹುದು. ಇದಂ ಮಂತ್ರರೂಪಂ ಪ್ರೋಕ್ತಂ=ಇದು ಮಂತ್ರರೂಪ ವೆಂದು ಹೇಳಲುಪಟ್ಟುದು. ಮಂತ್ರವಾಸಸ್ತಥೋಚ್ಯತೇ=ಅನಂತರವು ಮಂತ್ರವಾಸನಂ ನಿರೂಪಿಸಲುಪಟ್ಟುದು. ॥೭೧॥

ಶ್ಲೋಕ॥ ಮನ್ತ್ರಾಣಾಂ ಪ್ರಕೃತಿರ್ವಾಸೋ ವಾಹನಂ ವಿಕೃತಿಸ್ತಥಾ ।
ಪ್ರಕೃತಿರ್ವರ್ಣ ಭಾವಂಶ್ಚ ವರ್ಣಾನಾಂ ವಾಸಜಿಹ್ವಯಾ ॥

ಟೀಕು॥ ಮಂತ್ರಾಣಾಂ ಪ್ರಕೃತಿರ್ವಾಸಃ=ಮಂತ್ರಂಗಳ ಪ್ರಕೃತಿಯೆ ವಾಸವೆನಿಸಿಕೊಂಬುದು, ತಥಾ ವಿಕೃತಿರ್ವಾಹನಂ=ಹಾಂಗೆ ಮಂತ್ರಂಗಳ ವಿಕೃತಿಯೆ ವಾಹನವೆನಿಸಿಕೊಂಬುದು. ಪ್ರಕೃತಿರ್ವರ್ಣಭಾವಂಚ=ಆವಾಸವೆನಿಸಿಪ್ಪ ಪ್ರಕೃತಿಯೆ ಅಕ್ಷರತ್ವವಾಗಿಹುದು. ವರ್ಣಾನಾಂ ವಾಸ ಜಿಹ್ವಯಾ=ವರ್ಣಂಗಳ ವರ್ಣತ್ವವೆ ಜಿಹ್ವಾವಾಸವಾಗಿಹುದು. ॥೭೩॥

ಶ್ಲೋಕ॥ ಜಿಹ್ವಾಸ್ಯೇತು ಚ ವಾಸಶ್ಚ ಆಸ್ಯಾನಾಂ ಬುದ್ಧಿವಾಸನಮ್ ।
ಬುದ್ಧ್ಯರ್ಣಂ ಹೃದಯೇ ವಾಸಂ ಹೃದಯಂ ಪಿಣ್ಡವಾಸನಮ್ ।

ಟೀಕು॥ ಜಿಹ್ವಾಚಾಸ್ಯೇತು ಚ ವಾಸಂ=ಅಕ್ಷರಾಶ್ರಯವಾದ ಜಿಹ್ವೆಯ ಮುಖದಲ್ಲಿ ವಾಸವಾಗಿಹುದು. ಆಸ್ಯಾನಾಂ ಚ ಬುದ್ಧಿವಾಸನಂ=ಆ ಮುಖಂಗಳಿಗೆ ಬುದ್ಧಿಯಲ್ಲಿ ವಾಸವಾಗಿಹುದು. ಬುದ್ಧ್ಯರ್ಣಂ ಹೃದಯೇ ವಾಸಂ=ಶಬ್ದಾನುವೇದನವನುಳ್ಳ ಬುದ್ಧ್ಯಕ್ಷರಂ

ಹೃದಯದಲ್ಲಿ ವಾಸವಾಗಿಹುದು. ಹೃದಯಂ ಪಿಂಡ ವಾಸನಂ=ಆ ಬುದ್ಧಿ ವ್ಯಾಪಾರಕ್ಕೆ ಕಾರಣವಾದ ಮನಸ್ಸು ಪಿಂಡದಲ್ಲಿ ವಾಸವಾಗಿಹುದು. ॥೭೪॥

ಶ್ಲೋಕ॥ ಪಿಣ್ಡಾರ್ಣಂ ವಾಸಯೇನ್ನಾಡೀ ನಾಡೀನಾಂ ವಾಯುವಾಸಯೇತ್ ।
ವಾಯುವಾಸಂ ಚ ಶಕ್ತೀನಾಂ ಶಕ್ತ್ಯಾವಾಸಂ ಚ ವೈ ಶಿವಃ ।
ಶಿವವಾಸಂ ಚ ಸರ್ವೇಷಾಂ ಮನ್ತ್ರೇ ವಾಸಂ ಪ್ರಕೀರ್ತಿತಮ್ ॥

ಟೀಕು॥ ಪಿಂಡಾರ್ಣಂ ವಾಸಯೇನ್ನಾಡೀ=ಪಿಂಡಾಕ್ಷರಂ ನಾಡಿವಾಸವಹುದು. ನಾಡೀನಾಂ ವಾಯುವಾಸಯೇತ್=ಆ ನಾಡಿಗಳಿಗೆ ವಾಯುವೇ ವಾಸವಹುದು. ಶಕ್ತೀನಾಂ ವಾಯುವಾಸಂ ಚ=ಆ ಶಕ್ತಿಗಳ ಸ್ಥಾನವೆ ವಾಯುಗಳಿಗೆ ವಾಸವಾಗಿಹುದು. ಶಕ್ತ್ಯಾವಾಸಂ ಚ ವೈ ಶಿವಃ=ಆ ಶಕ್ತಿಗಳಿಗೆ ಶಿವನು ಆವಾಸವಹನು. ಸರ್ವೇಷಾಂ ಶಿವ ವಾಸಂ ಚ=ಹೀಂಗೆ ಸರ್ವತತ್ತ್ವಂಗಳಿಗೆ ಶಿವನೆ ವಾಸವೆಂದಱಿವುದು. ಮಂತ್ರವಾಸಂ ಪ್ರಕೀರ್ತಿತಂ=ಈ ಪ್ರಕಾರದಿಂ ಮಂತ್ರವಾಸಂ ನುಡಿಯಲುಪಟ್ಟುದು. ॥೭೫॥

ಶ್ಲೋಕ॥ ನಿತ್ಯೋ ನೈಮಿತ್ತಿಕಶ್ಚೈವ ಪರಂ ಚಾಪರಮೇವ ಚ । ॥೭೬॥

ಸಚ್ಚಾಸಚ್ಚ ಸುರಶ್ರೇಷ್ಠ ಕರ್ತೃ ಭರ್ತೃ ತಥೈವ ಚ ।
ಹೃದ್ಯಂ ಚೈವ ತಥಾऽಹೃದ್ಯಂ ಅದ್ಯ ಹ್ಯಃ ಶ್ವಸ್ತಥೈವ ಚ ॥ ॥೭೭॥

ವಾಚ್ಯಂ ಚ ವಾಚಕಂ ಯತ್ತತ್ ಆಧಾರಾಧೇಯಮೇವ ಚ ।
ಸುಸ್ಥಿತಂ ದುಃಸ್ಥಿತಂ ಚೈವ ಚಲಂ ಚಾಚಲಮೇವ ಚ ॥ ॥೭೮॥

ಶೀತಮುಷ್ಣಂ ಚ ಯತ್ ಪ್ರೋಕ್ತಂ ಸುಖಂ ದುಃಖಂ ತಥೈವ ಚ ।
ಪವಿತ್ರಂ ಚಾಪವಿತ್ರಂ ಚ ಮೃದು ತೀಕ್ಷ್ಣಂ ತಥೈವ ಚ ॥ ॥೭೯॥

ರಾಗದ್ವೇಷಂ ಚ ಯದ್ ಜ್ಞಾನಂ ಯಚ್ಚಾಲಭ್ಯಂ ತಥೈವ ಚ ।
ಉನ್ನತಂ ಚಾನತಂ ಚೈವ ಸಂಪಚ್ಚಾಸಮ್ಪದೇವ ಚ ॥ ॥೮೦॥

ಸರ್ವಮೇತಚ್ಚ ದೇವೇಶಃ ತಸ್ಮಾದನ್ಯನ್ನ ವಿದ್ಯತೇ ।
ಪ್ರಕೃತಿಃ ಶಬ್ದ ಮಾತ್ರಂ ತು ರೂಪಮಾತ್ರಂ ತಥಾಪರಮ್ ॥ ॥೮೧॥

ರಸಮಾತ್ರಂ ಗನ್ಧಮಾತ್ರಂ ಶ್ರೋತ್ರತ್ವಕ್ ಚಕ್ಷುರೇವ ಚ ।
ಜಿಹ್ವಾ ಘ್ರಾಣಂ ಚ ವಾಕ್ಪಾಣಿ ಪಾದಂ ಪಾಯುರುಪಸ್ಥಕಮ್ ॥ ॥೮೨॥

ಮನಸಾ ಚ ಪೃಥಿವ್ಯಾದಿ ಪಂಚಕಂ ಪುರುಷೇಣ ತು ।
ರಾಗೋ ಮಾಯಾ ಚ ವಿದ್ಯಾ ಚ ಕಲಾ ನಿಯಮಮೇವ ಚ ॥ ॥೮೩॥

ವಿಗ್ರಹೇಶಂ ಚ ಶಕ್ತಿಂ ಚ ಶುದ್ಧಮಾಯಾಂ ತಥೈವ ಚ ।
ಶುದ್ಧವಿದ್ಯಾ ಶುದ್ಧಕಲಾ ಸದಾಶಿವಶ್ಶಿವಂ ವಿದುಃ ॥ ॥೮೪॥

ಈಶ್ವರಂ ಚ ಸ ಏವ ಸ್ಯಾತ್ ಸ ಏವಾಹಂ ಭವಾಂಸ್ತಥಾ ।
ಸ ಏವ ದೇವ ಬ್ರಹ್ಮಾದಿಃ ಕಾರ್ಯಪಾದ್ಯಪ್ರಜಾ ಸೃಜಃ ॥ ॥೮೫॥

ಸ ಏವ ಮುನಯಸ್ಸಪ್ತ ಚನ್ದ್ರಾದಿತ್ಯೌ ಗ್ರಹೇಶ್ವರೌ ।
ಸ ಏವ ದೇವರಾಜೋಽಪಿ ಕುಬೇರೋ ವರುಣಸ್ತಥಾ ॥ ॥೮೬॥

ಸಮಯೋಽಗ್ನಿಶ್ಚ ನಾಗೇಶಃ ನಿರ್ಋತಿರ್ವಾಯುರೇವ ಚ ।
ಈಶಾನೋ ಗಣಪಾಸ್ಸರ್ವೇ ವಸವೋಽಶ್ವಿ ತಥೈವ ಚ ॥ ॥೮೭॥

ರುದ್ರಾ ಏಕಾದಶಾನ್ಯೇ ಚ ದೇವದಾನವಪುಂಗವಾಃ ।
ದೈವಮಷ್ಟವಿಕಲ್ಪಂ ಚ ಧೈರ್ಯಮನ್ಯೋನ್ಯ ಪಂಚಕಮ್ ॥ ॥೮೮॥

ಮಾನುಷ್ಯಂ ಚ ಜಗತ್ ಕೃತ್ಸ್ನಂ ಸ ಏವ ಶಿವ ಉಚ್ಯತೇ ।
ಚತ್ವಾರಶ್ಚ ತಥಾ ವೇದಾಃ ರಹಸ್ಯೇನ ವದನ್ತಿಕಮ್ ॥ ॥೮೯॥

ಸಿದ್ಧಾನ್ತೇ ಭೂತತನ್ತ್ರೇ ಚ ವಾಮೇ ಸ್ರೋತಸಿ ದಕ್ಷಣೇ ।
ಭೈರವೇಷು ತಥಾಽನ್ಯೇಷು ಪಶುಪಾಶುಪತಾದಿಷು ॥ ॥೯೦॥

ವಿಷ್ಣುತಂತ್ರೇ ಚ ಬೌದ್ಧೇ ಚ ತಥಾ ದಿಕ್ಷತಿ ದರ್ಶನೇ ।
ಅಷ್ಟಾದಶಪುರಾಣೇಷು ಷಡಂಗೇಷು ಪರೇಷು ಚ ॥ ॥೯೧॥

ಯೋಗಶಾಸ್ತ್ರೇಷು ಸರ್ವೇಷು ನ್ಯಾಯ ವೈಶೇಷಿಕಾದಿಷು ।
ಯೈ ರ್ಯೈರ್ಯರ್ದ್ಯತ್ಪರಿಕ್ರಮ್ಯ ತತ್ಸರ್ವಂ ಪ್ರೋಚ್ಯತೇ ಬುಧೈಃ ॥ ॥೯೨॥

ತತ್ತತ್ಸ ಏವ ದೇವೇಶಃ ಶಿವಶಾಸ್ತ್ರೇ ಸನಾತನಃ ।
ಆದಿ ಮಧ್ಯಾನ್ತ ನಿರ್ಮುಕ್ತಃ ಸ್ವಭಾವ ವಿಮಲಃ ಪ್ರಭುಃ ॥ ॥೯೩॥

ಸರ್ವಜ್ಞಃ ಪರಿಪೂರ್ಣಶ್ಚ ಶಿವೋ ಜ್ಞೇಯಃ ಶಿವಾಗಮೇ ।
ಕೇವಲಾದ್ಯನವಚ್ಛಿನ್ನಃ ವಾಙ್ಮನೋಽತೀತಗೋಚರಃ ॥ ॥೯೪॥

ನಿಷ್ಕಲೋ ಸಕಲೋ ನಿಷ್ಕಲಶ್ಚಾಪಿ ಸರ್ವಗನ್ಧರ್ವದಿಕ್ ಸದಾ ।
ಅಂತರ್ಯಾಗೇ ಹಿ ತತ್ಪೂಜಾ ಯೋಗಿನಾಮೇವ ಸಾ ಭವೇತ್ ॥ ॥೯೫॥

ಯೋಗಾಭ್ಯಾಸರತೈಃ ಸದ್ಭಿಃ ಹೃತ್ಕುಶೇಶಯ ಮಧ್ಯಮೇ ।
ಯಮಾದ್ಯಷ್ಟಾಂಗ ಯೋಗೇನ ವಿಮಲೀಕೃತಮಾನಸೇ ॥ ॥೯೬॥

ಪೂಜ್ಯತೇ ನೇತರೈಸ್ತಸ್ಯ ಪೂಜಾಕರ್ತುಂ ವಿಶಿಷ್ಯತೇ ।
ಹಿತ್ವಾ ತದರ್ಚನಾಂ ನಾನ್ಯತ್ ಶ್ರೇಯೋ ಭವತಿ ದೇಹಿನಾಮ್ ॥ ॥೯೭॥

ಅನ್ತರ್ಯಾಗಾಧಿಕಾರೋऽತ್ರ ಕ್ವಚಿತ್ ಕಸ್ಯಾಪಿ ಜಾಯತೇ ।
ಬಹಿರ್ಯಾಗಾಧಿಕಾರೋऽಯಂ ಕಿಂಚಿತ್ ಜ್ಞಾನೇನ ಜಾಯತೇ ॥ ॥೯೮॥

ಇತ್ಯವೇತ್ಯ ಸ ದೇವೇಶಃ ಶಿವಃ ಸರ್ವಾನ್ತರ ಸ್ಥಿತಮ್ ।
ಲೋಕಾನುಗ್ರಾಹಕೋ ಭೂತ್ವಾ ಜನ್ತೂನಾಂ ಭುಕ್ತಿಂ ಮುಕ್ತಿದಃ ॥ ॥೯೯॥

ಪಂಚಬ್ರಹ್ಮತನುಸ್ಸಾಕ್ಷಾತ್ ಸ ಶಿವೋऽಭೂತ್ ಸದಾಶಿವಃ ।
ತಸ್ಮಾದೀಶ್ವರ ಉತ್ಪನ್ನಃ ಸರ್ವದೇವಾದಿರವ್ಯಯಃ ॥ ॥೧೦೦॥

ತತೋ ಹಿ ಮತ್ತಃ ಸರ್ವಜ್ಞಃ ಸಮುತ್ಪನ್ನೋ ಜಗುದ್ಗುರುಃ ।
ತಸ್ನಾಭಿಕಮಲೋದ್ಭೂತೋ ಹ್ಯಜೋ ಲೋಕಪಿತಾಮಹಃ ॥ ॥೧೦೧॥

ಅಧಿಶ್ರಿತಾ ಭವೇದ್ವಿದ್ಯಾ ಸ.ವೈ ಮಾಯೇತಿ ಕೀರ್ತಿತಾ ।
ಮೂಲ ಪ್ರಕೃತಿರಿತ್ಯೇಷಾ ಸಾऽಪಿ ಪಂಚಸು ಮುಕ್ತಿಷು ॥ ॥೧೦೨॥

ಕಾರ್ಯಕಾರಣ ಭಾವೇನ ಸ್ಥಿತಃ ತಸ್ಯ ಸ್ಥಿತಿಂ ಶೃಣು ।
ತಸ್ಯಾಃ ಮನೋನ್ಮನೀ ದೇವೀ ಸದಾಶಿವಸಮಾಶ್ರಿತಾ ॥ ॥೧೦೩॥

ಶ್ಲೋಕ॥ ಮನ್ತ್ರವಾಸಮಿದಂ ಪ್ರೋಕ್ತಂ ಮನ್ತ್ರವಾಹನಮುಚ್ಯತೇ ।

ಟೀಕು॥ ಇದು ಮಂತ್ರಜಾತವೆಂದು ಹೇಳಲುಪಟ್ಟುದು. ಮಂತ್ರವಾಹನಂ ನಿರೂಪಿಸಲು ಪಡುವದು. ॥೧೦೪॥

ಶ್ಲೋಕ॥ ಲಿಙ್ಗೇ ಚ ಪ್ರತಿಮೋ ಕುಮ್ಭೇವಾಸ್ಯೇ ವಹ್ನೌ ಚ ಮೂಲಕೇ
ಅನ್ಯೇ ಕುಮ್ಭೇ ಚ ವಾಸ್ಯೇ ಚ ಯುಕ್ತಂ ಮನ್ತ್ರಸ್ಯ ವಾಹನಮ್ ॥

ಟೀಕು॥ ಲಿಂಗೇಚ=ಶಿವಲಿಂಗದಲ್ಲಿಯೂ, ಸ್ಥಂಡಿಲೋದ್ಧರಣವಾದ ಲಿಂಗದಲ್ಲಿಯೂ ಪ್ರತಿಮೇ=ರುದ್ರಮೂರ್ತಿ ಪ್ರತಿಮೆಗಳಲ್ಲಿಯೂ, ಕುಂಭೇ ಪ್ರತಿಷ್ಠಾಕಾಲದಲ್ಲಿ ಸ್ಥಾಪಿಸುವ ಕುಂಭಗಳಲ್ಲಿಯೂ, ವಾಸ್ತೌ=ವಸ್ತುವಿನಲ್ಲಿಯೂ, ವಹ್ನೌ ಚ=ಕುಂದಾಗ್ನಿಗಳಲ್ಲಿಯೂ, ಮೂಲಕೇ=ಮೂಲಕಸ್ಥಾನದಲ್ಲಿಯೂ, ವಾಸ್ಯೇಅನ್ಯೇ ಚ ಕುಂಭೇ=ಮಂತ್ರಂಗಳಿಗೆ ಆಶ್ರಯವಾಗತಕ್ಕ ಉಳಿದ ದೀಕ್ಷಾಕಾಲ ಪ್ರೋಕ್ಷಣಕಾಲಾದಿಗಳಲ್ಲಿ ಸ್ಥಾಪಿಸಲ್ಪಟ್ಟ ಕಲಶಂಗಳಲ್ಲಿಯೂ, ಯುಕ್ತಮನ್ತ್ರಸ್ಯವಾಹನಂ=ಪ್ರಯೋಗಿಸಲ್ಪಟ್ಟುದು ಮಂತ್ರ ವಾಹನವು. ॥೧೦೫॥

ಶ್ಲೋಕ॥ ಏವಂ ನವದಶಂ ಪ್ರೋಕ್ತಂ ಮನ್ತ್ರಜಾತಸ್ಯ ಲಕ್ಷಣಮ್ ।
ಮನ್ತ್ರಜಾತಮಿದಂ ಪ್ರೋಕ್ತಂ ಮನ್ತ್ರಕೀಲಮಥಶೃಣು ।

ಟೀಕು॥ ಈ ಪ್ರಕಾರದಿಂ ಮಂತ್ರಂಜಾತದ ಹತ್ತೊಂಭತ್ತು ಲಕ್ಷಣಂ ಹೇಳಲು ಪಟ್ಟುದು. ಎಲೆ ಕುಮಾರ! ಈ ಮಂತ್ರಜಾತಂ ನಿರೂಪಿಸಲುಪಟ್ಟುದು ನಂತರಂ ಮಂತ್ರಕೀಲಕಮಂ ಕೇಳು. ॥೧೦೬॥

ಇತಿ ವಾತುಲತನ್ತ್ರೇ ಶುದ್ಧಾಖ್ಯೇ ಸಹಸ್ರಗ್ರಂಥಸಂಹಿತಾಯಾಂ
ಮಲ್ಲಿಕಾರ್ಜುನೇನ ಕರ್ಣಾಟಭಾಷಾ ವಿವೃತೋ
ಮನ್ತ್ರಜಾತಪಟಲೋ ನಾಮ ನವಮಃ ಪಟಲಃ

❖ ❖ ❖

ದಶಮಃ ಮಂತ್ರಕೀಲಪಟಲಃ

ಪುಷ್ಪಿತಾಗ್ರ ವೃತ್ತ॥ ಸಕಲ ಭುವನ ಭೂತ ಭಾವನಾಭ್ಯಾಂ
ಜನನ ವಿನಾಶವಿಹೀನ ವಿಗ್ರಹಾಭ್ಯಾಮ್ ।
ನರವರಯುವತೀವಪುರ್ಧರಾಭ್ಯಾಂ
ಸತತಮಹಂ ಪ್ರಣತೋಽಸ್ಮಿ ಶಙ್ಕರಾಭ್ಯಾಮ್॥ ॥೧॥

ಶಾ॥ವಿ॥ವೃ॥ ಜ್ಞಾತ್ವಾ ತ್ರಿಂಶದತೀತಮೇಕಮಧಿಕಂ ಶೈವಂ ಮಹಾತತ್ತ್ವಕಮ್
ತದ್ಭೇದಂ ಬಹುಲೀಲಯಾ ಚ ಸಹಿತಂ ನಾನಾವತಾರಾನ್ವಿತಮ್ ॥
ಸಾಮಾತ್ಯಾದಿಸಮಸ್ತಕುಶಲಂ ವೀರಾಖ್ಯಶೈವಂ ಮಹತ್
ಸಂಶ್ರಿತ್ಯಾತ್ಮನಿದಿವ್ಯಲಿಙ್ಗಮನಿಶಂ ಧ್ಯಾಯೇ ತದೀಳೇ ಭಜೇ ॥ ॥೨॥

ಶ್ಲೋಕ॥ ಅಥಾತಸ್ಸಮ್ಪ್ರವಕ್ಷ್ಯಾಮಿ ಮನ್ತ್ರಕೀಲಮಥ ಶೃಣು ।
ಅಕೀಲಂ ಕೀಲಮಿತ್ಯುಕ್ತಂ ಕೀಲಮನ್ತ್ರಂ ವಿಸರ್ಜಯೇತ್ ॥

ಟೀಕು॥ ಅಥ=ಅನಂತರದಲ್ಲಿ, ಅತಃ=ಈ ಮಂತ್ರಜಾತದಿಂ ಮೇಲೆ, ಮಂತ್ರಕೀಲ=ಮಂತ್ರಕೀಲವನೂ, ಸಂಪ್ರವಕ್ಷ್ಯಾಮಿ=ಲೇಸಾಗಿ ನಿರೂಪಿಸಿಹೆನು. ಅಥ ಶೃಣು=ಇದು ಕಾರಣವೇ ಕೇಳು. ಅಕೀಲಂ ಕೀಲಮಿತ್ಯುಕ್ತಂ=ಮಂತ್ರಂಗಳುಂ ಅಕೀಲಮಂತ್ರ ಕೀಲವೆಂದಿತ್ತೆರನಾಗಿ ನುಡಿಯಲುಪಟ್ಟವು. ಕೀಲಮಂತ್ರಂ ವಿಸರ್ಜಯೇತ್=ಕೀಲಮಂತ್ರಮಂ ಬಿಡುವುದು. ॥೩॥

ಶ್ಲೋಕ॥ ನೇತ್ರೇ ಲಲಾಟ ವಕ್ಷಶ್ಚ ಶ್ರೋತ್ರೇ ಚಾಸ್ಯಂ ಚ ನಾಸಿಕಾ ।
ಪಾದೌ ಬಾಹೂ ಚ ದೇಹಶ್ಚ ಮನ್ತ್ರಮುಚ್ಚಾರ್ಯತೇ ಬುಧೈಃ ॥

ಟೀಕು॥ ಮಂತ್ರಸ್ವರೂಪವನಱಿದು ಆಚರಿಸಬೇಕೆಂದು ನಿರೂಪಿಸಿಹನು. ನೇತ್ರೇ=ನೇತ್ರಂಗಳು ಲಲಾಟ, ವಕ್ಷಂಗಳು, ಶ್ರೋತ್ರಂಗಳು, ಮುಖ, ನಾಸಿಕ, ಪಾದ, ಹಸ್ತಂಗಳು, ದೇಹವು ಇವೆಂದಱಿವುದು. ಬುಧೈಃ ಮಂತ್ರಮುಚ್ಚಾರ್ಯತೇ=ವಿದ್ವಾಂಸುಗಳಿಂದ ಮಂತ್ರವು ಉಚ್ಚರಿಸಲುಪಡುತ್ತಿಹುದು. ॥೪॥

ಶ್ಲೋಕ॥ ಅತ ದೀರ್ಘಾಯತೇ ವೃತ್ತಂ ಅಥ ದೀರ್ಘಾಕ್ಷ ವೃತ್ಯ ಚ ।
ಅರ್ಧಚನ್ದ್ರಸಮಾಕಾರಂ ನಾದಮಾಯಾನ್ತನಾದವತ್ ॥

ಟೀಕು॥ ಅತಃ ದೀರ್ಘಾಯತೇ ವೃತ್ತಂ=ಅನಂತರಂ ಮಂತ್ರವೃತ್ತ ದೀರ್ಘಾಕಾರವಾಗುತ್ತಿಹುದು. ಅಥ ದೀರ್ಘಾಕಾರ ವೃತ್ಯ ಚ=ಆ ತಜುವಾಯಲು, ಮಂತ್ರದೀರ್ಘಂ=ಮನ್ತ್ರೇಕ್ರಮಂ ಸ್ತುತಿ, ಅರ್ಧಚನ್ದ್ರಸಮಾಕಾರಂ=ಅರ್ಧಚಂದ್ರನೊಡನೆ ಸಮವಹ ಆಕಾರವುಳ್ಳದಾಗಿ, ಆಯಾಂತನಾದವತ್=ಎಯಿದುತ್ತಿಹ ಧ್ವನಿಯಹಾಂಗೆ, ನಾದ=ಮಂತ್ರನಾದ ಸ್ವರೂಪವಾಗಿರುತ್ತಿಹುದು. ಸಂಕೋಚಿಸಿ ನುಡಿದ ಈ ಮಂತ್ರಸ್ವರೂಪ ಗ್ರಂಥಾರ್ಥಮಂ ಆಗಮಂಗಳಲ್ಲಿಯ ಮಂತ್ರಪಟಲಾಂತಂಗಳಲ್ಲಿ ವಿಸ್ಪಸ್ಟವಹ ಹಾಂಗೆ ನೋಡಿಕೊಂಬುದು. ॥೫॥

ಶ್ಲೋಕ॥ ಗುರೌ ಲಿಂಙ್ಗೇಽಕ್ಷಮಾಲಾಯಾಂ ಮನ್ತ್ರೇ ಭಸ್ಮನಿ ಪಞ್ಚಸು ।
ಏತಾಸು ಶಿವಮುದ್ರಾಸು ಶಿವವದ್ಭಕ್ತಿಮಾಚರೇತ್ ॥

ಟೀಕು॥ ಶಿವಸಂಬಂಧಿಯಾದ ಸದ್ಭಕ್ತನು ಗುರೌ=ಶ್ರೀಗುರುವಿನಲ್ಲಿಯೂ, ಲಿಂಗೇ=ಶಿವಲಿಂಗದಲ್ಲಿಯೂ, ಅಕ್ಷಮಾಲಾಯಾಂ=ಜಪಾಮಾಲಿಕೆಯಲ್ಲಿಯೂ, ಮಂತ್ರೇ=ಶಿವಮಂತ್ರದಲ್ಲಿಯೂ, ಭಸ್ಮನಿ=ಭಸ್ಮದಲ್ಲಿಯೂ, ಶಿವವದ್ಭಕ್ತಿಮಾಚರೇತ್=ಶಿವನಲ್ಲಿ ಭಕ್ತಿಯ ಹೇಂಗೆ ಆಚರಿಸುವನು ಹಾಂಗೆ ಭಕ್ತಿಯನಾಚರಿಸುವದು. ॥೬॥

ಶ್ಲೋಕ॥ ಆತ್ಮೀಯಾನ್ವಿವಿಧಾನ್ ಭೋಗಾನ್ ಸ್ತ್ರೀಪುತ್ತ್ರಪ್ರಮುಖಾನಪಿ ।
ಸ್ವಾತ್ಮಾನಂ ಚ ವಿಶೇಷೇಣ ತೇಷಾಂ ಚ ವಶಮಾನಯೇತ್ ॥

ಟೀಕು॥ ಆತ್ಮೀಯಾನ್ವಿವಿಧಾನ್ ಭೋಗಾನ್=ತನ್ನ ಸಂಬಂಧಂಗಳಹ ಹಲವು ವಿಧಂಗಳಾದ ಭೋಗಂಗಳನು, ಸ್ತ್ರೀ ಪುತ್ರ ಪ್ರಮುಖಾನಪಿ=ಸ್ತ್ರೀಯರು ಮಕ್ಕಳು ಮೊದಲಾದ ಪರಿಗ್ರಹಂಗಳನೂ, ಸ್ವಾತ್ಮಾನಂ ಚ=ತನ್ನ ಶರೀರವನೂ ಚಿತ್ತ ಬುದ್ಧಿಗಳನೂ, ತೇಷಾಂ ಚ ವಶಮಾನಯೇತ್=ಆ ಶ್ರೀ ಗುರುಲಿಂಗ, ಶಿವಲಿಂಗ, ಸದ್ಭಕ್ತ, ಜಂಗಮಲಿಂಗ, ಶ್ರೀ ವಿಭೂತಿ, ರುದ್ರಾಕ್ಷಿ, ಶಿವಮಂತ್ರಂಗಳ ವಶವನ್ನೈದಿಸುವದು. ॥೭॥

ಶ್ಲೋಕ॥ ಯೋಭೇದಂ ಭಕ್ತಿಮಾನ್ ಭಕ್ತೋ ತೇಷು ಮೋಹಾತ್ಕುರ್ವತೇ ।
ಶಿವದ್ರೋಹೀ ಸ ವಿಜ್ಞೇಯಃ ಸರ್ವಕರ್ಮಬಹಿಷ್ಕೃತಃ ॥

ಟೀಕು॥ ಯೋಭಕ್ತಿಮಾನ್ ಭಕ್ತಃ=ಆವನೊಬ್ಬ ಶಿವಭಕ್ತಿಯನುಳ್ಳವನಾದಹನೆಂಬ ಭಕ್ತನು, ಮೋಹಾತ್=ಅಜ್ಞಾನದದೆಸೆಯಿಂದ, ತೇಷು=ಆ ಗುರುಲಿಂಗ ಜಂಗಮ ಶ್ರೀ ವಿಭೂತಿ ರುದ್ರಾಕ್ಷಿ ಶಿವಮಂತ್ರಂಗಳಲ್ಲಿ, ಭೇದಂ ಕುರ್ವತೇ=ಭೇದವಮಾಡುತ್ತಿಹನು, ಸ ಶಿವದ್ರೋಹೀ ವಿಜ್ಞೇಯಃ=ಅವನು ಶಿವದ್ರೋಹಿ ಎಂದಜಿೞಯಲುತಕ್ಕವನು. ಸರ್ವಕರ್ಮಬಹಿಃ ಕೃತಃ=ಆ ಭೇದವಾದಿಯಹ ಶಿವದ್ರೋಹಿಯು ಶಿವಸತ್ಕ್ರಿಯೆಗಳಿಂದ ಬಹಿಷ್ಕರಿಸಲುಪಟ್ಟವನು. ಆ ಆ ಭೇದಭಾವವನುಳ್ಳ ಸಶಿವ ಸಂಬಂಧಿತ್ವದ ಸಂಖ್ಯೆಗಳಂ ನಿರೂಪಿಸಿಹನು. ॥೮॥

ಶ್ಲೋಕ॥ ಶೈವಂ ಚತುರ್ವಿಧಂ ಜ್ಞೇಯಂ ಸಮಾಸಾಚ್ಛೃಣು ಷಣ್ಮುಖ ।
ಸಾಮಾನ್ಯಂ ಮಿಶ್ರಕಂ ಚೈವ ಶುದ್ಧಂ ವೀರಂ ಯಥಾಕ್ರಮಮ್ ॥

ಟೀಕು॥ ಭೋಷಣ್ಮುಖ!=ಎಲೆ ಕುಮಾರನೆ!, ಶೈವಂ ಚತುರ್ವಿಧಂ ಜ್ಞೇಯಂ=ಶಿವ ಸಂಬಂಧಿತ್ವವು ನಾಲ್ಕು ಪ್ರಕಾರವೆಂದಱಿಯಬೇಕಾದುದು. ಸಾಮಾನ್ಯಂ=ಸಾಮಾನ್ಯ ಶೈವವೆಂದೂ, ಮಿಶ್ರಕಂಚೈವ=ಮಿಶ್ರಶೈವವೆಂದೂ, ಶುದ್ಧಂ=ಶುದ್ಧಶೈವವೆಂದೂ, ವೀರಂ=ವೀರಶೈವವೆಂದೂ ಹೀಂಗೆ ನಾಲ್ಕು ಪ್ರಕಾರವಾಗಿಹವು. ಯಥಾಕ್ರಮಂ ಸಮಾಸಾಚ್ಛೃಣು=ಈ ನಾಲ್ಕು ಲಕ್ಷಣಂಗಳನೂ ಯಥಾಕ್ರಮವಹ ಹಾಂಗೆ ಪರ್ಯಾಯದಿಂ ಕೇಳು. ॥೯॥

ಶ್ಲೋಕ॥ ತತ್ರಾದೌ ಸಮ್ಪ್ರವಕ್ಷ್ಯಾಮಿ ಶೈವಸಾಮಾನ್ಯ ಲಕ್ಷಣಮ್ ।

ಟೀಕು॥ ಆ ಚತುರ್ವಿಧ ಶೈವದಲ್ಲಿ, ಆದೌ=ಮೊದಲಲ್ಲಿ, ಶೈವಸಾಮಾನ್ಯ ಲಕ್ಷಣಂ ಸಂಪ್ರವಕ್ಷ್ಯಾಮಿ=ಶೈವ ಸಾಮಾನ್ಯ ಲಕ್ಷಣಮಂ ಲೇಸಾಗಿ ನಿರೂಪಿಸಿಹೆನು. ॥೧೦॥

ಶ್ಲೋಕ॥ ಶಿವಲಿಂಗಂ ಯದಾಪಶ್ಯೇತ್ತದಾ ಕುರ್ಯಾತ್ಸಮರ್ಚನಮ್ ।
ಪ್ರದಕ್ಷಿಣಂ ವಾ ಪ್ರಣತಿಂ ದರ್ಶನಂ ವಾಽತ್ರ ಕಾರಯೇತ್ ॥

ಭಸ್ಮಧಾರಣ ಮಂತ್ರೇಣ ಶುದ್ಧೋಭವತಿ ಸರ್ವದಾ ।
ಶಿವಕೀರ್ತೌ ತದಾಲಾಪೇ ಪ್ರೀತಿಮಾನ್ ಶಿವಭಕ್ತಿಕೇ ॥

ಟೀಕು॥ ಆವನೊಬ್ಬ ಮರ್ತ್ಯನು, ಯದಾಲಿಂಗಂ ಪಶ್ಯೇತ್=ಆವ ವೇಳೆಯಲ್ಲಿ ಸ್ವಯಂಭು ಲಿಂಗವನಾದಡೆಯೂ ದೇವದಾನವ ಮಾನವನಾದ ಪ್ರತಿಷ್ಠಿತ ಲಿಂಗವನಾದಡೆಯೂ ಕಂಡಹನು, ತದಾ ಸಮರ್ಚನಂ ಕುರ್ಯಾತ್=ಆ ವೇಳೆಯಲ್ಲಿ ಅರ್ಚನಮಂ ಮಾಡುವದು. ವಾ=ಅಲ್ಲ, ಮೇಣ್ ಅರ್ಚನಮಳವಡದ ಪಕ್ಷೇ, ಅತ್ರ ದರ್ಶನಂ ಕಾರಯೇತ್=ಈ ಶಿವಸ್ಥಾನದಲ್ಲಿ ನಿಂದು ದರ್ಶನವನಾದೊಡಂ ಮಾಡುವದು. ಪೀಠಾರ್ಚನಾದಿಗಳಲ್ಲದಿರ್ದಡಂ ವಿಭೂತಿ ಧಾರಣ ಮಾತ್ರದಿಂದವೇ, ಸರ್ವಶುದ್ಧೋ ಭವತಿ=ಎಲ್ಲಾಗಳು ಶುದ್ಧವಾಗಿಹನು. ಹೀಂಗೆ ಶಿವಪೂಜೆಯ ಮಾಡುತ್ತವೂ, ಶಿವಕೀರ್ತಿ ತದಾಲಾಪೇ ಶಿವಭಕ್ತಕೇ ಪ್ರೀತಿಮಾನ್=ಶಿವಕೀರ್ತನಂಗಳಲ್ಲಿಯೂ ಆ ಶಿವಕೀರ್ತ ನಾಲಾಪದಲ್ಲಿಯೂ ಶಿವಭಕ್ತರಲ್ಲಿಯೂ ಪ್ರೀತಿಯನುಳ್ಳನಾಗಿಹುದು. ॥೧೨॥

ಶ್ಲೋಕ॥ ಏತೇಷಾಂ ನಿಯತಿರ್ನಾಸ್ತಿಯಥಾಲಬ್ಧಂ ಸಮಾಚರೇತ್ ।

ಟೀಕು॥ ಈ ಶಿವಲಿಂಗಾರ್ಚನ ಮೊದಲಾದ ನಿಯತಿಯೇ ಸಾಮಾನ್ಯ ಶೈವನಿಯತಿ. ಈ ಸಂಪೂರ್ಣ ನಿಯತಿಯಿಲ್ಲದಿದ್ದಡೆಯು ಯಥಾಲಬ್ಧಕ್ರಿಯೆಯಾನಾಚರಿಸುವದು.

ಶ್ಲೋಕ॥ ಸಾಮನ್ಯ ಲಕ್ಷಣಂ ಪ್ರೋಕ್ತಂ ವಕ್ಷ್ಯೇಮಿಶ್ರಸ್ಯ ಲಕ್ಷಣಮ್ ॥

ಟೀಕು॥ ಸಾಮಾನ್ಯ ಲಕ್ಷಣಂ ನಿರೂಪಿಸಲುಪಟ್ಟುದು. ಮಿಶ್ರಶೈವಲಕ್ಷಣವಂ ನಿರೂಪಿಸಿಹೆನು ಕೇಳು. ॥೧೪॥

ಶ್ಲೋಕ॥ ಶೈವಂ ಚ ವೈಷ್ಣವಂ ಶಾಕ್ತಂ ಕೌಮಾರಂ ಗಾಣಪತ್ಯಕಮ್ ।
ಸೌರಂ ಚಾಖಿಲದೈವತ್ಯಂ ಪೂಜನಂ ಚ ಸಮಾಚರೇತ್ ।

ಟೀಕು॥ ಶೈವಂ=ಪೀಠಮಧ್ಯದಲ್ಲಿ ಸ್ಥಾಪಿತವಾದ ಶಿವಲಿಂಗ ಪೂಜನಮಂ, ವೈಷ್ಣವಂ= ಆವರಣಸ್ಥವಹ ವಿಷ್ಣುಪ್ರತಿಮಾಪೂಜನವೂ, ಶಾಕ್ತಂ=ದೇವೀ ಪೂಜೆಯನೂ, ಕೌಮಾರಂ= ಷಣ್ಮುಖಪೂಜೆಯನೂ, ಗಾಣಪತ್ಯಕಂ=ವಿಘ್ನೇಶ್ವರ ಪೂಜೆಯನೂ, ಸೌರಂ=ಸೂರ್ಯ ಪೂಜೆಯನೂ, ಹೀಂಗೆ ಶಿವಲಿಂಗ ಸಮೀಪಸ್ಥವಾಗಿ ಮಾಡುವ ವಿಷ್ಣ್ವಾದಿ ಪಂಚ ದೇವತಾ ಪೂಜೆಯುಂ ಪಂಚ ಪೂಜೆಯೆನಿಸಿಕೊಂಬುದು. ಅಖಿಲ ದೈವತ್ಯಂ ಚ=ಈ ಪಂಚ ಪೂಜಸಮವಾಗಿ ಇಂದ್ರಾದ್ಯಖಿಲ ದೇವತಾ ಸಂಬಂಧವಾದ, ಪೂಜನಂ ಸಮಾಚರೇತ್=ಪೂಜನವನಾಚರಿಸುವದು. ॥೧೫॥

ಶ್ಲೋಕ॥ ಏತೇಷೂಕ್ತೇಷು ಸರ್ವೇಷು ತತ್ತನ್ಮನ್ತ್ರೇಷು ಮಿಶ್ರಿತಾನ್ ।
ಸಮಭಕ್ತಿಸಮಾಯುಕ್ತಸ್ಸರ್ವಾನ್ ಲಿಙ್ಗೇನ ಭಾವಯೇತ್ ॥

ಟೀಕು॥ ಉಕ್ತೇಷು ತೇಷು=ಅತ್ರೋಕ್ತವಾದ ಪಂಚದೇವತೆಗಳಲ್ಲಿಯೂ, ಸರ್ವೇಷು= ಅನುಕ್ತವಾಗಿಪ್ಪ ಬ್ರಹ್ಮೇಂದ್ರಾದಿ ಸಮಸ್ತ ದೇವತೆಗಳಲ್ಲಿಯೂ, ತತ್ತನ್ಮಂತ್ರೇಷು=ಆಯಾ ವಿಷ್ಣ್ವಾದಿ ದೇವತಾ ಮಂತ್ರಂಗಳಲ್ಲಿಯೂ, ಮಿಶ್ರಕಾನ್=ಸರ್ವ ವರ್ಣಾದಿ ದೇವತಾದಿ ಸಂಭವಕಾರಣವಪ್ಪ ಶಿವಮಂತ್ರಾಕ್ಷರಂ ಬೆರಸಿಪ್ಪುದಜೆಂದ, ಸಮಭಕ್ತಿ ಸಮಾಯುಕ್ತಃ=ಶಿವನು ಸಕಲ ದೇವತಾಂತನೆಂಬ ಪರಿಪೂರ್ಣಭಾವದಿಂದ ತಚ್ಛಿವಲಿಂಗಭಕ್ತಿಯೊಡನೆ ಶಿವಲಿಂಗಾರ್ಚಕರಪ್ಪ ವಿಷ್ಣ್ವಾದಿದೇವತಾ ಭಕ್ತಿಗಳೊಡನೆ ಕೂಡಿದ್ದಂಥನಾಗಿ, ಸರ್ವಾನ್= ಸಮಸ್ತ ದೇವತೆಗಳನೂ, ಲಿಂಗೇನ ಭಾವಯೇತ್=ಶಿವಲಿಂಗದೊಡನೆ ಕೂಡಿಭಾವಿಸು ವದು. ಈ ಮಿಶ್ರಭಾವನೆ ಇಂದ್ರನೇ ಸಮಸ್ತ ದೇವತಾ ಪೂಜನಂ ಪ್ರಸಿದ್ಧವಾಯಿತ್ತು. ಈ ಭಾವಮನಜಿದಡೆ, ವೇದಶಾಸ್ತ್ರ ಪುರಾಣಾಗಮೇತಿಹಾಸಂಗಳಲ್ಲಿ ವಿಷ್ಣ್ವಾದಿ ದೇವತಾ ಪೂಜಾಮಹತ್ವಂ ಪ್ರಸಿದ್ಧಮಾಗಿ ಶಿವಾಧಿಕ್ಯಂ ಕಾಣಿಸಿಕೊಂಬುದು. ಈ ಭಾವಮಂ ಅಜಿಯದಿರ್ದಡೆ ಶಿವಾಧಿಕ್ಯಂ ಕಾಣಿಸಿಕೊಳ್ಳದೆ ಇತರ ದೇವತಾರ್ಚನೆಗಳಿಂದ ಮನುಷ್ಯರು ಕುಟಿಲಪಥಪ್ರವರ್ತರಾಗಿ ಶಿವಭಕ್ತಿ ಪರಾಙ್ಮುಖರಹರು. ॥೧೬॥

ಶ್ಲೋಕ॥ ಮಿಶ್ರಶೈವಮಿತಿ ಪ್ರೋಕ್ತಂ ಶುದ್ಧಶೈವಮಥ ಶೃಣು ।

ಟೀಕು॥ ಇತಿಮಿಶ್ರ ಶೈವಂ ಪ್ರೋಕ್ತಂ=ಈ ಪ್ರಕಾರದಿಂ ಮಿಶ್ರಶೈವಂ ನುಡಿಯಲುಪಟ್ಟುದು. ಅಥ ಶುದ್ಧಶೈವಂ ಶೃಣು=ಇದಱಿಂದಂ ಮುಂದೆ ಶುದ್ಧಶೈವಮಂ ಕೇಳು. ಎಲೆ ಕುಮಾರ!.

ಶ್ಲೋಕ॥ ಶುದ್ಧತ್ವಂ ಶಿವಮುದ್ದಿಷ್ಟಾಚ್ಛಿವಾಜ್ಜಾತಂ ಹಿ ಶೈವಕಮ್ ।
ಶುದ್ಧಶೈವ ಶಿವಯೋಗಾಚ್ಛುದ್ಧಶೈವಮಿತಿ ಸ್ಮೃತಮ್ ॥

ಟೀಕು॥ ಶುದ್ಧಶೈವ ಶಬ್ದಾರ್ಥಮಂ ನಿರ್ವಚಿಸಿಹನು. ಶಿವಮುದ್ದಿಷ್ಟಾತ್ ಶುದ್ಧತ್ವಂ= ಶಿವನನುದ್ದೇಶಿಸಲುಪಟ್ಟದಹಣದಿಂದ ಶುದ್ಧಶಬ್ದಭಾವವು. ಶಿವಾಜ್ಜಾತಂ ಹಿ ಶೈವಕಂ= ಶಿವನದೆಸೆಯಿಂದ ಹುಟ್ಟಿದುದು ಪ್ರಸಿದ್ಧವಪ್ಪುದ ಕಾರಣ ಶೈವಶಬ್ದವಾಯಿತ್ತು. ಶುದ್ಧಶೈವ ಸಮಾಯೋಗಾತ್=ಶುದ್ಧಶೈವವೆಂಬ ಶಬ್ದಂಗಳ ಕೂಟದ ದೆಸೆಯಿಂದ, ಶುದ್ಧಶೈವಮಿತಿ ಸ್ಮೃತಂ=ಶುದ್ಧಶೈವವೆಂದು ನೆನೆಯಲುಪಟ್ಟುದು. ॥೧೮॥

ಶ್ಲೋಕ॥ ಶಿವೇನೋತ್ಪದ್ಯತೇ ಶೈವಂ ತಸ್ಮಾಜ್ಜಾತಃ ಶಿವದ್ವಿಜಃ ।

ಟೀಕು॥ ಶಿವನಿಂದ ಹುಟ್ಟಲುಪಟ್ಟುದು ಶೈವವು. ಆ ಶೈವದದೆಸೆಯಿಂದ ಹುಟ್ಟಿದಾತನು ಶಿವದ್ವಿಜನು. ಆ ಶಿವದ್ವಿಜರುಗಳಾರೆಯಾಯೆಂದಡೆ, ವೀರಾಗಮೇ=ವೀರಾಗಮದಲ್ಲಿ:

ಶ್ಲೋಕ॥ ಶಿವದ್ವಿಜಾಸ್ತು ವಿಪ್ರೇನ್ದ್ರಾ ಹ್ಯಾದಿಶೈವಾಃ ಪ್ರಕೀರ್ತಿತಾಃ ।
ಕೌಶಿಕಃ ಕಾಶ್ಯಪಶ್ಚೈವ ಭರದ್ವಾಜೋಽತ್ರಿರೇವ ಚ ।
ಗೌತಮಶ್ಚೇತಿ ಪಞ್ಚೈತೇ ಪಞ್ಚವಕ್ತ್ರೇಷು ದೀಕ್ಷಿತಾಃ ।

ಟೀಕು॥ ಕೌಶಿಕ, ಕಾಶ್ಯಪ, ಭರದ್ವಾಜ, ಅತ್ರಿ, ಗೌತಮರೆಂಬ ವಿಪ್ರೇಂದ್ರರುಗಳೆನಿಪ ಈ ದ್ವಿಜರುಗಳೈವರೂ ಪ್ರಥಮರಪ್ಪ ಶುದ್ಧಶೈವರೆನಿಸಿಕೊಂಬರು. ಇವರು ಪರಮೇಶ್ವರನ ಪಂಚವಕ್ತ್ರಂಗಳಲ್ಲಿ ದೀಕ್ಷಿಸಲುಪಟ್ಟವರು. ॥೧೯॥

ಶ್ಲೋಕ॥ ಏಷಾಂ ಋಷೀಣಾಂ ವಂಶೇಷು ಜಾತಾಸ್ತೇಽಸ್ತು ಶಿವದ್ವಿಜಾಃ ।
ಪುನರ್ದೀಕ್ಷಾ ನಚಾರ್ಹನ್ತಿ ಕೃತಾಚೇತ್ ಸಾ ತು ನಿಷ್ಫಲಾ ।

ಟೀಕು॥ ಈ ಕೌಶಿಕಾದಿ ಋಷಿಯರುಗಳ ವಂಶಂಗಳಲ್ಲಿ ಹುಟ್ಟಿದವರು ಶಿವದ್ವಿಜರೆನಿಸಿ ಕೊಂಬರು. ಈ ಶಿವದ್ವಿಜರು ಪುನಃ ದೀಕ್ಷಾರ್ಹರಲ್ಲ. ಇವರುಗಳಿಗೆ ಪುನರ್ದೀಕ್ಷೆಯಂ ಮಾಡಿದಡೆ ಆ ದೀಕ್ಷೆ ನಿಷ್ಫಲವಹುದು. ಇವರುಗಳಲ್ಲದೆ ಶುದ್ಧಶೈವದೀಕ್ಷಿತರಪ್ಪ ಶಿವದ್ವಿಜರುಗಳು ಮಱವೆಯಿಂ ತಸ್ಯೈವವ್ರತ ಭಿನ್ನರಾದರೆ ಪುನಿರ್ದೀಕ್ಷಾದಿ ಪ್ರಾಯಶ್ಚಿತ್ತ ವಿಧಾನದಿಂದ ಶುದ್ಧವಹರು. ॥೨೦॥

ಶ್ಲೋಕ॥ ಕಾಮಿಕಾದಿಷು ತನ್ತ್ರೇಷು ಚಾಷ್ಟಾವಿಂಶತಿಷು ಕ್ರಮಾತ್ ।
ವೇದಶಾಸ್ತ್ರಾದಿ ಸರ್ವೇಷು ಕೃತಾಭ್ಯಾಸೋ ಶಿವವ್ರತೀ ।

ಟೀಕು॥ ಕ್ರಮಾತ್=ಕ್ರಮದಿಂದ, ಕಾಮಿಕಾದಿಷು ತಂತ್ರೇಷು ಅಷ್ಟಾವಿಂಶತಿಷು=ಕಾಮಿಕ ಮೊದಲಾದ ಇಪ್ಪತ್ತೆಂಟು ಆಗಮಂಗಳಲ್ಲಿಯೂ, ವೇದಶಾಸ್ತ್ರಾದಿ ಸರ್ವೇಷು= ಋಗ್ಯಜುಸ್ಸಾಮಾಥರ್ವಂಗಳಲ್ಲಿಯೂ ಮನ್ವಾದಿ ಧರ್ಮ ಶಾಸ್ತ್ರಂಗಳಲ್ಲಿಯೂ ಪುರಾಣೇತಿಹಾಸ ಸೂಕ್ತಾದಿ ಸಮಸ್ತಂಗಳಲ್ಲಿಯೂ, ಕೃತಾಭ್ಯಾಸಃ=ಮಾಡಲ್ಪಟ್ಟ ಅಭ್ಯಾಸ ಉಳ್ಳಾತನಾಗಿ, ಶಿವವ್ರತೀ=ಶಿವಸದ್ವ್ರತಂಗಳುಳ್ಳಾತನಹುದು. ॥೨೧॥

ಶ್ಲೋಕ॥ ಕರ್ಷಣಾದಿ ಪ್ರತಿಷ್ಠಾನ್ತಂ ಪ್ರತಿಷ್ಠಾದ್ಯುತ್ಸವಾನ್ತಕಮ್ ।
ಉತ್ಸವಾತ್ ಪ್ರಾಯಶ್ಚಿತ್ತಾನ್ತಂ ಜ್ಞಾತ್ವಾ ಸರ್ವಂ ಸಮಾಚರೇತ್ ॥

ಟೀಕು॥ ಕರ್ಷಣಾದಿಪ್ರತಿಷ್ಠಾನ್ತಂ=ಶಿವಕರ್ಷಣಾದ್ಯಾಕರ್ಷಣ ಮೊದಲಾಗಿ ಲಿಂಗಸ್ಥಾಪನ ಕಳಸಸ್ಥಾಪನ ಶಕ್ತಿ ಸ್ಥಾಪನ ಪರಿವಾರ ಸ್ಥಾಪನಾದಿ ಸ್ಥಾಪನಂಗಳು ಕಡೆಯಾಗಿಹ ಕ್ರಿಯೆಯನೂ, ಪ್ರತಿಷ್ಠಾದ್ಯುತ್ಸವಾಂತಕಂ=ಶಿವಲಿಂಗ ಪ್ರತಿಷ್ಠೆ ಮೊದಲಾಗಿ ನಿತ್ಯೋತ್ಸವ ಶಿವೋತ್ಸವಂಗಳು ಕಡೆಯಾಗಿಹ ಕ್ರಿಯೆಗಳನು, ಉತ್ಸವಾತ್ ಪ್ರಾಯಶ್ಚಿತ್ತಾಂತಂ=ನಿತ್ಯೋತ್ಸವ ಮೊದಲಾಗಿ ಪ್ರಾಯಶ್ಚಿತ್ತಂಗಳು ಕಡೆಯಾಗಿಹಂತ ಕ್ರಿಯೆಗಳನೂ, ಜ್ಞಾತ್ವಾ=ಅಱಿದು. ಸರ್ವಂ ಸಮಾಚರೇತ್=ಎಲ್ಲಾ ಕ್ರಿಯೆಗಳನೂ ಆಚರಿಸುವದು. ॥೨೨॥

ಶ್ಲೋಕ॥ ಮನ್ತ್ರ ಯನ್ತ್ರ ಕ್ರಿಯಾ ಮುದ್ರಾ ನ್ಯಾಸಾ ವಾಹನಕಾದಿಭಿಃ ।
ಉಪಚಾರೈರ್ಬಹುವಿಧೈರ್ಲಿಙ್ಗಂ ಸಿಂಹಾಸನೇ ಯಜೇತ್ ॥

ಟೀಕು॥ ಮಂತ್ರ=ಶಿವಮಂತ್ರಗಳಿಂದವು, ತದ್ಭೇದಂ ಕ್ರಿಯಾಸಾರೇ=ಆ ಶಿವಮಂತ್ರ ಭೇದಂ ಕ್ರಿಯಾಸಾರದಲ್ಲಿ: ॥೨೩॥

ಶ್ಲೋಕ॥ ಪ್ರಾಸಾದಂ ಪ್ರಣವಂ ಹಂಸಂ ವ್ಯೋಮವ್ಯಾಪಿ ಶಿವಾಕ್ಷರಮ್ ।
ಅಘೋರಂ ದಕ್ಷಿಣಾಮೂರ್ತಿ ಮೃತ್ಯುಂಜಯಮತಃ ಪರಮ್ ॥

ಶ್ರೀ ರುದ್ರಂ ಚ ಪರಮಂ ಶ್ರೀಮತ್ಪಂಚಾಕ್ಷರಂ ಪರಮ್ ।
ಅಘೋರಾಸ್ತ್ರಂ ಶಿವಾಸ್ತ್ರಂ ಚ ತಥಾ ಪಾಶುಪತಾಸ್ತ್ರಕಮ್ ।
ದ್ವಾದಶೈತೇ ಮಹಾಮನ್ತ್ರಾ ಶಿವಮನ್ತ್ರೋತ್ತಮೋಕ್ತಮಾಃ ॥

ಟೀಕು॥ ಪ್ರಾಸಾದ ಮಂತ್ರ, ಪ್ರಣವ ಮಂತ್ರ, ಹಂಸ ಪ್ರಾಸಾದ ಪಂಚಾಕ್ಷರೀ ಮಂತ್ರ ತತ್ಪ್ರಸಾದ ಬೀಜವಪ್ಪ ವ್ಯೋಮಾಂಗ ಪಂಚಾಕ್ಷರೀ ಮಂತ್ರ, ಅಘೋರ ಮಂತ್ರ, ದಕ್ಷಿಣಾಮೂರ್ತಿಮಂತ್ರ, ಮೃತ್ಯುಂಜಯ ಮಂತ್ರ, ಶ್ರೀ ರುದ್ರಮಂತ್ರ, ಶ್ರೀಮತ್ಪಂಚಾಕ್ಷರ

ಮಂತ್ರ, ಅಘೋರಾಸ್ತ್ರಮಂತ್ರ, ಶಿವಾಸ್ತ್ರಮಂತ್ರ, ಪಾಶುಪತಾಸ್ತ್ರ ಮಂತ್ರಂಗಳೆಂಬ ಈ ದ್ವಾದಶ ಮಂತ್ರಾದಿ ಸಮಸ್ತ ಶಿವಾಗಮೋಕ್ತವಾದ ಶಿವಮಂತ್ರಂಗಳಿಂದವೂ ಉಮಾದಿ ಶಕ್ತಿಮಂತ್ರಂಗಳಿಂದವು, ಗಣೇಶ್ವರ ಯಂತ್ರಂಗಳಿಂದವೂ, ವಿದ್ಯೇಶ್ವರಾದಿ ಲೋಕಪಾಲ ಮಂತ್ರಂಗಳಿಂದವೂ, ಯಂತ್ರ ಕ್ರಿಯಾ ಚಕ್ರಮೆಂದೊಡಂ, ಯಂತ್ರಮೆಂದೊಡಂ ಪರ್ಯಾಯನಾಮ. ಪ್ರಾಸಾದಾದಿ ಮಂತ್ರಂಗಳ ನ್ಯಾಸಸ್ಥಾನಕಾರಣವಾದ ಯಂತ್ರಂಗಳಾದವು. ಅದಾಗಿ ಪ್ರಾಸಾದಯಂತ್ರ, ಪಂಚಾಕ್ಷರೀಯಂತ್ರ, ಶಿವಯಂತ್ರ, ಅಘೋರಾಸ್ತ್ರಯಂತ್ರ, ಪಾಶುಪತಾಸ್ತ್ರಯಂತ್ರಾದಿ ಯಂತ್ರಕ್ರಿಯೆಗಳಿಂದವೂ; ಮುದ್ರಾ; ಸುಪ್ರಭೇದೇ=ಸುಪ್ರಭೇದಾಗಮದಲ್ಲಿ– ॥೨೫॥

ಶ್ಲೋಕ॥ ಅಸ್ತ್ರಮುದ್ರಾ ವಕ್ತ್ರಮುದ್ರಾ ಮಹಾಮುದ್ರಾ ತತಃ ಪರಃ ।
ಶೋಧನಾಖ್ಯಮಹಾಮುದ್ರಾ ತಥಾ ಸಂಹೃತಿ ಸಂಜ್ಞಕಃ ॥
ಮುದ್ರಾ ಪಞ್ಚಮುಖೀಚೈವ ತಥಾ ಸುರಭಿ ಮುದ್ರಿಕಾ ।
ದ್ರವ್ಯಮುದ್ರಾ ಮುಕುಲಿಕಾ ಪದ್ಮಮುದ್ರಾ ತಥೈವ ಚ ॥
ಶಶಕರ್ಣ ತಥಾ ಮುದ್ರಾ ಶಕ್ತಿಮುದ್ರಾ ತಥೈವ ಚ ।
ಬೀಜಮುದ್ರೇತಿ ವಿಖ್ಯಾತಾ ದರ್ಶನೀಯಾ ವಿಶೇಷತಃ ॥
ಶಾನ್ತಾ ಚಾವಾಹನೀ ಚೈವ ತತೋಮುದ್ರಾ ಮನೋರಮಾ ।
ಧ್ವಜಮುದ್ರೇತಿ ವಿಖ್ಯಾತಾ ದರ್ಶನೀಯಾ ವಿಶೇಷತಃ ॥
ಲಿಙ್ಗಮುದ್ರಾ ಚ ಗಾಯತ್ರೀ ಕಾಲಕಣ್ಠ ತಥೈವ ಚ ।
ಶೂಲಮುದ್ರಾ ನಮಸ್ಕಾರಾತ್ ದ್ವಯೋರ್ವಿಂಶತಿ ಕೀರ್ತಿತಾಃ ॥

ಟೀಕು॥ ಅಸ್ತ್ರಮುದ್ರೆ, ವಕ್ತ್ರಮುದ್ರೆ, ಮಹಾಮುದ್ರೆ, ಶೋಧನಮುದ್ರೆ, ಸಂಹಾರಮುದ್ರೆ, ಪಂಚಮುಖಿಮುದ್ರೆ, ಸುರಭಿಮುದ್ರೆ, ದ್ರವ್ಯಮುದ್ರೆ, ಮುಕುಳಿಕಾಮುದ್ರೆ, ಪದ್ಮಮುದ್ರೆ, ಶಶಕರ್ಣಮುದ್ರೆ, ಶಕ್ತಿಮುದ್ರೆ, ಬೀಜಮುದ್ರೆ, ಶಾಂತಿಮುದ್ರೆ, ಆವಾಹನಮುದ್ರೆ, ಮನೋರಮಾಮುದ್ರೆ, ಧ್ವಜಮುದ್ರೆ, ಲಿಂಗಮುದ್ರೆ, ಗಾಯತ್ರೀಮುದ್ರೆ, ಕಾಳಕಂಠಮುದ್ರೆ, ಶೂಲಮುದ್ರೆ, ನಮಸ್ಕಾರಮುದ್ರೆಗಳೆಂಬಿಪ್ಪತ್ತೆರಡು ಮುದ್ರೆಗಳಿಂದವೂ. ಕ್ರಿಯಾಸಾರೇ= ಕ್ರಿಯಾಸಾರದಲ್ಲಿ: ॥೩೦॥

ಶ್ಲೋಕ॥ ಧೇನುಯೋನಿ ಸರೋಜಾತಾ ವಿಚ್ಛೋದುಚ್ಚಾಟನಾದಯಾ ।
ಉಪಸಂಹೃತ ಸಂಜ್ಞಾಚೇತ್ತೇತಾ ಮುದ್ರಾ ಷಡೀರಿತಾ ।

ಟೀಕು॥ ಧೇನುಮುದ್ರೆ, ಯೋನಿಮುದ್ರೆ, ಸರೋಜಮುದ್ರೆ, ವಿಚ್ಛೋದನಮುದ್ರೆ, ಉಚ್ಚಾಟನ ಮುದ್ರೆ, ಉಪಸಂಹೃತಮುದ್ರೆಗಳೆಂದು ಹೀಂಗೆ ನಿರೂಪಿಸಿಹನು. ಷಣ್ಮುದ್ರೆಗಳಿಂದವೂ.

ಇತ್ಯಾದ್ಯಾಗಮೋಕ್ತ ಮಂತ್ರಂಗಳಿಂದವೂ ನ್ಯಾಸ ಪ್ರಾಸಾದ ಮಂತ್ರ ಪಂಚಬ್ರಹ್ಮಾದಿ ಮಂತ್ರನ್ಯಾಸಂಗಳಿಂದವೂ, ಆವಾಹನಕಾದಿಭಿಃ=ಆವಾಹನ ಸಂಸ್ಥಾಪನಾದಿ ಕ್ರಿಯೆ ಗಳಿಂದವೂ ಗಂಧಮಾಲ್ಯಾದ್ಯುಪಚಾರಗಳಿಂದವೂ, ಲಿಂಗಂ=ಶಿವಲಿಂಗವನು, ಸಿಂಹಾಸನೇ=ಸಿಂಹಪೀಠದಲ್ಲಿ, ಯಜೇತ್=ಪೂಜಿಸುವದು. ॥೩೧॥

ಶ್ಲೋಕ॥ ಆತ್ಮಾರ್ಥಂ ಚ ಪರಾರ್ಥಂ ಚ ಪೂಜಾ ದ್ವಿವಿಧಮುಚ್ಯತೇ ।

ಟೀಕು॥ ಇತ್ಯಾದಿ ಕ್ರಮಗಳಿಂದ ಮಾಡುವ ಶುದ್ಧಶೈವನ ಲಿಂಗಪೂಜೆ, ಆತ್ಮಾರ್ಥ ಪೂಜೆಯೆಂದೂ, ಪರಾರ್ಥಪೂಜೆಯೆಂದೂ, ಆ ಶಿವಪೂಜೆ ಎರಡು ವಿಧವಾಗಿ ಹೇಳಲು ಪಟ್ಟುದು. ॥೩೨॥

ಶ್ಲೋಕ॥ ದತ್ತೇ ಚ ಗುರುಣಾ ಲಿಂಜ್ಗೇ ಸ್ಥಣ್ಡಿಲೇ ಸ್ವಯಮಾತ್ಮನಿ ।
ಆತ್ಮಾರ್ಥಮಿದಮಾಖ್ಯಾತಂ ಪರಾರ್ಥಂ ತು ತತಃಶೃಣು ॥

ಟೀಕು॥ ದತ್ತೇಚ ಗುರುಣಾಲಿಂಗೇ=ತನ್ನ ಆಚಾರ್ಯನಿಂದ ಕೊಡಲುಪಟ್ಟ ಶಿವಲಿಂಗ ದಲ್ಲಿಯೂ, ಸ್ಥಂಡಿಲೇ=ಸ್ಥಂಡಿಲೋದ್ಧೃತವಾದ ಚಕ್ರದಲ್ಲಿಯೂ ಶಿವಲಿಂಗದಲ್ಲಿಯೂ, ಸ್ವಯಮಾತ್ಮನಿ=ತನ್ನ ಹೃದಯದಲ್ಲಿಯೂ, ಮಾಡುವಂಥಾ ಇದಂ=ಈ ಶಿವಾರ್ಚನವು, ಆತ್ಮಾರ್ಥಮಾಖ್ಯಾತಂ=ಆತ್ಮಾರ್ಥವೆಂದು ನಿರೂಪಿಸಲು ಪಟ್ಟುದು. ಪರಾರ್ಥಂ ತು=ಪರಾರ್ಥ ಪೂಜೆಯಾಯಿತ್ತಾದಡೆ, ತತಃ ಶೃಣು=ಅದಜೆಂದ ಮೇಲೆ ಕೇಳು. ॥೩೩॥

ಶ್ಲೋಕ॥ ಗ್ರಾಮಾದೌ ಸ್ಥಾಪಿತೇ ಲಿಜ್ಗೇ ಯದ್ವಾ ದೇವಾದಿನಿರ್ಮಿತೇ ।
ಪರಾರ್ಥಮಿತಿ ವಿಜ್ಞೇಯಂ ಸರ್ವಪ್ರಾಣಿ ಹಿತಾವಹಮ್ ॥

ಟೀಕು॥ ಯದ್ವಾದೇವತಾದಿ ನಿರ್ಮಿತೇ ಗ್ರಾಮಾದೌ ಸ್ಥಾಪಿತೇ ಲಿಂಗೇ=ಆವುದಾನೊಂದು ಕಾರಣದಿಂದ ದೇವ ಋಷಿ ದಾನವ ಮಾನವಾದಿಗಳಿಂದ ನಿರ್ಮಿಸಿ ಗ್ರಾಮ ಪುರ ಸಮುದ್ರ ನದೀತೀರ ಗಿರಿ ಗುಹಾಂತರಾದಿಗಳಲ್ಲಿ ಪ್ರತಿಷ್ಠಿಸಿಹಂಥಾ ಶಿವಲಿಂಗಗಳಲ್ಲಿಯೂ ಮಾಡುವಂಥಾ ಶಿವಪೂಜೆ, ಪರಾರ್ಥಮಿತಿ ವಿಜ್ಞೇಯಂ= ಪರಾರ್ಥಪೂಜೆಯೆಂದಜಿಯ ಬೇಕಾದುದು. ಸರ್ವಪ್ರಾಣಿ ಹಿತಾವಹಂ=ಆ ಸ್ಥಾಪಿತ ಲಿಂಗದಲ್ಲಿ ಮಾಡುವ ಪೂಜನವು ಎಲ್ಲಾ ಪ್ರಾಣಿಗಳಿಗೆಯೂ ಹಿತವಮಾಡುವ ಪೂಜನವು. ॥೩೪॥

ಶ್ಲೋಕ॥ ಶಿವ ದ್ವಿಜೇನ ಕರ್ತವ್ಯಾ ದ್ವಿಧಾ ಪೂಜೇತಿ ಚೋದಿತಾ ॥

ಟೀಕು॥ ಶಿವದ್ವಿಜನಿಂದ ಮಾಡಲುತಕ್ಕ ಪೂಜೆ ಆತ್ಮಾರ್ಥ ಪರಾರ್ಥವೆಂದೆರಡು ಪ್ರಕಾರದ ಪೂಜೆ. ಈ ಪ್ರಕಾರದಿಂದ ನಿರೂಪಿಸಲುಪಟ್ಟುದು. ॥೩೫॥

**ಶ್ಲೋಕ॥ ಅನ್ಯೇಷಾಂ ಸ್ವಾರ್ಥಯಜನಂ ನ ಕುರ್ಯಾತ್ತು ಪರಾರ್ಥಕಮ್ ।
ಮೋಹಾಲ್ಲೋಭಾಚ್ಚ ಕುರ್ವೀತ ರಾಜ್ಞೋರಾಷ್ಟ್ರಸ್ಯ ದುಸ್ಥಿತಿಃ ॥**

ಟೀಕು॥ ಅನ್ಯೇಷಾಂ=ಈ ಶಿವಾವರಣಂಗಳಲ್ಲೆ ಪೃಥಕ್ ಸ್ಥಾನಸ್ಥರಾದ ಬ್ರಹ್ಮಾದಿ ಇತರ ದೇವತಾ ಪೂಜನಮಂ, ಸ್ವಾರ್ಥಯಜನಂ ಪರಾರ್ಥಂ ನಕುರ್ಯಾತ್= ಶುದ್ಧಶೈವಂ ತನಗೋಸುಕರ ಪರರಿಂಗೋಸುಕರವಹ ಪೂಜೆಯಂ ಮಾಡಲಾಗದು. ಮೋಹಾತ್=ಶಿವಾಧಿಕ್ಯವನಜೆಯದೆ ಮಱೆವೆಯದೆಸೆಯಿಂದ, ಲೋಭಾಚ್ಚ=ಲೋಭದ ದೆಸೆಯಿಂದವು ದೀಕ್ಷಿತನಾದ ಶುದ್ಧಶೈವ ನಿತ್ಯಂ ದೇವಾರ್ಚನೆಯಂ ಮಾಡುವನೆ, ರಾಜ್ಞೋರಾಷ್ಟ್ರಸ್ಯ ದುಃಸ್ಥಿತಿಃ=ಅಜ್ಞಾನದಿಂದ ಸಂಸಾರಾರ್ಥಂ ಉದರಪೋಷಕನಾಗಿ ಆ ಶೈವನನಿರಿಸಿಕೊಂಡಿಹ ನೃಪತಿಯ ರಾಜ್ಯಕ್ಕೆ ಕೇಡಹುದು.

**ಶ್ಲೋಕ॥ ಶಿವಾವರಣ ದೇವಾಂಶ್ಚ ಸರ್ವಾನ್ ಸಮ್ಪೂಜಯೇದ್ಗುಹ ।
ಪೃಥಕ್ ಸ್ಥಾನಾಸ್ಥಿತಾನ್ ಸರ್ವಾನ್ ನಾರ್ಚಯೇದನ್ಯದೇವತಾಃ ।**

ಟೀಕು॥ ಭೋ ಗುಹ!=ಎಲೆ ಷಣ್ಮುಖನೆ!, ಪರಾರ್ಥಪೂಜೆಯಂ ಮಾಡುವ ಶುದ್ಧಶೈವಂ, ಸರ್ವಾನ್ ಶಿವಾವರಣ ದೇವಾಂಶ್ಚ ಸಂಪೂಜಯೇತ್=ಸಮಸ್ತರಾದ ಶಿವಾವರಣಸ್ಥರಹ ಬ್ರಹ್ಮವಿಷ್ಣ್ವಾದಿ ದೇವತೆಗಳನೂ ಶಿವನ ಪರಿವಾರದಿಂದವೆ ಲೇಸಾಗಿ ಪೂಜಿಸುವದು. ಪೃಥಕ್ ಸ್ಥಾನಸ್ಥಿತಾನ್ ಸರ್ವಾನನ್ಯ ದೇವತಾನ್ ನಾರ್ಚಯೇತ್=ಶಿವಾವರಣಸ್ಥರಲ್ಲದೆ ಬೇಱೆ ಬೇಱೆ ಬಹಿರ್ಜನರಿಂದ ಪ್ರತಿಷ್ಠಿತರಾಗಿಹ ಬ್ರಹ್ಮವಿಷ್ಣು ಇಂದ್ರ ವಹ್ನಿ ದಿವಾಕರ ನಿಶಾಕರ ಮಾತೃಕಾದೇವತೆಯರು ಮೊದಲಾದ ಎಲ್ಲಾ ದೈವಂಗಳನೂ ಪೂಜಿಸಲಾಗದು.

**ಶ್ಲೋಕ॥ ಮನ್ತ್ರಪಿಣ್ಡಹೃದಂಭೋಜೇವಾಸ ಮನ್ತ್ರಸ್ಯ ಭಾವತಃ ।
ಆವಾಹನಾತ್ಸಮಾಯುಕ್ತೇ ಲಿಙ್ಗಪೂಜಾದಿಕಂ ಚರೇತ್ ॥**

ಟೀಕು॥ ಮಂತ್ರಪಿಂಡ ಹೃದಂಭೋಜೇ=ಶಿವಮಂತ್ರಪಿಂಡವಪ್ಪ ತನ್ನ ಹೃದಯ ಕಮಲದಲ್ಲಿ, ಆವಾಹನಾತ್ಸಮಾಯುಕ್ತೇ ಲಿಂಗೇ=ಆವಾಹನದೆಸೆಯಿಂದ ಸಂಯುಕ್ತವಾದ ಶಿವಲಿಂಗದಲ್ಲಿ, ವಾಸಮನ್ತ್ರಸ್ಯ ಭಾವತಃ=ಮಂತ್ರಪ್ರತಿಯಪ್ಪ ವರ್ಣವಾಸ ಮೊದಲಾಗಿ ಶಿವವಾಸ ಪರ್ಯನ್ತವಾದ ಮಂತ್ರಭಾವದಿಂದ ಪೂಜಾದಿಕಂ, ಚರೇತ್=ಅಂತರಂಗ ಪೂಜೆ ಮೊದಲಾದ ಮಾನಸ ಕರ್ಮಮಂ ಆಚರಿಸುವದು. ॥೩೮॥

**ಶ್ಲೋಕ॥ ಮನ್ತ್ರಲಿಙ್ಗಶರೀರಸ್ಯಾತ್ಸ ಏವ ಪರಮಶ್ಶಿವಃ ।
ಶುದ್ಧಶೈವಮಿದಂ ಪ್ರೋಕ್ತಂ ವೀರಶೈವಂ ತತಃ ಶೃಣು ।**

ಟೀಕು॥ ಮಂತ್ರಲಿಂಗಶರೀರಸ್ಯಾತ್=ಅಂತರಂಗಾರ್ಚನೆಯ ಮಾಡುವ, ಶುದ್ಧಶೈವಂ= ಮಂತ್ರ ಸ್ವರೂಪವಾದ ಲಿಂಗ ಶರೀರಿಯಹನು. ಸ ಏವ ಪರಮಃ ಶಿವಃ=ಆ

ಹೃದಯಸ್ಥವಾದ ಮಂತ್ರಲಿಂಗ ಪೂಜಕನೆ ಸರ್ವೋತ್ಕೃಷ್ಟವಹ ಶಿವನೆಂದಜಿವುದು. ಇತಿ ಶುದ್ಧ ಶೈವಂ ಪ್ರೋಕ್ತಂ=ಈ ಪ್ರಕಾರದಿಂ ಶುದ್ಧಶೈವಂ ನಿರೂಪಿಸಲುಪಟ್ಟುದು. ತತಃ ವೀರಶೈವಮಂ ಕೇಳು. ವೀರಾಗಮೇ=ವೀರಾಗಮದಲ್ಲಿ:

ಶ್ಲೋಕ॥ ಸರ್ವೇಷಾಮಪಿ ಶೈವಾನಾಂ ವೀರಶೈವ ಮಹೋತ್ತಮಮ್ ।
ಸುಲಭಾ ದೇವೀ ಪೂಜಾ ಚ ಸುಲಭಂ ಚ ಕ್ರಿಯಾವಹಮ್ ॥

ಟೀಕು॥ ಸರ್ವೇಷಾಮಪಿ ಶೈವಾನಾಂ=ಎಲ್ಲಾಗಮಂಗಳಲ್ಲಿಯನೇಕ ಪ್ರಕಾರವನುಳ್ಳಂಥಾ ಸಮಸ್ತಶೈವಂಗಳಲ್ಲಿಯೂ, ವೀರಶೈವ ಮಹೋತ್ತಮಂ=ವೀರಶೈವೇ ಅತ್ಯುತ್ತಮವಾದುದು. ಭೋ ದೇವಿ!=ಎಲೆ ದೇವಿ! ಪೂಜಾ ಚ ಸುಲಭಾ=ವೀರಶೈವ ಮಾಡುವ ಶಿವಪೂಜೆ ಲೇಸಾಗಿ ಲಭ್ಧಿಸುವಂಥಾದು. ಕ್ರಿಯಾವಹಂ ಸುಲಭಂ=ಪೂಜಾದಿ ಕ್ರಿಯೆಗಳ ಮಾಟವು ಸುಲಭವಹಂಥಾದು. ಅಲ್ಪಕ್ರಿಯಾ ಬಹುಫಲಂ ವೀರಶೈವಂ ಮಹೇಶ್ವರೀ, ಅನ್ಯಶೈವಂ ತು ತತ್ಸರ್ವಂ ಫಲಮಲ್ಪಂ ಕ್ರಿಯಾಬಹುಃ=ಭೋ ಮಹೇಶ್ವರಿ!=ಎಲೆ ಮಹಾದೇವಿ! ವೀರಶೈವಂ=ವೀರಶೈವವು, ಅಲ್ಪಕ್ರಿಯಾ ಬಹುಫಲಂ=ಅಲ್ಪಕ್ರಿಯೆಗಳಿಂದ ಬಹುಫಲ ವಹಂಥಾದು. ಅನ್ಯಶೈವಂತು ತತ್ಸರ್ವಂ=ವೀರಶೈವವಲ್ಲದೆ ಉಳಿದ ಆ ಸಮಸ್ತಶೈವವೂ, ಫಲಮಲ್ಪಂ ಕ್ರಿಯಾಬಹುಃ=ಅಲ್ಪಫಲವನುಳ್ಳ ಕ್ರಿಯೆಗಳ ಬಹುಳತೆಯನುಳ್ಳದು. ॥೪೦॥

ಶ್ಲೋಕ॥ ತಸ್ಮಾತ್ಸರ್ವ ಪ್ರಯತ್ನೇನ ವೀರಮಾಹೇಶ್ವರಂ ಶುಭಮ್ ।

ಟೀಕು॥ ಅದು ಕಾರಣ ನಾನಾ ಪ್ರಯತ್ನದಿಂದವೂ ವೀರಮಾಹೇಶ್ವರವೇ ಸುಲಭ ವಹಂಥಾದು. ॥೪೧॥

ಶ್ಲೋಕ॥ ಜ್ಞಾನಗಮ್ಯಂ ರಹಸ್ಯಂ ಚ ಕೈವಲ್ಯಪದಕಾರಣಮ್ ।
ವೀರಶೈವಮಿತಿಜ್ಞೇಯಂ ಏತಲ್ಲಕ್ಷಣಮುಚ್ಯತೇ ॥

ಟೀಕು॥ ಅಜಿವಿನಿಂದ್ಯೆದಲುತಕ್ಕಂಥಾ, ಗೋಪ್ಯವಾದಂಥಾ ಮುಕ್ತಿಪದಕ್ಕೆ ಕಾರಣವಾದಂಥಾ ಆವುದಾನೊಂದು ಶೈವವುಂಟು ಅದು ವೀರಶೈವವೆಂದು ಹೇಳಲುಪಟ್ಟುದು. ಆ ವೀರಶೈವ ಲಕ್ಷಣಂ ಹೇಳಲುಪಡುವದು. ವೀರಶೈವಶಬ್ದಮಂ ನಿರ್ವಚಿಸಿಹನು. ॥೪೨॥

ಶ್ಲೋಕ॥ ಏಕ ಏವಾಯಮೇತಸ್ಮಿನ್ ಸರ್ವಸ್ಮಿನ್ ಜಗತೀತಿ ಯಃ ।
ವಿಶಿಷ್ಟ ಈರ್ಯತೇ ಯಸ್ಮಾದ್ವೀರ ಇತ್ಯಭಿಧೀಯತೇ ॥

ಟೀಕು॥ ಆವುದಾನೊಂದು ಕಾರಣದಿಂದಾವನೊಬ್ಬನೆ ಎಲ್ಲಾ ಜಗತ್ತಿನಲ್ಲಿಯೂ, ವಿಶೇಷಿಸಲುಪಟ್ಟವನೆಂದು ನುಡಿಯಲು ಪಡುತ್ತಿಹನು, ಆ ವಿಶೇಷಗುಣವಪ್ಪಾತನೇ ವೀರನೆಂದು ನುಡಿಯಲುಪಡುತ್ತಿಹನು. ॥೪೩॥

ಶ್ಲೋಕ॥ ಶಿವೇನ ಸಹ ಸಮ್ಬನ್ಧಂ ಯತ್ ಶಿವಮಿತ್ಯಾದೃತಂ ಬುಧೈಃ ।
ಉಭಯೋಃ ಸಂಪುಟೀಭಾವಾದ್ವೀರಶೈವಮಿತಿ ಸ್ಮೃತಮ್ ।

ಟೀಕು॥ ಯತ್‌ಶಿವೇನ ಸಹ ಸಂಬಂಧಂ=ಆವುದಾನೊಂದು ಶಿವನೊಡನೆ ಕೂಡಿಬಂಧವಾಗಿಪ್ಪಂದಂದು, ತದ್ಬುಧೈಃ ಶೈವಮಿತ್ಯಾದೃತಂ=ಆ ಸಂಬಂಧಂ ವಿದ್ವಾನುಗಳಿಂದ ಶೈವವೆಂದುದಾರಿಸಲುಪಟ್ಟುದು. ಉಭಯೋಃ ಸಂಪುಟೀಭಾವತ್=ವೀರಶಬ್ದ ಶೈವಶಬ್ದವೆಂದೆರಡು ಪದಂಗಳ ಸಂಪುಟದಿಂದ, ವೀರಶೈಮಿತಿ ಸ್ಮೃತಂ=ವೀರಶೈವವೆಂದು ನೆನೆಯಲುಪಟ್ಟುದು. ॥೪೪॥

ಶ್ಲೋಕ॥ ಶಿವಾರ್ಥಾರ್ಪಿತ ಜೀವತ್ವಾದ್ವೀರತನ್ತ್ರ ಸಮುದ್ಭವಾತ್ ।
ವೀರಶೈವ ಸಮಾಯೋಗಾದ್ವೀರಶೈವಮಿತಿ ಸ್ಮೃತಮ್ ॥

ಟೀಕು॥ ಶಿವಾರ್ಥಾರ್ಪಿತ ಜೀವತ್ವಾತ್=ಶಿವನಿಗೋಸುಕರ ತೊಡಲು ಪಟ್ಟಜೀವತನದದೆಸೆಯಿಂದವೂ, ವೀರತಂತ್ರ ಸಮುದ್ಭವಾತ್=ವೀರಾಗಮ ದೀಕ್ಷೆಯಲ್ಲಿ ಉದಯವಾದದೆಸೆಯಿಂದವೂ, ವೀರಶೈವ ಸಮಾಯೋಗಾತ್=ಸರ್ವಶಿಷ್ಟವಹ ವಿರಶೈವದ್ವಯ ಸಂಯೋಗದ ದೆಸೆಯಿಂದವೂ, ವೀರಶೈವ ಸಮಾಯೋಗಾತ್= ಸರ್ವಶಿಷ್ಟವಹ ವೀರಶೈವದ್ವಯ ಸಂಯೋಗದದೆಸೆಯಿಂದವೂ, ವೀರಶೈವಮಿತಿಸ್ಮೃತಂ=ವೀರಶೈವವೆಂದು ನೆನೆಯಲು ಪಟ್ಟುದು. ॥೪೫॥

ಶ್ಲೋಕ॥ ವೀರಮಾಹೇಶ್ವರಂ ತನ್ತ್ರಂ ಜ್ಞಾತವ್ಯಂ ತ್ರಿವಿಧಂ ಸುತ ।
ಸಾಮಾನ್ಯಂಚ ವಿಶೇಷಂ ಚ ನಿರಾಭಾರಂ ಕ್ರಮಾದ್ಭವೇತ್ ॥

ಟೀಕು॥ ಭೋ ಸುತ!=ಎಲೆ ಕುಮಾರ! ವೀರಮಾಹೇಶ್ವರಂ ತನ್ತ್ರಂ= ವೀರಮಾಹೇಶ್ವರಾಗಮಮಂ, ತ್ರಿವಿಧಂ ಜ್ಞಾತವ್ಯಂ=ಮೂಱು ವಿಧವಾದುದೆಂದು ಅಱಿಯಬೇಕಾದುದು. ಸಾಮಾನ್ಯಂ ಚ ವಿಶೇಷಂ ಚ ನಿರಾಭಾರಂ=ಸಾಮಾನ್ಯ ವೀರಶೈವವೆಂದೂ, ವಿಶೇಷ ವೀರಶೈವವೆಂದೂ, ನಿರಾಭಾರಿ ವೀರಶೈವವೆಂದೂ, ಕ್ರಮಾದ್ಭವೇತ್= ಹೀಂಗೆ ಕ್ರಮದಿಂದ ಮೂಱು ಪ್ರಕಾರವಹುದು. ॥೪೬॥

ಶ್ಲೋಕ॥ ತತ್ರಾದೌ ಸಮ್ಪ್ರವಕ್ಷ್ಯಾಮಿ ವೀರಸಾಮಾನ್ಯ ಲಕ್ಷಣಮ್ ।

ಟೀಕು॥ ತತ್ರ=ಆ ವೀರಶೈವದಲ್ಲಿ, ಆದೌ=ಮೊದಲಲ್ಲಿ, ವೀರಸಾಮಾನ್ಯ ಲಕ್ಷಣಂ= ಸಾಮಾನ್ಯ ವೀರಶೈವ ಲಕ್ಷಣಮಂ, ಸಂಪ್ರವಕ್ಷ್ಯಾಮಿ=ಲೇಸಾಗಿ ಹೇಳಿಹೆನು.

ಶ್ಲೋಕ॥ ಹಸ್ತಮಸ್ತಕ ಸಂಯೋಗಾದ್ಭೂತಿ ಪಟ್ಟಸ್ಯ ಧಾರಣಾತ್ ।
ಶಿವದೇಹೀತಿ ವಿಜ್ಞೇಯಃ ಸರ್ವಪಾಪೈಃ ಪ್ರಮುಚ್ಯತೇ ॥

ಟೀಕು॥ ಹಸ್ತಮಸ್ತಕ ಸಂಯೋಗಾತ್=ವೀರಶೈವಾಚಾರ್ಯನ ವೀರಮಾಹೇಶ್ವರನಪ್ಪ, ಸಚ್ಛಿಷ್ಯನ ಹಸ್ತಮಸ್ತಕಂಗಳ ಕೂಟದದೆಸೆಯಿಂದವೂ, ಭೂತಿಪಟ್ಟಸ್ಯ ಧಾರಣಾತ್=ಆ ಈ ಶ್ರೀಗುರು ತನ್ನ ಶಿಷ್ಯನ ಲಲಾಟದಲ್ಲಿ ವೀರಶೈವ ಸಾಮ್ರಾಜ್ಯವನ್ನಾಳೆಂದು ವಿಭೂತಿಯ ಪಟ್ಟವಕಟ್ಟಿದದೆಸೆಯಿಂದವು. ಶಿವದೇಹೀತಿ ವಿಜ್ಞೇಯಃ=ಆ ಶಿಷ್ಯ, ಲಿಂಗದೇಹೀತಿ ವಿಜ್ಞೇಯಂ ಎಂದಱಿಯತಕ್ಕಾತನು. ಸಃ=ಆ ಶ್ರೀಗುರುಕರಸಂಜಾತನಾದ ಆ ವೀರ ಮಾಹೇಶ್ವರನು, ಸರ್ವಪಾಪೈರ್ಮುಚ್ಯತೇ=ಎಲ್ಲಾ ಪಾಪಂಗಳಿಂದವೂ ಬಿಡಲು ಪಡುತ್ತಿಹನು. ॥೪೮॥

ಶ್ಲೋಕ॥ **ಗುರುಣಾದತ್ತಲಿಙ್ಗಂ ತು ಶಿವಮನ್ತ್ರೇಣ ಧಾರಯೇತ್ ।**

ಮೂರ್ಧ್ನಿ ಕಣ್ಠೇ ಭುಜೇ ಹಸ್ತೇ ಹೃತ್‌ಸ್ಥಲೇ ನಾಭಿಮಣ್ಡಲೇ ।
ಏತೇಷಾಮೇವದೇಶಂ ತು ಧಾರಯೇಚ್ಛಿವಲಿಙ್ಗಕಮ್ ॥

ಟೀಕು॥ ಗುರುಣಾದತ್ತ ಲಿಂಗಂ ತು ಶಿವಮಂತ್ರೇಣ ಧಾರಯೇತ್=ಶ್ರೀಗುರುವಿನಿಂದ ಕೊಡಲುಪಟ್ಟ ಲಿಂಗಮಂ ಶ್ರೀಮತ್ಪಂಚಾಕ್ಷರೀ ಮಂತ್ರದಿಂದ ತನ್ನ ಅಂಗಲ್ಲಿ ಧರಿಸಿ ಕೊಂಬುದು. ತನ್ನಂಗದಲ್ಲಿರಿಸುವಡೆ ಸ್ಥಾನಭೇದಂಗಳಾವಯಾಯಂದಡೆ, ಮೂರ್ಧ್ನಿ= ಮಸ್ತಕದಲ್ಲಿಯೂ, ಕಂಠೇ=ಕೊರಳಿನಲ್ಲಿಯೂ, ಭುಜೇ=ಕಕ್ಷಸ್ಥಾನದಲ್ಲಿಯೂ, ಹಸ್ತೇ=ಕರದಲ್ಲಿಯೂ ನಾಭಿಮಂಡಲೇ=ನಾಭ್ಯೂರ್ಧ್ವ ಪ್ರದೇಶದಲ್ಲಿಯುಂ, ಏತೇಷಾಮೇವ ದೇಶಂ ತು=ಈ ಸ್ಥಾನಂಗಳೊಳಾವತಾವಿನಲ್ಲಿಯಾದಡೆಯೂ ಒಂದು ಸ್ಥಾನದಲ್ಲಿ, ಶಿವಲಿಂಗಕಂ ಧಾರಯೇತ್=ಶಿವಲಿಂಗಮಂ ಧರಿಸುವದು. ॥೫೦॥

ಶ್ಲೋಕ॥ **ಏಕಕಾಲಂ ದ್ವಿಕಾಲಂ ವಾ ತ್ರಿಕಾಲಂ ವಾ ಸಮರ್ಚಯೇತ್ ।**

ಟೀಕು॥ ಒಂದು ವೇಳೆಯಾದಡೆಯು ಎರಡು ವೇಳೆಯಾದಡೆಯೂ ಅಲ್ಲಾ ಮೂಱು ವೇಳೆಯಾದಡೆಯೂ ಶಿವಪೂಜೆಯಂ ಮಾಡುವದು. ॥೫೧॥

ಶ್ಲೋಕ॥ **ಗುರೌ ಲಿಙ್ಗೇ ಸದಾಭಕ್ತಿಂ ಕಾರಯೇದ್ಭಸಿತ ವ್ರತೀ ।**

ಟೀಕು॥ ಸಾಮಾನ್ಯ ವೀರವ್ರತವನುಳ್ಳಾತಂ ಶ್ರೀಗುರುವಿನಲ್ಲಿಯುಂ ಶಿವಲಿಂಗದಲ್ಲಿಯುಂ ಶ್ರೀ ವಿಭೂತಿಯಲ್ಲಿಯುಂ ಎಲ್ಲಾಗಳೂ ಭಕ್ತಿಯಂ ಮಾಡುವುದು. ॥೫೨॥

ಶ್ಲೋಕ॥ **ವೀರಸಾಮಾನ್ಯಮಾಖ್ಯಾತಂ ವಿಶೇಶಂ ಚ ತತಃ ಶೃಣು ।**

ಟೀಕು॥ ಈ ಪ್ರಕಾರದಿಂ ಬಹಳತರವಪ್ಪ ಸಾಮಾನ್ಯ ವೀರಶೈವ ವರ್ತನಮಂ ಅತಿಸಂಕೋಚಿಸಿ ನುಡಿಯಲುಪಟ್ಟುದು. ಈ ವೀರಸಾಮಾನ್ಯ ಕ್ರಿಯೆಗೆ ಸಹಸ್ರ ಸಂಖ್ಯೆಯ ಗ್ರಂಥಗಳುಂಟಾಗಿಹವು. ಅನಂತರಂ ವಿಶೇಷ ವೀರಶೈವಮಂ ಕೇಳು. ॥೫೩॥

ಶ್ಲೋಕ॥ ಶಿವಕುಮ್ಭಂ ಸಮಾಸಾಧ್ಯ ಸ್ಥಣ್ಡಿಲಾದಿಷು ಪೂರ್ವವತ್ ।
ಶಿವಕುಮ್ಭೇ ಶಿವಂ ಪೂಜ್ಯ ಭಕ್ತಾನನ್ಯೇನ ತೋಷಯೇತ್ ॥

ಟೀಕು॥ ವೀರಶೈವದೀಕ್ಷಾ ಕರ್ತೃವಪ್ಪ ದೇಶಿಕೋತ್ತಮನು, ಪೂರ್ವಂ ಸ್ಥಂಡಿಲಾದಿಷು ಶಿವಕುಂಭಂ ಸಮಾಸಾಧ್ಯ=ಪೂರ್ವದ ಶುದ್ಧಶೈವ ವಿಧಾನಕ್ಕೆ ಹೇಂಗೆ ಪ್ರೋಕ್ತವಾಗಿಹವು ಹಾಂಗಿಹ ಸ್ಥಂಡಿಲಾದಿ ಶುದ್ಧ ಪ್ರದೇಶಂಗಳಲ್ಲಿ ಸ್ಥಾಪಿತವಹಂಥಾ ಶಿವಕಳಸಮನೈದಿ, ಶಿವಕುಂಭೇ ಶಿವಂ ಪೂಜ್ಯ=ಶಿವಕುಂಭದಲ್ಲಿ ಶಿವನಂ ಪೂಜಿಸಿ, ಅನ್ಯೇನ ಭಕ್ತಾನ್ ತೋಷಯೇತ್=ಉಳಿದ ನಾನಾ ಸತ್ಕಾರದಿಂದ ದೀಕ್ಷೋತ್ಸವಕ್ಕೈದಿದಂಥಾ ಚರಲಿಂಗಭಕ್ತರುಗಳಂ ಸಂತೋಷಂಬಡಿಸುವುದು. ॥೫೪॥

ಶ್ಲೋಕ॥ ಶೇಷಂ ದೀಕ್ಷೋಕ್ತವತ್ ಕೃತ್ವಾ ಮಲಪಾಶಾದಿ ಮೋಚನಮ್ ।
ಗುರುಃಶಿಷ್ಯಂ ಸಮಾಲೋಕ್ಯ ತತ್ತ್ವದೇಹಂ ವಿಚಿನ್ತಯೇತ್ ॥

ಟೀಕು॥ ಗುರುಃ=ವೀರಶೈವಾಚಾರ್ಯಂ, ಶೇಷಂ=ಉಳಿದ ದೀಕ್ಷಾ ಸತ್ಕರ್ಮವೆಲ್ಲವನೂ, ಮಲಪಾಶಾದಿಮೋಚನಂ=ಸಮಸ್ತಮಲ ಪಂಚಪಾಶಾದಿಗಳ ಬಿಡುಗಡೆಯನೂ, ದೀಕ್ಷೋಕ್ತವತ್ಕೃತ್ವಾ=ವೀರಮಾಹೇಶ್ವರ ದೀಕ್ಷಾಪಟಲಂಗಳಲ್ಲಿ ನುಡಿಯಲುಪಟ್ಟ ಹಾಂಗೆ ಮಾಡಿ, ಶಿಷ್ಯಂ ಸಮಾಲೋಕ್ಯ ತತ್ತ್ವದೇಹಂ ವಿಚಿಂತಯೇತ್=ಶಿಷ್ಯನಂ ಕೃಪಾವಲೋಕ ನಂಗೈದು ಶಿವತತ್ತ್ವದೇಹದ ಹಾಂಗೆ ಚಿಂತಿಸುವುದು. ॥೫೫॥

ಶ್ಲೋಕ॥ ಶಿವಕುಮ್ಭಸ್ಥ ತೋಯೇನ ಅಭಿಷಿಞ್ಚೇಚ್ಛಿವಾಣುನಾ ।
ನಾದಬಿನ್ದು ಕಲಾನೀತ್ವಾ ತತ್ತತ್ ಸ್ಥಾನೇಷು ವಿನ್ಯಸೇತ್ ॥

ಟೀಕು॥ ಶಿವಕುಂಭಸ್ಥತೋಯೇನ ಶಿವಾಣುನಾ ಅಭಿಷಿಂಚೇತ್=ಶಿವಕುಂಭದಲ್ಲಿದ್ದ ಪವಿತ್ರೋದಕದಿಂದ ಶ್ರೀಮತ್ಪಂಚಾಕ್ಷರೀ ಮಂತ್ರದಿಂದ ದೂರ್ವಾಂಕುರಗಳಿಂ ಶಿಷ್ಯನ ಉತ್ತಮಾಂಗದಲಿ ಪ್ರೋಕ್ಷಣಂ ಮಾಡುವದು. ನಾದ ಬಿಂದುಕಲಾನೀತ್ವಾ=ನಾದವೆನಿಸಿಪ್ಪ ಶಿವನಂ ಬಿಂದುವೆನಿಸಿಪ್ಪ ಶಕ್ತಿಯಂ ಕಲೆಗಳೆನಿಸಿಪ್ಪ ಶಿವಾವಯಂಗಳಂ ಧ್ಯಾನಹಸ್ತಕ್ಕೆ ತಂದುಕೊಂಡು, ತತ್ತತ್ಸ್ಥಾನೇಷು ವಿನ್ಯಸೇತ್=ಸ್ನಾನಾದಿ ಕ್ರಿಯೆಗಳೊಡನರ್ಚಿಸಿ ಪೀಠ ಸ್ಥಾನದಲ್ಲಿರಿಸಿದ ಶಿವಲಿಂಗಸ್ಥಳದ ಶಲಾಕೆ ಪೀಠಿಕಾವಯವೆಂಬ ಆಯಾಸ್ಥಾನಂಗಳಲ್ಲಿ, ನ್ಯಾಸಮಂ ಮಾಡುವದು. ॥೫೬॥

ಶ್ಲೋಕ॥ ಷಟ್‌ಚಕ್ರಂ ಷಡಙ್ಗಂ ಚ ಷಡಧ್ವಾನಂ ಷಡಾನನ ।
ತತ್ತತ್ ಸ್ಥಾನೇಷು ವಿನ್ಯಸ್ಯ ಪಞ್ಚಬ್ರಹ್ಮ ನ್ಯಸೇತ್ತತಃ ॥

ಟೀಕು॥ ಭೋ ಷಡಾನನ!=ಎಲೆ ಷಣ್ಮುಖನೆ!, ಷಟ್‌ಚಕ್ರಂ ಷಡಂಗಂ ಚ ಷಡಧ್ವಾನಂ=ಷಟ್‌ಚಕ್ರವನೂ, ಶಿವಾಂಗಾದಿ ಷಡಂಗವನೂ, ಭುವನಾಧ್ವಾದಿ

ಷಡಧ್ವಗಳನೂ, ತತ್ತತ್ ಸ್ಥಾನೇಷು ವಿನ್ಯಸ್ಯ=ಆಯಾ ಪೂರ್ವೋಕ್ತ ಶಿವಲಿಂಗಾವಯವಂಗಳಲ್ಲಿ ನ್ಯಾಸಮಂ ಮಾಡಿ, ತತೋ ಪಂಚಬ್ರಹ್ಮನ್ಯಸೇತ್=ಅದಱಿಂದಂ ಮೇಲೆ ಪಂಚಬ್ರಹ್ಮಮಂತ್ರಂಗಳಂ ನ್ಯಾಸಮಂ ಮಾಡುವದು. ॥೫೭॥

ಶ್ಲೋಕ॥ ಮೂಲಮನ್ತ್ರಂ ತೂಪದಿಶೇತ್ತತೋಲಿಙ್ಗಂ ಪ್ರದಾಪಯೇತ್ ।
ಶೇಷಾಣಿ ಸರ್ವಕರ್ಮಾಣಿ ದೀಕ್ಷಾಧ್ವೋಕ್ತ ಕ್ರಮಾಚ್ಚರೇತ್ ॥

ಟೀಕು॥ ಮೂಲಮನ್ತ್ರಂ ತೂಪದಿಶೇತ್=ಶಿವತತ್ತ್ವ ಸದಾಶಿವತತ್ತ್ವ ಮಹೇಶ್ವರ ತತ್ತ್ವವೆಂಬ ತ್ರಿತತ್ತ್ವಂಗಳಿಗೆ ಶಿವತತ್ತ್ವವೇ ಮೊದಲ ತತ್ತ್ವವಾದ ಕಾರಣ, ಆ ಶಿವಶಬ್ದಂ ಚತುರ್ಥಿ ಪರ್ಯಂತ ನಮೋಂತವಾಗಿಹ ಶಿವಮಂತ್ರವೇ ಮೂಲ ಮನ್ತ್ರವೆನಿಸಿಕೊಂಬುದು. ಈ ಮೂಲಮಂತ್ರವಪ್ಪ ಪಂಚಾಕ್ಷರೀ ಮಂತ್ರೋಪದೇಶವೇ ವೀರಶೈವೋಪದೇಶವು. ಸಮಸ್ತಶಿವಮಂತ್ರಂಗಳ ದೀಕ್ಷಾಭೇದಂಗಳು ಕೋಟಿ ಕೋಟಿ ಸಂಖ್ಯೆಗಳಾಗಿಹವು. ಅದು ಕಾರಣ ಶ್ರೀಗುರು ಶಿಷ್ಯನ ಕರ್ಣದಲ್ಲಿ ಪಂಚಾಕ್ಷರೀ ಮಂತ್ರಮಂ ಉಪಾಂಶೋಪದೇಶಂ ಮಾಡುವದು. ತತೋಲಿಂಗಂ ಪ್ರದಾಪಯೇತ್=ಆ ಮಂತ್ರೋಪದೇಶದ ತಱುವಾಯಲ್ಲಿ ಶಿಷ್ಯಂಗೆ ಪ್ರಾಣಲಿಂಗಮಂ ಕೊಡುವದು. ಶೇಷಾಣಿ ಸರ್ವಕರ್ಮಾಣಿ ದೀಕ್ಷಾಧ್ವೋಕ್ತಕ್ರಮಾಚ್ಚರೇತ್= ಉಳಿದ ಸಮಸ್ತಕ್ರಿಯೆಗಳಂ ವೀರಶೈವ ಮಾರ್ಗದಲ್ಲಿ ನುಡಿಯಲುಪಟ್ಟ ಕ್ರಮದಿಂದ ಬರಿಸುವದು. ॥೫೮॥

ಶ್ಲೋಕ॥ ದೇಹಪ್ರಾಣಂ ಸಮಾಯೋಜ್ಯ ಪ್ರಾಣಲಿಙ್ಗೇ ಪ್ರಕಲ್ಪಯೇತ್ ।
ಅವಿನಾಭಾವ ಸಂಯೋಗಾತ್ತಸ್ಮಾದೈಕ್ಯಂ ಪ್ರಕಲ್ಪಯೇತ್ ।

ಟೀಕು॥ ಈ ಪ್ರಕಾರದಿಂ ವೀರಶೈವ ದೀಕ್ಷಿತನಾದ ವೀರಮಾಹೇಶ್ವರಂ, ದೇಹಪ್ರಾಣ ಸಮಾಯೋಜ್ಯ=ದೇಹಪ್ರಾಣಂಗಳ ವರ್ತನ ಬೇಱಾಗದ ಹಾಂಗೆ ಏಕವಾಗಿ ಕೂಡಿ, ಪ್ರಾಣಲಿಂಗೇ ಪ್ರಕಲ್ಪಯೇತ್=ತನ್ನ ಪ್ರಾಣಲಿಂಗದಲ್ಲಿ ಕಲ್ಪಿಸುವದು. ತಸ್ಮಾದವಿನಾಭಾವ ಸಂಯೋಗಾದೈಕ್ಯಂ ಪ್ರಕಲ್ಪಯೇತ್=ಆಗಲಿಕೆಯಿಲ್ಲದ ಕೂಟದ ದೆಸೆಯಿಂದ ಪ್ರಾಣಲಿಂಗಂಗಳ ಏಕತ್ವಮಂ ಮಾಡುವದು. ॥೫೯॥

ಶ್ಲೋಕ॥ ಅನ್ಯದೃಷ್ಟಿನಿಪಾತಂ ಯತ್ತದ್ರವ್ಯಂ ಪರಿವರ್ಜಯೇತ್ ।
ಶುದ್ಧದ್ರವ್ಯಂ ಸಮಾಸಾಧ್ಯ ಲಿಙ್ಗಾನಾಂ ಚ ಪ್ರಸರ್ಪಣಮ್ ॥

ಟೀಕು॥ ಯದನ್ಯದ್ದೃಷ್ಟಿ ನಿಪಾತಂ=ಆವುದಾನೊಂದು ಭವಿಗಳ ದೃಷ್ಟಿಬಿಟ್ಟ ವಸ್ತುವುಂಟು. ತತ್‌ದ್ರವ್ಯಂ ಪರಿವರ್ಜಯೇತ್=ಆ ದ್ರವ್ಯಮಂ ಬಿಡುವುದು. ಶುದ್ಧದ್ರವ್ಯಂ ಸಮಾಸಾದ್ಯ= ಶುದ್ಧದ್ರವ್ಯಮಂ ಸಂಪಾದಿಸಿ, ಲಿಂಗಾಂಗಾನಾಂ ಪ್ರಸರ್ಪಣಂ=ಷಟ್‌ತ್ರಿಂಶಲ್ಲಿಂಗ ಷಟ್‌ತ್ರಿಂಶದಂಗಗಳ ಅರ್ಪಣಾವಧಾನಂಗಳಂ ನಡಸುವದು. ॥೬೦॥

ಶ್ಲೋಕ॥ ಇತಿ ವ್ರತ ಸಮಾಯುಕ್ತೋ ವೀರಶೈವೋ ವಿಶಿಷ್ಯತೇ ।

ಟೀಕು॥ ಸಂಕೋಚಿಸಲುಪಟ್ಟ ಇತ್ಯಾದಿ ವ್ರತಂಗಳೊಡನೆ ಕೂಡಿದ್ದಾತನೆ, ವೀರಶೈವೋ ವಿಶಿಷ್ಯತೇ=ವೀರಶೈವನೆಂದು ವಿಶೇಷಿಸಲುಪಡುತ್ತಿಹನು. ॥೬೧॥

ಶ್ಲೋಕ॥ ವಿಶೇಷ ಶೈವಮಾಖ್ಯಾತಂ ನಿರಾಭಾರಂ ತತಃ ಶೃಣು ।

ಟೀಕು॥ ಎಲೆ ಕುಮಾರ! ಹೀಂಗೆ ಸಂಕೋಚಿಸಿ ಸಮಸ್ತಶೈವಂಗಳೊಳಧಿಕವಪ್ಪ ವಿಶೇಷ ವೀರಶೈವಂ ನಿರೂಪಿಸಲುಪಟ್ಟ ತದನಂತರಂ ನಿರಾಭಾರ ವೀರಶೈವಮಂ ಕೇಳು. ಈ ಸಂಕೋಚಿಸಿದ ವೀರಶೈವ ಗ್ರಂಥಾರ್ಥ ಸ್ಪಷ್ಟಕಾರಣಾನ್ಯಗ್ರಂಥಂಗಳುಂ ಸಹಸ್ರ ಸಂಖ್ಯೆಯ ಗ್ರಂಥಗಳೆಂದು ಗ್ರಂಥಭಾರವಾದುದದು ನಿಮಿತ್ತಂ ಸಂಕೋಚ ವ್ಯಾಖ್ಯಾನಮಂ ಷಟ್‌ಸ್ಥಳ ಬ್ರಹ್ಮಿಗಳಜೆವುದು. ವಿಶೇಷ ವೀರಶೈವವೆಂಬ ಭಕ್ತಸ್ಥಲಮಂ ನಿರೂಪಿಸಿ ನಿರಾಭಾರಿ ವೀರಶೈವನೆನಿಸಿಕೊಂಬ ಜಂಗಮಸ್ಥಲಮಂ ನಿರೂಪಿಸಿಹೆನು. ॥೬೨॥

ಶ್ಲೋಕ॥ ಸರ್ವಸಂಸಾರ ಸೌಖ್ಯಾನಿ ತ್ಯಕ್ತ್ವಾ ಚಿತ್ತಂ ಶಿವೇ ಲಯೇತ್ ।
ದಣ್ಡಕೌಪೀನಕಾಷಾಯ ಜಟಾವಲ್ಕಲಧಾರಕಃ ॥

ಟೀಕು॥ ಆವನಾನೊಬ್ಬ ನಿರಾಭಾರವೀರಶೈವನು, ಸರ್ವಸಂಸಾರ ಸೌಖ್ಯಾನಿ ತ್ಯಕ್ತ್ವಾ= ಸಮಸ್ತ ಸಂಸಾರ ಸುಖಂಗಳಂ ಬಿಟ್ಟು, ದಂಡ ಕೌಪೀನ ಕಾಷಾಯ ಜಟಾವಲ್ಕಲ ಧಾರಕಃ=ದಂಡ, ಕೌಪೀನ ಕಾಷಾಂಬರ ಜಟಾಬಂಧ ನಾರಸೀರೆಗಳಂ ಧರಿಸುತ್ತ, ಚಿತ್ತಂ ಶಿವೇ ಲಯೇತ್=ಸಂವ್ಯಾಪಾರಸಾರ ನಿರ್ಮುಕ್ತವಾದ ಚಿತ್ತಮಂ ಶಿವಲಿಂಗದಲ್ಲಿ ಲಯವನ್ನೈದಿಸುವದು. ॥೬೩॥

ಶ್ಲೋಕ॥ ಮುಣ್ಡೀವಾ ಶಿವಚಿಹ್ನಾನಿ ಧಾರಯೇದಜಿನಾದಿಕಮ್ ।
ಭಿಕ್ಷಾಶೀ ನಿಯತಾಹಾರೋ ಸುಖಸಂಸಾರ ವರ್ಜಿತಃ ॥

ಟೀಕು॥ ಮುಂಡೀವಾ=ಬೋಳುತ್ತಮಾಂಗವುಳ್ಳಾತನಾದಡೆಯೂ ಆಗಲಿ, ಅಜಿನಾದಿಕಂ ಶಿವಚಿಹ್ನಾನಿ ಧಾರಯೇತ್=ವ್ಯಾಘ್ರಾಜಿನ ಮೊದಲಾದ ಶಿವಲೀಲಾ ಕಥನಂಗಳಂ ಸೂಚಿಸುವಂಥಾ ಶಿವಚಿಹ್ನಂಗಳಂ ಧರಿಸುವದು. ಭಿಕ್ಷಾಶೀ ನಿಯತಾಹಾರಃ=ಭಿಕ್ಷಾನ್ನ ಭೋಜಿಯಾಗಿಯೂ ನಿಯತವಹ ಆಹಾರವುಳ್ಳಾತನಾಗಿ, ಸುಖ ಸಂಸಾರ ವರ್ಜಿತಃ= ಅಲ್ಪಸುಖವಹ ಸಂಸಾರದಿಂದ ಬಿಡಲುಪಟ್ಟಾತನಹುದು. ॥೬೪॥

ಶ್ಲೋಕ॥ ನಿರಾಭಾರೀತಿ ವಿಜ್ಞೇಯಃ ಸ ಏವ ಪರಮಃ ಶಿವಃ ।

ಟೀಕು॥ ಇತ್ಯಾದಿ ಚರಸ್ಥಲ ಪ್ರವರ್ತನೆಯನುಳ್ಳಾತಂ ನಿರಾಭಾರಿ ಎಂದಜೆಯಲು ತಕ್ಕಾತನು. ಆ ಈ ನಿರಾಭಾರಿ ವೀರಶೈವನೇ ಉತ್ಕೃಷ್ಟನಾದಂಥಾ ಶಿವನು ತಾನೇ.

ಶ್ಲೋಕ॥ ವೀರಮಾಹೇಶ್ವರಾಣಾಂ ಚ ಸಾಮಾನ್ಯಂ ವ್ರತಮುಚ್ಯತೇ ॥

ಟೀಕು॥ ವೀರಮಾಹೇಶ್ವರರುಗಳ ಸಾಮಾನ್ಯವ್ರತಂ ನಿರೂಪಿಸಲುಪಟ್ಟುದು. ॥೬೭॥

ಶ್ಲೋಕ॥ ಪೂರ್ವೋಕ್ತ ಶಿವಮುದ್ರಾಸ್ತು ತದ್ಧಾರಿಷು ಚ ಸರ್ವತಃ ।
ಅರ್ಥತಃ ಪ್ರಾಣತಃ ಪ್ರಾಜ್ಞೋ ಭಕ್ತಿಂ ಕುರ್ಯಾದ್ದೃಢಾಂ ಸುತ ॥

ಟೀಕು॥ ಭೋ ಸುತ!=ಎಲೆ ಕುಮಾರ! ಪೂರ್ವೋಕ್ತಶಿವಮುದ್ರಾಸ್ತು=ಪೂರ್ವ ಶ್ಲೋಕೋಕ್ತವಾದ ಶ್ರೀಗುರು ಲಿಂಗ, ವಿಭೂತಿ, ರುದ್ರಾಕ್ಷಿ ಶಿವಮಂತ್ರಂಗಳಲ್ಲಿಯೂ, ತದ್ಧಾರಿಷು=ಆ ಶ್ರೀ ಗುರುಲಿಂಗವನುಳ್ಳ ವಿಭೂತಿ ರುದ್ರಾಕ್ಷ ಲಿಂಗಧಾರಣಗಳನುಳ್ಳ ಶಿವಮಂತ್ರಜಾತ ಪರಾಯಣರಾದ ಸದ್ಭಕ್ತರಲ್ಲಿಯೂ, ಸರ್ವತಃ=ಎಲ್ಲಾ ಕಡೆಯಲ್ಲಿಯೂ, ಪ್ರಾಜ್ಞಃ=ವೀರಮಾಹೇಶ್ವರ ಭಕ್ತಿಜ್ಞಾನವುಳ್ಳಾತನು, ಅರ್ಥತಃ ಪ್ರಾಣತಃ=ಅರ್ಥ ಪ್ರಾಣಂಗಳಿಂದವೂ, ದೃಢಾಂ ಭಕ್ತಿಂ ಕುರ್ಯಾತ್=ದೃಢವಾದ ಭಕ್ತಿಯಂ ಮಾಡುವದು. ॥೬೭॥

ಶ್ಲೋಕ॥ ಪಾಪಂ ತೇಷು ನ ವಕ್ತವ್ಯಂ ಸ್ವಯಮೇವ ಕದಾಚನ ।
ಕೃತೇ ಪರೇಣ ಚೇತ್ಪಾಪೇ ನೋಪೇಕ್ಷೇತ್ ಕರಣೈಸ್ತ್ರಿಭಿಃ ॥

ಟೀಕು॥ ತೇಷು=ಆ ಶ್ರೀಗುರುಲಿಂಗಜಂಗಮ ವಿಭೂತಿರುದ್ರಾಕ್ಷ ಶಿವಮಂತ್ರಪಾದೋದಕ ಪ್ರಸಾದಾದಿ ಶಿವಸಂಬಂಧವಾದ ವಸ್ತುಗಳಲ್ಲಿ, ಸ್ವಯಮೇವ ಕದಾಚನ ಪಾಪಂ ನ ವಕ್ತವ್ಯಂ=ತಾನೇ ದುರ್ಭಾವಿಯಾಗಿ ತನ್ನಿಂದವೂ ಜಾತ್ಯಾದಿ ಗುಹಾರೋಹಣವಪ್ಪ ಪಾಪ ವಚನವು ನುಡಿಯಲುತಕ್ಕುದಲ್ಲ. ಪರೇಣ ಪಾಪಂಕೃತೇಚೇತ್=ಶಿವಾಚಾರ ಬಹಿಃಕೃತವಪ್ಪ ಕೆಲಬರು ನರಕೆಗಳಿಂದ ಪಾಪವು ಮಾಡಲುಪಡುತ್ತಿಹುದು. ಕರಣೈಸ್ತ್ರಿಭಿಃ ನೋಪೇಕ್ಷೇತ್=ಮನವಚನ ಕಾಯಂಗಳೆಂಬ ತ್ರಿಕರಣದಿಂದವು ಉಪೇಕ್ಷಿಸಲಾಗದು.

ಶ್ಲೋಕ॥ ಬಲವಾನ್ರಕ್ಷಯೇತ್ತತ್ರ ದುರ್ಬಲಶ್ಚೇತ್ ವ್ರಜೇತ್ತತಃ ।
ಕರಣೈಸ್ತು ವಿಹೀನಶ್ಚೇದ್ಬುದ್ಧಿಂ ತತ್ರ ನ ನಿಕ್ಷಿಪೇತ್ ॥

ಟೀಕು॥ ತತ್ರ ಬಲಹೀನವಾನ್ ಚೇತ್=ಆ ಶಿವನಿಂದಾದಿಗಳಂ ಮಾಡುವರಲ್ಲಿ ಅವರು ಬಲಹೀನರಾಗಿ ತಾನು ಬಲವಂತನಹನೆ, ರಕ್ಷಯೇತ್=ಅವರುಗಳು ಮಾಡಿದ ಶಿವನಿಂದಾದಿಗಳಿಗೆ ತಕ್ಕದಂಡನವಂ ಮಾಡಿ ವೀರಶೈವಧರ್ಮಮಂ ರಕ್ಷಿಸುವದು. ದುರ್ಬಲಶ್ಚೇತ್ತತೋವ್ರಜೇತ್=ಆ ಶಿವದ್ರೋಹಿಗಳು ಬಲವಂತರಾಗಿ ತಾನು ಬಲಹೀನನಹನೆ ಅಲ್ಲಿಂದವು ತೊಲಗಿ ಹೋಹುದು. ಕರಣೈಸ್ತು ವಿಹೀನಶ್ಚೇತ್=ಅವರ ಶಿಕ್ಷಿಸುವಹಣಗಳಿಂದವೂ ತೊಲಗಿಹೋಪ ಗುಣಂಗಳಿಂದವೂ ಹೀನವಾದವನಹನೆ

ತತ್ರಬುದ್ಧಿಂ ನ ನಿಕ್ಷಿಪೇತ್=ಅವರುಗಳು ಮಾಡುವ ನಿಂದಾದಿಗಳಲ್ಲಿಯೂ ಅವರಲ್ಲಿಯೂ ತಾನು ಬುದ್ಧಿಯನಿಕ್ಕಲಾಗದು. ಇತ್ಯಾದಿಗಳು ವೀರಮಾಹೇಶ್ವರರ ಸಾಮಾನ್ಯ ವ್ರತಂಗಳು. ಈ ಸಾಮಾನ್ಯ ವ್ರತವು ಸಂಕೋಚಿಸಿ ನುಡಿಯಲುಪಟ್ಟುದು. ವೀರಮಾಹೇಶ್ವರರ ವಿಶೇಷ ವ್ರತಮಂ ವಿರಚಿಸುವಡೆ ವೀರಾಗಮಾದಿಗಳಲ್ಲಿಯಸಂಖ್ಯೆಯ ಗ್ರಂಥಂಗಳುಂಟು.

ಶ್ಲೋಕ॥ ಸ್ವೀಕರೋತಿ ಯದಾಲಿಙ್ಗಂ ಗುರುಣಾ ದೀಕ್ಷಯಾಽಣುನಾ ।
ತದಾಪ್ರಭೃತಿ ಲಿಙ್ಗೈಕ್ಯಮವಿನಾಭಾವಯೋಗತಃ ॥

ಟೀಕು॥ ಯದಾ=ಆ ವೇಳೆಯಲ್ಲಿ, ಗುರುಣಾದೀಕ್ಷಯಾಽಣುನಾ=ಮುಕ್ತಿಪ್ರದನಾದ ಸದ್ಗುರುವಿನಿಂದ ವೀರಶೈವದೀಕ್ಷೆಯಿಂದವೂ ಶ್ರೀಮತ್ಪಂಚಾಕ್ಷರೀ ಮಂತ್ರದಿಂದವೂ, ಲಿಂಗಂ ಸ್ವೀಕರೋತಿ=ಶಿವಲಿಂಗವನು ತನ್ನ ಪ್ರಾಣ ಸ್ವರೂಪೆಂದು ಮಾಡಿಕೊಳ್ಳುತ್ತಿಹನು. ತದಾ ಪ್ರಭೃತಿ=ಅಂದು ಮೊದಲಾಗಿ, ಅವಿನಾಭಾವಯೋಗತಃ=ಅಗಲಿಕೆ ಸದ್ಭಾವಯೋಗ ದಿಂದ ತನೆಗೆಯೂ ಲಿಂಗಕ್ಕೆಯೂ ಅದ್ವಯತ್ವವಾಯಿತೆಂದಱಿವುದು.

ಶ್ಲೋಕ॥ ದೇಹಂ ಪ್ರಾಣೇನ ಸಂಸ್ಥಾಪ್ಯ ಪ್ರಾಣಲಿಙ್ಗೇವಿನಿಕ್ಷಿಪೇತ್ ।
ಪ್ರಾಣೇನ ನಿಕ್ಷಿಪೇಲ್ಲಿಙ್ಗಂ ಪೃಥಗ್ಭಾವಂ ನ ಕಾರಯೇತ್ ॥

ಟೀಕು॥ ಪ್ರಾಣಂ ದೇಹೇನ ಸಂಸ್ಥಾಪ್ಯ=ದೇಹಮಂ ಪ್ರಾಣದೊಡನೆ ಸ್ಥಾಪಿಸಿ, ಪ್ರಾಣಂಲಿಂಗೇನ ನಿಕ್ಷಿಪೇತ್=ಆ ದೇಹ ಸಮೇತವಾದ ಪ್ರಾಣಮಂ ಲಿಂಗದೊಡನಿರಿಸು ವದು. ಪ್ರಾಣೇನ ಲಿಂಗಂ ನಿಕ್ಷಿಪೇತ್=ಆ ದೇಹ ಸಮೇತವಾದ ಪ್ರಾಣದೊಡನೆ ಲಿಂಗಮಂ ನಿರಿಸುವದು. ಪೃಥಗ್ಭಾವಂ ನ ಕಾರಯೇತ್=ದೇಹಕ್ಕೆಯೂ ಪ್ರಾಣಕ್ಕೆಯೂ ಲಿಂಗಕ್ಕೆಯೂ ಭಿನ್ನಭಾವಮಂ ಮಾಡಲಾಗದು. ॥೭೧॥

ಶ್ಲೋಕ॥ ವೀರಶೈವ ಕ್ರಮಃ ಪ್ರೋಕ್ತಃ ಪ್ರಾಯಶ್ಚಿತ್ತವಿವರ್ಜಿತಃ ।

ಟೀಕು॥ ವೀರಶೈವ ಕ್ರಮಃ ಪ್ರೋಕ್ತಃ=ಈ ಪ್ರಕಾರದಿಂದಲ್ಪ ಗ್ರಂಥಂಗಳಲ್ಲಿ ಸಂಕೋಚಿಸಿ ವೀರಶೈವ ಕ್ರಮಮಂ ನಿರೂಪಿಸಲುಪಟ್ಟುದು. ಪ್ರಾಯಶ್ಚಿತ್ತ ವಿವರ್ಜಿತಃ=ಸ್ಕಾಂದೇ : ಸ್ಕಾಂದ ಪುರಾಣದಲ್ಲಿ, ಗುರುಣಾದತ್ತಲಿಂಗಂ ತು ಸಾವಧಾನೇನ ಧಾರಯೇತ್। ಪ್ರಮಾದಾತ್ಪತಿ ತೇಲಿಂಗೇ ಪ್ರಾಣಾನಪಿ ಪರಿತ್ಯಜೇತ್ ॥ ಪತಿತೇ ಪ್ರಾಣ ಲಿಂಗೇ ಯಃ ಪ್ರಾಣಾನ್ ಧತ್ತೇ ನರಾಧಮಃ । ಸ ಚಂಡಾಲಃ ಇತಿಜ್ಞೇಯಃ ಶಿವದ್ರೋಹೀ ನ ಸಂಸ್ಪೃಶೇತ್ ॥ ಶ್ರೀಗುರುವಿನಿಂದ ಕೊಡಲುಪಟ್ಟ ಶಿವಲಿಂಗಮಂ ಅವಧಾನದೊಡನೆ ಧರಿಸುವದು. ಮಱಹಿನ ದೆಸೆಯಿಂದ ಲಿಂಗ ಪತನವಾದಡೆ ಪ್ರಾಣಂಗಳಂ ಬಿಡುವುದು. ತನ್ನ ಪ್ರಾಣಲಿಂಗವು ಪತನವಾಗುತ್ತಿರಲು ಆವನಾನೊಬ್ಬ ಮನುಷ್ಯಾಧಮಂ ಪ್ರಾಣಂಗಳಂ ಧರಿಸಿಹನು ಆ ನರಾಧಮಂ ಚಂಡಾಲನೆಂದಱಿವುದು. ಅವನು ಶಿವದ್ರೋಹಿ. ಆ

ಶಿವದ್ರೋಹಿಯಂ ವೀರಮಾಹೇಶ್ವರಂ ಮುಟ್ಟಲಾಗದು. ಇತ್ಯಾದಿ ಲಿಂಗನಿಷ್ಠಾಭಾವಂ ಆಸ್ಮಿನ್ವಾತುಲೇ=ಈ ವಾತುಲಾಗಮದಲ್ಲಿ. ॥೭೨॥

ಶ್ಲೋಕ॥ ಪ್ರಾಣಲಿಜ್ಗೇ ವ್ರತೇ ಲುಪ್ತೇ ಹಸ್ತ ಖಡ್ಗಾದವಞ್ಚಯನ್ ।
ಮುಖಂ ಪಜ್ಕಜವಚ್ಛಿನ್ದ್ಯಾತ್ ವೀರಭೃತ್ಯಸ್ಯ ಲಕ್ಷಣಮ್ ॥

ಟೀಕು॥ ಪ್ರಾಣಲಿಂಗ ವ್ರತಲೋಪವಾಗುತ್ತಿರುಲು, ಸ್ವಹಸ್ತ ಖಡ್ಗಾದವಞ್ಚಯನ್=ಸ್ವಹಸ್ತ ಖಡ್ಗದಿಂ ತನ್ನ ವಂಚಿಸದೆ, ಮುಖಂ ಪಜ್ಕಜವತ್ ಛಿಂದ್ಯಾತ್=ವಿಕಸಿತ ಪದ್ಮವ ಹೋಲುವಂಥ ಮುಖವುಳ್ಳಾತನಾಗಿ ತನ್ನಂ ಛೇದಿಸಿಕೊಂಬುದು. ಏತತ್ = ಆ ಇದು ವೀರಭೃತ್ಯಸ್ಯ ಲಕ್ಷಣಮ್=ವೀರಭೃತ್ಯನ ಲಕ್ಷಣವೆಮದು ಹೇಳುವುದು. ಇತ್ಯಾದಿ ಸದ್ಭಕ್ತ ನೈಷ್ಠಿಕಂ. ॥೭೩॥

ಶ್ರೋಕ॥ ಯೋವಾ ಚ್ಛೋತ್ಪಾಟಯೇಜ್ಜಿಹ್ವಾಂ । ಶಿವನಿನ್ದಾರತಸ್ಯ ತು ।
ತ್ರಿಸಪ್ತಕುಲಮುದ್ಧೃತ್ಯ । ರುದ್ರಲೋಕಂ । ಸ । ಗಚ್ಛತಿ ॥

ಟೀಕು॥ ಆವನಾನೊಬ್ಬ ವೀರಶೈವಂ ತನಗೆ ವಂಶಾಭಿಮಾನವಿಲ್ಲದೊಡಂ ಶಿವಭಕ್ತಿ ವಿಶೇಷದಿಂದಿಪ್ಪತ್ತೊಂದು ಕುಲಮನುದ್ಧರಿಸಿ ಶಿವಲೋಕಮನ್ನೈದುವನು. ಇತ್ಯಾದಿ; ಶಿವನಿಂದಾಕರ್ತೃ ಶಿಕ್ಷಿಸಿ, ಪ್ರಾಯಶ್ಚಿತ್ತ ವಿವರ್ಜಿತಂ ಏವ=ಮಾಡಿದಕಾರಣಾರ್ಥದಿಂದ ವೀರಶೈವ ಕ್ರಮಂ=ಪ್ರಾಣತ್ಯಜನೆ ಮೊದಲಾದ ಪ್ರಾಯಾಯಶ್ಚಿತ್ತವುಂಟಾಗಿಹುದು. ಜೀವನೋಪಾಯಂ ಪ್ರಾಯಶ್ಚಿತ್ತದಿಂದ ಬಿಡಲುಪಟ್ಟಿಹುದು. ॥೭೪॥

ಶುದ್ಧ ಶೈವೋ ವಿಶೇಷೇಣ ಮಂತ್ರಯಂತ್ರ ಪ್ರಚಾರಣಾತ್ ।
ಶುದ್ಧೋಭವತಿ ಲೋಪೇಷು ಪ್ರಾಯಶ್ಚಿತ್ತವಿಧಾನತಃ ॥

ಟೀಕು॥ ಶುದ್ಧಶೈವ=ಶುದ್ಧಶೈವ ಕ್ರಮಂ, ಲೋಪೇಷು=ಲಿಂಗ ಪತನ ಮೊದಲಾದ ಶೈವವ್ರತ ಲೋಪವಾಗುತ್ತಿರಲು, ಪ್ರಾಯಶ್ಚಿತ್ತವಿಧಾನತಃ=ತತ್ತಲ್ಲೋಪಾನುಗುಣ ಪ್ರಾಯಶ್ಚಿತ್ತ ವಿಧಾನದಿಂ, ಮಂತ್ರಯಂತ್ರ ಪ್ರಚಾರಣಾತ್=ಅಘೋರಾದಿ ಮಂತ್ರಂ ಯಂತ್ರಂಗಳನಾಚರಣೆಯದೆಸೆಯಿಂದ, ಶುದ್ಧೋ ಭವತಿ=ಶುದ್ಧನಾಗುತ್ತಿಹನು. ತತ್ತತ್ಪ್ರಾಯಶ್ಚಿತ್ತವಿಧಾನಂ ಯಥಾ=ಆ ಶೈವಕ್ರಮದ ಪ್ರಾಯಶ್ಚಿತ್ತ ವಿಧಾನ ಹೇಂಗೆ ಯಾಯೆಂದಡೆ: ॥೭೫॥

ಶ್ಲೋಕ॥ ಸ್ವೇಷ್ಟಲಿಜ್ಗೇ ಪರಿಭ್ರಷ್ಟೇ ನಷ್ಟೇ ದಗ್ಧೇ ಹೃತೇಽಪಿ ವಾ ।
ನೀತೇ ವಾ ಮೂಷಿಕಾದ್ಯೈಶ್ಚ ಕಾಕ ಕೌಲೇಯ ವಾನರೈಃ ।
ಜಪ್ತ್ವಾ ಲಕ್ಷಮಘೋರಸ್ಯ ವಿಧಿನಾ ಲಿಜ್ಗಕಾನ್ತರಮ್ ॥
ಪ್ರತಿಷ್ಠಾಪ್ಯ ನಯೇತ್ಸಿದ್ಧಿಂ ಖಣ್ಡಿಕಾಯಾಂ ತಥೈವಚ ।

ಟೀಕು॥ ಶುದ್ಧಶೈವನ ಇಷ್ಟಲಿಂಗ ಬಿದ್ದೊಡಂ ಕೆಟ್ಟೊಡಂ ದಗ್ಧಮಾದೊಡಂ ಚೋರರಿಂದ ಪಹೃತಮಾದೊಡಂ ಮೂಷಿಕ ಸ್ವೇನ ಕಾಕ ಶುನಕ ವಾನರಂಗಳಿಂದ ಕೊಂಡುಹೋಗಲು ಪಡುತ್ತಿದ್ದೊಡಂ ಅಘೋರಮಂತ್ರದ ಒಂದು ಲಕ್ಷ ಜಪಮಂ ಮಾಡಿ ಶಾಸ್ತ್ರವಿಧಾನ ದಿಂದಾಚಾರ್ಯನಿಂದ ಪೂರ್ವ ಪ್ರಕಾರದಿಂ ಪ್ರತಿಷ್ಠಿಸಿಕೊಂಡು ಲಿಂಗಶುದ್ಧಿಯನ್ನೈದಿಸು ವುದು. ಇತ್ಯಾದಿ ಲಿಂಗಪ್ರಾಯಶ್ಚಿತ್ತಂ.

ಶ್ಲೋಕ॥ ವ್ರತಸ್ಯ ಚ ಕ್ರಿಯಾಲೋಪೇ ನಿಯಮಸ್ಯ ವಿಲೋಪನೇ ।
ಗಾಯತ್ರ್ಯಷ್ಟಶತೇನೈವ ವಿಶುದ್ಧಿಮಧಿಗಚ್ಛತಿ ॥

ಟೀಕು॥ ಶಿವತಂತ್ರಂಗಳು ಕ್ರಿಯಾಲೋಪವಾಗುತ್ತಿದ್ದೊಡಂ, ನಿಯಮಲೋಪವಾಗು ತ್ತಿದ್ದೊಡಂ ಅಷ್ಟೋತ್ತರ ಶತಗಾಯತ್ರಿಯಂ ಜಪಿಸಿದಡೆ ವ್ರತಾದಿಯ ಶುದ್ಧಿಯನ್ನೈದಿ ಸುತ್ತಂವಿಹರು. ಇತ್ಯಾದಿ ವ್ರತಲೋಪ ಪ್ರಾಯಶ್ಚಿತ್ತ. ಈ ಪ್ರಕಾರದಿಂ ಶುದ್ಧಶೈವ ತನ್ನ ವ್ರತಂಗಳಾದಿ ಕ್ರಿಯಾಲೋಪಂಗಳಾದಲ್ಲಿ ಕೂಟಾಂ ಗವಿದ್ಯಾಂಗಂಗಳಿಂ ಪ್ರಾಯಶ್ಚಿತ್ತಂ ಮಾಡಿ ಸಮಸ್ತ ಶುದ್ಧಿಯನ್ನೈದಿಸಿ ಪೂರ್ವದೋಪಾದಿಯಲ್ಲಿ ತನ್ನ ಸತ್ಕ್ರಿಯಂಗಳ ನಾಚರಿಸುವದು. ॥೭೯॥

ಶ್ಲೋಕ॥ ಸಾಮಾನ್ಯಂ ಮಿಶ್ರಕಂ ಚೈವ ಶುದ್ಧಂ ವೀರಂ ಚತುರ್ವಿಧಮ್ ।

ಟೀಕು॥ ಈ ಕೀಲಕಪಟಲೋಕ್ತವಾಗಿಪ್ಪ, ಸಾಮಾನ್ಯಶೈವಮಂ, ಮಿಶ್ರಶೈವಮಂ, ಶುದ್ಧಶೈವಮಂ, ವೀರಶೈವಮಂ ಎಂದು ನಾಲ್ಕು ವಿಧವಾಗಿಹುದು. ಈ ಚತುರ್ವಿಧ ಶೈವಮಾರ್ಗಂಗಳೇ ಸಮಸ್ತಾಗಮ ಪುರಾಣ ಶ್ರುತಿ ಸ್ಮೃತ್ಯಾದಿಗಳಲ್ಲಿ ಪ್ರಸಿದ್ಧವಾಗಿಹುವು. ತತ್ತಚ್ಛೈವ ಪರಿಜ್ಞಾನವಪೂರ್ವವದಾಗಿ ಈ ಚತುರ್ವಿಧ ಶೈವಮಂ ಷಟ್ಸ್ಥಲ ಬ್ರಹ್ಮಿಗಳಪ್ಪ ಮಹಾಂತರು ಲೇಸಾಗಿ ತಿಳಿವುದು. ॥೮೦॥

ಶ್ಲೋಕ॥ ತತ್ಸರ್ವಂ ಹಿ ಸಮಾಸೇನ ತವ ಪ್ರೋಕ್ತಂ ಷಡಾನನ ।

ಟೀಕು॥ ಆ ಸಮಸ್ತ ಶೈವವು ಸಂಕೋಚಿಸಿ ನಿನಗೆ ನಿರೂಪಿಸಲುಪಟ್ಟುದು. ॥೮೧॥

ಶ್ಲೋಕ॥ ತತ್ತ್ವಾದಿ ಕೀಲಕಾನ್ತಶ್ಚ ಪಟಲಾನಾಂ ದಶಕ್ರಮಾತ್ ।
ಭೇದೋ ಶುದ್ಧಾಖ್ಯ ತನ್ತ್ರಸ್ಯ ಕಥಿತಾಸ್ತವ ಸುವ್ರತ ।

ಟೀಕು॥ ಎಲೆ ಸದ್ಭಕನಾದ ಕುಮಾರ! ಶುದ್ಧಾಕ್ಯತಂತ್ರಸ್ಯ=ಈ ಶುದ್ಧಾಖ್ಯ ತಂತ್ರ ಪಟಲದ, ಪಟಲಾನಾಂ ತತ್ತ್ವಾದಿ ಕೀಲಕಾಂತಶ್ಚ ಭೇದಕಃ=ತತ್ತ್ವಪಟಲ ಮೊದಲಾಗಿ ಕೀಲಕ ಪಟಲ ಕಡೆಯಾಗಿಹ ಪಟಲಂಗಳ ದಶಭೇದವು ನಿನಗೆ ನಿರೂಪಿಸಲುಪಟ್ಟುದು. ॥೮೨॥

ಶ್ಲೋಕ॥ ಏವಂ ಶುದ್ಧಾಖ್ಯತನ್ತ್ರಂ ತು ಕಥಿತಂ ತವ ಸುವ್ರತ ।
ಭುಕ್ತಿ ಮುಕ್ತಪ್ರದಂ ನೃಣಾಂ ಸರ್ವಕಾಮಾರ್ಥಸಾಧನಮ್ ।

ಟೀಕು॥ ಭೋ ಸುವ್ರತ!=ಎಲೆ ಸದ್ವ್ರತಸ್ಥನಾದ ಷಡಾನನೆ! ಏವಂ ನೃಣಾಂ=ಹೀಂಗೆ ಮಾನವರಿಗೆ, ಭುಕ್ತಿಮುಕ್ತಿಪ್ರದಂ=ಭೋಗದಾಯಕವೂ ಮೋಕ್ಷದಾಯಕವೂ, ಸರ್ವ ಕಾಮಾರ್ಥ ಸಾಧನಂ=ಸಮಸ್ತ ಇಷ್ಟಾರ್ಥಗಳಿಗೆ ಸಾಧನಮಾದ, ಶುದ್ಧಾಖ್ಯ ತಂತ್ರಂ ತು=ವಾತುಲ ಶುದ್ಧವೆಂಬ ಈ ತಂತ್ರವು, ಕಥಿತಂ=ನಿರೂಪಿಸಲುಪಟ್ಟುದು. ॥೮೩॥

ಇತಿಶ್ರೀ ವಾತುಲತನ್ತ್ರೇ ಶುದ್ಧಾಖ್ಯೇ ಸಹಸ್ರಗ್ರಂಥಸಂಹಿತಾಯಾಂ
ಶ್ರೀ ಮಲ್ಲಿಕಾರ್ಜುನೇನ ಕರ್ನಾಟಭಾಷಾ ವಿವೃತೋ
ಮನ್ತ್ರಕೀಲಲೋ ನಾಮ ದಶಮಃ ಪಟಲಃ

ಶ್ಲೋಕ॥ ದಶಭಿಃ ಪಟಲಾನಾಂ ಸಂಯುತಂ ಶುದ್ಧಾಖ್ಯ ತಂತ್ರಕಮ್ ।
ಕರ್ಣಾಟಭಾಷಾ ವಿವೃತಂ ಸಂಪೂರ್ಣಂ ಶೈವವಲ್ಲಭಮ್ ॥

ನಮಸ್ತೇ ಬಸವಲಿಂಗಾಯಾಮರಗುಂಡಾದಿದೇಶಿಕೇ ।
ತಂತ್ರಂ ವೇತ್ರೇ ಸತಾಂ ನೇತ್ರೇ ಷಟ್ಸ್ಥಲಬ್ರಹ್ಮರೂಪಿಣೇ

ಇಂ॥ವ॥ವೃ॥ ಯಸ್ಸರ್ವ ಶೈವಾಧಿಕಂ ವೀರಶೈವಂ
ಪರಂ ವಿದಿತ್ವಾ ಸಮವೀರಮಾರ್ಗೇ ।
ಪ್ರವರ್ತಯನ್ತದ್ವಯ ಭಕ್ತಿಯೋಗಾ
ತ್ತೇಭ್ಯೋ ನಮಃ ವಿಶ್ವಪವಿತ್ರ ಕೃದ್ಭ್ಯಃ ॥

ಸಮಾಪ್ತಃ

ಅನುಬಂಧಗಳು

ಅನುಬಂಧ – ೧

ಕನಕಪುರದ ದೇಗುಲಮಠದ ಪ್ರತಿಯಲ್ಲಿ ಗ್ರಂಥಾರಂಭದಲ್ಲಿ ಹೆಚ್ಚಿನ ಈ ಭಾಗವಿದೆ

ಶ್ರೀಗುರು ಬಸವಲಿಂಗಾಯ ನಮಃ

ನಿರ್ವಿಘ್ನಮಸ್ತು – ಶುಭಮಸ್ತು

ವಾತುಲಾಗಮಮಂ ಲೇಖಿಸಲು ಭದ್ರಂಭೂಯಾತ್

ಶ್ರೀ ಸಾಂಬ ಸದಾಶಿವಾರ್ಪಣಮಸ್ತು

ಶಾ॥ವಿ॥ವೃ॥ **ವಂದೇ ಶಂಕರಮಾಪ್ತಮಾದ್ಯಮಮಲಂ ತೇಜೋನಿಧಿಂ ಶಾಶ್ವತಂ**
ಬಿಂದು ಕ್ಷೋಭಕರಂ ಪರಾತ್ಪರತರಂ ನಾದಾತ್ಮಕಂ ಬೀಜನಮ್
ಸರ್ವಾಂತಸ್ಥಮನೇಕಲೋಕಜನಕಂ ಸೋಮಂ ಜಗತ್ಪ್ರೇರಕಂ
ಲಿಂಗಸ್ಥಂ ಬಹುಮಂತ್ರಮಂತ್ರಿತಮಹಾಲಿಂಗಂ ಲಯಾಖ್ಯಂ ಧ್ರುಮಮ್

ಟೀಕು॥ ಈ ಶುದ್ಧಮೆಂಬ ಪೆಸರನುಳ್ಳ ವಾತುಲಾಗಮದಲ್ಲಿಯ ಟೀಕಾವ್ಯಾಖ್ಯಾನವು ಶ್ರೀಮದಮರಗುಂಡ ಮಲ್ಲಿಕಾರ್ಜುನನ ಧೀಮತಾಚಿದಂಶವನುಳ್ಳಂಥ, ಮಲ್ಲಿಕಾರ್ಜುನನೆಂಬ ಬುದ್ಧಿಮಾನ್ ಆದ ನನ್ನಿಂದ ಕನ್ನಡ ಭಾಷೆಯಿಂದ ವ್ಯಕ್ತವಹ ಹಾಂಗೆ ಮಾಡಲುಪಡುತ ಇದ್ದುದು. ಅದು ಹೇಗಯಾ ಎಂದೊಡೆ ಈ ವ್ಯಾಖ್ಯಾನ ಮುಖದಲ್ಲಿ ಅನ್ನಬರ ಆಗಮ ಪ್ರಮಾಣತ್ವದೆ ತೋರಲ್ಪಡುತ್ತಿದ್ದುದು. ಪಾರಮೇಶ್ವರಾಗಮದಲ್ಲಿಯ ಶ್ರೀಮಂತಮಪ್ಪ ಪೌಷ್ಕರದಲ್ಲಿಯ ಪರಮೇಶ್ವರಂ ಪ್ರಮಾಣಲಕ್ಷಣಂಗಳಂ ನಿರೂಪಿಸಿದನು. ॥೧॥

ಶ್ಲೋಕ॥ **ಚತ್ವಾರಿತಾನಿ ಮಾನಾನಿ ಪ್ರತ್ಯಕ್ಷಾದಿ ನಿಹೋದ್ವಿಜಾ ।**
ಪ್ರತ್ಯಕ್ಷಮನುಮಾನಂ ಚ ಶಬ್ದಾರ್ಥಾಪತ್ತಿರೇವ ಚ ॥

ಟೀಕು॥ ಎಲೈ ಋಷಿಗಳಿರಾ, ನೀವು ಬೆಸಗೊಂಡ ಪ್ರಮಾಣಂಗಳು ಪ್ರತ್ಯಕ್ಷ ಪ್ರಮಾಣ

ಮೊದಲಾಗಿಯುಳ್ಳ ನಾಲ್ಕು ಪ್ರಮಾಣಂಗಳು. ಪ್ರತ್ಯಕ್ಷ ಪ್ರಮಾಣಮುಂ, ಅನುಮಾನ ಪ್ರಮಾಣಮುಂ, ಶಬ್ದಪ್ರಮಾಣಮುಂ ಅರ್ಥಾಪತ್ತಿಪ್ರಮಾಣಮೆಂದುಮುಂ ಬೇರೆ ಬೇರೆ ಹೀಂಗೆ ಪೆಸರುವೆತ್ತಿಹವು ॥ ೨ ॥

ಶ್ಲೋಕ॥ ಸಂಶಯಾದಿ ವಿನಿರ್ಮುಕ್ತಾ ಚಿಚ್ಛಕ್ತಿರ್ಮಾನಮುಚ್ಯತೇ ।
ಅನುಮಾನಂ ದೃಢವ್ಯಾಪ್ತಾ ಪರೋಕ್ಷಾರ್ಥಾವಬೋಧಕಮ್ ॥

ಟೀಕು॥ ಸಂಶಯಾದಿಜ್ಞಾನ ವಿಪರೀತ ಜ್ಞಾನಾದಿಗಳಿಂದ ಬಿಡಲ್ಪಟ್ಟ ಚಿಚ್ಛಕ್ತಿಯೇ ಪ್ರತ್ಯಕ್ಷ ಪ್ರಮಾಣಮೆಂದು ನುಡಿಯಲ್ಪಡುತ್ತಿಹುದು. ದೃಢವಾದ ವ್ಯಾಪ್ತಿಯಿಂದ ದೂರಾರ್ಥಮಂ ತಿಳಿವ ತಿಳಿವು ಪ್ರತಿಜ್ಞಾದಿ ಪಂಚಾವಯವವನುಳ್ಳ ಅನುಮಾನ ಪ್ರಮಾಣವೆಂದೆನಿಸುವದು. ॥೪॥

ಶ್ಲೋಕ॥ ಪ್ರತ್ಯಕ್ಷಿಣಾನುಮಾನೇನ ಯದಿಖಾರ್ಥಂ ಸುನಿಶ್ಚಿತಮ್ ।
ಯೋ ವಕ್ತಿಸೋಽಯಮಾಪ್ತಸ್ಯ ತಸ್ಮಾದಾತ್ಮಾತರಶ್ಶಿವಃ ॥

ಟೀಕು॥ ಆವನಾನೊಬ್ಬಂ ಪ್ರತ್ಯಕ್ಷ ಪ್ರಮಾಣದಿಂದವುಂ ಅನುಮಾನ ಪ್ರಮಾಣದಿಂದವು ಮಿಗೆಮಿಗೆ ನಿರ್ನಯಿಲ್ಪಟ್ಟರ್ಥಮುಂ ಎತ್ತಲಾನು ನುಡಿವುತ್ತಿಹನೆ ಆ ಈ ಪ್ರಮಾಣ ವ್ಯಕ್ತವೇ ಆಪ್ತನಹನು. ಅದು ಕಾರಣದಿಂದ ಆತ್ಮಂಗೆ ಪರಮೇಶ್ವರನುನತಿಚಯಾಪ್ತನು. ॥೫॥

ಶ್ಲೋಕ॥ ಸುಪ್ರಸನ್ನೇಂದ್ರಿಯಗ್ರಾಮಃ ಸರ್ವಜ್ಞಸ್ಸರ್ವ ಗೋಚರಃ ।
ಪಕ್ಷಪಾತವಿನಿರ್ಮುಕ್ತೋ ಯಥಾರ್ಥಗ್ರಾಹಕಸ್ಸದಾ ॥

ಟೀಕು॥ ಮಿಗೆ ಪ್ರಸನ್ನವಾದಿಂದ್ರಿಯಗ್ರಾಮಂಗಳುಳ್ಳಾತನಾಗಿ, ಸಮಸ್ತವನು ಅರೈದಿಹಾತನಾಗಿ, ಸಮಸ್ತವನು ಗೋಚರಿಸಿಹಾತನಾಗಿ, ಪಕ್ಷಪಾತದಿಂದ ಬಿಡಲ್ಪಟ್ಟನುವಾಗಿ, ಎಲ್ಲಾಗಳುಂ ಯಥಾರ್ಥಗ್ರಾಹಕನುವಾಗಿ, ॥೬॥

ಶ್ಲೋಕ॥ ಅವ್ಯಯಃ ಪರಿಪೂರ್ಣಶ್ಚ ಸ್ವತಂತ್ರಃ ಪಶುಪಾಶಹಾ ।
ಪ್ರಮಾಣಮೇಕಃ ತದ್ವಾಕ್ಯಂ ತಥ್ಯಂ ಶ್ರೀಯೋನಿಧಿಸ್ಸದಾಃ ॥

ಟೀಕು॥ ದೇಶಕಾಲಂಗಳಿಂದ ಬಳಕೆಯಿಲ್ಲದಾತನಾಗಿ, ಸರ್ವತ್ರ ಪರಿಪೂರ್ಣನಾಗಿ, ಸರ್ವತ್ರ ಪರಿಪೂರ್ಣನಾಗಿ, ಸಮಸ್ತಮಂ ತನ್ನಾಧೀನಮಂ ಮಾಡಿ ತಾನಾವು ದಜೆಂದಿದಿರಿಲ್ಲದಾತನಾಗಿ, ಬ್ರಹ್ಮಾದಿ ಪಿಪೀಲಿಕಾಂತವಾದ ಪಶುಗಳ ಮಲಮಾಯಾದಿ ಪಾಶಂಗಳಂ ಕೆಡಿಸುವಾತನಾಗಿ, ಎಲ್ಲಾಗಳೂ ಮುಕ್ತಿಸ್ಥಾನವಾದ ಆವನಾನೊಬ್ಬ ದೇವನುಂಟು, ಆ ಪರಮೇಶ್ವರನ ತಥ್ಯವಾದಂಥಹ ವಾಕ್ಯವೇ ಮುಖ್ಯವಾದ ಪ್ರಮಾಣವು. ॥೭॥

ಇತಿ ಶಬ್ದಪ್ರಮಾಣಮಭಿಹಿತಂ–

ಈ ಪ್ರಕಾರದಿಂದ ಶಬ್ದಪ್ರಮಾಣಂ ನುಡಿಯಲ್ಪಟ್ಟುದು.

ಅಥಃ

ಪ್ರಮಾಣಮರ್ಥಂ ಪತ್ಯಾಖ್ಯಮನ್ಯಥಾನಿ ಚ ಗದ್ಯತೇ=ಅನಂತರಂ ಬೇರೊಂದು ರೀತಿಯಾಗಿ, ಅರ್ಥಾಪತ್ತಿಯೆಂಬ ಹೆಸರನುಳ್ಳ ಪ್ರಮಾಣಂ ನುಡಿಯಲ್ಪಡುತ್ತಿದ್ದುದು. ॥೮॥

ಶ್ಲೋಕ॥ ದೃಶ್ಯಮಾನಮ ಸರ್ವಜ್ಞಂ ಕಲ್ಪಯೇತ್ಯೋಪಪಾದಕಂ ।
ಪಶುಷ್ವಿವ ಪಶುತ್ತಾಖ್ಯಾಂ ಸರ್ವಜ್ಞೇ ಶಾಸ್ತ್ರತಃ ಸ್ಥಿತೇ ॥

ಟೀಕು॥ ಶಿವಶಾಸ್ತ್ರದ ದೆಸೆಯಿಂದ ಸರ್ವಜ್ಞನಾದಂಥ ಶಿವನುಂಟಾಗುತ್ತೆಂದಿರಲಾಗಿ, ಕಾಣಬರುತ್ತಂ ಸಂಪಾದನದೊಡನೆ ಕೂಡಿದಂಥಾ, ಪಶುತ್ವಮೆಂಬ ಪೆಸರನುಳ್ಳ ಕಿಂಚಿಜ್ಞತ್ವವನು ಸಕಲಾದಿ ಪಶುತ್ರಯದಲ್ಲಿಯೆ ಕಲ್ಪಿಸುಹುದು ॥೯॥

ಇತ್ಯರ್ಥಾಪತ್ತಿ ಪ್ರಮಾಣಮಭಿಹಿತಂ. ಹೀನಾರ್ಥಾಪತ್ತಿ ಪ್ರಮಾಣಂ ನಿರೂಪಿಸಲ್ಪಡುವದು.

ಶ್ಲೋಕ॥ ಇತಿಪ್ರಮಾಣ ಚತುಶ್ಮದ್ಧಯಾನಾಮೀಶ್ವರ ಶಬ್ದಃ ।
ಪ್ರಮಾಣಮೇವಾತಿಶಯ ಪ್ರಮಾಣಮಿತ್ಯುದಾಹೃತಂ ॥

ಟೀಕು॥ ಹೀಂಗೆ ಪ್ರಮಾಣ ಚತುಷ್ಟಯಂಗಳೊಳಗೆ ಪರಮೇಶ್ವರ ಶಬ್ದಮಪ್ಪ ಆಗಮ ಪ್ರಮಾಣವೇ ಅತಿಶಯ ಪ್ರಮಾಣಮೆಂದುದಾಹರಿಸಲ್ಪಟ್ಟುದು. ॥೧೦॥

ಯಥಾಗಮೋತ್ಪತ್ತಿಃ

ಟೀಕು॥ ಆಗಮೋತ್ಪತ್ತಿ ಹೇಗೆಂದೊಡೆ–

ಶ್ಲೋಕ॥ ಸದಾಶಿವೋಽಪಿ ಭಗವಾ್ ನಾದರೂಪತಯಾಗತಃ ।
ಷಡ್ವಿದಾರ್ಥಮಯಂ ಜ್ಞಾನಮನೇಕಚ್ಛಂದಮೇವ ತತ್ ॥

ಟೀಕು॥ ಷಡ್ಗುಣ್ಯೈಶ್ವರ್ಯ ಸಂಪನ್ನನಾದ ಸದಾಶಿವನುನಾದ ಸ್ವರೂಪದಿಂದ್ಯೆದಿದಂಥ ಪ್ರತ್ಯಯಾದಿ ಷಡ್ವಿಧಾರ್ಥ ಸ್ವರೂಪವಾದಂಥ ಆ ಜ್ಞಾನತತ್ತ್ವವೇ ನಾನಾ ಛಂದವಾಗಿ ಪ್ರಸನ್ನವಾಗಿರುತ್ತಿಹುದು ॥೧೧॥

ಶ್ಲೋಕ॥ ಪೂರ್ವತೋ ದಶಸಂಖ್ಯಾತಂ ಶಿವಭೇದಂ ತಥಾಪರಂ ।
ಕಾದ್ರಮಷ್ಟಾದಶವಿಧಂ ತೇಭ್ಯೋವಾದಿ ಕೃಪಾನಿಧಿಃ ॥

ಟೀಕು॥ ಪೂರ್ವದಲ್ಲಿ ಶಿವಭೇದವನುಳ್ಳಾಗಮಂ ಕಾಮಿಕಾದಿ ಸುಪ್ರಭೇದಾಂತವಾಗಿ ದಶಸಂಖ್ಯೆಯವಾಗಿಹುದು.

ಕಾರುಣ್ಯ ನಿಧಿಯಾದ ಪರಮೇಶ್ವರನು ಆ ಪ್ರಣವರುದ್ರ ಮೊದಲಾದುದೆಲ್ಲಾ ಮೂರ್ತಿಗಳಿಗೆಯೂ ಅನೇಯಕ ಭಂದವಾದ ಜ್ಞಾನತತ್ತ್ವಮಂ ನಿರೂಪಿಸುವಾತನು. ಸುಪ್ರಭೇದಾಗಮದಲ್ಲಿ ಶಿವನು ಆಗಮೋತ್ಪತ್ತಿಯಂ ನಿರೂಪಿಸಿದನು. ॥ ೧೨ ॥

ಶ್ಲೋಕ॥ ಅಥಾತಃ ಸಂಪ್ರವಕ್ಷ್ಯಾಮಿ ತಂತ್ರಣಾಮುದ್ಭವಂ ಪರಂ ॥

ಟೀಕು॥ ಅನಂತರದಲ್ಲಿ ಈ ಕ್ರಿಯಾಪಾದದಲ್ಲಿಯ ಪ್ರಶ್ನೆ ಪಟಲದಿಂ ಮೇಲೆ ಆಗಮಂಗಳ ಉತ್ಪತ್ತಿಯನು ಲೇಸಾಗಿ ಹೇಳಿಹೆನು. ॥ ೧೩ ॥

ತಂತ್ರ ಶಬ್ದಮಂ ನಿರ್ವಚಿಸುತ್ತಿದ್ದಾನು:

ಶ್ಲೋಕ॥ ತನೋತಿ ವಿಮಲಾನರ್ಥಾನ್ ತತ್ತ್ವ ಮಂತ್ರ ಸಮಾಶ್ರಿತಾನ್ ।
ತ್ರಾಣಂ ಚ ಕುರುತೇ ಪುಂಸಾಂ ತೇನ ತಂತ್ರಮಿತಿ ಸ್ಮೃತಾಃ ॥

ಟೀಕು॥ ತತ್ತ್ವಂಗಳು ಮಂತ್ರಂಗಳಂನಾಶ್ರಯಿಸಿಹವಾಗಿ, ಘನತರಮಪ್ಪ ಅರ್ಥಂಗಳಂ ವಿಸ್ತರಿಸುತ್ತಂದಿಹುದು. ಆತ್ಮರುಗಳಿಗೆ ರಕ್ಷಣಮಂ ಮಾಡುತ್ತಿಹುದು. ತನುಧಾತು ಪ್ರಾಣ ಧಾತು ದಿನಕೂಟವಪ್ಪ ಕಾರಣದಿಂದ ತಂತ್ರವೆಂದು ನೆನೆಯಲ್ಪಟ್ಟುದು ॥೧೪॥

ಶ್ಲೋಕ॥ ಕಾಮಿಕಂ ಯೋಗಜಂ ಚಿಂತ್ಯಂ ಕಾರಣಂ ತ್ವಜಿತಂ ತಥಾ ।
ದೀಪ್ತಂ ಸೂಕ್ಷ್ಮಂ ಸಹಸ್ರಂ ಚ ಅಂಶುಮಾನ್ ಸುಪ್ರಭೇದಕಂ ॥

ವಿಜಯಂ ಚೈವ ನಿಃಶ್ವಾಸಂ ಸ್ವಾಯಂಭುವಮಥಾನಲಂ ।
ವೀರಂ ಚ ರೌರವಂ ಚೈವ ಮಕುಟಂ ವಿಮಲಂ ತಥಾ ॥

ಚಂದ್ರಜ್ಞಾನಂ ಚ ಬಿಂಬಂ ಚ ಪ್ರೋದ್ಗೀತಂ ಲಲಿತಂ ತಥಾ ।
ಸಿದ್ಧಂ ಸಂತಾನ ಸರ್ವೋಕ್ತಂ ಪಾರಮೇಶ್ವರ ಮೇವ ಚ ॥

ಕಿರಣಂ ವಾತುಲಂ ಶ್ವೇತಾತ್ವಷ್ಟಾವಿಂಶತಿ ಸಂಹಿತಾಃ ॥

ಟೀಕು॥ ಕಾಮಿಕಾಗಮಮುಂ ಯೋಗಜಾಗಮಮುಂ ಚಿಂತ್ಯಾಗಮಮುಂ ಕಾರಣ ತಂತ್ರಮುಮುಂ, ಹಾಂಗೆ ಅಜಿತಾಗಮಮುಂ, ದೀಪ್ತಾಗಮಮುಂ, ಸೂಕ್ಷ್ಮಾಗಮಮುಂ, ಸಹಸ್ರಾಗಮಮುಂ, ಅಂಶುಮಾನ್ ಎಂಬ ತಂತ್ರಮುಂ, ಸುಪ್ರಭೇದಾಗಮಮುಂ, ವಿಜಯಾಗಮಮುಂ, ನಿಶ್ವಾಸಾಗಮಮುಂ, ಸ್ವಾಯಂಭುವಾಗಮಮುಂ, ಅನಂತರದಲ್ಲಿ ಅನಲಾಗಮಮುಂ, ವೀರತಂತ್ರಮುಂ, ರೌರವಾಗಮಮುಂ, ಮಕುಟಾಗಮಮುಂ,

ಹಾಂಗೆ ವಿಮಲಾಗಮಮುಂ, ಚಂದ್ರಜ್ಞಾನ ತಂತ್ರಮುಂ, ಬಿಂಬಾಗಮಮುಂ, ಪ್ರೋದ್ಗೀತಾಗಮಮುಂ, ಹಾಂಗೆ ಲಲಿತಾಗಮಮುಂ, ಸಿದ್ಧಾಗಮಮುಂ, ಸಂತಾನಾಗ ಮಮುಂ, ಸರ್ವೋಕ್ತಾಗಮಮುಂ, ಪಾರಮೇಶ್ವರ ತಂತ್ರಮುಂ, ಕಿರಣಾಗಮಮುಂ, ವಾತುಲಾಗಮಮುಂ ಇಂತು ಈ ಆಗಮಂಗಳ ಸಂನಿಕರ್ಷಂಗಳು ಇಪ್ಪತ್ತೆಂಟು ಸಂಹಿತೆ ಗಳೆಂಬ ಪೆಸರುವೆತ್ತಿಹವು. ॥೧೬॥

ಶ್ಲೋಕ॥ ವಕ್ಷ್ಯೇತೇ ಸರ್ವತಂತ್ರಾಣಾಂ ವಕ್ತಾರಂ ಪ್ರತಿವಾಚಕಂ ।
ಜ್ಞಾನಮೇಕಂ ವಿಭಜ್ಯಾದೌ ದಶಾಷ್ಟದಶಸ್ಸಂಹಿತಾ ॥

ಸೃಷ್ಟಿರನಂತರಂ ವಿಘ್ನಮುಕ್ತ್ಯರ್ಥಂ ಪ್ರೋಚ್ಯತೇ ಮಯಾ ॥

ಟೀಕು॥ ಎಲೈ ವಿಘ್ನೇಶ್ವರನೇ, ಸಮಸ್ತಾಗಮಂಗಳ ವಾಕ್ಯಮಂ ಬೇರೆ ಬೇರೆ ನುಡಿವವರನು ನಿನಗೆ ಹೇಳುವೆನು. ಎಲೈ ವಿಘ್ನೇಶ್ವರನೇ, ಜಗತ್ ಸೃಷ್ಟಿಯು, ಅನಂತರವೂ ಮೊದಲಲ್ಲಿಯೂ, ಮುಕ್ತಿಗೋಸ್ಕರ, ಬಿಂದು ಜ್ಞಾನ ತತ್ತ್ವವನೇ ವಿಭಜಿಸಿ, ಇಪ್ಪತ್ತೆಂಟು ಸಂಹಿತೆಯಾಗಿ ನನ್ನಿಂದ ನುಡಿಯಲ್ಪಡುತ್ತಿಹುದು. ॥೧೭॥

ಶ್ಲೋಕ॥ ಕಾಮಿಕಂ ತು ಪ್ರವಕ್ಷ್ಯಾಮಿ ಪರಾರ್ಧಗ್ರಂಥ ಸಂಖ್ಯಯಾ ।
ಪ್ರಣವಾತ್ರಿಕಲಂ ಪ್ರಾಪ್ತಾ ತ್ರಿಕಲಾಶ್ಚ ತತೋ ಹರಃ ॥

ಟೀಕು॥ ಕಾಮಿಕಾಗಮವಾದರೂ ಪ್ರಣವವೆಂಬ ರುದ್ರನಿಗೆ ಪರಾರ್ಧಂಚ ಪಂಚವಿಂಶತ್ಯಾ ಎಂಬ ಸಂಖ್ಯಾಭಿಧಾನದಿಂದ ೧೦೦೦೦೦೦೦೦೦೦೦೦೦೦೦೦೦೦೦೦೦೦೦೦ ಒಂದು ಪರಾರ್ಧ ಗ್ರಂಥ ಲೆಕ್ಕದಿಂದ ನಿರೂಪಿಸಲ್ಪಟ್ಟುದು. ಪ್ರಣವವೆಂಬ ಮೂರ್ತಿಯ ದೆಸೆಯಿಂದ ತ್ರಿಕಲನೆಂಬಾತಂ ಕಾಮಿಕಾಗವನ್ನೈದಿದನು. ಆ ತ್ರಿಕಲನ ದೆಸೆಯಿಂದ ಹರನೆಂಬ ಗಣೇಶ್ವರನ್ನೈದಿದನು. ॥೧೮॥

ಶ್ಲೋಕ॥ ತ್ರಯಂ ಚೈವೋಪಭೇದಾಯ ಉತ್ತರಂ ಭೈರವೋತ್ತರಂ ।
ನಾರಸಿಂಹ ಚ ವೈವಚ್ಛಾ ಪ್ರೋಚ್ಯತೇ ಕಾಮಿಕತ್ರಯಂ ॥

ಟೀಕು॥ ಎಲೈ ಗಣಾಧಿಪನೆ, ಆ ಈ ಕಾಮಿಕಾಗಮಮುಂ ಭೇದಾರ್ಥಕೋಸ್ಕರ ಮೂರಾಗಿಪ್ಪುದು. ಎಂತೆಂದೊಡೆ ಉತ್ತರಮೆಂದು ಭೈರವೋತ್ತರಮೆಂದು, ನಾರಸಿಂಹ ಮೆಂದು ಮೂರುಪ್ರಕಾರವಾಗಿ ಕಾಮಿಕಾಗಮವು ಹೇಳಲ್ಪಟ್ಟುದು. ॥೧೯॥

ಶ್ಲೋಕ॥ ಯೋಗಜಂ ತು ಸುಧಾಖ್ಯಸ್ಯ ಪ್ರೋಕ್ತಂ ತಲ್ಲಕ್ಷ ಸಂಖ್ಯಯಾ ।
ಸುಧಾಖ್ಯಾದ್ಬಹುಸಂಪ್ರಾಪ್ತಾ ತಸ್ಮಾತ್ಪಾಪ್ರೋವಿಭುಕ್ರಮಾತ್ ॥

ಟೀಕು॥ ಯೋಗಜವೆಂಬಾಗಮವಾದೊಡೆ ಸುಧಾಖ್ಯಂಗೆ ಆ ಆಗಮಂ

ಲಕ್ಷಸಂಖ್ಯಾಬಿಧಾನದಿಂದ ಒಂದು ಲಕ್ಷ ಗ್ರಂಥ ಸಂಖ್ಯೆಯಿಂದ ನಿರೂಪಿಸಲ್ಪಟ್ಟುದು. ಸುಧಾಖ್ಯನದೆಸೆಯಿಂದ ಬಹುವೆಂಬಾತನ್ನೈದಿದನು. ಆ ಬಹುವಿನದೆಸೆಯಿಂದ ವಿಭುವೆಂಬಾತನ್ನೈದಿದನು. ॥೨೦॥

ಶ್ಲೋಕ॥ ವೀಣಾ ಶಿಖೋತ್ತರಂ ತಾರಂ ಸೌಖ್ಯ ಶಾಂತಾದ್ಯಮೇವ ಚ ।
ಆತ್ಮಯೋಗಂ ಚ ಪಂಚೈತೇ ಯೋಗತಂತ್ರ ಸ್ಯ ಭೇದಕಾಃ ॥

ಟೀಕು॥ ವೀಣಾಶಿಖೋತ್ತರಮೆಂದು ತಾರಮೆಂದು ಸೌಖ್ಯಮೆಂದು ಶಾಂತಾದ್ಯಮೆಂದು ಆತ್ಮಯೋಗಮೆಂದು ಈ ಐದು ಭೇದಂಗಳು ಯೋಗಜಮೆಂಬಾಗಮದ ಭೇದಂಗಳು. ॥೨೨॥

ಶ್ಲೋಕ॥ ಚಿಂತ್ಯಂ ಸುದೀಪ್ತ ಸಂಜ್ಞಸ್ಯ ಪ್ರೋಕ್ತಂ ಶತಸಹಸ್ರಕೈಃ ।
ಸುದೀಪ್ತಾದ್ಯೋಗ ಸಂಪ್ರಾಪ್ತಸ್ತತಃ ಪ್ರಾಪ್ತಾ ಚ ಅಂಬಿಕಾ ॥

ಟೀಕು॥ ಚಿಂತ್ಯಾಗಮವು ಸುದೀಪ್ತನೆಂಬ ಹೆಸರನ್ನುಳ್ಳಾತಂತೆ ನೂರು ಸಹಸ್ರ ಗ್ರಂಥ ಪರ್ಯಂತರ ನಿರೂಪಿಸಲ್ಪಟ್ಟುದು. ಸುದೀಪ್ತನದೆಸೆಯಿಂದ ಯೋಗಾಹ್ವಯನೆಂಬಾತನ್ನೈದಿದನು. ಆ ಯೋಗಾಹ್ವಯನದೆಸೆಯಿಂದ ಅಂಬಿಕೆ ಎಂಬ ಶಕ್ತಿ ಅಚಿಂತ್ಯಾಗಮಮನ್ನೈದಿದಳು. ॥೨೩॥

ಶ್ಲೋಕ॥ ಸುಚಿಂತ್ಯಂ ಸುಭಗಂ ವಾಮಂ ಪಾಪನಾಶಂ ಸಾರೋದ್ಭವಂ ।
ಅಮೃತಂ ಚಿಂತ್ಯ ತಂತ್ರ ಚ ಷಡ್ವಿಧಂ ತು ಪ್ರಕೀರ್ತಿತಃ ॥

ಟೀಕು॥ ಸುಚಿಂತ್ಯಂಮೆಂದು ಸುಭಗತಂತ್ರಮೆಂದು, ವಾಮಾಗಮಮೆಂದು, ಪಾಪನಾಶನ ತಂತ್ರಮೆಂದು, ಸಾರೋದ್ಭವಾಗಮಮೆಂದು ಅಮೃತಾಗಮಮೆಂದು, ಚಿಂತ್ಯತಂತ್ರಮೆಂದು ಆರು ವಿಧವಾಗಿಹುದೆಂದು ಹೇಳಲ್ಪಡುವುದು. ॥೨೪॥

ಶ್ಲೋಕ॥ ಕಾರಣಂ ಕಾರಣಾಖ್ಯಸ್ಯ ಕೋಟಿಸ್ತದ್ಗ್ರಂಥಸಂಖ್ಯಯಾ ।
ಕಾರಣಾಚ್ಛರ್ವ ರುದ್ರಸ್ತು ಸರ್ವಾತ್ ಪ್ರಾಪ್ತಃ ಪ್ರಜಾಪತಿಃ ॥

ಟೀಕು॥ ಕಾರಣಾಗಮವು ಕಾರಣಾಖ್ಯಂಗೆ, ಆ ಆಗಮವು ಕೋಟಿ ಗ್ರಂಥ ಲೆಕ್ಕದಿಂದ ಕೂಡಿಕೊಂಡಿಹುದು. ಕಾರಣನೆಂಬಾತನದೆಸೆಯಿಂದ ಸರ್ವರುದ್ರನೆಂಬುವನ್ನೈದಿದನು. ಆ ಸರ್ವರುದ್ರನದೆಸೆಯಿಂದ ಪ್ರಜಾಪತಿ ಎಂಬಾತನ್ನೈದಿದನು. ॥೨೫॥

ಶ್ಲೋಕ॥ ಕಾರಣಂ ಪಾವನಂ ದೌರ್ಗ್ಯಂ ಮಾಹೇಂದ್ರಂ ಭೀಮಮೇವ ಚ ।
ತತಸ್ತು ಮಾರಣಂ ಚೈಶಂ ಸಪ್ತಧಾ ಕಾರಣಂ ತಥಾ ॥

ಟೀಕು॥ ಕಾರಣಾಗಮವು ಕಾರಣತಂತ್ರಮೆಂದು ಪಾವನತಂತ್ರಮೆಂದು ದುರ್ಗಾ ತಂತ್ರಮೆಂದೂ, ಮಹೇಂದ್ರಾಗಮಮೆಂದು, ಭೀಮಾಗಮಮೆಂದೂ, ಅದರಿಂದ ಮೇಲೆ ಮಾರಣಾಗಮಮೆಂದೂ ಈಶಾಗಮಮೆಂದೂ, ಹಾಂಗೆ ಕಾರಣಾಗಮಮೇಳು ಪ್ರಕಾರಮಾಗಿಹುದು. ॥೨೬॥

ಶ್ಲೋಕ॥ ಅಜಿತಂ ಸುಶಿವಾಖ್ಯಸ್ಯ ನಿಯುತಗ್ರಂಥ ಸಂಖ್ಯಯಾ ।
ಸುಶಿವಾಖ್ಯಾಚ್ಛಿವಪ್ರಾಪ್ತಃ ತಸ್ಮಾತ್ಪ್ರಾಪ್ತೋಽಚ್ಯುತಸ್ತಥಾ ॥

ಟೀಕು॥ ಅಜಿತಾಗಮವು ಸುಶಿವನೆಂಬ ರುದ್ರಂಗೆ ಒಂದು ಲಕ್ಷ ಗ್ರಂಥ ಸಂಖ್ಯೆಯಿಂದ ಹೇಳಲ್ಪಟ್ಟುದು. ಆ ಸುಶಿವನೆಂಬ ರುದ್ರನ ದೆಸೆಯಿಂದ ಅಚ್ಯುತನೆಂಬ ರುದ್ರನ್ಯೆದಿದನು ॥೨೭॥

ಶ್ಲೋಕ॥ ಪ್ರಭೂತಂ ಚ ಪರೋದ್ಭೂತಂ ಪಾರ್ವತೀ ಪದ್ಮಸಂಹಿತಾಃ ।
ಚತುರ್ಭೇದಮಿದಂ ತಂತ್ರಮಸ್ಮಿನ್ ತಂತ್ರೇ ಪ್ರಕೀರ್ತಿತಮ್ ॥

ಟೀಕು॥ ಪ್ರಭೂತಾಗಮಮೆಂದುಂ ಪರೋದ್ಭೂತ ತಂತ್ರಮೆಂದು ಪಾರ್ವತೀ ಸಂಹಿತೆಯೆಂದುಂ, ಪದ್ಮಸಂಹಿತೆಯೆಂದುಂ, ಈ ಪ್ರತಿಭಿನ್ನವಾದ ಆಗಮವು ನಾಲ್ಕು ಭೇದವುಳ್ಳದೆಂದು ಆ ಆಗಮದಲ್ಲಿ ಹೇಳಲ್ಪಡುವುದು. ॥೨೭॥

ಶ್ಲೋಕ॥ ದೀಪ್ತಮೀಶಸ್ಯ ವಿಖ್ಯಾತಂ ನಿಯುತಗ್ರಂಥ ಸಂಖ್ಯಯಾ ।
ಈಶಾ ಸ್ತ್ರಿಮೂರ್ತಿ ಸಂಪ್ರಾಪ್ತಃ ತತಃ ಪ್ರಾಪ್ತೋ ಹುತಾಶನಃ ॥

ಟೀಕು॥ ದೀಪ್ತಾಗಮವು ಈಶ್ವರನೆಂಬ ಗಣೇಶ್ವರಂಗೆ ಒಂದು ಲಕ್ಷ ಗ್ರಂಥ ಲೆಕ್ಕದಿಂದ ಬೋಧಿಸಲ್ಪಟ್ಟುದು. ಈಶನೆಂಬ ಗಣೇಶ್ವರನದೆಸೆಯಿಂದ ತ್ರಿಮೂರ್ತಿಯೆಂಬ ರುದ್ರನ್ಯೆದಿದನು. ಆ ತ್ರಿಮೂರ್ತಿ ರುದ್ರನದೆಸೆಯಿಂದ ಹುತಾಶನನೆಂಬ ರುದ್ರ ನ್ಯೆದಿದನು.

ಶ್ಲೋಕ॥ ಅಮೇಯಮಪ್ರಮಂ ಚಾಸ್ಯಂ ಅಸಂಖ್ಯಮಮಿತೌಜಸಂ ।
ಆನಂದಂ ಮಾಧವೋದ್ಭೂತಂ ಅದ್ಭುತಂ ಚಾಮೃತ ಸ್ತಥಾ ॥

ದೀಪ್ತಂ ತು ನವಧಾಪ್ರೋಕ್ತಂ ಸೂಕ್ಷ್ಮಮಂತ್ರಾನು ಬೋಧತಃ ॥

ಟೀಕು॥ ಅಮೇಯ ತಂತ್ರಮೆಂದುಂ ಅಪ್ರಮಾಗಮಮೆಂದುಂ ಆಸ್ಯಾಗಮಮೆಂದುಂ ಅಸಂಖ್ಯತಂತ್ರಮೆಂದುಂ ಅಮಿತೌಜಸಾಗಮಮೆಂದುಂ ಆನಂದತಂತ್ರಮೆಂದುಂ ಮಾಧವೋದ್ಭೂತಾಗಮಮೆಂದುಂ ಅದ್ಭುತಾಗಮಮೆಂದುಂ, ಅಮೃತಾಗಮಮೆಂದು, ದೀಪ್ತಾಗಮವಾಯಿತ್ತಾದೊಡೆ ಸೂಕ್ಷ್ಮಮಂತ್ರಂಗಳ ಬೋಧಿಸುವದರ ದೆಸೆಯಿಂದ ಒಂಭತ್ತು ಪ್ರಕಾರವಾಗಿ ಹೇಳಲ್ಪಟ್ಟುದು. ॥ ೨೮ ॥

ಶ್ಲೋಕ॥ ಸೂಕ್ಷ್ಮಸ್ಯ ಸಾಂಪ್ರತಂ ಪ್ರೋಕ್ತಂ ತಚ್ಛಂಖಂಪದ್ಮಸಂಖ್ಯಯಾ ।
ಸೂಕ್ಷ್ಮದ್ವೈಶ್ರವಣಪ್ರಾಪ್ತ ತಸ್ಮಾಚ್ಚೈವ ಪ್ರಭಂಜನಃ ॥

ಟೀಕು॥ ಸೂಕ್ಷ್ಮಂಗೆ ತಕ್ಕಂಥಾ ಆ ಸೂಕ್ಷಾಭಿಧಾನವುಳ್ಳ ಆಗಮಮುಂ ಪದ್ಮವೆಂಬ ಗಣನಾಭಿಧಾನಂ ಹದಿನೈದನೆ ಸ್ಥಾನದಿಂದ ಒಂದು ಪದ್ಮಗ್ರಂಥ ಲೆಕ್ಕದಿಂದ ಎಣಿಸಲ್ಪಕ್ಕು ದೆಂದು ನಿರೂಪಿಸಲ್ಪಟ್ಟುದು. ಆ ಸೂಕ್ಷ್ಮಮೂರ್ತಿದೆಸೆಯಿಂದ ವೈಶ್ರವಣನೆಂಬಾತನೈದಿದನು ॥೨೯॥

ಶ್ಲೋಕ॥ ಸೂಕ್ಷ್ಮಾಚ್ಚೂಕ್ಷ್ಮೈಕತಂತ್ರಸ್ಯ ಸೂಕ್ಷ್ಮಮಿತ್ಯಭಿಧೀಯತೆ ।

ಟೀಕು॥ ಸೂಕ್ಷ್ಮಾಸೂಕ್ಷ್ಮಾತ್ ಸೂಕ್ಷ್ಮಮಪ್ಪ ದೆಸೆಯಿಂದ ಸೂಕ್ಷ್ಮವಾದೊಂದೇ ಭೇದವನ್ನುಳ್ಳ ಆಗಮಕ್ಕೆ ಸೂಕ್ಷ್ಮಮೆಂಬ ನಾಮವು ನುಡಿಯಲ್ಪಡುತ್ತಿಹುದು ॥೩೦॥

ಶ್ಲೋಕ॥ ಸಹಸ್ರಂ ಕಾಲಸಂಜ್ಞಸ್ಯ ಪ್ರೋಕ್ತಂ ವೈ ಶಂಖಸಂಖ್ಯಯಾ ।
ಕಾಲಾದ್ಭೀಮ ಸುತಪ್ರಾಪ್ತೋ ಭೀಮಾದ್ಧರ್ಮೋ ಯಥಾ ತಥಾ ॥

ಅತೀವ ನಿರ್ಮಲಂ ಶುದ್ಧಮಪ್ರಮೇಯಂ ತು ಜಾತಿಭಾಕ್ ॥

ಟೀಕು॥ ಸಹಸ್ರಾಗಮವು ಕಾಲನೆಂಬ ರುದ್ರಂಗೆ ಶಂಖಂ ನವದಶಸ್ಥಾನಂ ಶಂಖಾಭಿಧಾನವು ಹತ್ತೊಂಭತ್ತನೆಯ ಸ್ಥಾನವುಳ್ಳ ಲೆಕ್ಕದಿಂದ ಒಂದು ಶಂಖಗ್ರಂಥ ಲೆಕ್ಕದಿಂದ ಹೇಳಲ್ಪಟ್ಟುದು. ಕಾಲರುದ್ರನದೆಸೆಯಿಂದ ಭೀಮಸುತನೈದಿದನು. ಹಾಂಗೆ ಭೀಮಸುತನದೆಸೆಯಿಂದ ಧರ್ಮನೆಂಬಾತನೈದಿದನು. ಆ ಸಹಸ್ರಾಗಮವು ಅತ್ಯಂತ ಶುದ್ಧವಾದದ್ದು, ಅಳತೆಗೆ ಬಾರದಂಥಾದ್ದು. ಉತ್ತಮತ್ವವನ್ನೈದಿದಂಥಾದ್ದು ॥೩೧॥

ಶ್ಲೋಕ॥ ಪ್ರಬುದ್ಧಂ ವಿಬುದ್ಧಂ ಹಸ್ತಂ ಅಲಂಕಾರಂ ಸುಬೋಧಕಂ ।
ಏತೇ ಸಹಸ್ರ ತಂತ್ರಸ್ಯ ಪಂಚಭೇದಾಃ ಪ್ರಕೀತಿತಾಃ ॥

ಟೀಕು॥ ಪ್ರಬುದ್ಧಾಗಮಮೆಂದುಂ ವಿಬುದ್ಧಾಗರುಮೆಂದು ಹಸ್ತಾಗಮಮೆಂದು ಅಲಂಕಾರ ತ್ರಮೆಂದುಂ ಸುಬೋಧಕಾಗಮಮೆಂದುಂ ಈ ಸಹಸ್ರಾಗಮವೊಂದುಂ ಐದು ಭೇದಂಗಳೆಂದು ಹೇಳಲ್ಪಟ್ಟುದು. ॥೩೨॥

ಶ್ಲೋಕ॥ ಅಂಶುಮಾನಂಬು ಸಂಜ್ಞಸ್ಯ ದಶಲಕ್ಷಂ ಪ್ರಕೀರ್ತಿತಮ್ ।
ಅಗ್ರಶ್ಚೈವಾಂಬು ಸಂಜ್ಞಾ ಚ ಅಗ್ರಾತ್ ಪ್ರಾಪ್ತೋ ತಥೌರಸಃ ॥

ಟೀಕು॥ ಅಂಶುಮಾನೆಂಬಾಗಮವು ಅಂಬುವೆಂಬಾತಂಗೆ ಹತ್ತು ಲಕ್ಷ ಗ್ರಂಥವುಳ್ಳದೆಂದು ಹೇಳಲ್ಪಟ್ಟುದು. ಅಂಬುವೆಂಬಾತನದೆಸೆಯಿಂದ ಅಗ್ರನೆಂಬ ಗಣೇಶ್ವರನೈದಿದನು. ಅಗ್ರನದೆಸೆಯಿಂದ ಹಾಂಗೆ ಔರಸನೆಂಬಾತನೈದಿದನು ॥೩೩॥

ಶ್ಲೋಕ॥ ವಿದ್ಯಾಪುರಾಣ ತಂತ್ರಂ ಚ ಭಾಸ್ವರಂ ನೀಲಲೋಹಿತಮ್ ।
ಪ್ರಕರಣಂ ಭೂತ ತಂತ್ರಂ ಚ ಆತ್ಮಾಲಂಕಾರಮೇವ ಚ ॥

ಕಾಶ್ಯಪಂ ಗೌತಮಂ ಚೈಂದ್ರ ಬ್ರಹ್ಮ ವಾಸಿಷ್ಠಮೇವ ಚ ।
ಈಶಾನೋತ್ತರತಂತ್ರಂ ತು ಅಂಶುಮಾನ್‌ದ್ವಾದಶಸ್ಮೃತಂ ॥

ಟೀಕು॥ ವಿದ್ಯಾಪುರಾಣ ತಂತ್ರಮೆಂದುಂ ಭಾಸ್ವರಾಗಮಮೆಂದು ನೀಲಲೋಹಿತಾಗಮಮೆಂದುಂ ಪ್ರಕರಣಾಗಮಮೆಂದುಂ ಭೂತತಂತ್ರಾಗಮಮೆಂದುಂ ಆತ್ಮಾಲಂಕಾರಾಗಮಮೆಂದುಂ, ಕಾಶ್ಯಪಾಗಮಮೆಂದುಂ ಗೌತಮಾಗಮಮೆಂದುಂ, ಇಂದ್ರಾಗಮಮೆಂದುಂ ಬ್ರಹ್ಮಾಗಮಮೆಂದುಂ ವಾಸಿಷ್ಠಾಗಮಮೆಂದುಂ ಈಶಾನೋತ್ತರ ತಂತ್ರಮೆಂದುಂ ಅಂಶುಮಾನೆಂಬಾಗಮವು ದ್ವಾದಶ ಪ್ರಕಾರಮಾಗಿಹುದೆಂದು ನೆನೆಯಲ್ಪಟ್ಟುದು. ॥೩೫॥

ಶ್ಲೋಕ॥ ಸುಪ್ರಭೇದಮಿದಂ ಶಾಸ್ತ್ರಂ ದಶೇಶ್ಯೈವ ಪ್ರಕೀರ್ತಿತಂ ।
ವಿಘ್ನೇಶೋದ್ಯೈದಶೇಶಾಚ್ಚಶಶಿಪ್ರಾಪ್ತೋಬೃಹೋದರಾತ್ ॥

ತ್ರಿಕೋಟಿಸಂಖ್ಯಯಾ ಪ್ರೋಕ್ತಂ ಭೇದ ತಂತ್ರಸವಿದ್ಯತೇ ॥

ಟೀಕು॥ ಈ ಸುಪ್ರಭೇದವೆಂಬ ಶಾಸ್ತ್ರವು ದಶೇಶನೆಂಬಾತಂಗೆ ಮೂರುಕೋಟಿ ಗ್ರಂಥ ಸಂಖ್ಯೆಯಿಂದ ಹೇಳಲ್ಪಟ್ಟುದು. ದಶೇಶನದೆಸೆಯಿಂದ ವಿಘ್ನೇಶ್ವರನೈದಿದನು. ಆ ವಿಘ್ನೇಶ್ವರನದೆಸೆಯಿಂದ ಚಂದ್ರನೈದಿದನು. ಆ ಈ ಸುಪ್ರಭೇದಾಗಮದಲ್ಲಿ ಭೇದ ವುಂಟಾಗುತ್ತಿರದು. ॥೩೬॥

ಶ್ಲೋಕ॥ ಕ್ರಿಯಾದಿ ಜ್ಞಾನಪರ್ಯಂತಂ ಮಂತ್ರೈವ ಚ ಪ್ರದರ್ಶ್ಯತೇ ।
ಇದಂ ಶಾಸ್ತ್ರಮನೇನ್ಯೈವ ಸುಪ್ರಭೇದಮಿತಿ ಸ್ಮೃತಮ್ ॥

ಟೀಕು॥ ಈ ಸುಪ್ರಭೇದಾಗಮದಲ್ಲಿಯುಂ ಕ್ರಿಯಾದಿ ಸಮಸ್ತಾಗಮಂಗಳಲ್ಲಿಯುಂ ಕ್ರಿಯಾಪಾದ ಚರ್ಯಾಪಾದ ಯೋಗಪಾದ ಜ್ಞಾನಪಾದವೆಂದು ನಾಲ್ಕು ಭೇದಂಗಳಾಗಿಹುದು. ಆದಕಾರಣ ಕ್ರಿಯಾದಿ ಜ್ಞಾನಪರ್ಯಂತಮಾದ ನಾಲ್ಕುಪಾದವು ಈ ಆಗಮದಲ್ಲಿ ತೋರಲ್ಪಡುತ್ತವೆ. ಈ ಭೇದವಿಲ್ಲದಿಹ ಕಾರಣದಿಂದ ಈ ಆಗಮವು ಸುಪ್ರಭೇದಾಗಮವೆಂದು ನೆನೆಯಲ್ಪಟ್ಟುದು. ॥೩೭॥

ಶ್ಲೋಕ॥ ಶಿವಭೇದಮಿದಂ ಪ್ರೋಕ್ತಂ ರುದ್ರಭೇದಮಿಹೋಚ್ಯತೆ ॥

ಟೀಕು॥ ಈ ಶಿವಭೇದಾಗಮಂಗಳು ಹತ್ತುಭೇದವೆಂದು ಹೇಳಲ್ಪಡುವುದು. ಈ

ಆಗಮೋಕ್ತಿಯ ಹೇಳುವಲ್ಲಿ ರುದ್ರಭೇದಾಗಮ ಹದಿನೆಂಟು ಪ್ರಕಾರಮಾಗಿ ನುಡಿಯಲ್ಪಟ್ಟುದು. ॥೩೮॥

ಶ್ಲೋಕ॥ ರುದ್ರಶ್ಚಾನಾದಿ ಸಂಜ್ಞಶ್ಚ ವಿಜಯಂ ತಂತ್ರಮುತ್ತಮಂ ।
ಪರಮೇಶಸ್ತಥಾ ಪ್ರಾಪ್ತಃ ತ್ರಿಕೋಟಿ ಗ್ರಂಥಸಂಖ್ಯಯಾ ॥

ಟೀಕು॥ ರುದ್ರನು ಅನಾದಿ ಎಂಬ ನಾಮವುಳ್ಳರುದ್ರಂಗೆ ಉತ್ತಮವಹಂತಾ ವಿಜಯಾಗಮವು ಮೂರುಕೋಟಿ ಗ್ರಂಥ ಲೆಕ್ಕದಿಂದ ನಿರೂಪಿಸಿದನು. ಆ ಅನಾದಿರುದ್ರನ ದೆಸೆಯಿಂದ ಪರಮೇಶ್ವರನೆಂಬ ರುದ್ರನೈದಿದನು. ॥೩೯॥

ಶ್ಲೋಕ॥ ವಿಜಯಂ ಚೋದ್ಭವಾ ಸೌಮ್ಯಮಘೋರಂ ಮೃತ್ಯುನಾಶನಮ್ ।
ಕುಬೇರೇಶಂ ಮಹಾಘೋರಂ ವಿಮಲ ವಿಜಾಯಾಷ್ಟಕಮ್ ॥

ಟೀಕು॥ ವಿಜಯಾಗಮಮೆಂದುಂ ಉದ್ಭವತಂತ್ರಮೆಂದುಂ ಸೌಮ್ಯಾಗಮಮೆಂದುಂ, ಅಘೋರತಂತ್ರಮೆಂದುಂ ಮೃತ್ಯುನಾಶಾಗಮಮೆಂದುಂ ಕುಬೇರೇಶ ತಂತ್ರಮೆಂದುಂ ವಿಮಲತಂತ್ರಮೆಂದುಂ ಮಹಾಘೋರತಂತ್ರಮೆಂದುಂ ವಿಜಯಾಗಮಕ್ಕೆಂಟು ಭೇದ ವೆಂದು ಹೇಳಲ್ಪಟ್ಟುದು.

॥೪೦॥

ಶ್ಲೋಕ॥ ನಿಶ್ವಾಸಂ ದಯಸಂಜ್ಞಸ್ಯ ಪ್ರೋಕ್ತಂ ವೈ ಕೋಟಿ ಸಂಖ್ಯಯಾ ।
ದಯಶ್ಚಾಚಲಜಂ ಪ್ರಾಪ್ತಾಚಾಷ್ಟಭೇದೇನ ಭೇದಿತಂ ॥

ಟೀಕು॥ ನಿಃಶ್ವಾಸಾಗಮವು ದಯನೆಂಬ ಹೆಸರುಳ್ಳ ರುದ್ರಂಗೆ ಕೋಟಿ ಗ್ರಂಥ ಸಂಖ್ಯೆಯಿಂದ ಹೇಳಲ್ಪಟ್ಟುದು. ದಯನೆಂಬ ರುದ್ರನದೆಸೆಯಿಂದ ಗಿರಿಜೆಯ್ಯೆದಿದಳು. ಎಂಟು ಭೇದದಿಂದ ಭೇದಿಸಲ್ಪಟ್ಟುದು. ॥೪೧॥

ಶ್ಲೋಕ॥ ನಿಶ್ವಾಸೋತ್ತರ ನಿಶ್ವಾಸಂನಿಶ್ವಾಸಾಸ್ಯ ಮುಖೋದಯಮ್ ।
ನಿಶ್ವಾಸನಯನಂ ಚೈವ ನಿಶ್ವಾಸಕಾರಿಕಂ ತಥಾ ॥

ಘೋರಸಂಜ್ಞಂ ಸುಸೌಖ್ಯಂ ಚ ಗುಹ್ಯಂ ಚಾಪ್ಯೇವಮಷ್ಟಧಾ ॥

ಟೀಕು॥ ನಿಶ್ವಾಸಾಗಮಮೆಂದು ಉತ್ತರ ನಿಶ್ವಾಸಾಗಮಮೆಂದುಂ ನಿಶ್ವಾಸ ಮುಖೋದಯ ತಂತ್ರಮೆಂದುಂ ನಿಶ್ವಾಸನಯನತಂತ್ರಮೆಂದುಂ ನಿಶ್ವಾಸಕಾರಿಕಾತಂತ್ರಮೆಂದುಂ, ಹಾಂಗೆ ಘೋರಸಂಜ್ಞತಂತ್ರಮೆಂದುಂ ಸುಸೌಖ್ಯಮೆಂದುಂ ಗುಹ್ಯಮೆಂದುಂ ಈ ಪ್ರಕಾರದಿಂದ ಎಂಟು ಪ್ರಕಾರವಾಗಿಹುದು. ॥೪೨॥

ಶ್ಲೋಕ॥ ನಿಧನಸ್ಯಸ್ವಯಂಭೂತಂ ತ್ರಿಕೋಟ್ಯರ್ಧೇನ ಕೀರ್ತಿತಮ್ ।
ನಿಧನೇಶಾತ್ಸ್ವಯಂಭೂತಂ ಶೃತವಾನಶ್ಶಿವೋದ್ಭವಃ ॥

ಟೀಕು॥ ನಿಧನನೆಂಬ ರುದ್ರಂಗೆ ಸ್ವಯಂಭೂವೆಂಬತಂತ್ರವು ಮೂರೂವರೆ ಕೋಟಿ ಲೆಕ್ಕದಿಂದ ನಿರೂಪಿಸಲ್ಪಟ್ಟುದು. ನಿಧನೇಶನದೆಸೆಯಿಂದ ಶಿವನು ತಾನೆಯಾಗಿ ಉದಯ ವಾದಂಥ ಸ್ವಯಂಭೂತನೆಂಬ ರುದ್ರನು ಕೇಳಿದನು. ॥೪೪॥

ಶ್ಲೋಕ॥ ಪ್ರಜಾಪತಿಮತಂ ಪದ್ಮಂ ಸ್ವಯಂಭುವಮಿ ತ್ರಿದಾ ॥

ಟೀಕು॥ ಪ್ರಜಾಪತಿಮತಮೆಂದುಂ ಪದ್ಮನಾಮಮೆಂದುಂ ಸ್ವಯಂಭುವಮೆಂದುಂ ಈ ಪರಿಯಲ್ಲಿ ಮೂರು ವಿಧವಾಗಿಹುದು. ॥೪೫॥

ಶ್ಲೋಕ॥ ಆಗ್ನೇಯಂ ಕೀರ್ತಿತಂ ವ್ಯೋಮ್ನೇ ಗ್ರಂಥ ಸಂಖ್ಯಾಯುತತ್ರಯಮ್ ।
ಆಗ್ನೇಯಂ ತಂತ್ರಮೇಕಂ ತು ತತಃ ಪ್ರಾಪ್ತೋ ಹುತಾಶನಃ ॥

ಟೀಕು॥ ಅನಲಾಗಮವು ವ್ಯೋಮ್ನನೆಂಬ ಗಣೇಶ್ವರಂಗೆ ಮೂವತ್ತಾರು ಸಾವಿರ ಗ್ರಂಥ ಸಂಖ್ಯೆಯಿಂದ ಕೀರ್ತಿಸಲ್ಪಟ್ಟುದು. ಅನಲಾಗಮವಾಯಿತ್ತಾದೊಡೆ ಒಂದೇ ಭೇದವನ್ನುಳ್ಳ ಆಗಮವಾಗಿಹುದು. ಆ ವ್ಯೋಮ್ನನೆಂಬ ಗಣೇಶ್ವರನದೆಸೆಯಿಂದ ಹುತಾಶನನೆಂಬ ಗಣೇಶನೈದಿದನು. ॥೪೬॥

ಶ್ಲೋಕ॥ ತೇಜಸೋದಿರಸಂ ಪ್ರೋಕ್ತಂ ನಿಯುತ ಗ್ರಂಥ ಸಂಖ್ಯಯಾ ।
ಪ್ರಜಾಪತಿಸ್ತಥಾಪ್ರಾಪ್ತಃ ತ್ರಯೋದಶಭೇದಮೇವ ಹಿ ॥

ಟೀಕು॥ ತೇಜಸನೆಂಬ ಪ್ರಮಥಂಗೆ ಒಂದು ಲಕ್ಷ ಗ್ರಂಥ ಸಂಖ್ಯೆಯಿಂದ ವೀರಾಗಮದ ವಿಶಾಲವು ನುಡಿಯಲ್ಪಟ್ಟುದು. ಆ ತೇಜಸನೆಂಬ ಗಣೇಶ್ವರನ ದೆಸೆಯಿಂದ ಪ್ರಜಾಪತಿ ಯೆಂಬ ಗಣೇಶ್ವರನೈದಿದನು. ಹದಿಮೂರು ಭೇದವಾಗಿ ಪ್ರಸಿದ್ಧವಾಗಿಹುದು. ॥೪೭॥

ಶ್ಲೋಕ॥ ಪ್ರಸ್ತರಂ ಫಲ್ಲನಯನಂ ಪ್ರಬೋಧಂ ಬೋಧ ಬೋಧಕಮ್ ।
ಅಮೋಹಂ ಮೋಹಸಮಯಂ ಶಕಟಂ ಶಕಟೀಯಕಮ್ ॥

ಹಲಂ ವಿಲೇಖನಂ ಭದ್ರಂ ವೀರಂ ವೀರತ್ರಯೋದಶಂ ॥

ಟೀಕು॥ ಪ್ರಸ್ತರತಂತ್ರಮೆಂದುಂ ಫಲ್ಲನಯನಮೆಂದುಂ ಬೋಧಾಗಮಮೆಂದುಂ ಬೋಧಬೋಧಾಗಮಮೆಂದುಂ ಅಮೋಹಾಗಮಮೆಂದುಂ ಮೋಹಸಮಯಮೆಂದುಂ ಶಕಟಾಗಮಮೆಂದುಂ ಶಕಟೀಯಜಮೆಂದುಂ ಹಲತಂತ್ರಮೆಂದುಂ ವಿಲೇಖನಮೆಂದುಂ ಭದ್ರಾಗಮಮೆಂದುಂ ವೀರತಂತ್ರಮೆಂದುಂ ವೀರಾಗಮವು ಹದಿಮೂರು ಭೇದ ವಾಗಿಹುದು ॥೪೮॥

ಶ್ಲೋಕ॥ ರೌರವಂ ಬ್ರಹ್ಮಣೇಶಸ್ಯ ಪ್ರೋಕ್ತದುರ್ಬುಧ ಸಂಖ್ಯಯಾ ।
ನಂದಿಕೇಶಸ್ತಥಾಪ್ರಾಪ್ತೋ ಷಡ್ಭೇದಮಭಿದೀಯತೆ ॥

ಟೀಕು॥ ರೌರಾಗಮಮವಾಯಿತ್ತಾದೊಡೆ ಬ್ರಹ್ಮಣೇಶ್ವರಂಗೆ ಅರ್ಬುದಂ ರುದ್ರಸಂಯುಕ್ತಂ ಎಂಬ ಗಣನಾಥಾಭಿದಾನಂ ಹನ್ನೊಂದನೆಯ ಸ್ಥಾನವೆಂಬುದು. ಇಂತೆಂಬೊಂದರ್ಬುದ ಸಂಖ್ಯೆಯಿಂದ ಹೇಳಲ್ಪಟ್ಟುದು. ಆ ಬ್ರಹ್ಮಣೇಶ್ವರನದೆಸೆಯಿಂದ ನಂದಿಕೇಶ್ವರನೈದಿದನು. ಆರುಭೇದವಾಗಿ ನುಡಿಯಲ್ಪಡುತ್ತಿಹುದು. ॥ ೪೯ ॥

ಶ್ಲೋಕ॥ ಕಾಲದಹನಂ ಕಲಾತೀತಂ ರೌರವಂ ರೌರವೋತ್ತರಮ್ ।
ಮಹಾಕಾಳಮತಂ ಚೈದ್ರಂ ರೌರವಂ ಷಟ್ಪ್ರಕೀರ್ತಿತಾಮ್ ॥

ಟೀಕು॥ ಕಾಲದಹನಮೆಂದುಂ ಕಾಲಾತೀತಮೆಂದುಂ ರೌರವಮೆಂದುಂ, ರೌರವವೋತ್ತರ ಮೆಂದುಂ, ಮಹಾಕಾಳಮತಮೆಂದುಂ ಐಂದ್ರಮೆಂದುಂ ರೌರವಾಗಮ ಆರು ಪ್ರಕಾರ ವಾಗಿಹುದೆಂದು ನುಡಿಯಲ್ಪಟ್ಟುದು. ॥ ೫೦ ॥

ಶ್ಲೋಕ॥ ಮಕುಟಂ ತು ಶಷಾಖ್ಯಸ್ಯ ಶತಸಹಸ್ರಸಂಖ್ಯಯಾ ।
ಮಹಾದೇವಸ್ತತಃ ಪ್ರೋಕ್ತಃ ಭೇದಂ ಚ ದ್ವಿವಿಧಂ ಭವೇತ್ ॥

ಟೀಕು॥ ಮಕುಟಾಗಮವಾಯಿತ್ತಾದೊಡೆ ಶಷನೆಂಬಾತಂಗೆ ಒಂದು ಲಕ್ಷಗ್ರಂಥ ಲೆಕ್ಕದಿಂದ ನುಡಿಯಲ್ಪಟ್ಟುದು. ಆ ಶಷನದೆಸೆಯಿಂದ ಮಹಾದೇವನೆಂಬ ರುದ್ರನೈದಿದನು ಎರಡು ವಿಧವಾಗಿಹುದು. ॥ ೫೧ ॥

ಶ್ಲೋಕ॥ ಮಕುಟಂ ಮಕುಟೋತ್ತರಂ ಚೈವ ದ್ವಿವಿಧಂ ವಿಧೀಯತೇ ॥

ಟೀಕು॥ ಮಕುಟಾಗಮಮೆಂದುಂ, ಮಕುಟೋತ್ತರಮೆಂದುಂ, ಆ ಆಗಮ ಎರಡು ವಿಧವೆಂದು ಹೇಳಲ್ಪಟ್ಟುದು ॥ ೫೨ ॥

ಶ್ಲೋಕ॥ ಸರ್ವಾತ್ಮಕಸ್ಯ ವಿಮಲಂ ತ್ರಿಲಕ್ಷಗ್ರಂಥ ಸಂಖ್ಯಯಾ ।
ವೀರಭದ್ರಸ್ತತಃ ಪ್ರಾಪ್ತೋ ಭೇದಂ ಷಡ್ವಿಧಮೇವ ಚ ॥

ಟೀಕು॥ ವಿಮಲಾಗಮವು ಸರ್ವಾತ್ಮಕನೆಂಬ ರುದ್ರಂಗೆ ಮೂರುಲಕ್ಷ ಗ್ರಂಥ ಲೆಕ್ಕದಿಂದ ಹೇಳಲ್ಪಟ್ಟುದು. ಆ ಸರ್ವಾತ್ಮಕನದೆಸೆಯಿಂದ ವೀರಭದ್ರನೆಂಬ ಗಣೇಶ್ವರನೈದಿದನು. ಭೇದವಾರುವಿಧವಾಗಿಹುದು.

ಶ್ಲೋಕ॥ ಅನಂತ ಭೋಗಮಾಕ್ರಾಂತ ಹೃದ್ಧಹಾಸಮರೀಹೃತಮ್ ।
ಅದ್ಭುತಂ ಮಾರಣಾತಂತ್ರಂ ವಿಮಲಂ ಷಟ್ಪ್ರಕೀರ್ತಿತಮ್ ॥

ಟೀಕು॥ ಅನಂತ ಭೋಗಮೆಂದುಂ ಆಕ್ರಾಂತ ತಂತ್ರಮೆಂದುಂ ಹೃದ್ಧಹಾಸಮೆಂದುಂ ಅರಿಹೃತಮೆಂದುಂ ಅದ್ಭುತತಂತ್ರಮೆಂದುಂ ಮಾರಣತಂತ್ರಮೆಂದುಂ ವಿಮಲಾಗಮವಾರು ಪ್ರಕಾರವಾಗಿ ಹೇಳಲ್ಪಟ್ಟುದು. ॥ ೫೪ ॥

ಶ್ಲೋಕ॥ ಚಂದ್ರಜ್ಞಾನಮನಂತಸ್ಯ ತ್ರಿಕೋಟಿಗ್ರಂಥಸಂಖ್ಯಯಾ ।
ಬೃಹಸ್ಪತಿಸ್ತತಃ ಪ್ರಾಪ್ತೋ ಭೇದಂ ಚಾಪಿ ಚತುರ್ದಶಂ ॥

ಟೀಕು॥ ಚಂದ್ರಜ್ಞಾನಾಗಮವು ಅನಂತಂಗೆ ಮೂರುಕೋಟಿ ಗ್ರಂಥಸಂಖ್ಯೆಯಿಂದ ಬೋಧಿಸಲ್ಪಟ್ಟುದು ಆ ಅನಂತನದೆಸೆಯಿಂದ ಬೃಹಸ್ಪತಿಯೈದಿದನು. ಭೇದವು ಹದಿನಾಲ್ಕು ವಿಧವಾಗಿಹುದು. ॥ ೫೫ ॥

ಶ್ಲೋಕ॥ ಸ್ಥಿರಸ್ಥಾಣು ಮಹಂತಂ ಚ ನಂದಿನಂ ನಂದಿಕೇಶ್ವರಮ್ ।
ಏಕಪಾದ ಪುರಾಣಂ ಚ ಶಂಕರಂ ನೀಲರುದ್ರಕಮ್ ॥

ಶಿವಭದ್ರಂ ಕಲ್ಪಭೇದಂ ಚ ಶ್ರೀಮುಖಂ ಶಿವಶಾಸನಮ್ ।
ಶಿವಶಿಖರಮಾಖ್ಯಾತಂ ದೇವ್ಯಾಯ ಮತಮೇವ ಚ ॥

ಚಂದ್ರಜ್ಞಾನಸ್ಯ ತಂತ್ರಸ್ಯ ಚತುರ್ದಶವಿಧಂ ಭವೇತ್ ॥

ಟೀಕು॥ ಸ್ಥಿರಾಗಮಮೆಂದುಂ ಸ್ಥಾಣುತಂತ್ರಮೆಂದುಂ ಮಹಂತಮೆಂದುಂ ನಂದಿನಮೆಂದುಂ, ನಂದಿಕೇಶ್ವರ ತಂತ್ರಮೆಂದುಂ ಏಕಪಾದಮೆಂದುಂ ಶಂಕರಾಗಮಮೆಂದುಂ ನೀಲರುದ್ರತಂತ್ರಮೆಂದುಂ, ಶಿವಭದ್ರಾಗಮಮೆಂದುಂ, ಕಲ್ಪಭೇದಮೆಂದುಂ, ಶ್ರೀಮುಖಾಗಮಮೆಂದುಂ ಶಿವಶಾಸನಮೆಂದುಂ ಶಿವಶಿಖರಮೆಂದುಂ ಹೇಳಲ್ಪಡುತ್ತಿಹುದು. ದೇವೀಮತಮೆಂದುಂ ಚಂದ್ರಜ್ಞಾನಾಗಮಕ್ಕೆ ಹದಿನಾಲ್ಕು ವಿಧಮಾಗಿಹುದು. ॥೫೬॥

ಶ್ಲೋಕ॥ ಪ್ರೋದ್ಗೀತಶ್ಶೂ ಲಿನಃ ಪ್ರೋಕ್ತಂ ಲಕ್ಷಣಾಂ ತ್ರಯಸಂಖ್ಯಯಾ ।
ಕವಚಾಖ್ಯಸ್ತತಃ ಪ್ರಾಪ್ತೋ ಭೇದಂ ಷೋಡಶ ಮೇವ ಹಿ ॥

ಟೀಕು॥ ಪ್ರೋದ್ಗೀತಮೆಂಬಾಗಮವು ಶೂಲಿಯೆಂಬಾ ರುದ್ರಂಗೆ ಮೂರುಲಕ್ಷ ಗ್ರಂಥ ಸಂಖ್ಯೆಯಿಂದ ನಿರೂಪಿಸಲ್ಪಟ್ಟುದು. ಆ ಶೂಲಿಯದೆಸೆಯಿಂದ ಕವಚಾಖ್ಯನೆಂಬ ಹೆಸರನ್ನುಳ್ಳ ರುದ್ರನೈದಿದನು. ಹದಿನಾರು ಭೇದವಾಗಿಹುದು. ॥ ೫೭ ॥

ಶ್ಲೋಕ॥ ಕವಚಂ ಚೈವ ವರಾಹಂ ಪಿಂಗಳಾಮತ ಮೇವ ಚ ।
ಪಾಶಬಂಧಂ ದಂಡಧರಂ ಕುಶಂ ಚ ಧನುರ್ಧಾರಿಣಂ ॥

ಶಿವಜ್ಞಾನಂ ಚ ವಿಜ್ಞಾನಂ ತ್ರಿಕಾಲಜ್ಞಾನಮೇವ ಚ ।
ಆಯುರ್ವೇದ ಧನುರ್ವೇದ್ಯಂ ಸರ್ವದೌಷ್ಟ್ರವಿಭೇದನಮ್ ॥

ಗೀತಂ ಭರತ ಮಾತೋದ್ಯಂ ಪ್ರೋದ್ಗೀತಂ ಷೋಡಶಂ ವ ಹಿ ॥

ಟೀಕು॥ ಕವಚಾಗಮಮೆಂದುಂ ವರಾಹತಂತ್ರಮೆಂದುಂ ಪಿಂಗಳಮತಮೆಂದುಂ ಪಾಶಬಂಧಮೆಂದುಂ ದಂಡಧರಮೆಂದುಂ ಕುಶಾಜಾಗಮಮೆಂದುಂ ಧನುರ್ಧಾರಣ ಮೆಂದುಂ ಶಿವಜ್ಞಾನಮೆಂದುಂ ತ್ರಿಕಾಲಜ್ಞಾನಮೆಂದುಂ ಆಯುರ್ವೇದಮೆಂದುಂ ಧನುರ್ವೇದಮೆಂದುಂ ಸರ್ವದೌಷ್ಟ್ರವಿಭೇದನಮೆಂದುಂ ಗೀತತಂತ್ರಮೆಂದುಂ ಭರತತಂತ್ರಮೆಂದುಂ ಆತೋದ್ಯಮೆಂದುಂ ಪ್ರೋದ್ಗೀತಾಗಮವು ಹದಿನಾರುಭೇದವೆಂದು ನಿರೂಪಿಸಲ್ಪಟ್ಟುದು. ॥೬೧॥

ಶ್ಲೋಕ॥ ಲಲಿತಂ ಮಾಲಯಶ್ಚೈವ ಪ್ರೋಕ್ತಮಷ್ಟಸಹಸ್ರಕಮ್ ।
ಮಾಲಯಾ ಲಲಿತ ಪ್ರಾಪ್ತೋ ಲಲಿತಂ ಲಲಿತೋತ್ತರಮ್ ॥

ಕೌಮಾರಂ ಚೈವ ವಿಘ್ನೇಶಂ ಚತುರ್ಭೇದಂ ಪ್ರಕೀರ್ತಿತಮ್ ॥

ಟೀಕು॥ ಸ್ವಚ್ಛಂದ ಲಲಿತ ಭೈರವಿ ಎಂಬಾಗಮಂ ಮಾಲಯವೆಂಬ ರುದ್ರಂಗೆ ಎಂಟುಂ ಸಾವಿರ ಗ್ರಂಥವುವುಳ್ಳುದೆಂದು ಹೇಳಲ್ಪಟ್ಟುದು. ಮಾಲಯನದೆಸೆಯಿಂದ ಲಲಿತನೆಂಬಾತ ನೈದಿದನು. ಲಲಿತಾಗಮಮೆಂದುಂ ಲಲಿತೋತ್ತರಮೆಂದುಂ ಕೌಮಾರಮೆಂದುಂ, ವಿಘ್ನೇಶಮೆಂದುಂ ನಾಲ್ಕುಭೇದಮಾಗಿ ನುಡಿಯಲ್ಪಟ್ಟುದು.

॥ ೬೨ ॥

ಶ್ಲೋಕ॥ ಇಂದ್ರ ಸಂಜ್ಞಸ್ಯ ಸಂಸಿದ್ಧಂ ಪ್ರೋಕ್ತಂ ಕೋಟ್ಯರ್ಧಸಂಖ್ಯಯಾ ।
ಇಂದ್ರ ಸಂಜ್ಞಾ ಚ ಸಂಸಿದ್ಧ ಪ್ರಾಪ್ತಶ್ಚಂಡೇಶ್ವರೋವರಃ ॥

ಟೀಕು॥ ಸಂಸಿದ್ಧಾಗಮವು ಇಂದ್ರನೆಂಬ ಹೆಸರುಳ್ಳ ರುದ್ರಂಗೆ ಐವತ್ತು ಲಕ್ಷ ಗ್ರಂಥದಿಂದ ನುಡಿಯಲ್ಪಟ್ಟುದು. ಸಂಸಿದ್ಧನಾದಂಥ ಇಂದ್ರನದೆಸೆಯಿಂದ ಶ್ರೇಷ್ಠನಾದ ಚಂಡೇಶ್ವರ ನೈದಿದನು. ॥೬೩॥

ಶ್ಲೋಕ॥ ಸಾರೋತ್ತರಮದಾದ್ಯಂ ತು ದೇಶಿಕೇನೋತ್ತಮೇವ ಚ ।
ಶಾಲಾಭೇದಂ ಶಶಿಮಂಡಂ ಸಿದ್ಧತಂತ್ರ ಚತುರ್ವಿಧಂ ॥

ಟೀಕು॥ ಮೊದಲ ತಂತ್ರವಾಯಿತ್ತಾದೊಡೆ ಸಾರೋತ್ತರವೆಂಬ ಮೊದಲ ತಂತ್ರವು.

ಅನಂತರದಲ್ಲಿ ದೇವೇಶೋನ್ನೋತ್ತರಮೆಂದು ಶಾಲಾಭೇದಮೆಂದು ಶಶಿಮಂಡಲಮೆಂದು ಸಿದ್ಧಾಗಮವು ನಾಲ್ಕು ಪ್ರಕಾರವೆಂದು ಹೇಳಲ್ಪಟ್ಟುದು. ॥೬೪॥

ಶ್ಲೋಕ॥ ಸಾಂತಾನಂ ಶಿವನಿಷ್ಠಸ್ಯ ಷಟ್ಸಹಸ್ರಸ್ಯ ಸಂಖ್ಯಯಾ ।
ಶೈಶಪಾಯಸ್ತತಃ ಪ್ರಾಪ್ತೋತತ್ತಂತ್ರಂ ಸಪ್ತಭೇದಕಂ ॥

ಟೀಕು॥ ಸಂತಾನಾಗಮಂ ಶಿವನಿಷ್ಠನೆಂಬ ಗಣೇಶ್ವರಂಗೆ ಆರುಸಾವಿರ ಗ್ರಂಥ ಲೆಕ್ಕದಿಂದ ಬೋಧಿಸಲ್ಪಟ್ಟುದು. ಆ ಶಿವನಿಷ್ಠನದೆಸೆಯಿಂದ ಶೈಶಪಾಯನೆಂಬಾತನ್ನೈದಿದನು. ಆ ಸಂತಾನಾಗಮವು ಏಳು ಭೇದವಾಗಿಹುದು. ॥ ೬೫ ॥

ಶ್ಲೋಕ॥ ಲಿಂಗಾಧ್ಯಕ್ಷಂ ಸುರಾಧ್ಯಕ್ಷಂ ಶಂಕರಂ ಚ ಮಹೇಶ್ವರಮ್ ।
ಅಸಂಖ್ಯವಾನಿಲದ್ವಂದ್ವಂ ಸಾಂತಾನಂ ಸಪ್ತತೋದಿತಮ್ ॥

ಟೀಕು॥ ಲಿಂಗಾಧ್ಯಕ್ಷಮೆಂದುಂ ಸುರಾಧ್ಯಕ್ಷಮೆಂದುಂ ಶಂಕರಾಗಮಮೆಂದುಂ ಮಹೇಶ್ವರ ತಂತ್ರಮೆಂದುಂ ಅಸಂಖ್ಯಮೆಂದುಂ ಅನಿಲಾಗಮಮೆಂದುಂ ದ್ವಂದ್ವಮೆಂದುಂ ಸಾಂತಾನಾಗಮವು ಏಳು ಪ್ರಕಾರಮೆಂದುಂ ನುಡಿಯಲ್ಪಟ್ಟುದು. ॥ ೬೬ ॥

ಶ್ಲೋಕ॥ ಸೋಮಸ್ಯೈವತು ಸರ್ವೋಕ್ತಂ ದ್ವಿಲಕ್ಷಸ್ಯೈವ ಸಂಖ್ಯಯಾ ।
ನೃಸಿಂಹ ಪ್ರಾಪ್ತವಾನ್ ಸೋಮ ಪಂಚಭೇದೇನ ಭೇದಿತಮ್ ॥

ಟೀಕು॥ ಸರ್ವೋಕ್ತಾಗಮವು ಸೋಮನೆಂಬ ರುದ್ರಂಗೆ ಎರಡು ಲಕ್ಷಗ್ರಂಥ ಲೆಕ್ಕದಿಂದ ನುಡಿಯಲ್ಪಟ್ಟುದು. ಸೋಮನೆಂಬ ರುದ್ರನದೆಸೆಯಿಂದ ನೃಸಿಂಹನೆಂಬಾತನ್ನೈದಿದನು. ಐದು ಭೇದದಿಂದ ಭೇದಿಸುತ್ತಿಹುದು. ॥೬೭॥

ಶ್ಲೋಕ॥ ಶಿವಧರ್ಮೋತ್ತರಂ ಧರ್ಮಂ ವಾಯುಪ್ರೋಕ್ತಂ ತಥೈವ ಚ ।
ದಿವ್ಯಪ್ರೋಕ್ತಂ ಮಹೇಶಾನಂ ಸರ್ವೋದ್ಗೀತಂ ವಿಧೀಯತೇ ॥

ಟೀಕು॥ ಶಿವಧರ್ಮೋತ್ತರಮೆಂದುಂ ಶಿವಧರ್ಮಮೆಂದುಂ ಹಾಂಗೆ ವಾಯುಪ್ರೋಕ್ತ ಮೆಂದುಂ ದಿವ್ಯಪ್ರೋಕ್ತಮೆಂದುಂ ಅನಂತರದಲ್ಲಿ ಈಶಾನತಂತ್ರಮೆಂದುಂ ಸರ್ವೋತ್ತ ಮಾಗಮಂ ಐದು ಭೇದವೆಂದು ಹೇಳಲ್ಪಡುತ್ತಿಹುದು ॥೬೮॥

ಶ್ಲೋಕ॥ ಶ್ರೀದೇವ್ಯಾಸ್ತು ಸುವಿಖ್ಯಾತಂ ಪಾರಮೇಶ್ವರಮೇವ ಚ ।
ಗ್ರಂಥ ದ್ವಾದಶಲಕ್ಷಂತು ಸಪ್ತಧಾ ಪ್ರಶ್ರೃತಂತತ್ ॥

ಟೀಕು॥ ಪಾರಮೇಶ್ವರಾಗಮವು ಶ್ರೀ ಮಹಾದೇವಿಯರಿಗೆ ಹನ್ನೆರಡು ಲಕ್ಷಗ್ರಂಥವನುಳ್ಳದಾಗಿ ಮಿಗೆ ಪ್ರಖ್ಯಾತವಾಯಿತು. ಆ ಆಗಮವು ಏಳು ಪ್ರಕಾರವೆಂದು ವಿಸ್ತರಿಸಲ್ಪಟ್ಟುದು. ॥೬೯॥

ಶ್ಲೋಕ॥ ರಸಾನಮುನಿ ಸಂಪ್ರಾಪ್ತೋ ದೇವ್ಯಾಯಸ್ತು ಯಥಾಕ್ರಮಾತ್ ।

ಟೀಕು॥ ಶ್ರೀ ಮಹಾದೇವಿಯರದೆಸೆಯಿಂದ ಹಾಂಗೆ ತರುವಾಯವಿಡಿದು ಶರಸಾನ ಮುನಿಯ್ಯೆದಿದನು. ॥ ೭೦ ॥

ಶ್ಲೋಕ॥ ಮಾತಂಗ ಯಕ್ಷಿಣೀ ಪದ್ಮಂ ಪಾರಮೇಶ್ವರಮೇವ ಚ ।
ಪೌಷ್ಕರಂ ಸುಪ್ರಯೋಗಂ ಚ ಹಂಸಂ ಸಾಮಾನ್ಯಮೇವ ಹಿ ॥

ಟೀಕು॥ ಮಾತಂಗತಂತ್ರಮೆಂದು ಯಕ್ಷಿಣೀಶಾಸ್ತ್ರಮೆಂದುಂ ಪದ್ಮಾಗಮಮೆಂದುಂ ಪೌಷ್ಕರಮೆಂದು ಸುಪ್ರಯೋಗಮೆಂದುಂ ಹಂಸಾಗಮಮೆಂದುಂ ಸಾಮಾನ್ಯಮೆಂದುಂ ಪಾರಮೇಶ್ವರಾಗಮಮಂ ಏಳು ಪ್ರಕಾರವಾಗಿ ಪ್ರಸಿದ್ಧಮಾಗಿಹುದು ॥೭೧॥

ಶ್ಲೋಕ॥ ಕಿರಣಂ ದೇವಪಿತುರ್ವೇ ಚ ಕೋಟಿಪಂಚಕ ಸಂಖ್ಯಯಾ ।
ಸರ್ವಾರ್ತಕ ತತಃ ಪ್ರಾಪ್ತೋ ಭೇದಂ ತನ್ನವಯೇವವತ್ ॥

ಟೀಕು॥ ಕಿರಣಾಗಮವು ದೇವಪಿತಂಗೆ ಐದುಕೋಟಿ ಗ್ರಂಥ ಸಂಖ್ಯೆಯಿಂದ ಬೋಧಿಸಲ್ಪಟ್ಟುದು. ಆ ದೇವಪಿತನದೆಸೆಯಿಂದ ಸರ್ವಾರ್ತಕನೆಂಬಾತನ್ಯೆದಿದನು. ಆ ಕಿರಣಾಗಮವು ಒಂಭತ್ತು ಭೇದವಾಗಿಹುದು. ॥೭೨॥

ಶ್ಲೋಕ॥ ಗಾರುಡಂ ನೈರ್ಋತಂ ನೀಲಂ ಸೂಕ್ಷಂ ಭಾನಂ ಚ ವೈ ಕ್ರಮಂ ।
ಪ್ರಬುದ್ಧಂ ಬುದ್ಧತಾಲೋಯಂ ನವಮಂ ಕಿರಣಂ ತಥಾ ॥

ಟೀಕು॥ ಗಾರುಡಾಗಮಮೆಂದುಂ ನೈರ್ಋತಮೆಂದುಂ ನೀಲತಂತ್ರಮೆಂದುಂ ಸೂಕ್ಷ್ಮಮೆಂದುಂ ಭಾನಮೆಂದುಂ ವೈಕ್ರಮಮೆಂದುಂ ಪ್ರಬುದ್ಧಮೆಂದುಂ ಬುದ್ಧಮೆಂದು ತಾಲೋಯಮೆಂದುಂ ಪೂರ್ವಾಗಮ ಭೇದಂಗಳ ಹಾಗೆ ಕಿರಣಾಗಮವು ಒಂಭತ್ತು ಭೇದವಾಗಿಹುದೆಂದು ಹೇಳಲ್ಪಟ್ಟುದು. ॥ ೭೩ ॥

ಶ್ಲೋಕ॥ ಶಿವಸ್ಯ ವಾತುಲಂ ಪ್ರೋಕ್ತಂ ಗ್ರಂಥಂ ಶತಸಹಸ್ರಕಮ್ ।
ಮಹಾಕಾಳಃ ತತಃ ಪ್ರಾಪ್ತೋ ಭೇದಂ ಚ ದ್ವಾದಶೋದಿತಮ್ ॥

ಟೀಕು॥ ವಾತುಲಾಗಮವು ಶಿವರುದ್ರಂಗೆ ಒಂದು ಲಕ್ಷ ಗ್ರಂಥ ಸಂಖ್ಯೆಯನುಳ್ಳದಾಗಿ ಉಪದೇಶಿಸಲ್ಪಟ್ಟುದು. ಆ ಶಿವರುದ್ರನದೆಸೆಯಿಂದ ಮಹಾಕಾಳನೆಂಬ ರುದ್ರನ್ಯೆದಿದನು. ಹನ್ನೆರಡು ಭೇದಮಾಗಿ ನಿರೂಪಿಸಲ್ಪಟ್ಟುದು. ॥ ೭೪ ॥

ಶ್ಲೋಕ॥ ವಾತುಲಂ ಚೋತ್ತರಂ ಚೈವ ಕಾಲಾಜ್ಞಾನಂ ಪ್ರರೋಚಿತಮ್ ।
ಸರ್ವಂ ಸರ್ವಾಷ್ಟಕಂ ಶ್ರೇಷ್ಠಂ ನಿತ್ಯಂ ಶುದ್ಧಂ ಮಹಾನನಮ್ ॥

ವಿಶ್ವಂ ವಿಶ್ವಾತ್ಮಕಂ ಚೈವ ವಾತುಲಂ ದ್ವಾದಶ ಸ್ಮೃತಮ್ ॥

ಟೀಕು॥ ವಾತುಲಾಗಮವಾಯಿತ್ತಾದೊಡೆ ಉತ್ತರವಾತುಲಮೆಂದುಂ ಕಾಲಜ್ಞಾನ ತಂತ್ರಮೆಂದುಂ ಪ್ರರೋಚಿತತಂತ್ರಮೆಂದುಂ ಸರ್ವಾಗಮಮೆಂದುಂ ಸರ್ವಾಷ್ಟಕತಂತ್ರ ಮೆಂದುಂ ಶ್ರೇಷ್ಠಾಗಮಮೆಂದುಂ ನಿತ್ಯಾಗಮಮೆಂದುಂ ಶುದ್ಧಾಖ್ಯತಂತ್ರಮೆಂದುಂ ಮಹಾನನತಂತ್ರಮೆಂದುಂ, ವಿಶ್ವಾಗಮಮೆಂದುಂ ವಿಶ್ವಾತ್ಮಕಮೆಂದುಂ ವಾತುಲಾಗಮವು ಹನ್ನೆರಡು ಭೇದವೆಂದು ಹೇಳಲ್ಪಟ್ಟುದು.

॥ ೭೫ ॥

ಈ ಪ್ರಕಾರಮಾದ ಕಾಮಿಕಾದಿ ವಾತುಲಾಂತಮಾದ ಇಪ್ಪತ್ತೆಂಟು ಆಗಮಂಗಳ ಗ್ರಂಥ ಸಂಖ್ಯೆಗಳಂ ಭೇದ ಸಂಖ್ಯೆಗಳಂ ವ್ಯಕ್ತಮಾಗಿ ಹೇಳಿದವು. ಕಾಮಿಕಾಗಮ ಒಂದು ಪರಾರ್ಧಲೆಕ್ಕದಿಂದ ಒಂಭತ್ತುಭೇದಮಾಗಿಹುದು. ಸೂಕ್ಷ್ಮಾಗಮ ಒಂದು ಪದ್ಮಗ್ರಂಥ ಒಂದೇ ಪರ್ಯಾಯಮಾಗಿಪ್ಪುದು. ಸಹಸ್ರಾಗಮ ಒಂದು ಶಂಖ ಗ್ರಂಥ ಐದು ವಿಧಮಾಗಿಪ್ಪುದು. ಅಂಶುಮಾನಾಗಮವು ಹತ್ತು ಲಕ್ಷ ಗ್ರಂಥ ದ್ವಾದಶಭೇದ ಮಾಗಿಪ್ಪುದು. ಸುಪ್ರಭೇದಾಗಮವು ಮೂರುಕೋಟಿ ಗ್ರಂಥ ಒಂದೇ ಭೇದಮಾಗಿಪ್ಪುದು. ವಿಜಯಾಗಮವು ಮೂರುಕೋಟಿ ಗ್ರಂಥ ಎಂಟು ಭೇದವಾಗಿಪ್ಪುದು. ನಿಃಶ್ವಾಸಾಗಮ ಒಂದು ಕೋಟಿಗ್ರಂಥ ಎಂಟು ಭೇದವಾಗಿಪ್ಪುದು. ಸ್ವಯಂಭುವಾಗಮವು ಒಂದೂವರೆ ಕೋಟಿ ಗ್ರಂಥ ಮೂರು ಭೇದವಾಗಿಪ್ಪುದು. ಅನಲಾಗಮವು ಮೂವತ್ತು ಸಾವಿರ ಗ್ರಂಥ ಒಂದೇ ಭೇದವಾಗಿಪ್ಪುದು. ವೀರಾಗಮವು ಲಕ್ಷಗ್ರಂಥ ಹದಿಮೂರು ಭೇದವಾಗಿಪ್ಪುದು. ಕಾರಣಾಗಮವು ಒಂದರ್ಬುಧ ಗ್ರಂಥ ಆರು ಭೇದವಾಗಿಪ್ಪುದು. ಮುಕುಟಾಗಮವು ಒಂದುಲಕ್ಷಗ್ರಂಥ ಎರಡು ಭೇದವಾಗಿಪ್ಪುದು. ವಿಮಲಾಗಮವು ಮೂರು ಲಕ್ಷಗ್ರಂಥ ಆರು ವಿಧಮಾಗಿಪ್ಪುದು. ಚಂದ್ರಜ್ಞಾನಾಗಮವು ಮೂರು ಕೋಟಿಗ್ರಂಥ ಹದಿಮೂರು ಭೇದಮಾಗಿಪ್ಪುದು. ಬಿಂಬಾಗಮವು ಲಕ್ಷಗ್ರಂಥ ಹದಿನೈದು ಭೇದ ಮಾಗಿಪ್ಪುದು. ಪ್ರೋದ್ಗೀತಾಗಮವು ಮೂರು ಲಕ್ಷಗ್ರಂಥ ಹದಿನಾರು ಭೇದಮಾಗಿಪ್ಪುದು. ಲಲಿತಾಗಮ ಎಂಟು ಸಾವಿರ ಗ್ರಂಥ ನಾಲ್ಕು ಭೇದವಾಗಿಪ್ಪುದು. ಸಿದ್ಧಾಗಮ ಐವತ್ತು ಲಕ್ಷಗ್ರಂಥ ನಾಲ್ಕು ಭೇದವಾಗಿಹುದು. ಸಂತಾನಾಗಮ ಆರು ಸಾವಿರ ಗ್ರಂಥ ಏಳು ಭೇದಮಾಗಿಪ್ಪುದು. ಸರ್ವೋಕ್ತಾಗಮವು ಎರಡು ಲಕ್ಷ ಗ್ರಂಥ ಐದುಭೇದಮಾಗಿಪ್ಪುದು. ಪಾರಮೇಶ್ವರಾಗಮ ಹನ್ನೆರಡು ಲಕ್ಷಗ್ರಂಥ ಏಳು ಭೇದಮಾಗಿಪ್ಪುದು. ಕಿರಣಾಗಮ ಐದುಕೋಟಿ ಗ್ರಂಥ ಒಂಭತ್ತು ಭೇದಮಾಗಿಪ್ಪುದು. ವಾತುಲಾಗಮವು ಲಕ್ಷಗ್ರಂಥ ಹನ್ನೆರಡು ಭೇದಮಾಗಿಪ್ಪುದು. ಯೋಗಜಾಗಮವು ಒಂದು ಲಕ್ಷ ಗ್ರಂಥ ಐದು ಭೇದಮಾಗಿಪ್ಪುದು. ಚಿಂತ್ಯಾಗಮವು ಒಂದು ಲಕ್ಷಗ್ರಂಥ ಆರುವಿಧಮಾಗಿಹುದು. ಕಾರಣಾಗಮವು ಒಂದುಕೋಟಿ ಗ್ರಂಥ ಏಳು ಪ್ರಕಾರಮಾಗಿಹುದು. ಅಜಿತಾಗಮವು

ಒಂದು ಲಕ್ಷಗ್ರಂಥ ನಾಲ್ಕು ಭೇದವಾಗಿಹುದು. ದೀಪ್ತಾಗಮವು ಒಂದು ಲಕ್ಷಗ್ರಂಥ ಒಂಭತ್ತು ಭೇದವಾಗಿಹುದು.

ಇಂತಪ್ಪ ಇಪ್ಪತ್ತೆಂಟಾಗಮಂಗಳ ಗ್ರಂಥ ಸಮೇತಮಾದ ಲೆಕ್ಕ ೧೦೦೦೦೦೧೦೦೦೧೦೦೦೧೦೧೮೩೮೪೪೦೦೦ ಭೇದ ಸಮೇತಮಾದ ಲೆಖ್ಖಂ ೧೯೯.

ಇಂತಪ್ಪ ಗ್ರಂಥ ಸಂಖ್ಯೆಯೊಳು ಶುದ್ಧಾಖ್ಯವೆಂಬಾ ವಾತುಲಾಗಮವು ವ್ಯಾಖ್ಯಾನಿಸಲ್ಪಟ್ಟುದು.
ಮುಂದೆ ತತ್ವಭೇದಪಟಲವಾದುದು.
ಪಟಲೋಽಯಂ ಸಮಾಪ್ತಃ

❖ ❖ ❖

ಅನುಬಂಧ : ೨

ನಿರಂಜನ ವಂಶರತ್ನಾಕರದಲ್ಲಿ ಗುಬ್ಬಿ ಮಲ್ಲಣಾರ್ಯರು ಹಾಗೂ ಶ್ರೀ ಗೋಸಲ ಚನ್ನಬಸವೇಶ್ವರರನ್ನು ಕುರಿತು :

ಚನ್ನಬಸವರಾಜೇಂದ್ರರು

೧೮ನೆಯ ಪಟ್ಟದ ಶ್ರೀ ಚನ್ನಬಸವರಾಜೇಂದ್ರರು ವಾಣಿಜ್ಯಪುರದ ಸದುಭಕ್ತರ ಭಕ್ತಿಯೊಡನೆ ಲಿಂಗಪೂಜಾ ಜಂಗಮ ದಾಸೋಹವಂ ಮಾಡುತ್ತ ಆ ದೇಶದಲ್ಲಿ ತಮ್ಮಯ ಸದ್ಗಣಾಚಾರಿ ಮುಂತಾದ ಚರರ ಕಳುಹಿಸಿ ದೇಶದ ಭಕ್ತರ ಕಡೆಯಿಂದ ಕಾಣಿಕೆ ತರಿಸಿಕೊಳ್ಳುತ್ತ ಅನಾಚಾರವುಳ್ಳ ಶಿವಭಕ್ತರ ಸದಾಚಾರದಲ್ಲಿ ತರುತ್ತ ತಿರುಗಿಬಿದ್ದ ಜನರಿಗೆ ಬಹಿಷ್ಕಾರವಂ ಕೊಡುತ್ತ ಶರಣಾಗತರಾದರೆ ಅಪರಾಧಗಾಣಿಕೆಯಂ ಒಪ್ಪಿಸಿಕೊಳ್ಳುತ್ತ ದುಷ್ಟರಂ ಶಿಕ್ಷಿಸಿ ಶಿಷ್ಟರಂ ರಕ್ಷಿಸುತ್ತ ಸದುಹೃದಯವುಳ್ಳ ಶಿವಭಕ್ತಗಣವರರಿಗೆ ಷಟ್ಸ್ಥಲ ಜ್ಞಾನೋಪದೇಶವಂ ಮಾಡಿ ಮೋಕ್ಷಮಾರ್ಗವನೀವುತ್ತ ೭೨ ಬಿರುದುಗಳೊಡನೆ ಅಲ್ಲಿಯ ಭಕ್ತಗಣವರರಿಂದ ಪೂಜೋತ್ಸವಂಗೊಳುತ್ತ ವಾಣಿಜ್ಯ ಪುರದಿ ಶೂನ್ಯ ಸಿಂಹಾಸನಸ್ಥ ಗೋಸಲ ಚನ್ನಬಸವರಾಜೇಂದ್ರರು ಒಪ್ಪುತ್ತ ಇರ್ದ ಕಾಲದಲ್ಲಿ ಪಂಪಾಕ್ಷೇತ್ರದಿ ವಿದ್ಯಾನಗರಿಯನ್ನಾಳಿದ ಪ್ರೌಢರಾಯನು ಸಾಂಬಲೋಕಕ್ಕೆ ಹೋದ ನಂತರ ಕೆಲವು ದಿವಸದಿ ಆ ರಾಜ್ಯದಲ್ಲಿ ಅನಾಚಾರವು ಹೆಚ್ಚಾಗಿ ಶಿವಾಚಾರವಡಗಿ ಮೇಲಾಧರಣಿಯೊಳು ವೀರಶೈವಾಚಾರವಿಲ್ಲದೆ ಪರವಾದಿಗಳು ಘನವಾಗಲು ಕೈಲಾಸಕ್ಕೆ ನಾರದನು ಪೋಗಿ ಪರಮೇಶ್ವರನು ಓಲಗಂಗೊಟ್ಟಿಪ್ಪ ಸಮಯದೊಳು ಕಂಡು ಸಲ್ಲೀಲೆಯಿಂದೆರಗಿ ಮಗುಳ್ದೆದ್ದು ಬಿನ್ನೈಸಿದಂ. ಭಯಭಕ್ತಿಯಿಂದ ಧರೆಯೊಳಗೆ ವೀರಶೈವಾಚಾರವಡಗಿತ್ತು, ಕರುಣದಿಂ ನೀವೆ ಚಿತ್ತೈಸಿ ಷಟ್ಸ್ಥಲವನುದ್ಧರಿಸೆಂದು ನಾರದಂ ಬಿನ್ನೈಸಲೀಶಂ ನಿರಂಜನ ಗಣೇಶ್ವರನೊಡನೆ ವರಗಣೇಶ್ವರರೇಳ್ನೂರ್ವರಂ ಕೂಡಿ ಕೊಂಡಿರದೆ ಭೂಮಿಯೊಳುದಯಿಸಿ ಜಂಗಮಸ್ಥಲವಾಂತು ವರ ಷಟ್ಸ್ಥಲವನುದ್ಧರಿ ಸೆಂದು ಕಳುಹಲವರೊಡಗೂಡಿ ಭೂಮಿಗಿಳಿದನು. ಈ ನಿರಂಜನ ಜಂಗಮವೆ ಎಂಟು ವರುಷ ಶಿಸುರೂಪಮಂ ತಾಳ್ದು ಆ ಶಿಸುವು ಭಸ್ಮರುದ್ರಾಕ್ಷ ಲಿಂಗಧಾರಣ ಸಮೇತವಾಗಿ ಆ ವಾಣಿಜ್ಯಪುರ ಗೋಸಲ ಚನ್ನಬಸವ ಸ್ವಾಮಿಗಳವರ ಸನ್ನಿಧಾನಕ್ಕೆ ದರ್ಶನಾರ್ಥವಾಗಿ

ಆ ನಿರಂಜನ ಗಣೇಶನು ಕೈಲಾಸದಿಂ ಅಂತರಿಕ್ಷ ಮಾರ್ಗದಿ ಶಿಸು ರೂಪವಾಗಿ ಪುರಜನರು ಕಾಣ್ಬಂತೆ ಕೋಟಿಸೂರ್ಯ ಪ್ರಕಾಶವಾಗಿ ಬರುವ ಕಾಲದಿ ಜನರು ಕೇಳ್ವಂತೆ ನೋಳ್ಪಂತೆ ಅಂತರಿಕ್ಷದಿ ಜಯದುಂದುಭಿ ವಾದ್ಯಗಳಾದವು. ಪುಷ್ಪದ ಮಳೆ ಸುರಿಯಿತು. ಇದ ಕಂಡು ಚನ್ನಬಸವರಾಜೇಂದ್ರರು ಮುಂತಾದ ಆ ಪುರಜನರು ಅಂತರಿಕ್ಷದಿ ಕೋಟಿ ಚಂದ್ರಸೂರ್ಯ ಪ್ರಕಾಶಮಾನರಾದ ದಿವ್ಯಮೂರ್ತಿಯು ಬರುವುದಂ ಕಂಡು ಈತನು ಶಿವನಲ್ಲದೆ ಬೇರೆ ಅಲ್ಲವೆಂದು ಸಕಲರು ಕೊಂಡಾಡಿ ಶರಣಾಗತರಾದರು. ಆ ವೇಳೆಯೊಳು ಅಷ್ಟ ವರುಷದ ಶಿಸುರೂಪವಾದ ಮೂರ್ತಿಯು ಚನ್ನಬಸವರಾಜೇಂದ್ರರೆಂಬ ಗುರುಗಳಿಗೆ ಸಾಷ್ಟಾಂಗವೆರಗಲು ಇದ ಕಂಡು ಗುರುವರನು ಶಿರದಡಹಿ ಎಬ್ಬಿಸಿ ನೀನಾರೆಂದು ವಿಚಾರಿಸಲು ತಾನು ಶಿವಲೋಕದಿಂ ಬಂದ ಹದನವಂ ಪೇಳಿ ಅಲ್ಲಿರುವ ದೇವಭಕ್ತರ ಸಮಕ್ಷಮದೊಳು ನೀನೆನಗೆ ಗುರುವಾಗಿ ನಿರಾಭಾರ ದೀಕ್ಷೆಯನಿತ್ತು ಷಟ್ಸ್ಥಲ ಜ್ಞಾನೋಪದೇಶವಂ ಮಾಡಿ ಪೊರೆವುದೆಂದು ಬಿನ್ನೈಸಿಕೊಳ್ಳಲು ಅದಕ್ಕೆ ಗುರುವರನು ನೀನಾದಿ ಪರವಸ್ತುವು ಆದ ಕಾರಣ ಗುರುವಾಗಲೊಲ್ಲೆವೆನಲು ಅದಕ್ಕೆ ಆ ಮೂರ್ತಿಯು ನೀನಾದಿಯಲ್ಲಿ ಪರಶಿವನೆ ರೂಪಾಗಿ ಮರ್ತ್ಯರುಗಳಿಗೆ ಗುರುವಾಗಿ ಷಟ್ಸ್ಥಲ ಮಾರ್ಗವಂ ತೋರಿ ಮೋಕ್ಷವಂನಿತ್ತು ಸಲಹುವುದಕ್ಕೋಸುಗ ಬಂದಿರುವುದಂ ನಾನು ತಿಳಿದು ಬಿನ್ನೈಸಿಕೊಳ್ಳುವೆನೆಂದು ಗುರುವರನಿಗೆ ಶರಣಾಗತನಾಗಲು ಅದಕ್ಕೆ ಒಪ್ಪಿಕೊಂಡು ತಮ್ಮಯ ಮಠದಿ ಸಕಲಭಕ್ತ ಗಣವರರಂ ಕರಿಸಿಕೊಂಡು ಮಠದಿ ಹಂದರ ದೀಕ್ಷಾಮಂಟಪವಂ ರಚಿಸಿ ತಮ್ಮಯ ಶೂನ್ಯ ಸಿಂಹಾಸನಕ್ಕೆ ಗುರುಗಳಾದ ಅಲ್ಲಮ ಪ್ರಭುಸ್ವಾಮಿಗಳವರ ನಿರಂಜನ ಸೂತ್ರ ಏಕೋತ್ತರವಾಗಿ ಮೂಲ ಪ್ರಣಮವೆ ಬೀಜ ಚಿತ್‌ಶಕ್ತಿ ಅಜಪವೇದ ಪರಶಿವನ ಗೋಪ್ಯಮುಖದಿ ಉದ್ಭವವಾದ ಎಳೆ ಮಿಂಚಿನ ಶೂನ್ಯಕಲಶ ನಿರಂಜನಗೋತ್ರ ಮಹಾಮೇರುಪರ್ವತ ಗುಹೇಶ್ವರಲಿಂಗ ಕಲ್ಯಾಣಪುರ ಶೂನ್ಯಸಿಂಹಾಸನ ನಾಗಬೆತ್ತದ ದಂಡಾಗ್ರ ಸಹಸ್ರದಳದಲ್ಲಿರುವ ಗುರುಪಾದೋದಕ ಗಂಗೆ ಬಿಲ್ವವೃಕ್ಷ ಅಕಲ್ಪಿತ ಭಿಕ್ಷಾಂದೇಹಿ ಎಂಬ ಶಬ್ದ ಚಿತ್ತಕಂಬಳಾಸನ ಶ್ರೀ ಶೈಲದ ಕದಳಿ ಬನವೆಂಬ ಕ್ಷೇತ್ರ ಊರ್ಧ್ವದಿಕ್ಕು ಭಾವಲಿಂಗೈಕ್ಯಪದ. ಈ ಪ್ರಕಾರ ಸುಪ್ರಭೇದಾಗಮದ ಸೂತ್ರವಿಡಿದು ಗಣಸಾಕ್ಷಿಯಾಗಿ ಏಕೋತ್ತರ ಸೂತ್ರವಿಡಿದು ಶ್ರೀ ಚನ್ನಬಸವರಾಜೇಂದ್ರರು ತಮ್ಮ ಶಿಷ್ಯನಾದ ಸಾಂಬಲೋಕದಿಂ ಬಂದ ಮೂರ್ತಿಗೆ ನಿರಾಭಾರ ದೀರಶೈವ ದೀಕ್ಷೆಯನ್ನಿತ್ತು ಷಟ್ಸ್ಥಲ ಬ್ರಹ್ಮೋಪದೇಶವಂ ಕೂಡಿ ಅನಾದಿ ಸಿದ್ಧಲಿಂಗೇಶನೆಂಬ ನಾಮವಂ ಕೊಟ್ಟು ರಕ್ಷಿಸಿದರು. ಈ ಸಿದ್ಧಲಿಂಗದೇಶಿಕೇಂದ್ರರು ಮಹಿಮಾಪುರುಷರಾಗಿ ತಮ್ಮಯ ಗುರುಗಳಾದ ಚನ್ನಬಸವೇಶನ ಸೇವೆಯೊಳು ಕೆಲವು ದಿವಸವಿರ್ದು ವಾಣಿಜ್ಯಪುರವೆಂಬ ಹರದನಹಳ್ಳಿ ಯಲ್ಲಿ ಕಲ್ಲಬಸವಗೆ ಉಣಿಸಿ ಗುರುಗಳ ಶಿವಪೂಜೆ ವೇಳೆಯಲ್ಲಿ ದೀಪಕ್ಕೆ ತೈಲವಿಲ್ಲದಿರೆ

ಆ ದೀಪದ ಪ್ರಣತಿಗೆ ಉದಕವಂ ನೀಡಿ ದೀಪ ಉರಿವಂತೆ ಮಾಡಲು ಇದ ಗುರುಗಳು ಕಂಡು ಈ ಶಿಷ್ಯನು ಅಪಾರ ಮಹಿಮನು ಈತನಿಂದೆ ಸೇವೆಯಂ ಕೈಕೊಳ್ಳಕೂಡದೆಂದು ನಿಶ್ಚಯಿಸಿ ಶಿವಪೂಜೆ ಶಿವಾರ್ಪಣವಾದ ನಂತರ ಆ ಪುರದ ಭಕ್ತಣಂಗಳಂ ಕರೆತರಿಸಿ ಅವರ ಸಮುಖದಿ ತಮ್ಮಯ ಶಿವಾನುಭವ ಚರಂತಿಗೆ ಪಟ್ಟವನು ಸಿದ್ಧಲಿಂಗವರೆಗೆ ಕೊಟ್ಟು ತಾವು ಆ ಪುರವಂ ಬಿಟ್ಟು ತಮ್ಮಯ ಪರಮಗುರುಗಳಾದ ಗೋಸಲಿಯ ಸಿದ್ಧೇಶ್ವರ ಸ್ವಾಮಿಗಳವರು ತಮ್ಮ ಮಹಿಮೆಯಲಿ ಗಂಗೆಯಂ ತರಿಸಿದ ಕಾರಣದಿಂದ ಅವರ ಹೆಸರಾದ ಬೆಂಗಳೂರು ಪ್ರಾಂತದಲ್ಲಿರುವ ತುಮಕೂರು ಸಮೀಪವಾದ ಸಿದ್ಧಗಂಗೆಯ ಬೆಟ್ಟಕ್ಕೆ ಚಿತ್ತೈಸಿ ಅಲ್ಲಿಯು ಗಣಪರ್ವವಂ ಮಾಡಿ ಅಲ್ಲಿ ಲಿಂಗಪೂಜಾ ಜಂಗಮ ದಾಸೋಹದಿಂದ ಗಣಸಮೂಹದೊಡನೆ ಇರಲು ತುಮಕೂರು ಸೀಮೆಯಲ್ಲಿರುವ ಗುಬ್ಬಿ ಎಂಬ ಪುರದಿ ಪ್ರಸಿದ್ಧ ಕವೀಶ್ವರನಾದ ಮಲ್ಲಣಾಚಾರ್ಯನೆಂಬ ಗಣವರನು ಸಿದ್ಧಗಂಗೆಯ ಬೆಟ್ಟದಲ್ಲಿರುವ ಸ್ವಾಮಿಗಳವರ ಸನ್ನಿಧಿಗೆ ಬಂದು ಭಯಭಕ್ತಿಯಿಂದ ಸಾಷ್ಟಾಂಗವೆರಗಿ ಬಿನ್ನಹಂ ಮಾಡಿ ೭೨ ಬಿರುದುಗಳಿಂದ ಗಣ ಸಮೂಹದೊಡನೆ ಗುಬ್ಬಿಯ ಪುರಕೆ ಕರಕೊಂಡು ಪೋಗಿ ಉತ್ಸಹಂಗೊಳಿಸಿ ತಮ್ಮಯ ಮಠದಿ ಗಣಪರ್ವವಂ ಮಾಡಿ ಆ ಬಳಿಕ ಅಲ್ಲಿಯ ಮಲ್ಲಣಾಚಾರ್ಯರು ಮುಂತಾದ ಭಕ್ತಗಣಂಗಳು ಸ್ವಾಮಿಗಳವರಿಂದ ಷಟ್ಸ್ಥಲ ಜ್ಞಾನೋಪದೇಶವಂ ಪಡೆದರು. ಇವರು ಮುಂತಾಗಿ ಅಲ್ಲಿಯ ಭಕ್ತಗಣಂಗಳನ್ನು ಸ್ವಾಮಿಗಳವರು ಕರಿಸಿಕೊಂಡು ಇವರಿಗೆ ತಾವು ಸಾಂಬಲೋಕಕ್ಕೆ ಚಿತ್ತೈಸುವುದನ್ನು ಸೂಚಿಸಿ ಅಲ್ಲಿಯೇ ನಿರ್ವಯಲಾದರು. ಇವರ ತೋರಗದ್ದಿಗೆಯು ಗುಬ್ಬಿಯಪುರದಲ್ಲಿ ಇರುತ್ತದೆ. ಈ ಗದ್ದುಗೆಯು ಪ್ರಸಿದ್ಧವಾಗಿ ಈಗಲೂ ಪೂಜಾ ರಥೋತ್ಸಹಂಗಳು ಆಗುತ್ತವೆ. ಈಗಲೂ ಆ ಗದ್ದಿಗೆಗೆ ಆ ಸೀಮೆಯ ಶಿವಭಕ್ತರಾದ ಪ್ರಜೆಗಳಲ್ಲಿ ಮಕ್ಕಳಿಲ್ಲದವರು ಬ್ರಹ್ಮರಾಕ್ಷಸ ಪಿಶಾಚ ಗ್ರಹಪೀಡಿತರು ಕುಷ್ಠರೋಗ ಮುಂತಾದ ಅನೇಕ ರೋಗಪೀಡಿತರು ಮುಂತಾದ ಜನರು ಪ್ರಾರ್ಥನೆಯಂ ಮಾಡಿಕೊಂಡಿದ್ದರಿಂದ ಪರಾಭವವಾಗಲು ಇವೊತ್ತಿಗೂ ಆ ಚನ್ನಬಸವರಾಜೇಂದ್ರರ ಮಠದಲ್ಲಿ ಪ್ರಸ್ತಗಳ ಮಾಡುತ್ತಾರೆ. ಇದಕ್ಕೆ ಅವರ ಸ್ಥಲಪುರಾಣವೇ ಸಾಕ್ಷಿಯು.

ಪುಟ ೩೭–೩೮

ನಿರಂಜನ ವಂಶರತ್ನಾಕರ ಸಂ.ಫ.ಗು. ಹಳಕಟ್ಟಿ
ಪ್ರಕಾಶಕರು : ಶ್ರೀ ಸಿದ್ಧಗಂಗಾಮಠ, ತುಮಕೂರು ಜಿಲ್ಲೆ

❖ ❖ ❖

ಅನುಬಂಧ : ೩

ಶಾಸನದಲ್ಲಿ ಶ್ರೀ ಗುಬ್ಬಿ ಮಲ್ಲಣಾರ್ಯರು ಹಾಗೂ ಗೋಸಲ ಚನ್ನಬಸವೇಶ್ವರರನ್ನು ಕುರಿತು :

ಹೊಸ ಶಾಸನಗಳು – ೬೨

ಗುಬ್ಬಿ ಕಸಬೆಯಲ್ಲಿ ಅಡವಿ ಸ್ವಾಮಿಗಳು ಕಟ್ಟಿಸಿದ ಕಲ್ಯಾಣಿಯ ಬಾಗಿಲ್ವಾಡದ ಮೇಲ್ಗಡೆ.

ಶ್ರೀ ಸಿದ್ಧಲಿಂಗ ಪ್ರಸನ್ನ ಶಾಲಿವಾಹನ ಶಕ ೧೮೧೮ ದುರ್ಮುಖಿ ಸಂವತ್ಸರದ ಮಾರ್ಗಶಿರ ಶುದ್ಧ ೫, ಸನ್ ೧೮೯೬ ಶ್ರೀ ಪಾಲ್ಗುರ್ಜರ ಭಕ್ತಿಯಣ್ಬುವಿಡಿದಾ ಶ್ರೀಶೈಲಮಂ ಮಾಣ್ದು ತದ್ಭೂಪಾಲರ್ಕಳನೋವುತಂದು ಕೃತದೊಳ್ ಮಲ್ಲೇಶ್ವರಂ ಗುಬಿಯಂ ಕಾಪಿಟ್ಟಂ ಕಪಿಲಾಂಕಸಿದ್ಧವೆಸರಾದಾಕಾಲದೊಳ್ ರಾಮನಿಂನಾ(ದಾ) ಪೂಜಾಂಫ್ರಿತನಾಗಿ ತಾನಮರಗೊಂಡಾಧೀಶ್ವರಂ ತೋರ್ದಪಂ॥

॥ಉ॥ಮಾ॥ ಪಾವನಮೂರ್ತಿ ಕೀರ್ತಿ ಧವಳಂಕ ವಿಭೂಷಣ ಮಲ್ಲಣಾರ್ಯ ಸ
ದ್ಭಾವಮನಾಂತು ನಿಂತನದುವೇ ಪರಮುಕ್ತಿಯನೀವತಾಣಮೆಂ ।
ದಾವಿಮಲಾಂಗ ಚನ್ನಬಸವೇಶನಿದೇ ಗುರುಮಲ್ಲಿನಾಥನಿಂ
ಸೇವೆಯನೊಂದುತಿಲ್ಲಿ ನೆಲೆಗೊಂಡನಿದೇಂ ಘನಪುಣ್ಯಕೋಶಮೋ॥

ಮ॥ವಿ॥ವೃ॥ ಒಡಲಂ ದಂಡಿಸುತಿಂದ್ರಿಯಂಗಳ ಪೊಡರ್ಪಂ ಮೆಟ್ಟುತಂ ಸದ್ಗುಣಂ
ಬಡಯಲ್ ಶ್ರೀಯಟವೀಶ ಚನ್ನಬಸವೇಶಸ್ವಾಮಿ ಕಾರ್ಯಂ ಗೆಲುಂ।
ಬಡಿಯಲ್ಕೆಂದಘನಾಶನೀ ಸರಸಿಯಂ ಮೇಣ್ಚಂದ್ರಮೌಳೀಶನಂ
ಪಡಿಮಾತೇಂ ಭಜರ್ಕಮುಕ್ತಪದಮಂ ತೋರಲದಂ ಗೈದಪಂ ॥

ಶಾ॥ವಿ॥ವೃ॥ ಶ್ರೀಮಚ್ಚನ್ನವೃಷೇಶನಾಶ್ರಯಮೆನಲ್ ತತ್ಪಾದಪದ್ಮಾಕರಂ
ಶ್ರೀಮಚ್ಚಂಕರಮೂರ್ತಿಗಾಶ್ರಯಮೆನಲ್ ತದ್ಯೋಗಿ ಹಂಸಾಕರಂ ।
ಶ್ರೀ ಮದ್ಭಕ್ತ ಸುಖಕ್ಕೆ ಕಾರಣಮನ್ಯ ತಜ್ಜೀವನಾಧಾರಿತಾಂ
ಪ್ರೇಮಂದೋರುವ ಪಾಪನಾಸನಿಯಖಾತಂ ತಾನಿದೇನಿಕ್ಕುವಂ ।

ಚಂ॥ಮಾ॥ವೃ॥ ಸ್ಥಿತ ನೃಪಶಾಲಿವಾಹನಶಕಾನ್ವಿತ ಭೂ ವಸು ಹಂಸ ಮಂತ್ರ ಬೋ
ಧಿತ ಗಣನಾಂಕ ದುರ್ಮುಖಿಯ ಮಾರ್ಗಶಿರಾಂಕವಳಕ್ಷ ಪಕ್ಷ ಸಂ।
ಯುತ ಬುಧವಾರ ಪಂಚಮಿಯಳೀಕೃತಿ ಶ್ರೀಯಟವೀಶಯೋಗಿ ನಿ
ರ್ಮಿತಮಿದು ಪೂರ್ಣಮಾಯ್ತಾ ಗುರು ಚನ್ನವೃಷೇಶ ಕೃಪಾಕಟಾಕ್ಷದಿಂ॥

ಗದ್ಯ ॥ ಸ್ವಸ್ತಿ ಶ್ರೀ ಸಮಸ್ತ ಭೂಮಂಡಲ ಪುಂಡರೀಕ ಕರ್ಣಿಕಾಯಮಾನಮಾದ ಪಾಲ್ಗುರ್ಜರ ರಾಯರ ಭಕ್ತಿಗೋಸ್ಕರಕಿಲ್ಲಿಗೈತಂದ ಕಪಿಲಸಿದ್ಧ ಮಲ್ಲಿಕಾರ್ಜುನನಿಂ ಶ್ರೀರಾಮನಿಂದಿಲ್ಲಿ ಪೂಜೆಗೊಂಡ ಅಮರಗೊಂಡಾಧೀಶ್ವರನಿಂ ಶೋಭಿಸುವ ಮಲ್ಲಣಾರ್ಯ ಮಹಾಕವಿಯಂ ಪಡೆದ ಮತ್ತಾ ಮ್ಲಲೇಶನ ಭಕ್ತಿಗೊಲಿದು ಪುಣ್ಯಕ್ಷೇತ್ರಮೆಂದು ಬಗೆದಿಲ್ಲಿಯೇ ನೆಲೆಗೊಂಡ ಶ್ರೀ ಚನ್ನಬಸವೇಶ್ವರನಿಂ ರಾಜಿಸುವ ಈ ಗುಬ್ಬಿಯಲ್ಲಿ ಶ್ರೀಮದಟವೀಶ ಯಮಿರಾಜಹಂಸ ತದ್ಗುರು ಸೇವಾರ್ಥಮಾಗಿಲ್ಲಿಗೈತಂದು ಗುರುವಿನಾಲಯಕ್ಕನುಕೂಲವಾಗುವಂತೆ ಪಾಪನಾಶಿನೀಯಂಬ ಈ ತೀರ್ಥ ನಿರ್ಮಾಣವನ್ನು ಶ್ರೀ ಚಂದ್ರಮೌಳೀಶ್ವರಲಿಂಗ ಪ್ರತಿಷ್ಠೆಯನ್ನು ಸದ್ಭಕ್ತರ ಸಹಾಯದಿಂ ಪೂರೈಸಿದಂ ಸನ್ ೧೮೭೬ನೆಯ ಡಿಶಂಬ....ತಾ......೯ನೇ ಬುಧವಾ............

(ಎಂದು ಮುಕ್ತಾಯವಾಗಿದೆ.)

ಗುಬ್ಬಿ ತಾಲ್ಲೂಕು. ಹೊಸ ಶಾಸನಗಳು.
ಪು. ೩೦-೩೧

❖ ❖ ❖

೩

ಗುಬ್ಬಿ ಹೋಬಳಿ ಧೂಳನಹಳ್ಳೀ ಗ್ರಾಮದಲ್ಲಿ ಸರ್ವೇನಂಬರು ೧೬ನೇ ಜಮೀನಿನಲ್ಲಿ

. . . .

[4]. . . . . . ದೇವರ

[5]. . . . .

[6]. . . . ಪನೆವ. . .

[7]. . . . . . ನಾಡಪ್ರಭು

[2]. . . ಮಸಣಿಗವುಡ

[9]ನವರಮಕ್ಕಳುರಾಮಂಣ

[10]ಮಸಪನವರಿಗೆಗುಬಿ

[11]ಯಸ್ತಳದಧೂಳನಹಳಿಯ

[12]ನುಕೊಡಗಿಯಾಗಿಭೂಮಿ

[13]ಯುಚಂದ್ರನುಉಳ್ಳನಕಂನ

[14]ಡವಂತಾಗಿಕೊಟಸಾಸನಮ

[15]ಂಗಳಮಹಾ ಶ್ರೀಶ್ರೀಶ್ರೀ

ಪು. ೫೭

3

DATE? ABOUT 1235 A.D.

..Devarasa..gave to the mahanad-prabhu Masani-Gaunda's sons Ramanna and Masanapa, Dhulauahalli in Gubbi-sthala as a *kodagi,* for as long as earth and moon endure.

pp.17

ಅನುಬಂಧ : ೪

ಪರಿಭಾಷಾ ಕೋಶ

ಅ

ಅಂಗ	:	ಶಿರಸ್ಸು ಮುಖ ಹೃದಯ
ಅಂಗಭೇದ	:	೧) ಅಂಗ ಪ್ರತ್ಯಂಗ ಸಾಂಗ ಉಪಾಂಗ ೨) ಶಿವಾಂಗ, ಭೂತಾಂಗ, ಕೂಟಾಂಗ, ವಿದ್ಯಾಂಗ, ಶಕ್ತ್ಯಂಗ, ಸಾಮಾನ್ಯಾಂಗ
ಅಷ್ಟಗಣೇಶ್ವರರು	:	ಉಮಾಚಂಡೇಶ್ವರ, ನಂದಿಕೇಶ್ವರ, ಮಹಾಕಾಲ, ಭೃಂಗಿ, ಭೃಂಗಿರಿಟಿ, ಗಣೇಶ್ವರ, ವೃಷಭೇಶ್ವರ, ಷಣ್ಮುಖ
ಅಷ್ಟಮೂರ್ತಿಗಳು	:	೧) ಶರ್ವ, ಪಶುಪತಿ, ಉಗ್ರ, ರುದ್ರ, ಭವ, ಈಶಾನ, ಮಹಾದೇವ, ಭೀಮ. ೨) ಬ್ರಹ್ಮ, ವಿಷ್ಣು, ಇಂದ್ರ, ಸೂರ್ಯ, ಚಂದ್ರ, ಷಣ್ಮುಖ, ಮನ್ಮಥ, ಕ್ಷೇತ್ರಪಾಲ.
ಅಷ್ಟ ಲೋಕಪಾಲರು	:	ಇಂದ್ರ, ಅಗ್ನಿ, ಯಮ, ನಿರ್‌ಋತಿ, ವರುಣ, ವಾಯು, ಕುಬೇರ, ಈಶಾನ.
ಅಷ್ಟ ವರ್ಗಗಳು	:	ಇಂದ್ರ, ಅಗ್ನಿ, ಯಮ, ನಿರ್‌ಯತಿ, ವರುಣ, ವಾಯು, ಕುಬೇರ, ಈಶಾನ.
ಅಷ್ಟ ವಸುಗಳು	:	ಧರ, ಧ್ರುವ, ಸೋಮ, ಆಪ, ಅನಿಲ, ಅನಲ, ಪ್ರತ್ಯೂಷ, ಪ್ರಭಾಸ.
ಅಷ್ಟ ವಿದ್ಯೇಶ್ವರರು	:	ಅನಂತ, ಸೂಕ್ಷ್ಮ, ಶಿವೋತ್ತಮ, ಏಕನೇತ್ರ, ಏಕರುದ್ರ, ತ್ರಿಮೂರ್ತಿ, ಶ್ರೀಕಂಠ, ಶಿಖಂಡಿ.
ಅಷ್ಟ ಶಕ್ತಿಗಳು	:	ವಾಮಾ, ಜ್ಯೇಷ್ಠಾ, ರೌದ್ರೀ, ಕಾಳೀ, ಕಲವಿಕರಣೀ, ಬಲವಿಕರಣೀ, ಬಲಪ್ರಮಥಿನೀ, ಸರ್ವಭೂತದಮನೀ.
ಅಷ್ಟ ಸಿದ್ಧಿಗಳು	:	ಅಣಿಮಾ, ಮಹಿಮಾ, ಲಘಿಮಾ, ಗರಿಮಾ, ಪ್ರಾಪ್ತಿ, ಪ್ರಾಕಾಮ್ಯ, ಈಶತ್ವ, ವಶಿತ್ವ

ಆಗಮ ಪ್ರತಿಪಾದ್ಯ : ಕ್ರಿಯಾಪಾದ, ಚರ್ಯಾಪಾದ, ಯೋಗಪಾದ
ವಿಷಯಗಳು : ಜ್ಞಾನಪಾದ
ಕಾಲತ್ರಯ : ಭೂತ, ವರ್ತ, ಭವಿಷ್ಯ
ತತ್ತ್ವಗಳು : ಶಿವತತ್ತ್ವ, ಸದಾಶಿವತತ್ತ್ವ, ಮಹೇಶತತ್ತ್ವ
ತ್ರಿಗುಣ : ೧) ಕರ್ತೃ, ಪ್ರತಾಪ, ದುರ್ಭೇದ್ಯ
೨) ಸತ್ತ್ವ, ರಜ, ತಮ
ದಶಗುಣಗಳು : ಗುಣತ್ರಯ, ಕರ್ತೃ, ಪ್ರತಾಪ, ದುರ್ಭೇದ್ಯ, ಅನುಗ್ರಹ, ವಿಧಿ, ಮಾಯೆ, ವಿವರ್ಣ, ವರ್ಣ, ಸಂಹಾರ
ಚತುಃ ಶಕ್ತಿಗಳು : ಅಂಬಿಕಾ, ಗಣಾನಿ, ಈಶ್ವರೀ, ಮನೋನ್ಮನೀ
ಪಂಚ ಪ್ರಣವಭೇದ : ಶಾಕಲ್ಯ, ಶಾಂಭವ, ಸೌಖ್ಯ, ಸಾವಶ್ಯ, ಸಾಯುಜ್ಯ
ಪ್ರಣವಾಕ್ಷರಗಳು : ಅ. ಉ. ಮ.
ಪಂಚ ಪ್ರಾಸಾದ ಮಂತ್ರಗಳು : ಶುದ್ಧಪ್ರಾಸಾದ, ಮೂಲಪ್ರಾಸಾದ, ತತ್ತ್ವಪ್ರಾಸಾದ, ಆದಿಪ್ರಾಸಾದ, ಆತ್ಮಪ್ರಾಸಾದ.
ಪಂಚ ಬ್ರಹ್ಮಗಳು : ಮೂರ್ತಿಬ್ರಹ್ಮ, ತತ್ತ್ವಬ್ರಹ್ಮ, ಭೂತಬ್ರಹ್ಮ, ಪಿಂಡಬ್ರಹ್ಮ, ಕಲಾಬ್ರಹ್ಮ.
ಪಂಚ ಭೂತಗಳು : ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ
ಪರಮೇಶ್ವರನ ಪಂಚವದನಗಳು : ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ, ಈಶಾನ
ಪಂಚಮೂರ್ತಿಗಳು : ಈಶಾನ, ಈಶ್ವರ, ಬ್ರಹ್ಮಾ, ಶಿವ, ಸದಾಶಿವ.
ಪಂಚ ಹೃದಯಗಳು: ಕೇವಲಹೃದಯ, ಜ್ಞಾನಜಹೃದಯ, ಯೋಗಜಹೃದಯ, ಶಿವಾಂಗಹೃದಯ, ಕೇವಲಹೃದಯ.
ಪಂಚ ಶಕ್ತಿಗಳು : ಪರಾಶಕ್ತಿ, ಆದಿಶಕ್ತಿ, ಇಚ್ಛಾಶಕ್ತಿ, ಜ್ಞಾನಶಕ್ತಿ, ಕ್ರಿಯಾಶಕ್ತಿ,
ಪಂಚ ಸಾದಾಖ್ಯಗಳು : ಶಿವಸಾದಾಖ್ಯ, ಅಮೂರ್ತಸಾದಾಖ್ಯ, ಮೂರ್ತಸಾದಾಖ್ಯ, ಕರ್ತೃಸಾದಾಖ್ಯ, ಕರ್ಮಸಾದಾಖ್ಯ.
ಪರಶಿವನ ನಿಷ್ಕಲಶಕ್ತಿ: ಪರಾಶಕ್ತಿ, ಆದಿಶಕ್ತಿ, ಇಚ್ಛಾಶಕ್ತಿ, ಜ್ಞಾನಶಕ್ತಿ, ಕ್ರಿಯಾಶಕ್ತಿ.
ಪ್ರತ್ಯಂಗಗಳು : ಸೊಂಟ, ಕುತ್ತಿಗೆ, ತೋಳು, ಹೊಕ್ಕಳು, ಗುಹ್ಯಸ್ಥಾನ, ಹೊಟ್ಟೆ, ಕಣ್ಣು, ಮೂಗು, ಕಿವಿ, ಕಾಲು, ಬೆರಳು, ತೊಡೆ, ಮಂಡಿ, ಕಣಕಾಲು.

ಮಹೇಶ ತತ್ತ್ವದ ಇಪ್ಪತ್ತೈದು ಲೀಲೆಗಳು :

೧. ಚಂದ್ರಧರಲೀಲೆ,
೨. ಶಕ್ತಿಸಹಿತತ್ವ ಲೀಲೆ
೩. ವೃಷಭವಾಹನ ಲೀಲೆ
೪. ತಾಂಡವನೃತ್ಯ ಲೀಲೆ
೫. ಉಮಾವಿವಾಹ ಲೀಲೆ
೬. ಭಿಕ್ಷಾಟನ ಲೀಲೆ
೭. ಕಾಮದಹನ ಲೀಲೆ
೮. ಕಾಲಮರ್ದನಲೀಲೆ
೯. ತ್ರಿಪುರಸಂಹಾರ ಲೀಲೆ
೧೦. ಜಲಂಧರ ಸಂಹಾರ ಲೀಲೆ
೧೧. ಬ್ರಹ್ಮನನ್ನು ನಿಗ್ರಹಿಸಿದ ಲೀಲೆ
೧೨. ದಕ್ಷ ಯಜ್ಞನಾಶನ ಲೀಲೆ
೧೩. ಮತ್ಸ್ಯಾದ್ಯವತಾರ ಸಂಹಾರ ಲೀಲೆ
೧೪. ಅರ್ಧನಾರೀಶ್ವರ ಲೀಲೆ
೧೫. ಕಿರಾತವೇಷಧರ ಲೀಲೆ
೧೬. ಕಂಕಾಲಧರ ಲೀಲೆ
೧೭. ಚಂಡೇಶಾನುಗ್ರಹ ಲೀಲೆ
೧೮. ವಿಷಧರ ಲೀಲೆ
೧೯. ವಿಷ್ಣುಚಕ್ರಪ್ರದಾನ ಲೀಲೆ
೨೦. ವಿಘ್ನೇಶ್ವರ ಪ್ರಸನ್ನ ಲೀಲೆ
೨೧. ಸೋಮಾಸ್ಕಂದ ಸ್ವರೂಪ ಲೀಲೆ (ಅಂಧಕಾಸುರ ಸಂಹಾರ ಲೀಲೆ)
೨೨. ಏಕಪಾದ ಲೀಲೆ
೨೩. ಶಂಕರ ಲೀಲೆ
೨೪. ದಕ್ಷಿಣಾಮೂರ್ತಿ ಲೀಲೆ
೨೫. ಜ್ಯೋತಿರ್ಲಿಂಗಧರ ಲೀಲೆ

ಲಿಂಗಗಳು	:	ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕಲಿಂಗ
ವರ್ಗತ್ರಯಗಳು	:	ಸೃಷ್ಟಿವರ್ಗ, ಸ್ಥಿತಿವರ್ಗ, ಸಂಹಾರ ವರ್ಗ
ವಿದ್ಯಾಂಗ ಅಸ್ತ್ರ	:	ಶಿವಾಸ್ತ್ರ, ಪಾಶುಪಾತಸ್ತ್ರ, ಬ್ರಹ್ಮಾಸ್ತ್ರ, ಕ್ಷುರಿತಾಸ್ತ್ರ, ವ್ಯೋಮಾಸ್ತ್ರ, ಅಘೋರಾಸ್ತ್ರ.
ಷಟ್ಚಕ್ರಗಳು	:	ಆಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿ, ಆಜ್ಞಾ.
ಷಡಧ್ವಗಳು	:	ಭುವನಾಧ್ವ, ಪದಾಧ್ವ, ವರ್ಣಾಧ್ವ, ಕಲಾಧ್ವ, ತತ್ತ್ವಾಧ್ವ, ಮಂತ್ರಾಧ್ವ
ಷಡ್ಬೀಜಗಳು	:	ಹೌಂ ನ ಮಃ ಶಿ ವಾ ಯ
ಸಂಹಾರ ವರ್ಗ	:	ಪಾರ್ಥಿವವರ್ಗ, ಆಪೋವರ್ಗ, ಅನಲವರ್ಗ, ಮಾರುತ ವರ್ಗ, ವ್ಯೋಮವರ್ಗ
ಸದಾಶಿವ ಮಂತ್ರಭೇದ	:	ಮೋಕ್ಷದ, ಅಭಿವೃದ್ಧಿ, ಕಾಮ್ಯ ಶಾಂತಿಕ, ಪೌಷ್ಟಿದ.
ಸದಾಶಿವ		
ಪಂಚಾಕ್ಷರ ಮಂತ್ರ	:	ಹೌಂ ಸ ಶಿವಾಯ
ಷಡಕ್ಷರ ಮಂತ್ರ	:	ಹೌಂ ಶಿವಾಯ ನಮಃ
ಸಪ್ತಾಕ್ಷರ ಮಂತ್ರ	:	ಓಂ ಹೌಂ ನಮಃ ಶಿವಾಯ
ಅಷ್ಟಾಕ್ಷರ ಮಂತ್ರ	:	ಓಂ ಹೌಂ ಹಂ ಸದಾಶಿವಾಯ
ನವಾಕ್ಷರ ಮಂತ್ರ	:	ಹೌಂ ಹಂ ಸ್ವಂ ಮಂ ಕ್ಷಂ ರಂ ತಂ ಯಂ ಮಂ
ದಶಾಕ್ಷರ ಮಂತ್ರ	:	ಹೌಂ ಸಂ ಸಂ ಷ್ವಂ ಮೂಂ ಹ್ರೂಂ ಮೇಂ ನಂ ಮಂ ಯಂ
ಸಪ್ತ ದೋಷಗಳು	:	ಮೋಹ, ಮದ, ರಾಗ, ವಿಷಾದ, ಪಾಪ, ಶೋಷ, ವೈಚಿತ್ತ್ಯ.
ಸ್ಥಿತಿ ಮಂತ್ರ	:	ಹಂ, ಸಂ ಕ್ಷಂ ರಂ ಯಂ ಏಂ
ಸಂಹಾರ ಮಂತ್ರ	:	ಹಂ ಕ್ಷಂ ಮಂ ರಂ ಯಂ ಏಂ

❖ ❖ ❖

ಅನುಬಂಧ : ೫

ಮೂಲ ಶ್ಲೋಕಗಳ ಅಕಾರಾದಿ

* * * * *

ಅನುಬಂಧ : ೬

ಪರಾಮರ್ಶನ ಗ್ರಂಥಗಳು

೧.	ಕರ್ಣಾಟಕ ಕವಿಚರಿತೆ ಸಂಪುಟಗಳು (೧, ೨, ೩)	ಮಹಾಮಹೋಪಾಧ್ಯಾಯ ಆರ್. ನರಸಿಂಹಾಚಾರ್ಯರು ತಿದ್ದಿದ ದ್ವಿತೀಯ ಮುದ್ರಣ ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು, ೧೯೭೩
೨.	ಲಂಕ್ಕಣ್ಣ ದಂಡೇಶ ವಿರಚಿತ ಶಿವತತ್ತ್ವ ಚಿಂತಾಮಣಿ	ಸಂ. ಪಂಡಿತ ಎಸ್. ಬಸಪ್ಪ ರಿಸರ್ಚ್ ಅಸಿಸ್ಟೆಂಟ್ ಪ್ರಾಚ್ಯವಿದ್ಯಾ ಸಂಶೋಧನಾಲಯ ಮೈಸೂರು ವಿಶ್ವವಿದ್ಯಾಲಯ ಮೈಸೂರು, ೧೯೬೦
೩.	ಗುಬ್ಬ ಮಲ್ಲಣ್ಣ ವಿರಚಿತ ಗಣಭಾಷಿತ ರತ್ನಮಾಲೆ	ಸಂ. ಶ್ರೀ ಪ್ರಭುಸ್ವಾಮಿಗಳು ಪ್ರಕಾಶಕರು : ಶ್ರೀ ಮ.ನಿ.ಪ್ರ ಮೃತ್ಯುಂಜಯ ಸ್ವಾಮಿಗಳು ಮುರುಘಾಮಠ, ಧಾರವಾಡ, ೧೯೪೮
೪.	ವಾತುಲ ಶುದ್ಧಾಗಮ (ಕನ್ನಡ ಅನುವಾದ ಸಹಿತ)	ಸಂ. ಶ್ರೀ ವಿದ್ವಾನ್ ಡಾ. ಎಚ್.ಪಿ. ಮಲ್ಲೇದೇವರು ಪ್ರಾಚ್ಯವಿದ್ಯಾ ಸಂಶೋಧನಾಲಯ ಮೈಸೂರು, ೧೯೮೮
೫.	ಶಿವಗಣ ಪ್ರಸಾದಿ ಮಹಾದೇವಯ್ಯನ ಪ್ರಭುದೇವರ ಶೂನ್ಯ ಸಂಪಾದನೆ ಸಂಪುಟ ೧	ಸಂ. ಶ್ರೀ ಡಾ. ಎಲ್. ಬಸವರಾಜು ಕನ್ನಡ ಅಧ್ಯಯನ ಸಂಸ್ಥೆ ಮಾನಸ ಗಂಗೋತ್ರಿ ಮೈಸೂರು ಪ್ರಕಾಶಕರು. ಶ್ರೀ ಬೃಹನ್ಮಠ ಸಂಸ್ಥಾನ, ಚಿತ್ರದುರ್ಗ, ೧೯೬೯
೬.	ಕಲ್ಲುಮಠದ ಪ್ರಭುದೇವರು ವಿರಚಿಸಿದ ಲಿಂಗಲೀಲಾ ವಿಲಾಸ ಚಾರಿತ್ರ	ಸಂ. ಶ್ರೀ ಪ್ರೊ. ಸಂ. ಶಿ. ಭೂಸನೂರ ಮಠ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ೧೯೭೭
೭.	ನಿಲಕಂಠಾಚಾರ್ಯ ವಿರಚಿತ ಆರಾಧ್ಯ ಚಾರಿತ್ರ	ಸಂ, ಶ್ರೀ ಎಸ್. ಬಸವರಾಧ್ಯ ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾಲಯ ಮೈಸೂರು, ೧೯೮೦
೮.	ಚಿಕ್ಕನಂಜೇಶ ವಿರಚಿತ ರಾಘವಾಂಕ ಚರಿತೆ	ಸಂ. ಶ್ರೀ ಪ್ರೊ. ಎಸ್. ಎಸ್. ಮಾಳವಾಡ ಕನ್ನಡ ಪ್ರೊಫೆಸರ್, ಕರ್ನಾಟಕ ಕಾಲೇಜು ಡೈರೆಕ್ಟರ್, ಕನ್ನಡ ರಿಸರ್ಚ್ ಇನ್‌ಸ್ಟಿಟ್ಯೂಟ್ ಧಾರವಾಡ, ೧೯೫೪
೯.	ಗುಬ್ಬಿ ಮಲ್ಲಣಾರ್ಯ ವಿರಚಿತ ಭಾವ ಚಿಂತಾರತ್ನ	ಸಂ. ಪ್ರೊ. ಸಿ. ಮಹಾದೇವಪ್ಪ ನಿವೃತ್ತ ಪ್ರಿನ್ಸಿಪಾಲರು ಬೆಂಗಳೂರು, ೧೯೬೩

೧೦.	ಗುಬ್ಬಿ ಮಲ್ಲಣಾರ್ಯ ವಿರಚಿತ ವೀರಶೈವಾಮೃತ ಮಹಾಪುರಾಣ	ಸಂ. ಶ್ರೀ ಗಂ. ಶಿವಪ್ರಶಾಸ್ತ್ರಿಗಳು ಬೆಂಗಳೂರು, ೧೯೦೭
೧೧.	ಶಾಂತೇಶ ವಿರಚಿತ ಶ್ರೀ ಸಿದ್ಧೇಶ್ವರ ಪುರಾಣ	ಪ್ರೊ. ಬಿ. ನಂ. ಚಂದ್ರಯ್ಯ, ಮೈಸೂರು ಪ್ರಕಾಶಕರು : ಕರ್ನಾಟಕ ಸರ್ಕಾರ ಧಾರ್ಮಿಕ ದತ್ತಿ ಇಲಾಖೆ ಶ್ರೀ ಸಿದ್ಧಲಿಂಗೇಶ್ವರಸ್ವಾಮಿ ಕ್ಷೇತ್ರ ಎಡೆಯೂರು, ೨೦೦೫
೧೨,	ನಿಜಗುಣ ಶಿವಯೋಗಿ ವಿರಚಿತ ವಿವೇಕ ಚಿಂತಾಮಣಿ	ಸಂ. ಶ್ರೀ ಜಿ. ಎ. ಶಿವಲಿಂಗಯ್ಯ ನಿವೃತ್ತ ಕನ್ನಡ ಉಪನ್ಯಾಸಕರು ಮೈಸೂರು, ೧೯೮೯
೧೩	ಹರಿಹರನ ರಗಳೆಗಳು (ಜನಪ್ರಿಯ ಆವೃತ್ತಿ)	ಸಂ. ಶ್ರೀ ಎಂ. ಎಂ. ಕಲಬುರ್ಗಿ ಪ್ರಕಾಶಕರು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ, ೧೯೯೯
೧೪	ಮಾರ್ಗ : ಸಂಪುಟ-೪	ಶ್ರೀ ಎಂ.ಎಂ. ಕಲಬುರ್ಗಿ ವಿಶ್ರಾಂತ ಕುಲಪತಿಗಳು ಧಾರವಾಡ
೧೫	ವಿರಕ್ತ ತೋಂಟದಾರ್ಯನ ನೂತನ ಪುರಾತನ ರಗಳೆ	ಸಂ. ಶ್ರೀ ಎಸ್. ಶಿವಣ್ಣ ಸಂಪುಟ ೧೫, ಸಂಚಿಕೆ ೯ ಬಸವಪಥ, ಬೆಂಗಳೂರು
೧೬.	ಚೆನ್ನುಡಿ (ವಿಶೇಷ ಸಂಚಿಕೆ)	ತುಮಕೂರು ಜಿಲ್ಲಾ ಐದನೆಯ ಕನ್ನಡ ಸಾಹಿತ್ಯ ಸಮ್ಮೇಳನ, ಗುಬ್ಬಿ ೧೯೯೭
೧೭	ಬಿಡು ಮುತ್ತು	ಶ್ರೀ ಎಸ್. ಶಿವಣ್ಣ ಪ್ರಕಾಶಕರು : ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು, ೨೦೦೪
೧೮.	ಶಾಂತಲಿಂಗ ದೇಶಿಕನ ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರರತ್ನಾಕರ	ಸಂ. ಡಾ. ಆರ್. ಸಿ, ಹಿರೇಮಠ ಡಾ. ಎಂ.ಎಸ್. ಸುಂಕಾಪುರ ಪ್ರಕಾಶಕರು : ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ೧೯೬೪
೧೯.	ತುಮಕೂರು ಜಿಲ್ಲಾ ಶಾಸನ ಸಂಪುಟ - ೧೨ (ಗುಬ್ಬಿ ತಾಲ್ಲೂಕು)	
೨೦.	Epigraphia Carnatiaca Vol. XVI Supplimentary Inscriptions in the Tumkur District	Published by Prof. K.A.Nilakanta Sastri, MA Director of Archaeology in Mysore, 1958

✡ ✡ ✡

ಕಾ.ಸೂ.-0182 ಸವಿಮುಧಾ-500 ಪುಸ್ತಕಗಳು-ಮಾರ್ಚ್ 2009

ಸರ್ಕಾರಿ ಮುದ್ರಣಾಲಯ, ಬೆಂಗಳೂರು